ಗ್ರಾಮಪಂಚಾಯತಿಯಲ್ಲಿ ಮಹಿಳೆಯ ಪಾತ್ರ

ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳ

ಒಂದು ತೌಲನಿಕ ಅಧ್ಯಯನ

ಪಿಎಚ್. ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಿರುವ ಸಂಶೋಧನಾ ಮಹಾಪ್ರಬಂಧ

ಸಂಶೋಧಕಿ

ಡಿ. ಮೀನಾಕ್ಷಿ

ಮಾರ್ಗದರ್ಶಕರು

ಡಾ. ಎಸ್.ಎ. ಜಾವೀದ್

ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ

ಕುವೆಂಪು ವಿಶ್ವವಿದ್ಯಾಲಯ

ಬಿ ಆರ್ ಪ್ರಾಜೆಕ್ಟ್ ೫೭೭ ೧೧೫

ಏಪ್ರಿಲ್ ೨೦೦೨

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ೫೮೩. ೨೭೬

ಗ್ರಾಮಪಂಚಾಯತಿಯಲ್ಲಿ ಮಹಿಳೆಯ ಪಾತ್ರ

ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳ ಒಂದು ತೌಲನಿಕ ಅಧ್ಯಯನ

ಪಿಎಚ್. ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಿರುವ ಸಂಶೋಧನಾ ಮಹಾಪ್ರಬಂಧ

ಸಂಶೋಧಕಿ
ಡಿ. ಮೀನಾಕ್ಷಿ

ಮಾರ್ಗದರ್ಶಕರು
ಡಾ. ಎಸ್.ಎ. ಜಾವೀದ್
ಪ್ರವಾಚಕರು, ರಾಜ್ಯಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ
ಬಿ ಆರ್ ಪ್ರಾಜೆಕ್ಟ್ ೫೭೭ ೧೧೫

ಏಪ್ರಿಲ್ ೨೦೦೨

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

30

ಸಂಶೋಧಕಿಯ ಪ್ರಮಾಣ ಪತ್ರ

"ಗ್ರಾಮಪಂಚಾಯತಿಯಲ್ಲಿ ಮಹಿಳೆಯ ಪಾತ್ರ : ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳ ಒಂದು ತೌಲನಿಕ ಅಧ್ಯಯನ'' ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಡಾ. ಎಸ್.ಎ. ಜಾವೀದ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ.ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಅಲ್ಲದೆ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 24.9.02
ಸ್ಥಳ : ವಿದ್ಯಾರಣ್ಯ

ಡಿ. ಮೀನಾಕ್ಷಿ
ಸಂಶೋಧಕಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪತ್ರ

"ಗ್ರಾಮಪಂಚಾಯತಿಯಲ್ಲಿ ಮಹಿಳೆಯ ಪಾತ್ರ : ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳ ಒಂದು ತೌಲನಿಕ ಅಧ್ಯಯನ" ಎಂಬ ವಿಷಯದ ಕುರಿತು ಡಿ.ಮೀನಾಕ್ಷಿ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡಿ ಈ ಮಹಾಪ್ರಬಂಧವನ್ನು ಪಿಎಚ್. ಡಿ ಪದವಿಗಾಗಿ ಸಿದ್ಧಪಡಿಸಿದ್ದಾರೆ.

ಈ ಮಹಾಪ್ರಬಂಧವನ್ನು ಯಾವುದೇ ವಿಶ್ವವಿದ್ಯಾಲಯಕ್ಕೆ ಪದವಿ ಅಥವಾ ಡಿಪ್ಲೊಮಾಗಳಿಗಾಗಿ ಪ್ರಸ್ತುತ ಪಡಿಸಿಲ್ಲ. ಅಲ್ಲದೆ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ಅವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

24/9/02

ದಿನಾಂಕ : 24/9/02.
ಸ್ಥಳ : ಬಿ.ಆರ್.ಪ್ರಾಜೆಕ್ಟ್

(ಡಾ. ಎಸ್.ಎ. ಜಾವೀದ್)
ಮಾರ್ಗದರ್ಶಕರು

ಕೃತಜ್ಞತೆಗಳು

ವಿದ್ಯಾರಣ್ಯ ಆವರಣದಲ್ಲಿ ನೆಲೆ ನಿಲ್ಲಲು ಅವಕಾಶ ಮಾಡಿಕೊಡುವ ಮೂಲಕ ನನ್ನ ಬದುಕಿಗೊಂದು ಸೂತ್ರತೆಯನ್ನು ತಂದುಕೊಟ್ಟವರು ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿ ಡಾ. ಚಂದ್ರಶೇಖರ ಕಂಬಾರ ಅವರು. ಮಾಹಿತಿ ಕೇಂದ್ರದಂತಹ ನವೀನ ಹಾಗೂ ಹೆಚ್ಚು ಜವಾಬ್ದಾರಿಯುಳ್ಳ ವಿಭಾಗದಲ್ಲಿ ನನಗೆ ಕೆಲಸ ಮಾಡಲು ಅವಕಾಶ ಮಾಡಿಕೊಡುವ ಮೂಲಕ ನನ್ನ ಚಿಂತನೆಯ ಹಾಗೂ ಆತ್ಮವಿಶ್ವಾಸದ ವಿಸ್ತಾರಕ್ಕೆ ಕಾರಣರಾದವರು ಕಂಬಾರ ಅವರು. ಇದಕ್ಕೆ ಪೂರಕ ಎನ್ನುವಂತೆ ಹಲವಾರು ರೀತಿಯ ರಚನಾತ್ಮಕ ಕೆಲಸಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವಂತೆ ಹುರುದುಂಬಿಸಿ ನನ್ನ ವೈಯಕ್ತಿಕ ಮತ್ತು ವಿಭಾಗದ ಅಭಿವೃದ್ಧಿಗೆ ಕಾರಣರಾದವರು ಆಗಿನ ಮಾಹಿತಿ ಕೇಂದ್ರದ ನಿರ್ದೇಶಕರಾದ ಶ್ರೀ ಕೆ.ಜಿ.ವಾಸುಕಿ ಅವರು. ಇವರ ಪ್ರೋತ್ಸಾಹದ ಫಲಿತವೇ ಇಂದಿನ ಈ ನನ್ನ ಪಿಎಚ್.ಡಿ ಅಧ್ಯಯನ. ಇಂತಹ ಸಾಹಸದ ಕೆಲಸಕ್ಕೆ ಕಾರಣರಾದ ಕಂಬಾರ ದಂಪತಿಗಳು ಮತ್ತು ಕೆ.ಜಿ.ವಾಸುಕಿ ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಈ ಅಧ್ಯಯನಕ್ಕೆ ಹೆಚ್ಚಿನ ಅವಕಾಶ ನೀಡಿ ಪ್ರೋತ್ಸಾಹಿಸಿದವರಲ್ಲಿ ಹಿಂದಿನ ಕುಲಪತಿ ಡಾ.ಎಂ.ಎಂ.ಕಲಬುರ್ಗಿ ಮತ್ತು ಇಂದಿನ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಅವರು ಬಹುಮುಖ್ಯರು. ಇವರೆಲ್ಲ ನಮ್ಮ ಸಿಬ್ಬಂದಿಗಳು ಓದಬೇಕು, ಬೆಳೆಯಬೇಕು ಎನ್ನುವ ಕಳಕಳಿಯುಳ್ಳವರು. ಅವರ ಇಂತಹ ಅಮೂಲ್ಯ ಪ್ರೋತ್ಸಾಹದಿಂದ ಈ ಕೆಲಸ ಇಂದು ಸಂಪೂರ್ಣ ಗೊಂಡಿದೆ. ಅವರಿಗೂ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಯನದ ಹಾದಿಯಲ್ಲಿ ಕಲ್ಲು ಮುಳ್ಳುಗಳೇ ಜಾಸ್ತಿ ಇದ್ದವು. ಇಂತಹ ಹೊತ್ತಿನಲ್ಲಿ ಅಧೈರ್ಯಳಾಗಿ, ಅಪ್ರತಿಭಳಾಗಿ ನಿಂತ ನನ್ನನ್ನು ತಮ್ಮ ಅನುಭವ, ವಿದ್ವತ್ ಸಂಪನ್ನತೆ, ವಿಚಾರ ಪರತೆ ಮತ್ತು ನನ್ನ ಮೇಲಿನ ವಿಶೇಷ ಅಭಿಮಾನದಿಂದಾಗಿ ಹುರುದುಂಬಿಸಿ ಆತ್ಮವಿಶ್ವಾಸ ತುಂಬಿದವರು ಡಾ.ಕೆ.ವಿ.ನಾರಾಯಣ, ಡಾ.ಹಿ.ಚಿ.ಬೋರಲಿಂಗಯ್ಯ, ಡಾ.ಕರೀಗೌಡ ಬೀಚನಹಳ್ಳಿ, ಡಾ.ವೀರೇಶ ಬಡಿಗೇರ, ಡಾ.ರಹಮತ್ ತರೀಕೆರೆ ಮತ್ತು ಡಾ.ಮಂಜುನಾಥ ಬೇವಿನಕಟ್ಟಿ ಅವರು. ಇವರೆಲ್ಲರ ಸೂಕ್ತ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಬೆಟ್ಟದಷ್ಟಿದ್ದ ಕಷ್ಟಗಳನ್ನೆಲ್ಲ ಕರಗಿಸಿ ನನ್ನನ್ನು ಕಾರ್ಯೋನ್ಮುಖವಾಗಿಸಿತು. ಇವರೆಲ್ಲರ ತುಂಬು ಅಭಿಮಾನಕ್ಕೆ ನಾನು ಆಭಾರಿಯಾಗಿದ್ದೇನೆ.

ಪ್ರಸ್ತುತ ವಿಷಯವನ್ನು ಅಧ್ಯಯನಕ್ಕೆ ಎತ್ತಿಕೊಂಡಾಗ ಆಳ-ಅಗಲದ ಪರಿವೆಯಿಲ್ಲದ ನನಗೆ ತುಂಬಾ ಮುತುವರ್ಜಿಯಿಂದ ಅವುಗಳನ್ನು ಕಲಿಸಿಕೊಡುವ ಮೂಲಕ ಸೂಕ್ತ ಮಾರ್ಗದರ್ಶನ ನೀಡಿ ಇಂತಹದೊಂದು ಮಹತ್ವಪೂರ್ಣ ಸಾಧನೆಗೆ ಕಾರಣರಾದವರು ನನ್ನ ವಿದ್ಯಾಗುರುಗಳು ಹಾಗೂ ಈ ಅಧ್ಯಯನಕ್ಕೆ ಮಾರ್ಗದರ್ಶಕರಾದ ಡಾ.ಎಸ್.ಎ.ಜಾವೀದ್ ಅವರು. ಅಧ್ಯಯನದ ಸಂದರ್ಭದಲ್ಲಿ ತಲೆದೋರಿದ ಹಲವಾರು ಸಮಸ್ಯೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿ ಸೂಚನೆಗಳನ್ನು ನೀಡಿದವರು ಪ್ರೊ. ನಗರಿಬಾಬಯ್ಯ, ಪ್ರೊ.ಲಕ್ಷ್ಮಣ್ ತೆಲಗಾವಿ, ಡಾ.ಚಂದ್ರಪೂಜಾರಿ, ಶ್ರೀ ಟಿ.ಆರ್.ಚಂದ್ರಶೇಖರ, ಡಾ.ಎಚ್.ಎಸ್.ಶ್ರೀಮತಿ, ಶ್ರೀ ಎ.ಶ್ರೀಧರ, ಶ್ರೀ ಎಚ್.ಡಿ.ಪ್ರಶಾಂತ, ಶ್ರೀಮತಿ ಸಿದ್ಧಗಂಗಮ್ಮ ಅವರು. ನನ್ನ ಅಧ್ಯಯನದ ಪ್ರತಿ ಹಂತದಲ್ಲೂ ಮಹತ್ವದ ನೆರವು ನೀಡಿದ ಶ್ರೀ ಎಸ್.ಆರ್. ಚನ್ನವೀರಪ್ಪ, ಶ್ರೀ ಕೆ.ಆರ್.ಕೇಶವಮೂರ್ತಿ, ಶ್ರೀ ನಾಗರಾಜ ಬಡಿಗೇರ, ಶ್ರೀ ಡಿ.ಪರಮೇಶ್ವರಪ್ಪ, ಶ್ರೀ ಎಚ್.ಬಿ.ರವೀಂದ್ರ, ಶ್ರೀ ಸುಜ್ಞಾನಮೂರ್ತಿ, ಶ್ರೀ ಗಣೇಶ್ ಕಂಬಾರ, ಶ್ರೀ ಓಬಯ್ಯ ಇವರಿಗೆ ನಾನು ಕೃತಜ್ಞಳಾಗಿದ್ದೇನೆ.

ಇಂತಹ ಒಂದು ದೊಡ್ಡ ಸಾಧನೆ ನನ್ನಿಂದ ಆಗಬೇಕೆಂದು ಸದಾ ಹಂಬಲಿಸುತ್ತಿದ್ದವಳು ನನ್ನ ಹೆತ್ತಮ್ಮ. ಆದರೆ ಅವಳು ಇಂದು ಇಲ್ಲ. ಅವಳ ಆಶೀರ್ವಾದ ನನ್ನಲ್ಲಿ ಅದಮ್ಯ ಶಕ್ತಿಯನ್ನು ತುಂಬಿದೆ. ನನ್ನ ಅಣ್ಣ ಅತ್ತಿಗೆಯರ, ತಮ್ಮ ತಂಗಿಯರ, ಆಂಟಿ, ಬೆಣ್ಣೂರು ಅಪ್ಪ ಅಮ್ಮ, ಸುವ್ವಕ್ಕ, ಬಸವರಾಜಣ್ಣ ಇವರ ಅಗಾಧ ಪ್ರೀತಿಯು ನನ್ನಿಂದ ಈ ಮಹತ್ವದ ಕೆಲಸ ಮಾಡಲು ಪ್ರೇರೇಪಿಸಿದೆ. ಅಧ್ಯಯನದ ಸಂದರ್ಭದಲ್ಲಿ ನನಗೆ ಅಡಿಗೆ ಮಾಡಲು ಬಿಡದೆ ತಮ್ಮ ಮಡಿಲಲ್ಲಿಟ್ಟುಕೊಂಡು ಪೋಷಿಸಿ ತಾಯ್ತನ ಮೆರೆದವರು ಶ್ರೀಮತಿ ಅನಿತಾ ಬಡಿಗೇರ, ಸರೋಜ ಬಡಿಗೇರ ಅವರು. ಗೆಳತಿಯರಾದ ಶಕುಂತಲ, ಎಂ.ಬಿ.ಆಶಾ, ಅನ್ನಪೂರ್ಣ, ಪುಟಾಣಿಗಳಾದ ವಾಣಿಶ್ರೀ, ಕುಮ್ಮ, ಸ್ಫೂರ್ತಿ, ಸಾನಿಧ್ಯ, ನಯನ, ನಾಗಲಿಂಗ ಇವರೆಲ್ಲರಿಗೂ ನನ್ನ ಅಂತಃಕರಣ ಪೂರ್ವಕ ನಮನಗಳು.

ಅಧ್ಯಯನಕ್ಕೆ ಅಗತ್ಯ ಗ್ರಂಥಗಳನ್ನು ಪೂರೈಸಿದ ಗ್ರಂಥಾಲಯ ಸಿಬ್ಬಂದಿಗಳಿಗೂ, ಅಕ್ಷರ ಸಂಯೋಜಿಸಿದ ಎ.ಎಂ.ಕೃಪಾಶಂಕರ್ ಅವರಿಗೂ ನನ್ನ ಅಧ್ಯಯನಕ್ಕೆ ಆಕರಗಳನ್ನು ಒದಗಿಸಿಕೊಟ್ಟಿರುವ ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳ ಚುನಾಯಿತ ಮಹಿಳೆಯರಿಗೂ ಪರೋಕ್ಷವಾಗಿ ಪ್ರತ್ಯಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಡಿ. ಮೀನಾಕ್ಷಿ

ಕೋಷ್ಟಕ ಸೂಚಿ

ಸೂಚನೆ: ಹೊ.ತಾ.ಗ್ರಾ.ಪಂ-ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು
ಸಂ.ತಾ.ಗ್ರಾ.ಪಂ-ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಹಿನ್ನೆಲೆ ಉದ್ದೇಶ, ವ್ಯಾಪ್ತಿ, ವಿಧಾನ

ಅಧ್ಯಯನದ ಹಿನ್ನೆಲೆ

ಭಾರತೀಯ ಪರಂಪರೆಯಲ್ಲಿ ಮಹಿಳೆಯನ್ನು ಪಾತಿವ್ರತ್ಯ ಮತ್ತು ಸಂಪತ್ತಿನ ಸಮೀಕರಣದೊಂದಿಗೆ ನೋಡುವ ಮೂಲಕ ಖಾಸಗಿ ಆಸ್ತಿಯನ್ನಾಗಿ ಪರಿಗಣಿಸಿದ ಸಂದರ್ಭಗಳೇ ಹೆಚ್ಚು. ಇದು ಬಹಳ ಮುಖ್ಯವಾಗಿ ಪುರುಷಾಧಿಕಾರದ ಸಂದರ್ಭದಲ್ಲಿ ಉಂಟಾದ ಪಲ್ಲಟವೆಂದೇ ಹೇಳಬೇಕು. ಊಳಿಗಮಾನ್ಯ ವ್ಯವಸ್ಥೆಯ ಪೂರ್ವಸ್ಥಿತಿ ಮಹಿಳೆಯನ್ನು ಗೌರವಾನ್ವಿತ ನೆಲೆಯಿಂದ ಸ್ವೀಕರಿಸುತ್ತದೆ. ನಂತರದ ಕಾಲಘಟ್ಟಗಳಲ್ಲಿ ಹೆಣ್ಣನ್ನು 'ಸ್ತ್ರೀರತ್ನ' ಎನ್ನುವ ಮೂಲಕ ಸಂಪತ್ತೀಕರಿಸಲಾಯಿತು. 'ಸಿರಿ'ಯಾವಾಗಲೂ ಒಬ್ಬನ ಸ್ವಂತ ಆಸ್ತಿ. ಆತನ ಬಳಕೆಯ ಮರ್ಜಿಯ ಮೇಲೆ ಅದರ ಜೀವಂತಿಕೆ ಅವಲಂಬಿತವಾಗಿರುತ್ತದೆ. ಇದಕ್ಕೆ ಸ್ತ್ರೀಯೂ ಹೊರತಾಗುಳಿಯಲಿಲ್ಲ. ಊಳಿಗಮಾನ್ಯ ವ್ಯವಸ್ಥೆಯ ಈ ಫಲಿತಗಳು ಸ್ತ್ರೀಯನ್ನು ನಿರ್ಜೀವ ವಸ್ತುವನ್ನಾಗಿ ಪರಿಗಣಿಸಿದವು. ಹೀಗಾಗಿ ಸ್ತ್ರೀಯು ವಹಿವಾಟಿನ ಸರಕಾಗಿ ಪುರುಷಾವಲಂಬಿಯಾಗಿಯೇ ಬಾಳುವಂತಹ ಅಸಮಾನ ನೆಲೆಗಳು ರೂಪಿತಗೊಂಡವು.

ರಾಜಕೀಯ ಸಿದ್ಧಾಂತಗಳು ಹಾಗೂ ರಾಜಕೀಯ ಚಿಂತಕರು ಮಹಿಳೆ ಮತ್ತು ರಾಜಕೀಯ ಕುರಿತಂತೆ ಮೌನವಹಿಸಿದ್ದಾರೆ. ಆದರೆ ಗ್ರೀಕ್ ರಾಜಕೀಯ ಚಿಂತಕನಾದ ಪ್ಲೇಟೋ ತನ್ನ ಮೊದಲನೆ 'ಆದರ್ಶರಾಷ್ಟ್ರ' ಪರಿಕಲ್ಪನೆಯಲ್ಲಿ ಆಸ್ತಿಯ ಮತ್ತು ಪತ್ನಿಯರ ಸಮತಾವಾದ (Communism of property and Wives)ದಲ್ಲಿ ಹಾಗೂ ತತ್ವಜ್ಞಾನಿ ಅರಸು ಆಡಳಿತ(Rule of Philosopher King)ದಲ್ಲಿ ಚರ್ಚಿಸುತ್ತ 'ಪುರುಷರಿಗಿರುವಷ್ಟೇ ಸ್ವಾತಂತ್ರ್ಯ ಮತ್ತು ಶಿಕ್ಷಣದ ಅವಕಾಶ ಮಹಿಳೆಯರಿಗೂ' ಇದೆ ಎಂದಿದ್ದಾನೆ.[1] ಪ್ಲೇಟೋ ತನ್ನ ಮಹತ್ವದ ಕೃತಿಗಳಾದ ರಿಪಬ್ಲಿಕ್, ಸ್ಟೇಟ್ಸ್‌ಮನ್, ಲಾಸ್ ನಲ್ಲಿ ಮಹಿಳೆ ಮತ್ತು ಪುರುಷ ಇಬ್ಬರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿದ್ದಾನೆ. ಪ್ಲೇಟೋ ತಿಳಿಸಿರುವ ಶಿಕ್ಷಣ ಪಡೆದು ಉತ್ತೀರ್ಣರಾದ, ಅರ್ಹತೆ ಪಡೆದ ಮಹಿಳೆಯರು ಆಡಳಿತಗಾರರಾಗಬಹುದು ಅಥವಾ ರಾಷ್ಟ್ರದ ರಕ್ಷಕರಾಗಬಹುದು.[2] ಪ್ಲೇಟೋ ತನ್ನ ೨ನೆಯ 'ಆದರ್ಶರಾಷ್ಟ್ರ'ದಲ್ಲಿ ಕುಟುಂಬ ಮತ್ತು ವಿವಾಹಕ್ಕೆ ಸಂಬಂಧಿಸಿಂದತೆ ಮಹಿಳೆಗೆ ಕೊನೆಯ ಸ್ಥಾನವನ್ನು ಕಲ್ಪಿಸಿದ್ದಾನೆ. ಮಹಿಳೆಯ ವಿವಾಹದ ವಿಷಯದಲ್ಲಿ ಪುರುಷರ ನಿರ್ಧಾರಕ್ಕೆ ಮೊದಲನೆಯ ಆದ್ಯತೆ ನೀಡಿದ್ದು, ಮಹಿಳೆಯರ ನಿರ್ಧಾರಕ್ಕೆ ಕೊನೆಯ ಆದ್ಯತೆ ನೀಡಿರುವುದು ಗೋಚರವಾಗುತ್ತದೆ.

ರಾಜ್ಯಶಾಸ್ತ್ರದ ಪಿತಾಮಹನಾಗಿರುವ ಅರಿಸ್ಟಾಟಲ್‌ನು ತನ್ನ ಪಾಲಿಟಿಕ್ಸ್ ಗ್ರಂಥದಲ್ಲಿ ನಾಗರಿಕತ್ವದ ಸಿದ್ಧಾಂತ (Theory of Citizenship)ಮತ್ತು ರಾಷ್ಟ್ರ ಮತ್ತು ಕುಟುಂಬ (The State and the

family) ಕುರಿತು ಹೇಳುವಾಗ 'ಮಹಿಳೆಯರಿಗೆ ಸರಿಯಾಗಿ ವಿಚಾರ ಮಾಡುವ ಶಕ್ತಿ ಇರುವುದಿಲ್ಲವಾದುದರಿಂದ ಅವರು ನಾಗರಿಕತ್ವ ಪಡೆಯಲು ಅನರ್ಹರು' ಎಂದು ಅಭಿಪ್ರಾಯಪಟ್ಟಿದ್ದಾನೆ.[೬] ನಾಗರೀಕತ್ವವನ್ನು ಪಡೆಯದವರಿಗೆ ರಾಜಕೀಯ ಹಕ್ಕಗಳೂ ಇರುವುದಿಲ್ಲ. ಸ್ತ್ರೀಪುರುಷರಲ್ಲಿ ಸ್ತ್ರೀಯರು ಅತ್ಯಂತ ಕೀಳು ಎಂದಿದ್ದಾನೆ.[೭] ಇದರಿಂದ ಅರಿಸ್ಟಾಟ್ಲ್‌ನು ರಾಜಕೀಯ ಕ್ಷೇತ್ರದಿಂದ ಮಹಿಳೆಯರನ್ನು ದೂರವಿರಿಸಿದ್ದನೆಂದು ಸ್ಪಷ್ಟವಾಗುತ್ತದೆ. ಮನು 'ನಃಸ್ತ್ರೀ ಸ್ವಾತಂತ್ರ್ಯಂಅರ್ಹತೆ' ಎಂದು ಮನುಸ್ಮೃತಿಯಲ್ಲಿ ಹೇಳಿದ್ದಾನೆ.[೮] ಕೌಟಿಲ್ಯ ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ ಮಹಿಳೆಯರನ್ನು ರಾಜಕೀಯ ಉಪಕರಣಗಳನ್ನಾಗಿ ಬಳಸಿಕೊಳ್ಳುತ್ತಾನೆ.

ಮಹಾತ್ಮಾಗಾಂಧಿಯವರು ಮಹಿಳೆಯು ತನ್ನ ಮಗಳು ಪತ್ನಿ, ತಾಯಿ ಪಾತ್ರಕ್ಕೆ ಧಕ್ಕೆಯಾಗದಂತಹ ಉದ್ಯೋಗದಲ್ಲೇ ತೊಡಗಬೇಕು ಎನ್ನುವ ಅಭಿಪ್ರಾಯ ತಳೆಯುತ್ತಾರೆ.[೯] ಈ ಅಭಿಪ್ರಾಯವನ್ನು ಬದಲಾದ ಸನ್ನಿವೇಶದಲ್ಲಿಟ್ಟು ನೋಡಿದಾಗ ಮರು ಪರಿಶೀಲನೆಯ, ಚರ್ಚೆಯ ಅಗತ್ಯವಿದೆ ಎನಿಸುತ್ತದೆ. ಏಕೆಂದರೆ ಗಾಂಧೀಜಿ ಹೇಳಿದ ಮಾತುಗಳು ಭಾವುಕವಾಗಿ ಮಹಿಳೆಯನ್ನು ಕುಟುಂಬಕ್ಕೆ ಸೀಮಿತಗೊಳಿಸುವಂತಿವೆ.

'ಚರಿತ್ರೆಯನ್ನು ಅವಲೋಕಿಸಿದಾಗ ಲಿಂಗ ತಾರತಮ್ಯತೆಯ ಹಿನ್ನೆಲೆಯಲ್ಲಿ ಮಹಿಳೆಯು ಅಸ್ತಿತ್ವ ರಹಿತಳಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಉದಾಸೀನಕ್ಕೊಳಗಾಗುತ್ತಲೇ ಬಂದಿದ್ದಾಳೆ. ಪುರುಷನಿಗಿಂತ ಮಹಿಳೆ ದುರ್ಬಲಳು ಎನ್ನುವ ಅಸಮಾನ ನೆಲೆಗಳು ಕುಟುಂಬದಿಂದ ಹಿಡಿದು ಸಮಾಜದ ವಿವಿಧ ಸ್ತರಗಳಲ್ಲಿ ಬೆಸೆದುಕೊಂಡಿವೆ. ಇತಿಹಾಸದಲ್ಲಿ ರಾಜಮನೆತನದ ಹಾಗೂ ಉನ್ನತ ವರ್ಗದ ಮಹಿಳೆಯರನ್ನು ಬಿಟ್ಟರೆ, ಸಾಮಾನ್ಯ ವರ್ಗಗಳ ಮಹಿಳೆಯರ ರಾಜಕೀಯ ಸ್ಥಾನಮಾನಗಳನ್ನು ಗುರುತಿಸುವುದು ಕಷ್ಟ. ಕರ್ನಾಟಕದಲ್ಲಿ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹಾಗೂ ಪ್ರಮುಖ ಪಾತ್ರವನ್ನು ಕುರಿತು ತಿಳಿಯುವಲ್ಲಿ ಶಾಸನಗಳು ಪ್ರಮುಖ ಆಧಾರಗಳಾಗಿವೆ. ಚರಿತ್ರೆಯು ರಾಜಕೀಯದಲ್ಲಿ ಮಹಿಳೆಯ ಪಾತ್ರವನ್ನು ಉದಾಸೀನ ಮಾಡಿದೆ. ರಾಜಕೀಯ ಕ್ಷೇತ್ರದಲ್ಲಿ ಆಕೆಯ ಭಾಗವಹಿಸುವಿಕೆ ಅಪರೂಪ ಮತ್ತು ಅನಿವಾರ್ಯದ ಸಂದರ್ಭಗಳಲ್ಲಿ ಮಾತ್ರವಾಗಿದೆ. ಅಂದರೆ ಪುತ್ರವಿಹೀನರಾಗಿದ್ದಾಗ, ಪತಿಯು ಮರಣಿಸಿದಾಗ, ಉತ್ತರಾಧಿಕಾರಿ ಪುತ್ರ ಅಸಮರ್ಥನಿದ್ದಾಗ, ವಯಸ್ಸಿನಲ್ಲಿ ಚಿಕ್ಕವನಿದ್ದಾಗ ಈ ಸಂದರ್ಭಗಳಲ್ಲಿ ಮಹಿಳೆ ನೇರವಾಗಿ ಆಡಳಿತವನ್ನು ಕೈಗೊಳ್ಳುತ್ತಿದ್ದಳು. ರಾಜಕೀಯವಾಗಿ ನಿರ್ಣಯ ತೆಗೆದುಕೊಳ್ಳುವಿಕೆಯಲ್ಲಿ, ನೀತಿ ನಿರೂಪಿಸುವಲ್ಲಿ, ಆಡಳಿತ ನಡೆಸುವಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಳು. ರಾಜರು ತಮ್ಮ ಹತ್ತಾರು ಜನ ಪತ್ನಿಯರಿಗೆ ಉಪಜೀವನಕ್ಕಾಗಿ ಕೆಲವು ಪ್ರದೇಶಗಳ ಆಡಳಿತವನ್ನು

ವಹಿಸಿಕೊಟ್ಟ ಉದಾಹರಣೆಗಳು ಸಿಗುತ್ತವೆ. ಇವರಲ್ಲಿ ಬಹುಪಾಲು ಸ್ತ್ರೀಯರು ರಾಜರಂತೆ ಬಾಲ್ಯದಿಂದಲೇ ರಾಜಕೀಯ ತರಬೇತಿಯನ್ನು ಕಡ್ಡಾಯವಾಗಿ ಪಡೆದವರಲ್ಲ. ಪ್ರಭುತ್ವ ಮನೋಭಾವ ಮತ್ತು ಅನಿವಾರ್ಯ ಸಂದರ್ಭಗಳು ಆಡಳಿತದಲ್ಲಿ ಪಾಲ್ಗೊಳ್ಳಲು ಕಾರಣವಾಗಿವೆ.[೭] ರಾಜಮನೆತನದ ಇನ್ನೂ ಕೆಲವು ಮಹಿಳೆಯರು ಪತಿಯೊಂದಿಗೆ ರಾಜಕೀಯದಲ್ಲಿ ಸಹಕರಿಸಿರುವ ಸಾಧ್ಯತೆಗಳನ್ನೂ ಡಾ. ಡಿ. ಆರ್. ಭಂಡಾರಕರ ಊಹಿಸಿದ್ದಾರೆ.[೮] ಕೆಲವು ಸ್ತ್ರೀಯರು ರಾಜಕೀಯ ಜೀವನದಲ್ಲಿ ಸಮಭಾಗ ಪಡೆಯಬಲ್ಲ, ಸ್ವತಂತ್ರ ಆಡಳಿತ ನಡೆಸಬಲ್ಲ ಸಾಮರ್ಥ್ಯ ಹೊಂದಿದ್ದರೂ ಇವರು ಅತ್ತಕಡೆ ಗಮನಹರಿಸದಿರುವುದಕ್ಕೆ ಇವರು ಬೆಳೆದ ಪರಿಸರ ಮತ್ತು ಅಂದಿನ ಸಾಮಾಜಿಕ ಮೌಲ್ಯಗಳು, ಭಾರತೀಯ ದೃಷ್ಟಿಕೋನಗಳು ಕಾರಣವಿರಬಹುದು.[೯]

ಬ್ರಿಟೀಷರ ಆಳ್ವಿಕೆಯ ಅವಧಿಯಲ್ಲಿ ಮಹಿಳೆಯ ರಾಜಕೀಯ ಪಾತ್ರವನ್ನು ಬಹಳ ಶ್ರಮದಿಂದ ಗುರುತಿಸಬೇಕಾಗುತ್ತದೆ. ಹೆಚ್ಚಿನ ಆಂದೋಲನ, ಹೋರಾಟಗಳು ಸಾಮಾಜಿಕ ಸ್ಥಾನಮಾನ ಪಡೆಯುವಿಕೆಗೆ ಸಂಬಂಧಿಸಿರುವುದರಿಂದ, ಆಕೆಯ ರಾಜಕೀಯ ಪಾತ್ರವನ್ನಷ್ಟೇ ಪ್ರತ್ಯೇಕವಾಗಿ ಗುರುತಿಸುವುದು ಕಷ್ಟವಾಗುತ್ತದೆ. ರಾಷ್ಟ್ರೀಯ ಚಳುವಳಿಯ ರಾಜಕೀಯ ಹೋರಾಟದ ಮುಖ್ಯವಾಹಿನಿ (Main Stream) ಯಲ್ಲಿ ಭಾಗವಹಿಸಿದ ಹೆಚ್ಚಿನ ಮಹಿಳೆಯರು ಮೇಲ್ವರ್ಗದಿಂದ ಬಂದವರೆಂಬುದನ್ನು ಮರೆಯಲಾಗದು. ಈ ವರ್ಗದ ಕುಟುಂಬದ ಪುರುಷರೂ ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯ ಚಳುವಳಿಯಲ್ಲಿ ಭಾಗವಹಿಸಿದ್ದವರೇ ಆಗಿದ್ದರು. ಆದರೆ ಮಹಾತ್ಮ ಗಾಂಧೀಯವರ ಪ್ರಭಾವ ಸಮಾಜದ ಎಲ್ಲ ವರ್ಗದ ಮಹಿಳೆಯರಿಗೂ ತಮ್ಮ ಸೀಮಿತ ವಲಯಗಳಿಂದ ಚಳುವಳಿಯ ಪ್ರಪಂಚಕ್ಕೆ ತೆರೆದುಕೊಳ್ಳುವ ಪ್ರೇರಣೆ ನೀಡಿತು. ಅನುಚಾನವಾಗಿ ಒಂದು ನಿರ್ದಿಷ್ಟ ಸಾಂಸ್ಕೃತಿಕ ಸಾಮಾಜಿಕ ಅಂಶಗಳ ಮೇಲೆ ಮಹಿಳೆಯರನ್ನು ಪ್ರತ್ಯೇಕವಾಗಿರಿಸಿದ್ದ ಸ್ತರಗಳು ಇಲ್ಲಿ ಛಿದ್ರಗೊಂಡವು. ಪುರುಷರು ಸೆರೆವಾಸಿಗಳಾದಾಗ ರಾಷ್ಟ್ರೀಯ ಹೋರಾಟದಲ್ಲಿ ಹೆಚ್ಚಿನ ಹೊಣೆಗಾರಿಕೆ ಮಹಿಳೆಯರಿಗೆ ಇರುತ್ತಿತ್ತು ಎಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಇದು ಮಹಿಳೆಯ ಆತ್ಮವಿಶ್ವಾಸ ಗಟ್ಟಿಯಾಗಲು ಸಹಕಾರಿಯಾಯಿತು.

ಮಹಿಳೆಯರ ಸಹಜ ಮನೋಧರ್ಮಗಳೆಂದು ಪರಿಭಾವಿಸಲಾಗಿದ್ದ ಸಹನೆ, ತ್ಯಾಗ, ಅಸಹಕಾರ, ದೃಢತೆ ಮೊದಲಾದವುಗಳನ್ನು ಗಾಂಧಿಯವರು ವಸಾಹತುಶಾಹಿಯ ವಿರುದ್ಧದ ಆಯುಧಗಳನ್ನಾಗಿ ಬಳಸಿದರು. ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯ ಈ ಗುಣಗಳನ್ನು ವಿಸ್ತರಿಸುವ ಮೂಲಕ ಆತ್ಮವಿಶ್ವಾಸವನ್ನು ಗಟ್ಟಿಗೊಳಿಸಿದರು. 'ಚರಕ'ದ ಮೂಲಕ ರಚನಾತ್ಮಕ ಶ್ರಮ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ತಂದುಕೊಟ್ಟರು.

ಕರ್ನಾಟಕದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ರಾಜಕೀಯ ಚಳುವಳಿ ಪ್ರೆಸಿಡೆನ್ಸಿ ಮತ್ತು ದೇಶೀಯ ಸಂಸ್ಥಾನಗಳೆಂಬ ೨ ನೆಲೆಗಳಲ್ಲಿ ಹಂಚಿಹೋಗಿತ್ತು. ಅನಿಬೆಸೆಂಟ್, ಸರೋಜಿನಿನಾಯ್ಡು, ಕಮಲಾಬಾಯಿ ಚಟ್ಟೋಪಾಧ್ಯಾಯ ಅವರಿಂದ ಹಿಡಿದು ಬಳ್ಳಾರಿ ಸಿದ್ದಮ್ಮ, ನಾಗಮ್ಮ ಪಾಟೀಲ, ಜಯದೇವಿತಾಯಿ ಲಿಗಾಡೆ, ಗೌರಮ್ಮ, ಕಾವೇರಮ್ಮ ಅವರಂತಹ ಅನೇಕ ಮಹಿಳೆಯರ ಹೋರಾಟದ ಮನೋಬಲ ಮತ್ತು ಸಂಘಟಿತ ಮನೋಭಾವ ಗಮನಿಸುವಂಥದ್ದು. ಈ ಪರಿಸರ ಮಹಿಳೆಯರು ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮೇಲೇಳಲು ಪ್ರೇರಣೆ ನೀಡಿತು. ಇದು ಮುಂದೆ ಸ್ವತಂತ್ರ ಭಾರತದ ಮಹಿಳೆ ರಾಜಕೀಯ ಪ್ರವೇಶಿಸುವಲ್ಲಿ ಸತ್ಪ್ರೇರಣೆಯಾಯಿತೆನ್ನು ವುದರಲ್ಲಿ ಸಂಶಯವಿಲ್ಲ.

ಇಂದು ರಾಜಕೀಯ ಕ್ಷೇತ್ರವು ಪುರುಷರ ಪ್ರಬಲ ಕೋಟೆಯಾಗಿ ಕಂಡುಬರುತ್ತಿದೆ. ಮಹಿಳೆ ಪುರುಷರಿಗಿಂತ ಬಲಹೀನಳು ಎಂಬ ಜೈವಿಕ ಅಂಶವನ್ನು ಆಧಾರವಾಗಿಟ್ಟುಕೊಂಡು ಮಹಿಳೆಯನ್ನು ಅಧಿಕಾರ ರಾಜಕಾರಣದಿಂದ ದೂರವಿಡಲಾಗುತ್ತಿದೆ. ರಾಜಕೀಯ ಪಕ್ಷಗಳು ಚುನಾವಣಾ ಸ್ಥಾನಗಳಿಗಾಗಿ ಪುರುಷರಿಗೆ ಪ್ರಾಧಾನ್ಯತೆ ನೀಡುತ್ತಿವೆ. ಪುರುಷ ಅಭ್ಯರ್ಥಿಗಳೇ ಅಧಿಕ ಸಂಖ್ಯೆಯಲ್ಲಿರುವುದು ಕಂಡುಬಂದಿದೆ, ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಿರುತ್ತದೆ. ಅದರಲ್ಲೂ ಆಯ್ಕೆಯಾದ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ತುಂಬಾ ಕಡಿಮೆ. ಲೋಕಸಭೆಯ ಚುನಾವಣೆಗಳಲ್ಲಿ ಇದು ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಕುರಿತ ಲಿಂಗಬೇಧ, ಪೂರ್ವಗ್ರಹ ದೃಷ್ಟಿ ಇನ್ನು ಬದಲಾಗಿಲ್ಲ. ಸ್ವತಂತ್ರ ಭಾರತದ ಐವತ್ತು ವರ್ಷಗಳಲ್ಲಿ ಇಂದಿರಾಗಾಂಧಿ, ಸೋನಿಯಾಗಾಂಧಿಯವರಂಥ ಪ್ರತಿಷ್ಠಿತ ಕುಟುಂಬದ ಮಹಿಳೆಯರಲ್ಲದೆ ಸುಷ್ಮಸ್ವರಾಜ್, ಉಮಾಭಾರತಿ, ವಿಜಯರಾಜೇ ಸಿಂಧಿಯಾ, ಮಮತಾ ಬ್ಯಾನರ್ಜಿ, ಜೆ.ಜಯಲಲಿತ, ರಾಬ್ಡಿದೇವಿ, ಪೂಲನ್ ದೇವಿಯವರಂತಹ ವಿವಿಧ ಹಂತದ ರಾಜಕೀಯ ನಾಯಕಿಯರನ್ನು ಕಂಡಿದ್ದೇವೆ. ಇಲ್ಲಿ ಹೆಚ್ಚಿನವರು ರಾಜಕೀಯ ಕ್ಷೇತ್ರದೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಒಡನಾಟವಿದ್ದವರ ಕುಟುಂಬದವರೆಂಬುದು ಗಮನಾರ್ಹ. ಪೂಲನ್ ದೇವಿಯಂಥ ತೀರ ಹಿಂದುಳಿದ ವರ್ಗದ ಮಹಿಳೆಯೂ ಕೂಡ ರಾಜಕೀಯ ನಾಯಕರ ಅವಕಾಶವಾದಿ ಸ್ವಭಾವದ ಕೂಸಾಗಿ ರಾಜಕೀಯರಂಗ ಪ್ರವೇಶಿಸಿದ್ದು ಕುತೂಹಲಕರವಾದದ್ದು. ಆದರೆ ಇವರ ಹೆಸರುಗಳನ್ನು ಮುಂದೆ ಮಾಡಿ ಮಹಿಳೆ ರಾಜಕೀಯ ಕ್ಷೇತ್ರದಲ್ಲಿ ಹಿಂದೆಂದೂ ಕಾಣದ ಮುನ್ನಡೆಯನ್ನು ಪಡೆದಿದ್ದಾಳೆ ಎನ್ನುವುದು ಪರಿಪೂರ್ಣತೆ ಎನಿಸುವುದಿಲ್ಲ. ಇವರ ಮೂಲಕ ಉಳಿದ ಮಹಿಳೆಯರ ಸ್ಥಾನಮಾನಗಳನ್ನು ಅಳೆಯ ಹೊರಟರೆ ದಿಕ್ಕು ತಪ್ಪುತ್ತೇವೆ.

ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿಯೇ ಸಮಾನ ಸ್ವಾತಂತ್ರ್ಯ ಹಾಗೂ ಸಮಾನ ಅವಕಾಶಗಳು ಸಹಬಾಳ್ವೆಯ ಅಂಶಗಳನ್ನು ನಿಹಿತಗೊಳಿಸಲಾಗಿದೆ. ಮೂಲಭೂತ ಹಕ್ಕುಗಳು ಎಲ್ಲ ಭಾರತೀಯ ಪೌರರಿಗೂ ದಕ್ಕಬೇಕೆಂಬುದು ಸಂವಿಧಾನದ ಬಹುಮುಖ್ಯ ಅಪೇಕ್ಷೆ.

ಪಾರಂಪರಿಕವಾಗಿ ಸ್ತ್ರೀಯನ್ನು ಗಂಡಿನ ಚರಾಸ್ತಿಯನ್ನಾಗಿ, ಗುಲಾಮಳನ್ನಾಗಿ, ಭೋಗ ವಸ್ತುವನ್ನಾಗಿ ಪರಿಗಣಿಸಿದ ಸಂಗತಿಗಳು ಭಾರತ ಸ್ವಾತಂತ್ರ್ಯದನಂತರ ಅದೂ ಸಂವಿಧಾನ ರೂಪಗೊಂಡನಂತರ ಮಹತ್ತರವಾದ ಪಲ್ಲಟಗಳಿಗೆ ಒಳಗಾದವು. ಪುರುಷಾಧಿಕಾರದ ಪ್ರಧಾನ ಆಲೋಚನೆಗಳೇ ಸಂವಿಧಾನದಲ್ಲಿದ್ದರೂ ಮಹಿಳಾ ಪ್ರಧಾನವಾದ ಕೆಲವು ಅನುಚ್ಛೇದಗಳು ಸೇರ್ಪಡೆಯ ಸಡಿಲತೆಗಳು ಮಹಿಳಾ ಪ್ರಾತಿನಿಧ್ಯವನ್ನು ಎತ್ತಿಹಿಡಿಯುವಲ್ಲಿ ನೆರವಾದವು ಎಂಬುದು ಗಮನಾರ್ಹ ಅಂಶ. ಸಂವಿಧಾನದಲ್ಲಿನ ೩-೬, ೧೦, ೨೦, ೨೧, ೨೨, ೨೩, ೨೪, ೨೫, ೨೯,(೧)(೨), ೩೮(೨), ೩೯(ಎ),೪೨, ೪೪, ೪೫, ೫೧, ಮೊದಲಾದ ಅನುಚ್ಛೇದಗಳು ಬಹುಮುಖ್ಯವಾಗಿ ಸಂವಿಧಾನ ರಚನೆಯ ಮೊದಲಹಂತದಲ್ಲಿ ಲಭ್ಯವಿರದಿದ್ದ ಮಹಿಳೆಯರ ಅನೇಕ ನಾಗರಿಕ ಹಕ್ಕುಗಳನ್ನು ಪ್ರದತ್ತ ಮಾಡಿಕೊಟ್ಟವು.

ಸ್ತ್ರೀ-ಪುರುಷರ ಸಾಮಾಜಿಕ ಸಮಾನತೆಯ ನೆಲೆಗಳನ್ನು ಸಂವಿಧಾನದಲ್ಲಿ ಅಂತರ್ಗತಗೊಳಿಸುವ ಮೂಲಕ ಮಹಿಳೆಯರಿಗೆ ಒಂದು ಹೊಸ ದಿಗಂತವನ್ನು ತೆರೆದಿಡಲಾಯಿತು. ಜೊತೆಗೆ ಸಂವಿಧಾನವು ಮೂರು ಮುಖ್ಯ ತೀರ್ಮಾನಗಳನ್ನು ಕೈಗೊಂಡಿತು. ಒಂದು, ಲಿಂಗಾಧಾರಿತವಾದ ತಾರತಮ್ಯತೆಗಳ ನಿಷೇಧ. ಎರಡು, ಮಹಿಳೆಯರ ಜೈವಿಕ, ಮಾನಸಿಕ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಅನುಲಕ್ಷಿಸಿ ಅವರಿಗೆ ರಾಜ್ಯವು ವಿಶೇಷ ಕಾಳಜಿಯನ್ನು ವಹಿಸುವಂತಹ ಉಪಬಂಧಗಳನ್ನು ರಚಿಸಲು ಅಧಿಕಾರ ನೀಡುವುದು. ಮೂರು, ಮಹಿಳೆಯರಿಗಾಗಿಯೇ ನಿರ್ದಿಷ್ಟ ನಿರ್ದೇಶನಗಳನ್ನು ನೀಡುವ ನಿರ್ದೇಶಕ ತತ್ವಗಳನ್ನು ಸಂರಚಿಸುವುದು. ಹೀಗೆ ಸ್ತ್ರೀ-ಪುರುಷರನ್ನು ಸಮಾನ ಪಾತಳಿಯಲ್ಲಿ ಗ್ರಹಿಸುವ ತಿಳುವಳಿಕೆಗಳೇ ಮಾನವ ನಾಗರಿಕತೆಯ ನಿಜವಾದ ಪ್ರಗತಿಯ ಮಜಲುಗಳು. ಆದರೂ ಚರಿತ್ರೆಯ ಬೇರೆ ಬೇರೆ ಹಂತದಲ್ಲಿ ಮಹಿಳೆ ಅಸ್ತಿತ್ವ ರಹಿತಳಾಗಿ ಅಶುಭದ ಸಂಕೇತವಾಗಿ ವ್ಯಾಖ್ಯಾನಕ್ಕೊಳಗಾಗುತ್ತಲೇ ಬಂದಿರುವುದು ಕಂಡುಬರುತ್ತದೆ.

ವಿಶೇಷವಾಗಿ ಮಹಿಳೆಯರಿಗೆ ಭಾರತೀಯ ಸಂವಿಧಾನವು ನೀಡಿದ ಕೊಡುಗೆ ವಿಶಿಷ್ಟವಾದದ್ದು. ೧೪ ರಿಂದ ೧೮ನೇ ವಿಧಿಯ ಪ್ರಕಾರ ನೀಡಿದ ಸಮಾನತೆಯ ಹಕ್ಕು ೨೩ ಮತ್ತು ೨೪ನೆಯ ವಿಧಿಗಳ ಪ್ರಕಾರದ ಶೋಷಣೆಯ ವಿರುದ್ಧದ ಹಕ್ಕು, ಅನುಚ್ಛೇದ ೩೯(ಎ)(ಡಿ) ಮತ್ತು (ಇ) ಹಾಗೂ ೪೨ರ ಪ್ರಕಾರ ನಿರ್ದೇಶನ ತತ್ವಗಳು ಅನುಚ್ಛೇದ ೫೧(ಎ)(ಇ)ರ ಮೂಲಭೂತ ಕರ್ತವ್ಯಗಳು ಅನುಚ್ಛೇದ ೩೨೫ ಮತ್ತು ೩೨೬ರ ಅನ್ವಯ ನೀಡಿದ ಮತದಾನದ ಹಕ್ಕುಗಳು ಮಹಿಳಾ ಪ್ರಗತಿ ವಿಚಾರದಲ್ಲಿ

ಸಂವಿಧಾನವು ದತ್ತಗೊಳಿಸಿದ ಬಹುಮುಖ್ಯ ಸಂಗತಿಗಳು. ಸಂವಿಧಾನದ ಗುಣಾತ್ಮಕ ವಿಚಾರವೆಂದರೆ ಮಹಿಳಾ ಸಮಾನತೆಯನ್ನು ಕೇವಲ ಒಮ್ಮುಖವಾಗಿಸದೆ ಇಮ್ಮುಖವಾಗಿಸಿದ್ದು. ಹಕ್ಕುಗಳೊಂದಿಗೆ ಅವುಗಳ ದುರುಪಯೋಗವಾಗದಂತೆ ರಕ್ಷಣೆಯನ್ನೂ ಒದಗಿಸಲಾಗಿದೆ. ಸ್ತ್ರೀ ಎನ್ನುವ ಕಾರಣಕ್ಕೆ ಅವಳನ್ನು ಕೀಳೀಕರಣಗೊಳಿಸದಂತೆ ನಿರ್ಬಂಧಿತ ಅನುಚ್ಛೇದಗಳನ್ನೂ ಸೇರಿಸಲಾಗಿದೆ. ಅಲ್ಲದೆ ಮತ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳದ ಆಧಾರದ ಮೇಲೆ ನಡೆಯುವ ಅಸಮಾನತೆಗಳನ್ನು ನಿಷೇಧಿಸಲಾಗಿದೆ. ಭಾರತ ಸಂವಿಧಾನವು ಸ್ತ್ರೀಯರಿಗೆ ನೀಡಿದ ಮೂಲಭೂತ ಹಕ್ಕುಗಳಲ್ಲಿ ಸಮಾನತೆ ಹಕ್ಕು ಬಹುಮುಖ್ಯವಾದದ್ದು. ಇದರ ಜೊತೆಗೆ ಮಹಿಳೆಯ ವಿಶೇಷ ರಕ್ಷಣೆಯ ದೃಷ್ಟಿಯಿಂದ ಮಹಿಳೆ ಮತ್ತು ಮಕ್ಕಳಿಗಾಗಿ ನಿರ್ದಿಷ್ಟ ಉಪಬಂಧಗಳನ್ನು ಜಾರಿಮಾಡಲು ರಾಜ್ಯಗಳಿಗೆ ಅಧಿಕಾರ ನೀಡಲಾಗಿದೆ. ಇಂತಹ ಜವಾಬ್ದಾರಿಗಳಲ್ಲಿ ಬಹುಮುಖ್ಯವಾದವುಗಳೆಂದರೆ ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಜೀವನಾವಶ್ಯಕ ಅನುಕೂಲಗಳು, ಸಮಾನವೇತನ, ಸಮಾನಕೆಲಸ. ರಾಜ್ಯದಲ್ಲಿ ಮಹಿಳೆಗೆ ಶೇ.೩೦ರಷ್ಟು ಉದ್ಯೋಗಗಳಲ್ಲಿ ಮೀಸಲಾತಿ ಕೊಡಲಾಗಿದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ಕೊಡಲಾಗಿದೆ.

ಸ್ತ್ರೀಪರವಾಗಿ ಕಾನೂನು ರಚಿಸಲು ಸಂವಿಧಾನದಲ್ಲಿ ೧೫(೩)ರ ಅನುಚ್ಛೇದ ಪ್ರಕಾರ ಅನೇಕ ಉಪಯುಕ್ತ ಶಾಸನಬದ್ಧ ಅಧಿಕಾರಗಳನ್ನು ಕಾಯ್ದಿರಿಸಲಾಗಿದೆ. ಪುರಸಭೆಗೆ ನಡೆಯುವ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯದ ಅನಿವಾರ್ಯತೆಯನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ಹಾಗೇ ಸರ್ಕಾರಿ ನೇಮಕಾತಿಗಳಲ್ಲಿ ಶಾಸನಸಭೆ ಮತ್ತು ಸಂಸತ್ತುಗಳಲ್ಲಿ ಮಹಿಳಾ ಮೀಸಲಾತಿಯು ಈ ಅನುಚ್ಛೇದದ ಅಡಿಯಲ್ಲಿ ನೀಡಲಾದ ವಿಶೇಷ ಸೌಲತ್ತಾಗಿದೆ. ಯಾವ ಸಂದರ್ಭದಲ್ಲಿ ಪುರುಷರನ್ನು ಜಾಮೀನಿನ ಮೇಲೆ ಕಾರಾಗೃಹದಿಂದ ಬಿಡುಗಡೆಗೊಳಿಸುವುದಿಲ್ಲವೋ ಅದೇ ಸಂದರ್ಭದಲ್ಲಿ ಸ್ತ್ರೀಯರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವುದನ್ನು ಕಾನೂನು ಕಲ್ಪಿಸಿಕೊಟ್ಟಿದೆ. ಸ್ತ್ರೀ-ಪುರುಷರಲ್ಲಿ ಸಮಾನತೆಯನ್ನು ಕಲ್ಪಿಸುವಲ್ಲಿ ಸಂವಿಧಾನ ಇಟ್ಟ ಈ ಹೆಜ್ಜೆ ಪ್ರಗತಿಪರವಾದದ್ದು. ನಮ್ಮ ಸಂವಿಧಾನ ಹಾಗೂ ಕಾನೂನುಗಳು ಮಹಿಳಾ ಸಮಾನತೆಯನ್ನು ಎತ್ತಿಹಿಡಿದರೂ ಎಲ್ಲೂ ಅವಳನ್ನು ಸ್ವತಂತ್ರ ಮನೋಭಾವದ ವ್ಯಕ್ತಿಯನ್ನಾಗಿ ಒಪ್ಪಿಕೊಂಡಿದ್ದು ಕಂಡುಬರುವುದಿಲ್ಲ.

ಸ್ತ್ರೀ-ಪುರುಷರನ್ನು ಭೇದವಾಗಿ ನೋಡುವ ಇಂಥ ಅನೇಕ ಉಪಬಂಧಗಳು ನಮ್ಮ ಕಾನೂನುಗಳಲ್ಲಿ ಸಾಮಾಜಿಕ ಮನೋಭೂಮಿಕೆಯಲ್ಲಿ ಬೇರು ಬಿಟ್ಟಿವೆ. ಇಂದು ಮಂಡಿತವಾಗಬೇಕೆಂದಿರುವ ರಾಜ್ಯಶಾಸನ ಸಭೆ ಮತ್ತು ಲೋಕಸಭೆಯ ಶೇ.೩೩.೩೩ರ ಮಹಿಳಾ ಮೀಸಲಾತಿ ಮಸೂದೆ ಪುರುಷಾಧಿಕಾರದ ಹಾಗೂ ರಾಜಕೀಯ ದೊಂಬರಾಟದ ಸೆಳವಿಗೆ ಸಿಕ್ಕು ತತ್ತರಿಸುತ್ತಿದೆ. ಪುರುಷ ಪ್ರಧಾನ ಸಮಾಜ

ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಕಾನೂನುಗಳ ಆಧಾರದ ಮೇಲೆ ನಡೆಯುವ ತೀರ್ಪುಗಳೂ ಸಹ ಆ ಸಮಾಜದ ಹಾಗು ಪ್ರತಿ ನ್ಯಾಯಾಧೀಶರ, ಆಳುವ ಸರಕಾರಗಳ ದೃಷ್ಟಿಕೋನಗಳಿಂದ ಅಂತಿಮಗೊಳ್ಳುತ್ತಿರುತ್ತವೆ. ಮಹಿಳೆ-ಪುರುಷರಿಗೆ ಏಕರೂಪ ಸಮಾನತೆ ಸಿಗಬೇಕೆಂದರೆ ಕಾನೂನು ಸೃಷ್ಟಿಕರ್ತರಿಂದ ಹಿಡಿದು ಅನುಷ್ಠಾನ ಕರ್ತೃಗಳವರೆಗೂ ಪ್ರಗತಿಪರವಾದ ಮನೋಧರ್ಮವನ್ನು ಬೆಳೆಸಿಕೊಳ್ಳುವುದು ಜರೂರಾಗಿದೆ.

ಗ್ರಾಮಪಂಚಾಯಿತಿ ಇತಿಹಾಸ

ಒಕ್ಕೂಟ ವ್ಯವಸ್ಥೆಯ ಐದು ಸ್ಥರಗಳಲ್ಲಿ ಗ್ರಾಮ ಪಂಚಾಯಿತಿ ಕೊನೆಯ ಸ್ತರ ಮತ್ತು ಮಹತ್ವದ ಸ್ತರ. ಗ್ರಾಮ ಮಟ್ಟದ ಶಾಸಕಾಂಗ ಮತ್ತು ನೇರ ಪ್ರಜಾಸತ್ತಾತ್ಮಕ ಘಟಕ ಇದಾಗಿದೆ. ಶಾಸಕಾಂಗದೋಪಾದಿಯಲ್ಲಿರುವ ಗ್ರಾಮ ಸಭೆಯು, ನ್ಯಾಯಾಂಗ ಮಾದರಿಯಾಗಿರುವ ನ್ಯಾಯ ಪಂಚಾಯ್ತಿಗಳು, ಗ್ರಾಮಪಂಚಾಯ್ತಿಯ ಎರಡು ಗಾಲಿಗಳು. ಇವೆರಡೂ ಇರದ ಗ್ರಾಮಪಂಚಾಯ್ತಿ ಹೆಳವನಿದ್ದಂತೆ.

ಸ್ಥಳೀಯ ಆಡಳಿತದ ಪ್ರಬುದ್ಧ ಮತ್ತು ಪ್ರಧಾನ ವ್ಯವಸ್ಥೆಯಾದ ಗ್ರಾಮಪಂಚಾಯ್ತಿಗೆ ದೊಡ್ಡ ಇತಿಹಾಸವಿದೆ. ಹಾಗೆ ನೋಡಿದರೆ 'ಪಂಚಾಯ್ತಿ' ಎನ್ನುವ ಪದಗುಚ್ಛವೇ ಊಳಿಗಮಾನ್ಯ ಮತ್ತು ಶಕ್ತಿಶಾಲಿ ವ್ಯವಸ್ಥೆಗಳ ಪ್ರತೀಕವಾಗಿದೆ. ಕಾರಣ 'ಪಂಚ' ಅಂದರೆ ಐದು. ಐದು ಜನರ ಒಂದು ನ್ಯಾಯ ವ್ಯವಸ್ಥೆಯೇ 'ಪಂಚಾಯ್ತಿ'. 'ಪಂಚರು' ಎನ್ನುವ ಪದದಿಂದ ಪಂಚಾಯ್ತಿ ಶಬ್ದ ಹುಟ್ಟಿ ಕೊಂಡಿದೆ. ಈ ಪಂಚರು ಯಾರಾಗಿರುತ್ತಾರೆ ಎಂಬ ಪ್ರಶ್ನೆ ಹಾಕಿಕೊಂಡಾಗ ಚರಿತ್ರೆಯುದ್ದಕ್ಕೂ ಬೇಕಾದಷ್ಟು ನಿದರ್ಶನಗಳು ಉತ್ತರವಾಗಿ ಸಿಗುತ್ತವೆ. ಸಾಮಾನ್ಯವಾಗಿ ಹಳ್ಳಿಯಲ್ಲಿ 'ದೈವವೇ ದೇವರು' ಎಂಬ ವಾಡಿಕೆಯಿದೆ. ಈ ದೈವವೆಂದರೆ ಈ ಐದು ಜನರು ಪ್ರಧಾನವಾದ ಸಂಸ್ಥೆ. ಊರ ಆಗು ಹೋಗುಗಳೆಲ್ಲ ಇವರ ಮೂಗಿನ ನೇರಕ್ಕೆ ನಡೆದುಕೊಂಡು ಹೋಗುತ್ತಿದ್ದವು. ಸಾಮಾನ್ಯವಾಗಿ ಊರಿನ ಪ್ರತಿಷ್ಠಿತ ವರ್ಗದವರು ಆ ವರ್ಗಕ್ಕೆ ಆಪ್ತರಾದವರು ಈ ಗುಂಪಿನಲ್ಲಿರುತ್ತಿದ್ದರು. ಬೇಕಾದವರನ್ನು ರಕ್ಷಿಸುವ, ಶಿಕ್ಷಿಸುವ ಎಲ್ಲಾ ಅವಕಾಶಗಳು ಇವರಲ್ಲಿರುತ್ತಿದ್ದವು. ಇದಕ್ಕೆ ಅಪವಾದಗಳೂ ಇರಬಹುದು. ಗ್ರಾಮ ವ್ಯವಸ್ಥೆಯಲ್ಲಿ ಇದು ಬಲವಾದ ಘಟಕವಾಗಿತ್ತು. ಕಾಲಾಂತರದಲ್ಲಿ ಇದರ ಭಿನ್ನ ಸ್ವರೂಪಗಳನ್ನು ಕಾಣಬಹುದಾಗಿದೆ.

ವೇದಗಳ ಕಾಲದಿಂದಲು ಜನಗಳ ಗುಂಪು ಗಣ, ಗಣಗಳ ಗುಂಪು ರಾಷ್ಟ್ರವೆಂಬ ಪರಿಕಲ್ಪನೆಯಿತ್ತು. ಈ ರಾಷ್ಟ್ರದ ಮುಖ್ಯಸ್ಥ ಸಾಮ್ರಾಟ, ಈ ರಾಜ ಜನ ಸಮಿತಿಯ ಇಷ್ಟಾರ್ಥಕ್ಕೆ ಅನುಸರಿಸಿ ರಾಜ್ಯಭಾರ

ಮಾಡುತ್ತಿದ್ದನು. ರಾಜನಿಗೆ ಆಡಳಿತದಲ್ಲಿ ಸಾಮಾನ್ಯ ಜನರ 'ಸಮಿತಿ' ಎಂಬುದಿರುತ್ತಿತ್ತು. ರಾಜನ ಕೈಕೆಳಗೆ ಗ್ರಾಮಿಣಿಗಳೆಂಬ ಸಹಾಯಕ ವರ್ಗವಿರುತ್ತಿತ್ತು. ಮನು ತನ್ನ 'ಮನುಸ್ಮೃತಿ'ಯಲ್ಲಿ ಗ್ರಾಮಪಂಚಾಯ್ತಿಯ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾನೆ. ಕೌಟಿಲ್ಯ ತನ್ನ 'ಅರ್ಥಶಾಸ್ತ್ರ ಗ್ರಂಥ'ದಲ್ಲಿ ಜನಪದದಲ್ಲಿ ಗ್ರಾಮವೇ ಅತ್ಯಂತ ಚಿಕ್ಕ ಪ್ರಾದೇಶಿಕ ಮತ್ತು ರಾಜಕೀಯ ವಿಭಾಗವೆಂದು, ಗ್ರಾಮಪಂಚಾಯ್ತಿಗಳನ್ನು ಸಾಮಾಜಿಕ ಸಂಸ್ಥೆಗಳೆಂದು ಕರೆದಿದ್ದಾನೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಜಾನಪದ'ರೆಂಬ ವರ್ಗವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದು,[illegible] ಜನಪದದ ಬಗ್ಗೆಯೇರಾಜನು ಹೆಚ್ಚಿನ ಶ್ರದ್ಧೆಯನ್ನು ವಹಿಸಬೇಕೆಂದು ಕೌಟಿಲ್ಯನು ಹೇಳಿದ್ದಾನೆ.[illegible] ಜನಪದರು ಎಂದರೆ ಗ್ರಾಮೀಣ ಮುಖ್ಯರು ಎಂದರ್ಥ.[illegible] ಕೆ.ಎಂ.ಫಣಿಕ್ಕರ್ ಅವರು ತಮ್ಮ ಕೃತಿಗಳಲ್ಲಿ ಈ ಕುರಿತು ಚರ್ಚಿಸಿದ್ದಾರೆ. ಕೆ.ಪಿ.ಜಯಸ್ವಾಲ್ ಅವರು 'ಹಿಂದೂ ಪಾಲಿಟಿ'ಯಲ್ಲಿ ಮತ್ತು ಡಿ.ಡಿ.ಕೋಸಾಂಬಿ ಅವರು ತಮ್ಮ ಕೃತಿ 'ಪ್ರಾಚೀನ ಭಾರತದ ಚರಿತ್ರೆ'ಯಲ್ಲಿ ಸಭೆ, ಸಭಾ, ಸಮಿತಿ ಇವುಗಳ ಅಸ್ತಿತ್ವವನ್ನು ಗ್ರಾಮ ಮಟ್ಟದಲ್ಲಿ ಗುರುತಿಸಿದ್ದಾರೆ. ಶಾತವಾಹನರ ಕಾಲದಲ್ಲಿ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿದ್ದ ಬಗ್ಗೆ ಮಾಹಿತಿ ಸಿಗುತ್ತದೆ. ಹೊಯ್ಸಳರ ಕಾಲದಲ್ಲಿ ಸ್ಥಳೀಯ ಆಡಳಿತ ವ್ಯವಹಾರಗಳೆಲ್ಲವನ್ನು ಗ್ರಾಮ ಸಭೆಗಳೆ ನಿರ್ವಹಿಸುತ್ತಿದ್ದವು. ವಿಜಯನಗರ ಆಡಳಿತ ಸಂದರ್ಭದಲ್ಲಿ ಗ್ರಾಮವು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿತ್ತು. ಸ್ಥಳೀಯ ಮಟ್ಟದಲ್ಲಿ ಗ್ರಾಮಸಭೆ, ಮಹಾಜನ ಸಭೆ, ಪೌರಸಭೆ ಮತ್ತು ಅನೇಕ ವೃತ್ತಿಗಳ ಸಂಘಗಳಿದ್ದವು. ಜನರ ಏಳಿಗೆಯೇ ಈ ಸ್ಥಳೀಯ ಸಂಸ್ಥೆಗಳ ಉದ್ದೇಶವಾಗಿತ್ತು. ಗ್ರಾಮ ಸಭೆಗಳು 'ಗೌಡ'ನ ನೇತೃತ್ವದಲ್ಲಿ ಶಾಂತಿಪಾಲನೆ, ನ್ಯಾಯ, ಸ್ಥಳೀಯ ಕಂದಾಯ, ತೆರಿಗೆ ವಸೂಲಿ ಅಲ್ಲದೆ ಆ ಪ್ರದೇಶದ ಪುರೋಭಿವೃದ್ಧಿಯಂತಹ ಸಂಗತಿಗಳನ್ನು ನೋಡಿಕೊಳ್ಳುತ್ತಿದ್ದ ಬಗ್ಗೆ ಚರಿತ್ರೆಯಿಂದ ತಿಳಿದುಬರುತ್ತದೆ.

ಮೊಗಲರ ಆಡಳಿತದಲ್ಲಿ 'ಮುಕದ್ದಮ್' ಎಂಬ ಗ್ರಾಮ ಮುಖಂಡನಿದ್ದ ಬಗ್ಗೆ ತಿಳಿದುಬರುತ್ತದೆ. ಈತ ಗ್ರಾಮದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನು. ಮರಾಠರ ಕಾಲದಲ್ಲಿ ಗ್ರಾಮಗಳಲ್ಲಿ ಗ್ರಾಮ ಪಂಚಾಯ್ತಿಗಳಿದ್ದು ಅವು ನಾಗರಿಕ ಜಗಳಗಳನ್ನು ಬಗೆಹರಿಸುವ ಹಾಗೂ ತೀರ್ಮಾನಿಸುವ ಹೊಣೆಯನ್ನು ನಿರ್ವಹಿಸುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ಗಾಂಧೀಜಿಯವರು ಪ್ರತಿಪಾದಿಸಿದ ಸ್ವರಾಜ್ಯ, ರಾಮರಾಜ್ಯ ಪರಿಕಲ್ಪನೆಗಳಿಗೆ ವಿಕೇಂದ್ರಿಕರಣದ ತತ್ವ ಹೊಂದಿರುವ ತಳಮಟ್ಟದ ಗ್ರಾಮಪಂಚಾಯ್ತಿಯೇ ಮುಖ್ಯ ಆಧಾರವಾಗಿತ್ತು.

ಹೀಗೆ ಗ್ರಾಮಪಂಚಾಯ್ತಿಗಳ ಚರಿತ್ರೆಯನ್ನು ಅವಲೋಕಿಸಿದಾಗ ಚರಿತ್ರೆಯುದ್ದಕ್ಕೂ ಒಂದಿಲ್ಲೊಂದು ರೀತಿಯಿಂದ ಸ್ಥಳೀಯ ಆಡಳಿತವನ್ನು, ನ್ಯಾಯ ತೀರ್ಮಾನಗಳನ್ನು, ಸಂಪನ್ಮೂಲ ಕ್ರೋಡೀಕರಣವನ್ನು

ಗ್ರಾಮ ಪಂಚಾಯ್ತಿಗಳು ನಿರ್ವಹಿಸಿಕೊಂಡು ಬಂದ ಬಗ್ಗೆ ಸಾಕಷ್ಟು ಮಾಹಿತಿಗಳು ಲಭ್ಯವಿವೆ. ಆದರೆ ಅವು ಇಂದಿನ ಪ್ರಜಾಪ್ರಭುತ್ವ ಮಾದರಿಯ ವಿಕೇಂದ್ರೀಕರಣ ಹಿನ್ನೆಲೆಯ ಪಂಚಾಯ್ತಿಗಳಾಗಿದ್ದವು ಎಂದು ಭಾವಿಸಿದರೆ ತಪ್ಪಾಗುತ್ತದೆ. ಆದರೆ ಇಂದಿನ ಗ್ರಾಮಾಭಿವೃದ್ಧಿ ಪರಿಕಲ್ಪನೆಗೆ ಇವು ನೀಡಿದ ಪ್ರೇರಣೆಗಳು ಗಮನಾರ್ಹವಾದಂತಹವು.

'ಸ್ವಾತಂತ್ರ್ಯನಂತರ ಏಕೀಕೃತ ಕರ್ನಾಟಕದಲ್ಲಿ ಪಂಚಾಯ್ತರಾಜ್ ವ್ಯವಸ್ಥೆಗೆ ಭದ್ರ ತಳಪಾಯವನ್ನು ಹಾಕಲಾಯಿತು. ಕೇಂದ್ರ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ಒಂದೇ ತೆರನಾದ ಸ್ಥಳೀಯ ಸರಕಾರ ವ್ಯವಸ್ಥೆಯನ್ನು ತರುವ ಉದ್ದೇಶದಿಂದ ಬಲವಂತರಾಯ್ ಮೆಹ್ತಾ ಸಮಿತಿಯನ್ನು ನೇಮಿಸಿತು.' ೧೯೫೬ರಿಂದ ೧೯೫೯- ೬೦ರವರೆಗೆ ಬೆಳಗಾವಿ, ಬಿಜಾಪುರ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲಾ ಬೋರ್ಡ್‌ಗಳು ಚುನಾಯಿತ ಅಧ್ಯಕ್ಷರ ಅಧೀನದಲ್ಲೂ, ಉಳಿದ ಜಿಲ್ಲೆಗಳು ವಿಶೇಷಾಧಿಕಾರಿಗಳ ಅಥವಾ ಜಿಲ್ಲಾಧಿಕಾರಿಗಳ ಅಧೀನದಲ್ಲಿದ್ದವು. '೧೯೫೪-೫೫ರಲ್ಲಿ ಗ್ರಾಮಪಂಚಾಯ್ತಿಗಳಿಗೆ ಚುನಾವಣೆಗಳು ನಡೆದವು. ೧೯೫೬ರಲ್ಲಿ ೧೨,೫೦೦ ಗ್ರಾಮಪಂಚಾಯ್ತಿಗಳು ಮೈಸೂರು ರಾಜ್ಯದಲ್ಲಿದ್ದವು. ೧೯೫೦ರಲ್ಲಿ ೧೫,೦೦೦ಕ್ಕೆ ಗ್ರಾಮಪಂಚಾಯ್ತಿಗಳ ಸಂಖ್ಯೆ ಏರಿತು. ೧೯೫೩ರಲ್ಲಿ ನೇಮಕವಾಗಿದ್ದ ಚಂದ್ರಶೇಖರಯ್ಯ ಸಮಿತಿ, ೧೯೫೬ರಲ್ಲಿ ನಡೆದ ರಾಜ್ಯ ಪುನರ್‌ವಿಂಗಡನೆ ಬಲವಂತರಾಯ ಮೆಹ್ತಾ ಸಮಿತಿಯು, ಹೊಸ ಮೈಸೂರು ರಾಜ್ಯದಲ್ಲಿ ಗ್ರಾಮೀಣ ಸ್ಥಳೀಯ ಸರಕಾರದ ವ್ಯವಸ್ಥೆಗೆ ಒಂದು ಉತ್ತಮ ಬುನಾದಿ ಹಾಕಿತು. ಇದರ ಪರಿಣಾಮವಾಗಿ ೧೯೫೯ರ ಮೈಸೂರು ಗ್ರಾಮಪಂಚಾಯ್ತಿ ಮತ್ತು ಸ್ಥಳೀಯ ಬೋರ್ಡುಗಳ ಕಾಯಿದೆಯನ್ನು ರೂಪಿಸಿತು.'

ಹೊಸ ಕಾಯಿದೆಯು ೧೯೫೯ನೇ ನವೆಂಬರ್ ೧ರಂದು ಜಾರಿಗೆ ಬಂದಿತು. ೧೯೬೦ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ನಡೆದವು. ಪಂಚಾಯ್ತರಾಜ್ ವ್ಯವಸ್ಥೆಯು ೧೯೬೦ ಡಿಸೆಂಬರ್ ೨ರಂದು ಭಾರತದ ರಾಷ್ಟ್ರಾಧ್ಯಕ್ಷರಿಂದ ಉದ್ಘಾಟನೆಯಾಯಿತ್ತು. ೧೯೫೯ರ ಮೈಸೂರು ಗ್ರಾಮಪಂಚಾಯ್ತಿ ಮತ್ತು ಸ್ಥಳೀಯ ಬೋರ್ಡ್‌ಗಳ ಕಾಯಿದೆಯು ಮೂರು ಸ್ತರದ ವ್ಯವಸ್ಥೆಯನ್ನು ಒಳಗೊಂಡಿತ್ತು. ಸರಕಾರವು ಪಂಚಾಯ್ತರಾಜ್ ಸಂಸ್ಥೆಗಳನ್ನು ಇನ್ನಷ್ಟು ಬಲಗೊಳಿಸುವ ಉದ್ದೇಶದಿಂದ ಸಲಹೆಗಳನ್ನು ಪಡೆಯಲು ೧೯೬೨ರಲ್ಲಿ ಕೊಂಡಜ್ಜಿ ಬಸಪ್ಪ ಸಮಿತಿಯನ್ನು ನೇಮಿಸಿತು. ಸಮಿತಿಯು ೧೯೬೩ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಆದರೆ ಶಾಸಕಾಂಗದಲ್ಲಿ ವರದಿಯು ಚರ್ಚೆಗೆ ಬರಲಿಲ್ಲ.

೧೯೬೪ರ ಮೈಸೂರು ಪಂಚಾಯತ್‌ರಾಜ್ ಮಸೂದೆಯು ಪುರೋಗಾಮಿಯಾಗಿತ್ತೆಂದು ಸರಕಾರವು ಈ ಮಸೂದೆಯ ಕುರಿತು ಆಸಕ್ತಿ ತೋರಲಿಲ್ಲ. ೧೯೭೩ರಲ್ಲಿ ಕೇಂದ್ರದ ಅಶೋಕ ಮೆಹ್ತಾ

ಶಿಫಾರಸ್ಸುಗಳ ನೆಲೆಯಲ್ಲಿ ಜನತಾ ಸರಕಾರವು ಪಂಚಾಯ್ತಿಗಳ ಕಾಯಿದೆ ರೂಪಿಸಿ ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯಿತು. ಇದು ಮೂರು ಹಂತದ ವ್ಯವಸ್ಥೆಯಾಗಿತ್ತು. ೧೯೮೩ರ ಈ ಕಾಯಿದೆ ಭಾರತ ಸಂವಿಧಾನಕ್ಕೆ ೭೩ ಮತ್ತು ೭೪ನೇ ತಿದ್ದುಪಡಿ ತರಲು ಕಾರಣವಾಯಿತು. ಇದು ಆಡಳಿತದಲ್ಲಿ ಮತ್ತಷ್ಟು ವಿಕೇಂದ್ರೀಕರಣವನ್ನು ಉಂಟುಮಾಡಿತು. ಈ ತಿದ್ದುಪಡಿಯಿಂದ ೧೯೯೩ ಏಪ್ರಿಲ್ ೨೪ರಂದು ಹೊಸ ಕಾಯಿದೆಯು ಜಾರಿಗೆ ಬಂದಿತು.

೧೯೯೩ ಮೇ ೧೦ರಂದು ಈ ಕಾಯಿದೆಯು ಅವಿರೋಧವಾಗಿ ಅನುಮೋದಿಸಲ್ಪಟ್ಟು ಜಾರಿಗೆ ಬಂದಿತು. ಈ ಕಾಯಿದೆಯು ಜಿಲ್ಲಾ ಪಂಚಾಯತ್, ತಾಲೂಕು ಪಂತಾಯತ್ ಮತ್ತು ಗ್ರಾಮ ಪಂಚಾಯತ್ ಎಂಬ ಮೂರು ಸ್ತರದ ವ್ಯವಸ್ಥೆಯನ್ನು ಒಳಗೊಂಡಿತ್ತು. ಗ್ರಾಮಪಂಚಾಯತ್‌ಗಳು ರಾಜಕೀಯ ಪಕ್ಷರಹಿತವಾಗಿ ಚುನಾವಣೆ ನಡೆಸಬೇಕಾಗಿತ್ತು. ಪ್ರಥಮವಾಗಿ ೧೯೯೫ರಲ್ಲಿ ಗ್ರಾಮ ಪಂಚಾಯತ್ ಚುನಾವಣೆಗಳನ್ನು ನಡೆಸಲಾಯಿತು. ೭೩ನೆಯ ತಿದ್ದುಪಡಿಯಿಂದಾಗಿ ಸಂವಿಧಾನದ ೧೧ನೆಯ ಅನುಚ್ಛೇದದ ೬೩ರಿಂದ ೧೧೦ರವರೆಗಿನ ಕಲಂನಲ್ಲಿ ಗ್ರಾಮಪಂಚಾಯ್ತಿಯ ಅಧಿಕಾರ ಮತ್ತು ಕಾರ್ಯವ್ಯಾಪ್ತಿಗಳನ್ನು ವಿವರಿಸಲಾಗಿದೆ.

ಗ್ರಾಮ ಪಂಚಾಯ್ತಿ ರಚನೆ ಮತ್ತು ಕಾರ್ಯಗಳು

ರಚನೆ :(೫೦೦೦ ದಿಂದ ೭೦೦೦ ಜನಸಂಖ್ಯೆಯುಳ್ಳ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಂದು ಪಂಚಾಯ್ತಿ ಇರುತ್ತದೆ. ಪ್ರತಿ ೪೦೦ ಜನಕ್ಕೆ ಅಥವಾ ಅದರ ಜನಸಂಖ್ಯೆ ಹಾಗೂ ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಒಬ್ಬ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಗ್ರಾಮಪಂಚಾಯ್ತಿ ಯಲ್ಲಿ ೫ ರಿಂದ ೧೫ರವರೆಗೆ ಸದಸ್ಯರು ಇರುತ್ತಾರೆ. ಗ್ರಾಮಪಂಚಾಯ್ತಿಯ ಅಧಿಕಾರವಧಿ ೫ ವರ್ಷಗಳು ಪರಿಶಿಷ್ಟ ಜಾತಿಯವರೆಗೆ ಶೇ.೧೫ಕ್ಕಿಂತ ಮೀಸಲಾತಿ ಕಡಿಮೆ ಇರದಂತೆ, ಪರಿಶಿಷ್ಟ ಜನಾಂಗಕ್ಕೆ ಶೇ.೩ಕ್ಕಿಂತ ಮೀಸಲಾತಿ ಕಡಿಮೆಯಿರದಂತೆ ಅವಕಾಶ ಕೊಡಲಾಗಿದೆ. ಸ್ತ್ರೀಯರಿಗೂ ಕೆಲವು ಸ್ಥಾನಗಳನ್ನು ಮೀಸಲಿರಿಸಲಾಗಿದೆ.

ಗ್ರಾಮಪಂಚಾಯ್ತಿಯ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿ ಸುಮಾರು ಮೂರನೇ ಒಂದರಷ್ಟು ಸ್ಥಾನವನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು. ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ, ವ್ಯಕ್ತಿಗಳ ಪ್ರತಿಯೊಂದು ವರ್ಗಕ್ಕೂ ಮೀಸಲಿಟ್ಟಿರುವ ಸ್ಥಾನಗಳಲ್ಲಿ ಮೂರನೇ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಸ್ಥಾನವನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು[೨೩].

ಕಾರ್ಯಗಳು

ಗ್ರಾಮಪಂಚಾಯ್ತಿ ಪ್ರದೇಶದಲ್ಲಿ ಅಲ್ಲಿಯ ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ಸುಖಸೌಖ್ಯ ಸೌಕರ್ಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ಉನ್ನತಿಯನ್ನು ವೃದ್ಧಿಸುವಂತಹ ಇತರ ಕೆಲಸಗಳನ್ನು ಮಾಡಬಹುದು(ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, ೧೯೯೩, ೨೦೦೦). ಅಲ್ಲದೆ ರಸ್ತೆ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ, ಕೆರೆ ಬಾವಿಗಳ ರಚನೆ, ನೀರು ಸರಬರಾಜು, ಆಟದ ಮೈದಾನ, ವಾಚನಾಲಯದ ವ್ಯವಸ್ಥೆ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇನ್ನೂ ಮೊದಲಾದವುಗಳು.[೧೪] ಗ್ರಾಮಪಂಚಾಯ್ತಿಯು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಹೊಂದಿರುತ್ತದೆ. ಈ ಸ್ಥಾನಗಳಿಗೂ ಮೀಸಲಾತಿ ಇರುತ್ತದೆ. ಒಬ್ಬ ಕಾರ್ಯದರ್ಶಿಯು ಸರಕಾರಿ ಅಧಿಕಾರಿಯಾಗಿರುತ್ತಾನೆ.

ವಿಕೇಂದ್ರೀಕರಣ ಎಂಬ ತಳಮಟ್ಟದ ರಾಜಕೀಯ

ವಿಕೇಂದ್ರೀಕರಣ ಹೀಗೆಂದರೇನು? ಎನ್ನುವ ಪ್ರಶ್ನೆ ಸಹಜವಾದದ್ದು. ಹಾಗೆ ವರ್ಗ, ವರ್ಣ, ಜಾತಿ,ಲಿಂಗ ಮುಂತಾದ ಬಹುಮುಖಿ ನೆಲೆಗಳಲ್ಲಿ, ಸಾಮಾಜಿಕ ಶ್ರೇಣೀಕರಣವುಳ್ಳ ಭಾರತದಂತಹ ಪರಿಸರದಲ್ಲಿ ವಿಕೇಂದ್ರೀಕರಣದ ಕಲ್ಪನೆ ಎಷ್ಟು ಮೌಲ್ಯಿಕವಾದದ್ದು? ಎಂಬ ಪ್ರಶ್ನೆಗಳೇವುದು ಸಹಜ. ವಿಕೇಂದ್ರೀಕರಣ ಎನ್ನುವುದು ಯಾವುದೇ ಒಂದು ಶೂನ್ಯದಿಂದ ಘಟಿಸುವ ಕ್ರಿಯೆಯಲ್ಲ. ಅದು ವಾಸ್ತವ ಬದುಕಿನ ಸಾಮಾಜಿಕ ಸಂದರ್ಭದಿಂದ ಸಂಭವಿಸುವಂತಹದ್ದು.

ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ನಿರ್ಣಯ ತೆಗೆದುಕೊಳ್ಳುವ ಅಧಿಕಾರವನ್ನು ಕೆಳಹಂತದ ಅಥವಾ ಅಧೀನ ಅಧಿಕಾರಿಗಳು ಹೊಂದಿರುತ್ತಾರೆ. ತಮ್ಮ ವಿವೇಚನೆಯಂತೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಅಧಿಕಾರವನ್ನು ಕೆಳಹಂತದ ಕಚೇರಿಗಳು ಹೊಂದಿರುತ್ತವೆ. ಈ ಲಕ್ಷಣಗಳಿರುವ ಅಧೀನ ಅಥವಾ ಕೆಳಗಿನ ಹಂತಗಳು ಹೆಚ್ಚು ಸಂಖ್ಯೆಯಲ್ಲಿದ್ದರೆ ಅದಕ್ಕೆ ವೀಕೇಂದ್ರೀಕರಣ ವ್ಯವಸ್ಥೆ ಎನ್ನಬಹುದು. ಇಲ್ಲಿ ಅಧಿಕಾರ ಒಬ್ಬ ವ್ಯಕ್ತಿಯಲ್ಲಿ ಕೇಂದ್ರಿಕೃತವಾಗಿರದೆ, ವಿವಿಧ ಸ್ತರಗಳಲ್ಲಿ, ವಿವಿಧ ಅಧಿಕಾರಿಗಳಲ್ಲಿ ಹಂಚಿಕೆಯಾಗಿರುತ್ತದೆ.

ಎಲ್.ಡಿ.ವೈಟ್ ಅವರು 'ಮೇಲಿನ ಹಂತದಿಂದ ಕೆಳಹಂತಕ್ಕೆ ಅಧಿಕಾರ ವರ್ಗಾವಣೆಯಾಗುವುದನ್ನು ವಿಕೇಂದ್ರೀಕರಣ' ಎಂದು ಕರೆದಿದ್ದಾರೆ. 'ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಲೋಕತಾಂತ್ರಿಕ ವೀಕೇಂದ್ರೀಕರಣ' ಎಂದು ಕರೆಯಲಾಗುತ್ತಿತ್ತು ಎಂದು ಜಯಪ್ರಕಾಶ ನಾರಾಯಣ ಹೇಳಿದ್ದಾರೆ.[೧೫]

ವಿಕೇಂದ್ರೀಕರಣವು ಜನತೆಯ ಆಸಕ್ತಿಯನ್ನು ರಾಜಕೀಯದಲ್ಲಿ ಹೆಚ್ಚಿಸುತ್ತದೆ. ಜನತೆಯು ರಾಜಕೀಯದಲ್ಲಿ ಹೆಚ್ಚಾಗಿ ಭಾಗವಹಿಸಲು ಅವಕಾಶ ದೊರಕಿಸಿಕೊಡುತ್ತದೆ. ಆ ಮೂಲಕ ವೀಕೇಂದ್ರಿಕರಣ

ಪ್ರಜಾಸತ್ತಾತ್ಮಕವಾಗಿದೆ. ವೀಕೇಂದ್ರೀಕರಣವು ನಾಯಕತ್ವವನ್ನು ಬೆಳೆಸಿಕೊಳ್ಳಲು ರಾಜಕೀಯ ತರಬೇತಿಯ ಕಾರ್ಯಾಗಾರದಂತಿದೆ. ಸ್ಥಳೀಯರ ಸಮಸ್ಯೆಗಳನ್ನು ಸ್ಥಳೀಯರೇ ಪರಿಹರಿಸಿಕೊಳ್ಳಬಹುದು. ಸ್ಪಷ್ಟವಾಗಿ ಹೇಳುವುದಾದರೆ ಭವಿಷ್ಯತ್ತಿನ ರಾಜಕೀಯದಲ್ಲಿ ಪಾಲ್ಗೊಳ್ಳಲು ವೀಕೇಂದ್ರೀಕರಣ ವ್ಯವಸ್ಥೆಯು ರಾಜಕೀಯ ತರಬೇತಿಯ ಕಾರ್ಯಾಗಾರವಾಗಿದೆ. ಶೀಘ್ರವಾಗಿ ತೀರ್ಮಾನಗಳನ್ನು, ನಿರ್ಧಾರಗಳನ್ನು ತೆಗೆದುಕೊಳ್ಳಲು ಅವಕಾಶಗಳಿವೆ. ಈ ಮೂಲಕ ರಾಜ್ಯಮಟ್ಟದ ರಾಷ್ಟ್ರಮಟ್ಟದ ರಾಜಕೀಯದಲ್ಲಿ ಭಾಗವಹಿಸಲು ಬೇಕಾದ ರಾಜಕೀಯ ಅರಿವಿನ ಅಡಿಪಾಯ ದೊರಕುತ್ತದೆ. ಈ ಹಿನ್ನೆಲೆಯಲ್ಲಿ ವೀಕೇಂದ್ರೀಕರಣದ ತಳಮಟ್ಟದಲ್ಲಿರುವ ಗ್ರಾಮಪಂಚಾಯ್ತಿಯಲ್ಲಿ ಮಹಿಳೆಯರು ಭಾಗವಹಿಸುವುದು ಉಪಯುಕ್ತವಾಗಿದೆ.

ಸಮಗ್ರ ಗ್ರಾಮೀಣಾಭಿವೃದ್ಧಿ ವೀಕೇಂದ್ರೀಕರಣದ ಮುಖ್ಯ ಉದ್ದೇಶ. ಅಧಿಕಾರ ಕೊಡಬೇಕು, ಅಧಿಕಾರವನ್ನು ಜನರಿಗೆ ಕೊಟ್ಟಿದ್ದರೆ ಅವರ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ವಿಕೇಂದ್ರೀಕರಣದ ತಿರುಳೆಂದರೆ ಜನ. ಜನರೇ ಅದರ ಕೇಂದ್ರಬಿಂದು. ಸ್ವಾಭಿಮಾನ, ಸ್ವಾಯತ್ತತೆಗಳು ಅದರ ಕಾಳಜಿಗಳು. ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣ ಇವು ಒಂದೇ ನಾಣ್ಯದ ಎರಡು ಮುಖಗಳು. ಬಹುರೂಪಿ ಸಾಮಾಜಿಕ ವ್ಯವಸ್ಥೆಯೊಳಗಡೆ ಅಧಿಕಾರ ವಿಕೇಂದ್ರೀಕರಣ ಎನ್ನುವುದು ಬಲಾಢ್ಯ ಜಾತಿ ವರ್ಣಗಳಲ್ಲಿ ಕೇಂದ್ರೀಕರಣಗೊಳ್ಳಲೂ ಬಹುದಾಗಿದೆ. ಈ ಅಧಿಕಾರ ತಳಮಟ್ಟದ ಜನರಿಗೆ ಮುಟ್ಟಬೇಕು. ಗ್ರಾಮೀಣ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ಬೇರುಗಳು ಆಳವಾಗಿ ಅನುಷ್ಠಾನಗೊಂಡಿಲ್ಲ. ಇಂತಹ ಹೊತ್ತಿನಲ್ಲಿ ವಿಕೇಂದ್ರೀಕರಣ ಮತ್ತು ಅದಕ್ಕೆ ಸಂಬಂಧಿಸಿದ ಲಿಂಗಸಂಬಂಧಿ ಸಂವೇದನೆಗಳು, ತಳವರ್ಗದ ಸಹಭಾಗಿತ್ವಗಳಂತಹ ಸಂಗತಿಗಳು, ಕ್ರಿಯಾತ್ಮಕ ನೆಲೆಯಲ್ಲಿ ಪರಿಣಾಮಕಾರಿಯಾಗದೇ ಹೋಗಬಹುದು. ಎಲ್ಲಿಯವರೆಗೆ ಕೆಳವರ್ಗಗಳನ್ನು ಊಳಿಗಮಾನ್ಯ ವ್ಯವಸ್ಥೆಯಂತಹ ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲವಾದಂತಹ ಹಿತಾಸಕ್ತಿಗಳು ತಮಗನುಕೂಲಕರ ರೀತಿಯಲ್ಲಿ ಬಳಸಿಕೊಳ್ಳುತ್ತಾ ಹೋಗುತ್ತಾರೋ ಅಲ್ಲಿಯವರೆಗೂ ವಿಕೇಂದ್ರೀಕರಣ ಮತ್ತು ಅದರ ಕ್ರಿಯಾಶೀಲ ನೆಲೆಗಳ ಸಂಯೋಗ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ನನ್ನ ಅಧ್ಯಯನವು ವಿಕೇಂದ್ರೀಕರಣ ಮತ್ತು ಅದರ ಅನುಷ್ಠಾನ ಇದಕ್ಕಿರುವ ತೊಡಕುಗಳಾವುವು ಎಂಬುದನ್ನು ಗುರುತಿಸಿಕೊಳ್ಳಲು ಹೆಚ್ಚು ಆಸಕ್ತಿವಹಿಸುತ್ತವೆ. ಇದಲ್ಲದೆ ವಿಕೇಂದ್ರೀಕರಣ ಪರಿಕಲ್ಪನೆ ಅದರ ಭಿನ್ನ ವಿನ್ಯಾಸಗಳು ಮತ್ತು ಕೆಲವು ಸೈದ್ಧಾಂತಿಕ ಸಮಸ್ಯೆಗಳು ಸೇರಿದಂತೆ ವಿಕೇಂದ್ರೀಕರಣಕ್ಕೂ ಸಶಕ್ತೀಕರಣಕ್ಕೂ ಇರುವ ಅವಿನಾಭಾವ ಸಂಬಂಧಗಳನ್ನು ವಿಶ್ಲೇಷಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ.

ನನ್ನ ಪ್ರಕಾರ ವಿಕೇಂದ್ರೀಕರಣ ಎನ್ನುವುದು ಎರಡು ಸಾಧ್ಯತೆಗಳನ್ನು ಹೊಂದಿರುತ್ತದೆ. ಒಂದು ಶಾಸನಾತ್ಮಕ ವಿಕೇಂದ್ರೀಕರಣ. ಎರಡು ಮಾನವ ಮುಖಿಯಾದ ವಿಕೇಂದ್ರೀಕರಣ ಅದನ್ನು ಗ್ರಾಮ, ತಾಲೂಕು, ಜಿಲ್ಲೆ ಹೀಗೆ ಮೂರು ಮಜಲುಗಳಲ್ಲಿ ಗುರುತಿಸಲಾಗುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಎಲ್ಲಾ ಜಾತಿ ಜನವರ್ಗಗಳಿಗೂ ಪ್ರಾತಿನಿಧ್ಯವನ್ನು ನೀಡಲಾಗಿದೆ. ಜಾತಿವಾರು ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರನ್ನು ಒಳಗೊಂಡಿದೆ. ಈ ಒಳಗೊಳ್ಳುವಿಕೆ ಕೆಳವರ್ಗದಲ್ಲಿ ಒಂದು ರೀತಿಯ ಮಿಸುಕಾಟವನ್ನು ತಂದಿರುವುದನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಿದ್ದೇನೆ. ಈ ಪ್ರಾತಿನಿಧ್ಯ ಏನಿದ್ದರೂ ಪುರುಷ ಪ್ರಧಾನ ವ್ಯವಸ್ಥೆಗೆ, ಪ್ರಬಲ ಜಾತಿ ಅಥವಾ ಆರ್ಥಿಕ ಶಕ್ತಿಗಳಿಗೆ ಊನ ತರಲಾರದ ಸ್ಥಿತಿಯಲ್ಲಿವೆ. ಕಾರಣ ಇವರ ಆಯ್ಕೆಗಳ ನಿರ್ಧಾರಕರೇ ಈ ಶಕ್ತಿ ಸಾಮ್ರಾಟರು. 'ಧಣಿ ನಿಲ್ಲಂದ್ರಾ ನಿಂತೆ ನನಗೇನು ತಿಳಿಯದು. ಎಲ್ಲಾ ಅವರೇ ನೋಡ್‌ಕೊಂತಾರೇ'. ಇಂತಹ ಮಾತುಗಳು ಸಾಮಾನ್ಯವಾಗಿ ಚುನಾಯಿತ ಮಹಿಳೆಯರಲ್ಲಿ ಕೇಳಿ ಬರುತ್ತವೆ. ಬಹಳ ಮುಗ್ಧವಾಗಿ ಈ ಮಾತುಗಳನ್ನು ಹೇಳುವ ಅವರಲ್ಲಿ ತನ್ನ ಚುನಾಯಿತ ಸ್ಥಾನಕ್ಕಿಂತ ಧಣಿಯ ಋಣಕ್ಕೇ ಮೊದಲ ಸ್ಥಾನ.

ಏನೊಂದು ಅರಿಯದ ಇಂತಹ ಮುಗ್ಧರಿಂದ ತುಂಬಿರುವ ಹೆಚ್ಚಿನ ಗ್ರಾಮಪಂಚಾಯಿತಿಯಲ್ಲಿ ಪ್ರತಿಯೊಂದು ಆಡಳಿತಾತ್ಮಕ ಮತ್ತು ಅಭಿವೃದ್ಧಿಪರ ಕಾರ್ಯಗಳು ಬಲಾಢ್ಯರ ಕೈಯಲ್ಲಿಯೇ ಕೇಂದ್ರೀಕೃತವಾಗುತ್ತಿವೆ. ಅಂದರೆ ಗ್ರಾಮಪಂಚಾಯತ್‌ಗಳು ಜಾರಿಗೆ ತರುವ ಅಭಿವೃದ್ಧಿ ಕಾಮಗಾರಿಗಳು ಉಪೇಕ್ಷಿತ ದುರ್ಬಲ ವರ್ಗಕ್ಕೆ ದೊರೆಯದೆ ಹೋಗುತ್ತಿವೆ. ದುರ್ಬಲ ವರ್ಗದವರಿಗೆ, ಮಹಿಳೆಯರಿಗೆ ಇದರ ಅನುಭವವೇ ಸಿಗುತ್ತಿಲ್ಲ. ಯಾವ ವ್ಯವಸ್ಥೆ 'ಎಂಪವರ್‌ಮೆಂಟ್ ಆಫ್ ವಿಕರ್‌ಸೆಕ್ಷೆನ್ಸ್' ಆಗಬೇಕಿತ್ತು, ಅದು ಆಗುತ್ತಿಲ್ಲ. ಅದು ಅಧಿಕಾರ ಕೇಂದ್ರದಲ್ಲಿ ಮಾತ್ರ ಆಗುತ್ತದೆ. ಮಾನ್ಯ ಎಂ.ವೈ. ಘೋರ್ಪಡೆಯವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾಡಿದ ಒಂದು ಭಾಷಣದಲ್ಲಿ[೬] ಹೇಳಿದ ಮಾತು ಇಲ್ಲಿ ನೆನಪಿಗೆ ಬರುತ್ತಿದೆ. ''ಸತ್ಯ ಹೇಳಬೇಕಾದರೆ ಚುನಾಯಿತ ಜನ ಪ್ರತಿನಿಧಿಗಳಿಗೆ ಕರ್ನಾಟಕ ಗ್ರಾಮಪಂಚಾಯಿತಿ ಕಾಯ್ದೆಯಲ್ಲಿ ಸ್ಪಷ್ಟವಾದ ರೀತಿಯಲ್ಲಿ ಅಧಿಕಾರ ನೀಡಿದ್ದೇವೆ'' ಎಂದು ಹೇಳುತ್ತಾರೆ. ಚುನಾಯಿತ ಜನಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕೆನ್ನುವ ಅವರ ಕಾಳಜಿ ಬಹಳ ಮೌಲ್ಯಿಕವಾದದ್ದು. ಆದರೆ ಅದು ''ಕರ್ನಾಟಕ ಗ್ರಾಮಪಂಚಾಯಿತಿ ಕಾಯ್ದೆ'' ಯಲ್ಲಿ ಮಾತ್ರ ದಾಖಲಾಯಿತು. ಆಚರಣೆಯಲ್ಲಿ ಬರಲಿಲ್ಲ ಎಂಬುದು ಚರ್ಚಾರ್ಹವಾದದು. ಹೀಗೆ ವಿಕೇಂದ್ರೀಕರಣವು ಕೂಡ ಹೆಚ್ಚಾಗಿ ಮಸೂದೆ ಮಟ್ಟದಲ್ಲಿ ರಾರಾಜಿಸುತ್ತಿದೆಯೇ ಹೊರತು ಆಡಳಿತಾತ್ಮಕ ನೆಲೆಯಲ್ಲಿ ಅಲ್ಲ ಎಂಬುದು ಮುಖ್ಯ ವಿಚಾರ.

ವಿಕೇಂದ್ರೀಕರಣವು ಆಡಳಿತಾತ್ಮಕ ಅಭಿವೃದ್ಧಿಯೊಂದಿಗೆ ಮಾನವಮುಖಿ ಅಭಿವೃದ್ಧಿಯನ್ನು ಪ್ರಧಾನ ಮಾನದಂಡವನ್ನಾಗಿಸಿಕೊಳ್ಳಬೇಕು. ನಮಗೆ ಭೌತಿಕ ಅಭಿವೃದ್ಧಿಯೊಂದಿಗೆ ಬೌದ್ಧಿಕ ಅಭಿವೃದ್ಧಿಯ ಅವಶ್ಯಕತೆಯೂ ಇದೆ. 'ಜನರ ಸಶಕ್ತೀಕರಣ' 'ಮಹಿಳಾ ಸಬಲೀಕರಣಗಳು' ಈ ವಿಕೇಂದ್ರೀಕರಣ ಮಾದರಿಯನ್ನು ಯಶಸ್ವಿಗೊಳಿಸುವ ಮಾನದಂಡಗಳು. ನಮ್ಮ ಯಾವುದೇ ಯೋಜನೆಯನ್ನು ತೆಗೆದು ಕೊಂಡರೂ ಅದರಲ್ಲಿ ಏಕಮುಖವಾದ ಅನುಷ್ಠಾನದ ಹಠಗಳಿರುತ್ತವೆಯೇ ಹೊರತು ಬಹುಮುಖಿಯಾದ ಜನಮುಖಿ ಕಾಳಜಿಗಳು ಇರುವುದಿಲ್ಲ. ಪ್ರಭುತ್ವದ ಮಾದರಿಗಳಿಗೆ ಅಧಿಕಾರಶಾಹಿ ಪ್ರವೃತ್ತಿಗಳಿಗೆ ಸ್ಥಳೀಯ ಹಂಗಿಗಿಂತ ಎಲ್ಲೋ ಕಲಿತ ತನ್ನ ಪರಕೀಯ ಜ್ಞಾನದ ಹಂಗೇ ಮುಖ್ಯವಾಗಿರುತ್ತದೆ. ಅದಕ್ಕೆ ಸ್ಥಳೀಯ ಸಮಸ್ಯೆಗಳ ಅರಿವು ಇರುವುದಿಲ್ಲ.

ಜನರಲ್ಲಿ ಮೊದಲು 'ಧಾರಣ ಶಕ್ತಿ' ಬೆಳೆಯಬೇಕಿದೆ. ಬದಲಾಗುತ್ತಿರುವ ಸಮಾಜದಲ್ಲಿನ ಬದಲಾದ ಅಭಿವೃದ್ಧಿಯ ಮಾದರಿಗಳ ಫಲಿತಗಳನ್ನು ತನ್ನದನ್ನಾಗಿಸಿಕೊಳ್ಳುವ ಸ್ವಶಕ್ತಿ, ಉತ್ತಮ ಆಹಾರ, ಆರೋಗ್ಯ, ಶಿಕ್ಷಣ ಮತ್ತು ಭದ್ರತೆಗಳು ಸಿಗುವಂತಾಗಬೇಕು. ಶ್ರೇಣೀಕರಣ ವ್ಯವಸ್ಥೆ ಬದಲಾಗಬೇಕು. ಅಂದರೆ ಮಾತ್ರ ವಿಕೇಂದ್ರೀಕರಣದ ಆಶಯಗಳು ಯಶಸ್ವಿಯಾಗುತ್ತವೆ.

೧೯೮೦ರಲ್ಲಿ ಕರ್ನಾಟಕದಂತಹ ಕೆಲವು ಪ್ರಗತಿಪರ ರಾಜ್ಯಗಳು ವಿಕೇಂದ್ರೀಕರಣದಲ್ಲಿ ಆಡಳಿತಾ ಭಿವೃದ್ಧಿಯ ಜೊತೆಗೆ ಜನರಿಗೆ ಅಧಿಕಾರ ಹಾಗೂ ಮಾನವ ಸಂಪನ್ಮೂಲದ ಪ್ರಗತಿಗೆ, ಆದ್ಯತೆ ನೀಡಿದವು. ತತ್ಫಲವಾಗಿ ೧೯೮೭ರಲ್ಲಿ ಕರ್ನಾಟಕ ಸರಕಾರ ತಂದ ವಿಕೇಂದ್ರೀಕರಣ ವ್ಯವಸ್ಥೆಯು ಗ್ರಾಮ ಸಮಾಜದಲ್ಲಿ ಪರಿಣಾಮಾತ್ಮಕ ಬದಲಾವಣೆಯನ್ನು ತಂದಿತು. ಆದರೆ ೧೯೯೭ರ ಪಂಚಾಯತ್‌ರಾಜ್ ಸಂಸ್ಥೆಗಳ ಪುನಾರಚನಾ ವಿಧಿಗಳು ವಿಕೇಂದ್ರೀಕರಣಕ್ಕೆ ಅಂತಹ ಮಹತ್ವವನ್ನು ನೀಡಲಿಲ್ಲ. ಇದರಿಂದಾಗಿ ಮತ್ತೆ ಉನ್ನತ ರಾಜಕೀಯ ಶಕ್ತಿಗಳು ಅಧಿಕಾರ ಶಕ್ತಿಗಳು ಬಲಿತು ಗ್ರಾಮ ರಾಜಕೀಯವನ್ನು ಅಧೀನದಲ್ಲಿಟ್ಟುಕೊಂಡವು.

ಇಂತಹ ವಿಕೇಂದ್ರೀಕರಣದ ಸಾಧಕ ಬಾಧಕಗಳನ್ನು ಗ್ರಾಮೀಣ ನೆಲೆಯಲ್ಲಿ ನಿಂತು ಅದೂ ಗ್ರಾಮ ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯ ಕುರಿತು ತಾತ್ವಿಕ ಜಿಜ್ಞಾಸೆ ನಡೆಸುವುದು ನನ್ನ ಮುಂದಿನ ಅಧ್ಯಯನದ ಮುಖ್ಯ ಗುರಿಯಾಗಿದೆ.

ವಿಕೇಂದ್ರೀಕರಣ ವ್ಯವಸ್ಥೆ ಮತ್ತು ಮಹಿಳಾ ಪ್ರಾತಿನಿಧ್ಯ

ಗ್ರಾಮೀಣ ಪರಿಸರಕ್ಕೆ ಬಂದರೆ ಮಹಿಳೆಯ ಸ್ಥಿತಿ ಇನ್ನು ಚಿಂತಾಜನಕವಾಗಿದೆ. ಭಾರತದ ಹೆಚ್ಚಿನ ಮಹಿಳೆಯರು ಇರುವುದು ಗ್ರಾಮೀಣ ಪರಿಸರದಲ್ಲಿ. ಹೆಚ್ಚಿನವರೂ ಕೃಷಿ, ಕೂಲಿ ಅಸಂಘಟಿತವಲಯದ

ದುಡಿಮೆಯ ಮೇಲೆ ಅವಲಂಬಿತರಾಗಿರುತ್ತಾರೆ. ಗೃಹಕೃತ್ಯಗಳಿಂದ ಬಸವಳಿದ ಅವರು ಪ್ರಾಥಮಿಕ ಸೌಲಭ್ಯಗಳಿಂದಲೂ ದೂರವಾದವರು. ಕೃಷಿ ಕ್ಷೇತ್ರದಲ್ಲಿ ಮೈ ಮುರಿದು ಶೇಕಡ ಐವತ್ತರಷ್ಟು ಮಂದಿ ಹೆಂಗಸರೇ ದುಡಿಯುತ್ತಾರೆ. ಇದರಿಂದಾಗಿ ಸಂವಿಧಾನದಲ್ಲಿ ನಿಹಿತವಾಗಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಸರ್ವಸಮಾನತೆ ಎನ್ನುವ ಪದಗಳು ಇವರಿಗೆ ಹೋಲಿಸಿದಾಗ ಎಷ್ಟೊಂದು ಕಳಪೆಯೆನಿಸುತ್ತವೆ. ಇಂದು ಬರೀ ಘೋಷಣೆ ಹಾಗೂ ವೈಭವಯುತ ಮಟ್ಟದಲ್ಲಿ ಮಹಿಳಾ ಸಶಕ್ತೀಕರಣ ವರ್ಷ ಮುಗಿದು ಹೋಯಿತೆಂದು ಅನಿಸುತ್ತದೆ. ಇದುವರೆಗೂ ರಾಜ್ಯಭಾರ ಮಾಡುತ್ತ ಬಂದಿರುವ ಸರ್ಕಾರ ಮತ್ತು ಅದರ ಅಭಿವೃದ್ಧಿ ಯೋಜನೆಗಳು ಮಹಿಳೆಯನ್ನು ಅನುಕಂಪದ ಹಿನ್ನೆಲೆಯಲ್ಲಿ ಫಲಾನುಭವಿಗಳಂತೆ ಗುರುತಿಸಿಕೊಂಡಿವೆ. ಕೇವಲ ಅಸಮಾನತೆ ನಿವಾರಣೆ ಅಥವಾ ಅನುಕಂಪದ ನೆಲೆಗಳಲ್ಲಿ ನಿಲ್ಲುವುದಕ್ಕಿಂತ ಮುಖ್ಯವಾಗಿ ಮಹಿಳೆಗೆ ಸಾಮಾಜಿಕ ನ್ಯಾಯಬದ್ಧತೆಯನ್ನು ಕಲ್ಪಿಸಿಕೊಡಬೇಕಾದ ತುರ್ತು ಇದೆ. ಅವಳನ್ನು ಸಮಾಜ ಮತ್ತು ಸಂಸ್ಕೃತಿ ನಿರ್ಮಾಣದಲ್ಲಿ ಸಶಕ್ತವಾಗಿ ಪಾಲ್ಗೊಳ್ಳಬೇಕಾದ ಸ್ವತಂತ್ರ ವ್ಯಕ್ತಿಯನ್ನಾಗಿಸಬೇಕಾಗಿದೆ. ಗಣಿತದ ಭಾಷೆಯಲ್ಲಿ ಶೇಕಡವಾರು ಮೀಸಲಾತಿ ನೀಡಿದರೆ ಸಾಲದು.

ನಮ್ಮ ದೇಶದ ಮಹಿಳೆಯರು ಒಂದೇ ವರ್ಗಕ್ಕೆ ಸೇರಿದವರಲ್ಲ. ಅವರವರ ವರ್ಗ, ಸಮೂಹ, ಜಾತಿಯ ಹಿನ್ನೆಲೆಯಲ್ಲಿ ಅಭಿವೃದ್ಧಿ ಪಥದಲ್ಲಿ, ಅವರು ಎದುರಿಸುವ ಸಮಸ್ಯೆಗಳು ರೂಪದಲ್ಲೂ ಪ್ರಮಾಣದಲ್ಲೂ ಭಿನ್ನವಾಗಿರುವಂಥವು. ಇಡೀ ಪುರುಷವರ್ಗದ ದೃಷ್ಟಿಯಲ್ಲಿ ಮಹಿಳೆಯರ ಶೋಷಣೆ ಒಂದು ರೀತಿಯದಾದರೆ ಅವರವರ ಜಾತಿಶ್ರೇಣಿ, ಪಾತಳಿಯಲ್ಲಿ ಭಿನ್ನ ಭಿನ್ನವಾಗಿ ಇನ್ನೊಂದು ರೀತಿಯದಾಗಿರುತ್ತದೆ. ಹೀಗಾಗಿ ಯಾವುದೇ ಒಂದು ನಿರ್ದಿಷ್ಟ ಮಾನದಂಡದಿಂದ ರೂಪಿಸುವ ಸುಧಾರಣಾ ಕ್ರಮಗಳು, ಕಾನೂನುಗಳು ಒಟ್ಟು ಮಹಿಳಾ ವರ್ಗದ ಸಮಸ್ಯೆಗಳಿಗೆ ಪರಿಹಾರವಾಗಲಾರವು. ಹೀಗೆ ಸಮಾಜದ ಸಂರಚನೆ, ಸಂಸ್ಕೃತಿಯ ಧ್ಯೇಯಾದರ್ಶನಗಳನ್ನು ಗಮನದಲ್ಲಿರಿಸಿಕೊಳ್ಳದೇ ಸಮಾಜದ ಮಹಿಳಾಶಕ್ತಿಯನ್ನು ಆರ್ಥಿಕ ತಳಹದಿ, ಕಾನೂನು, ಕಾಯಿದೆ, ಶಿಕ್ಷಣ ಇತ್ಯಾದಿಗಳ ಮೂಲಕ ಸುಧಾರಿಸಬೇಕೆಂಬ ಪ್ರಯತ್ನಗಳು ಮೂಲ ಸಾಮಾಜಿಕ ಸ್ವರೂಪವನ್ನು ತಟ್ಟದೇ ವಿಫಲವಾಗಿದ್ದು, ನಿರೀಕ್ಷಿತ ಫಲ ನೀಡದೆ ಹೋದವು.

ಸರ್ಕಾರದ ದೃಷ್ಟಿಯಲ್ಲಿ ಮಹಿಳೆ ಬರೀ ಒಂದು ಓಟ್ ಬ್ಯಾಂಕ್ ಮಾತ್ರ. ಆ ಹಿನ್ನೆಲೆಯಲ್ಲಿಯೇ ಅವಳ ಕುರಿತ ಅಭಿವೃದ್ಧಿಪರ ಚಿಂತನೆಗಳು ಹುರಿಗೊಳ್ಳುತ್ತಿರುತ್ತವೆ. ಮಹಿಳಾ ಆಯೋಗ, ಮಹಿಳಾ ರಾಜಕೀಯ ಪ್ರಾತಿನಿಧ್ಯ, ನಿಗಮ ಮಂಡಳಿಗಳ ನೇಮಕಾತಿ ಇವೆಲ್ಲ ರಾಜಕೀಯ ಅಧಿಕಾರದ ಹಂಚುವಿಕೆಯ ವಿವಿಧ ವಶೀಲಿ ಪ್ರಭಾವಗಳ ಸ್ವಾರ್ಥಪರ ಚಟುವಟಿಕೆಗಳ ವ್ಯವಹಾರಗಳಾಗಿವೆಯೇ ಹೊರತು, ಮಹಿಳೆಯರ ಅಧಿಕೃತ ವ್ಯಕ್ತಿತ್ವದ ಬಗ್ಗೆ ನಿಜವಾದ ಕಾಳಜಿವಹಿಸುತ್ತಿಲ್ಲ. ಕ್ಷಣದ

ಲಾಭದಾಸೆ ಈ ಎಲ್ಲ ರಾಜಕೀಯ ನೆಲೆಗಳನ್ನು ಆವರಿಸಿಕೊಂಡಿದೆ. ಬಳ್ಳಾರಿಯ ಎರ್ರಮ್ಮನ ಬೆತ್ತಲೆ ಪ್ರಸಂಗಗಳು, ಹೈದ್ರಾಬಾದ್ ಕರ್ನಾಟಕದ ಗಡಿಭಾಗಗಳಲ್ಲಿ ಹೆಣ್ಣು ಮಕ್ಕಳನ್ನು ಮಾರುವುದು, ಶಾಸನಬದ್ಧವಾಗಿ ಆಯ್ಕೆಯಾದ ಮಹಿಳೆಯರ ಮಾರಣಹೋಮದಂತಹ ಘಟನೆಗಳು ದಿನನಿತ್ಯ ಸಾಮಾನ್ಯವಾಗಿ ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಅಂಗನೆಯ ಕೈಗೆ ಅಧಿಕಾರವೆನ್ನುವುದು ಬರೀ ಘೋಷಣೆ ಮಟ್ಟದಲ್ಲಿ ಮಾತ್ರ ಉಳಿದಿದೆ ಎಂದೆನಿಸುತ್ತದೆ.

ಅಧ್ಯಯನದ ಉದ್ದೇಶ

ಗ್ರಾಮೀಣ ಪ್ರದೇಶದಲ್ಲಿನ ಊಳಿಗಮಾನ್ಯ ವ್ಯವಸ್ಥೆಗಳು, ಅಧಿಕಾರಯುತ ರಾಜಕೀಯ ಹಿತಾಸಕ್ತಿಗಳು, ಅಧಿಕಾರಿಗಳು ವಿಕೇಂದ್ರೀಕರಣದ ಹೆಸರಿನಲ್ಲಿ ಗ್ರಾಮಪಂಚಾಯ್ತಿಯ ಮಹಿಳಾ ಸದಸ್ಯೆಯರನ್ನು ನಿಕೃಷ್ಟವಾಗಿ ಕಾಣುವಂತಾಗಿದೆ. ಹೆಂಡತಿಯ ಹೆಸರಿನಲ್ಲಿ ಗಂಡ ಅಧಿಕಾರ ನಡೆಸುವ ಉದಾಹರಣೆಗಳನ್ನು ದಿನನಿತ್ಯ ಕಾಣುತ್ತೇವೆ. ಒಂದು ಗ್ರಾಮ ಪಂಚಾಯ್ತಿಯ ಅಧ್ಯಕ್ಷೆಯಾಗಿದ್ದ ಹೆಂಗಸು ಬರೀ ಹೆಬ್ಬೆಟ್ಟಿಗೆ ಸೀಮಿತವಾಗಿ ದಿನನಿತ್ಯ ಹೊಲಮನೆಯಲ್ಲಿ ಕೃಷಿಕಾರ್ಮಿಕಳಾಗಿ ದಿನಸಾಗಿಸುವುದನ್ನು ಕಾಣುತ್ತೇವೆ. ಇಂಥ ಹಲವು ಸಂಗತಿಗಳನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸತ್ವ ಕಂಡಿದ್ದೇನೆ. ಸಂವಿಧಾನದ ೭೩ನೇ ತಿದ್ದುಪಡಿಯು ಸ್ಥಳೀಯ ಆಡಳಿತದ ೩ ಹಂತಗಳಲ್ಲಿ ಶೇ ೩೩.೩೩ರಷ್ಟು ಮೀಸಲಾತಿಯು ಗ್ರಾಮೀಣ ಮಹಿಳೆಯರನ್ನು ಅಡಿಗೆ ಮನೆಯಿಂದ ಪಂಚಾಯತ್‌ವರೆಗೆ ಹೋಗುವ ಹಾಗೆ ಮಾಡಿದೆ. ಇದರಿಂದ ತಳಮಟ್ಟದ ರಾಜಕೀಯದಲ್ಲಿ ಮಹಿಳೆಯು ಭಾಗವಹಿಸುವ ಅವಕಾಶವನ್ನು ಪಡೆಯುವಂತಾಗಿದ್ದಾಳೆ. ಮಹಿಳೆಯು ರಾಜಕೀಯದ ಮುಖ್ಯವಾಹನಿಯಲ್ಲಿ ಪಾಲ್ಗೊಳ್ಳಬೇಕು. ರಾಜಕೀಯದ ಅರಿವು ಹೊಂದಬೇಕು. ನೀತಿ ರೂಪಿಸುವಲ್ಲಿ, ನಿರ್ಣಯ ತೆಗೆದುಕೊಳ್ಳುವಲ್ಲಿ ಪಾಲುದಾರಳಾಗಬೇಕು ಎಂಬ ಹಿನ್ನೆಲೆಯಲ್ಲಿ ಗ್ರಾಮೀಣ ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯ ಅಧ್ಯಯನ ಮಾಡಲು ನಾನು ಇಚ್ಛಿಸಿದ್ದೇನೆ. ಸಾಹಿತ್ಯಕವಾಗಿ, ಸಾಮಾಜಿಕವಾಗಿ ಮಹಿಳೆಯನ್ನು ಗುರುತಿಸುವ ಅಧ್ಯಯನಗಳು ನಡೆಯುತ್ತಿವೆ. ಆದರೆ ಪ್ರತ್ಯೇಕವಾಗಿ ರಾಜಕೀಯ ಶಿಸ್ತಿನಲ್ಲಿ ಮಹಿಳೆಯ ಪಾತ್ರ, ಅವಳ ಭಾಗವಹಿಸುವಿಕೆ ಕುರಿತಂತೆ ನಡೆದ ಅಧ್ಯಯನಗಳು ಕಡಿಮೆ. ಸ್ಥಳೀಯ ಸಂಸ್ಥೆಗಳ ಹಿನ್ನೆಲೆಯಲ್ಲಿ ನಾನು ವಿವಿಧ ಹಂತಗಳಲ್ಲಿ ಮಹಿಳೆಯ ರಾಜಕೀಯ ಭಾಗವಹಿಸುವಿಕೆಯನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲು ಪ್ರಯತ್ನಿಸಿದ್ದೇನೆ.

ಸಮಗ್ರ ಗ್ರಾಮೀಣಾಭಿವೃದ್ಧಿ, ದುರ್ಬಲ ವರ್ಗದವರ ಹಾಗೂ ಮಹಿಳೆಯರ ಸಶಕ್ತೀಕರಣ ಇವು ವಿಕೇಂದ್ರೀಕರಣದ ಬಹುಮುಖ್ಯ ಉದ್ದೇಶ. ಈ ಉದ್ದೇಶ ಎಷ್ಟರಮಟ್ಟಿಗೆ ಇಂದು ಪ್ರಚಲಿತವಿರುವ ಗ್ರಾಮಪಂಚಾಯ್ತಿ ವ್ಯವಸ್ಥೆಯಲ್ಲಿ ಆಚರಣೆಗೆ ಬಂದಿದೆ? ಮಹಿಳೆಯರು ಎಷ್ಟರಮಟ್ಟಿಗೆ ಸ್ವಯಂ

ಪ್ರೇರಣೆಯಿಂದ ಈ ವ್ಯವಸ್ಥೆಯಲ್ಲಿ ಪಾಲುದಾರರಾಗಿದ್ದಾರೆ? ಚುನಾಯಿತ ಮಹಿಳೆಗೆ ತನ್ನ ಹಕ್ಕುಬಾಧ್ಯತೆಗಳ ಬಗ್ಗೆ ಇರುವ ತಿಳುವಳಿಕೆ ಯಾವ ರೀತಿಯದು? ರಾಜಕೀಯದಲ್ಲಿ ಮಹಿಳೆ ಭಾಗವಹಿಸುವಿಕೆ, ಭಾಗವಹಿಸುವ ಪ್ರಕ್ರಿಯೆಗಳು; ರಾಜಕೀಯ ಭಾಗವಹಿಸುವಿಕೆಯ ಮತ್ತು ನಿರ್ಣಯ ಪ್ರಕ್ರಿಯೆಯಲ್ಲಿ ಮಹಿಳೆಯ ಪಾತ್ರವೇನು? ಭಾಗವಹಿಸುವಿಕೆಯ ಹಿಂದಿನ ಮನೋಧರ್ಮಗಳೇನು? ಹೀಗೆ ಭಾಗವಹಿಸುವವರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕವಾದ ಹಿನ್ನೆಲೆಗಳೇನು? ಎನ್ನುವ ಹಲವು ಸಂಗತಿಗಳು ನನ್ನ ಅಧ್ಯಯನದ ಬಹುಮುಖ್ಯ ಉದ್ದೇಶಗಳಾಗಿವೆ.

ಮಹಿಳೆ ಭಾಗವಹಿಸುವಿಕೆ ಹೀಗಂದರೇನು?

ಇಲ್ಲಿ ಬಹುಮುಖ್ಯವಾಗಿ ಏಳುವ ಪ್ರಶ್ನೆ ಎಂದರೆ ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆ ಎಂದರೇನು? ಎಂಬುದು. ಹಾಗೆ ಈ ಭಾಗವಹಿಸುವ ಪ್ರಕ್ರಿಯೆಗಳು ಎಷ್ಟು ರೀತಿಯವು? ಹೀಗೆ ಭಾಗವಹಿಸುವವರ ಸಾಮಾಜಿಕ, ರಾಜಕೀಯ, ಆರ್ಥಿಕವಾದ ಹಿನ್ನೆಲೆಗಳು ಎಂಥವು? ಭಾಗವಹಿಸುವಿಕೆಯ ಹಿಂದಿನ ಮನೋಧರ್ಮವೇನು? ಇತ್ಯಾದಿ ಪ್ರಶ್ನೆಗಳಿಗೆ ಮುಖಾಮುಖಿಯಾದಾಗ ಹಲವಾರು ಸೂಕ್ಷ್ಮ ಸಂಗತಿಗಳನ್ನು ನಾವು ಅರಿಯಬಹುದಾಗಿದೆ.

ಮಹಿಳೆಯು ರಾಜಕೀಯವಾದಂತ, ಸಾಮಾಜಿಕವಾದಂತ ಮುಖ್ಯವಾಹಿನಿಯಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂಬುದರಲ್ಲಿಎರಡು ಮಾತಿಲ್ಲ. ಬದಲಾದ ಬದುಕಿನ ಕ್ರಮಗಳಿಗೆ ಇದು ಅಗತ್ಯಕೂಡ ಆಗಿದೆ. ಭಾಗವಹಿಸುವ ಸ್ವರೂಪ ಎಂಥದ್ದಾಗಿರಬೇಕು? ಇದುವರೆಗಿನ ಹಲವಾರು ಪ್ರಗತಿಯ ಮಾದರಿಗಳನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ ಅವುಗಳ ಹಿಂದಿನ ಸಾಂಸ್ಕೃತಿಕ ರಾಜಕಾರಣ ಅರಿವಿಗೆ ಬರುತ್ತದೆ. ಅಂದರೆ ಮಹಿಳೆಯನ್ನು ಒಂದು ನಿರ್ಜೀವ ಸರಕಿನಂತೆ ಬಳಸುವ ಕ್ರಮಗಳು ಪ್ರಗತಿಯ ಮಾನದಂಡಗಳಾಗಿರುವುದು. ಗಂಡ ಸತ್ತ ಮೇಲೆ ಹೆಂಡತಿಗೆ ಇಷ್ಟವಿರಲಿ ಇಲ್ಲದಿರಲಿ ಅವಳನ್ನು ಓಟ್‌ಬ್ಯಾಂಕ್ ರಾಜಕೀಯಕ್ಕೆ ತಂದು ಗಂಡ ಪ್ರತಿನಿಧಿಸಿದ ಕ್ಷೇತ್ರದಿಂದ ಅನುಕಂಪದ ಅಲೆಯಲ್ಲಿ ಗೆಲ್ಲಿಸುವುದು. ಹೀಗೆ ಗೆದ್ದ ವ್ಯಕ್ತಿಗೆ ಯಾವುದೋ ಒಂದು ಸ್ಥಾನಮಾನ ನೀಡಿ (ನೀಡದೆಯೂ) ಕೈ ತೊಳೆದುಕೊಳ್ಳುವುದು. ಇದೂ ಅಲ್ಲದೆ ಮೀಸಲಾತಿಯ ಅನಿವಾರ್ಯತೆ, ಪುರುಷ ಪ್ರಧಾನ ಸ್ವಾರ್ಥತೆ ಕೂಡ ಹೆಣ್ಣನ್ನು ಹೀಗೆ ಹರಕೆಯ ಕುರಿಯನ್ನಾಗಿ ಬಳಸಿಕೊಳ್ಳುವುದು ಇದೆ. ಇಲ್ಲೆಲ್ಲ ಮಹಿಳೆಯ ರಾಜಕೀಯ ಹಾಜರಾತಿ ಮುಖ್ಯವಾಗಿದೆಯೆ ಹೊರತು ಸ್ವಭಾವಾತ್ಮಕ ಮತ್ತು ಗುಣಾತ್ಮಕ ಭಾಗವಹಿಸುವಿಕೆ ಮುಖ್ಯವಾಗಿಲ್ಲ.

ಭಾಗವಹಿಸುವಿಕೆ ಅಂದರೆ ನನ್ನ ಮಟ್ಟಿಗೆ ಮಹಿಳೆಯೊಬ್ಬಳು ತನಗೆ ಅಥವಾ ತನ್ನಂತಿರುವವರಿಗೆ ಬೇಕಾಗಿರುವುದೇನು? ಆಗಬೇಕಾಗಿರುವಿಕೆಯ ಹಿಂದಿನ ತುಡಿತಗಳಾವವು? ತನ್ನ ಸ್ಥಿತಿಗತಿಗಳ ಸುಧಾರಣೆಗೆ ತಾನು ಕಂಡುಕೊಳ್ಳಬೇಕಾದ ದಾರಿಗಳಾವವು? ತನ್ನ ಪ್ರಗತಿಯ ಮಾನದಂಡಗಳಾವುವು? ಎಂಬ

ಸಂಗತಿಗಳನ್ನು ಮೊದಲು ತಿಳಿದುಕೊಳ್ಳಬೇಕಾಗುತ್ತದೆ. ನಂತರ ಅವನ್ನು ಸಾಧಿಸಿಕೊಳ್ಳಲು ರಾಜಕೀಯ ಪ್ರವೇಶ ಅಥವಾ ಸಾಮಾಜಿಕ ಚಳುವಳಿ ಇಲ್ಲವೆ ಸಂಘಸಂಸ್ಥೆಗಳನ್ನು ಕಟ್ಟಿಕೊಳ್ಳುವುದು ಆ ಮೂಲಕ ಜಾಗೃತಗೊಳ್ಳುವುದು. ತನ್ನ ಬೇಕು ಬೇಡಿಕೆಗಳ ಯಾದಿಯನ್ನು ತಾನೇ ಮಾಡಿಕೊಂಡು ಸ್ವತಃ ಕಾರ್ಯಪ್ರವೃತ್ತಳಾಗವುದು ಉತ್ತಮ ಮಾದರಿಯಾಗಿದೆ. ಆ ಕೆಲಸಕ್ಕೆ ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿಕೊಂಡು ತನಗೂ ಒಂದು ಸ್ವತಂತ್ರ ವ್ಯಕ್ತಿತ್ವವಿದೆ. ವಿಚಾರಶೀಲತೆಯಿದೆ ಎಂಬುದನ್ನು ಸಾಬೀತು ಮಾಡುವುದು, ಮಹಿಳೆಯರಲ್ಲಿ ವಿವೇಕ ಮತ್ತು ವಿಚಾರಪರತೆಯನ್ನು ಹುಟ್ಟು ಹಾಕುವುದೂ ಕೂಡ ಅವಳ ಭಾಗವಹಿಸುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ. ಮಹಿಳೆಯ ಈ ಮನೋಧರ್ಮ ಕುಸಿದು ಹೋದ ಸಾಮಾಜಿಕ ಸಮಾನತೆಯೆಂಬ ಬಂಡಿಯ ಮತ್ತೊಂದು ಚಕ್ರವನ್ನು ಎತ್ತಿ ನಿಲ್ಲಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಇದುವರೆಗೂ ನಡೆದ ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನಗಳು ಬಳ್ಳಾರಿ ಜಿಲ್ಲೆಯನ್ನು ಹಿಂದುಳಿದ ಪ್ರದೇಶವೆಂದೇ ಗುರುತಿಸಿಕೊಂಡು ಬಂದಿವೆ. ಕೃಷಿಕಾರ್ಮಿಕರು, ಕೂಲಿಕಾರರೇ ಹೆಚ್ಚಿನ ಪ್ರಮಾಣದಲ್ಲಿ ಇರುವ, ಆರ್ಥಿಕ ಮೂಲಗಳು ಕಡಿಮೆಯಿರುವ, ಅಭಿವೃದ್ಧಿಕಾರ್ಯಗಳು ನಿಧಾನಗತಿಯಲ್ಲಿರುವ ಈ ಪ್ರದೇಶವು ಅಧ್ಯಯನಕ್ಕೆ ಹೇಳಿ ಮಾಡಿಸಿದಂಥದ್ದು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಉದ್ಯೋಗಿಯಾಗಿರುವ ನಾನು ಇಲ್ಲಿನ ಮಹಿಳೆಯರೊಂದಿಗೆ ಬೆರೆಯುವ ಅವರ ಜೀವನಕ್ರಮ ಕುರಿತು ತಿಳಿದುಕೊಳ್ಳುವ ಹಲವಾರು ಅವಕಾಶಗಳನ್ನು ಸದುಪಯೋಗ ಮಾಡಿಕೊಂಡಿದ್ದೇನೆ. ವಿಶೇಷವಾಗಿ ಹೊಸಪೇಟೆ ಸುತ್ತಮುತ್ತಲಿನ ಪರಿಸರದ ಸಾಮಾಜಿಕ, ರಾಜಕೀಯ, ಆರ್ಥಿಕ ನೆಲೆಗಳು ಕುತೂಹಲ ಕೆರಳಿಸುವಂಥವು. ಕಂಪ್ಯೂಟರ್ ಕ್ರಾಂತಿಯಲ್ಲಿ ಸೀಮಾತೀತವಾಗುತ್ತಿರುವ ಕರ್ನಾಟಕ, ಮೂಲಭೂತ ಸೌಕರ್ಯಗಳಲ್ಲಿ ಜನರ ಸಾಮಾಜಿಕ ಜೀವನಕ್ಕೆ ಆಸರೆಯಾಗಿರುವಲ್ಲಿ ಎಷ್ಟೊಂದು ಹಿಂದುಳಿದಿದೆ ಎಂಬುದನ್ನು ಇಲ್ಲಿ ನೋಡಿಯೇ ತಿಳಿಯಬೇಕು. ರಾಜಕೀಯ ವಿಕೇಂದ್ರೀಕರಣದ ಹೆಸರಿನಲ್ಲಿ ಮಹಿಳೆಯರ ಮೂಲಕ ತನ್ನ ಕಾರ್ಯ ಸಾಧಿಸಿಕೊಳ್ಳುತ್ತಿರುವ ನೆಲೆಗಳು ವಿಚಿತ್ರವಾದಂಥವು. ಇಂತಹ ವಿಶಿಷ್ಟತೆ ಮತ್ತು ವಿಚಿತ್ರಗಳಿಂದ ಕೂಡಿದ ಈ ಪರಿಸರದ ಮಹಿಳಾ ರಾಜಕೀಯ ಜೀವನ ಕುರಿತ ಒಳನೋಟಗಳನ್ನು ಹುಡುಕುವುದು ಮತ್ತು ಕಂಡುಕೊಳ್ಳುವುದು ನನ್ನ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಸಂಡೂರು ತಾಲ್ಲೂಕಿನ ಗ್ರಾಮ ಪಂಚಾಯ್ತಿಗಳಿಗೆ ಸೀಮಿತಗೊಂಡಿದೆ. ಭೌಗೋಳಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ,

ವಿವಿಧ ವೈವಿಧ್ಯತೆ ಹಾಗೂ ವೈರುಧ್ಯತೆಗಳನ್ನು ಒಳಗೊಂಡಿರುವ ಈ ಎರಡು ಪ್ರದೇಶಗಳು ಅಧ್ಯಯನಕಾರರಿಗೆ ಸವಾಲಾಗಿವೆ. ಈ ಅರಿವಿನಿಂದಲೇ ನಾನು ಸಂಶೋಧನೆ ಕೈಗೊಂಡಿದ್ದೇನೆ. ಅಧ್ಯಯನದ ಕೇಂದ್ರಬಿಂದು ಎಂದರೆ ಹೊಸಪೇಟೆ ಮತ್ತು ಸಂಡೂರು ತಾಲ್ಲೂಕುಗಳ ಒಟ್ಟು ಗ್ರಾಮ ಪಂಚಾಯಿತಿಯ ಚುನಾಯಿತಮಹಿಳಾ ಸದಸ್ಯರು. ಇದು ಅಧ್ಯಯನದ ಮಿತಿಯೂ ಹೌದು.

ಇದುವರೆಗೂ ಈ ವಿಷಯದಲ್ಲಿ ಯಾವುದೇ ರೀತಿಯ ಅಧ್ಯಯನಗಳು ನಡೆದಿಲ್ಲ. ಹೊಸಪೇಟೆ ತಾಲ್ಲೂಕಿನಲ್ಲಿ ೨೩ ಗ್ರಾಮಪಂಚಾಯ್ತಿಗಳು ಹಾಗೂ ಸಂಡೂರು ತಾಲೂಕಿನಲ್ಲಿ ೨೧ ಗ್ರಾಮ ಪಂಚಾಯ್ತಿಗಳು ಇವೆ. ಹೊಸಪೇಟೆ ತಾಲೂಕಿನ ೨೩ ಗ್ರಾಮಪಂಚಾಯ್ತಿಗಳಿಂದ ಒಟ್ಟು ೩೪೫ ಸದಸ್ಯರು ಆಯ್ಕೆಯಾಗಿದ್ದಾರೆ. ಇದರಲ್ಲಿ ೧೯೧ ಪುರುಷರೂ, ೧೩೮ ಮಹಿಳಾ ಸದಸ್ಯೆಯರೂ ಇರುವರು. ಒಟ್ಟು ಚುನಾಯಿತ ಮಹಿಳೆಯರಲ್ಲಿ ೧೧ ಅಧ್ಯಕ್ಷೆಯರು, ೧೦ ಉಪಾಧ್ಯಕ್ಷೆಯರು ಇದ್ದಾರೆ. ಸಂಡೂರು ತಾಲೂಕಿನ ೨೧ ಗ್ರಾಮ ಪಂಚಾಯ್ತಿಗಳಿಂದ ಒಟ್ಟು ೩೪೮ ಸದಸ್ಯರು ಆಯ್ಕೆಯಾಗಿದ್ದಾರೆ. ಇದರಲ್ಲಿ ೧೯೮ ಪುರುಷರೂ, ೧೫೧ ಮಹಿಳೆಯರೂ ಇರುವರು. ಒಟ್ಟು ಚುನಾಯಿತ ಮಹಿಳೆಯರಲ್ಲಿ ೧೦ ಅಧ್ಯಕ್ಷೆಯರೂ, ೧೧ ಉಪಾಧ್ಯಕ್ಷೆಯರೂ ಇದ್ದಾರೆ. ಮುಂದಿನ ಅಧ್ಯಯನದ ಅನುಕೂಲತೆಯಿಂದ ಒಟ್ಟು ಪಂಚಾಯ್ತಿಗಳ ವಿಸ್ತಾರವಾದ ವಿವರವನ್ನು ಇಲ್ಲಿ ಕೊಡುತ್ತಿದ್ದೇನೆ.

ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳು

ಕ್ರ. ಸಂ.	ಗ್ರಾಮಪಂಚಾಯ್ತಿಯ ಹೆಸರು	ಒಟ್ಟು ಸದಸ್ಯರ ಸಂಖ್ಯೆ	ಮಹಿಳೆಯರು	ಪುರುಷರು
೧.	ಮೆಟ್ರಿಕಿ	೧೮	೭	೧೧
೨.	ವಿಠಲಾಪುರ	೧೩	೬	೭
೩.	ಅಂತಾಪುರ	೧೪	೬	೮
೪.	ವಡ್ಡು	೧೯	೮	೧೧
೫.	ದರೋಜಿ	೨೦	೮	೧೨
೬.	ಕುರೇಕುಪ್ಪ	೨೨	೯	೧೩
೭.	ತೋರಣಗಲ್ಲು	೧೩	೬	೭
೮.	ಕಾಳಿಂಗೇರಿ	೧೪	೬	೮
೯.	ಜಿ.ಎಲ್.ಹಳ್ಳಿ	೧೪	೬	೮
೧೦.	ಬೊಮ್ಮಗಟ್ಟ	೨೪	೧೦	೧೪
೧೧.	ಸೋವೆನಹಳ್ಳಿ	೧೫	೬	೯
೧೨.	ಚೋರನೂರು	೧೬	೭	೯
೧೩.	ನಿಡಗುರ್ತಿ	೧೬	೮	೯
೧೪.	ಬಂಡ್ರಿ	೧೮	೭	೧೧
೧೫	ತಾರಾನಗರ	೨೦	೮	೧೨
೧೬.	ಕೃಷ್ಣಾನಗರ	೧೩	೭	೬
೧೭.	ನರಸಿಂಗಪುರ	೨೩	೧೧	೧೨
೧೮.	ಭುಜಂಗನಗರ	೧೩	೬	೭
೧೯.	ದೇವಗಿರಿ	೧೫	೬	೯
೨೦.	ಯಶವಂತಪುರ	೧೧	೬	೫
೨೧.	ಸುಶೀಲಾನಗರ	೧೭	೭	೧೦
	ಒಟ್ಟು	೩೪೮	೧೫೧	೧೯೮

ಹೊಸಪೇಟೆ ತಾಲೂಕಿನ ಗ್ರಾಮ ಪಂಚಾಯ್ತಿಗಳು

ಕ್ರ. ಸಂ.	ಗ್ರಾಮಪಂಚಾಯ್ತಿಯ ಹೆಸರು	ಒಟ್ಟು ಸದಸ್ಯರ ಸಂಖ್ಯೆ	ಮಹಿಳೆಯರು	ಪುರುಷರು
೧.	ಮಲಪನಗುಡಿ	೧೮	೭	೧೧
೨.	ರಾಮಸಾಗರ	೧೩	೬	೭
೩.	ದೇವಲಾಪುರ	೧೧	೬	೫
೪.	ದೇವಸಮುದ್ರ	೧೫	೭	೮
೫.	ಮೆಟ್ರಿ	೧೪	೬	೮
೬.	ಸೀತಾರಾಮ ತಾಂಡ	೫	೧	೪
೭.	ಹಂಪಿ	೧೦	೪	೬
೮.	ಬುಕ್ಕಸಾಗರ	೧೪	೬	೮
೯.	ಜಿ.ನಾಗಲಾಪುರ	೧೫	೬	೯
೧೦.	ಚಿಲಕನಹಟ್ಟಿ	೧೮	೭	೧೧
೧೧.	೧೧೪ ಡಣಾಪುರ	೨೩	೯	೧೪
೧೨.	ಡಣಾಯಕನಕೆರೆ	೧೦	೪	೬
೧೩.	ಸುಗ್ಗೇನಹಳ್ಳಿ	೧೪	೫	೯
೧೪.	ಹಂಪಾದೇವನಹಳ್ಳಿ	೧೪	೬	೮
೧೫.	ಪಾಪಿನಾಯಕನಹಳ್ಳಿ	೧೬	೭	೯
೧೬.	ಕಲ್ಲಹಳ್ಳಿ	೬	೩	೩
೧೭.	ನಾಗೇನಹಳ್ಳಿ	೧೩	೬	೭
೧೮.	ಬೈಲುವದ್ದಿಗೇರಿ	೧೫	೬	೯
೧೯.	ನಂ.೧೦ ಮುದ್ದಾಪುರ	೧೫	೬	೯
೨೦.	ಸಣಾಪುರ	೧೮	೭	೧೧
೨೧.	ಮರಿಯಮ್ಮನಹಳ್ಳಿ	೩೧	೧೨	೧೯
೨೨.	ಗಾದಿಗನೂರು	೧೩	೬	೭
೨೩.	ಹೊಸೂರು	೯	೫	೪
	ಒಟ್ಟು	೩೨೯	೧೩೮	೧೯೧

ಪ್ರಸ್ತುತ ಚಾಲ್ತಿಯಲ್ಲಿರುವ ಶ್ರೇಣಿಕೃತ ವ್ಯವಸ್ಥೆಯಲ್ಲಿ ಮಹಿಳೆಯ ರಾಜಕೀಯ ಸ್ಥಾನಮಾನ, ರಾಜಕೀಯದಲ್ಲಿ ಅವಳ ಭಾಗವಹಿಸುವಿಕೆ, ನೀತಿ, ನಿರ್ಣಯ ಕೈಗೊಳ್ಳುವಲ್ಲಿ ಮಹಿಳೆಯ ಪಾತ್ರ, ಗ್ರಾಮೀಣ ಮಹಿಳೆ ರಾಜಕೀಯವಾಗಿ ಭಾಗವಹಿಸುವಿಕೆಯ ಮುಖ್ಯವಾಹಿನಿಯಿಂದ ಯಾಕೆ ಹಿಂದುಳಿದಿರುವಳು? ಮಹಿಳೆಯ ರಾಜಕೀಯ ಶಿಕ್ಷಣ ಮತ್ತು ರಾಜಕೀಯ ಪ್ರಜ್ಞೆಯ ಕೊರತೆಗೆ ಕಾರಣಗಳೇನು? ಚುನಾವಣೆಯಲ್ಲಿ ಗೆಲವು ಪಡೆಯಲು ಬಳಸಲಾಗುವ ವಿವಿಧ ಚುನಾವಣಾ ತಂತ್ರಗಳೇನು? ರಾಜಕೀಯದಲ್ಲಿ ಭಾಗವಹಿಸುವಿಕೆಯ ಪುರುಷ ಪ್ರಧಾನ ಹಿನ್ನೆಲೆಯಲ್ಲಿ ಕೌಟುಂಬಿಕ ಕಾರಣಗಳೇನು? ಜಾತಿ ವರ್ಗದಂತಹ ಸಂಗತಿಗಳು ಭಾಗವಹಿಸುವಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ? ಆಕೆಯ ರಾಜಕೀಯ ನಾಯಕತ್ವದ ಕೊರತೆಗೆ ಕಾರಣಗಳೇನು? ಮಹಿಳೆಯರಿಗಿರುವ ಶೇ ೩೩ ರಾಜಕೀಯ ಮೀಸಲಾತಿಯು ಸದುಪಯೋಗವಾಗಿದೆಯೇ? ದುರುಪಯೋಗವಾಗುತ್ತಿದೆಯೇ? ಎನ್ನುವುದನ್ನು ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಯ ಚುನಾಯಿತ ಮಹಿಳೆಯರ ಮೂಲಕ ಅಧ್ಯಯನ ನಡೆಸಲಾಗಿದೆ. ಹೊಸಪೇಟೆಯು ಪ್ರವಾಸಿ ಕೇಂದ್ರವಾಗಿರುವ ಹಂಪಿ, ತುಂಗಭದ್ರಾ ಅಣೆಕಟ್ಟು, ತನ್ನ ಸುತ್ತಮುತ್ತ ಇರುವ ಜಿಂದಾಲ್, ಕಿರ್ಲೋಸ್ಕರ್, ಸ್ಮಯೋರ್‌ನಂತಹ ಭಾರಿ ಉದ್ಯಮಗಳಿಂದ, ಗಣಿಗಾರಿಕೆಯಿಂದ ಪ್ರಗತಿಯಲ್ಲಿದೆ ಸಾರಿಗೆ ಸಂಪರ್ಕ ಹಾಗೂ ಸಂವಹನ ಸಂಪರ್ಕ ಉತ್ತಮ ಗುಣಮಟ್ಟದಲ್ಲಿದೆ. ನೀರಾವರಿಯನ್ನು ಅವಲಂಬಿಸಿರುವ ಇಲ್ಲಿ ಬಾಳೆ, ಕಬ್ಬು, ಭತ್ತದಂತ ವಾಣಿಜ್ಯ ಬೆಳೆಗಳು ಪ್ರಮುಖವಾಗಿವೆ. ಈ ಎಲ್ಲ ಹಿನ್ನೆಲೆಯಲ್ಲಿ ಇಲ್ಲಿ ಆರ್ಥಿಕ ವಹಿವಾಟು ಹೆಚ್ಚಾಗಿ ಇದೆ.

ಹೊಸಪೇಟೆಯು ವಿಧಾನ ಸಭಾ ಕ್ಷೇತ್ರವಾಗಿದ್ದು, ನಗರ ಸಭೆಯನ್ನೂ ಹೊಂದಿದೆ. ೧೧ ಗ್ರಾಮಪಂಚಾಯ್ತಿಗಳು ಮಹಿಳೆಯರ ನಾಯಕತ್ವವನ್ನು ಹೊಂದಿವೆ. ವಿಶೇಷವಾಗಿ ನಾನು ಆಯ್ಕೆ ಮಾಡಿಕೊಂಡಿರುವ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಬುಕ್ಕಸಾಗರದ ಶ್ರೀಮತಿ ಸಣ್ಣಹನುಮಕ್ಕ ಅವರು ಬಳ್ಳಾರಿ ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷೆಯಾಗಿರುವರು. ಹೊಸಪೇಟೆಯ ಬಹಳಷ್ಟು ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿರುವ ಕಮಲಾಪುರ ಪಟ್ಟಣ ಪಂಚಾಯ್ತಿಯನ್ನು ಹೊಂದಿದೆ. ಶ್ರೀಮತಿ ಯರ‍್ರಮ್ಮ ಇದರ ಉಪಾಧ್ಯಕ್ಷೆಯಾಗಿದ್ದಾರೆ. ಪ್ರಧಾನವಾಗಿ ಮರಿಯಮ್ಮನಹಳ್ಳಿ, ಪಾಪಿನಾಯಕನಹಳ್ಳಿ, ಗಾದಿಗನೂರು, ಬುಕ್ಕಸಾಗರ, ರಾಮಸಾಗರ, ಹಂಪಿ, ಮಲಪನಗುಡಿ ಈ ಗ್ರಾಮ ಪಂಚಾಯತ್‌ಗಳು ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಆರ್ಥಿಕವಾಗಿ ಪ್ರಗತಿಯಲ್ಲಿದ್ದು, ಸಂಪರ್ಕದಲ್ಲಿ ರಾಜ್ಯದ ಮುಖ್ಯ ರಸ್ತೆಗಳಿಗೆ ಹೊಂದಿಕೊಂಡಿದೆ. ಸದರಿ ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಸಂಘಟನೆಗಳಿವೆ (ಎನ್.ಜಿ.ಓ. ಒಳಗೊಂಡು) ಇವು ಮಹಿಳೆಯರ ಮನೋಭೂಮಿಕೆಯಲ್ಲಿ ಮಹತ್ವದ ಪರಿಣಾಮವನ್ನು ಬೀರಿವೆ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಹೊಸಪೇಟೆ ಗ್ರಾಮ ಪಂಚಾಯ್ತಿಯಲ್ಲಿ

ಆಯ್ಕೆಯಾದ ಮಹಿಳೆಯರು ರಚನಾತ್ಮಕವಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ತೊಡಗಿದೆ ಎಂದು ಊಹಿಸಿಕೊಳ್ಳಲಾಗಿದೆ.

ಸಂಡೂರು ತಾಲೂಕನ್ನು ಗಮನಿಸಿದಾಗ ಹಿಂದುಳಿದ ಪ್ರದೇಶವಾಗಿ ಕಂಡುಬರುತ್ತದೆ. ಇಲ್ಲಿ ಗಣಿ ಉದ್ಯಮ ಬಹಳ ಪ್ರಧಾನವಾದ ವರಮಾನದ ಮೂಲವಾಗಿ ಕಂಡುಬರುತ್ತದೆ. ಗುಡ್ಡ ಬೆಟ್ಟಗಳಿಂದ ಕೂಡಿದ ಈ ಪ್ರದೇಶದಲ್ಲಿ ಕೃಷಿ ಯೋಗ್ಯ ಭೂಮಿಯು ಕಡಿಮೆ ಪ್ರಮಾಣದಲ್ಲಿದೆ. ಸಾರಿಗೆ ಸಂಪರ್ಕ ಸಂವಹನ ಗುಣಾತ್ಮಕವಾಗಿಲ್ಲ. ಕುಮಾರಸ್ವಾಮಿ ಪ್ರಭಾವಳಿಯಿಂದ ಸಂಡೂರಿಗೆ ಮಹತ್ವವಿದ್ದರೂ, ಪ್ರವಾಸಿ ತಾಣವಾಗಿ ರೂಪುಗೊಳ್ಳುವಲ್ಲಿ ವಿಫಲವಾಗಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಗಣಿ ಉದ್ದಿಮೆಗಳಿರುವಂತೆ ಖಾಸಗಿ ಸ್ವಾಮ್ಯದ ಉದ್ದಿಮೆಗಳೂ ಇವೆ. ಈ ಪರಿಸರದ ಹೆಚ್ಚಿನ ಜನರ ಜೀವನ ಮಟ್ಟ ಏಕವ್ಯಕ್ತಿ ಸ್ವಾಮ್ಯದಲ್ಲಿರವಂತೆ ಕಂಡುಬರುತ್ತದೆ. ಸಾಂಪ್ರದಾಯಿಕವಾದ ಯಜಮಾನಿಕೆಯ ಅಡಿಯಲ್ಲಿ ಮಾನವ ಸಂಪನ್ಮೂಲ ಮತ್ತು ಪ್ರಾಕೃತಿಕ ಸಂಪನ್ಮೂಲ ಕೇಂದ್ರೀಕೃತವಾಗಿರುವುದನ್ನು ಕಾಣುತ್ತೇವೆ. ಹೊಸಪೇಟೆ ತಾಲೂಕನ್ನು ಗಮನಿಸಿದರೆ ಹೊಸಪೇಟೆಯಲ್ಲಿ ಆಗಿರುವಷ್ಟು ಮಾನವಮುಖಿ ಅಭಿವೃದ್ಧಿಯು ಸಂಡೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ವಿಶೇಷವಾಗಿ ಸಂಡೂರು ಗಮನ ಸೆಳೆಯುವುದು ಎಲ್ಲಿ ಎಂದರೆ ಅದರ ಪಾರಂಪರಿಕವಾದ ರಾಜಕೀಯ ವಿಚಾರದಲ್ಲಿ. ಸಂಡೂರಿನಿಂದ ಆಯ್ಕೆಯಾದ ಶಾಸಕರೇ ಪ್ರತಿಷ್ಠಿತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯಾಗಿರುವರು ಹಾಗೂ ಜಿಲ್ಲಾ ಉಸ್ತುವಾರಿಯನ್ನು ಅವರಿಗೆ ವಹಿಸಿರುವುದು. ದುರ್ಬಲವರ್ಗದವರ ಹಾಗೂ ಮಹಿಳೆಯರ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಶ್ರೀಮಾನ್ ಘೋರ್ಪಡೆಯವರು ವಿಕೇಂದ್ರೀಕರಣದ ಪರವಾಗಿಯೇ ಇದ್ದವರು. ಅಧಿಕಾರವನ್ನು ತಳಮಟ್ಟದ ಜನರಿಗೂ ತಲುಪಿಸಬೇಕೆಂಬ ಹಂಬಲವುಳ್ಳವರು. ಹೀಗಾಗಿ ಈ ತಾಲೂಕಿನ ಗ್ರಾಮಪಂಚಾಯಿತಿಗಳ ಅಧ್ಯಯನ ಬಹಳ ಕುತೂಹಲಕರವಾಗಿದೆ. ಹೊಸಪೇಟೆ ತಾಲೂಕಿಗಿಂತ ಭಿನ್ನವಾದಂತಹ ಅಧ್ಯಯನದ ಆಕರಗಳನ್ನು ಇಲ್ಲಿ ಪಡೆಯಬಹುದಾಗಿದೆ.

ಸಂಡೂರು ತಾಲೂಕು ಆಧುನಿಕ ಪ್ರಕ್ರಿಯೆಗೆ ತನ್ನನ್ನು ಒಗ್ಗಿಸಿಕೊಂಡಿರುವುದು ಸಂಪೂರ್ಣವಾಗಿ ಕಂಡುಬರುತ್ತಿಲ್ಲ. ಕಾರಣ ಬೆಟ್ಟಗುಡ್ಡಗಳಿಂದ ಕೂಡಿದ್ದು ಸಮೂಹ ಸಂಪರ್ಕ, ಸಂವಹನ ಮಾಧ್ಯಮಗಳ ಕೊರತೆ, ಜನರ ಮನೋಧರ್ಮದಲ್ಲಿನ ದಾಸ್ಯಭಾವ, ಕೂಲಿಕಾರ್ಮಿಕರಲ್ಲಿ ಹಿಂದುಳಿದಿರುವವರೇ ಹೆಚ್ಚು ಸಂಖ್ಯೆಯಲ್ಲಿ ಇರುವುದು. ಆರ್ಥಿಕವಾಗಿ ಸಾಮಾಜಿಕವಾಗಿ ಈ ಹಿನ್ನೆಲೆ ಹೇಳುವುದಾದರೆ ಹೊಸಪೇಟೆ ತಾಲೂಕಿನಲ್ಲಿರುವ 'ಅವೇರ್‌ನೆಸ್' ಸಂಡೂರಿನಲ್ಲಿ ಒಟ್ಟಾರೆ ಕಂಡುಬರುವುದಿಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕಿನ ೨೩ ಗ್ರಾಮಪಂಚಾಯ್ತಿಗಳು ಮತ್ತು ಸಂಡೂರು

ತಾಲೂಕಿನ ೨೧ ಗ್ರಾಮ ಪಂಚಾಯ್ತಿಗಳನ್ನು ಮಾದರಿಯಾಗಿ ತೆಗೆದುಕೊಂಡು ಎರಡೂ ಗುಂಪಿನ ಗ್ರಾಮಪಂಚಾಯ್ತಿಯ ಮಹಿಳೆಯರನ್ನು ತೌಲನಿಕವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ಫಲಿತಾಂಶಗಳನ್ನು ಕಂಡುಕೊಳ್ಳುವುದರ ಜೊತೆಗೆ ಗ್ರಾಮೀಣ ಮಟ್ಟದಲ್ಲಿ ಮಹಿಳಾ ಮೀಸಲಾತಿಯಿಂದ ಉಂಟಾದ ಪರಿಣಾಮ, ಬದಲಾವಣೆಗಳನ್ನು ಅಧ್ಯಯನದ ಮೂಲಕ ಕಂಡುಕೊಂಡು ಸಮನ್ವಯಗೊಳಿಸಲಾಗಿದೆ.

ಚುನಾಯಿತ ಮಹಿಳೆಯರನ್ನು ಒಂದು ಏಕರೂಪ ಗುಂಪಾಗಿ ಪರಿಗಣಿಸಿಲ್ಲ. ಚುನಾಯಿತ ಮಹಿಳೆಯ ಆದಾಯ, ಶಿಕ್ಷಣ, ಜಾತಿ, ರಾಜಕೀಯದಲ್ಲಿ ಭಾಗವಹಿಸುವಿಕೆ, ಮೀಸಲಾತಿಯ ಪ್ರಯೋಜನವನ್ನು ಅಂತರಶಿಸ್ತೀಯ ಅಧ್ಯಯನದ ದೃಷ್ಟಿಕೋನದಲ್ಲಿ ಪರಿಶೀಲಿಸುವ ಪ್ರಯತ್ನ ನನ್ನದಾಗಿದೆ. ಇದರಿಂದ ಮೀಸಲಾತಿಯ ಪ್ರಯೋಜನದ ಸ್ವರೂಪವು ಆದಾಯ, ವರ್ಗ, ಜಾತಿ, ಶಿಕ್ಷಣಗಳಿಂದ ಪ್ರಭಾವಿತವಾಗುತ್ತದೆ ಎಂದು ತಿಳಿಯಲು ಅನುಕೂಲವಾಗಿದೆ.

ಅಧ್ಯಯನ ವಿಧಾನ

ಬಳ್ಳಾರಿ ಜಿಲ್ಲೆಯಲ್ಲಿರುವ ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಒಟ್ಟು ೪೪ ಗ್ರಾಮಪಂಚಾಯ್ತಿಗಳಲ್ಲಿರುವ ಒಟ್ಟು ೨೪೯ ಚುನಾಯಿತ ಮಹಿಳೆಯರನ್ನು ತೌಲನಿಕವಾಗಿ ಅಧ್ಯಯನ ಮಾಡಲು ಪ್ರಾಥಮಿಕ ಮೂಲ(Primary Sources) ಮತ್ತು ಅನುಷಂಗಿಕ ಮೂಲ(Secondary Sources) ವನ್ನು ಅವಲಂಬಿಸಲಾಗಿದೆ. ಪ್ರಾಥಮಿಕ ಮೂಲದಲ್ಲಿ ಕ್ಷೇತ್ರಕಾರ್ಯದ ಮೂಲಕ ೪೪ ಗ್ರಾಮಪಂಚಾಯ್ತಿಗಳಿಗೂ ಭೇಟಿ ನೀಡಿದ್ದೇನೆ. ಮಾಹಿತಿಗಳನ್ನು ಸಂಗ್ರಹಿಸಲು ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನ ವಿಧಾನವನ್ನು ಅನುಸರಿಸಿದ್ದೇನೆ. ಪ್ರಶ್ನಾವಳಿಯು ತೆರೆದ(Open ended question) ಪ್ರಶ್ನೆ ಮತ್ತು ಮುಚ್ಚಿದ(Closed Questions)ಪ್ರಶ್ನೆಗಳನ್ನು ಹೊಂದಿದ್ದು; ಈ ಮೂಲಕ ೨೪೯ ಚುನಾಯಿತ ಮಹಿಳೆಯರನ್ನು ನೇರವಾಗಿ ಮತ್ತು ವೈಯಕ್ತಿಕವಾಗಿ ಸಂದರ್ಶಿಸಿ ಉತ್ತರಗಳನ್ನು ಚುನಾಯಿತ ಮಹಿಳೆಯರ(Respondents)ಎದುರಿಗೆ ಬರೆದುಕೊಂಡಿದ್ದೇನೆ. ಅಲ್ಲದೆ ಆಂಶಿಕವಾಗಿ ಚುನಾಯಿತ ಮಹಿಳೆಯರ ಕುಟುಂಬದ ಸದಸ್ಯರನ್ನು, ಗ್ರಾಮಪಂಚಾಯ್ತಿಯ ಸಹ ಸದಸ್ಯರನ್ನು, ಗ್ರಾಮದ ಹಿರಿಯರನ್ನು, ಗ್ರಾಮಪಂಚಾಯ್ತಿಗಳ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ಅಗತ್ಯವಾದ ಮಾಹಿತಿಯನ್ನು ಪಡೆಯಲಾಗಿದೆ. ಈ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಪರಿಷ್ಕರಿಸಿ (Editing)ಕ್ರೋಢೀಕರಿಸಿ(Coding)ಪಟ್ಟಿ(Tabulation)ಮಾಡಿದ್ದೇನೆ. ಈ ಮೂಲಕ ಅಧ್ಯಾಯಗಳ ವಿಶ್ಲೇಷಣೆಗೆ ಅನುಕೂಲವಾಗುವಂತೆ ಮಾಹಿತಿಯನ್ನು ವರ್ಗೀಕರಿಸಿಕೊಳ್ಳಲಾಗಿದೆ. ಇದರಿಂದ ನನ್ನ ಅಧ್ಯಯನಕ್ಕೆ ಹೆಚ್ಚು ನಿಖರತೆಯನ್ನು ತಂದುಕೊಳ್ಳಲು ಪ್ರಯತ್ನಿಸಿದ್ದೇನೆ.

ಆನುಷಂಗಿಕ ಮಾಹಿತಿಯನ್ನು ಪುಸ್ತಕಗಳು, ನಿಯತಕಾಲಿಕೆಗಳು, ವೃತ್ತಪತ್ರಿಕೆಗಳು ಹಾಗೂ ಹೊಸಪೇಟೆ ಮತ್ತು ಸಂಡೂರು ತಾಲ್ಲೂಕು ಗ್ರಾಮಪಂಚಾಯ್ತಿಗಳಿಂದ ಸಂಗ್ರಹಿಸಲಾಗಿದೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ ಬಳ್ಳಾರಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರಿನಿಂದ ಸಂಗ್ರಹಿಸಿ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿದ್ದೇನೆ.

ಪ್ರಾಕಲ್ಪನೆಗಳು

ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಪ್ರಾಕಲ್ಪನೆಗಳನ್ನು ಮಾಡಿಕೊಳ್ಳಲಾಗಿದೆ. ಇದಕ್ಕಾಗಿ ಹೊಸಪೇಟೆ ಮತ್ತು ಸಂಡೂರು ತಾಲೂಕುಗಳಲ್ಲಿ ಮಾರ್ಗದರ್ಶಕ ಸಮೀಕ್ಷೆಯನ್ನು (Pilot Survery)ಮಾಡಲಾಗಿದೆ.

೧. ಹಂಪಿಯಂತಹ ಐತಿಹಾಸಿಕ ಹಾಗೂ ಪ್ರವಾಸಿ ಕೇಂದ್ರಗಳು ಜಿಂದಾಲ್‌ನಂತಹ ಭಾರಿ ಉದ್ಯಮಗಳು ವಿಪುಲ ಸಂಪರ್ಕ ಮಾಧ್ಯಮಗಳಿಂದಾಗಿ ಹೊಸಪೇಟೆ ತುಂಬಾ ಮುಂದುವರಿದಿದೆ. ಇಂಥ ಮೂಲಭೂತ ಸೌಕರ್ಯಗಳ ಪಡೆಯುವಿಕೆಯಲ್ಲಿ ಸಂಡೂರು ತುಂಬಾ ಹಿಂದೆ ಬಿದ್ದಿರುವುದು. ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಸಂಡೂರು ತಾಲ್ಲೂಕಿನ ಗ್ರಾಮಪಂಚಾಯ್ತಿಗಳು ಪ್ರಗತಿದಾಯಕವಾಗಿಲ್ಲ. ಹೊಸಪೇಟೆ ಗ್ರಾಮಪಂಚಾಯ್ತಿಗಳು ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಪ್ರಗತಿದಾಯಕವಾಗಿದೆ.

೨. ಸಂಡೂರು ಗ್ರಾಮಪಂಚಾಯ್ತಿಯ ಹೆಚ್ಚಿನ ಪರಿಸರ ಏಕವ್ಯಕ್ತಿ ಸ್ವಾಮ್ಯದಲ್ಲಿರುವಂತಿದೆ. ಸಾಂಪ್ರದಾಯಿಕವಾದ ಯಜಮಾನಿಕೆ ಅಡಿಯಲ್ಲಿ ಪ್ರಾಕೃತಿಕ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲವು ಕೇಂದ್ರೀಕೃತವಾಗಿದೆ. ಈ ಸಂಗತಿ ಹೊಸಪೇಟೆಯಲ್ಲಿ ಕಂಡುಬರುವುದಿಲ್ಲ.

೩. ಬೆಟ್ಟಗುಡ್ಡಗಳಿಂದ ಕೂಡಿದ ಸಂಡೂರು ಪ್ರದೇಶದಲ್ಲಿ ಸಂಪರ್ಕ ಮತ್ತು ಸಂವಹನದ ಕೊರತೆಯಿದೆ. ಹೀಗಾಗಿ ಜನರ ಮನೋಧರ್ಮದಲ್ಲಿ ದಾಸ್ಯಭಾವ ಮನೆ ಮಾಡಿದೆ. ಕೂಲಿ ಕಾರ್ಮಿಕರಲ್ಲಿ ಹಿಂದುಳಿದ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಈ ಅಂಶಗಳು ಅಲ್ಲಿಯ ಗ್ರಾಮಪಂಚಾಯ್ತಿಗಳ ಮೇಲೆ ಪ್ರಭಾವ ಬೀರಿವೆ. ಆದರೆ ಹೊಸಪೇಟೆಯಲ್ಲಿ ಸಂಪರ್ಕ ಮತ್ತು ಸಂವಹನದ ಕೊರತೆಯಿರುವುದಿಲ್ಲ.

೪. ಆರ್ಥಿಕವಾಗಿ ಸಾಮಾಜಿಕವಾಗಿ ಹೇಳುವುದಾದರೆ ಹೊಸಪೇಟೆ ತಾಲ್ಲೂಕಿನ ಗ್ರಾಮಪಂಚಾಯ್ತಿಗಳಲ್ಲಿರುವ ಅವೇರ್‌ನೆಸ್ ಸಂಡೂರಿನ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಕಂಡುಬರುವುದಿಲ್ಲ.

೫. ರಾಜಕೀಯದಲ್ಲಿ ಮಹಿಳಾ ಭಾಗವಹಿಸುವಿಕೆಯ ಪ್ರಮಾಣ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಿಗಿಂತ ಸಂಡೂರಿನ ಗ್ರಾಮಪಂಚಾಯ್ತಿಗಳಲ್ಲಿ ಅನುಪಾತ ಹೊಂದಿದೆ.

೬. ಈ ಹಿನ್ನೆಲೆಗಳಲ್ಲಿ ಹೊಸಪೇಟೆಯ ಗ್ರಾಮಪಂಚಾಯ್ತಿಗಳಲ್ಲಿರುವ ಮಹಿಳಾ ಸದಸ್ಯೆಯರು ಗ್ರಾಮ ಪಂಚಾಯ್ತಿಯಲ್ಲಿ ಭಾಗವಹಿಸುವುದು ಸಂಡೂರು ಗ್ರಾಮಪಂಚಾಯ್ತಿಗಳಲ್ಲಿ ಭಾಗವಹಿಸುವ ಮಹಿಳೆಯರಿಗಿಂತ ಉತ್ತಮವಾಗಿದೆ.

೭. ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿರುವ ಚುನಾಯಿತ ಮಹಿಳೆಯರ ಮೇಲೆ ಪುರುಷರ ಪ್ರಭಾವವು ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿರುವ ಚುನಾಯಿತ ಮಹಿಳೆಯರ ಮೇಲೆ ಹೆಚ್ಚಿನ ಪ್ರಮಾಣದಲ್ಲಿದೆ.

೬. ಹೊಸಪೇಟೆ ತಾಲ್ಲೂಕಿನ ಗ್ರಾಮಪಂಚಾಯ್ತಿಗಳಿಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳು ಎಲ್ಲ ರೀತಿಯಿಂದಲೂ ಹಿಂದುಳಿದಿವೆ.

ಅಧ್ಯಾಯಗಳ ವಿನ್ಯಾಸ

ಈ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಆರು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದ್ದೇನೆ. ಮೊದಲ ಅಧ್ಯಾಯವು ನನ್ನ ಅಧ್ಯಯನದ ಸ್ವರೂಪ, ವ್ಯಾಪ್ತಿ, ಉದ್ದೇಶ ಮತ್ತು ತಾತ್ವಿಕ ಚೌಕಟ್ಟನ್ನು ಕುರಿತದ್ದಾಗಿದೆ. ಇಲ್ಲಿ ನನ್ನ ಮುಂದಿನ ಅಧ್ಯಯನಕ್ಕೆ ಪೂರಕವಾಗುವ ರೀತಿಯಲ್ಲಿ ಇದುವರೆಗೂ ಈ ಕ್ಷೇತ್ರದಲ್ಲಿ ನಡೆದ ಅಧ್ಯಯನದ ಸ್ಥೂಲ ಸಮೀಕ್ಷೆಯನ್ನು ಮಾಡಿದ್ದೇನೆ. ಹಾಗೆ ಗ್ರಾಮಪಂಚಾಯ್ತಿ ವ್ಯವಸ್ಥೆಯು ನಡೆದು ಬಂದ ಚಾರಿತ್ರಿಕ ಹಾದಿಯನ್ನು ಗುರುತಿಸಿದ್ದೇನೆ. ಆ ಮೂಲಕ ಈ ವ್ಯವಸ್ಥೆಯು ಮಹಿಳೆಗೆ ನೀಡಿದ ಸ್ಥಾನಮಾನಗಳನ್ನು ಪತ್ತೆಹಚ್ಚಲು ಪ್ರಯತ್ನಿಸಿದ್ದೇನೆ.

ವಿಕೇಂದ್ರೀಕರಣ ವ್ಯವಸ್ಥೆಯು ಬಹುಮುಖ್ಯವಾಗಿ ಜನತೆಯ ಆಸಕ್ತಿಯನ್ನು ರಾಜಕೀಯದಲ್ಲಿ ಹೆಚ್ಚಿಸುವಂತಹುದಾಗಿದೆ. ನಾಯಕತ್ವವನ್ನು ಬೆಳೆಸಿಕೊಳ್ಳಲು ಸ್ಥಳೀಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಆ ಮೂಲಕ ರಾಜ್ಯ ಮತ್ತು ರಾಷ್ಟ್ರಮಟ್ಟದ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಬೇಕಾದ ಅಡಿಪಾಯವನ್ನು ಹಾಕಿಕೊಡುತ್ತದೆ. ಸಮಗ್ರ ಗ್ರಾಮೀಣಾಭಿವೃದ್ಧಿ, ದುರ್ಬಲ ವರ್ಗದವರ ಹಾಗೂ ಮಹಿಳೆಯರ ಸಶಕ್ತೀಕರಣ ವಿಕೇಂದ್ರೀಕರಣದ ಬಹುಮುಖ್ಯ ಉದ್ದೇಶ. ಈ ಉದ್ದೇಶ ಎಷ್ಟರ ಮಟ್ಟಿಗೆ ಇಂದು ಪ್ರಚಲಿತವಿರುವ ಗ್ರಾಮಪಂಚಾಯ್ತಿ ವ್ಯವಸ್ಥೆಯಲ್ಲಿ ಆಚರಣೆಗೆ ಬಂದಿದೆ? ಮಹಿಳೆಯರು ಎಷ್ಟರಮಟ್ಟಿಗೆ ಸ್ವಯಂ ಪ್ರೇರಣೆಯಿಂದ ಈ ವ್ಯವಸ್ಥೆಯಲ್ಲಿ ಪಾಲುದಾರರಾಗಿದ್ದಾರೆ?

ಚುನಾಯಿತ ಮಹಿಳೆಗೆ ತನ್ನ ಹಕ್ಕು ಬಾಧ್ಯತೆಗಳ ಬಗ್ಗೆ ಇರುವ ತಿಳುವಳಿಕೆ ಯಾವ ರೀತಿಯದು? ರಾಜಕೀಯ ಹಕ್ಕು ಬಾಧ್ಯತೆಗಳ ಬಗ್ಗೆ ಇರುವ ತಿಳುವಳಿಕೆ ಯಾವ ರೀತಿಯದು? ರಾಜಕೀಯ ಭಾಗವಹಿಸುವಿಕೆ ಮತ್ತು ನಿರ್ಣಯ ಪ್ರಕ್ರಿಯೆಯಲ್ಲಿ ಆಕೆಯ ಸ್ಥಾನಮಾನ ಏನು? ಎಂಬುದನ್ನು ಅಧ್ಯಯನ ಮಾಡುವುದು ನನ್ನ ಬಹುಮುಖ್ಯ ಉದ್ದೇಶವಾಗಿದೆ.

ಇದಕ್ಕಾಗಿ ನಾನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಿಂದುಳಿದಿದೆ ಎಂದು ಗುರುತಿಸಿಕೊಂಡಿರುವ ಬಳ್ಳಾರಿ ಜಿಲ್ಲೆಯ ಎರಡು ತಾಲ್ಲೂಕುಗಳನ್ನು ಆಯ್ದುಕೊಂಡಿದ್ದೇನೆ. ಬಳ್ಳಾರಿ ಜಿಲ್ಲೆಯ ಸಂಡೂರು ಮತ್ತು ಹೊಸಪೇಟೆ ತಾಲೂಕುಗಳಿಗೆ ತನ್ನದೇ ಆದ ವೈಶಿಷ್ಟ್ಯಗಳಿವೆ. ಹೀಗಾಗಿ ಈ ಗ್ರಾಮಪಂಚಾಯ್ತಿಗಳ ಅಧ್ಯಯನ ವಿಭಿನ್ನವೂ ವಿಶಿಷ್ಟ್ಯವೂ ಆಗಿದೆ. ಸಂಡೂರು ತಾಲೂಕಿನ ೨೧ ಗ್ರಾಮಪಂಚಾಯ್ತಿಗಳ ೧೫೧ ಚುನಾಯಿತ ಮಹಿಳೆಯರನ್ನೂ ಹಾಗೂ ಹೊಸಪೇಟೆ ತಾಲೂಕಿನ ೨೩ ಗ್ರಾಮಪಂಚಾಯ್ತಿಗಳ ೧೩೮ ಚುನಾಯಿತ ಮಹಿಳೆಯರನ್ನು ತೌಲನಿಕವಾಗಿ ಅಭ್ಯಸಿಸುವುದು ನನ್ನ ಅಧ್ಯಯನದ ವ್ಯಾಪ್ತಿಯಾಗಿದೆ. ಇದಕ್ಕಾಗಿ ಒಟ್ಟು ೨೮೯ ಚುನಾಯಿತ ಮಹಿಳೆಯರನ್ನು ಮುಚ್ಚಿದ(Closed) ಮತ್ತು ತೆರೆದ(Open) ಮಹಿಳೆಯರನ್ನು ಪ್ರಶ್ನಾವಳಿಯ ಮೂಲಕ ನೇರವಾಗಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿದ್ದೇನೆ. ಅಲ್ಲದೆ ಅಂಶಿಕವಾಗಿ ಚುನಾಯಿತ ಮಹಿಳೆಯರ ಕುಟುಂಬದ ಸದಸ್ಯರನ್ನು, ಸಹ ಸದಸ್ಯರನ್ನು, ಗ್ರಾಮದ ಹಿರಿಯರನ್ನು, ಗ್ರಾಮಪಂಚಾಯ್ತಿ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದಿದ್ದೇನೆ. ಸಂಗ್ರಹಿತ ಮಾಹಿತಿಯನ್ನು ದತ್ತಾಂಶವಾಗಿ ಪರಿವರ್ತಿಸಿಕೊಂಡು ಅಧ್ಯಾಯಗಳ ವಿಶ್ಲೇಷಣೆಗೆ ಅನುಕೂಲವಾಗುವಂತೆ ವರ್ಗೀಕರಿಸಲಾಗಿದೆ. ಇದರಿಂದ ಅಧ್ಯಯನಕ್ಕೆ ನಿಖರತೆ ತಂದುಕೊಳ್ಳಲು ಪ್ರಯತ್ನಿಸಿದ್ದೇನೆ. ಜೊತೆಗೆ ಬರಹ ಮೂಲದ ಆನುಷಂಗಿಕ ಮಾಹಿತಿಗಳನ್ನು, ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿದ್ದೇನೆ.

ಚುನಾಯಿತ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ. ಇದು ಎರಡನೆಯ ಅಧ್ಯಾಯವಾಗಿದೆ. ಇದರಲ್ಲಿ ೨೮೯ ಚುನಾಯಿತ ಮಹಿಳೆಯರಿಂದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳನ್ನು ಅಂಕಿ ಅಂಶಗಳ(ಕೋಷ್ಟಕ)ಮೂಲಕ ಕೊಡಲಾಗಿದೆ. ಹೀಗೆ ಕೊಡುವಾಗ ಚುನಾಯಿತ ಮಹಿಳೆಯರನ್ನು ಒಂದು ಏಕರೂಪ ಗುಂಪನ್ನಾಗಿ ಪರಿಗಣಿಸದೆ ಬಹುಮುಖಿಯಾದ ನೆಲೆಗಳಲ್ಲಿ ಪರಿಭಾವಿಸಲಾಗಿದೆ. ಉದಾಹರಣೆಗೆ ಆದಾಯ, ಶಿಕ್ಷಣ, ಜಾತಿ ಪಂಗಡ, ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ, ಮೀಸಲಾತಿ, ಲಿಂಗಾಧಾರಿತ ಸಂಗತಿಗಳು. ಹೀಗೆ ಹಲವು ನಿಟ್ಟಿನಲ್ಲಿ ಅಧ್ಯಯನಿಸಲು ಪ್ರಯತ್ನಿಸಲಾಗಿದೆ.

ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪ್ರತಿನಿಧಿತ್ವ, ಪ್ರತಿನಿಧಿತ್ವದಲ್ಲಿನ ಸಮಾನ ಅಂಶಗಳು ಮತ್ತು ವ್ಯತ್ಯಾಸಗಳು ಎನ್ನುವುದು ಮೂರನೆಯ ಅಧ್ಯಾಯವಾಗಿದೆ. ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರುವ ಹಲವಾರು ಸಂಗತಿಗಳನ್ನು ಗುರುತಿಸಲಾಗಿದೆ. ರಾಜಕೀಯ ಸಾಮಾಜೀಕರಣದ ಬಹುಮುಖ್ಯ ಅಂಗಗಳಾದ ಕುಟುಂಬ, ಧಾರ್ಮಿಕ ಸಂಗತಿಗಳು, ಶೈಕ್ಷಣಿಕ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಸಮೂಹ ಮಾಧ್ಯಮಗಳು, ಒತ್ತಡ ಗುಂಪುಗಳು ಚುನಾಯಿತ ಮಹಿಳೆಯರ ರಾಜಕೀಯ ಮನೋಧರ್ಮವನ್ನು ರೂಪಿಸಲು ಹೇಗೆ ಪೂರಕವಾದ ಮತ್ತು ಮಾರಕವಾದ ಪರಿಸರವನ್ನು ಕಲ್ಪಿಸುತ್ತವೆ ಎಂಬುದನ್ನು ತಾತ್ವಿಕವಾಗಿ ವಿವೇಚಿಸಿಕೊಳ್ಳಲಾಗಿದೆ. ಆ ಮೂಲಕ ಗ್ರಾಮೀಣ ರಾಜಕೀಯದಲ್ಲಿ ಚುನಾಯಿತ ಮಹಿಳೆಯರ ಭಾಗವಹಿಸುವಿಕೆಯ ಸಕಾರಾತ್ಮಕ ಮತ್ತು ನಕಾರಾತ್ಮಕವಾದ ಸಂಗತಿಗಳನ್ನು ಕಂಡುಕೊಳ್ಳಲಾಗಿದೆ. ಇದಕ್ಕೆ ಚುನಾಯಿತ ಮಹಿಳೆಯರ ಕೌಟುಂಬಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಂಗತಿಗಳನ್ನು ಬಹುಮುಖ್ಯವಾದ ಮಾನಂದಡಗಳನ್ನಾಗಿ ಇರಿಸಿಕೊಳ್ಳಲಾಗಿದೆ.

ಅಧ್ಯಾಯ ನಾಲ್ಕು ಪ್ರತಿನಿಧಿತ್ವದ ಮೇಲೆ ಸಾಂಸ್ಕೃತಿಕ ಅಂಶಗಳ ಪ್ರಭಾವ ಎಂಬುದಾಗಿದೆ. ಇಲ್ಲಿ ಬಹುಮುಖ್ಯವಾಗಿ ಎರಡನೆಯ ಅಧ್ಯಾಯದಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಮೂಲಕ ಚುನಾಯಿತ ಮಹಿಳೆಯರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಭಿನ್ನತೆಗಳನ್ನು ವಿವೇಚಿಸಲಾಗಿದೆ. ಲಿಂಗಾಧಾರಿತವಾಗಿ ಮಹಿಳೆಯರನ್ನು ಸಮಾನ ನೆಲೆಯಲ್ಲಿ ಪರಿಭಾವಿಸಿದಾಗಲೂ ಶ್ರೇಣೀಕೃತ ಸಮಾಜದಲ್ಲಿನ ಸಾಂಪ್ರದಾಯಿಕ ಮನಸ್ಸುಗಳು ಸದಸ್ಯೆಯರನ್ನು ಯಾವ ಯಾವ ನೆಲೆಯಲ್ಲಿ ಸ್ವೀಕರಿಸುತ್ತವೆ ಮತ್ತು ನಿರಾಕರಿಸುತ್ತವೆ ಎಂಬುದನ್ನು ಸೋದಾಹರಣವಾಗಿ ವಿವರಿಸಿಕೊಳ್ಳಲಾಗಿದೆ. ಆ ಮೂಲಕ ಸಾಮಾಜಿಕ ಹಾಗೂ ಲಿಂಗಸಂಬಂಧಿ ವಿಭಜನಾ ಕ್ರಮಕ್ಕೆ ಕಾರಣವಾಗುವ ಸಂಗತಿಗಳನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ ಐದು ಮಹಿಳೆಯರ ಭಾಗವಹಿಸುವಿಕೆಯ ಬದಲಾದ ಮಾದರಿಗಳು ಎನ್ನುವ ವಿಷಯ ಕುರಿತು ವಿವರಿಸುತ್ತದೆ. ಸಂವಿಧಾನದ ೭೩ ಮತ್ತ ೭೪ನೇ ತಿದ್ದುಪಡಿಗಿಂತ ಮೊದಲು ಇದ್ದ ಮಂಡಲ ಪಂಚಾಯ್ತಿ ವ್ಯವಸ್ಥೆಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯು ಅನುಪಾತದಲ್ಲಿದ್ದದ್ದು ಕಂಡುಬರುತ್ತದೆ. ಶೇ.೨೫ರಷ್ಟು ಮಹಿಳಾ ಮೀಸಲಾತಿ ಇದ್ದರೂ, ಮಹಿಳೆಯರ ರಾಜಕೀಯ ಪ್ರವೇಶ ಅಂತಹ ಗುಣಾತ್ಮಕವಾಗಿ ಕಂಡುಬರುವುದಿಲ್ಲ. ಆದರೆ ೭೩ನೇ ತಿದ್ದುಪಡಿಯು ಗ್ರಾಮೀಣ ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಗೆ ಅಪಾರ ಅವಕಾಶಗಳನ್ನು ಕಲ್ಪಿಸಿಕೊಟ್ಟಿತು. ಈ ಬದಲಾದ ರಾಜಕೀಯ ಸ್ತರಗಳು, ಅಭಿವೃದ್ಧಿ ಮಾದರಿಗಳು ಮಹಿಳೆಯರನ್ನು ಎಷ್ಟು ಪ್ರಮಾಣದಲ್ಲಿ ಪ್ರಭಾವಿತಗೊಳಿಸಿವೆ ಎಂಬುದನ್ನು ಗುರುತಿಸಲಾಗಿದೆ. ಈ ಪ್ರಭಾವವು ಅಧಿಕಾರದ ರಾಜಕಾರಣದಲ್ಲಿ ಚುನಾಯಿತ

ಮಹಿಳೆಯರ ಸ್ಥಾನಮಾನಗಳನ್ನು ಹೇಗೆ ನಿರ್ಧರಿಸುತ್ತದೆ? ಎಂಬುದನ್ನು ಗಮನಿಸಲಾಗಿದೆ. ಮಹಿಳಾ ಮೀಸಲಾತಿಯ ಪ್ರಮಾಣ ಶೇ.೩೩.೩೩ ದೊರಕಿದೆ ಎಂದಾಕ್ಷಣ ಮಹಿಳೆಯರ ಅಭಿವೃದ್ಧಿ ಆಗಿದೆ, ಅವರಿಗೆ ಸಮಾನ ಅಧಿಕಾರ ಸ್ಥಾನಗಳು ಸಿಕ್ಕಿವೆ ಎನ್ನುವ ಭಾವನೆಗಳು ಎಷ್ಟು ನಿರರ್ಥಕ ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಅಧ್ಯಾಯ ಆರು ಅಧ್ಯಯನದ ಫಲಿತಗಳನ್ನು ಹಾಗೂ ನೀತಿ ನಿರೂಪಣಾ ಸಲಹೆಗಳನ್ನು ಗರ್ಭೀಕರಿಸಿಕೊಂಡಿದೆ.

ಅಡಿಟಿಪ್ಪಣಿಗಳು

೧. ಪ್ಲೆಟೋ, ರಿಪ್ಲಬಿಕ್, ವೆಂಕಟರಾಮಪ್ಪ ಕೆ.(ಅನು), ೧೯೬೧, ಪು.೯೪-೯೫

೨. ಅದೇ, ಪು.೬೪-೬೫

೩. ಅಪರಂಜಿ ಎನ್.ಆರ್., ಪಾಶ್ಚಿಮಾತ್ಯ ರಾಜನೀತಿ ವಿವೇಚಕರು, ೧೯೯೧, ಪು.೪೨

೪. ಸಿಂಕ್ಲೇರ್ ಬಿ.ಎ., ಅರಿಸ್ಟಾಟಲನ ರಾಜ್ಯಶಾಸ್ತ್ರ, ಕೃಷ್ಣರಾವ್ ಎಚ್.(ಅನು), ೧೯೬೯, ಪು.೫೯

೫. ಚಕ್ರಕೋಡಿ ಈಶ್ವರಶಾಸ್ತ್ರೀ(ಅನು), ಮನುಸ್ಮೃತಿ, ೧೯೮೨, ಶ್ಲೋಕ ೧೪೭, ಅಧ್ಯಾಯ ೫, ಪು.೨೩೦

೬. ಪಾಟೀಲ ಎಸ್.ಆರ್., ಸಮರ್ಥ ಸಂಪೂರ್ಣ ಬಳಕೆಯಾಗದ ಮಹಿಳಾ ಬಂಡವಾಳ, ಪ್ರಜಾವಾಣಿ ಮಾರ್ಚ್ ೧೦, ೨೦೦೨

೭. ಚನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ೧೯೯೦, ಪು.

೮. ಅದೇ, ಪು.೧೮೩

೯. ಅದೇ, ಪು.೧೮೨

೧೦. ಬಾಲಗೋಪಾಲ್, ಪ್ರಾಚೀನ ಭಾರತದ ಚರಿತ್ರೆ : ಡಿ.ಡಿ.ಕೋಸಾಂಬಿಯವರ ಚಿಂತನೆಗಳು, ಶ್ರೀಮತಿ ಎಚ್.ಎಸ್.(ಅನು), ೧೯೯೮, ಪು.೧೩೦

೧೧. ಅದೇ, ಪು.೧೮೬

೧೨. ಅದೇ, ಪು.೧೮೧

೧೩. ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ-೧೯೯೩, ೨೦೦೦

೧೪. The Karnataka Pancyata raj Act-1993, 2000

೧೫. ಜಯಪ್ರಕಾಶ್ ನಾರಾಯಣ, ನವನಿರ್ಮಾಣದೆಡೆಗೆ ಲಲಿತಾಂಬ ಬಿ.ವೈ.(ಅನು), ೧೯೭೮

೧೬. ಘೋರ್ಪಡೆ ಎಂ.ವೈ. ಅವರು ಕನ್ನಡ ವಿಶ್ವವಿದ್ಯಾಲಯದಲ್ಲಿ ವಿಕೇಂದ್ರೀಕರಣ ತತ್ವ ಮತ್ತು ಆಚರಣೆ ವಿಚಾರ ಸಂಕಿರಣದಲ್ಲಿ ಮಾಡಿದ ಆಶಯ ಭಾಷಣ, ದಿನಾಂಕ ೨೯.೧೧.೧೯೯೯

ಅಧ್ಯಾಯ ೨

ಚುನಾಯಿತ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿನ್ನೆಲೆ

ಮಹಿಳಾ ಸಬಲೀಕರಣದ ಬಹುಮುಖ್ಯಗುಣವೆಂದರೆ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ. ಲಿಂಗತಾರತಮ್ಯವಾದಿ ಧೋರಣೆಯ ಸಮಾಜ ವ್ಯವಸ್ಥೆಯಲ್ಲಿ ಇವರೆಡು ಸಂಗತಿಗಳು ತನ್ನಿಂದ ತಾನೇ ಸುಲಭವಾಗಿ ಸಿಗುವಂಥವಲ್ಲ. ಪರಿವರ್ತನ ಮುಖಿ ಆಧುನಿಕ ಸಂದರ್ಭ ಇಂದು ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ಹಲವು ರೀತಿಯ ಬದಲಾವಣೆಗಳನ್ನು ತರುತ್ತಿದೆ. ವಿಶೇಷವಾಗಿ ಮಹಿಳೆಯರ ಸಶಕ್ತೀಕರಣ, ಸ್ವಾಲಂಬನೆ, ಆಮೂಲಕ ಅವರ ರಾಜಕೀಯ ಭಾಗವಹಿಸುವಿಕೆ, ನಿರ್ಣಯ ಪ್ರಕ್ರಿಯೆಯಲ್ಲಿ ಮಹಿಳೆಯರ ತೊಡಗುವಿಕೆ-ಮುಂತಾದ ಸಂಗತಿಗಳಿಗೆ ಇಂದು ಹೆಚ್ಚಿನ ಆದ್ಯತೆ ಸಿಗುತ್ತಿದೆ. ಸಾಮಾಜಿಕವಾಗಿ ಆರ್ಥಿಕವಾಗಿ ಮಹಿಳೆಯನ್ನು ಸಬಲಳನ್ನಾಗಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಚುನಾಯಿತ ಮಹಿಳಾ ಸದಸ್ಯೆಯರ ಸಾಮಾಜಿಕ, ರಾಜಕೀಯ, ಆರ್ಥಿಕ ಸಂಗತಿಗಳನ್ನು ಕ್ಷೇತ್ರಕಾರ್ಯದಿಂದ ದೊರೆತ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ವಿವಿಧ ಸ್ತರಗಳಲ್ಲಿ ಅಧ್ಯಯಿನಿಸಲು ಪ್ರಯತ್ನಿಸಲಾಗಿದೆ. ಬಹಮುಖ್ಯವಾಗಿ ಕುಟುಂಬ, ಪುರುಷಾಧಿಕಾರ, ಚುನಾವಣಾ ಪ್ರಕ್ರಿಯೆ, ಮೂಢನಂಬಿಕೆ, ಅನಕ್ಷರತೆ, ಆರ್ಥಿಕ ಸಂಗತಿಗಳು ಸಮೂಹ ಮಾಧ್ಯಮಗಳು, ಜಾತಿ-ವರ್ಗ, ಅಧಿಕಾರಶಾಹಿ ನೆಲೆ, ಮೂಲಭೂತ ಸೌಲಭ್ಯ, ರಾಜಕೀಯ ಭಾಗವಹಿಸುವಿಕೆ, ಶಿಕ್ಷಣ, ಚುನಾಯಿತ ಮಹಿಳೆಯರ ತವರು ಮನೆಯ ರಾಜಕೀಯ ಹಿನ್ನೆಲೆ, ಪತಿಯ ಉದ್ಯೋಗ-ಹೀಗೆ ಹಲವು ಆಯಾಮಗಳಲ್ಲಿ ಚುನಾಯಿತ ಮಹಿಳೆಯ ವ್ಯಕ್ತಿತ್ವವನ್ನು ಬಿಡಿಸಿಕೊಳ್ಳಲಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪ್ರತಿಯೊಂದನ್ನು ಗಂಡಿನ ಅವಶ್ಯಕತೆಗೆ ತಕ್ಕಂತೆಯೇ ವಿವೇಚಿಸಲಾಗುತ್ತದೆ. ಹೀಗಾಗಿ ಮಹಿಳೆಗೆ ಸಾರ್ವತ್ರಿಕ ಬದುಕು ಒತ್ತಟ್ಟಿಗಿರಲಿ ಖಾಸಗೀ ಬದುಕೇ ಇರುವುದಿಲ್ಲ. ಚಾಕರಿಯೇ ಅವಳ ಉದ್ಯೋಗವಾಗಿರುತ್ತದೆ.

ಆದರೆ ಬದಲಾದ ಸಾಂಸ್ಕೃತಿಕ ಸಂದರ್ಭದಲ್ಲಿ ಮಹಿಳೆಗೆ ಹಲವು ರೀತಿಯ ಅವಕಾಶಗಳು ದಕ್ಕುತ್ತಿವೆ. ಶೇ.೩೩.೩೩ರಷ್ಟು ರಾಜಕೀಯ ಮೀಸಲಾತಿಯಿಂದಾಗಿಯೇ ಗ್ರಾಮ ಪಂಚಾಯ್ತಿಗಳಲ್ಲಿ ಹಿಂದೆಂದೂ ಕಾಣದಷ್ಟು ಮಹಿಳಾ ಪ್ರಾತಿನಿಧ್ಯ ಸಾಧ್ಯವಾಗಿದೆ. ಈ ಸಾಧ್ಯತೆ ಅವರಿಗೆ ಸ್ಥಾನಮಾನಗಳನ್ನು ದಕ್ಕಿಸಿಕೊಟ್ಟಿದೆ. ಇಂದು ಗ್ರಾಮಪಂಚಾಯ್ತಿ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಅಧಿಕಾರದ ಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿಚಿತ್ರವೆಂದರೆ ಅವರ ಪ್ರತಿನಿಧಿತ್ವ ಮತ್ತು ವರಮಾನಗಳು ಅಪ್ರಧಾನವಾಗಿ, ಸ್ಥಾನಮಾನದಲ್ಲಿ ನಗಣ್ಯರಾಗಿ ಇರುವುದು ಕಾಣಬರುತ್ತಿದೆ. ಮಹಿಳೆಯ ವ್ಯಕ್ತಿತ್ವದ

ಈ ಅಪಮೌಲೀಕರಣಕ್ಕೆ ಅಧಿಕಾರಶಾಹಿ, ಪುರುಷಾಧಿಕಾರ, ಸಾಮಾಜಿಕ ಅಸಮಾನತೆ, ಸಂಪ್ರದಾಯಗಳು ಕಾರಣವಾದರೂ ಇದನ್ನು ಮೀರಿದ ಹಲವು ಸಂಗತಿಗಳಿವೆ ಎಂಬುದನ್ನು ಕಂಡುಕೊಳ್ಳುವ ಹಂಬಲ ಇಲ್ಲಿನದಾಗಿದೆ.

ಲಿಂಗತಾರತಮ್ಯಕ್ಕೆ ಕಾರಣವಾಗುವ ಸಂಗತಿಗಳನ್ನು ಮತ್ತು ಇಂದು ರಾಜಕೀಯ ಸಾಮಾಜೀಕರಣಕ್ಕೆ ಕಾರಣವಾದ, ರಾಜಕೀಯ ಭಾಗವಹಿಸುವಿಕೆಗೆ ಪೂರಕವಾದ ಸೂಕ್ಷ್ಮಗಳನ್ನು ಅಧ್ಯಾಯದಲ್ಲಿ ವಿಸ್ತೃತ ಅಂಕಿ ಅಂಶಗಳ ಮೂಲಕ ಗುರುತಿಸಲು ಪ್ರಯತ್ನಿಸಲಾಗಿದೆ. ಆ ಮೂಲಕ ಚುನಾಯಿತ ಮಹಿಳೆಯರು ಸ್ಥಿರೀಕರಣಗೊಂಡ ಲಿಂಗಶಾಹಿ ಮತ್ತು ಸಂಪ್ರದಾಯವಾದಿ ನೆಲೆಗಳನ್ನು ಒಪ್ಪಿಕೊಳ್ಳುವ ಹಾಗೂ ಮೀರುವ ಅಂಶಗಳನ್ನು ಪತ್ತೆ ಹಚ್ಚಲಾಗಿದೆ.

ಉಪಕರಣವಾದಿ ಅಧ್ಯಯನ ವಿಧಾನವು ಮಹಿಳೆಯರನ್ನು 'ವಸ್ತು'ವನ್ನಾಗಿ ಪರಿಭಾವಿಸುವ ಮೂಲಕ ಏಕಾಕಾರವಾದ ಲಿಂಗಶಾಹೀ ತತ್ವದ ಮೇಲೆ ನಿರ್ಜೀವಿಗಳನ್ನಾಗಿ ಗ್ರಹಿಸುತ್ತದೆ. ಇದರಿಂದ ಮಹಿಳಾ ಪರವಾದ ಬಹುಮುಖಿ ಸಂವೇದನೆಗಳು ಕಳೆದು ಹೋಗುತ್ತವೆ. ಬದಲಾಗಿ ಅವರ ಬದುಕಿನೊಡನೆ ಬೆರೆಯುವ ಮೂಲಕ ಸಮಸ್ಯೆಗೆ ಮೂಲವಾದ ಹಲವಾರು ಸಂಗತಿಗಳನ್ನು ಕಂಡುಕೊಂಡು ಅದಕ್ಕೊಂದು ಸಾಂಸ್ಕೃತಿಕ ಆಯಾಮವನ್ನು ತಂದುಕೊಳ್ಳಲಾಗಿದೆ. ಮಹಿಳೆಯಾದ ನನಗೆ ಒಮ್ಮೊಮ್ಮೆ ಈ ಬೆರೆಯುವಿಕೆ ಕಷ್ಟವಾದರೂ ಹೆಚ್ಚಿನ ಸಂದರ್ಭದಲ್ಲಿ ಉಪಯುಕ್ತವಾಗಿದೆ. ಹೀಗಾಗಿ ಹಲವಾರು ಖಚಿತವಾದ ಮತ್ತು ಸೂಕ್ಷ್ಮವಾದ ಅಂಶಗಳು ಇದರಿಂದ ನನಗೆ ದಕ್ಕಿವೆ. ಅಧಿಕಾರ, ಅವಕಾಶಗಳು ಸಿಕ್ಕರೂ ಅದನ್ನು ತನ್ನದಾಗಿಸಿಕೊಳ್ಳುವಲ್ಲಿ ಇರುವ ಅಡಚಣೆಗಳನ್ನು, ಪರಿಹಾರಗಳನ್ನು, ವಿಭಿನ್ನವಾಗಿ ಗುರುತಿಸಿಕೊಳ್ಳಲು ಈ ಅಧ್ಯಾಯದಲ್ಲಿ ಸೂಕ್ತವೇದಿಕೆ ದೊರಕಿದೆ.

ಕೋಷ್ಟಕ ೧.೧

ಚುನಾಯಿತ ಮಹಿಳೆಯರ ಜಾತಿ ಪಂಗಡದ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸಾಮಾನ್ಯ ಕ್ಷೇತ್ರ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ ಎ	ಹಿಂದುಳಿದ ವರ್ಗ ಬಿ	ಒಟ್ಟು
೦೧	ಮಲಪನಗುಡಿ	೧	೨	೨	೨	--	೭
೦೨.	ರಾಮಸಾಗರ	೨	೧	೧	೨	--	೬
೦೩.	ದೇವಲಾಪುರ	೨	೧	೧	೨	--	೬
೦೪.	ದೇವಸಮುದ್ರ	೨	೧	೧	೨	--	೬
೦೫.	ಮೆಟ್ರಿ	--	೧	೨	೩	--	೬
೦೬.	ಸೀತಾರಾಂ ತಾಂಡ	--	೨	--	--	--	೨
೦೭.	ಹಂಪಿ	೧	೧	೧	೧	--	೪
೦೮.	ಬುಕ್ಕಸಾಗರ	೧	೨	೧	೨	--	೬
೦೯.	ಜಿ.ನಾಗಲಾಪುರ	--	೨	೨	೨	--	೬
೧೦.	ಚಿಲಕನಹಟ್ಟಿ	--	೩	೨	೨	--	೭
೧೧.	೧೧ಳ ಡಣಾಪುರ	೨	೩	೨	೨	--	೯
೧೨.	ಡಣಾಯಕನ ಕೆರೆ	೧	೧	೧	೧	--	೪
೧೩.	ಸುಗ್ಗೇನಹಳ್ಳಿ	೧	೧	೧	೨	--	೫
೧೪.	ಹಂಪಾದೇವನಹಳ್ಳಿ	--	೨	೧	೩	--	೬
೧೫.	ಪಾಪಿನಾಯಕನಹಳ್ಳಿ	೨	೨	೧	೨	--	೭
೧೬.	ಕಲ್ಲಳ್ಳಿ	--	೧	೧	೧	--	೩
೧೭.	ನಾಗೇನಹಳ್ಳಿ	೧	೨	೧	೨	--	೬
೧೮.	ಬೈಲುವದ್ದಿಗೇರಿ	೨	೧	೧	೨	--	೬
೧೯.	ನಂ.೧೦ ಮುದ್ದಾಪುರ	೩	೧	--	೨	--	೬
೨೦.	ಸಣಾಪುರ	೨	೨	೧	೨	--	೭
೨೧.	ಮರಿಯಮ್ಮನಹಳ್ಳಿ	೩	೩	೨	೩	೧	೧೨
೨೨.	ಗಾದಿಗನೂರು	೨	೧	೧	೨	--	೬
೨೩.	ಹೊಸೂರು	--	೧	೩	೧	--	೫
	ಒಟ್ಟು	೨೮	೩೭	೨೯	೪೩	೧	೧೩೮
	ಶೇಕಡ	೨೦.೨೮	೨೬.೮೧	೨೧	೩೧.೧೫	೦.೭೨	೧೦೦

ಕೋಷ್ಟಕ ೧.೨

ಚುನಾಯಿತ ಮಹಿಳೆಯರ ಜಾತಿ ಪಂಗಡದ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸಾಮಾನ್ಯ ಕ್ಷೇತ್ರ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ- ಎ	ಹಿಂದುಳಿದ ವರ್ಗ- ಬಿ	ಒಟ್ಟು
೦೧.	ಮೆಟ್ರಿಕಿ	೩	೧	೧	೨	--	೭
೦೨.	ವಿಠಲಾಪುರ	೨	೧	೧	೨	--	೬
೦೩.	ಅಂತಾಪುರ	೨	೧	೧	೨	--	೬
೦೪.	ವಡ್ಡು	೩	೧	೨	೨	--	೮
೦೫.	ದರೋಜಿ	೨	೨	೧	೨	೧	೮
೦೬.	ಕುರೇಕುಪ್ಪ	೪	೧	೧	೨	೧	೯
೦೭.	ತೋರಣಗಲ್ಲು	೨	೧	೧	೨	--	೬
೦೮.	ಕಾಳಿಂಗೇರಿ	೧	೧	೨	೨	--	೬
೦೯.	ಜಿ.ಎಲ್.ಹಳ್ಳಿ	೧	೧	೨	೨	--	೬
೧೦.	ಬೊಮ್ಮಗಟ್ಟ	೨	೨	೩	೨	೧	೧೦
೧೧.	ಸೋವೆನಹಳ್ಳಿ	೧	೧	೨	೨	--	೬
೧೨.	ಚೋರನೂರು	೨	೧	೨	೨	--	೭
೧೩.	ನಿಡಗುರ್ತಿ	೩	೧	೨	೨	--	೮
೧೪.	ಬಂಡ್ರಿ	೧	೧	೩	೨	--	೭
೧೫.	ತಾರಾನಗರ	೨	೧	೩	೨	--	೮
೧೬.	ಕೃಷ್ಣನಗರ	೩	೧	೧	೨	--	೭
೧೭.	ನರಸಿಂಗಪುರ	೫	೨	೧	೨	೧	೧೧
೧೮.	ಭುಜಂಗನಗರ	೨	೧	೧	೧	೧	೬
೧೯.	ದೇವಗಿರಿ	೨	೧	೧	೨	--	೬
೨೦.	ಯಶವಂತನಗರ	೨	೧	೧	೨	--	೬
೨೧.	ಸುಶೀಲಾನಗರ	--	೨	೨	೨	--	೭
	ಒಟ್ಟು	೪೫	೨೬	೩೪	೪೧	೫	೧೫೧
	ಶೇಕಡ	೨೯.೮೦	೧೭.೨೧	೨೨.೫೧	೨೭.೧೫	೩.೩೧	೧೦೦

[illegible]

ಕೋಷ್ಟಕ ೧.೧., ಇದು ಹೊಸಪೇಟೆ ತಾಲೂಕಿನ ಗ್ರಾಮಪಂಚಾಯತಿಗಳ ಕೋಷ್ಟಕ. ೧.೨. ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳ ಚುನಾಯಿತ ಮಹಿಳೆಯರ ಜಾತಿ ಪಂಗಡದ ವಿವರಗಳನ್ನು ತಿಳಿಸುತ್ತವೆ. ಈ ಅಂಕಿ ಅಂಶಗಳ ಪ್ರಕಾರ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿ ಯಲ್ಲಿ ಸಾಮಾನ್ಯ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.[illegible]೧.೨೮, ಪರಿಶಿಷ್ಟ ಜಾತಿಯಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೨೬.೮೧, ಪರಿಶಿಷ್ಟ ಪಂಗಡದಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೨೦, ಹಿಂದುಳಿದ ವರ್ಗ ಎ ಗುಂಪಿನಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೩೧.೧೫. ಹಿಂದುಳಿದ ವರ್ಗ ಬಿ ಗುಂಪಿನಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೦.೭೨ ರಷ್ಟಿದ್ದಾರೆ.

ಕೋಷ್ಟಕ ೧.೨. ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಯಲ್ಲಿ ಸಾಮಾನ್ಯ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೨೯.೮೦, ಪರಿಶಿಷ್ಟ ಜಾತಿಯಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೧೬.೨೧, ಪರಿಶಿಷ್ಟ ಪಂಗಡದಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೨೨.೫೧, ಹಿಂದುಳಿದ ವರ್ಗ ಎ ಗುಂಪಿನಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೨೬.೧೫, ಹಿಂದುಳಿದ ವರ್ಗ ಬಿ ಗುಂಪಿನಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೩೩.೧೧ ರಷ್ಟಿರುವುದು ಕಂಡುಬರುತ್ತದೆ.

ಎರಡೂ ತಾಲೂಕುಗಳ ಗ್ರಾಮಪಂಚಾಯ್ತಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಸಾಮಾನ್ಯ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರ ಸಂಖ್ಯೆಯು ಹೊಸಪೇಟೆಗಿಂತ ಸಂಡೂರಿನಲ್ಲಿ ಹೆಚ್ಚಾಗಿದೆ. ಪರಿಶಿಷ್ಟ ಜಾತಿಯಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರ ಸಂಖ್ಯೆಯು ಸಂಡೂರಿಗಿಂತ ಹೊಸಪೇಟೆಯಲ್ಲಿ ಹೆಚ್ಚಾಗಿದೆ. ಪರಿಶಿಷ್ಟ ಪಂಗಡದಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರ ಸಂಖ್ಯೆಯು ಹೊಸಪೇಟೆಗಿಂತ ಸಂಡೂರಿನಲ್ಲಿ ಹೆಚ್ಚಾಗಿದೆ. ಹಿಂದುಳಿದ ವರ್ಗ ಎ ಗುಂಪಿನಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರ ಸಂಖ್ಯೆಯು ಸಂಡೂರಿಗಿಂತ ಹೊಸಪೇಟೆಯಲ್ಲಿ ಹೆಚ್ಚಾಗಿರುವುದು ಕಂಡುಬಂದಿದೆ. ಹಿಂದುಳಿದ ವರ್ಗ ಬಿ ಗುಂಪಿನಲ್ಲಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರ ಸಂಖ್ಯೆಯು ಹೊಸಪೇಟೆ ತಾಲೂಕಿನ ಗ್ರಾಮಪಂಚಾಯತಿಗಳಿಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಅಧಿಕವಾಗಿರುವುದು ದೊರೆತಿರುವ ಅಂಕಿ ಅಂಶಗಳಿಂದ ಗೋಚರವಾಗುತ್ತದೆ.

ಕೋಷ್ಟಕ ೨.೧

ಚುನಾಯಿತ ಮಹಿಳೆಯರ ಸಾಕ್ಷರತೆ ಪ್ರಮಾಣ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಪ್ರಾಥಮಿಕ	ಮಾಧ್ಯಮಿಕ	ಪ್ರೌಢ	ಪದವಿ ಪೂರ್ವ	ಪದವಿ	ಸ್ನಾತ ಕೋತ್ತರ	ಅನಕ್ಷರರು	ಅಕ್ಷರಸ್ಥರು	ಒಟ್ಟು
೦೧	ಮಲಪನಗುಡಿ	--	--	--	--	--	--	೭	--	೭
೦೨	ರಾಮಸಾಗರ	೨	೧	೧	--	--	--	೨	--	೬
೦೩.	ದೇವಲಾಪುರ	--	೧	--	--	--	--	೫	--	೬
೦೪.	ದೇವಸಮುದ್ರ	--	--	--	--	--	--	೬	--	೬
೦೫.	ಮೆಟ್ರಿ	--	--	--	--	--	--	೬	--	೬
೦೬.	ಸೀತಾರಾಂತಾಂಡ	--	--	--	--	--	--	೨	--	೨
೦೭.	ಹಂಪಿ	--	--	೧	--	--	--	೩	--	೪
೦೮.	ಬುಕ್ಕಸಾಗರ	--	--	--	--	--	--	೬	--	೬
೦೯.	ಜಿ.ನಾಗಲಾಪುರ	೧	--	--	--	--	--	೫	--	೬
೧೦.	ಚಿಲಕನಹಟ್ಟಿ	೧	೧	--	--	--	--	೫	--	೭
೧೧.	೧೧೪ ಡಣಾಪುರ	೨	೧	೧	--	--	--	೫	--	೯
೧೨.	ಡಣಾಯಕನ ಕೆರೆ	೧	೨	೧	--	--	--	--	--	೪
೧೩.	ಸುಗ್ಗೇನಹಳ್ಳಿ	೧	--	--	--	--	--	೪	--	೫
೧೪.	ಹಂಪಾದೇವನಹಳ್ಳಿ	೫	೧	--	--	--	--	--	--	೬
೧೫.	ಪಾಪಿನಾಯಕನಹಳ್ಳಿ	--	--	--	--	--	--	೭	--	೭
೧೬.	ಕಲ್ಲಳ್ಳಿ	೩	--	--	--	--	--	--	--	೩
೧೭.	ನಾಗೇನಹಳ್ಳಿ	೧	--	೧	--	--	--	೪	--	೬
೧೮.	ಜೈಲುವದ್ದಿಗೇರಿ	೧	--	೧	--	--	--	೪	--	೬
೧೯.	ನಂ.೧೦ ಮುದ್ದಾಪುರ	--	--	೧	--	--	--	೫	--	೬
೨೦.	ಸಣಾಪುರ	--	೧	--	--	--	--	೬	--	೭
೨೧.	ಮರಿಯಮ್ಮನಹಳ್ಳಿ	--	೩	೩	೧	--	--	೫	--	೧೨
೨೨.	ಗಾದಿಗನೂರು	--	೧	--	--	--	--	೫	--	೬
೨೩.	ಹೊಸೂರು	--	೨	--	--	--	--	೩	--	೫
	ಒಟ್ಟು	೧೭	೧೫	೧೦	೧	--	--	೯೫	--	೧೩೮
	ಶೇಕಡ	೧೨.೩೧	೧೦.೮೬	೭೨.೪೬	--	--	೦.೭೨	--	೬೮.೮೪	೧೦೦

ಕೋಷ್ಟಕ ೨.೨

ಚುನಾಯಿತ ಮಹಿಳೆಯರ ಸಾಕ್ಷರತೆಯ ಪ್ರಮಾಣ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಪ್ರಾಥಮಿಕ	ಮಾಧ್ಯಮಿಕ	ಪ್ರೌಢ	ಪದವಿ ಪೂರ್ವ	ಪದವಿ	ಸ್ನಾತಕೋತ್ತರ	ಅನಕ್ಷರರು	ಅಕ್ಷರಸ್ಥರು	ಒಟ್ಟು
೦೧.	ಮೆಟ್ರಿಕಿ	--	೨	೧	--	--	--	೪	--	೭
೦೨.	ವಿಠಲಾಪುರ	೨	--	--	--	--	--	೪	--	೬
೦೩.	ಅಂತಾಪುರ	೧	--	--	--	--	--	೫	--	೬
೦೪.	ವಡ್ಡು	೨	೨	೧	--	--	--	೩	--	೮
೦೫.	ದರೋಜಿ	೧	--	೧	--	--	--	೪	೨	೮
೦೬.	ಕುರೇಕುಪ್ಪ	--	೧	೧	--	೧	--	೬	--	೯
೦೭.	ತೋರಣಗಲ್ಲು	೨	೨	೨	--	--	--	--	--	೬
೦೮.	ಕಾಳಿಂಗೇರಿ	೪	೧	೧	--	--	--	--	--	೬
೦೯.	ಜಿ.ಎಲ್.ಹಳ್ಳಿ	--	--	೧	--	--	--	೩	೨	೬
೧೦.	ಬೊಮ್ಮಗಟ್ಟ	೬	೧	೩	--	--	--	--	--	೧೦
೧೧.	ಸೋವೆನಹಳ್ಳಿ	೪	--	೧	--	--	--	೧	--	೬
೧೨.	ಚೋರನೂರು	೧	೧	೧	--	--	--	೪	--	೭
೧೩.	ನಿಡಗುರ್ತಿ	೪	--	--	--	--	--	೪	--	೮
೧೪.	ಬಂಡ್ರಿ	--	೧	೧	--	--	--	೪	೧	೭
೧೫.	ತಾರಾನಗರ	--	೧	೧	--	--	--	೨	೪	೮
೧೬.	ಕೃಷ್ಣನಗರ	--	೧	--	--	--	--	--	೬	೭
೧೭.	ನರಸಿಂಗಪುರ	೨	೩	೪	೧	೧	--	--	--	೧೧
೧೮.	ಭುಜಂಗನಗರ	--	೨	--	೧	೧	--	೧	೧	೬
೧೯.	ದೇವಗಿರಿ	೧	--	೨	೧	--	--	--	೨	೬
೨೦.	ಯಶವಂತನಗರ	೨	೧	೨	--	--	--	೧	--	೬
೨೧.	ಸುಶೀಲಾನಗರ	೩	೨	೧	--	೧	--	--	೭	
	ಒಟ್ಟು	೩೫	೨೧	೨೪	೩	೪	--	೫೨	೧೨	೧೫೧
	ಶೇಕಡ	೨೩.೧೭	೧೩.೯೦	೧೫.೮೯	೧.೯೮	೨.೬೪	--	೩೪.೪೩	೭.೯೪	೧೦೦

ಕೋಷ್ಟಕ ೨.೧ ಮತ್ತು ೨.೨.ರಲ್ಲಿ ಚುನಾಯಿತ ಮಹಿಳೆಯರ ಸಾಕ್ಷರತೆ ಮತ್ತು ಅನಕ್ಷರತೆಯ ಪ್ರಮಾಣವನ್ನು ತಿಳಿಸುತ್ತದೆ. ಕೋಷ್ಟಕ ೨.೧ರಲ್ಲಿ ತಿಳಿಸಿರುವಂತೆ ಚುನಾಯಿತ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಚುನಾಯಿತ ಮಹಿಳೆಯರು ಶೇ.೧೨.೩೧ ರಷ್ಟಿದ್ದರೆ, ಮಾಧ್ಯಮಿಕ ಶಿಕ್ಷಣ ಪಡೆದವರು ಶೇ.೧೦.೮೬ ರಷ್ಟು ಇದ್ದಾರೆ. ಪ್ರೌಢ ಹಂತದಲ್ಲಿ ಕಲಿತಿರುವ ಚುನಾಯಿತ ಮಹಿಳೆಯರು ಶೇ.೭೨.೪೬ ರಷ್ಟಿದ್ದರೆ, ಪದವಿ ಪೂರ್ವ ಶಿಕ್ಷಣ ಪಡೆದಿರುವ ಚುನಾಯಿತ ಮಹಿಳೆಯರು ಶೇ.೦.೭೨ ರಷ್ಟಿದ್ದಾರೆ. ಅನಕ್ಷರಸ್ಥ ಮಹಿಳೆಯರು ಶೇ.೬೮.೮೪ ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೨.೨.ರಲ್ಲಿ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಚುನಾಯಿತ ಮಹಿಳೆಯರು ಶೇ.೨೩.೧೭ ರಷ್ಟಿದ್ದರೆ, ಮಾಧ್ಯಮಿಕ ಶಿಕ್ಷಣ ಪಡೆದಿರುವ ಚುನಾಯಿತ ಮಹಿಳೆಯರು ಶೇ.೧೩.೯೦ ರಷ್ಟಿದ್ದಾರೆ. ಪ್ರೌಢ ಹಂತದಲ್ಲಿ ಕಲಿತ ಚುನಾಯಿತ ಮಹಿಳೆಯರು ಶೇ.೧೫.೮೯ ರಷ್ಟಿದ್ದರೆ, ಪದವಿಪೂರ್ವದಲ್ಲಿ ಶಿಕ್ಷಣ ಪಡೆದಿರುವ ಚುನಾಯಿತ ಮಹಿಳೆಯರು ಶೇ.೧.೯೮ ರಷ್ಟು ಇರುವರು. ಪದವಿಯಲ್ಲಿ ಶಿಕ್ಷಣ ಪಡೆದ ಚುನಾಯಿತ ಮಹಿಳೆಯರು ಶೇ.೨.೬೪ ರಷ್ಟಿದ್ದಾರೆ. ಅನಕ್ಷರಸ್ಥ ಚುನಾಯಿತ ಮಹಿಳೆಯರು ಶೇ.೩೪.೪೩ ರಷ್ಟಿದ್ದರೆ, ಸಹಿ ಮಾಡಲು ಮಾತ್ರ ಕಲಿತಿರುವ ಚುನಾಯಿತ ಮಹಿಳೆಯರು ಶೇ.೭.೯೪ ರಷ್ಟಿರುವುದು ತಿಳಿದುಬರುತ್ತದೆ.

ಎರಡೂ ತಾಲೂಕು ಗ್ರಾಮಪಂಚಾಯಿತಿಗಳನ್ನು ತೌಲನಿಕವಾಗಿ ನೋಡಿದಾಗ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಕಲಿತ ಚುನಾಯಿತ ಮಹಿಳೆಯರ ಸಂಖ್ಯೆ ಹೊಸಪೇಟೆಗಿಂತ ಸಂಡೂರಿನ ಗ್ರಾಮಪಂಚಾಯತಿಗಳಲ್ಲಿ ಹೆಚ್ಚಾಗಿದೆ. ಪ್ರೌಢ ಹಂತದಲ್ಲಿ ಕಲಿತ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆಯಲ್ಲಿ ಹೆಚ್ಚಾಗಿರುವುದು ಕಾಣಿಸುತ್ತದೆ. ಪದವಿಪೂರ್ವ ಶಿಕ್ಷಣ ಪಡೆದ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರಿನಲ್ಲಿ ಹೆಚ್ಚಾಗಿದ್ದಾರೆ. ಪದವಿ ಶಿಕ್ಷಣ ಪಡೆದ ಚುನಾಯಿತ ಮಹಿಳೆಯರು ಸಂಡೂರಿನಲ್ಲಿ ಮಾತ್ರ ಕಾಣಿಸುತ್ತಾರೆ. ಅನಕ್ಷರಸ್ಥ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆಯಲ್ಲಿ ಹೆಚ್ಚಾಗಿದ್ದಾರೆ. ಅಕ್ಷರಸ್ಥ ಚುನಾಯಿತ ಮಹಿಳೆಯರು ಅಂದರೆ ಸಹಿ ಮಾಡಲು ಮಾತ್ರ ಕಲಿತವರು ಸಂಡೂರಿನಲ್ಲಿ ಮಾತ್ರ ಕಾಣಸಿಗುತ್ತಾರೆ. ಸ್ನಾತಕೋತ್ತರ ಶಿಕ್ಷಣ ಪಡೆದವರು ಎರಡೂ ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಇಲ್ಲವೇ ಇಲ್ಲ.

ಹೊಸಪೇಟೆಯ ಗ್ರಾಮಪಂಚಾಯಿತಿಯಲ್ಲಿ ಚುನಾಯಿತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಒಟ್ಟು ೩೧.೧೫ ರಷ್ಟಿದ್ದರೆ, ಸಂಡೂರಿನಲ್ಲಿ ಶೇ.೫೭.೬ರಷ್ಟಿದೆ. ಹಾಗೆಯೇ ಅನಕ್ಷರಸ್ಥ ಚುನಾಯಿತ ಮಹಿಳೆಯರ ಪ್ರಮಾಣವು ಹೊಸಪೇಟೆಯಲ್ಲಿ ಶೇ.೬೮.೮೪ರಷ್ಟಿದೆ. ಸಂಡೂರಿನಲ್ಲಿ ಅಕ್ಷರಸ್ಥೆಯರನ್ನೂ (ಅಕ್ಷರಸ್ಥೆಯರು ಸಹಿ ಮಾಡಲು ಮಾತ್ರ ಕಲಿತವರಾಗಿರುವುದರಿಂದ) ಅನಕ್ಷರಸ್ಥ ಚುನಾಯಿತ ಮಹಿಳೆಯರ ಗುಂಪಿಗೆ ಸೇರಿಸಿದಾಗ ಅನಕ್ಷರಸ್ಥೆಯರು ಶೇ.೪೨.೩೮ ರಷ್ಟಿರುವುದು ಗೋಚರಿಸುತ್ತದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಯ ಚುನಾಯಿತ ಮಹಿಳೆಯರಲ್ಲಿ ಸಾಕ್ಷರತೆಯು ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಂಡುಬರುತ್ತದೆ.

ಕೋಷ್ಟಕ ೩.೧

ಚುನಾಯಿತ ಮಹಿಳೆಯರ ವಯಸ್ಸಿನ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	೨೦-೨೯	೩೦-೩೯	೪೦-೪೯	೫೦-೫೯	೬೦-೬೯	೭೦-೭೯	೮೦-೮೯	ಒಟ್ಟು
೦೧.	ಮಲಪನಗುಡಿ	೧	--	೬	--	--	--	--	೭
೦೨.	ರಾಮಸಾಗರ	೧	೧	೪	--	--	--	--	೬
೦೩.	ದೇವಲಾಪುರ	--	೪	೨	--	--	--	--	೬
೦೪.	ದೇವಸಮುದ್ರ	--	೪	೧	೧	--	--	--	೬
೦೫.	ಮೆಟ್ರಿ	--	೩	೧	೨	--	--	--	೬
೦೬.	ಸೀತಾರಾಂ ತಾಂಡ	--	--	೧	--	--	೧	--	೨
೦೭.	ಹಂಪಿ	೨	೨	--	--	--	--	--	೪
೦೮.	ಬುಕ್ಕಸಾಗರ	--	೨	೨	೧	೧	--	--	೬
೦೯.	ಜಿ.ನಾಗಲಾಪುರ	೧	೧	೨	೨	--	--	--	೬
೧೦.	ಚಿಲಕನಹಟ್ಟಿ	೧	೧	೨	೧	೧	--	--	೬
೧೧.	೧೧೪ ಡಣಾಪುರ	೧	೬	೨	--	--	--	--	೯
೧೨.	ಡಣಾಯಕನ ಕೆರೆ	೧	೧	೨	--	--	--	--	೪
೧೩.	ಸುಗ್ಗೇನಹಳ್ಳಿ	--	೩	೨	--	--	--	--	೫
೧೪.	ಹಂಪಾದೇವನಹಳ್ಳಿ	೧	೨	೨	೧	--	--	--	೬
೧೫.	ಪಾಪಿನಾಯಕನಹಳ್ಳಿ	--	೧	೨	೩	--	--	೧	೭
೧೬.	ಕಲ್ಲಳ್ಳಿ	--	೩	--	--	--	--	--	೩
೧೭.	ನಾಗೇನಹಳ್ಳಿ	೧	೨	೨	೧	--	--	--	೬
೧೮.	ಬೈಲುವದ್ದಿಗೇರಿ	೧	೨	೩	--	--	--	--	೬
೧೯.	ನಂ.೧೦ ಮುದ್ದಾಪುರ	--	೨	೩	೧	--	--	--	೬
೨೦.	ಸಣಾಪುರ	೨	೧	೩	೧	--	--	--	೭
೨೧.	ಮರಿಯಮ್ಮನಹಳ್ಳಿ	೪	೫	೨	೧	--	--	--	೧೨
೨೨.	ಗಾದಿಗನೂರು	೧	೪	--	--	೧	--	--	೬
೨೩.	ಹೊಸೂರು	--	೨	೩	--	--	--	--	೫
	ಒಟ್ಟು	೧೮	೫೩	೪೭	೧೫	೩	೧	೧	೧೩೮
	ಶೇಕಡ	೧೩	೩೮.೪೦	೩೪	೧೦.೮೬	೨.೧೭	೦.೭೨	೦.೭೨	೧೦೦

ಕೋಷ್ಟಕ ೩.೨

ಚುನಾಯಿತ ಮಹಿಳೆಯರ ವಯಸ್ಸಿನ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	೨೦-೨೯	೩೦-೩೯	೪೦-೪೯	೫೦-೫೯	೬೦-೬೯	೭೦-೭೯	೮೦-೮೯	ಒಟ್ಟು
೦೧.	ಮೆಟ್ರಿಕಿ	೨	೨	೧	೨	--	--	--	೭
೦೨.	ವಿಠಲಾಪುರ	-	೫	೧	--	--	--	--	೬
೦೩.	ಅಂತಾಪುರ	೧	೪	೧	--	--	--	--	೬
೦೪.	ವಡ್ಡು	೪	-	೩	೧	--	--	--	೮
೦೫.	ದರೋಜಿ	--	೩	೩	೧	--	೧	--	೮
೦೬.	ಕುರೇಕುಪ್ಪ	೨	೫	೨	--	--	--	--	೯
೦೭.	ತೋರಣಗಲ್ಲು	೨	೨	೧	--	೧	--	--	೬
೦೮.	ಕಾಳಿಂಗೇರಿ	೨	೪	--	--	--	--	--	೬
೦೯.	ಜಿ.ಎಲ್.ಹಳ್ಳಿ	೧	೧	೩	೧	--	--	--	೬
೧೦.	ಬೊಮ್ಮಗಟ್ಟ	೨	೩	೪	೧	--	--	--	೬
೧೧.	ಸೋವೆನಹಳ್ಳಿ	೧	೩	೧	೧	--	--	--	೧೦
೧೨.	ಚೋರನೂರು	೨	೧	೧	೩	--	--	--	೭
೧೩.	ನಿಡಗುರ್ತಿ	೧	೫	೨	--	--	--	--	೮
೧೪.	ಬಂಡ್ರಿ	೧	೧	೫	--	--	--	--	೭
೧೫.	ತಾರಾನಗರ	೩	೩	೧	--	೧	--	--	೮
೧೬.	ಕೃಷ್ಣನಗರ	೨	೧	೧	೩	--	--	--	೭
೧೭.	ನರಸಿಂಗಪುರ	೨	೭	೨	--	--	--	--	೧೧
೧೮.	ಭುಜಂಗನಗರ	೨	೩	--	--	೧	--	--	೬
೧೯.	ದೇವಗಿರಿ	--	೩	೧	೧	೧	--	--	೬
೨೦.	ಯಶವಂತನಗರ	೨	೩	--	೧	--	--	--	೬
೨೧.	ಸುಶೀಲಾನಗರ	೧	೬	--	--	--	--	--	೭
	ಒಟ್ಟು	೩೩	೬೫	೩೩	೧೫	೪	೧	--	೧೫೧
	ಶೇಕಡ	೨೧.೮೫	೪೩	೨೧.೮೫	೯.೯೩	೨.೬೪	೦.೬೬	--	೧೦೦

ಕೋಷ್ಟಕ ೩.೧. ಮತ್ತು ೩.೨. ಚುನಾಯಿತ ಮಹಿಳೆಯರ ವಯಸ್ಸನ್ನು ವಿವರಿಸುತ್ತವೆ. ಚುನಾಯಿತ ಮಹಿಳೆಯರ ವಯಸ್ಸನ್ನು ೭ ಗುಂಪುಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ದೊರೆತಿರುವ ಅಂಕಿ ಅಂಶಗಳ ಪ್ರಕಾರ ಕೋಷ್ಟಕ ಮೂರರಲ್ಲಿ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ೨೦-೨೯ ವಯಸ್ಸಿನ ನಡುವೆ ಇರುವ ಚುನಾಯಿತ ಮಹಿಳೆಯರು ಶೇ.೧೩ ರಷ್ಟು, ೩೦-೩೯ ವಯಸ್ಸಿನ ನಡುವೆ ಇರುವವರು ಶೇ. ೩೮.೪೦ ರಷ್ಟು, ೪೦-೪೯ ವಯಸ್ಸಿನ ನಡುವೆ ಇರುವ ಚುನಾಯಿತ ಮಹಿಳೆಯರು ಶೇ.೩೪ ರಷ್ಟು ಇರುವುದು ಕಾಣಿಸುತ್ತದೆ. ೫೦-೫೯ರ ನಡುವಿನ ವಯಸ್ಸಿನ ಚುನಾಯಿತ ಮಹಿಳೆಯರು ಶೇ.೧೧.೮೬ ರಷ್ಟು, ೬೦-೬೯ರ ನಡುವಿನ ವಯಸ್ಸಿನ ಚುನಾಯಿತ ಮಹಿಳೆಯರು ಶೇ.೨.೧೭ ರಷ್ಟು, ೭೦-೭೯ರ ನಡುವಿನ ವಯಸ್ಸಿನವರು ಶೇ.೦.೭೨ ರಷ್ಟು ಹಾಗೂ ೮೦-೮೯ರ ನಡುವಿನ ವಯಸ್ಸಿನ ಚುನಾಯಿತ ಮಹಿಳೆಯರು ಶೇ.೦.೭೨ ರಷ್ಟಿದ್ದಾರೆ.

ಕೋಷ್ಟಕ ೩.೨. ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ೨೦ ರಿಂದ ೨೯ ವಯೋಮಾನದ ಚುನಾಯಿತ ಮಹಿಳೆಯರು ಶೇ.೨೧.೮೫ ರಷ್ಟು, ೩೦ ರಿಂದ ೩೯ ವಯೋಮಾನದ ಚುನಾಯಿತ ಮಹಿಳೆಯರು ಶೇ.೪೩ ರಷ್ಟು, ೪೦ ರಿಂದ ೪೯ ವಯಸ್ಸಿನ ಚುನಾಯಿತ ಮಹಿಳೆಯರು ಶೇ.೨೧.೮೫ ರಷ್ಟು ಹಾಗೂ ೫೦ ರಿಂದ ೫೯ ವಯೋಮಾನದ ಚುನಾಯಿತ ಮಹಿಳೆಯರು ಶೇ.೯.೯೩ ರಷ್ಟಿದ್ದಾರೆ. ೬೦ ರಿಂದ ೬೯ ವಯಸ್ಸಿನ ಚುನಾಯಿತ ಮಹಿಳೆಯರು ಶೇ.೨.೬೪ ರಷ್ಟು ಮತ್ತು ೭೦ ರಿಂದ ೭೯ರ ನಡುವಿನ ವಯೋಮಾನದ ಚುನಾಯಿತ ಮಹಿಳೆಯರು ಶೇ.೦.೬೬ ರಷ್ಟಿದ್ದಾರೆ. ೮೦ ರಿಂದ ೮೯ರ ವಯಸ್ಸಿನ ನಡುವೆ ಇರುವ ಮಹಿಳೆಯರು ಇಲ್ಲಿ ಇಲ್ಲ.

ಹೊಸಪೇಟೆಯನ್ನು ಸಂಡೂರಿನೊಂದಿಗೆ ತೌಲನಿಕವಾಗಿ ಅಭ್ಯಸಿಸಿದಾಗ ೨೦ ರಿಂದ ೨೯ ಹಾಗೂ ೩೦ ರಿಂದ ೩೯ ವಯಸ್ಸಿನ ನಡುವೆ ಇರುವ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಹೆಚ್ಚಾಗಿದ್ದಾರೆ. ೪೦ ರಿಂದ ೪೯, ೫೦ ರಿಂದ ೫೯, ೬೦ ರಿಂದ ೬೯, ೭೦ ರಿಂದ ೭೯ ವಯಸ್ಸಿನ ನಡುವೆ ಇರುವ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೪.೧

ಚುನಾಯಿತ ಸದಸ್ಯೆಯರ ವೈವಾಹಿಕ ವಿವರಗಳು

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ವಿವಾಹಿತರು	ವಿಧವೆ ಯರು	ದೇವದಾಸಿ ಯರು	ವಿಚ್ಛೇದಿತರು	ಒಟ್ಟು
೦೧	ಮಲಪನಗುಡಿ	೭	--	--	--	೭
೦೨.	ರಾಮಸಾಗರ	೫	--	--	೧	೬
೦೩.	ದೇವಲಾಪುರ	೬	--	--	--	೬
೦೪.	ದೇವಸಮುದ್ರ	೫	೧	--	--	೬
೦೫.	ಮೆಟ್ರಿ	೫	೧	--	--	೬
೦೬.	ಸೀತಾರಾಂ ತಾಂಡ	೨	--	--	--	೨
೦೭.	ಹಂಪಿ	೨	೧	೧	--	೪
೦೮.	ಬುಕ್ಕಸಾಗರ	೨	೪	--	--	೬
೦೯.	ಜಿ.ನಾಗಲಾಪುರ	೬	--	--	--	೬
೧೦.	ಚಿಲಕನಹಟ್ಟಿ	೫	--	೨	--	೭
೧೧.	೧೧೪ ಡಣಾಪುರ	೭	--	೨	--	೯
೧೨.	ಡಣಾಯಕನ ಕೆರೆ	೧	--	೩	--	೪
೧೩.	ಸುಗ್ಗೇನಹಳ್ಳಿ	೪	--	೧	--	೫
೧೪.	ಹಂಪಾದೇವನಹಳ್ಳಿ	೬	--	--	--	೬
೧೫.	ಪಾಪಿನಾಯಕನಹಳ್ಳಿ	೫	೧	೧	--	೭
೧೬.	ಕಲ್ಲಳ್ಳಿ	೨	--	೧	--	೩
೧೭.	ನಾಗೇನಹಳ್ಳಿ	೪	೧	೧	--	೬
೧೮.	ಬೈಲುವದ್ದಿಗೇರಿ	೬	--	--	--	೬
೧೯.	ನಂ.೧೦ ಮುದ್ದಾಪುರ	೫	--	೧	--	೬
೨೦.	ಸಣಾಪುರ	೬	--	೧	--	೭
೨೧.	ಮರಿಯಮ್ಮನಹಳ್ಳಿ	೧೧	೧	--	--	೧೨
೨೨.	ಗಾದಿಗನೂರು	೬	--	--	--	೬
೨೩.	ಹೊಸೂರು	೫	--	--	--	೫
	ಒಟ್ಟು	೧೧೩	೧೦	೧೪	೧	೧೩೮
	ಶೇಕಡ	೮೧.೮೮	೭.೨೪	೧೦.೧೪	೦.೭೨	೧೦೦

ಕೋಷ್ಟಕ ೪.೨

ಚುನಾಯಿತ ಸದಸ್ಯೆಯರ ವೈವಾಹಿಕ ವಿವರಗಳು

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ವಿವಾಹಿತರು	ವಿಧವೆ ಯರು	ದೇವದಾಸಿ ಯರು	ವಿಚ್ಛೇದಿತರು	ಒಟ್ಟು
೦೧	ಮೆಟ್ರಿಕಿ	೭	--	--	--	೭
೦೨.	ವಿಠಲಾಪುರ	೫	೧	--	--	೬
೦೩.	ಅಂತಾಪುರ	೬	--	--	--	೬
೦೪.	ವಡ್ಡು	೬	೧	೧	--	೮
೦೫.	ದರೋಜಿ	೬.	೧	೧	--	೮
೦೬.	ಕುರೇಕುಪ್ಪ	೯	--	--	--	೯
೦೭.	ತೋರಣಗಲ್ಲು	೬	--	--	--	೬
೦೮.	ಕಾಳಿಂಗೇರಿ	೪	೨	--	--	೬
೦೯.	ಜಿ.ಎಲ್.ಹಳ್ಳಿ	೬	--	--	--	೬
೧೦.	ಬೊಮ್ಮಗಟ್ಟ	೯	೧	--	--	೧೦
೧೧.	ಸೋವೆನಹಳ್ಳಿ	೪	೨	--	--	೬
೧೨.	ಚೋರನೂರು	೬	೧	--	--	೭
೧೩.	ನಿಡಗುರ್ತಿ	೬	೧	೧	--	೮
೧೪.	ಬಂಡ್ರಿ	೭	--	--	--	೭
೧೫.	ತಾರಾನಗರ	೮	--	--	--	೮
೧೬.	ಕೃಷ್ಣನಗರ	೫	೨	--	--	೭
೧೭.	ನರಸಿಂಗಪುರ	೧೧	--	--	--	೧೧
೧೮.	ಭುಜಂಗನಗರ	೪	೧	೧	--	೬
೧೯.	ದೇವಗಿರಿ	೫	--	೧	--	೬
೨೦.	ಯಶವಂತನಗರ	೬	--	--	--	೬
೨೧.	ಸುಶೀಲಾನಗರ	೭	--	--	--	೭
	ಒಟ್ಟು	೧೩೬	೧೩	೫	--	೧೫೧
	ಶೇಕಡ	೯೦	೮.೬೦	೩.೩೧	--	೧೦೦

ಕೋಷ್ಟಕ ೪.೧. ಮತ್ತು ೪.೨. ಚುನಾಯಿತ ಮಹಿಳೆಯರ ವೈವಾಹಿಕ ವಿವರಗಳನ್ನು ತಿಳಿಸುತ್ತದೆ. ಇಲ್ಲಿರುವ ಅಂಕಿ ಅಂಶಗಳ ಪ್ರಕಾರ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ವಿವಾಹಿತ ಮಹಿಳೆಯರು ಶೇ.೮೧.೮೮ ರಷ್ಟು, ವಿಧವೆಯರಾದ ಚುನಾಯಿತ ಮಹಿಳೆಯರು ಶೇ.೭.೨೪, ದೇವದಾಸಿಯರಾದ ಚುನಾಯಿತ ಮಹಿಳೆಯರು ಶೇ.೧೦.೧೪ ಹಾಗೂ ಶೇ.೦.೭೨ ರಷ್ಟು ವಿಚ್ಛೇದಿತ ಮಹಿಳೆಯರಿರುವುದು ಕಾಣಬಂದಿದೆ.

ಕೋಷ್ಟಕ ೪.೨. ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಯಲ್ಲಿ ವಿವಾಹಿತೆಯರಾದ ಚುನಾಯಿತ ಮಹಿಳೆಯರು ಶೇ.೯೦ ರಷ್ಟು, ವಿಧವೆಯರಾದ ಚುನಾಯಿತ ಮಹಿಳೆಯರು ಶೇ.೮.೬೦ ರಷ್ಟು, ದೇವದಾಸಿಯರಾದ ಚುನಾಯಿತ ಮಹಿಳೆಯರು ಶೇ.೩.೩೧ ರಷ್ಟು ಇರುವುದು ತಿಳಿಯುತ್ತದೆ.

ಚುನಾಯಿತ ಮಹಿಳೆಯರ ವೈವಾಹಿಕ ವಿವರಗಳನ್ನು ತೌಲನಿಕವಾಗಿ ಅವಲೋಕಿಸಿದಾಗ ವಿವಾಹಿತೆಯರ ಮತ್ತು ವಿಧವಾ ಮಹಿಳೆಯರ ಪ್ರಮಾಣ ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಹೆಚ್ಚಾಗಿರುವುದು ಕಾಣುತ್ತದೆ. ದೇವದಾಸಿಯರಾದ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಾಣಿಸುತ್ತದೆ.

ಕೋಷ್ಟಕ ೫.೧

ಚುನಾಯಿತ ಮಹಿಳೆಯರ ಕುಟುಂಬದ ಯಜಮಾನಿಕೆ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಪತಿ/ಮಗ	ಸದಸ್ಯೆ	ಅತ್ತೆ	ಒಟ್ಟು
೦೧.	ಮಲಪನಗುಡಿ	೭	--	--	೭
೦೨.	ರಾಮಸಾಗರ	೫	೧	--	೬
೦೩.	ದೇವಲಾಪುರ	೫	೧	--	೬
೦೪.	ದೇವಸಮುದ್ರ	೫	೧	--	೬
೦೫.	ಮೆಟ್ರಿ	೫	೧	--	೬
೦೬.	ಸೀತಾರಾಂ ತಾಂಡ	೨	--	--	೨
೦೭.	ಹಂಪಿ	೨	೨	--	೪
೦೮.	ಬುಕ್ಕಸಾಗರ	೨	೪	--	೬
೦೯.	ಜಿ.ನಾಗಲಾಪುರ	೩	೩	--	೬
೧೦.	ಚಿಲಕನಹಟ್ಟಿ	೬	೧	--	೭
೧೧.	೧೧೪ ಡಣಾಪುರ	೬	೩	--	೯
೧೨.	ಡಣಾಯಕನ ಕೆರೆ	೨	೨	--	೪
೧೩.	ಸುಗ್ಗೇನಹಳ್ಳಿ	೨	೨	೧	೫
೧೪.	ಹಂಪಾದೇವನಹಳ್ಳಿ	೪	೨	--	೬
೧೫.	ಪಾಪಿನಾಯಕನಹಳ್ಳಿ	೬	೧	--	೭
೧೬.	ಕಲ್ಲಳ್ಳಿ	೧	೨	--	೩
೧೭.	ನಾಗೇನಹಳ್ಳಿ	೩	೨	೧	೬
೧೮.	ಬೈಲುವದ್ದಿಗೇರಿ	೬	--	--	೬
೧೯.	ನಂ.೧೦ ಮುದ್ದಾಪುರ	೫	೧	--	೬
೨೦.	ಸಣಾಪುರ	೪	೨	೧	೭
೨೧.	ಮರಿಯಮ್ಮನಹಳ್ಳಿ	೯	೧	೨	೧೨
೨೨.	ಗಾದಿಗನೂರು	೪	--	೨	೬
೨೩.	ಹೊಸೂರು	೩	೧	೧	೫
	ಒಟ್ಟು	೯೭	೩೩	೮	೧೩೮
	ಶೇಕಡ	೭೦.೨೮	೨೩.೯೧	೫.೭೯	೧೦೦

ಕೋಷ್ಟಕ ೫.೨

ಚುನಾಯಿತ ಮಹಿಳೆಯರ ಕುಟುಂಬದ ಯಜಮಾನಿಕೆ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಪತಿ/ಮಗ	ಸದಸ್ಯೆ	ಅತ್ತೆ	ಒಟ್ಟು
೦೧	ಮೆಟ್ರಿಕಿ	೭	--	--	೭
೦೨.	ವಿಠಲಾಪುರ	೫	೧	--	೬
೦೩.	ಅಂತಾಪುರ	೬	--	--	೬
೦೪.	ವಡ್ಡು	೫	೨	೧	೮
೦೫.	ದರೋಜಿ	೬	೨	--	೮
೦೬.	ಕುರೇಕುಪ್ಪ	೮	೧	--	೯
೦೭.	ತೋರಣಗಲ್ಲು	೩	೨	೧	೬
೦೮.	ಕಾಳಿಂಗೇರಿ	೫	--	೧	೬
೦೯.	ಜಿ.ಎಲ್.ಹಳ್ಳಿ	೬	--	--	೬
೧೦.	ಬೊಮ್ಮಗಟ್ಟ	೧೦	--	--	೧೦
೧೧.	ಸೋವೆನಹಳ್ಳಿ	೪	೨	--	೬
೧೨.	ಚೋರನೂರು	೬	೧	--	೭
೧೩.	ನಿಡಗುರ್ತಿ	೭	೧	--	೮
೧೪.	ಬಂಡ್ರಿ	೩	೩	೧	೭
೧೫.	ತಾರಾನಗರ	೫	೨	೧	೮
೧೬.	ಕೃಷ್ಣನಗರ	೨	೫	--	೭
೧೭.	ನರಸಿಂಗಪುರ	೧೧	--	--	೧೧
೧೮.	ಭುಜಂಗನಗರ	೫	೧	--	೬
೧೯.	ದೇವಗಿರಿ	೩	೩	--	೬
೨೦.	ಯಶವಂತನಗರ	೫	೧	--	೬
೨೧.	ಸುಶೀಲಾನಗರ	೭	--	--	೭
	ಒಟ್ಟು	೧೧೯	೨೭	೫	೧೫೧
	ಶೇಕಡ	೭೮.೮೦	೧೭.೮೮	೩.೩೧	೧೦೦

ಕೋಷ್ಟಕ ೫.೧. ಮತ್ತು ೫.೨. ಚುನಾಯಿತ ಮಹಿಳೆಯರ ಕುಟುಂಬದಲ್ಲಿ ಯಜಮಾನಿಕೆ ಯಾರದ್ದಾಗಿದೆ? ಎಂಬ ವಿವರವನ್ನು ಒದಗಿಸುತ್ತದೆ. ಈ ಪ್ರಕಾರ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಪುರುಷರ ಯಜಮಾನಿಕೆ(ಪತಿ, ಮಗ, ಮಾವ) ಇರುವ ಚುನಾಯಿತ ಮಹಿಳೆಯರು ಶೇ.೭೦.೨೮ ರಷ್ಟಿದ್ದಾರೆ. ಚುನಾಯಿತ ಮಹಿಳೆಯರೇ ಕುಟುಂಬದ ಯಜಮಾನಿಕೆ ವಹಿಸಿರುವುದು ಶೇ.೨೩.೯೧ ರಷ್ಟಿದೆ. ಅತ್ತೆಯರು ಯಜಮಾನಿಕೆ ವಹಿಸಿಕೊಂಡಿರುವ ಚುನಾಯಿತ ಮಹಿಳೆಯರು ಶೇ.೫.೭೯ರಷ್ಟಿರುವುದು ತಿಳಿದುಬರುತ್ತದೆ.

ಕೋಷ್ಟಕ ೫.೨. ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಪುರುಷ ಯಜಮಾನಿಕೆಗೆ ಒಳಗಾಗಿರುವ ಚುನಾಯಿತ ಮಹಿಳೆಯರು ಶೇ.೭೮.೮೦ ರಷ್ಟು ಇದ್ದರೆ, ಚುನಾಯಿತ ಮಹಿಳೆಯೇ ಯಜಮಾನಿಕೆವಹಿಸಿರುವ ಪ್ರಮಾಣ ಶೇ.೧೭.೮೮ ರಷ್ಟು ಹಾಗೂ ಅತ್ತೆಯ ಯಜಮಾನಿಕೆಯು ಶೇ.೩.೩೧ ರಷ್ಟಿರುವುದು ಗೋಚರವಾಗುತ್ತದೆ.

ತೌಲನಿಕವಾಗಿ ಅಧ್ಯಯನ ಮಾಡಿದಾಗ ಪುರುಷರ ಯಜಮಾನಿಕೆಯು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿದೆ. ಚುನಾಯಿತ ಮಹಿಳೆಯೇ ಯಜಮಾನಿಕೆ ವಹಿಸಿರುವುದು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣ ದಲ್ಲಿರುವುದು ವೇದ್ಯವಾಗುತ್ತದೆ. ಅತ್ತೆಯ ಯಜಮಾನಿಕೆಯು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೬.೧

ಕೌಟುಂಬಿಕ ನಿರ್ಧಾರಗಳಲ್ಲಿ ಚುನಾಯಿತ ಮಹಿಳೆಯರ ಸ್ಥಾನ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸದಸ್ಯೆಯೊಂದಿಗೆ ಚರ್ಚಿಸ ಲಾಗುತ್ತದೆ	ಸದಸ್ಯೆಯದೇ ತೀರ್ಮಾನ	ಸದಸ್ಯೆಯೊಂದಿಗೆ ಚರ್ಚಿಸಲಾ ಗುವುದಿಲ್ಲ	ಒಟ್ಟು
೦೧.	ಮಲಪನಗುಡಿ	೫	--	೨	೭
೦೨.	ರಾಮಸಾಗರ	೧	೧	೪	೬
೦೩.	ದೇವಲಾಪುರ	೧	೧	೪	೬
೦೪.	ದೇವಸಮುದ್ರ	--	೧	೫	೬
೦೫.	ಮೆಟ್ರಿ	--	--	೬	೬
೦೬.	ಸೀತಾರಾಂ ತಾಂಡ	--	--	೨	೨
೦೭.	ಹಂಪಿ	೧	೧	೨	೪
೦೮.	ಬುಕ್ಕಸಾಗರ	೨	೪	೧	೬
೦೯.	ಜಿ.ನಾಗಲಾಪುರ	೨	೨	೧	೬
೧೦.	ಚಿಲಕನಹಟ್ಟಿ	೩	೧	೩	೭
೧೧.	೧೧೪ ಡಣಾಪುರ	--	೩	೬	೯
೧೨.	ಡಣಾಯಕನ ಕೆರೆ	೨	೧	೧	೪
೧೩.	ಸುಗ್ಗೇನಹಳ್ಳಿ	೪	೧	--	೫
೧೪.	ಹಂಪಾದೇವನಹಳ್ಳಿ	೫	--	೧	೬
೧೫.	ಪಾಪಿನಾಯಕನಹಳ್ಳಿ	೫	೧	೧	೭
೧೬.	ಕಲ್ಲಳ್ಳಿ	೧	--	೨	೩
೧೭.	ನಾಗೇನಹಳ್ಳಿ	೩	೧	೨	೬
೧೮.	ಬೈಲುವದ್ದಿಗೇರಿ	--	--	೬	೬
೧೯.	ನಂ.೧೦ ಮುದ್ದಾಪುರ	೪	--	೨	೬
೨೦.	ಸಣಾಪುರ	೬	--	೧	೭
೨೧.	ಮರಿಯಮ್ಮನಹಳ್ಳಿ	೯	--	೩	೧೨
೨೨.	ಗಾದಿಗನೂರು	೫	----	೧	೬
೨೩.	ಹೊಸೂರು	೨	೧	೨	೫
	ಒಟ್ಟು	೬೧	೧೯	೫೮	೧೩೮
	ಶೇಕಡ	೪೪.೨೦	೧೩.೭೬	೪೨	೧೦೦

ಕೋಷ್ಟಕ ೬.೨

ಕೌಟಂಬಿಕ ನಿರ್ಧಾರಗಳಲ್ಲಿ ಚುನಾಯಿತ ಮಹಿಳೆಯರ ಸ್ಥಾನ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸದಸ್ಯೆಯೊಂದಿಗೆ ಚರ್ಚಿಸಲಾಗುತ್ತದೆ	ಸದಸ್ಯೆಯೊಂದಿಗೆ ಚರ್ಚಿಸಲಾಗುವುದಿಲ್ಲ	ಸದಸ್ಯೆಯದೇ ತೀರ್ಮಾನ	ಒಟ್ಟು
೦೧	ಮೆಟ್ರಿಕಿ	೬	೧	--	೭
೦೨.	ವಿಠಲಾಪುರ	೩	೨	೧	೬
೦೩.	ಅಂತಾಪುರ	೨	೪	--	೬
೦೪.	ವಡ್ಡು	೬	೨	--	೮
೦೫.	ದರೋಜಿ	೫	೨	೧	೮
೦೬.	ಕುರೇಕುಪ್ಪ	೯	--	--	೯
೦೭.	ತೋರಣಗಲ್ಲು	೪	೧	೧	೬
೦೮.	ಕಾಳಿಂಗೇರಿ	೨	೪	--	೬
೦೯.	ಜಿ.ಎಲ್.ಹಳ್ಳಿ	೨	೪	--	೬
೧೦.	ಬೊಮ್ಮಗಟ್ಟ	೭	೩	--	೧೦
೧೧.	ಸೋವೆನಹಳ್ಳಿ	೨	೨	೨	೬
೧೨.	ಚೋರನೂರು	೫	೨	--	೭
೧೩.	ನಿಡಗುರ್ತಿ	೪	೩	೧	೮
೧೪.	ಬಂಡ್ರಿ	೩	೩	೧	೭
೧೫.	ತಾರಾನಗರ	೫	೩	--	೮
೧೬.	ಕೃಷ್ಣನಗರ	೧	೫	೧	೭
೧೭.	ನರಸಿಂಗಪುರ	೧೦	೧	--	೧೧
೧೮.	ಭುಜಂಗನಗರ	೫	೧	--	೬
೧೯.	ದೇವಗಿರಿ	೩	೩	--	೬
೨೦.	ಯಶವಂತನಗರ	೪	೨	--	೬
೨೧.	ಸುಶೀಲಾನಗರ	೩	೪	--	೭
	ಒಟ್ಟು	೯೧	೫೨	೮	೧೫೧
	ಶೇಕಡ	೬೦.೨೬	೩೪.೪೩	೫.೨೯	೧೦೦

ಕೋಷ್ಟಕ ೬.೧. ಮತ್ತು ೬.೨ ಕುಟುಂಬದಲ್ಲಿ ನೀತಿ, ನಿರ್ಣಯ, ನಿರ್ಧಾರ ತೆಗೆದುಕೊಳ್ಳುವಿಕೆಯ ಚರ್ಚೆಯಲ್ಲಿ ಚುನಾಯಿತ ಮಹಿಳೆಯರ ಪಾಲ್ಗೊಳ್ಳುವಿಕೆಯ ವಿವರಗಳನ್ನು ಅಂಕಿ ಅಂಶಗಳ ಮೂಲಕ ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಚುನಾಯಿತ ಮಹಿಳೆಯರೊಂದಿಗೆ ಚರ್ಚಿಸುವ ಪ್ರಮಾಣ ಶೇ.೪೪.೨೦ ರಷ್ಟು, ಚುನಾಯಿತ ಮಹಿಳೆಯರೊಂದಿಗೆ ಚರ್ಚಿಸದೇ ಇರುವ ಪ್ರಮಾಣ ಶೇ.೪೨ ರಷ್ಟು ಹಾಗೂ ಸದಸ್ಯೆಯರೇ ತೀರ್ಮಾನ ತೆಗೆದುಕೊಳ್ಳುವ ಪ್ರಮಾಣ ಶೇ.೧೩.೭೬ ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೬.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಚುನಾಯಿತ ಮಹಿಳೆಯರೊಂದಿಗೆ ಚರ್ಚಿಸುವುದು ಶೇ.೬೦.೨೬ ರಷ್ಟು, ಚುನಾಯಿತ ಮಹಿಳೆಯರೊಂದಿಗೆ ಚರ್ಚಿಸದೇ ಇರುವುದು ಶೇ.೩೪.೪೩ ರಷ್ಟು ಹಾಗೂ ಚುನಾಯಿತ ಮಹಿಳೆಯರದೇ ಅಂತಿಮ ತೀರ್ಮಾನವಾಗಿರುವುದು ಶೇ.೫.೨೯ ರಷ್ಟಿರುವುದು ಗೋಚರವಾಗುತ್ತದೆ.

ತೌಲನಿಕವಾಗಿ ನೋಡಿದಾಗ ಚುನಾಯಿತ ಮಹಿಳೆಯರೊಂದಿಗೆ ಚರ್ಚಿಸಲಾಗುವ ಪ್ರಮಾಣವು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಹೆಚ್ಚಾಗಿದೆ. ಚುನಾಯಿತ ಮಹಿಳೆಯರೊಂದಿಗೆ ಚರ್ಚಿಸದೇ ಇರುವ ಪ್ರಮಾಣವು ಸಂಡೂರಿಗಿಂತ ಹೊಸಪೇಟೆ ತಾಲ್ಲೂಕು ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಾಗಿದೆ. ಚುನಾಯಿತ ಮಹಿಳೆಯರೆ ತೀರ್ಮಾನ ತೆಗೆದುಕೊಳ್ಳುವುದು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಾಣಬರುವುದು.

ಕೋಷ್ಟಕ ೭.೧

ಚುನಾಯಿತ ಮಹಿಳೆಯರ ಕುಟುಂಬದ ರಾಜಕೀಯ ಹಿನ್ನೆಲೆ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಒಡನಾಟವಿದೆ	ಆಸಕ್ತಿಯಿದೆ	ಯಾವುದೂ ಇಲ್ಲ	ಒಟ್ಟು
೦೧.	ಮಲಪನಗುಡಿ	೬	--	೧	೭
೦೨.	ರಾಮಸಾಗರ	೧	--	೫	೬
೦೩.	ದೇವಲಾಪುರ	೧	--	೫	೬
೦೪.	ದೇವಸಮುದ್ರ	--	--	೬	೬
೦೫.	ಮೆಟ್ರಿ	--	--	೬	೬
೦೬.	ಸೀತಾರಾಂ ತಾಂಡ	೧	೧	--	೨
೦೭.	ಹಂಪಿ	೧	--	೩	೪
೦೮.	ಬುಕ್ಕಸಾಗರ	೧	೧	೪	೬
೦೯.	ಜಿ.ನಾಗಲಾಪುರ	--	--	೬	೬
೧೦.	ಚಿಲಕನಹಟ್ಟಿ	೨	೧	೪	೭
೧೧.	೧೧೪ ಡಣಾಪುರ	--	--	೯	೯
೧೨.	ಡಣಾಯಕನ ಕೆರೆ	--	--	೪	೪
೧೩.	ಸುಗ್ಗೇನಹಳ್ಳಿ	--	೩	೨	೫
೧೪.	ಹಂಪಾದೇವನಹಳ್ಳಿ	--	೪	೨	೬
೧೫.	ಪಾಪಿನಾಯಕನಹಳ್ಳಿ	೧	೨	೪	೭
೧೬.	ಕಲ್ಲಳ್ಳಿ	೧	೨	--	೩
೧೭.	ನಾಗೇನಹಳ್ಳಿ	೧	--	೫	೬
೧೮.	ಬೈಲುವದ್ದಿಗೇರಿ	--	೧	೫	೬
೧೯.	ನಂ.೧೦ ಮುದ್ದಾಪುರ	೧	೩	೨	೬
೨೦.	ಸಣಾಪುರ	--	೬	೧	೭
೨೧.	ಮರಿಯಮ್ಮನಹಳ್ಳಿ	೧	೩	೮	೧೨
೨೨.	ಗಾದಿಗನೂರು	೨	೩	೧	೬
೨೩.	ಹೊಸೂರು	೧	೧	೩	೫
	ಒಟ್ಟು	೨೧	೩೧	೮೬	೧೩೮
	ಶೇಕಡ	೧೫.೨೧	೨೨.೪೬	೬೨.೩೧	೧೦೦

ಕೋಷ್ಟಕ ೭.೨

ಚುನಾಯಿತ ಮಹಿಳೆಯರ ಕುಟುಂಬದ ರಾಜಕೀಯ ಹಿನ್ನೆಲೆ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಒಡನಾಟವಿದೆ	ಆಸಕ್ತಿಯಿದೆ	ಯಾವುದು ಇಲ್ಲ	ಒಟ್ಟು
೦೧	ಮೆಟ್ರಿಕಿ	೩	೨	೨	೭
೦೨.	ವಿಠಲಾಪುರ	೨	೧	೩	೬
೦೩.	ಅಂತಾಪುರ	೩	೨	೧	೬
೦೪.	ವಡ್ಡು	೩	೨	೩	೮
೦೫.	ದರೋಜಿ	೨	೩	೩	೮
೦೬.	ಕುರೇಕುಪ್ಪ	೨	೪	೩	೯
೦೭.	ತೋರಣಗಲ್ಲು	೩	೧	೨	೬
೦೮.	ಕಾಳಿಂಗೇರಿ	೪	೨	--	೬
೦೯.	ಜಿ.ಎಲ್.ಹಳ್ಳಿ	೧	೫	--	೬
೧೦.	ಬೊಮ್ಮಗಟ್ಟ	೨	೬	೨	೧೦
೧೧.	ಸೋವೆನಹಳ್ಳಿ	೨	೩	೧	೬
೧೨.	ಚೋರನೂರು	೧	೩	೩	೭
೧೩.	ನಿಡಗುರ್ತಿ	೩	೨	೩	೮
೧೪.	ಬಂಡ್ರಿ	೨	೨	೩	೭
೧೫.	ತಾರಾನಗರ	೨	೩	೩	೮
೧೬.	ಕೃಷ್ಣನಗರ	೧	೧	೫	೭
೧೭.	ನರಸಿಂಗಪುರ	೩	೩	೫	೧೧
೧೮.	ಭುಜಂಗನಗರ	೪	೧	೧	೬
೧೯.	ದೇವಗಿರಿ	೧	೨	೩	೬
೨೦.	ಯಶವಂತನಗರ	೩	--	೩	೬
೨೧.	ಸುಶೀಲಾನಗರ	೫	೧	೧	೭
	ಒಟ್ಟು	೫೨	೪೯	೫೦	೧೫೧
	ಶೇಕಡ	೩೪.೪೩	೩೨.೪೫	೩೩.೧೧	೧೦೦

ಕೋಷ್ಟಕ ೭.೧. ಮತ್ತು ೭.೨ ಚುನಾಯಿತ ಮಹಿಳೆಯರ ಕುಟುಂಬಕ್ಕಿರುವ ರಾಜಕೀಯ ಹಿನ್ನೆಲೆಯನ್ನು ತಿಳಿಸುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಕುಟುಂಬಕ್ಕೆ ರಾಜಕೀಯದೊಂದಿಗೆ ಸಂಪರ್ಕ, ಒಡನಾಟ(ಆ ಮೂಲಕ ರಾಜಕೀಯ ವ್ಯಕ್ತಿಗಳೊಂದಿಗೆ ಸಂಪರ್ಕ, ಚುನಾವಣೆಯಲ್ಲಿ ಪ್ರಚಾರ, ಚುನಾವಣೆಗೆ ಸ್ಪರ್ಧಿಸಿರುವುದು ಇತ್ಯಾದಿ)ದ ಹಿನ್ನೆಲೆ ಇರುವ ಚುನಾಯಿತ ಮಹಿಳೆಯರ ಪ್ರಮಾಣವು ಶೇ.೧೫.೨೧ ರಷ್ಟು, ರಾಜಕೀಯದಲ್ಲಿ ಆಸಕ್ತಿಯನ್ನು ಮಾತ್ರ ಹೊಂದಿರುವ ಹಿನ್ನೆಲೆ ಇರುವ ಚುನಾಯಿತ ಮಹಿಳೆಯರ ಪ್ರಮಾಣವು ಶೇ.೨೨.೪೬ರಷ್ಟು, ಹಾಗೂ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದಿರುವ ಚುನಾಯಿತ ಮಹಿಳೆಯರ ಪ್ರಮಾಣ ಶೇ.೬೨.೩೧ ರಷ್ಟಿರುವುದನ್ನು ಕೋಷ್ಟಕದಿಂದ ಗಮನಿಸಬಹುದು.

ಕೋಷ್ಟಕ ೭.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಕುಟುಂಬದ ರಾಜಕೀಯದೊಂದಿಗೆ ಒಡನಾಟ ಇರುವ ಚುನಾಯಿತ ಮಹಿಳೆಯರು ಶೇ.೩೪.೪೩ ರಷ್ಟು, ಕುಟುಂಬಕ್ಕೆ ರಾಜಕೀಯದಲ್ಲಿ ಆಸಕ್ತಿಯನ್ನು ಮಾತ್ರ ಹೊಂದಿರುವ ಹಿನ್ನೆಲೆ ಇರುವ ಚುನಾಯಿತ ಮಹಿಳೆಯರು ಶೇ.೩೨.೪೫ ರಷ್ಟು ಹಾಗೂ ಕುಟುಂಬಕ್ಕೆ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದಿರುವ ಚುನಾಯಿತ ಮಹಿಳೆಯರ ಪ್ರಮಾಣ ಶೇ.೩೩.೧೧ ರಷ್ಟಿರುವುದು ಕೋಷ್ಟಕದಿಂದ ಗ್ರಹಿಕೆಗೆ ಬರುತ್ತದೆ.

ತೌಲನಿಕವಾಗಿ ಅಭ್ಯಸಿಸಿದಾಗ ಕುಟುಂಬಕ್ಕೆ ರಾಜಕೀಯದೊಂದಿಗೆ ಒಡನಾಟ ಮತ್ತು ಆಸಕ್ತಿಯ ಹಿನ್ನೆಲೆ ಇರುವ ಚುನಾಯಿತ ಮಹಿಳೆಯರ ಪ್ರಮಾಣವು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಕುಟುಂಬಕ್ಕೆ ಯಾವ ರೀತಿಯ ರಾಜಕೀಯ ಹಿನ್ನೆಲೆ ಇಲ್ಲದಿರುವ ಚುನಾಯಿತ ಮಹಿಳೆಯರ ಪ್ರಮಾಣವು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಕಾಣಿಸುತ್ತದೆ.

[illegible]

ಕೋಷ್ಟಕ ೮.೧

ಚುನಾಯಿತ ಮಹಿಳೆಯರ ಸ್ಪರ್ಧೆ ಸ್ವಯಂಪ್ರೇರಿತವೆ ಅಥವಾ ಪರಪ್ರೇರಿತವೆ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಗಂಡನ ಇಚ್ಛೆ	ಜಾತಿ ಮತ್ತು ಜನರ ಒತ್ತಾಯ	ಸ್ವಇಚ್ಛೆ	ಮೀಸಲಾತಿ ಮತ್ತು ಮಹಿಳೆ	ಎಲ್ಲ ಕಾರಣ ಗಳಿಂದ	ಒಟ್ಟು
೦೧	ಮಲಪನಗುಡಿ	೩	೧	--	೨	೧	೭
೦೨.	ರಾಮಸಾಗರ	೨	೧	--	೧	೨	೬
೦೩.	ದೇವಲಾಪುರ	೨	೨	--	--	೨	೬
೦೪.	ದೇವಸಮುದ್ರ	--	೧	--	೩	೨	೬
೦೫.	ಮೆಟ್ರಿ	--	೩	--	೧	೨	೬
೦೬.	ಸೀತಾರಾಂ ತಾಂಡ	--	--	--	೧	೧	೨
೦೭.	ಹಂಪಿ	--	೧	--	--	೩	೪
೦೮.	ಬುಕ್ಕಸಾಗರ	--	೧	೧	೧	೩	೬
೦೯.	ಜಿ.ನಾಗಲಾಪುರ	೨	೧	--	೧	೨	೬
೧೦.	ಚಿಲಕನಹಟ್ಟಿ	೨	೨	--	೩	--	೭
೧೧.	೧೧೪ ಡಣಾಪುರ	೧	--	೧	೪	೩	೯
೧೨.	ಡಣಾಯಕನ ಕೆರೆ	--	--	೩	೧	--	೪
೧೩.	ಸುಗ್ಗೇನಹಳ್ಳಿ	--	--	--	೫	--	೫
೧೪.	ಹಂಪಾದೇವನಹಳ್ಳಿ	--	--	--	೫	೧	೬
೧೫.	ಪಾಪಿನಾಯಕನಹಳ್ಳಿ	--	--	೪	೩	--	೭
೧೬.	ಕಲ್ಲಳ್ಳಿ	೧	೧	--	೧	--	೩
೧೭.	ನಾಗೇನಹಳ್ಳಿ	೧	೨	--	೧	೨	೬
೧೮.	ಬೈಲುವದ್ದಿಗೇರಿ	೪	೧	--	೧	--	೬
೧೯.	ನಂ.೧೦ ಮುದ್ದಾಪುರ	--	--	--	೬	--	೬
೨೦.	ಸಣಾಪುರ	--	--	--	೭	--	೭
೨೧.	ಮರಿಯಮ್ಮನಹಳ್ಳಿ	೨	--	೬	೨	--	೧೨
೨೨.	ಗಾದಿಗನೂರು	೨	೧	--	೨	೧	೬
೨೩.	ಹೊಸೂರು	೧	೧	೧	೧	೧	೫
	ಒಟ್ಟು	೨೩	೧೯	೧೬	೫೨	೨೮	೧೩೮
	ಶೇಕಡ	೧೬.೬೬	೧೩.೭೬	೧೧.೫೯	೩೭.೬೮	೨೦.೨೮	೧೦೦

ಕೋಷ್ಟಕ ೮.೨

ಚುನಾಯಿತ ಮಹಿಳೆಯರ ಸ್ಪರ್ಧೆ ಸ್ವಯಂಪ್ರೇರಿತವೇ ಅಥವಾ ಪರಪ್ರೇರಿತವೆ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಗಂಡನ ಇಚ್ಛೆ	ಜಾತಿ ಜನರ ಒತ್ತಾಯ	ಸ್ವ ಇಚ್ಛೆ	ಮೀಸಲಾತಿ ಮಹಿಳೆ	ಎಲ್ಲ ಕಾರಣಗಳು	ಒಟ್ಟು
೦೧.	ಮೆಟ್ರಿಕೆ	೪	೨	--	--	೧	೭
೦೨.	ವಿಠಲಾಪುರ	೩	೧	--	೨	--	೬
೦೩.	ಅಂತಾಪುರ	೧	೧	೧	೩	--	೬
೦೪.	ವಡ್ಡು	೪	೧	--	೧	೨	೮
೦೫.	ದರೋಜಿ	೪	--	೨	೧	೧	೮
೦೬.	ಕುರೇಕುಪ್ಪ	೨	೨	೨	೧	೨	೯
೦೭.	ತೋರಣಗಲ್ಲು	--	--	೩	೨	೧	೬
೦೮.	ಕಾಳಿಂಗೇರಿ	೫	೧	--	--	--	೬
೦೯.	ಜಿ.ಎಲ್.ಹಳ್ಳಿ	೨	೧	--	೨	೧	೬
೧೦.	ಬೊಮ್ಮಗಟ್ಟ	೭	೧	--	೧	೧	೧೦
೧೧.	ಸೋವೆನಹಳ್ಳಿ	೬	--	--	--	--	೬
೧೨.	ಚೋರನೂರು	೫	--	--	--	೨	೭
೧೩.	ನಿಡಗುರ್ತಿ	೫	--	--	--	೩	೮
೧೪.	ಬಂಡ್ರಿ	೨	೨	--	೨	೧	೭
೧೫.	ತಾರಾನಗರ	೨	೩	೧	೧	೧	೮
೧೬.	ಕೃಷ್ಣನಗರ	೩	--	೧	೧	೨	೭
೧೭.	ನರಸಿಂಗಪುರ	೮	೨	--	--	೧	೧೧
೧೮.	ಭುಜಂಗನಗರ	೬	--	--	--	--	೬
೧೯.	ದೇವಗಿರಿ	೨	೩	--	--	೧	೬
೨೦.	ಯಶವಂತನಗರ	೪	೨	--	--	--	೬
೨೧.	ಸುಶೀಲಾನಗರ	೧	೨	--	೪	--	೭
	ಒಟ್ಟು	೭೬	೨೪	೧೦	೨೧	೨೦	೧೫೧
	ಶೇಕಡ	೫೦.೩೩	೧೫.೮೯	೬.೬೨	೧೩.೯೦	೧೩.೨೪	೧೦೦

ಕೋಷ್ಟಕ ೮.೧. ಮತ್ತು ೮.೨ ಚುನಾಯಿತ ಮಹಿಳೆಯರು ಸ್ವಇಚ್ಛೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದರೇ ಅಥವಾ ಬೇರೆಯ ಪ್ರಭಾವ ಮತ್ತು ಒತ್ತಾಯಗಳಿಗೆ ಒಳಗಾಗಿ ಸ್ಪರ್ಧಿಸಿದ್ದರೇ ಎಂಬ ವಿವರಗಳನ್ನು ಅಂಕಿ ಅಂಶಗಳ ಮೂಲಕ ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಇಚ್ಛೆಯಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೧೧.೫೯, ಗಂಡನ ಇಚ್ಛೆಯಂತೆ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೧೬.೬೬, ಜಾತಿ ಮತ್ತು ಜನರ ಒತ್ತಾಯದಿಂದ ಸ್ಪರ್ಧಿಸಿದ ಚುನಾಯಿತ ಮಹಿಳೆಯರು ಶೇ.೧೩.೭೬, ಮಹಿಳೆಗೆ ದೊರಕಿರುವ ಮೀಸಲಾತಿಯ ಕಾರಣದಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೩೭.೬೮, ಎಲ್ಲ ಕಾರಣಗಳನ್ನು ಮುಂದಿಟ್ಟುಕೊಂಡು ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೨೦.೨೮ ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೮.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಇಚ್ಛೆಯಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೬.೬೨, ಗಂಡನ ಇಚ್ಛೆಯಂತೆ ಸ್ಪರ್ಧಿಸಿರುವ ಮಹಿಳೆಯರು ಶೇ.೫೦.೩೩, ಜಾತಿ ಮತ್ತು ಜನರ ಒತ್ತಾಯದಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೧೫.೮೯, ೭೩ನೆಯ ತಿದ್ದುಪಡಿಯಿಂದ ದೊರಕಿರುವ ಮೀಸಲಾತಿಯ ಕಾರಣದಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೧೩.೯೦, ಈ ಎಲ್ಲ ಕಾರಣಗಳನ್ನು ಮುಂದಿಟ್ಟುಕೊಂಡು ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೧೩.೨೪ ರಷ್ಟಿರುವುದು ಗೋಚರವಾಗುತ್ತದೆ.

ಎರಡೂ ತಾಲೂಕಿನ ಗ್ರಾಮಪಂಚಾಯ್ತಿಗಳನ್ನು ತೌಲನಿಕವಾಗಿ ಅವಲೋಕಿಸಿದಾಗ ಸ್ವಇಚ್ಛೆಯಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರ ಪ್ರಮಾಣವು ಸಂಡೂರಿಗಿಂತ ಹೊಸಪೇಟೆಯಲ್ಲಿ ಹೆಚ್ಚಾಗಿದೆ. ಗಂಡನ ಇಚ್ಛೆಯಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರ ಪ್ರಮಾಣವು ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಿಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದೆ. ಜಾತಿ ಮತ್ತು ಜನರ ಒತ್ತಾಯದಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರ ಪ್ರಮಾಣವು ಹೊಸಪೇಟೆಗಿಂತ ಸಂಡೂರಿನಲ್ಲಿ ಹೆಚ್ಚಾಗಿರುವುದು ಕಾಣಿಸುತ್ತದೆ. ಮಹಿಳೆಯರು ಮತ್ತು ಮೀಸಲಾತಿಯ ಕಾರಣಗಳಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರ ಪ್ರಮಾಣವು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದೆ. ಎಲ್ಲ ಕಾರಣಗಳಿಂದ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೯.೧

ದೇವರು ಮತ್ತು ಜ್ಯೋತಿಷ್ಯದಲ್ಲಿ ನಂಬಿಕೆ ಇರುವ ಚುನಾಯಿತ ಮಹಿಳೆಯರು

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ನಂಬಿಕೆ ಇಲ್ಲ	ನಂಬಿಕೆ ಇದೆ	ಒಟ್ಟು
೦೧.	ಮಲಪನಗುಡಿ	೪	೩	೭
೦೨.	ರಾಮಸಾಗರ	೬	--	೬
೦೩.	ದೇವಲಾಪುರ	೫	೧	೬
೦೪.	ದೇವಸಮುದ್ರ	೧	೫	೬
೦೫.	ಮೆಟ್ರಿ	೨	೪	೬
೦೬.	ಸೀತಾರಾಂ ತಾಂಡ	೨	--	೨
೦೭.	ಹಂಪಿ	೩	೧	೪
೦೮.	ಬುಕ್ಕಸಾಗರ	೪	೨	೬
೦೯.	ಜಿ.ನಾಗಲಾಪುರ	೪	೨	೬
೧೦.	ಚಿಲಕನಹಟ್ಟಿ	೬	೧	೭
೧೧.	೧೧೪ ಡಣಾಪುರ	೮	೧	೯
೧೨.	ಡಣಾಯಕನ ಕೆರೆ	೨	೨	೪
೧೩.	ಸುಗ್ಗೇನಹಳ್ಳಿ	೫	--	೫
೧೪.	ಹಂಪಾದೇವನಹಳ್ಳಿ	೬	--	೬
೧೫.	ಪಾಪಿನಾಯಕನಹಳ್ಳಿ	೩	೪	೭
೧೬.	ಕಲ್ಲಳ್ಳಿ	೩	--	೩
೧೭.	ನಾಗೇನಹಳ್ಳಿ	೪	೨	೬
೧೮.	ಬೈಲುವದ್ದಿಗೇರಿ	೩	೩	೬
೧೯.	ನಂ.೧೦ ಮುದ್ದಾಪುರ	೪	೨	೬
೨೦.	ಸಣಾಪುರ	೭	--	೭
೨೧.	ಮರಿಯಮ್ಮನಹಳ್ಳಿ	೧೨	--	೧೨
೨೨.	ಗಾದಿಗನೂರು	೫	೧	೬
೨೩.	ಹೊಸೂರು	೩	೨	೫
	ಒಟ್ಟು	೧೦೨	೩೬	೧೩೮
	ಶೇಕಡ	೭೩.೯೧	೨೬	೧೦೦

ಕೋಷ್ಟಕ ೯.೨

ದೇವರು ಜ್ಯೋತಿಷ್ಯದಲ್ಲಿ ನಂಬಿಕೆ ಇರುವ ಚುನಾಯಿತ ಮಹಿಳೆಯರು

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ನಂಬಿಕೆ ಇದೆ	ನಂಬಿಕೆ ಇಲ್ಲ	ಒಟ್ಟು
೦೧	ಮೆಟ್ರಿಕಿ	--	೭	೭
೦೨.	ವಿಠಲಾಪುರ	೨	೪	೬
೦೩.	ಅಂತಾಪುರ	೧	೫	೬
೦೪.	ವಡ್ಡು	೧	೭	೮
೦೫.	ದರೋಜಿ	೨	೬	೮
೦೬.	ಕುರೇಕುಪ್ಪ	--	೯	೯
೦೭.	ತೋರಣಗಲ್ಲು	--	೬	೬
೦೮.	ಕಾಳಿಂಗೇರಿ	೧	೫	೬
೦೯.	ಜಿ.ಎಲ್.ಹಳ್ಳಿ	--	೬	೬
೧೦.	ಬೊಮ್ಮಗಟ್ಟ	೩	೭	೧೦
೧೧.	ಸೋವೆನಹಳ್ಳಿ	೧	೫	೬
೧೨.	ಚೋರನೂರು	೨	೫	೭
೧೩.	ನಿಡಗುರ್ತಿ	--	೮	೮
೧೪.	ಬಂಡ್ರಿ	೩	೪	೭
೧೫.	ತಾರಾನಗರ	೨	೬	೮
೧೬.	ಕೃಷ್ಣನಗರ	--	೭	೭
೧೭.	ನರಸಿಂಗಪುರ	೨	೯	೧೧
೧೮.	ಭುಜಂಗನಗರ	--	೬	೬
೧೯.	ದೇವಗಿರಿ	--	೬	೬
೨೦.	ಯಶವಂತನಗರ	--	೬	೬
೨೧.	ಸುಶೀಲಾನಗರ	--	೭	೭
	ಒಟ್ಟು	೨೦	೧೩೧	೧೫೧
	ಶೇಕಡ	೧೩.೨೪	೮೬.೭೫	೧೦೦

ಕೋಷ್ಟಕ ೯.೧ ಮತ್ತು ೯.೨ ಚುನಾಯಿತ ಮಹಿಳೆಯರಿಗೆ ದೇವರು, ಜ್ಯೋತಿಷ್ಯದಲ್ಲಿ ನಂಬಿಕೆ ಇರುವುದನ್ನು ಅಂಕಿ ಅಂಶಗಳ ಮೂಲಕ ತಿಳಿಸುತ್ತದೆ. ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ದೇವರು ಮತ್ತು ಜ್ಯೋತಿಷ್ಯದಲ್ಲಿ ನಂಬಿಕೆ ಇರಿಸಿಕೊಂಡು ಈ ಹಿನ್ನೆಲೆಯಲ್ಲಿ ಸ್ಪರ್ಧಿಸಿರುವ ಚುನಾಯಿತ ಮಹಿಳೆಯರು ಶೇ.೨೬ ರಷ್ಟು ಇದ್ದರೆ, ನಂಬಿಕೆ ಇಲ್ಲದ ಚುನಾಯಿತ ಮಹಿಳೆಯರು ಶೇ.೭೩.೯೧ ರಷ್ಟಿದ್ದಾರೆ.

ಕೋಷ್ಟಕ ೯.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ನಂಬಿಕೆ ಇರುವ ಚುನಾಯಿತ ಮಹಿಳೆಯರು ಶೇ.೧೩.೨೪ ರಷ್ಟಿದ್ದರೆ, ನಂಬಿಕೆ ಇಲ್ಲದ ಚುನಾಯಿತ ಮಹಿಳೆಯರು ೮೬.೭೬ ರಷ್ಟಿರುವುದು ಕಾಣಿಸುತ್ತದೆ. ತೌಲನಿಕವಾಗಿ ಎರಡು ತಾಲೂಕು ಗ್ರಾಮಪಂಚಾಯ್ತಿಗಳನ್ನು ಅಧ್ಯಯನ ಮಾಡಿದಾಗ ದೇವರು ಮತ್ತು ಜ್ಯೋತಿಷ್ಯದಲ್ಲಿ ನಂಬಿಕೆ ಇರುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬಂದರೆ, ನಂಬಿಕೆ ಇಲ್ಲದಿರುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ತಿಳಿದುಬರುತ್ತದೆ.

ಕೋಷ್ಟಕ ೯.೧.೧

ಚುನಾಯಿತ ಮಹಿಳೆಯರು ಮತಪೆಟ್ಟಿಗೆಗೆ ಪೂಜೆ ಮಾಡಿದ್ದರ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಪೂಜೆ ಮಾಡಿದವರು	ಪೂಜೆ ಮಾಡಿಲ್ಲದವರು	ಅವಿರೋಧ ಆಯ್ಕೆ	ಒಟ್ಟು
೦೧	ಮಲಪನಗುಡಿ	೫	೨	--	೭
೦೨.	ರಾಮಸಾಗರ	೧	೩	೨	೬
೦೩.	ದೇವಲಾಪುರ	೨	೪	--	೬
೦೪.	ದೇವಸಮುದ್ರ	೫	--	೧	೬
೦೫.	ಮೆಟ್ರಿ	೩	೨	೧	೬
೦೬.	ಸೀತಾರಾಂ ತಾಂಡ	--	೨	--	೨
೦೭.	ಹಂಪಿ	೧	೨	೧	೪
೦೮.	ಬುಕ್ಕಸಾಗರ	೫	೧	--	೬
೦೯.	ಜಿ.ನಾಗಲಾಪುರ	೧	೫	--	೬
೧೦.	ಚಿಲಕನಹಟ್ಟಿ	೧	೪	೨	೭
೧೧.	೧೧ಳ ಡಣಾಪುರ	೧	೪	೪	೯
೧೨.	ಡಣಾಯಕನ ಕೆರೆ	೨	೧	೧	೪
೧೩.	ಸುಗ್ಗೇನಹಳ್ಳಿ	೨	--	೩	೫
೧೪.	ಹಂಪಾದೇವನಹಳ್ಳಿ	೩	೨	೧	೬
೧೫.	ಪಾಪಿನಾಯಕನಹಳ್ಳಿ	೨	೩	೨	೭
೧೬.	ಕಲ್ಲಳ್ಳಿ	೧	--	೨	೩
೧೭.	ನಾಗೇನಹಳ್ಳಿ	೪	೧	೧	೬
೧೮.	ಬೈಲುವದ್ದಿಗೇರಿ	೩	೩	--	೬
೧೯.	ನಂ.೧೦ ಮುದ್ದಾಪುರ	೧	೨	೩	೬
೨೦.	ಸಣಾಪುರ	--	--	೭	೭
೨೧.	ಮರಿಯಮ್ಮನಹಳ್ಳಿ	೧೨	--	--	೧೨
೨೨.	ಗಾದಿಗನೂರು	೧	೨	೩	೬
೨೩.	ಹೊಸೂರು	೩	೨	--	೫
	ಒಟ್ಟು	೫೯	೪೫	೩೪	೧೩೮
	ಶೇಕಡ	೪೨.೭೫	೩೨.೬೦	೨೪.೬೩	೧೦೦

ಕೋಷ್ಟಕ ೯.೧.೨

ಚುನಾಯಿತ ಮಹಿಳೆಯರು ಮತ ಪೆಟ್ಟಿಗೆಗೆ ಪೂಜೆ ಮಾಡಿದ್ದರ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಪೂಜೆ ಮಾಡಿದವರು	ಪೂಜೆ ಮಾಡಿಲ್ಲದವರು	ಅವಿರೋಧ ಆಯ್ಕೆ	ಒಟ್ಟು
೦೧	ಮೆಟ್ರಿಕಿ	೩	--	೪	೭
೦೨.	ವಿಠಲಾಪುರ	೨	೩	೧	೬
೦೩.	ಅಂತಾಪುರ	೨	೪	--	೬
೦೪.	ವಡ್ಡು	೮	--	--	೮
೦೫.	ದರೋಜಿ	೬	೨	--	೮
೦೬.	ಕುರೇಕುಪ್ಪ	೩	--	೬	೯
೦೭.	ತೋರಣಗಲ್ಲು	೨	೩	೧	೬
೦೮.	ಕಾಳಿಂಗೇರಿ	೬	--	--	೬
೦೯.	ಜಿ.ಎಲ್.ಹಳ್ಳಿ	೫	೧	--	೬
೧೦.	ಬೊಮ್ಮಗಟ್ಟಿ	೭	೧	೨	೧೦
೧೧.	ಸೋವೆನಹಳ್ಳಿ	೫	--	೧	೬
೧೨.	ಚೋರನೂರು	೬	--	೧	೭
೧೩.	ನಿಡಗುರ್ತಿ	೫	೨	೧	೮
೧೪.	ಬಂಡ್ರಿ	೩	೪	--	೭
೧೫.	ತಾರಾನಗರ	೫	--	೩	೮
೧೬.	ಕೃಷ್ಣನಗರ	೨	೫	--	೭
೧೭.	ನರಸಿಂಗಪುರ	೩	೮	--	೧೧
೧೮.	ಭುಜಂಗನಗರ	೫	೧	--	೬
೧೯.	ದೇವಗಿರಿ	--	೧	೫	೬
೨೦.	ಯಶವಂತನಗರ	೫	೧	--	೬
೨೧.	ಸುಶೀಲಾನಗರ	--	--	೭	೭
	ಒಟ್ಟು	೮೩	೩೬	೩೨	೧೫೧
	ಶೇಕಡ	೫೪.೯೬	೨೩.೮೪	೨೧.೧೯	೧೦೦

ಕೋಷ್ಟಕ ೯.೧.೧. ಮತ್ತು ೯.೧.೨ ಮುಂದುವರಿದ ಭಾಗವಾಗಿದ್ದು ಚುನಾಯಿತ ಮಹಿಳೆಯರು ಚುನಾವಣೆಯಲ್ಲಿ ಮತ ಚಲಾಯಿಸುವ ದಿನ ಮತಪೆಟ್ಟಿಗೆಗೆ ಪೂಜೆ ಮಾಡಿದ್ದರೆ, ಇಲ್ಲವೆ, ಎಷ್ಟು ಮಹಿಳೆಯರು ಪೂಜಿಸಿದರು, ಪೂಜಿಸಲಿಲ್ಲ ಎನ್ನುವುದರ ಅಂಕಿ ಅಂಶಗಳನ್ನು ತಿಳಿಸುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಮತಪೆಟ್ಟಿಗೆಗೆ ಪೂಜೆ ಮಾಡಿರುವ ಚುನಾಯಿತ ಮಹಿಳೆಯರು ಶೇ.೪೨.೭೫ ರಷ್ಟು ಇದ್ದರೆ, ಪೂಜೆ ಮಾಡದೆ ಇರುವ ಚುನಾಯಿತ ಮಹಿಳೆಯರು ಶೇ.೩೨.೬೦ ರಷ್ಟಿದ್ದಾರೆ. ಉಳಿದ ಮಹಿಳೆಯರು ಅವಿರೋಧವಾಗಿ ಆಯ್ಕೆಯಾಗಿರುವರು.

ಕೋಷ್ಟಕ ೯.೧.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಮತ ಪೆಟ್ಟಿಗೆಗೆ ಪೂಜೆ ಮಾಡಿರುವ ಚುನಾಯಿತ ಮಹಿಳೆಯರು ಶೇ.೫೪.೯೬ ರಷ್ಟಿದ್ದರೆ, ಪೂಜೆ ಮಾಡಿಲ್ಲದದವರು ಶೇ.೨೩.೮೪ ರಷ್ಟಿರುವುದು ತಿಳಿದುಬರುತ್ತದೆ. ಉಳಿದ ಮಹಿಳೆಯರು ಅವಿರೋಧವಾಗಿ ಆಯ್ಕೆಗೊಂಡ ವರಾಗಿದ್ದಾರೆ.

ತೌಲನಿಕವಾಗಿ ಎರಡು ತಾಲೂಕಿನ ಗ್ರಾಮಪಂಚಾಯ್ತಿಯ ಮಹಿಳೆಯರನ್ನು ನೋಡಿದಾಗ ಮತಪೆಟ್ಟಿಗೆಗೆ ಪೂಜೆ ಮಾಡಿರುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವರು. ಪೂಜೆ ಮಾಡಿಲ್ಲದ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವರು.

ಕೋಷ್ಟಕ ೯.೨.೧

ಬೋಣಿಗೆ ಮತದ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಬೋಣಿಗೆ ಮತ ಹಾಕಿಸಲಾಗಿದೆ	ಬೋಣಿಗೆ ಮತ ಹಾಕಿಸಿಲ್ಲ	ಅವಿರೋಧ ಆಯ್ಕೆ	ಒಟ್ಟು
೦೧	ಮಲಪನಗುಡಿ	೪	೩	--	೭
೦೨.	ರಾಮಸಾಗರ	೪	--	೨	೬
೦೩.	ದೇವಲಾಪುರ	೪	೨	--	೬
೦೪.	ದೇವಸಮುದ್ರ	೩	೨	೧	೬
೦೫.	ಮೆಟ್ರಿ	೨	೩	೧	೬
೦೬.	ಸೀತಾರಾಂ ತಾಂಡ	೧	೧	--	೨
೦೭.	ಹಂಪಿ	೨	೧	೧	೪
೦೮.	ಬುಕ್ಕಸಾಗರ	೨	೪	--	೬
೦೯.	ಜಿ.ನಾಗಲಾಪುರ	೩	೩	--	೬
೧೦.	ಚಿಲಕನಹಟ್ಟಿ	೪	೧	೨	೭
೧೧.	೧೧೪ ಡಣಾಪುರ	೪	೧	೪	೯
೧೨.	ಡಣಾಯಕನ ಕೆರೆ	೧	೨	೧	೪
೧೩.	ಸುಗ್ಗೇನಹಳ್ಳಿ	೨	--	೩	೫
೧೪.	ಹಂಪಾದೇವನಹಳ್ಳಿ	೧	೪	೧	೬
೧೫.	ಪಾಪಿನಾಯಕನಹಳ್ಳಿ	೩	೨	೨	೭
೧೬.	ಕಲ್ಲಳ್ಳಿ	--	೧	೨	೩
೧೭.	ನಾಗೇನಹಳ್ಳಿ	೩	೨	೧	೬
೧೮.	ಬೈಲುವದ್ದಿಗೇರಿ	೪	೨	--	೬
೧೯.	ನಂ.೧೦ ಮುದ್ದಾಪುರ	೨	೧	೩	೬
೨೦.	ಸಣಾಪುರ	--		೭	೭
೨೧.	ಮರಿಯಮ್ಮನಹಳ್ಳಿ	೮	೪	--	೧೨
೨೨.	ಗಾದಿಗನೂರು	೨	೧	೩	೬
೨೩.	ಹೊಸೂರು	೪	೧	--	೫
	ಒಟ್ಟು	೫೮	೪೪	೩೪	೧೩೮
	ಶೇಕಡ	೪೨	೩೧.೮೮	೨೪.೬೩	೧೦೦

ಕೋಷ್ಟಕ ೯.೨.೨

ಬೋಣಿಗೆ ಮತದ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಬೋಣಿಗೆ ಮತ ಹಾಕಿಸಲಾಗಿದೆ	ಬೋಣಿಗೆ ಮತ ಹಾಕಿಸಿಲ್ಲ	ಅವಿರೋಧ ಆಯ್ಕೆ	ಒಟ್ಟು
೦೧	ಮೆಟ್ರಿಕಿ	೨	೧	೪	೭
೦೨.	ವಿಠಲಾಪುರ	೩	೨	೧	೬
೦೩.	ಅಂತಾಪುರ	೩	೩	--	೬
೦೪.	ವಡ್ಡು	೫	೩	--	೮
೦೫.	ದರೋಜಿ	೭	೧	--	೮
೦೬.	ಕುರೇಕುಪ್ಪ	೩	--	೬	೯
೦೭.	ತೋರಣಗಲ್ಲು	೧	೪	೧	೬
೦೮.	ಕಾಳಿಂಗೇರಿ	೫	೧	--	೬
೦೯.	ಜಿ.ಎಲ್.ಹಳ್ಳಿ	೩	೩	--	೬
೧೦.	ಬೊಮ್ಮಗಟ್ಟ	೫	೩	೨	೧೦
೧೧.	ಸೋವೆನಹಳ್ಳಿ	೫	--	೧	೬
೧೨.	ಚೋರನೂರು	೧	೫	೧	೭
೧೩.	ನಿಡಗುರ್ತಿ	೬	೧	೧	೮
೧೪.	ಬಂಡ್ರಿ	೨	೫	--	೭
೧೫.	ತಾರಾನಗರ	೪	೧	೩	೮
೧೬.	ಕೃಷ್ಣನಗರ	--	೭	--	೭
೧೭.	ನರಸಿಂಗಪುರ	೨	೯	--	೧೧
೧೮.	ಭುಜಂಗನಗರ	೨	೪	--	೬
೧೯.	ದೇವಗಿರಿ	೧	--	೫	೬
೨೦.	ಯಶವಂತನಗರ	೪	೨	--	೬
೨೧.	ಸುಶೀಲಾನಗರ	--	--	೭	೭
	ಒಟ್ಟು	೬೪	೫೫	೩೨	೧೫೧
	ಶೇಕಡ	೪೨.೩೮	೩೬.೪೨	೨೧.೧೯	೧೦೦

ಕೋಷ್ಟಕ ೯.೨.೧ ಮತ್ತು ೯.೨.೨ ಚುನಾಯಿತ ಮಹಿಳೆಯರು ಮತ ಚಲಾವಣೆಯ ದಿನ ಬೋಣಿಗೆಯಾಗಿ ಇಂತಹವರಿಂದಲೇ ಮೊದಲ ಮತ ಹಾಕಿಸಿದರೆ (ಮೊದಲ ಮತವನ್ನು ಬೋಣಿಗೆ ಎಂದು ಕರೆಯಲಾಗುತ್ತದೆ). ಹೆಚ್ಚು ಮತಗಳು ಬೀಳುತ್ತವೆ ಎಂದು ಬೋಣಿಗೆ ಮತ ಹಾಕಿಸಿದ ಚುನಾಯಿತ ಮಹಿಳೆಯರು ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಶೇ.೪೨ ರಷ್ಟಿರುವರು. ಬೋಣಿಗೆ ಮತ ಹಾಕಿಸದೆ ಇರುವ ಚುನಾಯಿತ ಮಹಿಳೆಯರು ಶೇ.೩೧.೮೮ ರಷ್ಟಿರುವರು. ಉಳಿದವರು ಅವಿರೋಧ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು.

ಕೋಷ್ಟಕ ೯.೨.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಬೋಣಿಗೆ ಮತ ಹಾಕಿಸಿದವರು ಶೇ.೪೨.೩೮ ರಷ್ಟು, ಬೋಣಿಗೆ ಮತ ಹಾಕಿಸಿಲ್ಲದ ಚುನಾಯಿತ ಮಹಿಳೆಯರು ಶೇ.೩೬.೪೨ ರಷ್ಟು ಇರುವರು. ಉಳಿದವರು ಅವಿರೋಧವಾಗಿ ಆಯ್ಕೆಯಾಗಿರುವವರು.

ತೌಲನಿಕವಾಗಿ ಗಮನಿಸಿದಾಗ ಬೋಣಿಗೆ ಮತ ಹಾಕಿಸಿರುವ ಚುನಾಯಿತ ಮಹಿಳೆಯರ ಪ್ರಮಾಣ ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಬೋಣಿಗೆ ಮತ ಹಾಕಿಸಿರದ ಚುನಾಯಿತ ಮಹಿಳೆಯರ ಪ್ರಮಾಣವು ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಹೆಚ್ಚಿನ ಪ್ರಮಾಣ ದಲ್ಲಿರುವುದು ತಿಳಿದುಬರುತ್ತದೆ.

ಕೋಷ್ಟಕ ೧೦.೧

ಚುನಾಯಿತ ಮಹಿಳೆಯರ ವಾಸದ ಮನೆಯ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಸ್ವಂತ ಮನೆ	ಗುಡಿಸಲು	ಬಾಡಿಗೆ	ಒಟ್ಟು
೦೧.	ಮಲಪನಗುಡಿ	೬	೧	--	೭
೦೨.	ರಾಮಸಾಗರ	೫	೧	--	೬
೦೩.	ದೇವಲಾಪುರ	೪	೨	--	೬
೦೪.	ದೇವಸಮುದ್ರ	೩	೩	--	೬
೦೫.	ಮೆಟ್ರಿ	೬	--	--	೬
೦೬.	ಸೀತಾರಾಂ ತಾಂಡ	೧	೧	--	೨
೦೭.	ಹಂಪಿ	೩	೧	--	೪
೦೮.	ಬುಕ್ಕಸಾಗರ	೫	೧	--	೬
೦೯.	ಜಿ.ನಾಗಲಾಪುರ	೬	--	--	೬
೧೦.	ಚಿಲಕನಹಟ್ಟಿ	೭	--	--	೭
೧೧.	೧೧೪ ಡಣಾಪುರ	೭	೨	--	೯
೧೨.	ಡಣಾಯಕನ ಕೆರೆ	೪	--	--	೪
೧೩.	ಸುಗ್ಗೇನಹಳ್ಳಿ	೩	೨	--	೫
೧೪.	ಹಂಪಾದೇವನಹಳ್ಳಿ	೬	--	--	೬
೧೫.	ಪಾಪಿನಾಯಕನಹಳ್ಳಿ	೪	೩	--	೭
೧೬.	ಕಲ್ಲಳ್ಳಿ	೨	೧	--	೩
೧೭.	ನಾಗೇನಹಳ್ಳಿ	೪	೨	--	೬
೧೮.	ಬೈಲುವದ್ದಿಗೇರಿ	೪	೨	--	೬
೧೯.	ನಂ.೧೦ ಮುದ್ದಾಪುರ	೪	೨	--	೬
೨೦.	ಸಣಾಪುರ	೭	--	--	೭
೨೧.	ಮರಿಯಮ್ಮನಹಳ್ಳಿ	೧೦	೨	--	೧೨
೨೨.	ಗಾದಿಗನೂರು	೪	೨	--	೬
೨೩.	ಹೊಸೂರು	೨	೩	--	೫
	ಒಟ್ಟು	೧೦೭	೩೧	--	೧೩೮
	ಶೇಕಡ	೭೭.೫೩	೨೨.೪೬	--	೧೦೦

ಕೋಷ್ಟಕ ೧೦.೨

ಚುನಾಯಿತ ಮಹಿಳೆಯರ ವಾಸದ ಮನೆಯ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸ್ವಂತ ಮನೆ	ಗುಡಿಸಲು	ಬಾಡಿಗೆ	ಒಟ್ಟು
೦೧	ಮೆಟ್ರಿಕಿ	೭	--	--	೭
೦೨.	ವಿಠಲಾಪುರ	೩	೩	--	೬
೦೩.	ಅಂತಾಪುರ	೨	೩	೧	೬
೦೪.	ವಡ್ಡು	೮	--	--	೮
೦೫.	ದರೋಜಿ	೭	೧	--	೮
೦೬.	ಕುರೇಕುಪ್ಪ	೯	--	--	೯
೦೭.	ತೋರಣಗಲ್ಲು	೬	--	--	೬
೦೮.	ಕಾಳಿಂಗೇರಿ	೬	--	--	೬
೦೯.	ಜಿ.ಎಲ್.ಹಳ್ಳಿ	೫	೧	--	೬
೧೦.	ಬೊಮ್ಮಗಟ್ಟ	೯	೧	--	೧೦
೧೧.	ಸೋವೇನಹಳ್ಳಿ	೬	--	--	೬
೧೨.	ಚೋರನೂರು	೭	--	--	೭
೧೩.	ನಿಡಗುರ್ತಿ	೭	೧	--	೮
೧೪.	ಬಂಡ್ರಿ	೨	೪	೧	೭
೧೫.	ತಾರಾನಗರ	೬	--	೨	೮
೧೬.	ಕೃಷ್ಣನಗರ	೭	--	--	೭
೧೭.	ನರಸಿಂಗಪುರ	೩	೨	೬	೧೧
೧೮.	ಭುಜಂಗನಗರ	೬	--	--	೬
೧೯.	ದೇವಗಿರಿ	೨	--	೪	೬
೨೦.	ಯಶವಂತನಗರ	೫	--	೧	೬
೨೧.	ಸುಶೀಲಾನಗರ	೭	--	--	೭
	ಒಟ್ಟು	೧೨೦	೧೬	೧೫	೧೫೧
	ಶೇಕಡ	೭೯.೪೭	೧೦.೫೯	೯.೯೩	೧೦೦

ಕೋಷ್ಟಕ ೧೦.೧ ಮತ್ತು ೧೦.೨ ಚುನಾಯಿತ ಮಹಿಳೆಯರ ವಾಸದ ಮನೆಯ ವಿವರಗಳನ್ನು ಅಂಕಿ ಅಂಶಗಳ ಮೂಲಕ ವಿವರಿಸುತ್ತದೆ. ಹೊಸಪೇಟೆಯಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿರುವ ಚುನಾಯಿತ ಮಹಿಳೆಯರು ಶೇ.೭೭.೫೩ ರಷ್ಟಿದ್ದರೆ, ಗುಡಿಸಲಿನಲ್ಲಿ ವಾಸವಾಗಿರುವ ಚುನಾಯಿತ ಮಹಿಳೆಯರು ಶೇ.೨೨.೪೬ ರಷ್ಟಿದ್ದಾರೆ. ಇಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಇಲ್ಲ.

ಕೋಷ್ಟಕ ೧೦.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಂತ ಮನೆಯಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಶೇ.೭೯.೪೭ ರಷ್ಟಿದ್ದರೆ, ಗುಡಿಸಲಿನಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಶೇ.೧೦.೫೯ ರಷ್ಟಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಶೇ.೯.೯೩ ರಷ್ಟಿರುವುದು ಕಾಣಬರುತ್ತದೆ.

ಎರಡೂ ತಾಲೂಕು ಗ್ರಾಮಪಂಚಾಯ್ತಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಂತ ಮನೆಯಲ್ಲಿ ವಾಸಿಸುವ ಮಹಿಳೆಯರು ಹೆಚ್ಚಾಗಿದ್ದಾರೆ. ಗುಡಿಸಲಿನಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸಿಸುವವರು ಸಂಡೂರಿನಲ್ಲಿ ಮಾತ್ರ ಇರುವುದು ಕಂಡುಬರುತ್ತದೆ.

ಕೋಷ್ಟಕ ೧೧.೧

ಚುನಾಯಿತ ಮಹಿಳೆಯರ ಮನೆಯಲ್ಲಿ ಶೌಚಾಲಯ ಸೌಲಭ್ಯ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಇದೆ	ಇಲ್ಲ	ಒಟ್ಟು
೦೧.	ಮಲಪನಗುಡಿ	೬	೧	೭
೦೨.	ರಾಮಸಾಗರ	೪	೨	೬
೦೩.	ದೇವಲಾಪುರ	೪	೨	೬
೦೪.	ದೇವಸಮುದ್ರ	೬	--	೬
೦೫.	ಮೆಟ್ರಿ	೬	--	೬
೦೬.	ಸೀತಾರಾಂ ತಾಂಡ	೨	--	೨
೦೭.	ಹಂಪಿ	೨	೨	೪
೦೮.	ಬುಕ್ಕಸಾಗರ	೫	೧	೬
೦೯.	ಜಿ.ನಾಗಲಾಪುರ	೪	೨	೬
೧೦.	ಚಿಲಕನಹಟ್ಟಿ	೨	೫	೭
೧೧.	೧೧೪ ಡಣಾಪುರ	೭	೨	೯
೧೨.	ಡಣಾಯಕನ ಕೆರೆ	--	೪	೪
೧೩.	ಸುಗ್ಗೇನಹಳ್ಳಿ	೩	೨	೫
೧೪.	ಹಂಪಾದೇವನಹಳ್ಳಿ	--	೬	೬
೧೫.	ಪಾಪಿನಾಯಕನಹಳ್ಳಿ	೬	೧	೭
೧೬.	ಕಲ್ಲಳ್ಳಿ	೩	--	೩
೧೭.	ನಾಗೇನಹಳ್ಳಿ	೧	೫	೬
೧೮.	ಬೈಲುವದ್ದಿಗೇರಿ	೩	೩	೬
೧೯.	ನಂ.೧೦ ಮದಾಪುರ	೧	೫	೬
೨೦.	ಸಣಾಪುರ	೧	೬	೭
೨೧.	ಮರಿಯಮ್ಮನಹಳ್ಳಿ	೫	೭	೧೨
೨೨.	ಗಾದಿಗನೂರು	೩	೩	೬
೨೩.	ಹೊಸೂರು	೩	೨	೫
	ಒಟ್ಟು	೭೭	೬೧	೧೩೮
	ಶೇಕಡ	೫೫.೭೯	೪೪.೨೦	೧೦೦

ಕೋಷ್ಟಕ ೧೧.೨

ಚುನಾಯಿತ ಮಹಿಳೆಯರ ಮನೆಯಲ್ಲಿ ಶೌಚಾಲಯ ಸೌಲಭ್ಯ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಇದೆ	ಇಲ್ಲ	ಒಟ್ಟು
೦೧	ಮೆಟ್ರಿಕಿ	೧	೬	೭
೦೨.	ವಿಠಲಾಪುರ	೩	೩	೬
೦೩.	ಅಂತಾಪುರ	೪	೨	೬
೦೪.	ವಡ್ಡು	೪	೪	೮
೦೫.	ದರೋಜಿ	೪	೪	೮
೦೬.	ಕುರೇಕುಪ್ಪ	೧	೮	೯
೦೭.	ತೋರಣಗಲ್ಲು	--	೬	೬
೦೮.	ಕಾಳಿಂಗೇರಿ	೧	೫	೬
೦೯.	ಜಿ.ಎಲ್.ಹಳ್ಳಿ	--	೬	೬
೧೦.	ಬೊಮ್ಮಘಟ್ಟ	೨	೮	೧೦
೧೧.	ಸೋವೆನಹಳ್ಳಿ	೩	೩	೬
೧೨.	ಚೋರನೂರು	೧	೬	೭
೧೩.	ಸಿಡಗುರ್ತಿ	೪	೪	೮
೧೪.	ಬಂಡ್ರಿ	೩	೪	೭
೧೫.	ತಾರಾನಗರ	೩	೫	೮
೧೬.	ಕೃಷ್ಣನಗರ	೧	೬	೭
೧೭.	ನರಸಿಂಗಪುರ	೫	೬	೧೧
೧೮.	ಭುಜಂಗನಗರ	೩	೩	೬
೧೯.	ದೇವಗಿರಿ	೨	೪	೬
೨೦.	ಯಶವಂತನಗರ	೩	೩	೬
೨೧.	ಸುಶೀಲಾನಗರ	೧	೬	೭
ಒಟ್ಟು		೪೯	೧೦೨	೧೫೧
ಶೇಕಡ		೩೨.೪೫	೬೭.೫೪	೧೦೦

ಕೋಷ್ಟಕ ೧೧.೧ ಮತ್ತು ೧೧.೨ ಚುನಾಯಿತ ಮಹಿಳೆಯರು ಶೌಚಾಲಯದ ಸೌಲಭ್ಯವನ್ನು ಹೊಂದಿರುವ, ಹೊಂದಿಲ್ಲದ ವಿವರಗಳನ್ನು ಅಂಕಿ ಅಂಶಗಳ ಮೂಲಕ ತಿಳಿಸುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಶೌಚಾಲಯ ಹೊಂದಿರುವ ಚುನಾಯಿತ ಮಹಿಳೆಯರು ಶೇ.೫೫.೭೯ ರಷ್ಟಿದ್ದರೆ, ಶೌಚಾಲಯ ಹೊಂದಿಲ್ಲದ ಚುನಾಯಿತ ಮಹಿಳೆಯರು ಶೇ.೪೪.೨೦ ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೧೧.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಶೌಚಾಲಯ ಹೊಂದಿರುವ ಚುನಾಯಿತ ಮಹಿಳೆಯರು ಶೇ.೩೨.೪೫ ರಷ್ಟಿದ್ದರೆ, ಶೌಚಾಲಯ ಹೊಂದಿಲ್ಲದ ಚುನಾಯಿತ ಮಹಿಳೆಯರು ಶೇ.೬೭.೫೪ ರಷ್ಟಿರುವುದು ಕಂಡುಬರುತ್ತದೆ.

ತೌಲನಿಕವಾಗಿ ಎರಡು ತಾಲೂಕು ಗ್ರಾಮಪಂಚಾಯ್ತಿಗಳನ್ನು ಗಮನಿಸಿದಾಗ ಶೌಚಾಲಯ ಹೊಂದಿರುವ ಚುನಾಯಿತ ಮಹಿಳೆಯರ ಪ್ರಮಾಣವು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದೆ. ಶೌಚಾಲಯ ಹೊಂದಿಲ್ಲದ ಚುನಾಯಿತ ಮಹಿಳೆಯರ ಪ್ರಮಾಣವು ಹೊಸಪೇಟೆಗಿಂತ ಸಂಡೂರಿನಲ್ಲಿ ಅಧಿಕವಾಗಿರುವುದು ಗೋಚರವಾಗುತ್ತದೆ.

ಕೋಷ್ಟಕ ೧೨.೧

ಚುನಾಯಿತ ಮಹಿಳೆಯರ ಮನೆಯಲ್ಲಿ ವಿದ್ಯುಚ್ಛಕ್ತಿ ಸೌಲಭ್ಯದ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಇದೆ	ಇಲ್ಲ	ಒಟ್ಟು
೦೧.	ಮಲಪನಗುಡಿ	೭	--	೭
೦೨.	ರಾಮಸಾಗರ	೪	೨	೬
೦೩.	ದೇವಲಾಪುರ	೬	--	೬
೦೪.	ದೇವಸಮುದ್ರ	೬	--	೬
೦೫.	ಮೆಟ್ರಿ	೬	--	೬
೦೬.	ಸೀತಾರಾಂ ತಾಂಡ	೨	--	೨
೦೭.	ಹಂಪಿ	೩	೧	೪
೦೮.	ಬುಕ್ಕಸಾಗರ	೬	--	೬
೦೯.	ಜಿ.ನಾಗಲಾಪುರ	೬	--	೬
೧೦.	ಚಿಲಕನಹಟ್ಟಿ	೭	--	೭
೧೧.	೧೧ಳ ಡಣಾಪುರ	೬	೩	೯
೧೨.	ಡಣಾಯಕನ ಕೆರೆ	೪	--	೪
೧೩.	ಸುಗ್ಗೇನಹಳ್ಳಿ	೫	--	೫
೧೪.	ಹಂಪಾದೇವನಹಳ್ಳಿ	೬	--	೬
೧೫.	ಪಾಪಿನಾಯಕನಹಳ್ಳಿ	೭	--	೭
೧೬.	ಕಲ್ಲಳ್ಳಿ	೩	--	೩
೧೭.	ನಾಗೇನಹಳ್ಳಿ	೫	--	೫
೧೮.	ಬೈಲುವದ್ದಿಗೇರಿ	೫	೧	೬
೧೯.	ನಂ.೧೦ ಮುದ್ದಾಪುರ	೪	೨	೬
೨೦.	ಸಣಾಪುರ	೬	೧	೭
೨೧.	ಮರಿಯಮ್ಮನಹಳ್ಳಿ	೧೨	--	೧೨
೨೨.	ಗಾದಿಗನೂರು	೪	೨	೬
೨೩.	ಹೊಸೂರು	೪	೧	೫
	ಒಟ್ಟು	೧೨೫	೧೩	೧೩೮
	ಶೇಕಡ	೯೦.೫೭	೯.೪೨	೧೦೦

ಕೋಷ್ಟಕ ೧೨.೨

ಚುನಾಯಿತ ಮಹಿಳೆಯರ ಮನೆಯಲ್ಲಿ ವಿದ್ಯುಚ್ಛಕ್ತಿ ಸೌಲಭ್ಯದ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಇದೆ	ಇಲ್ಲ	ಒಟ್ಟು
೦೧	ಮೆಟ್ರಿಕಿ	೭	--	೭
೦೨.	ವಿಠಲಾಪುರ	೩	೩	೬
೦೩.	ಅಂತಾಪುರ	೨	೪	೬
೦೪.	ವಡ್ಡು	೮	--	೮
೦೫.	ದರೋಜಿ	೮	--	೮
೦೬.	ಕುರೇಕುಪ್ಪ	೮	೧	೯
೦೭.	ತೋರಣಗಲ್ಲು	೬	--	೬
೦೮.	ಕಾಳಿಂಗೇರಿ	೫	೧	೬
೦೯.	ಜಿ.ಎಲ್.ಹಳ್ಳಿ	೫	೧	೬
೧೦.	ಬೊಮ್ಮಗಟ್ಟ	೧೦	--	೧೦
೧೧.	ಸೋವೇನಹಳ್ಳಿ	೫	೧	೬
೧೨.	ಚೋರನೂರು	೬	೧	೭
೧೩.	ನಿಡಗುರ್ತಿ	೭	೧	೮
೧೪.	ಬಂಡ್ರಿ	೩	೪	೭
೧೫.	ತಾರಾನಗರ	೭	೧	೮
೧೬.	ಕೃಷ್ಣನಗರ	೭	--	೭
೧೭.	ನರಸಿಂಗಪುರ	೧೧	--	೧೧
೧೮.	ಭುಜಂಗನಗರ	೬	--	೬
೧೯.	ದೇವಗಿರಿ	೬	--	೬
೨೦.	ಯಶವಂತನಗರ	೬	--	೬
೨೧.	ಸುಶೀಲಾನಗರ	೬	೧	೭
ಒಟ್ಟು		೧೩೨	೧೯	೧೫೧
ಶೇಕಡ		೮೭.೪೧	೧೨.೫೮	೧೦೦

ಕೋಷ್ಟಕ ೧೨.೧ ಮತ್ತು ೧೨.೨ ಚುನಾಯಿತ ಮಹಿಳೆಯರು ತಮ್ಮ ಮನೆಯಲ್ಲಿ ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಹೊಂದಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಅಂಕಿ ಅಂಶಗಳ ಮೂಲಕ ವಿವರಿಸುತ್ತದೆ.

ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ವಿದ್ಯುಚ್ಛಕ್ತಿ ಹೊಂದಿರುವ ಚುನಾಯಿತ ಮಹಿಳೆಯರು ಶೇ.೯೦.೫೭ ರಷ್ಟಿದ್ದರೆ, ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಹೊಂದಿಲ್ಲದೇ ಇರುವ ಚುನಾಯಿತ ಮಹಿಳೆಯರು ಶೇ.೯.೪೨ ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೧೨.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯವನ್ನು ಹೊಂದಿರುವ ಚುನಾಯಿತ ಮಹಿಳೆಯರು ಶೇ.೮೭.೪೧ ರಷ್ಟಿದ್ದರೆ, ವಿದ್ಯುಚ್ಛಕ್ತಿ ಸೌಲಭ್ಯವನ್ನು ಹೊಂದಿಲ್ಲದ ಚುನಾಯಿತ ಮಹಿಳೆಯರು ಶೇ.೧೨.೫೮ ರಷ್ಟಿರುವುದು ತಿಳಿದುಬರುತ್ತದೆ.

ತೌಲನಿಕವಾಗಿ ಎರಡೂ ತಾಲೂಕು ಗ್ರಾಮಪಂಚಾಯ್ತಿಗಳನ್ನು ಅಧ್ಯಯನ ಮಾಡಿದಾಗ ವಿದ್ಯುಚ್ಛಕ್ತಿ ಸೌಲಭ್ಯ ಹೊಂದಿರುವ ಚುನಾಯಿತ ಮಹಿಳೆಯರ ಪ್ರಮಾಣವು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಅಧಿಕವಾಗಿರುವುದು ಕಂಡುಬರುತ್ತದೆ. ವಿದ್ಯುಚ್ಛಕ್ತಿ ಸೌಲಭ್ಯ ಹೊಂದಿಲ್ಲದ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.

ಕೋಷ್ಟಕ ೧೩.೧

ಚುನಾಯಿತ ಮಹಿಳೆಯ ಮನೆಯಲ್ಲಿ ನೀರು ಉರುವಲು ಸಂಗ್ರಹಿಸುವ ಬಗೆಗಳು

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಮಕ್ಕಳು	ಸದಸ್ಯೆ	ಎಲ್ಲರೂ	ಒಟ್ಟು
೦೧	ಮಲಪನಗುಡಿ	೨	೩	೨	೭
೦೨.	ರಾಮಸಾಗರ	೧	೧	೪	೬
೦೩.	ದೇವಲಾಪುರ	೨	೩	೧	೬
೦೪.	ದೇವಸಮುದ್ರ	೩	೩	--	೬
೦೫.	ಮೆಟ್ರಿ	೨	೨	೨	೬
೦೬.	ಸೀತಾರಾಂ ತಾಂಡ	--	೨	--	೨
೦೭.	ಹಂಪಿ	೧	೨	೧	೪
೦೮.	ಬುಕ್ಕಸಾಗರ	೩	೨	೧	೬
೦೯.	ಜಿ.ನಾಗಲಾಪುರ	೨	೩	೧	೬
೧೦.	ಚಿಲಕನಹಟ್ಟಿ	--	೧	೬	೭
೧೧.	೧೧೪ ಡಣಾಪುರ	೩	೬	--	೯
೧೨.	ಡಣಾಯಕನ ಕೆರೆ	--	೨	೨	೪
೧೩.	ಸುಗ್ಗೇನಹಳ್ಳಿ	೧	೩	೧	೫
೧೪.	ಹಂಪಾದೇವನಹಳ್ಳಿ	೨	೩	೧	೬
೧೫.	ಪಾಪಿನಾಯಕನಹಳ್ಳಿ	೧	೫	೧	೭
೧೬.	ಕಲ್ಲಳ್ಳಿ	--	೨	೧	೩
೧೭.	ನಾಗೇನಹಳ್ಳಿ	೧	೩	೨	೬
೧೮.	ಬೈಲುವದ್ದಿಗೇರಿ	೨	೨	೨	೬
೧೯.	ನಂ.೧೦ ಮುದ್ದಾಪುರ	೨	೨	೨	೬
೨೦.	ಸಣಾಪುರ	೬	೧	--	೭
೨೧.	ಮರಿಯಮ್ಮನಹಳ್ಳಿ	೯	೧	೨	೧೨
೨೨.	ಗಾದಿಗನೂರು	೨	೨	--	೬
೨೩.	ಹೊಸೂರು	೨	೧	--	೫
	ಒಟ್ಟು	೪೭	೫೫	೩೬	೧೩೮
	ಶೇಕಡ	೩೪	೩೯.೮೫	೨೬	೧೦೦

ಕೋಷ್ಟಕ ೧೩.೨

ಚುನಾಯಿತ ಮಹಿಳೆಯರ ಮನೆಯಲ್ಲಿ ನೀರು ಉರುವಲು ಸಂಗ್ರಹಿಸುವ ಬಗೆ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಮಕ್ಕಳು	ಸದಸ್ಯೆ	ಎಲ್ಲರೂ	ಒಟ್ಟು
೦೧	ಮೆಟ್ರಿಕಿ	--	೧	೬	೭
೦೨.	ವಿಠಲಾಪುರ	೨	೩	೧	೬
೦೩.	ಅಂತಾಪುರ	೩	೨	೧	೬
೦೪.	ವಡ್ಡು	೬	೨	--	೮
೦೫.	ದರೋಜಿ	೬	೧	೧	೮
೦೬.	ಕುರೇಕುಪ್ಪ	೭	೨	--	೯
೦೭.	ತೋರಣಗಲ್ಲು	೫	--	೧	೬
೦೮.	ಕಾಳಿಂಗೇರಿ	೩	೨	೧	೬
೦೯.	ಜಿ.ಎಲ್.ಹಳ್ಳಿ	೫	೧	--	೬
೧೦.	ಬೊಮ್ಮಗಟ್ಟ	೬	೪	--	೧೦
೧೧.	ಸೋವೆನಹಳ್ಳಿ	೩	೩	--	೬
೧೨.	ಚೋರನೂರು	೨	೩	೨	೭
೧೩.	ನಿಡಗುರ್ತಿ	೪	೪	--	೮
೧೪.	ಬಂಡ್ರಿ	೨	೪	೧	೭
೧೫.	ತಾರಾನಗರ	೪	೩	೧	೮
೧೬.	ಕೃಷ್ಣನಗರ	೪	೧	೨	೭
೧೭.	ನರಸಿಂಗಪುರ	೨	೨	೭	೧೧
೧೮.	ಭುಜಂಗನಗರ	೧	೨	೩	೬
೧೯.	ದೇವಗಿರಿ	೫	೧	--	೬
೨೦.	ಯಶವಂತನಗರ	೧	೧	೪	೬
೨೧.	ಸುಶೀಲಾನಗರ	--	೧	೬	೭
	ಒಟ್ಟು	೭೧	೪೩	೩೭	೧೫೧
	ಶೇಕಡ	೪೭	೨೮.೪೭	೨೪.೫೦	೧೦೦

ಕೋಷ್ಟಕ ೧೩.೧ ಮತ್ತು ೧೩.೨ ಚುನಾಯಿತ ಮಹಿಳೆಯರ ಮನೆಗಳಲ್ಲಿ ಕುಡಿಯುವ ನೀರು ಹಾಗೂ ಉರುವಲು(Fuel)ನ್ನು ಯಾರು ಯಾರು ಸಂಗ್ರಹಿಸುತ್ತಾರೆ ಎನ್ನುವುದರ ಅಂಕಿ ಅಂಶಗಳನ್ನು ಒದಗಿಸುತ್ತದೆ. ಹೊಸಪೇಟೆಯಲ್ಲಿ ಚುನಾಯಿತ ಮಹಿಳೆಯರ ಮಕ್ಕಳು ನೀರು ಮತ್ತು ಉರುವಲನ್ನು ಸಂಗ್ರಹಿಸುವದರ ಪ್ರಮಾಣ ಶೇ.೩೪ ರಷ್ಟಿದ್ದರೆ, ಚುನಾಯಿತ ಮಹಿಳೆಯರೇ ನೀರು ಮತ್ತು ಉರುವಲನ್ನು ಸಂಗ್ರಹಿಸುವುದು ಶೇ.೩೯.೮೫ ರಷ್ಟಿದೆ. ಸದಸ್ಯೆ ಮತ್ತು ಮಕ್ಕಳು ಎಲ್ಲರೂ ಸೇರಿ ಸಂಗ್ರಹಿಸುವುದು ಶೇ.೨೬ ರಷ್ಟಿರುವುದು ತಿಳಿಯುತ್ತದೆ.

ಕೋಷ್ಟಕ ೧೩.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಚುನಾಯಿತ ಮಹಿಳೆಯರ ಮಕ್ಕಳು ನೀರು ಮತ್ತು ಉರುವಲು ಸಂಗ್ರಹಿಸುವುದು ಶೇ.೪೭ ರಷ್ಟಿದೆ. ಚುನಾಯಿತ ಮಹಿಳೆಯರೇ ನೀರು ಮತ್ತು ಉರುವಲನ್ನು ಸಂಗ್ರಹಿಸುವುದು ಶೇ.೨೮.೪೭ ರಷ್ಟಿದ್ದರೆ, ಸದಸ್ಯೆಯರು ಮತ್ತು ಮಕ್ಕಳು ಸೇರಿ ಉರುವಲು ಮತ್ತು ನೀರು ಸಂಗ್ರಹಿಸುವುದು ಶೇ.೨೪.೫೦ ರಷ್ಟಿರುವುದು ಕಂಡುಬರುತ್ತದೆ.

ಎರಡೂ ತಾಲೂಕುಗಳನ್ನು ತೌಲನಿಕವಾಗಿ ಅವಲೋಕಿಸಿದಾಗ ಮಕ್ಕಳೇ ನೀರು ಮತ್ತು ಉರುವಲನ್ನು ಸಂಗ್ರಹಿಸುವ ಪ್ರಮಾಣವು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದೆ. ಚುನಾಯಿತ ಮಹಿಳೆಯರೇ ನೀರು ಮತ್ತು ಉರುವಲನ್ನು ಸಂಗ್ರಹಿಸುವ ಪ್ರಮಾಣವು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಅಧಿಕವಾಗಿದೆ. ಸದಸ್ಯೆಯರು ಮತ್ತು ಮಹಿಳೆಯರನ್ನು ಒಳಗೊಂಡು ಎಲ್ಲರೂ ಸೇರಿ ನೀರು ಮತ್ತು ಉರುವಲನ್ನು ಸಂಗ್ರಹಿಸುವುದು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿದೆ.

ಕೋಷ್ಟಕ ೧೪.೧

ಚುನಾಯಿತ ಮಹಿಳೆಯರ ಸ್ಥಿರಾಸ್ತಿಯ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಜಮೀನು ಇದೆ	ಇಲ್ಲ	ಒಟ್ಟು
೦೧.	ಮಲಪನಗುಡಿ	೨	೫	೭
೦೨.	ರಾಮಸಾಗರ	೩	೩	೬
೦೩.	ದೇವಲಾಪುರ	೨	೪	೬
೦೪.	ದೇವಸಮುದ್ರ	೧	೫	೬
೦೫.	ಮೆಟ್ರಿ	೪	೨	೬
೦೬.	ಸೀತಾರಾಂ ತಾಂಡ	೧	೧	೨
೦೭.	ಹಂಪಿ	೨	೨	೪
೦೮.	ಬುಕ್ಕಸಾಗರ	೨	೪	೬
೦೯.	ಜಿ.ನಾಗಲಾಪುರ	೫	೧	೬
೧೦.	ಚಿಲಕನಹಟ್ಟಿ	೫	೨	೭
೧೧.	೧೧೪ ಡಣಾಪುರ	೧	೮	೯
೧೨.	ಡಣಾಯಕನ ಕೆರೆ	೧	೩	೪
೧೩.	ಸುಗ್ಗೇನಹಳ್ಳಿ	೪	೧	೫
೧೪.	ಹಂಪಾದೇವನಹಳ್ಳಿ	೩	೩	೬
೧೫.	ಪಾಪಿನಾಯಕನಹಳ್ಳಿ	೩	೪	೭
೧೬.	ಕಲ್ಲಳ್ಳಿ	೨	೧	೩
೧೭.	ನಾಗೇನಹಳ್ಳಿ	೩	೩	೬
೧೮.	ಬೈಲುವದ್ದಿಗೇರಿ	೩	೩	೬
೧೯.	ನಂ.೧೦ ಮುದ್ದಾಪುರ	೪	೨	೬
೨೦.	ಸಣಾಪುರ	೫	೨	೭
೨೧.	ಮರಿಯಮ್ಮನಹಳ್ಳಿ	--	--	೧೨
೨೨.	ಗಾದಿಗನೂರು	೬	--	೬
೨೩.	ಹೊಸೂರು	೩	೨	೫
	ಒಟ್ಟು	೭೦	೭೮	೧೩೮
	ಶೇಕಡ	೫೦.೭೨	೫೬.೫೨	೧೦೦

ಕೋಷ್ಟಕ ೧೪.೨

ಚುನಾಯಿತ ಮಹಿಳೆಯರ ಸ್ಥಿರಾಸ್ತಿಯ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಜಮೀನು ಇದೆ	ಇಲ್ಲ	ಒಟ್ಟು
೦೧	ಮೆಟ್ರಿಕಿ	೭	--	೭
೦೨.	ವಿಠಲಾಪುರ	೨	೪	೬
೦೩.	ಅಂತಾಪುರ	೪	೨	೬
೦೪.	ವಡ್ಡು	೭	೧	೮
೦೫.	ದರೋಜಿ	೬	೨	೮
೦೬.	ಕುರೇಕುಪ್ಪ	೩	೬	೯
೦೭.	ತೋರಣಗಲ್ಲು	--	೬	೬
೦೮.	ಕಾಳಿಂಗೇರಿ	೬	--	೬
೦೯.	ಜಿ.ಎಲ್.ಹಳ್ಳಿ	೬	--	೬
೧೦.	ಬೊಮ್ಮಗಟ್ಟ	೯	೧	೧೦
೧೧.	ಸೋವೆನಹಳ್ಳಿ	೬	--	೬
೧೨.	ಚೋರನೂರು	೬	೧	೭
೧೩.	ನಿಡಗುರ್ತಿ	೭	೧	೮
೧೪.	ಬಂಡ್ರಿ	೩	೪	೭
೧೫.	ತಾರಾನಗರ	೩	೫	೮
೧೬.	ಕೃಷ್ಣನಗರ	೧	೬	೭
೧೭.	ನರಸಿಂಗಪುರ	೩	೮	೧೧
೧೮.	ಭುಜಂಗನಗರ	೬	--	೬
೧೯.	ದೇವಗಿರಿ	೪	೨	೬
೨೦.	ಯಶವಂತನಗರ	೨	೪	೬
೨೧.	ಸುಶೀಲಾನಗರ	೬	೧	೭
	ಒಟ್ಟು	೯೭	೫೪	೧೫೧
	ಶೇಕಡ	೬೪.೨೩	೩೫.೭೬	೧೦೦

ಕೋಷ್ಟಕ ೧೪.೧ ಮತ್ತು ೧೪.೨ ಚುನಾಯಿತ ಮಹಿಳೆಯರ ಸ್ಥಿರಾಸ್ತಿಯ ವಿವರವನ್ನು ಅಂಕಿ ಅಂಶದ ಮೂಲಕ ಒದಗಿಸುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಂತ ಜಮೀನು ಹೊಂದಿರುವ ಚುನಾಯಿತ ಮಹಿಳೆಯರು ಶೇ.೫೦.೭೨ ರಷ್ಟಿರುವರು. ಜಮೀನು ಹೊಂದಿಲ್ಲದ ಚುನಾಯಿತ ಮಹಿಳೆಯರು ಶೇ.೫೬.೫೨ ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೧೪.೨ ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಜಮೀನು ಹೊಂದಿರುವ ಚುನಾಯಿತ ಮಹಿಳೆಯರು ಶೇ.೬೪.೨೩ ರಷ್ಟಿರುವರು. ಜಮೀನು ಇಲ್ಲದಿರುವ ಚುನಾಯಿತ ಮಹಿಳೆಯರು ಶೇ.೩೫.೭೬ ರಷ್ಟಿರುವರು.

ತೌಲನಿಕವಾಗಿ ಎರಡೂ ತಾಲೂಕಿನ ಗ್ರಾಮಪಂಚಾಯ್ತಿಗಳ ಸದಸ್ಯೆಯರನ್ನು ಗಮನಿಸಿದಾಗ ಸ್ವಂತ ಜಮೀನು ಹೊಂದಿರುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವರು. ಜಮೀನು ಇಲ್ಲದಿರುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವರು.

ಕೋಷ್ಟಕ ೧೫.೧

ಚುನಾಯಿತ ಮಹಿಳೆಯರ ಆದಾಯದ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಸ್ವಂತ ಕೃಷಿ	ಮನೆಗೆಲಸ	ಕೂಲಿ	ಇತರೆ	ಒಟ್ಟು
೦೧	ಮಲಪನಗುಡಿ	೧	೨	೪	--	೭
೦೨.	ರಾಮಸಾಗರ	೨	೨	೧	೧	೬
೦೩.	ದೇವಲಾಪುರ	೧	೨	೩	--	೬
೦೪.	ದೇವಸಮುದ್ರ	೩	--	೩	--	೬
೦೫.	ಮೆಟ್ರಿ	೩	೧	೨	--	೬
೦೬.	ಸೀತಾರಾಂ ತಾಂಡ	--	೧	೧	--	೨
೦೭.	ಹಂಪಿ	--	--	೩	೧	೪
೦೮.	ಬುಕ್ಕಸಾಗರ	೧	--	೫	--	೬
೦೯.	ಜಿ.ನಾಗಲಾಪುರ	--	೨	೩	೧	೬
೧೦.	ಚಿಲಕನಹಟ್ಟಿ	೩	--	೩	೧	೭
೧೧.	೧೧೪ ಡಣಾಪುರ	--	೧	೫	೩	೯
೧೨.	ಡಣಾಯಕನ ಕೆರೆ	೨	೧	೧	--	೪
೧೩.	ಸುಗ್ಗೇನಹಳ್ಳಿ	೨	--	೩	--	೫
೧೪.	ಹಂಪಾದೇವನಹಳ್ಳಿ	೪	೧	೧	--	೬
೧೫.	ಪಾಪಿನಾಯಕನಹಳ್ಳಿ	೧	೧	೩	೨	೭
೧೬.	ಕಲ್ಲಳ್ಳಿ	--	೧	೨	--	೩
೧೭.	ನಾಗೇನಹಳ್ಳಿ	೧	೨	೨	೧	೬
೧೮.	ಬೈಲುವದ್ದಿಗೇರಿ	೩	೨	೧	--	೬
೧೯.	ನಂ.೧೦ ಮುದ್ದಾಪುರ	--	೨	೪	--	೬
೨೦.	ಸಣಾಪುರ	೨	--	೫	--	೭
೨೧.	ಮರಿಯಮ್ಮನಹಳ್ಳಿ	೧	೭	೨	೨	೧೨
೨೨.	ಗಾದಿಗನೂರು	೩	೨	--	೧	೬
೨೩.	ಹೊಸೂರು	೧	೧	೧	೨	೫
	ಒಟ್ಟು	೩೩	೩೧	೫೮	೧೬	೧೩೮
	ಶೇಕಡ	೨೩.೯೧	೨೨.೪೬	೪೨	೧೧.೫೯	೧೦೦

ಕೋಷ್ಟಕ ೧೫.೨

ಚುನಾಯಿತ ಮಹಿಳೆಯರ ಆದಾಯದ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಮನೆಗೆಲಸ	ಸ್ವಂತಕೃಷಿ	ಕೂಲಿ	ಇತರೆ	ಒಟ್ಟು
೦೧	ಮೆಟ್ರಿಕಿ	೨	೩	೧	೧	೭
೦೨.	ವಿಠಲಾಪುರ	೨	--	೩	೧	೬
೦೩.	ಅಂತಾಪುರ	೨	೧	೨	೧	೬
೦೪.	ವಡ್ಡು	೪	೧	೩	--	೮
೦೫.	ದರೋಜಿ	೪	೧	೩	--	೮
೦೬.	ಕುರೇಕುಪ್ಪ	೩	--	೪	೨	೯
೦೭.	ತೋರಣಗಲ್ಲು	೫	--	೧	--	೬
೦೮.	ಕಾಳಿಂಗೇರಿ	೨	೩	೧	--	೬
೦೯.	ಜಿ.ಎಲ್.ಹಳ್ಳಿ	--	೪	೨	--	೬
೧೦.	ಬೊಮ್ಮಗಟ್ಟ	೬	೩	೧	--	೧೦
೧೧.	ಸೋವೆನಹಳ್ಳಿ	೧	೫	--	--	೬
೧೨.	ಚೋರನೂರು	೨	೩	೨	--	೭
೧೩.	ನಿಡಗುರ್ತಿ	೧	೫	೨	--	೮
೧೪.	ಬಂಡ್ರಿ	೧	೧	೪	೧	೭
೧೫.	ತಾರಾನಗರ	೫	--	೨	೧	೮
೧೬.	ಕೃಷ್ಣನಗರ	೪	--	--	೩	೭
೧೭.	ನರಸಿಂಗಪುರ	೭	೨	೨	--	೧೧
೧೮.	ಭುಜಂಗನಗರ	೪	೨	--	--	೬
೧೯.	ದೇವಗಿರಿ	೪	೧	--	೧	೬
೨೦.	ಯಶವಂತನಗರ	೫	--	--	೧	೬
೨೧.	ಸುಶೀಲಾನಗರ	೩	೧	೨	೧	೭
	ಒಟ್ಟು	೬೭	೩೬	೩೫	೧೩	೧೫೧
	ಶೇಕಡ	೪೪.೩೭	೨೩.೮೪	೨೩.೧೭	೮.೬೦	೧೦೦

ಕೋಷ್ಟಕ ೧೫.೧ ಮತ್ತು ೧೫.೨ ಚುನಾಯಿತ ಮಹಿಳೆಯರ ಆದಾಯದ ವಿವರವನ್ನು ಅಂಕಿ ಅಂಶಗಳ ಮೂಲಕ ತಿಳಿಸುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಂತ ಕೃಷಿಯಲ್ಲಿ ಭಾಗಿಯಾಗುವ ಚುನಾಯಿತ ಮಹಿಳೆಯರ ಪ್ರಮಾಣ ಶೇ.೨೩.೯೧ ರಷ್ಟಿದೆ. ಮನೆಗೆಲಸವನ್ನು ಮಾತ್ರ ನಿರ್ವಹಿಸುವ ಚುನಾಯಿತ ಮಹಿಳೆಯರು ಶೇ.೨೨.೪೬ ರಷ್ಟಿದ್ದಾರೆ. ಕೂಲಿ ಮಾಡುವ ಚುನಾಯಿತ ಮಹಿಳೆಯರು ಶೇ.೪೨ ರಷ್ಟಿರುವರು. ಇತರೆ ಕೆಲಸ ಮಾಡುವ ಚುನಾಯಿತ ಮಹಿಳೆಯರು ಶೇ.೧೧.೫೯ ರಷ್ಟಿರುವುದು ತಿಳಿದುಬರುತ್ತದೆ.

ಕೋಷ್ಟಕ ೧೫.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಸ್ವಂತ ಕೃಷಿಯಲ್ಲಿ ಭಾಗಿಯಾಗುವ ಚುನಾಯಿತ ಮಹಿಳೆಯರು ಶೇ.೨೩.೮೪ ರಷ್ಟಿರುವರು. ಮನೆಗೆಲಸವನ್ನು ನಿರ್ವಹಿಸುವ ಚುನಾಯಿತ ಮಹಿಳೆಯರು ಶೇ.೪೪.೩೭ ರಷ್ಟು ಇದ್ದಾರೆ. ಕೂಲಿ ಕೆಲಸ ಮಾಡುವ ಚುನಾಯಿತ ಮಹಿಳೆಯರು ಶೇ.೨೩.೧೭ ರಷ್ಟಿರುವರು. ಇತರೆ ಕೆಲಸ ಮಾಡುವ ಚುನಾಯಿತ ಮಹಿಳೆಯರು ಶೇ.೮.೬೦ ರಷ್ಟಿರುವುದು ಕಂಡುಬಂದಿದೆ.

ತೌಲನಿಕವಾಗಿ ಅಧ್ಯಯನ ಮಾಡಿದಾಗ ಸ್ವಂತ ಕೃಷಿಯಲ್ಲಿ ಭಾಗಿಯಾಗುವ ಚುನಾಯಿತ ಮಹಿಳೆಯರು ಹೆಚ್ಚು ಕಡಿಮೆ ಎರಡು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸಮಪ್ರಮಾಣದಲ್ಲಿರುವುದು ತಿಳಿದುಬರುತ್ತದೆ. ಮನೆಗೆಲಸ ಮಾಡುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವರು. ಕೂಲಿ ಮಾಡುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಅಧಿಕ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಇತರೆ ಕೆಲಸ ಮಾಡುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಕೋಷ್ಟಕ ೧೬.೧

ಚುನಾಯಿತ ಮಹಿಳೆಯರ ಪತಿಯ ಉದ್ಯೋಗದ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸ್ವಂತ ಕೃಷಿ	ಕೂಲಿ	ಕುಲ ಕಸುಬು	ಗಣಿ ಕೆಲಸ	ಖಾಸಗಿ ಉದ್ಯೋಗ	ಸರ್ಕಾರಿ ಉದ್ಯೋಗ	ವಿಧವೆ	ದೇವ ದಾಸಿ	ಒಟ್ಟು
೦೧.	ಮಲಪನಗುಡಿ	೫	೨	--	--	--	--	--	--	೭
೦೨.	ರಾಮಸಾಗರ	೩	೧	--	--	೨	--	--	--	೬
೦೩.	ದೇವಲಾಪುರ	೨	೨	--	--	೧	--	೧	--	೬
೦೪.	ದೇವಸಮುದ್ರ	೨	೨	--	--	೧	--	೧	--	೬
೦೫.	ಮೆಟ್ರಿ	೨	೨	--	--	೧	--	೧	--	೬
೦೬.	ಸೀತಾರಾಂ ತಾಂಡ	--	೨	--	--	--	--	--	--	೨
೦೭.	ಹಂಪಿ	--	೨	--	--	೧	--	--	೧	೪
೦೮.	ಬುಕ್ಕಸಾಗರ	೨	--	--	--	--	--	೪	--	೬
೦೯.	ಜಿ.ನಾಗಲಾಪುರ	೨	೨	೧	--	೧	--	--	--	೬
೧೦.	ಚಿಲಕನಹಟ್ಟಿ	೨	೩	--	--	--	--	--	೨	೭
೧೧.	೧೧೪ ಡಣಾಪುರ	೨	೨	--	೨	೧	--	--	೨	೯
೧೨.	ಡಣಾಯಕನಕೆರೆ	--	--	--	--	--	೨	--	೧	೪
೧೩.	ಸುಗ್ಗೇನಹಳ್ಳಿ	೧	೩	--	--	--	--	--	೧	೫
೧೪.	ಹಂಪಾದೇವನಹಳ್ಳಿ	೩	೨	--	--	೧	--	--	--	೬
೧೫.	ಪಾಪಿನಾಯಕನಹಳ್ಳಿ	--	೫	--	--	--	--	೧	೧	೭
೧೬.	ಕಲ್ಲಳ್ಳಿ	೧	--	--	--	೧	--	--	೧	೩
೧೭.	ನಾಗೇನಹಳ್ಳಿ	೧	೧	--	೧	೧	--	೧	೧	೬
೧೮.	ಬೈಲುವದ್ದಿಗೇರಿ	೨	೩	--	--	೧	--	--	--	೬
೧೯.	ನಂ.೧೦ ಮುದ್ದಾಪುರ	೩	೧	--	--	೧	--	--	೧	೬
೨೦.	ಸಣಾಪುರ	೨	೪	--	--	--	--	--	೧	೭
೨೧.	ಮರಿಯಮ್ಮನಹಳ್ಳಿ	೩	೩	--	--	೪	೧	೧	--	೧೨
೨೨.	ಗಾದಿಗನೂರು	೩	--	೧	--	೧	೧	--	--	೬
೨೩.	ಹೊಸೂರು	೨	೨	--	--	೧	--	--	--	೫
	ಒಟ್ಟು	೪೩	೪೪	೨	೩	೧೯	೩	೧೦	೧೪	೧೩೮
	ಶೇಕಡ	೩೧.೧೫	೩೧.೮೮	೧.೪೪	೨.೧೭	೧೩.೭೭	೨.೧೭	೭.೨೪	೧೦.೧೪	೧೦೦

ಕೋಷ್ಟಕ ೧೬.೨

ಚುನಾಯಿತ ಮಹಿಳೆಯರ ಪತಿಯ ಉದ್ಯೋಗದ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸ್ವಂತ ಕೃಷಿ	ಕೂಲಿ	ಕುಲ ಕಸುಬು	ಗಣಿ ಗೆಲಸ	ಖಾಸಗಿ ಯಾಗಿ	ದೇವ ದಾಸಿ	ಸರ್ಕಾರಿ ಉದ್ಯೋಗ	ವಿಧವೆ	ಒಟ್ಟು
೦೧.	ಮೆಟ್ರಿಕಿ	೪	೧	--	--	೧	--	೧	--	೭
೦೨.	ವಿಠಲಾಪುರ	೧	೧	೧	--	೨	--	--	೧	೬
೦೩.	ಅಂತಾಪುರ	೨	೨	೧	--	೧	--	--	--	೬
೦೪.	ವಡ್ಡು	೪	೧	--	--	೧	೧	--	೧	೮
೦೫.	ದರೋಜಿ	೩	೧	೧	--	೧	೧	--	೧	೮
೦೬.	ಕುರೇಕುಪ್ಪ	೨	೫	--	--	--	--	೨	--	೯
೦೭.	ತೋರಣಗಲ್ಲು	೧	೧	--	--	೩	--	೧	--	೬
೦೮.	ಕಾಳಿಂಗೇರಿ	೪	--	೧	--	೧	--	--	--	೬
೦೯.	ಜಿ.ಎಲ್.ಹಳ್ಳಿ	೬	--	--	--	--	--	--	--	೬
೧೦.	ಬೊಮ್ಮಗಟ್ಟ	೭	೧	--	--	--	--	೧	೧	೧೦
೧೧.	ಸೋವೆನಹಳ್ಳಿ	೪	--	--	--	--	--	೧	೧	೬
೧೨.	ಚೋರನೂರು	೩	೧	೧	--	--	--	೧	೧	೭
೧೩.	ನಿಡಗುರ್ತಿ	೩	೨	--	--	೧	೧	--	೧	೮
೧೪.	ಬಂಡ್ರಿ	೧	೨	೨	--	೧	--	೧	--	೭
೧೫.	ತಾರಾನಗರ	೨	೨	--	೧	೨	--	೧	--	೮
೧೬.	ಕೃಷ್ಣನಗರ	--	೩	--	--	೩	--	೧	--	೭
೧೭.	ನರಸಿಂಗಪುರ	೨	೧	--	--	೧	--	೭	--	೧೧
೧೮.	ಭುಜಂಗನಗರ	೨	--	--	೧	೧	೧	೧	--	೬
೧೯.	ದೇವಗಿರಿ	--	--	೧	೧	೨	೧	೧	--	೬
೨೦.	ಯಶವಂತನಗರ	--	೧	--	--	೨	--	೩	--	೬
೨೧.	ಸುಶೀಲನಗರ	೧	೨	--	--	೪	--	--	--	೭
	ಒಟ್ಟು	೫೨	೨೭	೮	೩	೨೭	೫	೨೧	೧೩	೧೫೧
	ಶೇಕಡ	೩೭.೬೮	೧೭.೮೮	೫.೨೯	೧.೯೮	೧೭.೮೮	೩.೩೧	೧೩.೯೦	೮.೬೦	೧೦೦

ಕೋಷ್ಟಕ ೧೬.೧ ಮತ್ತು ೧೬.೨ ಚುನಾಯಿತ ಮಹಿಳೆಯರ ಪತಿಯ ಉದ್ಯೋಗದ ವಿವರಗಳನ್ನು ಅಂಕಿ ಅಂಶಗಳ ಮೂಲಕ ೧೬.೧ ಮತ್ತು ೧೬.೨ ಕೋಷ್ಟಕಗಳು ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಸ್ವಂತ ಕೃಷಿ ಮಾಡುವ ಚುನಾಯಿತ ಮಹಿಳೆಯರ ಪತಿಯಂದಿರು ಶೇ.೩೧.೧೫ ರಷ್ಟಿದ್ದರೆ, ಕೂಲಿ ಮಾಡುವ ಪತಿಯಂದಿರು ಶೇ.೩೧.೮೮ ರಷ್ಟಿದ್ದಾರೆ. ಕುಲಕಸುಬು ಮಾಡುವ ಪತಿಯಂದಿರು ಶೇ.೧.೪೪ ರಷ್ಟಿದ್ದಾರೆ. ಗಣಿಗೆಲಸ ಮಾಡುವವರು ಶೇ.೨.೧೭ ರಷ್ಟಿರುವರು. ಖಾಸಗಿ ಉದ್ಯೋಗದಲ್ಲಿರುವ ಪತಿಯಂದಿರು ಶೇ.೧೩.೭೬ ರಷ್ಟಿದ್ದರೆ, ಸರ್ಕಾರಿ ಉದ್ಯೋಗದಲ್ಲಿರುವ ಪತಿಯಂದಿರು ಶೇ.೨.೧೭ ರಷ್ಟಿರುವರು. ಉಳಿದ ಚುನಾಯಿತ ಮಹಿಳೆಯರು ವಿಧವೆಯರು ಮತ್ತು ದೇವದಾಸಿಯರು ಆಗಿದ್ದಾರೆ. ವಿಧವೆಯರು ಶೇ.೭.೨೪ ರಷ್ಟು ದೇವದಾಸಿಯರು ಶೇ.೧೦.೧೪ ರಷ್ಟು ಇರುವರು.

ಕೋಷ್ಟಕ ೧೬.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಂತಕೃಷಿ ಮಾಡುವ ಚುನಾಯಿತ ಮಹಿಳೆಯರ ಪತಿಯಂದಿರು ಶೇ.೩೭.೬೮ ರಷ್ಟಿದ್ದರೆ, ಕೂಲಿ ಮಾಡುವವರು ಶೇ.೧೭.೮೮ ರಷ್ಟಿದ್ದಾರೆ. ಕುಲಕಸುಬು ಮಾಡುವ ಪತಿಯಂದಿರು ಶೇ.೫.೨೯ರಷ್ಟಿದ್ದರೆ. ಗಣಿಗೆಲಸ ಮಾಡುವ ಪತಿಯಿಂದಿರು ಶೇ.೧.೯೮ ರಷ್ಟಿರುವುದು. ಖಾಸಗಿಯಾಗಿ ಕೆಲಸ ಮಾಡುವ ಪತಿಯಂದಿರು ಶೇ.೧೭.೮೮ ರಷ್ಟಿದ್ದರೆ, ಸರ್ಕಾರಿ ಉದ್ಯೋಗದಲ್ಲಿರುವ ಪತಿಯಂದಿರು ಶೇ.೧೩.೯೦ ರಷ್ಟಿರುವರು. ಉಳಿದ ಚುನಾಯಿತ ಮಹಿಳೆಯರು ವಿಧವೆಯರೂ ಹಾಗೂ ದೇವದಾಸಿಯರು ಆಗಿರುವರು. ವಿಧವೆಯರು ಶೇ.೮.೬೦ ರಷ್ಟಿದ್ದರೆ, ದೇವದಾಸಿಯರು ಶೇ.೩.೩೧ ರಷ್ಟಿದ್ದಾರೆ.

ಎರಡೂ ತಾಲೂಕುಗಳ ಗ್ರಾಮಪಂಚಾಯ್ತಿಗಳನ್ನು ತೌಲನಿಕವಾಗಿ ಅವಲೋಕಿಸಿದಾಗ ಸ್ವಂತ ಕೃಷಿ ಮಾಡುವ ಪತಿಯಂದಿರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಹೆಚ್ಚಾಗಿದ್ದಾರೆ. ಕೂಲಿ ಮಾಡುವ ಪತಿಯಂದಿರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಕುಲಕಸುಬು ಮಾಡುವ ಪತಿಯಂದಿರು ಹೊಸಪೇಟೆ ತಾಲೂಕಿಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಗಣಿಗೆಲಸ ಮಾಡುವ ಪತಿಯಂದಿರ ಪ್ರಮಾಣವು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದೆ. ಖಾಸಗಿಯಾಗಿ ಕೆಲಸ ಮಾಡುವ ಪತಿಯಂದಿರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದ್ದಾರೆ. ಸರ್ಕಾರಿ ಉದ್ಯೋಗಿಯಾಗಿರುವ ಪತಿಯಂದಿರು ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಅಧಿಕ ಪ್ರಮಾಣದಲ್ಲಿರುವುದು ಗೋಚರವಾಗುತ್ತದೆ.

ಕೋಷ್ಟಕ ೧೭.೧

ಚುನಾಯಿತ ಮಹಿಳೆಯರು ಚುನಾವಣಾ ಪ್ರಚಾರದಲ್ಲಿ ಭಾಗಿಯಾದವರ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಸ್ವತಃಭಾಗಿ	ಭಾಗಿಯಾಗಿಲ್ಲ	ಅವಿರೋಧ ಆಯ್ಕೆ	ಒಟ್ಟು
೦೧	ಮಲಪನಗುಡಿ	೬	೧	--	೭
೦೨.	ರಾಮಸಾಗರ	೪	--	೨	೬
೦೩.	ದೇವಲಾಪುರ	೪	೨	--	೬
೦೪.	ದೇವಸಮುದ್ರ	೫	--	೧	೬
೦೫.	ಮೆಟ್ರಿ	೪	೧	೧	೬
೦೬.	ಸೀತಾರಾಂ ತಾಂಡ	೨	--	--	೨
೦೭.	ಹಂಪಿ	೩	--	೧	೪
೦೮.	ಬುಕ್ಕಸಾಗರ	೪	೨	--	೬
೦೯.	ಜಿ.ನಾಗಲಾಪುರ	೪	೨	--	೬
೧೦.	ಚಿಲಕನಹಟ್ಟಿ	೪	೧	೨	೭
೧೧.	೧೧೪ ಡಣಾಪುರ	೩	೨	೪	೯
೧೨.	ಡಣಾಯಕನ ಕೆರೆ	೨	೧	೧	೪
೧೩.	ಸುಗ್ಗೇನಹಳ್ಳಿ	೨	--	೩	೫
೧೪.	ಹಂಪಾದೇವನಹಳ್ಳಿ	೫	--	೧	೬
೧೫.	ಪಾಪಿನಾಯಕನಹಳ್ಳಿ	೫	--	೨	೭
೧೬.	ಕಲ್ಲಳ್ಳಿ	೧	--	೨	೩
೧೭.	ನಾಗೇನಹಳ್ಳಿ	೫	--	೧	೬
೧೮.	ಬೈಲುವದ್ದಿಗೇರಿ	೪	೨	--	೬
೧೯.	ನಂ.೧೦ ಮುದ್ದಾಪುರ	೨	೧	೩	೬
೨೦.	ಸಣಾಪುರ	--	--	೭	೭
೨೧.	ಮರಿಯಮ್ಮನಹಳ್ಳಿ	೧೨	--	--	೧೨
೨೨.	ಗಾದಿಗನೂರು	೩	--	೩	೬
೨೩.	ಹೊಸೂರು	೫	--	--	೫
	ಒಟ್ಟು	೮೯	೧೫	೩೪	೧೩೮
	ಶೇಕಡ	೬೪.೪೯	೧೦.೮೬	೨೪.೬೩	೧೦೦

ಕೋಷ್ಟಕ ೧೭.೨

ಚುನಾಯಿತ ಮಹಿಳೆಯರು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಸ್ವಂತ ಭಾಗಿ	ಭಾಗಿಯಾಗಿಲ್ಲ	ಅವಿರೋಧ ಆಯ್ಕೆ	ಒಟ್ಟು
೦೧	ಮೆಟ್ರಿಕಿ	೩	--	೪	೭
೦೨.	ವಿಠಲಾಪುರ	೪	೧	೧	೬
೦೩.	ಅಂತಾಪುರ	೬	--	--	೬
೦೪.	ವಡ್ಡು	೭	೧	--	೮
೦೫.	ದರೋಜಿ	೮	--	--	೮
೦೬.	ಕುರೇಕುಪ್ಪ	೨	೧	೬	೯
೦೭.	ತೋರಣಗಲ್ಲು	೫	--	೧	೬
೦೮.	ಕಾಳಿಂಗೇರಿ	೬	--	--	೬
೦೯.	ಜಿ.ಎಲ್.ಹಳ್ಳಿ	೬	--	--	೬
೧೦.	ಬೊಮ್ಮಗಟ್ಟ	೮	--	೨	೧೦
೧೧.	ಸೋವೆನಹಳ್ಳಿ	೫	--	೧	೬
೧೨.	ಚೋರನೂರು	೬	--	೧	೭
೧೩.	ನಿಡಗುರ್ತಿ	೭	--	೧	೮
೧೪.	ಬಂಡ್ರಿ	೭	--	--	೭
೧೫.	ತಾರಾನಗರ	೫	--	೩	೮
೧೬.	ಕೃಷ್ಣನಗರ	೭	--	--	೭
೧೭.	ನರಸಿಂಗಪುರ	೧೧	--	--	೧೧
೧೮.	ಭುಜಂಗನಗರ	೬	--	--	೬
೧೯.	ದೇವಗಿರಿ	೧	--	೫	೬
೨೦.	ಯಶವಂತನಗರ	೬	--	--	೬
೨೧.	ಸುಶೀಲನಗರ	--	--	೭	೭
	ಒಟ್ಟು	೧೧೬	೩	೩೨	೧೫೧
	ಶೇಕಡ	೭೬.೮೨	೧.೯೮	೨೧.೧೯	೧೦೦

ಎಷ್ಟು ಚುನಾಯಿತ ಮಹಿಳೆಯರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದರು ಪಾಲ್ಗೊಂಡಿರಲಿಲ್ಲ ಎಂಬ ಅಂಕಿ ಅಂಶಗಳನ್ನು ೧೭.೧ ಮತ್ತು ೧೭.೨ ಕೋಷ್ಟಕವು ತಿಳಿಸುತ್ತವೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಚುನಾಯಿತ ಮಹಿಳೆಯರು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿರುವ ಪ್ರಮಾಣ ಶೇ.೬೪.೪೯ ರಷ್ಟಿದ್ದರೆ, ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿರದೇ ಇರುವ ಪ್ರಮಾಣವು ಶೇ.೧೦.೮೬ ರಷ್ಟಿದೆ. ಉಳಿದವರು ಅವಿರೋಧವಾಗಿ ಆಯ್ಕೆಯಾಗಿರವರು. ಅವರ ಪ್ರಮಾಣ ಶೇ.೨೪.೬೩ ರಷ್ಟಿದೆ.

ಕೋಷ್ಟಕ ೧೭.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡ ಚುನಾಯಿತ ಮಹಿಳೆಯರು ಶೇ.೭೬.೮೨ ರಷ್ಟಿದ್ದರೆ, ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿರದ ಚುನಾಯಿತ ಮಹಿಳೆಯರು ಶೇ.೧.೯೮ ರಷ್ಟಿದ್ದಾರೆ. ಉಳಿದ ಮಹಿಳೆಯರು ಅವಿರೋಧವಾಗಿ ಆಯ್ಕೆಯಾಗಿರವರು. ಅವರ ಪ್ರಮಾಣ ಶೇ.೨೧.೧೯ ರಷ್ಟಿದೆ.

ಎರಡು ತಾಲೂಕು ಗ್ರಾಮಪಂಚಾಯ್ತಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿರುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಣದಲ್ಲಿರುವರು. ಚುನಾವಣಾ ಪ್ರಚಾರದಲ್ಲಿ ಭಾಗಿಯಾಗದೇ ಇರುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಅಧಿಕ ಪ್ರಮಾಣದಲ್ಲಿರುವರು. ಅವಿರೋಧವಾಗಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.

ಕೋಷ್ಟಕ ೧೮.೧

ಚುನಾಯಿತ ಮಹಿಳೆಯರು ಪ್ರಚಾರದಲ್ಲಿದ್ದಾಗಿನ ಮನೋಸ್ಥಿತಿಯ ವಿವರ

ಕ್ರ.ಸಂ.	ಗ್ರಾಮ ಪಂಚಾಯಿತಿಗಳು	ಧೈರ್ಯವಾಗಿ	ನಾಚಿಕೆ ಮುಜುಗರ	ಅವಿರೋಧ ಆಯ್ಕೆ	ಒಟ್ಟು
೦೧	ಮಲಪನಗುಡಿ	೨	೫	--	೭
೦೨.	ರಾಮಸಾಗರ	--	೪	೨	೬
೦೩.	ದೇವಲಾಪುರ	--	೬	--	೬
೦೪.	ದೇವಸಮುದ್ರ	--	೫	೧	೬
೦೫.	ಮೆಟ್ರಿ	೨	೩	೧	೬
೦೬.	ಸೀತಾರಾಂ ತಾಂಡ	೨	--	--	೨
೦೭.	ಹಂಪಿ	೧	೨	೧	೪
೦೮.	ಬುಕ್ಕಸಾಗರ	೩	೩	--	೬
೦೯.	ಜಿ.ನಾಗಲಾಪುರ	೧	೫	--	೬
೧೦.	ಚಿಲಕನಹಟ್ಟಿ	೩	೧	೩	೭
೧೧.	೧೧ಳ ಡಣಾಪುರ	೧	೫	೩	೯
೧೨.	ಡಣಾಯಕನ ಕೆರೆ	--	೩	೧	೪
೧೩.	ಸುಗ್ಗೇನಹಳ್ಳಿ	೧	೧	೩	೫
೧೪.	ಹಂಪಾದೇವನಹಳ್ಳಿ	೩	೨	೧	೬
೧೫.	ಪಾಪಿನಾಯಕನಹಳ್ಳಿ	೩	೨	೨	೭
೧೬.	ಕಲ್ಲಳ್ಳಿ	೧	--	೨	೩
೧೭.	ನಾಗೇನಹಳ್ಳಿ	೧	೪	೧	೬
೧೮.	ಬೈಲುವದ್ದಿಗೇರಿ	೨	೪	--	೬
೧೯.	ನಂ.೧೦ ಮುದ್ದಾಪುರ	--	೩	೩	೬
೨೦.	ಸಣಾಪುರ	--	--	೭	೭
೨೧.	ಮರಿಯಮ್ಮನಹಳ್ಳಿ	೬	೬	--	೧೨
೨೨.	ಗಾದಿಗನೂರು	--	೩	೩	೬
೨೩.	ಹೊಸೂರು	೧	೪	--	೫
	ಒಟ್ಟು	೩೩	೭೧	೩೪	೧೩೮
	ಶೇಕಡ	೨೩.೯೧	೫೧.೪೪	೨೪.೬೩	೧೦೦

ಕೋಷ್ಟಕ ೧೮.೨

ಚುನಾಯಿತ ಮಹಿಳೆಯರು ಪ್ರಚಾರದಲ್ಲಿದ್ದಾಗಿನ ಮನೋಸ್ಥಿತಿಯ ವಿವರ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಧೈರ್ಯವಾಗಿ	ನಾಚಿಕೆ ಮುಜುಗರ	ಅವಿರೋಧ ಆಯ್ಕೆ	ಒಟ್ಟು
೦೧	ಮೆಟ್ರಿಕಿ	--	೩	೪	೭
೦೨.	ವಿಠಲಾಪುರ	೨	೩	೧	೬
೦೩.	ಅಂತಾಪುರ	೨	೪	--	೬
೦೪.	ವಡ್ಡು	೨	೬	--	೮
೦೫.	ದರೋಜಿ	೪	೪	--	೮
೦೬.	ಕುರೇಕುಪ್ಪ	೧	೨	೬	೯
೦೭.	ತೋರಣಗಲ್ಲು	೩	೨	೧	೬
೦೮.	ಕಾಳಿಂಗೇರಿ	೧	೫	--	೬
೦೯.	ಜಿ.ಎಲ್.ಹಳ್ಳಿ	೧	೫	--	೬
೧೦.	ಬೊಮ್ಮಗಟ್ಟ	--	೮	೨	೧೦
೧೧.	ಸೋವೆನಹಳ್ಳಿ	--	೫	೧	೬
೧೨.	ಚೋರನೂರು	೨	೪	೧	೭
೧೩.	ನಿಡಗುರ್ತಿ	--	೭	೧	೮
೧೪.	ಬಂಡ್ರಿ	೨	೫	--	೭
೧೫.	ತಾರಾನಗರ	೧	೪	೩	೮
೧೬.	ಕೃಷ್ಣನಗರ	೩	೪	--	೭
೧೭.	ನರಸಿಂಗಪುರ	೯	೨	--	೧೧
೧೮.	ಭುಜಂಗನಗರ	೬	--	--	೬
೧೯.	ದೇವಗಿರಿ	--	೧	೫	೬
೨೦.	ಯಶವಂತನಗರ	೪	೨	--	೬
೨೧.	ಸುಶೀಲಾನಗರ	--	--	೭	೭
	ಒಟ್ಟು	೪೩	೭೬	೩೨	೧೫೧
	ಶೇಕಡ	೨೮.೪೭	೫೦.೩೩	೨೧.೧೯	೧೦೦

ಕೋಷ್ಟಕ ೧೮.೧ ಮತ್ತು ೧೮.೨ ಚುನಾಯಿತ ಮಹಿಳೆಯರು ಚುನಾವಣಾ ಪ್ರಚಾರದಲ್ಲಿದ್ದಾಗ ಅವರ ಮನೋಸ್ಥಿತಿಯ ವಿವರಗಳನ್ನು ಅಂಕಿ ಅಂಶಗಳ ಮೂಲಕ ತಿಳಿಸುತ್ತದೆ. ಹೊಸಪೇಟೆಯ ತಾಲೂಕಿನ ಗ್ರಾಮಪಂಚಾಯ್ತಿಯಲ್ಲಿರುವ ಚುನಾಯಿತ ಮಹಿಳೆಯರು ಪ್ರಚಾರದಲ್ಲಿ ಧೈರ್ಯವಾಗಿ ಪಾಲ್ಗೊಂಡವರ ಪ್ರಮಾಣ ಶೇ.೨೩.೯೧ ರಷ್ಟಿದ್ದರೆ, ನಾಚಿಕೆ ಮತ್ತು ಮುಜುಗರದ ಮನಸ್ಥಿತಿಯಲ್ಲಿ ಪ್ರಚಾರದಲ್ಲಿ ಪಾಲ್ಗೊಂಡ ಚುನಾಯಿತ ಮಹಿಳೆಯರು ಶೇ.೫೧.೪೪ ರಷ್ಟಿದ್ದಾರೆ. ಉಳಿದ ಮಹಿಳೆಯರು ಅವಿರೋಧವಾಗಿ ಆಯ್ಕೆಯಾಗಿರುವರು.

ಕೋಷ್ಟಕ ೧೮.೨ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಚುನಾವಣಾ ಪ್ರಚಾರದಲ್ಲಿ ಧೈರ್ಯವಾಗಿ ಪಾಲ್ಗೊಂಡಿರುವ ಚುನಾಯಿತ ಮಹಿಳೆಯರು ಶೇ.೨೮.೪೭ ರಷ್ಟಿದ್ದರೆ, ನಾಚಿಕೆ ಮತ್ತು ಮುಜುಗರದ ಮನಸ್ಥಿತಿಯಲ್ಲಿ ಪ್ರಚಾರದಲ್ಲಿ ಪಾಲ್ಗೊಂಡ ಚುನಾಯಿತ ಮಹಿಳೆಯರು ಶೇ.೫೦.೩೩. ರಷ್ಟಿರುವರು ಉಳಿದ ಮಹಿಳೆಯರು ಅವಿರೋಧವಾಗಿ ಆಯ್ಕೆಯಾಗಿರುವರು.

ತೌಲನಿಕವಾಗಿ ಎರಡು ತಾಲೂಕುಗಳ ಗ್ರಾಮಪಂಚಾಯ್ತಿಗಳನ್ನು ಗಮನಿಸಿದಾಗ, ಹೊಸಪೇಟೆಗಿಂತ ಸಂಡೂರಿನ ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚುಪ್ರಮಾಣದಲ್ಲಿ ಧೈರ್ಯವಾಗಿ ಚುನಾಯಿತ ಮಹಿಳೆಯರು ಪ್ರಚಾರದಲ್ಲಿ ಪಾಲ್ಗೊಂಡಿರುವುದು ಕಂಡುಬರುತ್ತದೆ. ಸಂಡೂರಿಗಿಂತ ಹೊಸಪೇಟೆ ಗ್ರಾಮಪಂಚಾಯ್ತಿಗಳಲ್ಲಿ ನಾಚಿಕೆ, ಮುಜುಗರದಿಂದ ಪ್ರಚಾರದಲ್ಲಿ ಪಾಲ್ಗೊಂಡಿರುವ ಚುನಾಯಿತ ಮಹಿಳೆಯರು ತುಸು ಹೆಚ್ಚಿನ ಪ್ರಮಾಣದಲ್ಲಿರುವುದು ಗೋಚರವಾಗುತ್ತದೆ.

ಕೋಷ್ಟಕ ೧೯.೧

ಚುನಾಯಿತ ಮಹಿಳೆಯರಿಗೆ ಸಮೂಹ ಮಾಧ್ಯಮಗಳೊಂದಿಗೆ ಒಡನಾಟ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ವೃತ್ತ ಪತ್ರಿಕೆ	ರೇಡಿಯೋ	ಟಿ.ವಿ.ಯಲ್ಲಿ ವಾರ್ತೆಗಳು	ಟಿ.ವಿ.ಯಲ್ಲಿ ಮನರಂಜನೆ	ಯಾವುದು ಇಲ್ಲ	ಒಟ್ಟು
೦೧.	ಮಲಪನಗುಡಿ	--	--	೧	೪	೨	೭
೦೨.	ರಾಮಸಾಗರ	--	--	--	೩	೩	೬
೦೩.	ದೇವಲಾಪುರ	--	--	--	೩	೩	೬
೦೪.	ದೇವಸಮುದ್ರ	--	--	--	--	೬	೬
೦೫.	ಮೆಟ್ರಿ	--	೧	--	೨	೩	೬
೦೬.	ಸೀತಾರಾಂ ತಾಂಡ	--	--	--	--	೨	೨
೦೭.	ಹಂಪಿ	--	--	೧	೧	೨	೪
೦೮.	ಬುಕ್ಕಸಾಗರ	--	--	--	೧	೫	೬
೦೯.	ಜಿ.ನಾಗಲಾಪುರ	--	೪	--	೧	೧	೬
೧೦.	ಚಿಲಕನಹಟ್ಟಿ	--	೨	--	--	೫	೭
೧೧.	೧೧೪ ಡಣಾಪುರ	--	--	--	೧	೮	೯
೧೨.	ಡಣಾಯಕನ ಕೆರೆ	--	--	೧	೨	೧	೪
೧೩.	ಸುಗ್ಗೇನಹಳ್ಳಿ	--	೨	--	೨	೧	೫
೧೪.	ಹಂಪಾದೇವನಹಳ್ಳಿ	--	೧	--	೫	--	೬
೧೫.	ಪಾಪಿನಾಯಕನಹಳ್ಳಿ	--	--	೧	೩	೩	೭
೧೬.	ಕಲ್ಲಳ್ಳಿ	--	--	--	೨	೧	೩
೧೭.	ನಾಗೇನಹಳ್ಳಿ	--	--	೩	--	೩	೬
೧೮.	ಬೈಲುವದ್ದಿಗೇರಿ	--	--	--	೪	೨	೬
೧೯.	ನಂ.೧೦ ಮುದ್ದಾಪುರ	--	--	--	೨	೪	೬
೨೦.	ಸಣಾಪುರ	--	--	೧	೪	೨	೭
೨೧.	ಮರಿಯಮ್ಮನಹಳ್ಳಿ	೧	--	೩	೬	೨	೧೨
೨೨.	ಗಾದಿಗನೂರು	--	--	೧	೩	೨	೬
೨೩.	ಹೊಸೂರು	--	--	--	೨	೩	೫
	ಒಟ್ಟು	೧	೧೦	೧೨	೫೧	೬೪	೧೩೮
	ಶೇಕಡ	೦.೭೨	೭.೨೪	೮.೬೯	೩೬.೯೫	೪೬.೩೭	೧೦೦

ಕೋಷ್ಟಕ ೧೯.೨

ಚುನಾಯಿತ ಮಹಿಳೆಯರಿಗೆ ಸಮೂಹ ಮಾಧ್ಯಮಗಳೊಂದಿಗೆ ಒಡನಾಟ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ರೇಡಿಯೋ	ವೃತ್ತ ಪತ್ರಿಕೆ	ಟಿ.ವಿ.ಯಲ್ಲಿ ಮನರಂಜನೆ	ಟಿ.ವಿ.ಯಲ್ಲಿ ವಾರ್ತೆಗಳು	ಯಾವುದು ಇಲ್ಲ	ಒಟ್ಟು
೦೧.	ಮೆಟ್ರಿಕಿ	೧	--	೧	೨	೩	೭
೦೨.	ವಿಠಲಾಪುರ	೧	--	೨	--	೩	೬
೦೩.	ಅಂತಾಪುರ	--	--	೨	೧	೩	೬
೦೪.	ವಡ್ಡು	೨	--	೨	--	೪	೮
೦೫.	ದರೋಜಿ	--	--	೨	೨	೪	೮
೦೬.	ಕುರೇಕುಪ್ಪ	--	--	೩	೪	೨	೯
೦೭.	ತೋರಣಗಲ್ಲು	--	--	೩	೧	೨	೬
೦೮.	ಕಾಳಿಂಗೇರಿ	೧	--	೨	೨	೧	೬
೦೯.	ಜಿ.ಎಲ್.ಹಳ್ಳಿ	೧	--	--	೨	೩	೬
೧೦.	ಬೊಮ್ಮಗಟ್ಟ	೨	--	೨	೩	೩	೧೦
೧೧.	ಸೋವೆನಹಳ್ಳಿ	೧	--	೧	೨	೨	೬
೧೨.	ಚೋರನೂರು	೧	--	--	೪	೨	೭
೧೩.	ನಿಡಗುರ್ತಿ	೧	--	--	೧	೬	೮
೧೪.	ಬಂಡ್ರಿ	೧	೧	೧	೨	೨	೭
೧೫.	ತಾರಾನಗರ	--	--	೪	--	೪	೮
೧೬.	ಕೃಷ್ಣನಗರ	--	--	--	೨	೫	೭
೧೭.	ನರಸಿಂಗಪುರ	--	--	೬	೪	೧	೧೧
೧೮.	ಭುಜಂಗನಗರ	--	--	೩	೩	--	೬
೧೯.	ದೇವಗಿರಿ	--	--	೨	೪	--	೬
೨೦.	ಯಶವಂತನಗರ	--	--	೧	೩	೨	೬
೨೧.	ಸುಶೀಲಾನಗರ	--	--	೨	೩	೨	೭
	ಒಟ್ಟು	೧೨	೧	೩೯	೪೫	೫೪	೧೫೧
	ಶೇಕಡ	೭.೯೪	೦.೬೬	೨೫.೮೨	೨೯.೮೦	೩೫.೭೬	೧೦೦

ಚುನಾಯಿತ ಮಹಿಳೆಯರ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವವು ಯಾವ ಪ್ರಮಾಣದಲ್ಲಿದೆ ಎನ್ನುವ ಅಂಕಿ ಅಂಶಗಳನ್ನು ಕೋಷ್ಟಕ ೧೯.೧ ಮತ್ತು ೧೯.೨ ಕೋಷ್ಟಕಗಳು ತಿಳಿಸುತ್ತವೆ.

ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ವೃತ್ತಪತ್ರಿಕೆ ಓದುವ ಚುನಾಯಿತ ಮಹಿಳೆಯರು ಶೇ.೦.೭೨ ರಷ್ಟಿರುವರು. ರೇಡಿಯೋ ಆಲಿಸುವ ಚುನಾಯಿತ ಮಹಿಳೆಯರು ಶೇ.೭.೨೪ ರಷ್ಟಿರುವರು. ದೂರದರ್ಶನದಲ್ಲಿ ವಾರ್ತೆಗಳನ್ನು ನೋಡುವ ಚುನಾಯಿತ ಮಹಿಳೆಯರು ಶೇ.೮.೬೯ ರಷ್ಟಿದ್ದರೆ, ದೂರದರ್ಶನವನ್ನು ಮನರಂಜನೆಗಾಗಿ ವೀಕ್ಷಿಸುವ ಚುನಾಯಿತ ಮಹಿಳೆಯರು ಶೇ.೩೬.೯೫ ರಷ್ಟಿರುವರು. ಈ ಯಾವುದೂ ಇಲ್ಲದ ಚುನಾಯಿತ ಮಹಿಳೆಯರು ಶೇ.೪೬.೩೭ ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೧೯.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ರೇಡಿಯೋ ಆಲಿಸುವ ಚುನಾಯಿತ ಮಹಿಳೆಯರು ಶೇ.೭.೯೪ ರಷ್ಟಿರುವರು. ವೃತ್ತಪತ್ರಿಕೆ ಓದುವ ಚುನಾಯಿತ ಮಹಿಳೆಯರು ಶೇ.೦.೬೬ ರಷ್ಟಿರುವರು. ದೂರದರ್ಶನದಲ್ಲಿ ವಾರ್ತೆಗಳನ್ನು ನೋಡುವ ಚುನಾಯಿತ ಮಹಿಳೆಯರು ಶೇ.೨೯.೮೦ ರಷ್ಟಿದ್ದರೆ, ಮನರಂಜನೆಗಾಗಿ ಶೇ.೨೫.೮೨ ರಷ್ಟು ಚುನಾಯಿತ ಮಹಿಳೆಯರು ದೂರದರ್ಶನವನ್ನು ವೀಕ್ಷಿಸುವರು. ಇದಾವುದೂ ಇಲ್ಲದ ಚುನಾಯಿತ ಮಹಿಳೆಯರು ಶೇ.೩೫.೭೬ ರಷ್ಟು ಇರುವುದು ಗೋಚರವಾಗುತ್ತದೆ.

ತೌಲನಿಕವಾಗಿ ಎರಡೂ ತಾಲೂಕು ಗ್ರಾಮಪಂಚಾಯಿತಿಗಳನ್ನು ಅಭ್ಯಸಿಸಿದಾಗ ವೃತ್ತಪತ್ರಿಕೆ ಓದುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ತುಸು ಹೆಚ್ಚಿನ ಪ್ರಮಾಣದಲ್ಲಿ ಹೊಸಪೇಟೆಯಲ್ಲಿರುವರು. ರೇಡಿಯೋ ಆಲಿಸುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳನ್ನು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿರುವುದು ತಿಳಿದುಬರುತ್ತದೆ. ದೂರದರ್ಶನದಲ್ಲಿ ವಾರ್ತೆಗಳನ್ನು ನೋಡುವ, ಕೇಳುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವರು. ದೂರದರ್ಶನದಲ್ಲಿ ಮನರಂಜನೆಯ ಕಾರ್ಯಕ್ರಮಗಳನ್ನು ವೀಕ್ಷಿಸುವ ಚುನಾಯಿತ ಮಹಿಳೆಯರು ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಿಗಿಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಈ ಯಾವ ಮಾಧ್ಯಮಗಳ ಸಂಪರ್ಕ ಹಾಗೂ ಪ್ರಭಾವಗಳಿಲ್ಲದ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಗೋಚರವಾಗುತ್ತದೆ.

ಕೋಷ್ಟಕ ೨೦.೧

ಮುಂದಿನ ಚುನಾವಣೆಗೆ ಸ್ಪರ್ಧಿಸುವ ಬಯಕೆ : ಇದೆ-ಇಲ್ಲ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಇಷ್ಟವಿದೆ	ಇಷ್ಟವಿಲ್ಲ	ಪತಿಯ ಇಚ್ಛೆ	ಭವಿಷ್ಯಕ್ಕೆ ಬಿಡಲಾಗಿದೆ	ಒಟ್ಟು
೦೧	ಮಲಪನಗುಡಿ	೨	೧	೩	೧	೭
೦೨.	ರಾಮಸಾಗರ	--	೫	--	೧	೬
೦೩.	ದೇವಲಾಪುರ	೧	೪	--	೧	೬
೦೪.	ದೇವಸಮುದ್ರ	೧	--	೨	೩	೬
೦೫.	ಮೆಟ್ರಿ	೨	೩	೧	--	೬
೦೬.	ಸೀತಾರಾಂ ತಾಂಡ	೧	೧	--	--	೨
೦೭.	ಹಂಪಿ	೧	೩	--	--	೪
೦೮.	ಬುಕ್ಕಸಾಗರ	೩	೧	೧	೧	೬
೦೯.	ಜಿ.ನಾಗಲಾಪುರ	೨	೪	--	--	೬
೧೦.	ಚಿಲಕನಹಟ್ಟಿ	--	೩	೧	೩	೭
೧೧.	೧೧೪ ಡಣಾಪುರ	೧	೨	೬	--	೯
೧೨.	ಡಣಾಯಕನ ಕೆರೆ	೩	--	೧	--	೪
೧೩.	ಸುಗ್ಗೇನಹಳ್ಳಿ	೨	೩	--	--	೫
೧೪.	ಹಂಪಾದೇವನಹಳ್ಳಿ	೬	--	--	--	೬
೧೫.	ಪಾಪಿನಾಯಕನಹಳ್ಳಿ	--	೩	೧	೩	೭
೧೬.	ಕಲ್ಲಳ್ಳಿ	೩	--	--	--	೩
೧೭.	ನಾಗೇನಹಳ್ಳಿ	--	೪	--	೨	೬
೧೮.	ಬೈಲುವದ್ದಿಗೇರಿ	೧	೧	೩	೧	೬
೧೯.	ನಂ. ೧೦ ಮುದ್ದಾಪುರ	೪	೨	--	--	೬
೨೦.	ಸಣಾಪುರ	೫	೨	--	--	೭
೨೧.	ಮರಿಯಮ್ಮನಹಳ್ಳಿ	೨	೩	--	೭	೧೨
೨೨.	ಗಾದಿಗನೂರು	೧	೧	--	೪	೬
೨೩.	ಹೊಸೂರು	--	೩	೧	೧	೫
	ಒಟ್ಟು	೪೧	೪೯	೨೦	೨೮	೧೩೮
	ಶೇಕಡ	೨೯.೭೧	೩೫.೫೦	೧೪.೪೯	೨೦.೨೮	೧೦೦

ಕೋಷ್ಟಕ ೨೦.೨

ಮುಂದಿನ ಚುನಾವಣೆಗ ಸ್ಪರ್ಧಿಸುವ ಬಯಕೆ : ಇದೆ-ಇಲ್ಲ

ಕ್ರ. ಸಂ.	ಗ್ರಾಮ ಪಂಚಾಯಿತಿಗಳು	ಇಷ್ಟವಿದೆ	ಇಷ್ಟವಿಲ್ಲ	ಪತಿಯ ಇಚ್ಛೆ	ಭವಿಷ್ಯಕ್ಕೆ ಬಿಡಲಾಗಿದೆ	ಒಟ್ಟು
೦೧	ಮೆಟ್ರಿ	೭	--	--	--	೭
೦೨	ವಿಠಲಾಪುರ	೨	೧	೨	೧	೬
೦೩.	ಅಂತಾಪುರ	೧	೨	೧	೨	೬
೦೪.	ವಡ್ಡು	೧	೩	--	೪	೮
೦೫.	ದರೋಜಿ	೩	೨	--	೩	೮
೦೬.	ಕುರೇಕುಪ್ಪ	೨	೨	--	೫	೯
೦೭.	ತೋರಣಗಲ್ಲು	--	೩	--	೩	೬
೦೮.	ಕಾಳಿಂಗೇರಿ	೬	--	--	--	೬
೦೯.	ಜಿ.ಎಲ್.ಹಳ್ಳಿ	೩	೩	--	--	೬
೧೦.	ಬೊಮ್ಮಗಟ್ಟ	೫	೪	--	೧	೧೦
೧೧.	ಸೋವೆನಹಳ್ಳಿ	೪	೨	--	--	೬
೧೨.	ಚೋರನೂರು	೫	೧	--	೧	೭
೧೩.	ನಿಡಗುರ್ತಿ	೬	೧	--	೧	೮
೧೪.	ಬಂಡ್ರಿ	೧	೩	೧	೨	೭
೧೫.	ತಾರಾನಗರ	೧	೩	--	೪	೮
೧೬.	ಕೃಷ್ಣನಗರ	೧	೬	--	--	೭
೧೭.	ನರಸಿಂಗಪುರ	೫	೩	--	೩	೧೧
೧೮.	ಭುಜಂಗನಗರ	೫	೧	--	--	೬
೧೯.	ದೇವಗಿರಿ	೫	೧	--	--	೬
೨೦.	ಯಶವಂತನಗರ	೫	೧	--	--	೬
೨೧.	ಸುಶೀಲಾನಗರ	೪	೨	೧	--	೭
	ಒಟ್ಟು	೭೨	೪೪	೫	೩೦	೧೫೧
	ಶೇಕಡ	೪೭.೬೮	೨೯.೧೩	೩.೩೧	೧೯.೮೬	೧೦೦

ಕೋಷ್ಟಕ ೨೦.೧ ಮತ್ತು ೨೦.೨ ಚುನಾಯಿತ ಮಹಿಳೆಯರಿಗೆ ಮುಂಬರುವ ಗ್ರಾಮಪಂಚಾಯ್ತಿಯ ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಚೆ ಇದೆ. ಮತ್ತು ಇಲ್ಲ ಎನ್ನುವ ವಿವರಗಳನ್ನು ಅಂಕಿ ಅಂಶಗಳ ಮೂಲಕ ತಿಳಿಸುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಮುಂದಿನ ಚುನಾವಣೆಗೆ ಸ್ಪರ್ಧಿಸಲು ಇಷ್ಟವಿರುವ ಅಭಿಲಾಷೆಯನ್ನು ವ್ಯಕ್ತಪಡಿಸಿರುವ ಚುನಾಯಿತ ಮಹಿಳೆಯರು ಶೇ.೨೯.೭೧ ರಷ್ಟಿದೆ. ಮುಂದಿನ ಚುನಾವಣೆಗೆ ಸ್ಪರ್ಧಿಸಲು ಇಷ್ಟವಿಲ್ಲದ ಚುನಾಯಿತ ಮಹಿಳೆಯರು ಶೇ.೩೫.೫೦ ರಷ್ಟಿರುವರು. ಮುಂಬರುವ ಚುನಾವಣೆಗೆ ಸ್ಪರ್ಧಿಸುವ ಅಭಿಲಾಷೆಯನ್ನು ಪತಿಯ ಇಚ್ಚೆಗೆ ಬಿಟ್ಟುಕೊಟ್ಟು, ಪತಿಯ ಮೇಲೆ ಅವಲಂಬಿತರಾಗಿರುವ ಚುನಾಯಿತ ಮಹಿಳೆಯರು ಶೇ.೧೪.೪೯ ರಷ್ಟಿದ್ದಾರೆ. ಮುಂದಿನ ಚುನಾವಣೆಗೆ ಸ್ಪರ್ಧಿಸುವುದನ್ನು ಭವಿಷ್ಯಕ್ಕೆ ಬಿಟ್ಟುಕೊಟ್ಟಿರುವ ಚುನಾಯಿತ ಮಹಿಳೆಯರು ಶೇ.೨೦.೨೮ ರಷ್ಟಿದ್ದಾರೆ.

ಕೋಷ್ಟಕ ೨೦.೨ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಮುಂಬರುವ ಚುನಾವಣೆಗೆ ಸ್ಪರ್ಧಿಸುವ ಆಸಕ್ತಿಯನ್ನು ಹೊಂದಿರುವ ಚುನಾಯಿತ ಮಹಿಳೆಯರು ಶೇ.೪೭.೬೮ ರಷ್ಟಿದ್ದರೆ, ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟಪಡದೇ ಇರುವ ಚುನಾಯಿತ ಮಹಿಳೆಯರು ಶೇ.೨೯.೧೩ ರಷ್ಟಿರುವರು. ಮುಂದಿನ ಚುನಾವಣೆಗೆ ಸ್ಪರ್ಧಿಸುವ ನಿರ್ಧಾರವನ್ನು ತಮ್ಮ ಪತಿಯ ನಿರ್ಧಾರಕ್ಕೆ ಬಿಟ್ಟುಕೊಟ್ಟು ಪತಿಯ ಮೇಲೆ ಅಂತರ ಬಹಳವಿದೆ. ಅವಲಂಬಿತರಾಗಿರುವ ಚುನಾಯಿತ ಮಹಿಳೆಯರು ಶೇ.೩.೩೧ ರಷ್ಟಿದ್ದಾರೆ. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ತಮ್ಮ ಇಷ್ಟವನ್ನು ಭವಿಷ್ಯಕ್ಕೆ ಬಿಟ್ಟುಕೊಟ್ಟಿರುವ ಚುನಾಯಿತ ಮಹಿಳೆಯರು ಶೇ.೧೯.೮೬ ರಷ್ಟಿರುವುದು ಕಂಡುಬರುತ್ತದೆ.

ಎರಡೂ ತಾಲೂಕುಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟವಿರುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಗಳಲ್ಲಿ ಹೆಚ್ಚಾಗಿರುವರು. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟವಿಲ್ಲದ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವರು. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ಅಭಿಲಾಷೆಯನ್ನು ಪತಿಯ ಇಷ್ಟಕ್ಕೆಬಿಟ್ಟುಕೊಟ್ಟಿರುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವರು. ಮುಂದಿನ ಚುನಾವಣೆಗೆ ಸ್ಪರ್ಧಿಸುವ ಇಷ್ಟವನ್ನು ಭವಿಷ್ಯಕ್ಕೆ ಬಿಟ್ಟುಕೊಟ್ಟಿರುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ತುಸು ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.

ಅಧ್ಯಾಯ ೩

ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪ್ರತಿನಿಧಿತ್ವ : ಪ್ರತಿನಿಧಿತ್ವದಲ್ಲಿ ಸಮಾನ ಅಂಶಗಳು ಮತ್ತು ವ್ಯತ್ಯಾಸಗಳು

ರಾಜಕೀಯ ಸಾಮಾಜೀಕರಣ(political Socialisation) :

ರಾಜಕೀಯ ಭಾಗವಹಿಸುವಿಕೆಯು ರಾಜಕೀಯ ಸಾಮಾಜೀಕರಣದ ಒಂದು ಫಲಿತವಾಗಿದೆ. ಆರ್. ಬಾಲ್ ಅವರು ಹೇಳುವಂತೆ 'ರಾಜಕೀಯ ಪದ್ಧತಿಯ ಬಗ್ಗೆ ನಂಬಿಕೆಗಳನ್ನು, ಅನಿಸಿಕೆಗಳನ್ನು ಸ್ಥಾಪಿಸಿ ಬಳಸಿ ಕೊಳ್ಳುವುದೇ ರಾಜಕೀಯ ಸಾಮಾಜೀಕರಣ'.[೧]

'Political Socialisation is the process of the transmission of the country's political culture from one generation to the next. This is learned but not conscious. It is picked up unconsciously during the course of social Intaractions. It is a natural process that goes on throughout life. the most important characteristic of political socialisation is the fact that through it political values are communicated from generation to generation. This helps in maintaining the political system. ರಾಜಕೀಯ ಸಾಮಾಜೀಕರಣದ ಕುರಿತು ಫ್ರಾನ್ಸಿಸ್ ಜಿ ಕ್ಯಾಸ್ಟ್ಲೆಸ್, ಸ್ಟೀಫನ್ ಎಲ್.ವಾಸ್‌ಬೈ, ಇರ್‌ವಿನ್ ಎಲ್ ಚೈಲ್ಡ್, ರಾಬರ್ಟ್‌ಸೈಗಲ್, ಮಿಚೆಲ್ ರಶ್, ಅಲ್‌ತೂಫ್ ರೈಟ್‌ಅವರು ವ್ಯಾಖ್ಯಾನಗಳನ್ನು ನೀಡಿದ್ದಾರೆ.[೨]

ಒಟ್ಟಿನಲ್ಲಿ ಗ್ರಹಿಸುವುದಾದರೆ ರಾಜಕೀಯ ಮೌಲ್ಯಗಳನ್ನು, ಧೋರಣೆಗಳನ್ನು, ನಂಬಿಕೆಗಳನ್ನು ಅಭಿರುಚಿ, ನಿಷ್ಠೆ, ಭಾವನೆಗಳನ್ನು ವ್ಯಕ್ತಿಗಳಲ್ಲಿ ರೂಪಿಸಿ, ಅವುಗಳನ್ನು ಪರಂಪರೆಯ ರೂಪದಲ್ಲಿ ಮುಂದಿನ ಪೀಳಿಗೆಗೆ ರವಾನಿಸುವ ಒಂದು ವಿಧಾನವೇ ರಾಜಕೀಯ ಸಾಮಾಜೀಕರಣವಾಗಿದೆ. ರಾಜಕೀಯ ಸಾಮಾಜೀಕರಣವೆಂಬುದು ಪ್ರತ್ಯಕ್ಷವಾಗಿ ಪರೋಕ್ಷವಾಗಿ ವ್ಯಕ್ತಿಯ ಜೀವನದ ಅವಧಿಯ ಉದ್ದಕ್ಕೂ ಆತನನ್ನು ವಿವಿಧ ರೀತಿಯಲ್ಲಿ ಪ್ರಭಾವಿಸುತ್ತಿರುತ್ತದೆ. ಬಹುಮುಖ್ಯವಾಗಿ ಕುಟುಂಬ ಶೈಕ್ಷಣಿಕ ಸಂಸ್ಥೆಗಳು, ಒತ್ತಡ ಗುಂಪುಗಳು, ಹಿತಾಸಕ್ತಿ ಗುಂಪುಗಳು, ಸಂವಹನ ಮಾಧ್ಯಮಗಳು, ಆನುಷಂಗಿಕ ಗುಂಪುಗಳು(ರಾಜಕೀಯ ಪಕ್ಷಗಳು ಅಥವಾ ರಾಜಕೀಯ ಯುವ ಸಂಘಟನೆಗಳು) ರಾಜಕೀಯ ಪಕ್ಷಗಳು ಮತ್ತು ಚಿನ್ಹೆಗಳು, ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಇವು ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಪರಿಣಾಮಕಾರಿ ಪಾತ್ರವಹಿಸುವ ನಿಯೋಗಗಳಾಗಿವೆ.

ಈ ಪ್ರತಿಯೊಂದು ನಿಯೋಗಗಳು ರಾಜಕೀಯ, ಸಾಮಾಜಿಕ ಮತ್ತು ಆಡಳಿತಾತ್ಮಕ ಅಭಿಪ್ರಾಯ ರೂಪಿಸುವಲ್ಲಿ ಅಂತರ್‌ಸಂಬಂಧವನ್ನು ಹೊಂದಿವೆ. ಉದಾ: ರಾಜಕೀಯ ಪಕ್ಷಗಳು ನಿರ್ದಿಷ್ಟ ಆಡಳಿತ ಧೋರಣೆಯನ್ನು ರೂಪಿಸಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತವೆ. ಆ ಮೂಲಕ ದೇಶದ ಅಭಿವೃದ್ಧಿಗೆ

ಶ್ರಮಿಸುತ್ತವೆ. ಇಂತಹ ಅಭಿವೃದ್ಧಿ ಕಾರ್ಯಗಳನ್ನು ಪತ್ರಿಕೆಗಳು ರೇಡಿಯೋ, ದೂರದರ್ಶನದಂತಹ ಮಾಧ್ಯಮಗಳು ಸಾರ್ವಜನಿಕರಿಗೆ ತಲುಪಿಸುವಲ್ಲಿ, ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೀಗೆ ಪರಸ್ಪರ ಒಟ್ಟಾಭಿಪ್ರಾಯವನ್ನು ರೂಪಿಸುವುದರ ಮೂಲಕ ಪರಿಣಾಮಾತ್ಮಕವಾಗಿ ರಾಜಕೀಯ ಸಾಮಾಜೀಕರಣದಲ್ಲಿ ಪಾಲ್ಗೊಳ್ಳುತ್ತವೆ. ಆ ಮೂಲಕ ವ್ಯಕ್ತಿಯ ರಾಜಕೀಯ ಭಾಗವಹಿಸುವಿಕೆಗೆ ಉತ್ತಮ ಪ್ರೇರಣೆಗಳನ್ನು ತಿಳುವಳಿಕೆಗಳನ್ನು ಇವು ನೀಡುತ್ತವೆ. ಈ ಹಿನ್ನೆಲೆಯಲ್ಲಿ ರಾಜಕೀಯ ಭಾಗವಹಿಸುವಿಕೆಯನ್ನು ರಾಜಕೀಯ ಸಾಮಾಜೀಕರಣದ ನಿಯೋಗಗಳ ಮೂಲಕ ಬಹುಮುಖಿ ಆಯಾಮಗಳಲ್ಲಿ ಅಂತರ್‌ಶಿಸ್ತೀಯ ಅಧ್ಯಯನಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ರಾಜಕೀಯ ಸಾಮಾಜೀಕರಣದ ವಿಧಗಳು

ರಾಜಕೀಯ ಸಾಮಾಜೀಕರಣದಲ್ಲಿ ಮುಖ್ಯವಾಗಿ ೨ ವಿಧಗಳನ್ನು ಕಾಣಬಹುಹುದು. Direct and manifest Political Socialisation ಮತ್ತು Indirect or Non-manifest Politicl Socialisation.

Direct and manifest Political Socialisation : ರಾಜಕೀಯ ಮಾಹಿತಿ, ರಾಜಕೀಯ ಮೌಲ್ಯಗಳು, ಭಾವನೆಗಳು ಮತ್ತು ಇವುಗಳ ಮುಂದುವರಿಕೆಯನ್ನು ಇದು ಒಳಗೊಂಡಿರುತ್ತದೆ. ಕುಟುಂಬ, ಶೈಕ್ಷಣಿಕ ಸಂಸ್ಥೆಗಳು ಮತ್ತು ಸಮಾಜದ ರಾಜಕೀಯ ಸಾಮಾಜೀಕರಣದಲ್ಲಿ ರಾಜಕೀಯ ತತ್ವವು ಶ್ರೇಷ್ಠವಾಗಿರುತ್ತದೆ.

ಈ ರೀತಿಯ ರಾಜಕೀಯ ಸಾಮಾಜೀಕರಣವು ಸ್ವಯಂ ಪ್ರೇರಿತವಾಗಿರುತ್ತದೆ. ಸ್ವಂತ ಇಚ್ಛೆಯಿಂದ ಕೂಡಿರುತ್ತದೆ. ಸ್ವಯಂ ಪ್ರೇರಣೆ, ಸ್ವಇಚ್ಛೆಯ ಪ್ರಕ್ರಿಯೆಯನ್ನು ಹೊಂದಿರುತ್ತದೆ. ಈ ರೀತಿಯ ನೇರವಾದ ಮತ್ತು ನಿರ್ದಿಷ್ಟ ತತ್ವ ಹೊಂದಿರುವ ರಾಜಕೀಯ ಸಾಮಾಜೀಕರಣವು ಅನುಕರಣೆ, ನಿರೀಕ್ಷೆ, ರಾಜಕೀಯ ಶಿಕ್ಷಣ ಮತ್ತು ರಾಜಕೀಯ ಅನುಭವದ ಮೂಲಕ ಉಂಟಾಗುತ್ತದೆ.

Indirect or Non-manifest Political Socialisation : ಶೀರ್ಷಿಕೆಯೇ ತಿಳಿಸುವಂತೆ ನೇರವಲ್ಲದ ಮತ್ತು ತತ್ವರಹಿತವಾದ ರಾಜಕೀಯ, ಸಾಮಾಜೀಕರಣವಾಗಿದ್ದು, ಇದು ಸ್ವಯಂ ಪ್ರೇರಣೆ, ಸ್ವಇಚ್ಛೆಯಿಂದ ಕೂಡಿರುವುದಿಲ್ಲ.

ರಾಜಕೀಯ ಸಾಮಾಜೀಕರಣದ ನಿಯೋಗಗಳು

ಕುಟುಂಬ : ಕುಟುಂಬವು ರಾಜಕೀಯ ಸಾಮಾಜೀಕರಣದ ನಿಯೋಗಗಳಲ್ಲಿ ಒಂದಾಗಿದೆ. ಕುಟುಂಬವು ವ್ಯಕ್ತಿಯನ್ನು ರಾಜಕೀಯ ಸಾಮಾಜೀಕರಣಗೊಳಿಸುವಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಇದು ಒಂದು

ಔಪಚಾರಿಕ ಸಂಸ್ಥೆ. ವ್ಯಕ್ತಿಯ ಮೇಲೆ ನೇರ ಪ್ರಭಾವ ಬೀರುವ ಸಾಮರ್ಥ್ಯ ಕುಟುಂಬಕ್ಕಿದೆ. ಸಂಸ್ಕೃತಿ ರೂಪದಲ್ಲಿರುವ ಧಾರ್ಮಿಕ ನಂಬಿಕೆಗಳು, ಆದರ್ಶಗಳು, ಮೌಲ್ಯಗಳು ಮುಂತಾದವುಗಳನ್ನು ವರ್ಗಾವಣೆ ಮಾಡುವ ನಿಯೋಗವೇ ಕುಟುಂಬ. ವ್ಯಕ್ತಿಯು ಮಗುವಾಗಿದ್ದಾಗಿನಿಂದಲೂ ಆತನ ಸಂಪೂರ್ಣ ಮನೋಭಾವವನ್ನು ಕುಟುಂಬವು ರಕ್ಷಿಸುತ್ತದೆ. ಕುಟುಂಬದ ಪ್ರಭಾವಗಳು ವ್ಯಕ್ತಿಯ ರಾಜಕೀಯ ಅಭಿಪ್ರಾಯಗಳ ಬೆಳವಣಿಗೆಯಲ್ಲಿ ನೇರ ಪಾತ್ರವಹಿಸುತ್ತವೆ. ತನ್ನ ಸುತ್ತಲಿನ ರಾಜಕೀಯ ಪದ್ಧತಿಯ ಬಗ್ಗೆ ಹಾಗೂ ರಾಜಕೀಯ ಘಟನೆಗಳ ಬಗ್ಗೆ ವ್ಯಕ್ತಿಯು ತನ್ನ ಕುಟುಂಬದ ಸದಸ್ಯರ ಮನೋಭಾವದಿಂದ ಖಂಡಿತವಾಗಿಯೂ ಪ್ರಭಾವಿತನಾಗುತ್ತಾನೆ.

ಎ.ಆರ್.ಬಾಲ್‌ರವರ ಪ್ರಕಾರ "The family should be discribed as the first window to the outer world for the child, it is his first contact with the authority". ರಾಬರ್ಟ್‌ಲಾನೆ ಅವರ ಪ್ರಕಾರ "Admitted three means of circulation of political beliefs. Firstly it happens by the circulation of Distinct and indistinct political principles. Secondly, in it the child is placed in a particular social environment. Thirdly, it becomes possible by modification in the child's personality".

ಆದುದರಿಂದ ವ್ಯಕ್ತಿಯ ರಾಜಕೀಯ ವ್ಯಕ್ತಿತ್ವವು ಕುಟುಂಬದಿಂದಲೇ ನಿರ್ಧಾರಿತವಾಗುತ್ತದೆ. ಕುಟುಂಬವು ಈ ಹಿನ್ನೆಲೆಯಲ್ಲಿ ರೂಢಿ, ಸಂಪ್ರದಾಯ, ಆಚರಣೆಗಳನ್ನು ರಕ್ಷಿಸುವಲ್ಲಿ ಹಾಗೂ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆ ತರುವಲ್ಲಿ ಪ್ರಮುಖ ಸಾಧನವಾಗಿದೆ.

ಶೈಕ್ಷಣಿಕ ಸಂಸ್ಥೆಗಳು : ಕುಟುಂಬದಿಂದ ಬಂದನಂತರ ವ್ಯಕ್ತಿಗಳು ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದುತ್ತಾರೆ. ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳು ವ್ಯಕ್ತಿಗಳ ಮೇಲೆ ಮಹತ್ವದ ಪ್ರಭಾವವನ್ನು ಬೀರುತ್ತವೆ. ಕುಟುಂಬಕ್ಕಿಂತ ಶೈಕ್ಷಣಿಕ ಸಂಸ್ಥೆಗಳು ಹೆಚ್ಚಿನ ಪ್ರಮಾಣದಲ್ಲಿ ರಾಜಕೀಯ ಸಾಮಾಜೀಕರಣ ಉಂಟು ಮಾಡುತ್ತವೆಂದರೆ ಅತಿಶಯವೆನಿಸಲಾರದು. ಆದುದರಿಂದಲೇ ಶೈಕ್ಷಣಿಕ ಸಂಸ್ಥೆಗಳಿಗೆ ನೀಡುವ ಆರ್ಥಿಕ ಸಹಾಯ, ಅನುದಾನ ಮುಂತಾದ ಸಾಧನಗಳಿಂದ ಸರ್ಕಾರಗಳು ಶೈಕ್ಷಣಿಕ ಸಂಸ್ಥೆಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ.

ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ರಾಜಕೀಯ ಸಿದ್ಧಾಂತಗಳನ್ನು, ಆದರ್ಶಗಳನ್ನು, ಮೌಲ್ಯಗಳನ್ನು ಪ್ರಭಾವಿಸುವಲ್ಲಿ ಶೈಕ್ಷಣಿಕ ಸಂಸ್ಥೆಗಳು ದೊಡ್ಡ ಪಾತ್ರವಹಿಸಿದ್ದನ್ನು ಗಮನಿಸಬಹುದು. ಒಂದು ನಿರ್ದಿಷ್ಟ ರಾಜಕೀಯ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳ ಧೋರಣೆಗಳನ್ನು ರೂಪಿಸುವಲ್ಲಿಯೂ ಪ್ರಮುಖ ಪಾತ್ರವಹಿಸುತ್ತವೆ.

ರಾಜಕೀಯ ಸಾಮಾಜೀಕರಣದ ನಿಯೋಗಗಳಲ್ಲೊಂದಾದ ಶೈಕ್ಷಣಿಕ ಸಂಸ್ಥೆಗಳು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಮೇಲೆ ಅತ್ಯಂತ ಮಹತ್ವದ ಪ್ರಭಾವ ಬೀರುತ್ತವೆ. ಶೈಕ್ಷಣಿಕ ಸಂಸ್ಥೆಗಳು ರಾಜಕೀಯ ವಿಚಾರಗಳು, ರಾಜಕೀಯ ಮೌಲ್ಯಗಳು ರಾಷ್ಟ್ರದ ಇತಿಹಾಸ, ರಾಷ್ಟ್ರದ ಸಾಹಿತ್ಯ, ರೂಢಿ, ಸಂಪ್ರದಾಯ, ಆಚರಣೆಗಳು, ರಾಜಕೀಯ ನಾಯಕರು ಮತ್ತು ರಾಜಕೀಯ ವ್ಯವಸ್ಥೆಯ ಕುರಿತು ನಂಬಿಕೆ ಮತ್ತು ಗೌರವವನ್ನು ಉಂಟುಮಾಡುತ್ತವೆ.[೪]

ವಿಶ್ವವಿದ್ಯಾಲಯಗಳು, ಕಾಲೇಜುಗಳು, ಹೊಸ ರಾಜಕೀಯ ಮೌಲ್ಯಗಳನ್ನು, ಮೌಲಿಕವಾದ ರಾಜಕೀಯ ವರ್ತನೆಗಳನ್ನು ಹುಟ್ಟುಹಾಕುತ್ತವೆ. ಆಧುನಿಕ ಪ್ರಪಂಚದಲ್ಲಿ ರಾಜಕೀಯ ಪಕ್ಷಗಳು ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಶಿಕ್ಷಣ ಸಂಸ್ಥೆಗಳ ಮೇಲೆ ತಮ್ಮ ತತ್ವ ಮತ್ತು ಉದ್ದೇಶಗಳಿಂದ ಪ್ರಭಾವ ಬೀರುತ್ತವೆ. ವಿದ್ಯಾರ್ಥಿಗಳ ಸಂಘಟನೆಗಳು, ರಾಜಕೀಯ ಪಕ್ಷಗಳಿಂದ ಆರ್ಥಿಕ ಮತ್ತು ನೈತಿಕ ಬೆಂಬಲವನ್ನು ಪಡೆದುಕೊಳ್ಳುತ್ತವೆ. ಇವೆಲ್ಲ ಮುಂದೆ ವಿದ್ಯಾರ್ಥಿಗಳು ರಾಜಕೀಯ ನಾಯಕರಾಗಲು ಒಂದು ರೀತಿಯಲ್ಲಿ ತರಬೇತಿಯ ಕಾರ್ಯಗಾರಗಳಾಗುತ್ತವೆ. ಇಂದಿನ ಸರ್ಕಾರ, ವಿರೋಧ ಪಕ್ಷಗಳು ತಮ್ಮ ಬೆಂಬಲಿಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ವಿದ್ಯಾರ್ಥಿಗಳ ಮತ್ತು ಬೋಧಕರ ಬೆಂಬಲವನ್ನು ಪಡೆಯಲಿಚ್ಛಿಸುತ್ತವೆ.[೫] ಈ ಎಲ್ಲ ವಿವರಣೆಯಿಂದ ಶೈಕ್ಷಣಿಕ ಸಂಸ್ಥೆಗಳು ರಾಜಕೀಯ ಸಾಮಾಜೀಕರಣದ ಒಂದು ಮುಖ್ಯ ಸಾಧನವಾಗಿರುವುದು ವ್ಯಕ್ತವಾಗುತ್ತದೆ.

ಸಮೂಹ ಮಾಧ್ಯಮಗಳು : ಸಮೂಹ ಮಾಧ್ಯಮಗಳಾದ ರೇಡೀಯೋ, ದೂರದರ್ಶನ, ಸಿನಿಮಾ, ವೃತ್ತಪತ್ರಿಕೆ, ನಿಯತಕಾಲಿಕೆಗಳು ಮೊದಲಾದವು ಅಭಿಪ್ರಾಯ ರೂಪಿಸುವ ಮೂಲಕ ರಾಜಕೀಯ ಸಾಮಾಜೀಕರಣದಲ್ಲಿ ಪಾಲ್ಗೊಳ್ಳುತ್ತವೆ. ಇವು ವ್ಯಕ್ತಿಯು ರಾಜಕೀಯ ವ್ಯವಸ್ಥೆಯ ಬಗ್ಗೆ ಹೊಂದ ಬಹುದಾದ ಧೋರಣೆಯನ್ನು ರೂಪಿಸುತ್ತವೆ. ಪತ್ರಿಕೆಗಳನ್ನು 'ಪ್ರಜಾಸತ್ತೆಯ ಬೈಬಲ್' ಎಂದು ಲಿಪ್‌ಮನ್ ಅವರು ಕರೆದಿದ್ದಾರೆ.

ಪ್ರಸ್ತುತ ಸಮಯದಲ್ಲಿ ಸಮೂಹ ಮಾಧ್ಯಮಗಳ ಮಹತ್ವ ಇನ್ನೂ ಹೆಚ್ಚುತ್ತಿದೆ. ಮಾಧ್ಯಮಗಳು ಜನತೆಯನ್ನು ನೇರವಾಗಿ ಪ್ರಭಾವಿತಗೊಳಿಸುವುದಿಲ್ಲ. ಮಾಧ್ಯಮಗಳು ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ರಾಜಕೀಯ ಪಕ್ಷಗಳು ಸಾರ್ವಜನಿಕ ಸಮಸ್ಯೆಗಳನ್ನು ಜೀವಂತವಾಗಿರಿಸಿ, ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುತ್ತವೆ. ಸಾರ್ವಜನಿಕ ವೇದಿಕೆಯಲ್ಲಿ ವಿಷಯ ಮಂಡಿಸಿ ಚರ್ಚಿಸುತ್ತವೆ. ಸಾರ್ವಜನಿಕ ಅಭಿಪ್ರಾಯ ರೂಪಿಸಿ, ಅದನ್ನು ತಮ್ಮ ಕಡೆ ವಾಲುವಂತೆ ಮಾಡಿಕೊಳ್ಳುವುದು ಪಕ್ಷಗಳ ಉದ್ದೇಶ.

ಬಹಳಷ್ಟು ರಾಷ್ಟ್ರಗಳಲ್ಲಿ ಸಮೂಹ ಮಾಧ್ಯಮಗಳನ್ನು ಸರ್ಕಾರಗಳು ತಮ್ಮ ಹತೋಟಿಯಲ್ಲಿಟ್ಟು ಕೊಂಡು, ತನ್ನ ಪರವಾಗಿ ಮಾಧ್ಯಮಗಳು ಅಭಿಪ್ರಾಯ ರೂಪಿಸುವಂತೆ ಮಾಡಲಾಗದಿದ್ದರೂ, ಕೊನೆಯ ಪಕ್ಷ ಸರ್ಕಾರದ ವಿರುದ್ಧವಾಗಿ ಇರದಂತೆ ನಿಯಂತ್ರಿಸುತ್ತವೆ. ಮಾಧ್ಯಮಗಳು ಬದಲಾವಣೆ ತರುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ರಾಜಕೀಯ ಪಕ್ಷಗಳು : ಸರ್ಕಾರ ಮತ್ತು ಪಕ್ಷಗಳು ಅದರ ಚಿನ್ಹೆಗಳು ರಾಜಕೀಯ ಸಾಮಾಜೀಕರಣ ವನ್ನುಂಟು ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ರಾಜಕೀಯ ಪಕ್ಷಗಳು ನಿರ್ದಿಷ್ಟ ಆಡಳಿತ ಧೋರಣೆಯನ್ನು ರೂಪಿಸಿ, ಅದನ್ನು ಅನುಷ್ಠಾನಕ್ಕೆ ತರುವ ಧ್ಯೇಯವನ್ನು ಹೊಂದಿರುತ್ತವೆ. ಹೀಗೆ ಮಾಡುವುದರ ಮೂಲಕ ದೇಶದ ಹಿತ ಸಾಧಿಸಲು ಪ್ರಯತ್ನಿಸುತ್ತವೆ. ಸಾರ್ವಜನಿಕ ಅಭಿಪ್ರಾಯ ರೂಪಿಸುವುದೂ ಪಕ್ಷಗಳ ಹೊಣೆಯಾಗಿದೆ. ರಾಜಕೀಯ ಪಕ್ಷಗಳ ಮುಖಂಡರು ಚಾರಿತ್ರ್ಯವಂತರಾಗಿ, ಧೀಮಂತ ವ್ಯಕ್ತಿತ್ವ ಪಡೆದವರಾಗಿದ್ದರೆ ಪಕ್ಷಕ್ಕೆ ಹೆಚ್ಚು ಅನುಕೂಲ. ಭಿನ್ನ ಭಿನ್ನ ಪಕ್ಷಗಳು ಸಾರ್ವಜನಿಕ ಸಮಸ್ಯೆಗಳನ್ನು ಜೀವಂತವಾಗಿರಿಸಿ, ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುತ್ತವೆ. ಪಕ್ಷಗಳು ಆಳುವವರು ಮತ್ತು ಆಳ್ವಿಕೆಗೆ ಒಳಗಾಗುವವರ ನಡುವೆ ನೇರ ಹಾಗೂ ನಿಕಟ ಸಂಪರ್ಕ ಕುದುರಿಸುತ್ತವೆ.

"Different political parties from the government at the different times. Whosoever political parties forms the government, it uses the schools, unversities other institutions and the media for political propaganda in its favour and finders the progress of other politicl parties. Therefore other political parties are always looking for the opportunity to increase their power, singly or jointly so that when an opportunity arises they may present the alternative for the government".[೬] ಆದುದರಿಂದ ಪಕ್ಷಗಳು ತಮ್ಮ ಪರವಾಗಿ ಅಭಿಪ್ರಾಯವನ್ನು ರೂಪಿಸಿಕೊಳ್ಳಲು ಸದಾ ಕಾರ್ಯಪ್ರವೃತ್ತವಾಗಿರುತ್ತವೆ.

ಒತ್ತಡ ಗುಂಪುಗಳು ಮತ್ತು ಸಾಮಾಜಿಕಸಂಸ್ಥೆಗಳು ರಾಜಕೀಯ ಸಾಮಾಜೀಕರಣದ ಪ್ರಮುಖ ನಿಯೋಗಗಳಾಗಿವೆ. ಈ ಎಲ್ಲ ನಿಯೋಗಗಳ ಮೂಲಕ ಚುನಾಯಿತ ಮಹಿಳೆಯರ ಮೇಲೆ ರಾಜಕೀಯ ಸಾಮಾಜೀಕರಣವು ಉಂಟಾಗಿದೆಯೇ ಇಲ್ಲವೇ ಎಂಬುದನ್ನು ದೊರೆತಿರುವ ಅಂಕಿ ಸಂಖ್ಯೆಗಳ ಮೂಲಕ ಚರ್ಚಿಸಲಾಗಿದೆ.

ರಾಜಕೀಯದಲ್ಲಿ ಭಾಗವಹಿಸುವಿಕೆ(Political participation) : ಮೊದಲು ರಾಜಕೀಯದಲ್ಲಿ ಭಾಗವಹಿಸುವಿಕೆ ಅಂದರೇನು? ಈ ಭಾಗವಹಿಸುವ ಪ್ರಕ್ರಿಯೆಗಳಾವುವು? ಈ ಪ್ರಕ್ರಿಯೆಗಳಿಗೆ

ಪ್ರೇರಣೆಗಳಾವುವು? ಎಂಬ ಪ್ರಶ್ನೆಗಳನ್ನು ಹಾಕಿಕೊಂಡಾಗ, ಮಹಿಳೆಯು ರಾಜಕೀಯದಲ್ಲಿ ಭಾಗವಹಿಸುವುದರ ಕುರಿತು ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.

Political participation is the participation of the ruler and the ruled in the political life. It is conditioned by posychological, political and social vriables. These socil vriables differ in different countries. Political participation legitimises political power. Political participation results in greater stability of political culture and political system.

According to H. McClosky, 'Participtíon is the principal means by which consent is granted or with drawn in a democracy and rulers are made accountable to the ruled.

According to J.L.Woodword and F.Robert, Political prticiption involves a 1. voting at the polls, 2. Supporting possible pressure groups by being a member of them, 3. Personally communicating directly by legislators. 4. Participating in political party accivity and thus acquiriny aclaim on legislators, and 5. engaging in habitual dissemination of political opinions through word-of mouth communications to other citizens."[೭]

ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ(political participation) : ಈ ಪದವು ಸ್ವಯಂ ಚಟುವಟಿಕೆಗಳಿಂದ ಸಮಾಜದ ಸದಸ್ಯರು ಆಡಳಿತಗಾರರ (ಆಳುವವರ) ಆಯ್ಕೆಯಲ್ಲಿ ಮತ್ತು ನೇರವಾಗಿ ಅಥವಾ ಪರೋಕ್ಷವಾಗಿ ನೀತಿ ನಿರೂಪಣೆಯಲ್ಲಿ ಭಾಗವಹಿಸುವುದು ಎಂಬ ಅರ್ಥ ಕೊಡುತ್ತದೆ. ರಾಜಕೀಯದಲ್ಲಿ ಭಾಗವಹಿಸಲು ವ್ಯಕ್ತಿಗಳು ಕೈಗೊಳ್ಳುವ ಚಟುವಟಿಕೆಗಳು ಅಥವಾ ಕಾರ್ಯಗಳು ಯಾವುವೆಂದರೆ ಮತ ಚಲಾಯಿಸುವುದು, ಮಾಹಿತಿ ಪಡೆಯುವುದು, ಚರ್ಚಿಸುವುದು, ಸಭೆಗಳಿಗೆ ಹಾಜರಾಗುವುದು, ರಾಜಕೀಯ ಪಕ್ಷಗಳಿಗೆ ಆರ್ಥಿಕ ವಂತಿಕೆ ನೀಡುವುದು, ಮುಷ್ಕರ ಮತ್ತು ಪ್ರದರ್ಶನಗಳನ್ನು ನಡೆಸುವುದು, ರಾಜಕೀಯ ಒತ್ತಡ ಗುಂಪುಗಳ ಸದಸ್ಯತ್ವ ಹೊಂದುವುದು, ಶಾಸಕರು ಮತ್ತು ಇತರೆ ಮುಖಂಡರೊಡನೆ ಸಂಪರ್ಕ ಹೊಂದುವುದು, ರಾಜಕೀಯ ಪಕ್ಷದ ಮೂಲಕ ಸ್ಪರ್ಧಿಸುವುದು ಇವೇ ಮೊದಲಾದವುಗಳಾಗಿವೆ. ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಅತ್ಯಂತ ಸಕ್ರಿಯ ವಿಧಾನಗಳೆಂದರೆ ಔಪಚಾರಿಕವಾಗಿ ರಾಜಕೀಯ ಪಕ್ಷದ ಸದಸ್ಯತ್ವದ ದಾಖಲಾತಿ, ಚುನಾವಣಾ ಪ್ರಚಾರ ಮಾಡುವುದು, ಚುನಾವಣೆಗಳಲ್ಲಿ ಮತಗಳನ್ನು ನೊಂದಾಯಿಸುವುದು, ಭಾಷಣ ಅಥವಾ ಲೇಖನ ಬರೆಯುವುದು, ಭಾಷಣ ಮಾಡುವುದು, ಸಾರ್ವಜನಿಕ ಮತ್ತು ಪಕ್ಷದ ಹುದ್ದೆಗಳಿಗಾಗಿ ಪ್ರಚಾರ ಮಾಡುವುದು ಮತ್ತು

ಸ್ಪರ್ಧಿಸುವುದು ಇತ್ಯಾದಿ. ಪ್ರತಿಯೊಬ್ಬ ಪೌರನೂ ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯದಲ್ಲಿ ಭಾಗವಹಿಸುತ್ತಾನೆ. ಭಾಗವಹಿಸಲೇಬೇಕಾಗುತ್ತದೆ.

ರಾಜಕೀಯ ಭಾಗವಹಿಸುವಿಕೆಯಲ್ಲಿ ಸಕ್ರಿಯ(Active) ಮತ್ತು ನಿಷ್ಕ್ರಿಯ(Passive) ಎಂಬ ಎರಡು ವಿಧಗಳನ್ನು ಕಾಣಬಹುದು. ಎಲ್ಲಿ ಜನತೆಯು ತಮ್ಮ ಸಮಯ, ಶಕ್ತಿ ಮತ್ತು ಹಣವನ್ನು ರಾಜಕೀಯ ಚಟುವಟಿಕೆಗಳಲ್ಲಿ ಸಮರ್ಪಿಸುವುದಿಲ್ಲವೋ ಅದು ಸಕ್ರಿಯವಾದ ರಾಜಕೀಯ ಭಾಗವಹಿಸುವಿಕೆ ಯಾಗುವುದಿಲ್ಲ. ಅದು ನಿಷ್ಕ್ರಿಯ ರಾಜಕೀಯ ಭಾಗವಹಿಸುವಿಕೆಯಾಗುತ್ತದೆ. ನಿಷ್ಕ್ರಿಯವಾಗಿ ರಾಜಕೀಯದಲ್ಲಿ ಭಾಗವಹಿಸುವವರು ಕೇವಲ ವೀಕ್ಷಕರಾಗಿರುತ್ತಾರಷ್ಟೆ.

ರಾಜಕೀಯ ಭಾಗವಹಿಸುವಿಕೆಯನ್ನು ನಿರ್ಧರಿಸುವ ಅಂಶಗಳು : ರಾಜಕೀಯ ಭಾಗವಹಿಸುವಿಕೆಯಲ್ಲಿ ಮನೋವೈಜ್ಞಾನಿಕ ಅಂಶಗಳು, ಸಾಮಾಜಿಕ ಅಂಶಗಳು ಮತ್ತು ರಾಜಕೀಯ ಅಂಶಗಳು ರಾಜಕೀಯ ಭಾಗವಹಿಸುವಿಕೆಯನ್ನು ನಿರ್ಧರಿಸುತ್ತವೆ. ಮನೋವೈಜ್ಞಾನಿಕ ಅಂಶವು ಒಂಟಿತನ(Lonliness), ಅಗೋಚರ ಘರ್ಷಣೆ ಮತ್ತು ಒತ್ತಡ(Unconscious conflicts and teansions), ಅಧಿಕಾರದ ಪ್ರೇರಣೆ(Urge to power)ಗಳನ್ನು ಒಳಗೊಳ್ಳುತ್ತದೆ. ಸಾಮಾಜಿಕ ಅಂಶವು ಶಿಕ್ಷಣ, ಉದ್ಯೋಗ, ಆದಾಯ, ಸಾಮಾಜಿಕ ಸ್ಥಾನ, ವಯಸ್ಸು, ವಾಸಸ್ಥಳ, ಧರ್ಮ, ಜನಾಂಗ, ಗುಂಪುಗಳನ್ನು ಒಳಗೊಂಡಿದೆ. ರಾಜಕೀಯ ಅಂಶವು ಸರ್ಕಾರದ ವರ್ತನೆ(Attitudes of government), ರಾಜಕೀಯ ಪಕ್ಷಗಳು, ಚುನಾವಣೆಗಳನ್ನು ಒಳಗೊಳ್ಳುತ್ತದೆ.

ರಾಜಕೀಯ ಭಾಗವಹಿಸುವಿಕೆಯು ಮೂರು ಮಟ್ಟಗಳನ್ನು ಒಳಗೊಂಡಿದೆ. ಅವುಗಳೆಂದರೆ ಅತಿಯಾದ ಕ್ರಿಯಾಶೀಲ ಮಟ್ಟ(Very active level), ಪ್ರಾಸಂಗಿಕ ಕ್ರಿಯಾಶೀಲಮಟ್ಟ(Occassionally ative) ಮತ್ತು ಕ್ರಿಯಾಶೂನ್ಯ ಮಟ್ಟ(Inactive level). ಈ ಎಲ್ಲ ಹಿನ್ನೆಲೆಗಳಲ್ಲಿ ಚುನಾಯಿತ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ದೊರೆತಿರುವ ಅಂಕಿ ಅಂಶಗಳ ಮೂಲಕ ಚರ್ಚಿಸಲಾಗಿದೆ.

ಸಾಂಪ್ರದಾಯಿಕ ಮತ್ತು ಅರಸೊತ್ತಿಗೆಯ ಸಂದರ್ಭಗಳಲ್ಲಿ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ಪಾಲುದಾರಿಕೆಯು ಶ್ರೀಮಂತ ವರ್ಗಕ್ಕೆ ಪ್ರತಿಷ್ಠಿತ ವರ್ಗಕ್ಕೆ ಮೀಸಲಾಗಿತ್ತು. ಮತಚಲಾವಣೆಯಂತು ಕಂದಾಯ ಸಂದಾಯ ಮಾಡುವವರಿಗೆ ಮಾತ್ರ ಅದು ಸೀಮಿತವಾಗಿತ್ತು. ವಿಶೇಷವಾಗಿ ತಳಮಟ್ಟದ ರಾಜಕೀಯ, ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಹುಟ್ಟಿಕೊಂಡ ಗ್ರಾಮಪಂಚಾಯ್ತಿ ವ್ಯವಸ್ಥೆಯು ವಿಕೇಂದ್ರೀಕರಣಕ್ಕೆ ಹೆಚ್ಚು ಒತ್ತು ಕೊಡುತ್ತದೆ. ಅದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಪಾಲುದಾರಿಕೆಯ ಹಕ್ಕನ್ನು ನೀಡುತ್ತದೆ. ಇಂತಹ ಪ್ರಜಾಸತ್ತಾತ್ಮಕ ವ್ಯವಸ್ಥೆಯೊಂದೇ ಜನತೆಯು

ಇಚ್ಛೆಯ ಮೇಲೆ ಅವಲಂಬಿತವಾದ ವ್ಯವಸ್ಥೆಯಾಗಿದೆ. 'ಆಯ್ಕೆ', 'ಸಮ್ಮತಿ', 'ಹೊಣೆಗಾರಿಕೆ' ಇಂತಹ ತತ್ವಗಳಿಗೆ ನಿಜವಾದ ಅರ್ಥ ಬರಬೇಕಾದರೆ ರಾಜಕೀಯದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸ್ವ ಇಚ್ಛೆಯಿಂದ ಪಾಲ್ಗೊಳ್ಳಬೇಕಾಗುತ್ತದೆ. ಇದು ಶಾಸನಾತ್ಮಕ ನಿರ್ಧಾರಗಳಿಂದ ಸಾಧ್ಯವಾಗಲಾರದು.

ತಾತ್ವಿಕವಾಗಿ ಶಾಸನಾತ್ಮಕ ವಿಕೇಂದ್ರೀಕರಣ ವ್ಯವಸ್ಥೆಯು ನಮ್ಮ ಸಮಾಜದಲ್ಲಿ ಅಸ್ತಿತ್ವವನ್ನು ಪಡೆದುಕೊಂಡಿದೆ. ಆದರೆ ಅದು ಪರಿಣಾಮಕಾರಿಯಾಗಿ ಕ್ರಿಯಾಶೀಲಗೊಂಡಿಲ್ಲ. ಹೀಗಾಗಿ ವಿಕೇಂದ್ರೀಕರಣ ತಾತ್ವಿಕತೆ ಮತ್ತು ಆಚರಣೆಗಳಲ್ಲಿ 'ಮಿಸ್ಸಿಂಗ್ ಲಿಂಕ್' ಉಂಟಾಗಿದೆ. ವಿಕೇಂದ್ರೀಕರಣವು ಜಾರಿಗೆ ಬರದಿರಲು ಹಲವಾರು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕಾರಣಗಳಿವೆ.

ಜನರ ಸಶಕ್ತೀಕರಣ, ಪ್ರಗತಿ ಮತ್ತು ಧಾರಣ ಶಕ್ತಿಗಳ ಬೆಳವಣಿಗೆಗಳು ವಿಕೇಂದ್ರೀಕರಣದ ಮಾದರಿಗಳನ್ನು ರಾಜಕೀಯದಲ್ಲಿ ಭಾಗವಹಿಸುವಿಕೆಯ ಕ್ರಿಯೆಗಳನ್ನು ಅರ್ಥಪೂರ್ಣಗೊಳಿಸುವ ಶಕ್ತಿಯನ್ನು ಪಡೆದಿವೆ. ಸಮಾಜದ ಅಂಚಿನಲ್ಲಿರುವ ಜನರಿಗೆ ಪಂಚಾಯತ್‌ರಾಜ್ ವ್ಯವಸ್ಥೆಗಳಲ್ಲಿ ಭಾಗವಹಿಸಲು ಅವಕಾಶ ನೀಡಿದರೆ ಮಾತ್ರ ಸಾಲದು. ಅಧಿಕಾರವನ್ನು ನಿಭಾಯಿಸಲು ಅಗತ್ಯವಾದ ಸಾಮರ್ಥ್ಯ ಹಾಗೂ ಸ್ವಾತಂತ್ರ್ಯವನ್ನು ಕೊಡಬೇಕಾಗುತ್ತದೆ. ಆರ್ಥಿಕವಾಗಿ ದುರ್ಬಲರಾದ ಜನಸಮುದಾಯ ಗಳಿಗೆ ಹಾಗೂ ಮಹಿಳೆಯರಿಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸಲು ಅವಕಾಶಗಳನ್ನು ಹೆಚ್ಚಿಸಬೇಕಾಗುತ್ತದೆ. ಅಕ್ಷರ ಜ್ಞಾನ, ಆರೋಗ್ಯ ಸಂಪತ್ತು, ಶಿಕ್ಷಣವನ್ನು ಒದಗಿಸಿ ಕೊಡಬೇಕಾಗುತ್ತದೆ. ಅಂದಾಗ ಪ್ರಜಾಪ್ರಭುತ್ವದಲ್ಲಿ ಜನರು ತಮ್ಮ ಸಮ್ಮತಿಯನ್ನು ನೀಡಲು ಅಥವಾ ನಿರಾಕರಿಸಲು: ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಪ್ರಕ್ರಿಯೆ ಉಪಯುಕ್ತವೆನಿಸುತ್ತವೆ. ವ್ಯಕ್ತಿ ಅಥವಾ ಸಮುದಾಯವು ರಾಜಕೀಯ ಪದ್ಧತಿಯಲ್ಲಿ ವಿವಿಧ ಹಂತಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದೇ ರಾಜಕೀಯದಲ್ಲಿ ಭಾಗವಹಿಸುವ ಪ್ರಕ್ರಿಯೆಯಾಗಿದೆ. ರಾಜಕೀಯದಲ್ಲಿ ಭಾಗವಹಿಸಲು ದುರ್ಬಲ ವರ್ಗಗಳಂತೆ, ಶೋಷಣೆಗೊಳಗಾದ ಮಹಿಳೆಗೆ ಸಂವಿಧಾನದ ೭೩ನೆಯ ತಿದ್ದುಪಡಿಯು ಶೇ ೩೩.೩೩ರಷ್ಟು ಮೀಸಲಾತಿಯನ್ನು ಮುಡುಪಾಗಿಟ್ಟಿದೆ. ಇದರಿಂದ ಮೊದಲು ರಾಜಕೀಯಾಭಿವೃದ್ಧಿಗೆ ಮೀಸಲಾಗಿದ್ದ ವಿಕೇಂದ್ರೀಕರಣವು ಮಾನವಮುಖಿ ಅಭಿವೃದ್ಧಿಗೂ ವಿಶೇಷ ಮಹತ್ವ ನೀಡಿದಂತಾಗಿದೆ.

ಪುರುಷಶಾಹಿ ಪ್ರಧಾನ ಸಮಾಜದಲ್ಲಿ ಮಹಿಳಾ ಮೀಸಲಾತಿಯು ಕೇವಲ ಮೇಲ್ನೋಟದ ಬದಲಾವಣೆಯನ್ನು ತರಬಲ್ಲದು. ಗೃಹಕೃತ್ಯಗಳಿಗೆ ಸೀಮಿತವಾದ ಮಹಿಳೆಯ ಬದುಕು ವಿಕೇಂದ್ರೀಕರಣದ ವ್ಯವಸ್ಥೆಗಳು ತಂದ ಮೀಸಲಾತಿ ಸೌಲಭ್ಯಗಳಿಂದಾಗಿ ತನ್ನ ಹೊರಚಾಚುವಿಕೆಯನ್ನು ಕಂಡುಕೊಂಡಿತು. ಇದು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅದರ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಪ್ರಕ್ರಿಯೆಗಳ ವಿವಿಧ ಹಂತಗಳಲ್ಲಿ ಭಾಗವಹಿಸುವಿಕೆಯ ಸಾಧ್ಯತೆಯನ್ನು ತೆರೆದಿಟ್ಟಿತು.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಸ್ವಇಚ್ಛೆಯಿಂದ, ಸ್ವಸಾಮರ್ಥ್ಯದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಭಾಗವಹಿಸಲು, ನಿರ್ಧಾರ ತೆಗೆದುಕೊಳ್ಳಲು ಅನುಕೂಲಕರ ವಾತಾವರಣವಿಲ್ಲ. ಇದು ಕೌಟುಂಬಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಇರುವಂಥದ್ದು. ಕಾರಣ ಮಹಿಳಾ ಮೀಸಲಾತಿಯು ಮಹಿಳೆಯ ರಾಜಕೀಯ ಭಾಗವಹಿಸುವಿಕೆಯ ದೃಷ್ಟಿಯಿಂದ ಸ್ವಾಗತಾರ್ಹ ಕ್ರಮವಾಗಿದೆ. ಇಂದಿನ ಪಂಚಾಯತ್ ರಾಜ್ ವ್ಯವಸ್ಥೆಯು ಸ್ಥಳೀಯ ಆಡಳಿತದ ಪ್ರತಿಯೊಂದು ಹಂತಗಳಲ್ಲಿ ಮಹಿಳೆಯರಿಗೆ ಶೇ.೩೩ರಷ್ಟು ಪ್ರಾತಿನಿಧ್ಯ ಕೊಡುವ ಮೂಲಕ ದುರ್ಬಲ ವರ್ಗಕ್ಕೆ ಸೇರಿದ ಮಹಿಳೆಯರ ರಾಜಕೀಯ ಸಂವೇದನೆಗಳಿಗೆ ಜೀವಂತಿಕೆಯನ್ನು ನೀಡಿದೆ.

ಇಲ್ಲಿ ಇನ್ನೊಂದು ಪ್ರಶ್ನೆ ಬರುತ್ತದೆ. ಮೀಸಲಾತಿ ನೀಡಿದ ಮಾತ್ರಕ್ಕೆ ಮಹಿಳೆಯರಿಗೆ ಎಲ್ಲಾ ರೀತಿಯ ರಾಜಕೀಯ ಸ್ವಾತಂತ್ರ್ಯ ದಕ್ಕೀತೆ? ಅಧಿಕಾರ ರೂಪಿಕೆ ಮತ್ತು ಅನುಷ್ಠಾನ ಸಾಧ್ಯವಾದೀತೆ? ಪುರುಷ ಸಹಕಾರವಿಲ್ಲದೆ ಸ್ವತಂತ್ರವಾಗಿ ಎಷ್ಟರ ಮಟ್ಟಿಗೆ ನಿರ್ಣಯ ಪ್ರಕ್ರಿಯೆಯಲ್ಲಿ ಮಹಿಳೆ ಭಾಗವಹಿಸುತ್ತಾಳೆ? ಈ ಮೀಸಲಾತಿ ಅವಳ ಪ್ರತಿನಿಧಿತ್ವಕ್ಕೆ ಎಷ್ಟರ ಮಟ್ಟಿಗೆ ಸಹಕಾರಿಯಾಗಿದೆ ಎಂಬ ಪ್ರಶ್ನೆಗಳಿಗೆ ಒಂದೇ ಉಸಿರಿನಲ್ಲಿ 'ಹೌದು' ಎಂದು ಉತ್ತರಿಸಲು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಮಹಿಳೆಯು ರಾಜಕೀಯದಲ್ಲಿ ಭಾಗವಹಿಸುವಿಕೆಯ ನೆಲೆಗಳನ್ನು ಕೆಳಗಿನಂತೆ ಗುರುತಿಸಿಕೊಳ್ಳಬಹುದಾಗಿದೆ. ಆ ಮೂಲಕ ಮೇಲಿನ ಪ್ರಶ್ನೆಗಳಿಗೆ ಕೆಲವು ಸಮಾಧಾನಕರ ಉತ್ತರಗಳನ್ನು ಕಂಡುಕೊಳ್ಳಬಹುದಾಗಿದೆ.

ವಿಕೇಂದ್ರೀಕರಣದ ಯಶಸ್ಸಿನಲ್ಲಿ ಮಹಿಳೆಯರ ಸಶಕ್ತೀಕರಣದ ಪಾತ್ರ ತುಂಬಾ ನಿರ್ಣಾಯಕವಾದುದಾಗಿದೆ. ಏಕೆಂದರೆ ಮಹಿಳೆಯರು ಅನೇಕ ಬಗೆಯ ಒತ್ತಡಗಳಲ್ಲಿ ಸಿಲುಕಿ ಸ್ವಾತಂತ್ರ್ಯರಹಿತರಾಗಿದ್ದಾರೆ. ಮನೆ ವಾರ್ತೆಯ ಜವಾಬ್ದಾರಿಗಳಿಂದ ಜರ್ಝರಿತರಾಗಿದ್ದಾರೆ. ಸಶಕ್ತೀಕರಣದ ಬಹುಮುಖ್ಯ ಗುಣವೆಂದರೆ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ. ಈ ಪ್ರಕ್ರಿಯೆಯು ಯಶಸ್ವಿಯಾಗಬೇಕಾದರೆ ಮಹಿಳೆಗೆ ಮೊದಲು ಅಕ್ಷರಜ್ಞಾನ, ಆರೋಗ್ಯ, ತನ್ನ ಸುತ್ತಮುತ್ತ ನಡೆಯುವ ವಿದ್ಯಮಾನಗಳ ಬಗೆಗೆ ಸರಿಯಾದ ಅರಿವನ್ನು ಅವಳಲ್ಲಿ ಮೂಡಿಸುವ ಪ್ರಯತ್ನ ಮಾಡಬೇಕಾಗುತ್ತದೆ. ಈ ಅರಿವಿಗೆ ಆಕೆಯ ದಾಸ್ಯ ವಿಮೋಚನೆ ಮತ್ತು ಆರ್ಥಿಕ ಸ್ವಾವಲಂಬನೆ ಅತ್ಯಂತ ಪರಿಣಾಮಕಾರಿಯಾದದ್ದು. ಮಹಿಳೆಯಲ್ಲಿರುವ ಕೀಳರಿಮೆಯನ್ನು ಕಳೆದುಹಾಕುವಂಥ ವಾತಾವರಣವನ್ನು ನಿರ್ಮಾಣಗೊಳಿಸುವ ಅವಶ್ಯಕತೆಯು ಇದೆ. ಏಕೆಂದರೆ ಪುರುಷಶಾಹಿ ವ್ಯವಸ್ಥೆಯ ಒತ್ತಾಯ ಮತ್ತು ಸ್ವಾರ್ಥತೆಯ ಪರಿಣಾಮವಾಗಿ ಮೀಸಲಾತಿಯ ಮೂಲಕ ಆಯ್ಕೆಯಾಗುವ ಬಹಳಷ್ಟು ಮಹಿಳೆಯರು ರಾಜಕೀಯವಾದಂತಹ ಯಾವ ರೀತಿಯ ಆಸಕ್ತಿಗಳನ್ನು

ಹೊಂದಿರುವುದಿಲ್ಲ. ಇಂತಹ ಅನೇಕ ಉದಾಹರಣೆಗಳನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಿದ್ದೇನೆ. ಹೊಸಪೇಟೆ ತಾಲೂಕಿನ ಬುಕ್ಕಸಾಗರ ಗ್ರಾಮಪಂಚಾಯಿತಿಯಲ್ಲಿ ಮೀಸಲಾತಿ (ಎಸ್.ಟಿ) ಸೌಲಭ್ಯದಲ್ಲಿ ಆಯ್ಕೆಯಾದ ಗಾಳೆಮ್ಮ(ವಯಸ್ಸು-೩೦) ಎಂಬುವವರು ತನ್ನ ಧಣಿಯ ಇಚ್ಛೆಯಂತೆ ಸ್ಪರ್ಧಿಸಿ ಚುನಾಯಿತಳಾಗಿದ್ದಾಳೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈಕೆಯೊಂದಿಗೆ ಅವಳ ಆಯ್ಕೆ ಮತ್ತು ಆಸಕ್ತಿಗಳ ಕುರಿತು ಸಂದರ್ಶಿಸಿದಾಗ ಆಸಕ್ತಿಗಿಂತ ಹೆಚ್ಚು ನಿರಾಸಕ್ತಿಯ ಉತ್ತರಗಳೇ ದೊರೆತವು. ಇಂತಹ ಹಲವು ಉದಾಹರಣೆಗಳು ಪ್ರತಿಯೊಂದು ಗ್ರಾಮಪಂಚಾಯಿತಿಯಲ್ಲೂ ಸಿಗುತ್ತವೆ. ಹೀಗೆ ಗ್ರಾಮದ ಪ್ರತಿಷ್ಠಿತ ವರ್ಗದ ಬಾಲಂಗೋಚಿಗಳಾಗಿ ಸ್ವ ಆಸಕ್ತಿಯಿಲ್ಲದೆ ಗೆದ್ದ ಇವರಲ್ಲಿ ರಾಜಕೀಯ ಚಿಂತನೆಗಳಿಗಿಂತ ತನ್ನ ಸಂಸಾರಿಕ ಮತ್ತು ದೈನಂದಿನ ವ್ಯವಹಾರಗಳ ಬಗ್ಗೆ ಹೆಚ್ಚು ಆಸಕ್ತಿಯಿದ್ದುದ್ದು ಕಂಡುಬರುತ್ತದೆ. ತಮ್ಮ ಸ್ಥಾನಬಲದ ಹಂಗು ಹರಿದು ಸಂಜೆಯ ಗಂಜಿಗಾಗಿ ದುಡಿಯುವ ವರ್ಗದ ಮಹಿಳಾ ಪ್ರತಿನಿಧಿಗಳು ರಾಜಕೀಯ ಚಟುವಟಿಕೆಗಳ ದೃಷ್ಟಿಯಿಂದ ಶೂನ್ಯ ಮನೋಧರ್ಮದವರಾಗಿ ಕಾಣುತ್ತಾರೆ. ಇದಕ್ಕೆ ಕೆಲವು ಅಪವಾದಗಳೂ ಇರಬಹುದು. ಅಂಕಿ ಅಂಶಗಳ ಮೂಲಕ ಚುನಾಯಿತ ಮಹಿಳೆಯ ಭಾಗವಹಿಸುವಿಕೆಯ ಪ್ರೇರಣೆ ಪ್ರಭಾವ ಮತ್ತು ಪ್ರಮಾಣವನ್ನು ಮುಂದೆ ನೋಡಬಹುದಾಗಿದೆ.

ಮಹಿಳಾ ಭಾಗವಹಿಸುವಿಕೆ ಮತ್ತು ಚುನಾವಣಾ ಪ್ರಕ್ರಿಯೆ

ನಾಮಪತ್ರ ಸಲ್ಲಿಕೆ

ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸುವುದು ರಾಜಕೀಯ ಭಾಗವಹಿಸುವಿಕೆಯ ಒಂದು ಅಂಶವಾಗಿದೆ. ನಾಮಪತ್ರ ಸಲ್ಲಿಸಲು ಚುನಾಯಿತ ಮಹಿಳೆಯು ಸ್ವತಃ ಹೋಗಿದ್ದಳೇ ಅಥವಾ ಹೋಗದೆ ತನ್ನ ಬೆಂಬಲಿಗರ ಮೂಲಕ ನಾಮಪತ್ರ ಸಲ್ಲಿಸಿದಳೇ ಎನ್ನುವ ಸಂಗತಿಗಳನ್ನು ಅಂಕಿ ಅಂಶಗಳ ಮೂಲಕ ಕಂಡುಕೊಳ್ಳಬಹುದಾಗಿದೆ. ಈ ದೃಷ್ಟಿಯಲ್ಲಿ ಕೆಳಕಂಡ ಕೋಷ್ಟಕವನ್ನು ಗಮನಿಸಬಹುದು.

ಕೋಷ್ಟಕ ೨೧.೧

ಕ್ರ.ಸಂ	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಹೋಗಿದ್ದಳು	೧೦೭	೭೭.೫೩	೧೪೪	೯೫.೩೬
೨.	ಹೋಗಿರಲಿಲ್ಲ	೩೧	೨೨.೪೬	೭	೪.೬೩
	ಒಟ್ಟು	೧೩೮	೧೦೦	೧೫೧	೧೦೦

ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ನಾಮಪತ್ರ ಸಲ್ಲಿಸಲು ಸ್ವತಃ ಹೋದ ಚುನಾಯಿತ ಮಹಿಳೆಯರ ಸಂಖ್ಯೆ ೧೦೭ ಆಗಿದ್ದು, ಶೇ.೭೭.೫೩ ರಷ್ಟಿದೆ. ಹೋಗದಿರುವ ಚುನಾಯಿತ ಮಹಿಳೆಯರ ಸಂಖ್ಯೆ ೩೧ ಇದ್ದು, ಶೇ.೨೨.೪೬ ರಷ್ಟಿದೆ. ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ನಾಮಪತ್ರ ಸಲ್ಲಿಸಲು ಸ್ವತಃ ಹೋದ ಚುನಾಯಿತ ಮಹಿಳೆಯರ ಸಂಖ್ಯೆ ೧೪೪ ಆಗಿದ್ದು, ಶೇ.೯೫.೩೬ ರಷ್ಟಿದೆ. ನಾಮಪತ್ರ ಸಲ್ಲಿಸಲು ಹೋಗದಿರುವ ಚುನಾಯಿತ ಮಹಿಳೆಯರ ಸಂಖ್ಯೆಯು ೭ ಇದ್ದು, ಶೇ.೪.೬೩ ರಷ್ಟಿದೆ. ಅಂಕಿ ಸಂಖ್ಯೆಗಳ ಪ್ರಕಾರ ಸ್ವತಃ ನಾಮಪತ್ರ ಸಲ್ಲಿಸಲು ಹೋಗಿರುವವರ ಸಂಖ್ಯೆ ಹೊಸಪೇಟೆ ತಾಲೂಕಿಗಿಂತ ಸಂಡೂರು ತಾಲೂಕು ಗ್ರಾಮ ಪಂಚಾಯ್ತಿಗಳಲ್ಲಿ ಶೇ.೧೭.೮೩ ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಇದರಿಂದ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ರಾಜಕೀಯ ಸಾಮಾಜಿಕರಣದ ಪ್ರಭಾವ ದಟ್ಟವಾಗಿದ್ದು ಈ ಮೂಲಕ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣವು ಕ್ರಿಯಾಶೀಲ ಮಟ್ಟದಲ್ಲಿರುವುದು ತಿಳಿಯುತ್ತದೆ.

ನಾಮಪತ್ರ ಸಲ್ಲಿಸಲು ಹೋಗಿರುವ ಚುನಾಯಿತ ಮಹಿಳೆಯರು ತಾವೊಬ್ಬರೇ ಹೋಗಿಲ್ಲ. ಎರಡು ತಾಲೂಕುಗಳಲ್ಲಿ ಚುನಾಯಿತ ಮಹಿಳೆಯರನ್ನು ಸಂದರ್ಶಿಸಿದಾಗ ದೊರೆತ ಉತ್ತರಗಳ ಪ್ರಕಾರ ಅವರು ತಮ್ಮ ಪತಿ, ಮಗ, ಮಾವ, ಮೈದುನ, ಅಣ್ಣ, ತಮ್ಮ, ಊರಿನ ಹಿರಿಯರು, ರಾಜಕೀಯ ಮುಖಂಡರು, ಜಾತಿ ಬಾಂಧವರು, ಬೆಂಬಲಿಗರು ಇವರೊಂದಿಗೆ ಹೋಗಿ ನಾಮಪತ್ರ ಸಲ್ಲಿಸಿದ್ದಾರೆ. ವಿಧವೆಯರು ದೇವದಾಸಿಯರು ಪತಿ ಇಲ್ಲದಿರುವಾಗ ಮೇಲೆ ತಿಳಿಸಿರುವ ಪುರಷರೊಂದಿಗೆ ಹೋಗಿ ನಾಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರ ಸಲ್ಲಿಸಲು ಹೋಗದೆ ಇರುವ ಸದಸ್ಯೆಯರು ಅಜ್ಞಾನ, ನಾಚಿಕೆ, ಮುಜುಗರ, ನಿರಾಸಕ್ತಿ, ಉದಾಸೀನ ಭಾವನೆಗಳನ್ನು ಹೊಂದಿದವರಾಗಿದ್ದಾರೆ. ಹೋಗದಿದ್ದರೂ ನಡೆಯುತ್ತದೆ. ಹೇಗೋ ತನ್ನ ಪರವಾಗಿ ಪತಿಯು ಹೋಗಿದ್ದನಲ್ಲ ಎಂಬಂತಹ ಉತ್ತರಗಳನ್ನು ಆಯ್ಕೆಯಾದ ಮಹಿಳೆಯರ ಮನೋಧರ್ಮದ ಹಿನ್ನೆಲೆಯಲ್ಲಿ ಗಮನಿಸಲಾಗಿದೆ. ಇಂಥಲ್ಲಿ ಪ್ರಾಸಂಗಿಕ ನೆಲೆಯ ಭಾಗವಹಿಸುವಿಕೆಯ ಮಟ್ಟವನ್ನು ಕಾಣಬಹುದಾಗಿದೆ.

ಚುನಾವಣಾ ಪ್ರಚಾರ

ರಾಜಕೀಯ ಭಾಗವಹಿಸುವಿಕೆಯ ಮತ್ತೊಂದು ಅಂಶ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವುದು. ಚುನಾವಣಾ ಪ್ರಚಾರದಲ್ಲಿ ಚುನಾಯಿತ ಮಹಿಳೆಯರು ಎಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ ಎಂಬುದನ್ನು ಅಂಕಿ ಅಂಶಗಳ ಮೂಲಕ ತಿಳಿದುಕೊಂಡು ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ನಿರ್ಧರಿಸಬಹುದು. ಅದಕ್ಕಾಗಿ ಕೋಷ್ಟಕ ೨೧.೨ನ್ನು ಗಮನಿಸಬಹುದು.

ಕೋಷ್ಟಕ ೨೧.೨
ಚುನಾವಣಾ ಪ್ರಚಾರ ಮತ್ತು ಮಹಿಳಾ ಭಾಗವಹಿಸುವಿಕೆ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕ ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಸ್ವತಃ ಭಾಗಿಯಾದವರು	೮೯	೬೪.೪೯	೧೧೬	೭೬.೮೨
೨.	ಭಾಗಿಯಾಗಿಲ್ಲದವರು	೧೫	೧೦.೮೬	೩	೧.೯೮
೩.	ಅವಿರೋಧವಾಗಿ ಆಯ್ಕೆ	೩೪	೨೪.೬೩	೩೨	೨೧.೧೯
	ಒಟ್ಟು	೧೩೮	೧೦೦	೧೫೧	೧೦೦

ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಚುನಾಯಿತ ಸದಸ್ಯೆಯರ ಸಂಖ್ಯೆ ೮೯ ಆಗಿದ್ದು, ಶೇ.೬೪.೪೯ ರಷ್ಟಿದೆ. ಭಾಗವಹಿಸದಿರುವ ಚುನಾಯಿತ ಮಹಿಳೆಯರ ಸಂಖ್ಯೆ ೧೫ ಇದ್ದು, ಶೇ.೧೦.೮೬ ರಷ್ಟಿದೆ. ಚುನಾವಣೆಯನ್ನು ಎದುರಿಸದೆ ಅವಿರೋಧ ವಾಗಿ ಆಯ್ಕೆಯಾಗಿರುವ ಮಹಿಳೆಯರ ಸಂಖ್ಯೆ ೩೪ ಆಗಿದ್ದು, ಶೇ.೨೪.೬೩ ರಷ್ಟಿರುವುದು ಕಂಡುಬಂದಿದೆ.

ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಚುನಾವಣೆಯ ಪ್ರಚಾರದಲ್ಲಿ ತಮ್ಮ ಗೆಲುವಿಗಾಗಿ ಮತ ಕೇಳಲು ಸ್ವತಃ ಭಾಗಿಯಾದ ಚುನಾಯಿತ ಮಹಿಳೆಯರ ಸಂಖ್ಯೆ ೧೧೬ ಆಗಿದ್ದು, ಶೇ.೭೬.೮೨ ರಷ್ಟಿದೆ. ಪ್ರಚಾರದಲ್ಲಿ ಭಾಗವಹಿಸದಿರುವ ಮಹಿಳೆಯರ ಸಂಖ್ಯೆ ೩ ಇದ್ದು, ಶೇ.೧.೯೮ರಷ್ಟಿದೆ. ಪ್ರಚಾರದಲ್ಲಿ ಭಾಗಿಯಾಗದೆ. ಚುನಾವಣೆಯನ್ನು ಎದುರಿಸದೆ ಅವಿರೋಧವಾಗಿ ಆಯ್ಕೆಯಾದ ಚುನಾಯಿತ ಮಹಿಳೆಯರ ಸಂಖ್ಯೆ ೩೨ ಆಗಿದ್ದು, ಶೇ.೨೧.೧೯ ಆಗಿರುವುದು ಗೋಚರಿಸುತ್ತದೆ. ತೌಲನಿಕವಾಗಿ ಗಮನಿಸಿದಾಗ ಚುನಾವಣಾ ಪ್ರಚಾರದಲ್ಲಿ ಸ್ವತಃ ಭಾಗಿಯಾದ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ, ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಯಲ್ಲಿ ಶೇ.೧೨.೩೩ ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ.

ಭಾಗವಹಿಸಿದವರ ಪ್ರಮಾಣವನ್ನು ಗಮನಿಸಿದಾಗ ರಾಜಕೀಯದಲ್ಲಿ ಭಾಗವಹಿಸುವಿಕೆ ಉತ್ತಮವಾಗಿದೆ ಎನ್ನಿಸುತ್ತದೆ. ಆದರೆ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡ ಎಲ್ಲ ಮಹಿಳೆಯರು ರಾಜಕೀಯ ತರಬೇತಿ ಪಡೆದವರು, ಅಕ್ಷರಸ್ತರು, ಮೇಲ್ಜಾತಿಯವರು, ರಾಜಕೀಯ ಪ್ರಜ್ಞೆ ಉಳ್ಳವರು, ಧೈರ್ಯವಂತರು, ಆರ್ಥಿಕವಾಗಿ ಮುನ್ನಡೆ ಹೊಂದಿದವರು ಎಂದು ಅರ್ಥೈಸಲು ಆಗುವುದಿಲ್ಲ. ಭಾಗವಹಿಸಿದವರು. ಭಾಗವಹಿಸದವರು ಎರಡು ವರ್ಗಗಳಲ್ಲಿಯೂ ನಾಚಿಕೆ, ಮುಜುಗರ, ಯಾಕಾದರೂ ಚುನಾವಣೆಗೆ ಇಳಿದೆನೋ ಸಾಕಪ್ಪಾ ಸಾಕು, ಅಡಿಗೆಯ ಮನೆಯೇ ಸುರಕ್ಷಿತವಾಗಿತ್ತು ಎನ್ನುವ ಭಾವನೆಗಳು ಹೆಚ್ಚಾಗಿ

ಕಂಡುಬರುತ್ತವೆ. ಕೆಲವರಂತೂ ಇನ್ನೆಂದೂ ಚುನಾವಣೆಯ ಸಹವಾಸವೇ ಬೇಡ ಎಂದರೆ, ಕೆಲವರು ಒತ್ತಾಯದಿಂದ ಸ್ಪರ್ಧಿಸಿದ ಮೇಲೆ ಅನುಭವಿಸಬೇಕು ಎಂದಿದ್ದಾರೆ. ಚುನಾವಣಾ ಪ್ರಚಾರ ಮತ್ತು ಮಹಿಳಾ ಸ್ಪರ್ಧಿಯ ಮಾನಸಿಕ ಸ್ಥಿತಿ ಕುರಿತು ದೊರೆತಿರುವ ಅಂಕಿ-ಅಂಶಗಳ ಮೂಲಕ ಕೋಷ್ಟಕ ೨೧.೩ ರಲ್ಲಿ ಇದರ ಫಲಿತವನ್ನು ನೋಡಲು ಪ್ರಯತ್ನಿಸಲಾಗಿದೆ.

ಕೋಷ್ಟಕ ೨೧.೩

ಪ್ರಚಾರದಲ್ಲಿದ್ದಾಗಿನ ಮನಸ್ಥಿತಿ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ		ಸಂಡೂರು ತಾಲೂಕು ಗ್ರಾಮಪಂಚಾಯ್ತಿ	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಧೈರ್ಯವಾಗಿದ್ದರು	೩೩	೨೩.೯೧	೪೩	೨೮.೪೭
೨.	ನಾಚಿಕೆ, ಮುಜುಗರ	೭೧	೫೧.೪೪	೭೬	೫೦.೩೩
೩.	ಅವಿರೋಧವಾಗಿ ಆಯ್ಕೆ	೩೪	೨೪.೬೩	೩೨	೨೧.೧೯
ಒಟ್ಟು		೧೩೮	೧೦೦	೧೫೧	೧೦೦

ದೊರೆತ ಅಂಕಿ ಅಂಶಗಳ ಪ್ರಕಾರ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಚುನಾವಣೆಯಲ್ಲಿ ಮನೋಧೈರ್ಯದಿಂದ ಪಾಲ್ಗೊಂಡ ಚುನಾಯಿತ ಮಹಿಳೆಯರ ಸಂಖ್ಯೆ ೩೩ ಇದ್ದು, ಶೇ.೨೩.೯೧ ರಷ್ಟಿದೆ. ಜಾತಿಯ ಕೀಳರಿಮೆ, ನಾಚಿಕೆ, ಮುಜುಗರದ ಮಾನಸಿಕ ಸ್ಥಿತಿಯಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿರುವ ಚುನಾಯಿತ ಮಹಿಳೆಯರ ಸಂಖ್ಯೆ ೭೧ ಆಗಿದ್ದು, ಶೇ.೫೧.೪೪ ಆಗಿದೆ.

ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಧೈರ್ಯವಾಗಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡ ಮಹಿಳೆಯರ ಸಂಖ್ಯೆ ೪೩ ಆಗಿದ್ದು, ಶೇ.೨೮.೪೭ ರಷ್ಟಿದೆ. ಪ್ರಚಾರದಲ್ಲಿ ಜಾತಿಯ ಕೀಳರಿಮೆ, ನಾಚಿಕೆ ಮತ್ತು ಮುಜುಗರದ ಮಾನಸಿಕ ಸ್ಥಿತಿಯಲ್ಲಿ ಭಾಗವಹಿಸಿದ ಚುನಾಯಿತ ಮಹಿಳೆಯರ ಸಂಖ್ಯೆ ೭೬ ಇದ್ದು, ಶೇ.೫೦.೩೩ ಆಗಿದೆ. ಅಂಕಿ ಸಂಖ್ಯಾಗಳ ಪ್ರಕಾರ ಧೈರ್ಯವಾಗಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿರುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ಶೇ.೪.೫೬ ರಷ್ಟು ಹೆಚ್ಚಾಗಿದ್ದು, ನಾಚಿಕೆ, ಮುಜುಗರದಿಂದ ಪ್ರಚಾರದಲ್ಲಿ ಭಾಗವಹಿಸಿದವರು ಹೊಸಪೇಟೆಯಲ್ಲಿ ಶೇ.೧.೧೧ ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಜಾತಿಯ ಕೀಳರಿಮೆ, ನಾಚಿಕೆ, ಮುಜುಗರ, ಒತ್ತಾಯದಂತಹ ಯಾವ ಭಾವನೆಯಿದ್ದರೂ, ಸ್ವ ಇಚ್ಛಾ ಶಕ್ತಿಯ ಕೊರತೆಯಿದ್ದರೂ ರಾಜಕೀಯದಲ್ಲಿ ಪಾಲ್ಗೊಂಡಿರುವುದು ಗಮನಾರ್ಹವಾಗಿದೆ.

ಕೋಷ್ಟಕ ೨೧.೪

ಚುನಾಯಿತ ಮಹಿಳೆ ಮತ್ತು ಗೆಲುವಿನ ಕುರಿತ ಆಸಕ್ತಿ

ಕ್ರ.ಸಂ	ಪಡೆದ ಮತಗಳ ಅರಿವು	ಹೊಸಪೇಟೆ ತಾಲೂಕ ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಸದಸ್ಯೆಗಿರುವ ಅರಿವು	೨೯	೨೧	೪೦	೨೬.೪೯
೨.	ಪತಿಗೆ ಗೊತ್ತು	೮೦	೫೭.೯೭	೮೦	೫೨.೯೮
೩.	ಅವಿರೋಧ ಆಯ್ಕೆ	೨೯	೨೧	೩೧	೨೦.೫೨
	ಒಟ್ಟು	೧೩೮	೧೦೦	೧೫೧	೧೦೦

ಮೇಲಿನ ಕೋಷ್ಟಕವು ಚುನಾಯಿತ ಮಹಿಳೆಯು ತನಗೆ ದೊರೆತಿರುವ ಗೆಲುವಿನ ಮತಗಳ ಕುರಿತು ಸದಸ್ಯೆಯ ತಿಳುವಳಿಕೆಯನ್ನು ತಿಳಿಸುತ್ತದೆ. ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಚುನಾಯಿತ ಮಹಿಳೆಯರು ತಮ್ಮ ಗೆಲುವಿಗೆ ಕಾರಣವಾದ ಮತಗಳ ಅಂತರದ ಬಗ್ಗೆ ಅರಿವು ಹೊಂದಿರುವ ಸಂಖ್ಯೆ ಹೊಸಪೇಟೆ ತಾಲೂಕಿನಲ್ಲಿ ೨೯ ಇದ್ದು, ಶೇ ೨೧ ರಷ್ಟಿದ್ದರೆ ತಮ್ಮ ಗೆಲುವಿನ ಮತಗಳ ಅರಿವಿರದ ಚುನಾಯಿತ ಮಹಿಳೆಯರ ಸಂಖ್ಯೆ ೮೦ ಇದ್ದು ಶೇ.೫೭.೯೭ ರಷ್ಟಿರುವುದು ಕಂಡುಬರುತ್ತದೆ. ಸಂಡೂರು ತಾಲೂಕಿನಲ್ಲಿ ತಮ್ಮ ಗೆಲುವಿಗೆ ಕಾರಣವಾದ ಮತಗಳ ಅಂತರದ ಬಗ್ಗೆ ಅರಿವು ಹೊಂದಿದ ಚುನಾಯತ ಮಹಿಳೆಯರ ಸಂಖ್ಯೆ ೪೦ ಇದ್ದು, ಶೇ.೨೬.೪೯ ರಷ್ಟಿದ್ದರೆ, ತಮ್ಮ ಗೆಲುವಿನ ಮತಗಳ ಅರಿವಿರದ ಚುನಾಯಿತ ಮಹಿಳೆಯರ ಸಂಖ್ಯೆ ೮೦ ಇದ್ದು ಶೇ. ೫೨.೯೮ರಷ್ಟಿರುವುದು ತಿಳಿದುಬರುತ್ತದೆ. ನಾವು ಮಹಿಳಾ ಭಾಗವಹಿಸುವಿಕೆಯ ಬಗ್ಗೆ ಹಿಂದಿನ ಕೋಷ್ಟಕಗಳಲ್ಲಿ ನಿರಾಶಾದಾಯಕ ಪ್ರತಿಕ್ರಿಯೆಗಳನ್ನು ಕಂಡರೆ, ಗೆಲುವಿನ ಮತಗಳ ಅಂತರದಲ್ಲಿ ಸದಸ್ಯೆಯ ಆಸಕ್ತಿ ಬದಲಾಗಿರುವುದನ್ನು ಕಾಣುತ್ತೇವೆ. ಕಂಡರೆ ಗೆಲುವಿನ ಮತಗಳ ಅಂತರದಲ್ಲಿ ಸದಸ್ಯೆಯ ಆಸಕ್ತಿ ಬದಲಾಗಿರುವುದನ್ನು ಕಾಣುತ್ತೇವೆ. ಗೆಲುವಿನ ಬಗ್ಗೆ ಸದಸ್ಯೆಗಿರುವ ಆಸಕ್ತಿ ಗಮನಾರ್ಹವಾದದ್ದು. ತನಗೆ ದೊರೆತಿರುವ ಗೆಲುವಿನ ಮತಗಳ ಬಗ್ಗೆ ಅರಿವಿರುವ ಚುನಾಯಿತ ಸದಸ್ಯೆಯರು ಹೊಸಪೇಟೆಗಿಂತ ಸಂಡೂರು ತಾಲೂಕಿನಲ್ಲಿ ಶೇ.೫.೪೯ ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಅರಿವಿರದವರು ಸಂಡೂರು ತಾಲೂಕಿಗಿಂತ ಹೊಸಪೇಟೆ ತಾಲೂಕಿನಲ್ಲಿ ಶೇ.೪.೯೯ರಷ್ಟು ಹೆಚ್ಚಿದ್ದಾರೆ.

ಚುನಾವಣಾ ಪ್ರಕ್ರಿಯೆಯ ಈ ಒಟ್ಟು ಸಂಗತಿಗಳನ್ನು ಗಮನಿಸಿದಾಗ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ರಾಜಕೀಯ ಸಾಮಾಜೀಕರಣ ಪ್ರಕ್ರಿಯೆಯು ಗುಣಾತ್ಮಕವಾಗಿರುವುದರಿಂದ ರಾಜಕೀಯ ಭಾಗವಹಿಸುವಿಕೆಯೂ ಉತ್ತಮ ಮಟ್ಟದಲ್ಲಿರುವುದು ಕಂಡುಬರುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ವಯಂ ಪ್ರೇರಣೆಯಿಂದ ಸ್ಪರ್ಧಿಸಿದ ಸ್ಪರ್ಧಿಗಳು ಹೆಚ್ಚಿನ

ಪ್ರಮಾಣದಲ್ಲಿ ಇದ್ದರೂ, ರಾಜಕೀಯ ಸಾಮಾಜೀಕರಣದ ಪ್ರಭಾವ ಅವರಲ್ಲಿ ಕಡಿಮೆ ಮಟ್ಟದ್ದಾಗಿದೆ. ಇನ್ನುಳಿದಂತೆ ಚುನಾವಣೆಯ ಪ್ರಕ್ರಿಯೆಯಲ್ಲಿ ಅವರ ಕಡಿಮೆ ಭಾಗವಹಿಸುವಿಕೆ ಪ್ರಮಾಣವು ರಾಜಕೀಯ ಸಾಮಾಜೀಕರಣದ ಕೊರತೆಯನ್ನು ಎತ್ತಿ ತೋರಿಸುತ್ತದೆ.

ಕೋಷ್ಟಕ ೨೧.೫

ಚುನಾಯಿತ ಮಹಿಳೆಯು ಸ್ಪರ್ಧೆಯಲ್ಲಿ ಭಾಗವಹಿಸಿದ್ದು

ಕ್ರ.ಸಂ	ಸ್ಪರ್ಧಿಸಿದ್ದರ ವಿವರ		ಸಂಖ್ಯೆ	ಶೇಕಡ
೧.	ಹೊಸಪೇಟೆ	ಸ್ವಯಂ ಪ್ರೇರಣೆಯಿಂದ	೧೬	೧೧.೫೯
		ಪರಪ್ರೇರಣೆಯಿಂದ	೧೨೨	೮೮.೪೦
೨.	ಸಂಡೂರು	ಸ್ವಯಂ ಪ್ರೇರಣೆಯಿಂದ	೧೦	೬.೬೨
		ಪರ ಪ್ರೇರಣೆಯಿಂದ	೧೪೧	೯೩.೩೭

ಕ್ಷೇತ್ರಕಾರ್ಯದಿಂದ ದೊರೆತ ಮಾಹಿತಿಗಳನ್ನು ಕ್ರೋಡೀಕರಿಸಿದಾಗ ಹೊಸಪೇಟೆ ತಾಲ್ಲೂಕಿನ ೨೩ ಗ್ರಾಮಪಂಚಾಯಿತಿಗಳ ೧೩೮ ಮಹಿಳಾ ಸದಸ್ಯರಲ್ಲಿ ಸ್ವಪ್ರೇರಣೆಯಿಂದ ಸ್ಪರ್ಧಿಸಿದವರ ಸಂಖ್ಯೆ ೧೬ ಆಗಿದ್ದು, ಶೇ.೧೧.೫೯ರಷ್ಟಿದೆ. ಪರಪ್ರೇರಣೆಯಿಂದ ಸ್ಪರ್ಧಿಸಿದ್ದವರ ಸಂಖ್ಯೆ ೧೨೨ ಆಗಿದ್ದು, ಶೇ.೮೮.೪೦ರಷ್ಟಿದೆ. ಹಾಗೆ ಸಂಡೂರು ತಾಲೂಕಿನ ೨೧ ಗ್ರಾಮಪಂಚಾಯಿತಿಗಳ ೧೫೧ ಚುನಾಯಿತ ಮಹಿಳಾ ಸದಸ್ಯರಲ್ಲಿ ಸ್ವಯಂ ಪ್ರೇರಣೆಯಿಂದ ೧೦ ಮಹಿಳೆಯರು ಸ್ಪರ್ಧಿಸಿದ್ದು, ಅವರು ಶೇ.೬.೬೨ ರಷ್ಟಿದ್ದಾರೆ. ಪರಪ್ರೇರಣೆಯಿಂದ ೧೪೧ ಮಹಿಳೆಯರು ಸ್ಪರ್ಧಿಸಿದ್ದು, ಅವರ ಪ್ರಮಾಣ ಶೇ.೯೩.೩೭ ರಷ್ಟಿದೆ. ಮಹಿಳೆಯ ಭಾಗವಹಿಸುವಿಕೆಯ ಮತ್ತಷ್ಟು ಸೂಕ್ಷ್ಮ ಸಂಗತಿಗಳನ್ನು ನಾವು ಕಂಡುಕೊಳ್ಳಲು ಕೆಳಗಿನ ಕೋಷ್ಟಕವನ್ನು ಗಮನಿಸಬಹುದು.

ಕೋಷ್ಟಕ ೨೧.೫.೧

ಕ್ರ.ಸಂ	ವಿವರ	ಹೊಸಪೇಟೆ ತಾಲೂಕ ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಗಂಡನ ಇಚ್ಛೆ	೨೩	೧೬.೬೬	೭೬	೫೦.೩೩
೨.	ಜಾತಿ ಮತ್ತು ಜನರ ಒತ್ತಾಯ	೧೯	೧೩.೭೬	೨೪	೧೫.೮೯
೩.	ಮಹಿಳೆ ಮತ್ತು ಮೀಸಲಾತಿ	೫೨	೩೭.೬೮	೨೧	೧೩.೯೦
೪.	ಮೇಲಿನ ಎಲ್ಲ ಕಾರಣಗಳಿಂದ	೨೮	೨೦.೨೮	೨೦	೧೩.೨೪
೫	ಸ್ವಇಚ್ಛೆಯಿಂದ	೧೬	೧೧.೫೯	೧೦	೦೬.೬೨
	ಒಟ್ಟು	೧೩೮	೧೦೦	೧೫೧	೧೦೦

ಈ ರೀತಿಯಾಗಿ ವಿವಿಧ ರೀತಿಯ ಒತ್ತಾಯಗಳಿಗೆ ಮಣಿದು ಮಹಿಳೆಯರು ಚುನಾವಣೆಯಲ್ಲಿ ಭಾಗವಹಿಸಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಹೊಸಪೇಟೆ ತಾಲ್ಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಗಂಡನ ಇಚ್ಛೆಯಿಂದ ಸ್ಪರ್ಧಿಸಿ ಮಹಿಳೆಯರ ಸಂಖ್ಯೆ ೨೩ ಆಗಿದ್ದು, ಶೇ.೧೬.೬೬ ರಷ್ಟಿದ್ದಾರೆ. ಜಾತಿ ಜನರ ಒತ್ತಾಯಕ್ಕೆ ಮಣಿದು ಸ್ಪರ್ಧಿಸಿದ ಮಹಿಳೆಯರ ಸಂಖ್ಯೆ ೧೯ ಆಗಿದ್ದು, ಶೇ.೧೩.೭೬ ರಷ್ಟಿದೆ. ಮಹಿಳಾ ಮೀಸಲಾತಿ ಕಾರಣದಿಂದ ಸ್ಪರ್ಧಿಸಿದವರ ಸಂಖ್ಯೆ ೫೨ ಆಗಿದ್ದು, ಶೇ.೩೭.೬೮ ರಷ್ಟಿದೆ. ಈ ಎಲ್ಲ ಕಾರಣಗಳನ್ನು ಒಳಗೊಂಡಂತೆ ೨೮ ಚುನಾಯಿತ ಮಹಿಳೆಯರು ಸ್ಪರ್ಧಿಸಿದ್ದು, ಅವರು ಶೇ.೨೦.೨೮ರಷ್ಟಿರುವರು. ಸ್ವಇಚ್ಛೆಯಿಂದ ೧೬ ಚುನಾಯಿತ ಮಹಿಳೆಯರು ಸ್ಪರ್ಧಿಸಿದ್ದು ಅಂತಹ ಮಹಿಳೆಯರು ಶೇ.೧೧.೫೯ ರಷ್ಟಿದ್ದಾರೆ.

ಅದೇ ರೀತಿ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಯ ಅಂಕಿ ಅಂಶಗಳನ್ನು ಗಮನಿಸಿದಾಗ ಗಂಡನ ಇಚ್ಛೆಯಿಂದ ಸ್ಪರ್ಧಿಸಿ ಗೆದ್ದ ಚುನಾಯಿತ ಮಹಿಳೆಯರ ಸಂಖ್ಯೆ ೭೬ ಆಗಿದ್ದು, ಶೇ.೫೦.೩೩ ರಷ್ಟಿದೆ. ಜಾತಿ ಜನರ ಒತ್ತಾಯಕ್ಕೆ ಮಣಿದು ಸ್ಪರ್ಧಿಸಿ ಗೆದ್ದ ಚುನಾಯಿತ ಮಹಿಳೆಯರ ಸಂಖ್ಯೆ ೨೪ ಆಗಿದ್ದು, ಶೇ.೧೫.೮೯ ರಷ್ಟಿದ್ದರೆ, ಮಹಿಳಾ ಮೀಸಲಾತಿ ಕಾರಣದಿಂದ ಸ್ಪರ್ಧಿಸಿದವರ ಸಂಖ್ಯೆ ೨೧ ಆಗಿದ್ದು, ಶೇ.೧೩.೯೦ ರಷ್ಟಿದೆ. ಈ ಎಲ್ಲ ಕಾರಣಗಳನ್ನು ಒಳಗೊಂಡಂತೆ ಸ್ಪರ್ಧಿಸಿ ಗೆದ್ದ ಚುನಾಯಿತ ಮಹಿಳೆಯರ ಸಂಖ್ಯೆ ೨೦ ಆಗಿದ್ದು, ಶೇ.೧೩.೨೪ ರಷ್ಟಿದೆ. ಸ್ವಇಚ್ಛೆಯಿಂದ ಸ್ಪರ್ಧಿಸಿರುವ ಮಹಿಳೆಯರ ಸಂಖ್ಯೆ ೧೦ ಇದ್ದು, ಅವರು ಶೇ.೬.೬೨ ರಷ್ಟಿರುವುದು ಗೋಚರವಾಗುತ್ತದೆ.

ಈ ಮೇಲಿನ ಅಂಕಿ ಅಂಶಗಳನ್ನು ಪರಿಭಾವಿಸಿದಾಗ ಗ್ರಹಿತವಾಗುವ ಸಂಗತಿಯೆಂದರೆ ಮಹಿಳೆಯರ ಸ್ವಯಂಪ್ರೇರಿತವಾದ ಭಾಗವಹಿಸುವಿಕೆ ಅತ್ಯಂತ ಕ್ಷೀಣ ಸ್ಥಿತಿಯಲ್ಲಿರುವುದು. ಹೀಗೆ ಆಯ್ಕೆಗೊಂಡ ಸದಸ್ಯೆಯರು ತಳಮಟ್ಟದ ವಿವಿಧ ವರ್ಗಗಳಿಂದ ಬಂದವರಾಗಿರುತ್ತಾರೆ. ಇಂತಹವರಲ್ಲಿ ಇಚ್ಛಾ ಶಕ್ತಿಯ ಕೊರತೆ ಸಹಜವಾಗಿ ಕಂಡುಬರುವಂಥದ್ದಾಗಿದೆ.

ಚುನಾಯಿತ ಮಹಿಳೆಯರು ಗ್ರಾಮಪಂಚಾಯಿತಿಯ ಚುನಾವಣೆಗೆ ಇದೇ ಮೊದಲು ಸ್ಪರ್ಧಿಸಿರುವರೇ ಅಥವಾ ಹಿಂದೆಯೂ ಸ್ಪರ್ಧಿಸಿ ಅನುಭವ ಇದ್ದವರೇ ಎಂದು ತಿಳಿಯಲು ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಅಂಕಿ-ಅಂಶಗಳನ್ನು ಈ ಕೆಳಗಿನ ಕೋಷ್ಟಕವು ತಿಳಿಸುತ್ತದೆ.

ಕೋಷ್ಟಕ ೨೧.೬

ಸ್ಪರ್ಧೆ ಮೊದಲ ಬಾರಿಯೊ ಅಥವಾ ಎರಡನೆ ಬಾರಿಯೊ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕ ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಮೊದಲ ಬಾರಿ ಸ್ಪರ್ಧಿಸಿದ ಸದಸ್ಯೆಯರು	೧೩೪	೯೭.೧೦	೧೪೪	೯೯.೩೬
೨.	ಹೆಚ್ಚುಸಲ ಸ್ಪರ್ಧಿಸಿದ ಸದಸ್ಯೆಯರು	೪	೨.೮೯	೭	೪.೬೩
ಒಟ್ಟು		೧೩೮	೧೦೦	೧೫೧	೧೦೦

ಮೇಲಿನ ಕೋಷ್ಟಕದಿಂದ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿಯಲ್ಲಿ ಮೊದಲ ಬಾರಿ ಸ್ಪರ್ಧಿಸಿದ ಚುನಾಯಿತ ಮಹಿಳೆಯರ ಸಂಖ್ಯೆ ೧೩೪ ಇದ್ದು, ಶೇ.೯೭.೧೦ ರಷ್ಟಿದೆ. ಹೆಚ್ಚು ಸಲ ಸ್ಪರ್ಧಿಸಿ ಅನುಭವ ಹೊಂದಿರುವ ಚುನಾಯಿತ ಮಹಿಳೆಯರ ಸಂಖ್ಯೆ ೪ ಇದ್ದು, ಶೇ.೨.೮೯ ರಷ್ಟಿದೆ. ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಯಲ್ಲಿ ಮೊದಲ ಬಾರಿ ಸ್ಪರ್ಧಿಸಿದ ಚುನಾಯಿತ ಮಹಿಳೆಯರ ಸಂಖ್ಯೆ ೧೪೪ ಇದ್ದು, ಶೇ.೯೯.೩೬ ರಷ್ಟಿದೆ. ಹೆಚ್ಚು ಸಲ ಸ್ಪರ್ಧಿಸಿದ ಚುನಾಯಿತ ಮಹಿಳೆಯರ ಸಂಖ್ಯೆ ೭ ಇದ್ದು, ಶೇ.೪.೬೩ ಆಗಿದೆ. ಮೊದಲ ಬಾರಿ ಸ್ಪರ್ಧಿಸಿದ ಚುನಾಯಿತ ಮಹಿಳೆಯರು ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯಿತಿ ಶೇ.೭.೨೬ರಷ್ಟು ಹೆಚ್ಚಾಗಿದ್ದರೆ, ಹೆಚ್ಚು ಸಲ ಸ್ಪರ್ಧಿಸಿದ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಯಲ್ಲಿ ಶೇ.೧.೭೪ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ.

ಈ ಸದಸ್ಯೆಯರ ರಾಜಕೀಯ ಭಾಗವಹಿಸುವಿಕೆಯ ಮಟ್ಟವು ಕ್ರಿಯಾಶೀಲಮಟ್ಟ(Very active level)ದಲ್ಲಿರುವುದು ವ್ಯಕ್ತವಾಗುತ್ತದೆ. ಏಕೆಂದರೆ ಚುನಾವಣೆಗೆ ಸ್ಪರ್ಧಿಸುವುದೂ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯ ಒಂದು ಅಂಶವಾಗಿದೆ. ಪಾಲ್ಗೊಳ್ಳುವಿಕೆಯ ಹಿಂದೆ ಸಾಮಾಜಿಕ ಪರಿಸರ, ಮಾನಸಿಕ ಪರಿಸರ, ರಾಜಕೀಯ ಪರಿಸರಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾದ ಪಾತ್ರವಹಿಸಿರುತ್ತವೆ. ಅತ್ಯಂತ ಕ್ರಿಯಾಶೀಲವಾಗಿ ರಾಜಕೀಯದಲ್ಲಿ ಪಾಲ್ಗೊಂಡಿರುವ ಸದಸ್ಯೆಯರ ಮೇಲೆ ರಾಜಕೀಯ ಸಾಮಾಜೀಕರಣದ ನಿಯೋಗಗಳಲ್ಲಿ ಒಂದಾದ ಕುಟುಂಬವು ಹೆಚ್ಚಿನ ಪ್ರಭಾವ ಬೀರಿರುವುದನ್ನು ಕಾಣಬಹುದು.

ಇದರೊಂದಿಗೆ ರಾಜಕೀಯ ಪಕ್ಷಗಳು, ಧಾರ್ಮಿಕ ಸಂಸ್ಥೆಗಳು, ಜಾತಿಯಂತಹ ಅಂಶಗಳೂ ಪ್ರಭಾವ ಬೀರಿವೆ. ಗಂಡನ ಇಚ್ಛೆಯಂತೆ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿಯಲ್ಲಿ ಶೇ.೧೬.೬೬ರಷ್ಟು ಮಹಿಳೆಯರು, ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಯಲ್ಲಿ ಶೇ ೫೦.೩೩ರಷ್ಟು ಮಹಿಳೆಯರು ಸ್ಪರ್ಧಿಸಿ ಗೆದ್ದಿದ್ದಾರೆ. ಜಾತಿ ವರ್ಗದ ಹಿನ್ನೆಲೆಯಲ್ಲಿ, ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಿಂದ ಶೇ.೧೩.೭೬. ಮಹಿಳೆಯರು ಸ್ಪರ್ಧಿಸಿದ್ದಾರೆ. ಮತ್ತು ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಿಂದ ಶೇ ೧೫.೮೯ ಮಹಿಳೆಯರು ಸ್ಪರ್ಧಿಸಿದ್ದಾರೆ. ರಾಜಕೀಯ ಸಾಮಾಜೀಕರಣದ ನಿಯೋಗಗಳಲ್ಲಿ ಒಂದಾದ 'ಸರ್ಕಾರ' ನೀಡಿರುವ ಮೀಸಲಾತಿಯ ಕಾರಣದಿಂದ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಶೇ.೩೭.೬೮ ಮಹಿಳೆಯರು ಹಾಗೂ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಶೇ. ೧೩.೯೦ ರಷ್ಟು ಮಹಿಳೆಯರು ಸ್ಪರ್ಧಿಸಿರುವುದು ಕಂಡುಬರುತ್ತದೆ. ಕುಟುಂಬ, ಗಂಡನ ಇಚ್ಛೆ, ಜಾತಿ, ಧಾರ್ಮಿಕ ಹಿನ್ನೆಲೆ, ಮೀಸಲಾತಿ ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕು ಗ್ರಾಮ ಪಂಚಾಯ್ತಿಯಲ್ಲಿ ಸ್ಪರ್ಧಿಸಿದ ಮಹಿಳೆಯರ ಸಂಖ್ಯೆ ಶೇ ೨೦.೨೮ ಹಾಗೂ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಶೇ.೧೩.೨೪ ರಷ್ಟು. ಮಹಿಳೆಯರು ಸ್ಪರ್ಧಿಸುವ ಮೂಲಕ ರಾಜಕೀಯದಲ್ಲಿ ಪಾಲ್ಗೊಂಡಿದ್ದಾರೆ. ಇದರಿಂದ ಎರಡು ತಾಲೂಕುಗಳ ಚುನಾಯಿತ ಮಹಿಳೆಯರ ರಾಜಕೀಯ ಸಾಮಾಜೀಕರಣದ ಪ್ರಭಾವದ ಇತಿಮತಿಗಳು ಅರಿವಿಗೆ ಬರುತ್ತವೆ.

ಅವಿರೋಧ ಆಯ್ಕೆಯ ಹಿಂದಿನ ಸೂಕ್ಷ್ಮ ರಾಜಕೀಯ

ಅವಿರೋಧ ಆಯ್ಕೆಯಲ್ಲಿ ಇಂದು ಜಾತಿಪಂಚಾಯತಿ, ಊಳಿಗಮಾನ್ಯ ಪದ್ಧತಿ ಮತ್ತು ಮಹಿಳಾ ಮೀಸಲಾತಿ ಎನ್ನುವುದು ಪರಿಣಾಮಕಾರಿ ಅಸ್ತ್ರಗಳಾಗಿವೆ. ಗ್ರಾಮಪಂಚಾಯ್ತಿ ಚುನಾವಣೆಯಲ್ಲಿ ಸ್ಪರ್ಧಿಸಬೇಕಾದ ವ್ಯಕ್ತಿಯನ್ನು ಈ ಘಟಕಗಳು ನಿರ್ಧರಿಸುತ್ತವೆ. ಸರ್ವಾನುಮತದಿಂದ ಅವಿರೋಧ ಆಯ್ಕೆಯಾಗುವ ಸದಸ್ಯೆ ಜಾತಿಬಲದಿಂದಲೇ ಆಯ್ಕೆಯಾಗಿದ್ದು ಎಂದು ಹೇಳಬಹುದು. ಹೀಗೆ ಹೇಳಿದಾಗ ಜಾತಿ ಪ್ರಮುಖರು ಮತ್ತು ಅವರ ಮಾಡುವ ಆಯ್ಕೆಯನ್ನು ಇಡೀ ಜಾತಿಗುಂಪು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತದೆಂದು ಹೇಳಲು ಬರುವುದಿಲ್ಲ. ಸಾಂಪ್ರದಾಯಿಕ ಜಾತಿ ನಾಯಕತ್ವವನ್ನು ಪ್ರಶ್ನಿಸುತ್ತಾ ತಮ್ಮ ಅಸ್ತಿತ್ವವನ್ನು ಸ್ಥಾಪಿಸುವ ಕೆಲಸ ಇಂಥ ಪ್ರಕ್ರಿಯೆಯಲ್ಲಿ ನಡೆಯುತ್ತಲೇ ಇರುತ್ತದೆ. ಅವಿರೋಧ ಆಯ್ಕೆಯ ಹಿಂದೆ ಎಲ್ಲವೂ ಸುಗಮವಾಗಿರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುವುದಿಲ್ಲ. ಗ್ರಾಮಪಂಚಾಯ್ತಿಗಳಲ್ಲಿ ಪ್ರಬಲ ಜಾತಿಗಳ ಶಕ್ತಿ ಎಷ್ಟು ಪ್ರಖರವಾಗಿದೆ ಎಂದರೆ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಸ್ಥಾನಕ್ಕೆ ಈ ಪ್ರಬಲ ಜಾತಿಗಳ ನಾಯಕರು ಆರಿಸಿದ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿ

ಮಾತ್ರ ಗ್ರಾಮ ಪಂಚಾಯ್ತಿ ಸದಸ್ಯನಾಗಬಹುದು. ತಮ್ಮ ಹಿತಾಸಕ್ತಿಗಳಿಗೆ ತೊಂದರೆ ತಾರದ ನಿರುಪದ್ರವಿ ರಬ್ಬರ್ ಸ್ಟ್ಯಾಂಪ್ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಆರ್ಥಿಕ ಮತ್ತು ಸಾಮಾಜಿಕವಾದ ಯಜಮಾನಿಕೆಯಿಂದಾಗಿ ಕೆಳವರ್ಗದ ರಾಜಕೀಯ ಪ್ರವೇಶವು ಒಂದು ರೀತಿ ಹರಕೆ ಕುರಿಯಂತಾಗುತ್ತಿರುವುದು ಕಂಡುಬರುತ್ತಿದೆ.

ಸಾಮಾನ್ಯವಾಗಿ ಅವಿರೋಧ ಆಯ್ಕೆಗೆ ಕೊಡುವ ಕಾರಣಗಳು ಹಲವಾರು. ಮೀಸಲಾತಿಯ ಅನಿವಾರ್ಯತೆ, ಜಗಳ ದುಂದುವೆಚ್ಚದ ತಗ್ಗುವಿಕೆ, ರಾಜಕೀಯವಾಗಿ ಹಳ್ಳಿ ಹೋಳಾಗಬಾರದು ಎನ್ನುವ ಹಿನ್ನೆಲೆಗಳು ಒಂದು ರೀತಿಯವಾದರೆ, ಪ್ರಬಲ ವರ್ಗಗಳ ಸ್ವಹಿತಾಸಕ್ತಿ ಮತ್ತು ಪ್ರತಿಷ್ಠೆ ಮತ್ತೊಂದು ರೀತಿಯವು. ಮೊದಲ ರೀತಿಯ ಆಯ್ಕೆಯ ಪ್ರಕ್ರಿಯೆಯನ್ನು ಬೆಂಬಲಿಸುವವರು ಪ್ರಮುಖರು. ಇದರಲ್ಲಿ ಹೆಚ್ಚಿನವರು ಮೇಲುವರ್ಗದವರಾಗಿರುತ್ತಾರೆ. ತಮ್ಮ ನೇತೃತ್ವದಲ್ಲಿ ಪಂಚಾಯ್ತಿ ಸದಸ್ಯ, ಅಧ್ಯಕ್ಷರ ಅವಿರೋಧ ಆಯ್ಕೆ ಮಾಡುವ ಮೂಲಕ ಇಡೀ ಪಂಚಾಯತ್ ವ್ಯವಸ್ಥೆಯನ್ನು ತಮ್ಮ ಕೈ ಬೆರಳುಗಳ ಮೂಲಕ ಕುಣಿಸಲು ಪ್ರಯತ್ನಿಸುತ್ತಾರೆ. ಸ್ಥಳೀಯ ರಾಜಕೀಯ ಮುಖಂಡರ ಮೂಲಕ ರಾಜ್ಯ ರಾಜಕೀಯದ ಆಳುವ ಮತ್ತು ವಿಪಕ್ಷಗಳೊಂದಿಗೆ ಸಂಪರ್ಕ ಹೊಂದಿರುತ್ತಾರೆ. ಹಾಗೆ ರಾಜ್ಯಮಟ್ಟದ ರಾಜಕೀಯ ಮುಖಂಡತ್ವ ಕೂಡ ಇವರಿಗೆ ಬೆಂಬಲವಾಗಿ ನಿಂತು ತನ್ನ ಪಕ್ಷದ ಪ್ರಣಾಳಿಕೆಗಳನ್ನು ತಳಮಟ್ಟದಲ್ಲಿ ಹರಿಯಬಿಟ್ಟು ತನ್ನ ಓಟ್‌ಬ್ಯಾಂಕನ್ನು ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಇಂಥವರು ನೇರವಾಗಿ ಸ್ಪರ್ಧಿಸದೆ ತನ್ನ ಬಣದ ಒಬ್ಬರನ್ನು ಅವಿರೋಧವಾಗಿ ಆರಿಸುತ್ತಾರೆ. ಆಯ್ಕೆ ಪ್ರಕ್ರಿಯೆಯಲ್ಲಿ ಬಲಕ್ಕಿಂತ ತಂತ್ರಗಾರಿಕೆಯನ್ನು ಈ ಕಿಂಗ್ ಮೇಕರ್‌ಗಳು ಅನುಸರಿಸುತ್ತಾರೆ.

ಇಂಥ ಅವಿರೋಧ ಆಯ್ಕೆಗಳು ಎಷ್ಟೋ ಸಲ ಜಾತಿಗೆ ಮೀಸಲಿಟ್ಟ ಸ್ಥಾನಗಳಿಗಾಗಿಯೇ ನಡೆಯುತ್ತವೆ. ಅಧಿಕಾರವನ್ನು ತಮ್ಮಲ್ಲೇ ಇಟ್ಟುಕೊಳ್ಳಬೇಕೆನ್ನುವವರು, ಅಧಿಕಾರದ ಪಾರಂಪರಿಕತೆ ಬದಲಾಗಿ ಹೊಸತನ ಬರಬೇಕೆನ್ನುವವರು ಈ ಅವಿರೋಧ ಆಯ್ಕೆಯ ಮಹತ್ವಾಕಾಂಕ್ಷಿಗಳಾಗಿರುತ್ತಾರೆ. ಇದರಿಂದ ಆದ ಗುಣಾತ್ಮಕ ಬೆಳವಣಿಗೆ ಎಂದರೆ ದಲಿತನಾಯಕತ್ವ ಮತ್ತು ಮಹಿಳಾ ನಾಯಕತ್ವಗಳ ಬೆಳವಣಿಗೆ. ಈ ಬೆಳವಣಿಗೆಗಳು ಸಾಂಪ್ರದಾಯಿಕ ಸಮಾಜದ ಶ್ರೇಣೀಕರಣನ್ನು ಸಂಪೂರ್ಣವಾಗಿ ಸ್ಥಿತ್ಯಂತರಗೊಳಿಸದಿದ್ದರೂ ಮಹತ್ವದ ಪರಿಣಾಮಗಳನ್ನಂತು ಉಂಟು ಮಾಡಿದವು. ವ್ಯವಸ್ಥೆಯೊಳಗಿದ್ದ ಯಜಮಾನಿಕೆ ತನ್ನ ಪ್ರಖರತೆಯನ್ನು ಸಾರ್ವಜನಿಕವಾದ ತನ್ನ ಪ್ರಭಾವ ಪ್ರೇರಣೆಗಳ ತೀಕ್ಷ್ಣತೆಯನ್ನು ಕಳೆದುಕೊಂಡಿತು.

ಶ್ರೀಮತಿ ಕವಿತ ಯು.(ತಾರಾನಗರ), ಶ್ರೀಮತಿ ದುರ್ಗಾರಾಣಿ(ವಡ್ಡು), ಶ್ರೀಮತಿ ಬಸಮ್ಮ (ಕಮಲಾಪುರ), ಶ್ರೀಮತಿ ಬಿ.ಈರಮ್ಮ(ಬುಕ್ಕಸಾಗರ), ಶ್ರೀಮತಿ ಕೊರವರ ಮಾರಮ್ಮ(ರಾಮಸಾಗರ)

ಮುಂತಾದ ಕೆಳವರ್ಗದ ನಾಯಕರು ಹೊಸಪೇಟೆ ಮತ್ತು ಸಂಡೂರು ತಾಲೂಕುಗಳ ಸ್ಥಳೀಯ ಮಟ್ಟದ ರಾಜಕಾರಣದಲ್ಲಿ ಅಷ್ಟಿಷ್ಟು ತಮ್ಮ ಅಸ್ತಿತ್ವಗಳನ್ನು ಉಳಿಸಿಕೊಂಡು ಬೆಳೆದವರಾಗಿದ್ದಾರೆ. ನಿರ್ಣಯ ಮತ್ತು ಅದರ ಆಚರಣಾತ್ಮಕ ನೆಲೆಗಳಲ್ಲಿ ಸಕ್ರಿಯವಾಗಿ ಭಾಗಹಿಸುವುದನ್ನು ಇವರ ಬದುಕಿನಲ್ಲಿ ಕಾಣುತ್ತೇವೆ.

ಅವಿರೋಧ ಆಯ್ಕೆ ಎನ್ನುವುದು ಸಮುದಾಯ ತತ್ವವನ್ನು ದೇಸೀಯವಾದ ಆಡಳಿತಾತ್ಮಕ ವಿಧಾನವನ್ನು ಎತ್ತಿ ಹಿಡಿಯುವ ಕ್ರಮವಾಗಿದೆ ಎನ್ನುವುದು ಸಮುದಾಯವಾದಿಗಳ ಅಭಿಮತವಾಗಿದೆ. ಸಾಮುದಾಯಿಕ ಬದ್ಧತೆಯನ್ನು ಜಾಗೃತಿಯನ್ನು ಅವಿರೋಧ ಆಯ್ಕೆಯಿಂದ ಬಯಸಬಹುದಾದರೂ ಇಂದಿನ ಶ್ರೇಣೀಕೃತ ಮತ್ತು ಕಲುಷಿತ ರಾಜಕೀಯ ಸಂದರ್ಭದಲ್ಲಿ ಒಪ್ಪಲು ಸಾಧ್ಯವಾಗದೆನಿಸುತ್ತದೆ. ಅನಾಯಸವಾಗಿ ಬರುವ ಇಂಥ ಲಾಭವನ್ನು ಆಯಾ ವರ್ಗಗಳಲ್ಲಿರುವ ಪ್ರಭಾವಿ ಕುಳಗಳೇ ಪಡೆಯುವ ಅಪಾಯಕಾರಿ ಸಂಗತಿಗಳೂ ಇವೆ. ಸಮಾಜದ ಮುಖಂಡರೆಂದರೆ ಆರ್ಥಿಕವಾಗಿ ಶೈಕ್ಷಣಿಕವಾಗಿ ಅನುಕೂಲ ಇದ್ದವರೇ ಆಗಿರುತ್ತಾರೆ. ಪ್ರತಿಷ್ಠೆ- ಸಂಪ್ರದಾಯಿತ ಮತ್ತು ಆಧುನಿಕ ಮಾನದಂಡಗಳು ಇಂಥ ಮುಖಂಡತ್ವಕ್ಕೆ ಅವರು ನೀಡುವ ತೀರ್ಮಾನಗಳಿಗೆ ಪ್ರೇರಕವಾಗಿರುತ್ತವೆ. ಪಕ್ಷ ರಾಜಕೀಯದ ಗದ್ದಲದಲ್ಲಿ ಮನೆ ಮನೆಯಲ್ಲೇ ಅನೇಕ ಭೇದಗಳಿರುವಾಗ ಸಮುದಾಯವನ್ನು ಒಟ್ಟಾಗಿ ಗ್ರಹಿಸುವುದು ಅಪಾಯಕಾರಿ ಯಾದದ್ದು. ಅವಿರೋಧ ಆಯ್ಕೆ ಬಗ್ಗೆ ಸಮುದಾಯವಾದಿಗಳಲ್ಲಿ ಅದು ಸಮಾಜದ ಎಲ್ಲಾ ವರ್ಗಗಳ ಆಸಕ್ತಿಯನ್ನು ಕಾಪಾಡುತ್ತದೆ.[೮] ಪ್ರತಿಯೊಂದು ಜಾತಿಯೂ ತನ್ನ ಆಸಕ್ತಿಗಳನ್ನು ಪ್ರತಿನಿಧೀಕರಿಸಲು ಅವಕಾಶ ನೀಡುತ್ತದೆ; ಎನ್ನುವ ಮೂಲಕ ನಮ್ಮ ಸಂಸ್ಕೃತಿಯ ರಾಜಕೀಯ ಪ್ರಕ್ರಿಯೆಗಳಿಗೆ ಮನ್ನಣೆ ನೀಡಬೇಕೆಂದು ಹೇಳುತ್ತಾರೆ. ಆದರೆ ನಾನು ಗ್ರಾಮಪಂಚಾಯ್ತಿಗಳನ್ನ ಅಧ್ಯಯನದ ಸಂದರ್ಭದಲ್ಲಿ ಗಮನಿಸಿದಾಗ ಅವಿರೋಧ ಆಯ್ಕೆಯಲ್ಲಿ ದುರ್ಬಲವರ್ಗದವರ ಹಿತಕ್ಕಿಂತ ಸಬಲವರ್ಗದ ಹಿತಾಸಕ್ತಿಗಳೇ ವಿಜೃಂಭಿಸುವುದು ಗೋಚರವಾಯಿತು.

ಕೋಷ್ಟಕ ೨೧.೭

ಅವಿರೋಧ ಆಯ್ಕೆ ಮತ್ತು ಚುನಾವಣೆ

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯತಿ		ಸಂಡೂರು ತಾಲೂಕು ಗ್ರಾಮಪಂಚಾಯತಿ	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಅವಿರೋಧ ಆಯ್ಕೆ ಆಗಿರುವುದು	೩೪	೨೪.೬೩	೩೨	೨೧.೧೯
೨	ಚುನಾವಣೆಯ ಮೂಲಕ ಆಯ್ಕೆ ಆಗಿರುವುದು	೧೦೪	೭೨.೩೬	೧೧೯	೭೮.೮೦
	ಒಟ್ಟು	೧೩೮	೧೦೦	೧೫೧	೧೦೦

ಮೇಲಿನ ಕೋಷ್ಠಕವನ್ನು ಗಮನಿಸಿದಾಗ ಅವಿರೋಧವಾಗಿ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಗಮನಕ್ಕೆ ಬರುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಶೇ.೩೪ರಷ್ಟು ಮಹಿಳೆಯರು ಅವಿರೋಧವಾಗಿ ಆಯ್ಕೆಯಾಗಿರುವರು. ಚುನಾವಣೆಯ ಮೂಲಕ ಆಯ್ಕೆಯಾದ ಮಹಿಳೆಯರು ಶೇ.೭೫.೩೬ರಷ್ಟಿರುವರು. ಹೆಚ್ಚು ಕಡಿಮೆ ಶೇ.೧೦೦ ರಲ್ಲಿ ೨೫ರಷ್ಟು ಮಹಿಳೆಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಡೂರು ತಾಲಾಕೂ ಗ್ರಾಮಪಂಚಾಯ್ತಿಯಲ್ಲಿ ಶೇ.೨೧.೯ರಷ್ಟು ಮಹಿಳೆಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣೆಯ ಮೂಲಕ ಆಯ್ಕೆಗೊಂಡವರು ಶೇ.೭೮.೮೦ರಷ್ಟಿರುವುದು ಗೋಚರವಾಗುತ್ತದೆ.

ಇಂದು ಬದುಕಿನ ಬದಲೀ ಅವಕಾಶಗಳು ಹೊಸ ಹೊಸ ಆವಿಷ್ಕಾರಗಳೊಂದಿಗೆ ಕೆಳವರ್ಗಗಳಲ್ಲಿ ಬದುಕಿನ ಚೈತನ್ಯವನ್ನು ಹುಟ್ಟಿಸುತ್ತಿವೆ. ಸಾಂಪ್ರದಾಯಿಕ ನಾಯಕತ್ವವನ್ನು ಅದರ ಅಮಾನವೀಯ ಮತ್ತು ಸ್ವಾರ್ಥಪರ ಮುಖಗಳನ್ನು ಪ್ರಶ್ನಿಸುವ ಪ್ರತಿಭಟಿಸುವ ಹಂಬಲಗಳು ಕಂಡುಬರುತ್ತಿವೆ. ವಿರೋಧ ಇಲ್ಲದ ಅವಿರೋಧ ಆಯ್ಕೆಯು ಒಂದು ಪಂಚಾಯತಿ ವ್ಯವಸ್ಥೆಯನ್ನು ದಶಕಗಳ ಕಾಲ ಸತತವಾಗಿ ಏಕಚಕ್ರಾಧಿಪತ್ಯದಡಿಯಲ್ಲಿ ಬದುಕುವಂತೆ ಮಾಡಿಬಿಡುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದು ಗೌರವ ತರುವ ಸಂಗತಿಯಲ್ಲ. ಆಯ್ಕೆ ಮತ್ತು ಅನುಷ್ಠಾನ ಬಹುಮುಖಿ ಸಂವೇದನೆಗಳಿಗೆ ಪ್ರತಿನಿಧಿತ್ವಕ್ಕೆ ಗೌರವ ಇವು ಕ್ರಿಯಾಶೀಲ ಪ್ರಜಾಪ್ರಭುತ್ವದ ಗುಣಾತ್ಮಕ ಸಂಗತಿಗಳು. ಹೀಗಾಗಿ ರಾಜಕೀಯ ಪ್ರೇರಿತ ಅವಿರೋಧ ಆಯ್ಕೆಗಳು ಯಾವುದೇ ಸಮುದಾಯದ ಆರೋಗ್ಯಕರ ಬೆಳವಣಿಗೆಗೆ ಕಾರಣವಾಗಲಾರವು. ಆರೋಗ್ಯಕರ ಸ್ಪರ್ಧೆ ಮತ್ತು ಆಯ್ಕೆಗಳು ಆರೋಗ್ಯಕರ ಸಮಾಜವನ್ನು ಬೆಳೆಸಬಲ್ಲವು.

ರಾಜಕೀಯ ಸಾಮಾಜೀಕರಣದ ನಿಯೋಗದಲ್ಲಿ ಒಂದಾದ ಕುಂಟುಂಬವು ಮಹಿಳಾ ಭಾಗವಹಿಸುವಿಕೆಯ ವಿಷಯದಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಕುಟುಂಬದಲ್ಲಿ ಗಂಡನ ಇಚ್ಛೆಯಂತೆ ಸ್ಪರ್ಧಿಸಿರುವ ಮಹಿಳೆಯರನ್ನು ಅಂಕಿ ಅಂಶಗಳ ಮೂಲಕ ಗಮನಿಸಲಾಗಿದೆ. ಹಾಗೇ ಇಡೀ ಕುಟುಂಬದ ಸಮ್ಮತಿ, ಪ್ರೋತ್ಸಾಹ ಪಡೆದು ಮತ್ತು ವಿರೋಧಗಳನ್ನು ಎದುರಿಸಿ, ಸ್ಪರ್ಧಿಸಲು ಚುನಾವಣೆಗೆ ನಿಂತು ಆಯ್ಕೆಯಾದ ಚುನಾಯಿತ ಮಹಿಳೆಯರ ಅಂಕಿ ಅಂಶಗಳನ್ನು ಕೋಷ್ಟಕ ೪ರ ಮೂಲಕ ತಿಳಿಯಬಹುದು.

ಕೋಷ್ಟಕ ೨೨.೧

ಕ್ರ.ಸಂ	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಸಮ್ಮತಿ ಪ್ರೋತ್ಸಾಹ	೧೦೯	೭೮.೯೮	೧೪೧	೯೩.೩೭
೨.	ವಿರೋಧ	೨೯	೨೧	೧೦	೬.೬೨
	ಒಟ್ಟು	೧೩೮	೧೦೦	೧೫೧	೧೦೦

ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಕುಟುಂಬದ ಸಮ್ಮತಿ ಪ್ರೋತ್ಸಾಹ ಪಡೆದು ರಾಜಕೀಯದಲ್ಲಿ ಪಾಲ್ಗೊಂಡಿರುವ ಚುನಾಯಿತ ಸದಸ್ಯೆಯರ ಸಂಖ್ಯೆ ೧೦೯ ಆಗಿದ್ದು, ಶೇ.೭೮.೯೮ ರಷ್ಟಿದೆ. ಹಾಗೆಯೇ ಕುಟುಂಬದ ವಿರೋಧದಿಂದ ಪಾಲ್ಗೊಂಡವರ ಸಂಖ್ಯೆ ೨೯ ಇದ್ದು, ಶೇ.೨೧ ರಷ್ಟಿದೆ.

ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಕುಟುಂಬದ ಸಮ್ಮತಿ ಮತ್ತು ಪ್ರೋತ್ಸಾಹದೊಂದಿಗೆ ರಾಜಕೀಯದಲ್ಲಿ ಪಾಲ್ಗೊಂಡಿರುವ ಚುನಾಯಿತ ಮಹಿಳೆಯರ ಸಂಖ್ಯೆ ೧೪೧ ಆಗಿದ್ದು, ಶೇ.೯೩.೩೭ ರಷ್ಟಿದೆ. ಕುಟುಂಬದ ವಿರೋಧದಿಂದ ಪಾಲ್ಗೊಂಡವರ ಸಂಖ್ಯೆ ೧೦ ಇದ್ದು, ಶೇ.೬.೬೨ ರಷ್ಟಿದೆ. ಕೋಷ್ಟಕದ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಿಂತ, ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಚುನಾವಣೆಯ ಸ್ಪರ್ಧೆಗೆ ಕುಟುಂಬದ ಸಮ್ಮತಿ ಶೇ.೧೪.೩೯ ರಷ್ಟು ಹೆಚ್ಚಿನ ಪ್ರಮಾಣದಲ್ಲಿರುವುದು ದೃಢವಾಗುತ್ತದೆ. ವಿರೋಧ ಇದ್ದವರು ಸಂಡೂರಿಗಿಂತ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಶೇ.೧೮.೩೮ ರಷ್ಟಿರುವುದು ಕಂಡು ಬರುತ್ತದೆ.

ಚುನಾಯಿತ ಮಹಿಳೆಯರ ಮೇಲೆ ಕುಟುಂಬದ ಪ್ರಭಾವವನ್ನು ಮತ್ತೊಂದು ರೀತಿಯಲ್ಲೂ ಗಮನಿಸಬಹುದು. ಚುನಾಯಿತ ಸದಸ್ಯೆಯರ ಎಷ್ಟು ಕುಟುಂಬಗಳಿಗೆ ರಾಜಕೀಯ ಹಿನ್ನೆಲೆ ಇದೆ, ಕುಟುಂಬದಲ್ಲಿ ಮುಖ್ಯವಾಗಿ ಗಂಡನಿಗೆ ರಾಜಕೀಯದಲ್ಲಿ ಆಸಕ್ತಿ ಇದ್ದು ಸ್ಪರ್ಧಿಸಿದವರು, ಯಾವ ಹಿನ್ನೆಲೆಯೂ ಇಲ್ಲದೆ ಸ್ಪರ್ಧಿಸಿದವರ ಸಂಖ್ಯೆ ಎಷ್ಟು ಎಂದು ಕ್ಷೇತ್ರಕಾರ್ಯದಿಂದ ಕಂಡುಕೊಳ್ಳಲಾಗಿದೆ. ರಾಜಕೀಯದೊಂದಿಗೆ ಒಡನಾಟವಿದ್ದು, ರಾಜಕೀಯ ಮುಖಂಡರೊಂದಿಗೆ ಸಂಪರ್ಕ ಇರುವುದು ಹಾಗೂ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿ ಅನುಭವ ಇದ್ದವರ ಅಂಕಿ ಸಂಖ್ಯೆಯನ್ನು ಒಡನಾಟವಿದೆ ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ ೨೨.೨

ಚುನಾಯಿತ ಮಹಿಳೆಯರ ಕುಟುಂಬದ ರಾಜಕೀಯ ಹಿನ್ನೆಲೆ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ರಾಜಕೀಯದೊಂದಿಗೆ ಒಡನಾಟವಿದೆ	೨೧	೧೫.೨೧	೫೨	೩೪.೪೩
೨.	ರಾಜಕೀಯದಲ್ಲಿ ಆಸಕ್ತಿಯಿದೆ	೩೧	೨೨.೪೬	೪೯	೩೨.೪೫
೩.	ಯಾವುದೂ ಇಲ್ಲ	೮೬	೬೨.೩೧	೫೦	೩೩.೧೧
	ಒಟ್ಟು	೧೩೮	೧೦೦	೧೫೧	೧೦೦

ಹೊಸಪೇಟೆ ತಾಲೂಕಿನ ಗ್ರಾಮ ಪಂಚಾಯ್ತಿಯಲ್ಲಿ ಕುಟುಂಬದ ರಾಜಕೀಯ ಹಿನ್ನೆಲೆ ಇರುವ ಚುನಾಯಿತ ಮಹಿಳೆಯರ ಸಂಖ್ಯೆ ೨೧ ಇದ್ದು, ಶೇ.೧೫.೨೧ ರಷ್ಟಿದೆ. ಕುಟುಂಬದಲ್ಲಿ ರಾಜಕೀಯ ಆಸಕ್ತಿಯಿರುವ ಚುನಾಯಿತ ಮಹಿಳೆಯರ ಸಂಖ್ಯೆ ೩೧ ಆಗಿದ್ದು, ಶೇ.೨೨.೪೬ ರಷ್ಟಿದೆ. ಯಾವ ಹಿನ್ನೆಲೆಯೂ ಇಲ್ಲದಿರುವ ಕುಟಂಬಗಳಿಂದ ಆರಿಸಿ ಬಂದಿರುವ ಮಹಿಳೆಯರ ಸಂಖ್ಯೆ ೮೬ ಆಗಿದ್ದು, ಶೇ.೬೨.೩೧ ರಷ್ಟಿದೆ.

ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಕುಂಟುಬದಲ್ಲಿ ರಾಜಕೀಯ ಹಿನ್ನೆಲೆ ಇರುವ ಚುನಾಯಿತ ಸದಸ್ಯೆಯರ ಸಂಖ್ಯೆ ೫೨ ಆಗಿದ್ದು, ಶೇ.೩೪.೪೩ರಷ್ಟಿದೆ. ಕುಟುಂಬದಲ್ಲಿ ರಾಜಕೀಯ ಆಸಕ್ತಿಯಿರುವ ಚುನಾಯಿತ ಮಹಿಳೆಯರ ಸಂಖ್ಯೆ ೪೯ ಇದ್ದು, ಶೇ.೩೨.೪೫ ರಷ್ಟಿದೆ. ಯಾವ ಹಿನ್ನೆಲೆಯೂ ಇಲ್ಲಿದಿರುವ ಕುಟುಂಬಗಳಿಂದ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರ ಸಂಖ್ಯೆ ೫೦ ಆಗಿದ್ದು, ಶೇ.೩೩.೧೧ ರಷ್ಟಿದೆ.

ಮೇಲಿನ ಅಂಕಿ ಅಂಶಗಳು ಚುನಾಯಿತ ಮಹಿಳಾ ಪ್ರತಿನಿಧಿಗಳ ಮೇಲೆ ರಾಜಕೀಯ ಸಾಮಾಜೀಕರಣದ ಪ್ರಬಲ ಮಾಧ್ಯಮವಾದ ಕುಟುಂಬದ ಪ್ರಭಾವವನ್ನು ಗ್ರಹಿಕೆಗೆ ತರುತ್ತದೆ. ಕುಟುಂಬದ ಪ್ರಭಾವವು ಎಲ್ಲ ನಿಟ್ಟಿನಲ್ಲಿ ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಈ ಸಂಗತಿಯ ಚುನಾಯಿತ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ.

ಮಹಿಳಾ ಭಾಗವಹಿಸುವಿಕೆ ಮತ್ತು ಶೈಕ್ಷಣಿಕ ಸಂಸ್ಥೆಗಳು

ಹೊಸಪೇಟೆ ಮತ್ತು ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಿಂದ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರ ಮೇಲೆ ಶಿಕ್ಷಣ ಸಂಸ್ಥೆಗಳ ಪ್ರಭಾವ ಆ ಮೂಲಕ ರಾಜಕೀಯ

ಸಾಮಾಜೀಕರಣ ಉಂಟಾಗಿದೆಯೇ ಎಂದು ತಿಳಿಯಲು ಆ ಮೂಲಕ ಅವರ ರಾಜಕೀಯ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ಕೆಳಗಿನಂತೆ ನೋಡಬಹುದಾಗಿದೆ.

ಕೋಷ್ಟಕ ೨೩

ಸಾಕ್ಷರತೆಯ ಪ್ರಮಾಣ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕ ಗ್ರಾಮಪಂಚಾಯ್ತಿ		ಸಂಡೂರು ತಾಲೂಕು ಗ್ರಾಮಪಂಚಾಯ್ತಿ	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಪ್ರಾಥಮಿಕ(೧-೪)	೧೭	೧೨.೩೧	೩೫	೨೩.೧೭
೨.	ಮಾಧ್ಯಮಿಕ(೫-೭)	೧೫	೧೦.೮೬	೨೧	೧೩.೯೦
೩.	ಪ್ರೌಢ(೮-೧೦)	೧೦	೭.೨೪	೨೪	೧೫.೮೯
೪.	ಪದವಿಪೂರ್ವ	೧	೦.೭೨	೩	೧.೯೮
೫.	ಪದವಿ	--	--	೪	೨.೬೪
೬	ಸ್ನಾತಕೋತ್ತರ	--	--	--	--
೭.	ಅನಕ್ಷರಸ್ಥರು	೯೫	೬೮.೮೪	೫೨	೩೪.೪೩
೮.	ಅಕ್ಷರಸ್ಥರು	-	-	೧೨	೭.೯೪
	ಒಟ್ಟು	೧೩೮	೧೦೦	೧೫೧	೧೦೦

ಹೊಸಪೇಟೆ ತಾಲೂಕಿನಲ್ಲಿ ಚುನಾಯಿತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಪ್ರಾಥಮಿಕದಿಂದ ಪ್ರೌಢ ಹಂತದ ವರೆಗೆ ಸಂಖ್ಯೆ ೪೨ ಇದ್ದು, ಶೇ.೩೦.೪೩ ಇದ್ದರೆ. ಪದವಿ ಪೂರ್ವದಿಂದ ಪದವಿಯ ವರೆಗಿನ ಚುನಾಯಿತ ಮಹಿಳೆಯ ಸಂಖ್ಯೆ ೧ ಆಗಿದ್ದು, ಶೇ.೦.೭೨ ಆಗಿದೆ. ಅನಕ್ಷರಸ್ಥ ಚುನಾಯಿತ ಮಹಿಳೆಯರ ಸಂಖ್ಯೆ ೯೫ ಇದ್ದು, ಶೇ.೬೮.೮೪ ಆಗಿದೆ.

ಸಂಡೂರು ತಾಲೂಕನ್ನು ಗಮನಿಸಿದಾಗ ಪ್ರಾಥಮಿಕದಿಂದ ಪ್ರೌಢಹಂತದವರೆಗೆ ಶಿಕ್ಷಣಪಡೆದ ಚುನಾಯಿತ ಮಹಿಳೆಯರ ಸಂಖ್ಯೆ ೮೦ ಆಗಿದ್ದು, ಶೇ.೫೨.೯೮ ರಷ್ಟಿದೆ. ಪದವಿಪೂರ್ವದಿಂದ ಪದವಿ ಹಂತದವರೆಗೆ ಕಲಿತ ಚುನಾಯಿತ ಮಹಿಳೆಯರ ಸಂಖ್ಯೆ ೭ ಇದ್ದು, ಶೇ.೪.೬೩ ರಷ್ಟಿದೆ. ಅನಕ್ಷರಸ್ಥ ಚುನಾಯಿತ ಮಹಿಳೆಯರ ಸಂಖ್ಯೆ ೫೨ ಆಗಿದ್ದು, ಶೇ.೩೪.೪೩ ರಷ್ಟಿದೆ. ಅಕ್ಷರಸ್ಥ ಚುನಾಯಿತ ಮಹಿಳೆಯರ ಸಂಖ್ಯೆ ೧೨ ಇದ್ದು, ಶೇ.೭.೯೪ರಷ್ಟಿರುವುದು ಕಂಡುಬರುತ್ತದೆ. ಇಲ್ಲಿ ಅಕ್ಷರಸ್ಥರೆಂದರೆ ಅವರು ಸಹಿ ಮಾಡಲು ಮಾತ್ರ ಕಲಿತಂತವರು. ಅಂತಹ ಸದಸ್ಯೆಯರೇ ಈ ಕುರಿತು ಹೇಳಿಕೊಂಡಿರುವದನ್ನು

ಗಮನಿಸಬಹುದಾಗಿದೆ. ಎರಡು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಸ್ನಾತಕೋತ್ತರದವರೆಗೆ ಓದಿರುವ ಮಹಿಳೆಯರ ಸಂಖ್ಯೆ ಶೂನ್ಯವಾಗಿರುವುದು ಕಂಡುಬಂದಿದೆ.

ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಪ್ರಾಥಮಿಕದಿಂದ ಪ್ರೌಢ ಹಂತದವರೆಗೆ, ಪದವಿಪೂರ್ವದಿಂದ ಪದವಿವರೆಗೆ ಕಲಿತ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಕ್ರಮವಾಗಿ ಶೇ.೨೨.೫೫ ರಷ್ಟು ಮತ್ತು ಶೇ.೩.೯೧ ರಷ್ಟು ಹೆಚ್ಚಿನ ಪ್ರಮಾಣದಲ್ಲಿರುವುದು ತಿಳಿದುಬರುತ್ತದೆ. ಅನಕ್ಷರಸ್ಥ ಚುನಾಯಿತ ಮಹಿಳೆಯರು ಹೊಸಪೇಟೆ ತಾಲೂಕಿನಲ್ಲಿ ಶೇ.೩೪.೪೧ ರಷ್ಟು ಹೆಚ್ಚಾಗಿರುವುದು ತಿಳಿಯುತ್ತದೆ.

ಇದನ್ನು ಗಮನಿಸಿದಾಗ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳ ಚುನಾಯಿತ ಮಹಿಳೆಯರಲ್ಲಿ ಪದವಿ ಶಿಕ್ಷಣ ಮಟ್ಟ ಅತಿ ಕಡಿಮೆ ಇದೆ. ಸಂಡೂರು ತಾಲೂಕಿನಲ್ಲಿ ಈ ಪ್ರಮಾಣ ನಿರಾಶಾದಾಯಕವಾಗಿ ಕಂಡುಬರುವುದಿಲ್ಲ. ಇಲ್ಲಿನ ಶಿಕ್ಷಣ ಸಂಸ್ಥೆಗಳೊಂದಿಗಿನ ಒಡನಾಟದಲ್ಲಿ ತಿಳುವಳಿಕೆಯ ವಿಸ್ತಾರದಲ್ಲಿ ಚುನಾಯಿತ ಮಹಿಳೆಯರು ಒಲವಿರಿಸಿಕೊಂಡಿರುವುದು ಕಾಣಿಸುತ್ತದೆ. ಹೊಸಪೇಟೆ ಪರಿಸರದಲ್ಲಿ ಆಯ್ಕೆಯಾದ ಮಹಿಳೆಯರಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರೇ ಹೆಚ್ಚಾಗಿರುವುದು ಈ ಶೈಕ್ಷಣಿಕ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರಿದ್ದು ಕಂಡುಬರುತ್ತದೆ.

ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳುವ ಅವಕಾಶದಿಂದ ಮಹಿಳೆಯರು ವಂಚಿತರಾಗಿರಲು ಅತ್ಯಂತ ಮುಖ್ಯವಾದ ಕಾರಣ ಅವರು ಅನಕ್ಷರಸ್ಥರಾಗಿರುವುದು ಎಂದು ವಿಶ್ವಸಂಸ್ಥೆಯ ಡೆವಲಪ್‌ಮೆಟ್ ಅಸಿಸ್ಟೆನ್ಸ್ ಫ್ರೇಮ್ ವರ್ಕ ಯುಎನ್‌ಡಿಎಎಫ್ ತಯಾರಿಸಿರುವ ವರದಿಯು ಹೇಳಿದೆ.[೯] ಇದರಿಂದ ಚುನಾಯಿತ ಮಹಿಳೆಯರಿಗೆ ಶಿಕ್ಷಣ ಎಷ್ಟು ಮಹತ್ವವಾಗಿದೆ ಎಂಬುದು ಮನವರಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಗಮನಿಸಿದಾಗ, ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿ ಚುನಾಯಿತ ಮಹಿಳೆಯರ ಮೇಲೆ ರಾಜಕೀಯ, ಸಾಮಾಜೀಕರಣದ ಪ್ರಕ್ರಿಯೆಯು ಶಿಕ್ಷಣ ಸಂಸ್ಥೆಗಳ ಮೂಲಕ ಪ್ರಭಾವಿತವಾಗಿರುವುದು ಗೋಚರಿಸುತ್ತದೆ. ಈ ಸಂಗತಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೂ ಗುಣಾತ್ಮಕ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಯಲ್ಲಿ ರಾಜಕೀಯ ಸಾಮಾಜೀಕರಣದ ಪ್ರಭಾವ ಮತ್ತು ರಾಜಕೀಯ ಭಾಗವಹಿಸುವಿಕೆಯು ಕನಿಷ್ಟ ಮಟ್ಟದಲ್ಲಿರುವುದು ವ್ಯಕ್ತವಾಗುತ್ತದೆ.

ರಾಜಕೀಯ ಸಾಮಾಜೀಕರಣಕ್ಕೆ ಸಂಬಂಧಿಸಿದಂತೆ ಒತ್ತಡ ಗುಂಪುಗಳು, ಹಿತಾಸಕ್ತಿಗುಂಪುಗಳು ಕಾರ್ಮಿಕ ಸಂಘಟನೆಗಳು, ರೈತಸಂಘಗಳಂತಹ ಗುಂಪುಗಳು ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವಲ್ಲಿ

ಪ್ರಮುಖ ಸಾಧನಗಳಾಗಿವೆ. ಆದರೆ ಆಯ್ಕೆಯಾದ ಹೆಚ್ಚಿನ ಮಹಿಳೆಯರನ್ನು ಗಮನಿಸಿದಾಗ ಈ ತರದ ಗುಂಪುಗಳ ಪ್ರಣಾಳಿಕೆಗೆ ಪ್ರಭಾವಿತರಾದಂತೆ ಕಾಣಿಸುವುದಿಲ್ಲ. ಕಾರಣ ಚುನಾಯಿತ ಮಹಿಳೆಯರು ಹೊಲ, ಮನೆ, ಲಾಲನೆ, ಪಾಲನೆ, ಪೋಷಣೆ ಮೊದಲಾದ ಕೌಟುಂಬಿಕ ಚೌಕಟ್ಟಿಗೆ ಸೀಮಿತವಾಗಿರುವುದು. ಹೀಗಾಗಿ ಸಾರ್ವಜನಿಕ ಬದುಕಿನ ಬಗ್ಗೆ ಅಥವಾ ತಾನು ಆಯ್ಕೆಯಾದ ಸಂಗತಿಯ ಬಗ್ಗೆ ಅಂತಹ ಆಸಕ್ತಿ ಇಟ್ಟುಕೊಂಡಿರುವುದು ಕಂಡುಬರುವುದಿಲ್ಲ. ಇಂತಹ ಗುಂಪುಗಳ ಬಗ್ಗೆ ಮಹಿಳೆಯರಿಗೆ ಅಷ್ಟಾಗಿ ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತದೆ.

ಆದರೆ ಕುತೂಹಲ ಮೂಡಿಸುವ ಸಂಗತಿಗಳೆಂದರೆ ಚುನಾಯಿತ ಮಹಿಳೆಯರಲ್ಲಿ ರಾಷ್ಟ್ರೀಯ ಪಕ್ಷಗಳು ಮತ್ತು ಸ್ಥಳೀಯ ಪಕ್ಷಗಳ ಕುರಿತು ಕನಿಷ್ಟ ತಿಳುವಳಿಕೆ ಇರುವುದು. ಅಷ್ಟೇ ಅಲ್ಲದೆ ಹೆಸರಾಂತ ರಾಜಕೀಯ ನಾಯಕರು ಮತ್ತು ಪಕ್ಷಗಳ ಚಿನ್ಹೆಗಳ ಕುರಿತು ತಿಳುವಳಿಕೆಗಳನ್ನು ಇವರಲ್ಲಿ ಕಾಣುತ್ತೇವೆ. ಇದಕ್ಕೆ ಬಹಳಷ್ಟು ಮಹಿಳೆಯರು ಪ್ರಮುಖ ರಾಜಕೀಯ ಪಕ್ಷಗಳ ಮತ್ತು ಪ್ರಾದೇಶಿಕ ಅಭ್ಯರ್ಥಿಗಳಾಗಿ ಕಣಕ್ಕಿಳಿದು ಗೆಲುವು ಪಡೆದಿರುವುದು ಒಳ್ಳೆಯ ಉದಾಹರಣೆ. ಇದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸ್ವತಃ ಕಂಡುಕೊಂಡಿದ್ದೇನೆ. ಹಾಗೆ ನೋಡಿದರೆ ಗ್ರಾಮಪಂಚಾಯ್ತಿ ವ್ಯವಸ್ಥೆಯಲ್ಲಿ ಪಕ್ಷಾತೀತ ರಾಜಕೀಯ ಪದ್ಧತಿ ಇರಬೇಕೆನ್ನುವುದು ನಿಯಮ.[೧೦] ಆದರೆ ಸದ್ಯದ ಸ್ಥಿತಿಯಲ್ಲಿ ಇದಕ್ಕೆ ವ್ಯತಿರಿಕ್ತವಾದ ಸಂದರ್ಭಗಳನ್ನು ನಾವು ಕಾಣುತ್ತೇವೆ. ಕೆಲವು ಗ್ರಾಮ ಪಂಚಾಯ್ತಿಗಳಂತೂ ಆಯಾ ರಾಜಕೀಯ ಪಕ್ಷದ ಅಖಾಡಾಗಳಂತೆ ಕಂಡುಬರುತ್ತವೆ. ಇನ್ನು ಒಂದು ಹೆಜ್ಜೆ ಮುಂದುವರಿದು ನೋಡಿದಾಗ ರಾಜ್ಯದಲ್ಲಿರುವ ಆಡಳಿತ ಪಕ್ಷವು ತನ್ನ ವಿರೋಧಿ ಬಣಗಳು ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯ್ತಿಗಳಿಗೆ ಆರ್ಥಿಕಾಭಿವೃದ್ಧಿ ಮತ್ತು ಆಡಳಿತಾತ್ಮಕ ಕೆಲಸಗಳಲ್ಲಿ ನೀರಸ ಬೆಂಬಲವನ್ನು ಕೊಡುತ್ತಿರುವುದು. ಇಂತಹ ಆರೋಪಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಆಯಾ ಪಕ್ಷದ ಚುನಾಯಿತ ಸದಸ್ಯರು ಮಾಡಿದ್ದನ್ನು ನಾನು ಗಮನಿಸಿದ್ದೇನೆ. ಮಲಪನಗುಡಿ ಗ್ರಾಮಪಂಚಾಯ್ತಿಯಲ್ಲಿ ಆಡಳಿತರೂಢ ಪಕ್ಷದ ಪರವಾದ ವ್ಯವಸ್ಥೆ ಇರುವುದರಿಂದ ಎಂ.ಎಲ್.ಎ. ಮತ್ತು ಎಂ.ಪಿ. ನಿಧಿಗಳಿಂದ ಅನುದಾನ ಪಡೆದು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿಸಿದ್ದು, ಇದಕ್ಕೆ ಜೀವಂತ ಉದಾಹರಣೆ.

ಸಮೂಹ ಮಾಧ್ಯಮಗಳ ಪಾತ್ರ

ರಾಜಕೀಯ ಸಾಮಾಜೀಕರಣದ ನಿಯೋಗಗಳಲ್ಲಿ ಒಂದಾದ ಸಮೂಹ ಮಾಧ್ಯಮವು ಚುನಾಯಿತ ಮಹಿಳೆಯರ ಮೇಲೆ ಹೇಗೆ ಮತ್ತು ಎಷ್ಟು ಪ್ರಭಾವ ಬೀರಿದೆ ಎಂಬುದನ್ನು ಕೆಳಕಂಡ ಕೋಷ್ಟಕದ ಅಂಕಿ ಅಂಶಗಳ ಮೂಲಕ ಕಂಡುಕೊಳ್ಳಬಹುದಾಗಿದೆ.

ಕೋಷ್ಟಕ ೨೪.೧

ಸಮೂಹ ಮಾಧ್ಯಮಗಳ ಒಡನಾಟ

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ವೃತ್ತಪತ್ರಿಕೆ ಓದುವವರು	೧	೦.೭೨	೧	೦.೬೬
೨.	ರೇಡಿಯೋ ಕೇಳುವವರು	೧೦	೭.೨೪	೧೨	೭.೯೪
೩.	ದೂರದರ್ಶನ ವೀಕ್ಷಿಸುವವರು	೬೩	೪೫.೬೫	೮೪	೫೫.೬೨
೪.	ಯಾವುದೂ ಇಲ್ಲದವರು	೬೪	೪೬.೩೭	೫೪	೩೫.೭೬
ಒಟ್ಟು		೧೩೮	೧೦೦	೧೫೧	೧೦೦

ಈ ಕೋಷ್ಟಕ ೨೪.೧ರಲ್ಲಿರುವ ಅಂಕಿ ಅಂಶಗಳನ್ನು ಇನ್ನಷ್ಟು ವಿಸ್ತರಿಸಿ ನೋಡಿದಾಗ ಕೋಷ್ಟಕ ೨೪.೨ರಲ್ಲಿ ಸಮೂಹ ಮಾಧ್ಯಮದ ಪರಿಣಾಮಕಾರಿಯಾದ ಪ್ರಭಾವವು ಮತ್ತಷ್ಟು ಸ್ಪಷ್ಟವಾಗಿ ಗೋಚರವಾಗುತ್ತದೆ.

ಕೋಷ್ಟಕ ೨೪.೨

ಸಮೂಹ ಮಾಧ್ಯಮಗಳ ಒಡನಾಟ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳು	
		ಸಂಖ್ಯೆ	ಶೇಕಡವಾರು	ಸಂಖ್ಯೆ	ಶೇಕಡವಾರು
೧.	ರೇಡಿಯೋದಲ್ಲಿ ವಾರ್ತೆ	-	-	-	
೨.	ರೇಡಿಯೋದಲ್ಲಿ ಮನರಂಜನೆ	೧೦	೭.೨೪	೧೨	೭.೯೪
೩.	ವೃತ್ತ ಪತ್ರಿಕೆ	೧	೦.೭೨	೧	೦.೬೬
೪.	ದೂರದರ್ಶನದಲ್ಲಿ ಮನರಂಜನೆ	೫೧	೩೬.೯೫	೩೯	೨೫.೮೨
೫.	ದೂರದರ್ಶನದಲ್ಲಿ ವಾರ್ತೆ ಮತ್ತು ಮಹಿಳಾ ಕಾರ್ಯಕ್ರಮ	೧೨	೮.೬೯	೪೫	೨೯.೮೦
೬.	ಯಾವುದೂ ಇಲ್ಲ	೬೪	೪೬.೩೭	೫೪	೩೫.೭೬
ಒಟ್ಟು		೧೩೮	೧೦೦	೧೫೧	೧೦೦

ಕೋಷ್ಟಕ ೨೪.೧ ಮತ್ತು ೨೪.೨ರ ಪ್ರಕಾರ ಸಮೂಹ ಮಾಧ್ಯಮದ ಪ್ರಭಾವಕ್ಕೆ ಒಳಗಾಗದಿರುವ ಸದಸ್ಯೆಯರ ಸಂಖ್ಯೆ ಬಹಳವಾಗಿದೆ. ಈ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ

ರೇಡಿಯೋ, ವೃತ್ತಪತ್ರಿಕೆ, ದೂರದರ್ಶನದಿಂದ ದೂರವಿರುವ ಚುನಾಯಿತ ಮಹಿಳೆಯರ ಸಂಖ್ಯೆ ೬೪ ಇದ್ದು, ಶೇ. ೧೪೬.೩೭ ರಷ್ಟಿದೆ. ಅದೇ ರೀತಿ ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ಮಾಧ್ಯಮಗಳಿಂದ ದೂರವಿರುವ ಚುನಾಯಿತ ಮಹಿಳೆಯರ ಸಂಖ್ಯೆ ೫೪ ಇದ್ದು, ಶೇ.೩೫.೭೬ ರಷ್ಟಿದೆ. ತೌಲನಿಕವಾಗಿ ನೋಡಿದಾಗ ಇಲ್ಲಿ ತಿಳಿಸಿರುವ ಯಾವುದೇ ಮಾಧ್ಯಮದ ಒಡನಾಟವಿಲ್ಲದೇ ಇರುವ ಚುನಾಯಿತ ಮಹಿಳೆಯರು ಸಂಡೂರು ತಾಲೂಕಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು ಶೇ.೧೦.೬೧ ರಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಇದು ಅತ್ಯಂತ ಕಡಿಮೆ ಪ್ರಮಾಣದ ತಿಳುವಳಿಕೆಯಾಗಿದ್ದು ಶೂನ್ಯತೆಯನ್ನು ಸೂಚಿಸುತ್ತದೆ.

ಅಕ್ಷರಸ್ಥರಿಗಾಗಲಿ, ಅನಕ್ಷರಸ್ಥರಿಗಾಗಲಿ ವೃತ್ತ ಪತ್ರಿಕೆಯು ಕೈಗೆಟಕುವ ಸಂವಹನ ಮಾಧ್ಯಮವಾಗಿದೆ. ಅನಕ್ಷರಸ್ಥರು ಬೇರೆಯವರಿಂದ ಓದಿಸಿಕೊಂಡು ಕೇಳಬಹುದು. ವೃತ್ತಪತ್ರಿಕೆಗಳು ವಿಕೇಂದ್ರೀಕರಣದ ಎಲ್ಲ ಸ್ತರಗಳ ರಾಜಕೀಯ, ಆಡಳಿತಾತ್ಮಕ ಸಂಗತಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ನೀತಿ, ನಿರ್ಧಾರ, ಯೋಜನೆಗಳನ್ನು ಹೆಚ್ಚಿನ ಮಟ್ಟದಲ್ಲಿ ಪ್ರಸಾರಗೊಳಿಸುತ್ತವೆ. ಇದರಿಂದ ಸದಸ್ಯೆಯರು ರಾಜಕೀಯವಾಗಿ ಹೆಚ್ಚಿನ ಅರಿವನ್ನು ಹೊಂದಲು ಸಹಾಯವಾಗುತ್ತದೆ. ಆದರೆ ವೃತ್ತಪತ್ರಕೆ ಓದುವ ಮಹಿಳೆಯ ಸಂಖ್ಯೆ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಒಂದು ಆಗಿದ್ದು, ಶೇ.೦.೭೨ ರಷ್ಟಿದೆ. ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ವೃತ್ತಪತ್ರಿಕೆ ಓದುವ ಚುನಾಯಿತ ಮಹಿಳೆಯರ ಸಂಖ್ಯೆ ಒಂದು ಆಗಿದ್ದು, ಶೇ.೦.೬೬ ರಷ್ಟಿದೆ. ತೌಲನಿಕವಾಗಿ ನೋಡಿದಾಗ ಎರಡು ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿ ವೃತ್ತಪತ್ರಿಕೆ ಓದುವ ಮಹಿಳೆಯರಿರುವುದು ಗೋಚರವಾಗುತ್ತದೆ.

ಸಮೂಹ ಮಾಧ್ಯಮಗಳಲ್ಲಿ ಒಂದಾದ ಒಂದು ಕಾಲದಲ್ಲಿ ಅತ್ಯಂತ ಜನಪ್ರಿಯ ಮಾಧ್ಯಮವಾಗಿದ್ದ ಮಾಧ್ಯಮವೆಂದರೆ ರೇಡಿಯೋ. ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ರೇಡಿಯೋ ಆಲಿಸುವ ಮಹಿಳೆಯರ ಸಂಖ್ಯೆ ೧೦ ಇದ್ದು, ಶೇ.೭.೨೪ ರಷ್ಟಿದೆ. ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ರೇಡಿಯೋ ಆಲಿಸುವ ಚುನಾಯಿತ ಮಹಿಳೆಯರ ಸಂಖ್ಯೆ ೧೨ ಇದ್ದು, ಶೇ ೭.೯೪ ರಷ್ಟಿದೆ. ತೌಲನಿಕವಾಗಿ ನೋಡಿದಾಗ ರೇಡಿಯೋ ಆಲಿಸುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಶೇ.೦.೭ ರಷ್ಟು ಹೆಚ್ಚಾಗಿದ್ದಾರೆ. ಆದರೆ ಈ ಸದಸ್ಯೆಯರು ರೇಡಿಯೋವನ್ನು ಕೇವಲ ಮನರಂಜನೆಯ ಮಾಧ್ಯಮವಾಗಿ ಬಳಸುತ್ತಿದ್ದುದು ಗಮನಾರ್ಹ. ಯಾಕೆಂದರೆ ಆಡಳಿತಾತ್ಮಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ರೇಡಿಯೋ ಕೇಳುವವರ ಸಂಖ್ಯೆ ಶೂನ್ಯವಾಗಿದೆ.

ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ದೂರದರ್ಶನ ವೀಕ್ಷಿಸುವ ಚುನಾಯಿತ ಮಹಿಳೆಯರ ಸಂಖ್ಯೆ ೬೩ ಆಗಿದ್ದು, ಶೇ.೪೫.೬೫ ರಷ್ಟಿದೆ. ಇದರಲ್ಲಿ ಮನರಂಜನೆಗಾಗಿ ದೂರದರ್ಶನ ವೀಕ್ಷಿಸುವವರ ಸಂಖ್ಯೆ ೫೧ ಆಗಿದ್ದು, ಶೇ.೩೬.೯೫ ರಾಜಕೀಯವಾಗಿ ಅರಿವು ಮೂಡಿಸುವಂತಹ ವಾರ್ತೆಗಳು, ಸಮೂಹ ಚರ್ಚೆಗಳು, ವ್ಯಕ್ತಿತ್ವ ರೂಪಿಸುವ ಮತ್ತು ಮಹಿಳೆಗಾಗಿ ಪ್ರಸಾರವಾಗುವಂತಹ ಕಾರ್ಯಕ್ರಮಗಳು, ರಾಜಕೀಯ ತಜ್ಞರ ಸಂದರ್ಶನದಂತಹ ಮೊದಲಾದ ಕಾರ್ಯಕ್ರಮಗಳನ್ನು ವೀಕ್ಷಿಸುವವರ ಸಂಖ್ಯೆ ಅತ್ಯಂತ ಕಡಿಮೆ. ವಾರ್ತೆಗಳನ್ನು ಮತ್ತು ಮಹಿಳೆಯರ ಕಾರ್ಯಕ್ರಮ ವೀಕ್ಷಿಸುವ ಸದಸ್ಯೆಯರ ಸಂಖ್ಯೆ ೧೨ ಆಗಿದ್ದು, ಶೇ.೮.೬೯ ರಷ್ಟಿದೆ. ಸಂದರ್ಶನದ ಸಂದರ್ಭದಲ್ಲಿ ದೂರದರ್ಶನದಲ್ಲಿ ವಾರ್ತೆಗಳನ್ನು ಕೇಳುವುದಾಗಿ ತಿಳಿಸಿದ ಸದಸ್ಯೆಯರು ಶೇ.೫.೭೯ ರಷ್ಟು ಪ್ರಮಾಣದಲ್ಲಿರುವುದು ಕಂಡುಬಂದಿತು.

ಅದೇ ರೀತಿ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ದೂರದರ್ಶನ ವೀಕ್ಷಿಸುವ ಮಹಿಳಾ ಸದಸ್ಯೆಯರ ಸಂಖ್ಯೆ ೮೪ ಇದ್ದು, ಶೇ.೫೫.೬೨ ರಷ್ಟಿದ್ದಾರೆ. ಮನರಂಜನೆಗಾಗಿ ದೂರದರ್ಶನ ವೀಕ್ಷಿಸುವ ಮಹಿಳಾ ಸದಸ್ಯೆಯರ ಸಂಖ್ಯೆ ೩೯ ಆಗಿದ್ದು, ಶೇ.೨೫.೮೨ ರಷ್ಟಿದ್ದಾರೆ. ವಾರ್ತೆ ಮತ್ತು ಮಹಿಳೆಯರಿಗಾಗಿ ಪ್ರಸಾರವಾಗುವ ಕಾರ್ಯಕ್ರಮ ವೀಕ್ಷಿಸುವ ಮಹಿಳಾ ಸದಸ್ಯೆಯರ ಸಂಖ್ಯೆ ೪೫ ಆಗಿದ್ದು, ಶೇ ೨೯.೮೦ ರಷ್ಟಿರುವುದು ವ್ಯಕ್ತವಾಗುತ್ತದೆ.

ದೊರೆತಿರುವ ಅಂಕಿ ಅಂಶಗಳನ್ನು ಗಮನಿಸಿದಾಗ ರಾಜಕೀಯ ಸಾಮಾಜೀಕರಣದ ನಿಯೋಗಗಳಲ್ಲಿ ಒಂದಾದ ಸಮೂಹ ಮಾಧ್ಯಮಗಳ ಪ್ರಭಾವವು ಹೊಸಪೇಟೆ ತಾಲೂಕಿನಲ್ಲಿ ಚುನಾಯಿತ ಮಹಿಳೆಯರ ಮೇಲೆ ಶೇ.೫೩.೬೨ ರಷ್ಟು ಕಡಿಮೆ ಪ್ರಮಾಣದಲ್ಲಿದೆ. ಸಂಡೂರು ತಾಲೂಕಿನ ಚುನಾಯಿತ ಮಹಿಳೆಯರ ಮೇಲೆ ಶೇ.೬೪.೨೩ ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಅಂದರೆ ಶೇ.೧೦.೬೧ ರಷ್ಟು ಪ್ರಭಾವ ಸಂಡೂರು ತಾಲೂಕಿನಲ್ಲಿ ಹೆಚ್ಚಾಗಿರುವುದು ವೇದ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಗಮನಿಸಿದಾಗ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳ ಚುನಾಯಿತ ಮಹಿಳೆಯರಿಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳ ಚುನಾಯಿತ ಮಹಿಳೆಯರಲ್ಲಿ ಧನಾತ್ಮಕವಾಗಿರುವುದು ಕಂಡುಬರುತ್ತದೆ.

ಭಾಗವಹಿಸುವಿಕೆ ಮತ್ತು ಕರ್ತವ್ಯ ಪ್ರಜ್ಞೆ

ಗ್ರಾಮಪಂಚಾಯಿತಿಗಳು ಆಧುನಿಕ ಆಡಳಿತದ ಪ್ರಾತಿನಿಧಿಕ ಸಂಸ್ಥೆಗಳಾಗಿವೆ. ಗ್ರಾಮದ ಎಲ್ಲ ಜಾತಿ ವರ್ಗಗಳಿಗೂ ಅಲ್ಲಿ ಪ್ರಾತಿನಿಧ್ಯ ದೊರಕುವಂತೆ ಮಾಡಲಾಗಿದೆ. ಮಹಿಳೆಯರಿಗೆ ಮತ್ತು ಅಂಚಿನಲ್ಲಿರುವ

ವಂಚಿತ ಜಾತಿ ವರ್ಗಗಳಿಗೆ ಪ್ರಾತಿನಿಧ್ಯವನ್ನು ಸಂವಿಧಾನಾತ್ಮಕವಾಗಿ ನಿಗದಿ ಪಡಿಸಲಾಗಿದೆ. ವಿಕೇಂದ್ರೀಕರಣವು ಇದಕ್ಕೆ ಅತ್ಯಂತ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಹಿಂದಿನ ಅಧ್ಯಯನದಲ್ಲಿ ಗ್ರಾಮೀಣ ರಾಜಕೀಯದಲ್ಲಿ ರಾಜಕೀಯ ಭಾಗವಹಿಸುವಿಕೆಯ ವಿವಿಧ ಸಾಧ್ಯತೆಗಳನ್ನು ಗುರುತಿಸಲಾಗಿದೆ. ಈಗ ಚುನಾಯಿತ ಮಹಿಳೆಯ ಕರ್ತವ್ಯ ಪ್ರಜ್ಞೆ ಆ ಮೂಲಕ ನಿರ್ಣಯ ಪ್ರಕ್ರಿಯೆಯಲ್ಲಿ ಅವಳು ಭಾಗವಹಿಸುವ ನೆಲೆಗಳನ್ನು ಕುರಿತು ವಿವೇಚಿಸಲಾಗಿದೆ.

ನಮ್ಮ ಒಕ್ಕೂಟ ವ್ಯವಸ್ಥೆಯು ಐದು ಸ್ತರದ ಸರ್ಕಾರಗಳನ್ನು ಹೊಂದಿದೆ. ಇದರಲ್ಲಿ ತಳಮಟ್ಟದ ರಾಜಕೀಯದ ದೃಷ್ಟಿಯಿಂದ ಗ್ರಾಮಪಂಚಾಯತ್ ಬಹಳ ಮುಖ್ಯವಾದದ್ದು. ಗ್ರಾಮಮಟ್ಟದಲ್ಲಿ ಗ್ರಾಮಸಭೆಯು ಶಾಸಕಾಂಗವಾಗಿದ್ದರೆ ಗ್ರಾಮಪಂಚಾಯತ್ ಕಾರ್ಯಾಂಗವಾಗಿದೆ. ನ್ಯಾಯ ಪಂಚಾಯಿತಿಯು ಗ್ರಾಮದ ಮಾದರಿ ನ್ಯಾಯಾಂಗವಾಗಿರುತ್ತದೆ. ಹೀಗಾಗಿ ನ್ಯಾಯಪಂಚಾಯತ್ ಮತ್ತು ಗ್ರಾಮಸಭೆಯು ಗ್ರಾಮಪಂಚಾಯಿತಿಯ ಬಹುಮುಖ್ಯ ಕ್ರಿಯಾಶೀಲ ಘಟಕಗಳು. ಗ್ರಾಮ ಸಮುದಾಯ ಮತ್ತು ಗ್ರಾಮಸಭೆಯು ಸ್ಥಳೀಯ ಸ್ವಯಾಮಾಡಳಿತ ಸಂಸ್ಥೆಗಳ ಅಭಿವೃದ್ಧಿಗೆ ಕೊಂಡಿಯಂತಿದ್ದು, ಇದು ತಳಮಟ್ಟದ ಪ್ರಜಾಪ್ರಭುತ್ವ ವ್ಯವಸ್ಥೆಗೆ ದಾರಿಮಾಡಿ ಕೊಡುತ್ತದೆ. ಗ್ರಾಮಪಂಚಾಯಿತಿಯ ವ್ಯವಸ್ಥೆಯ ಜೀವಾಳವೇ ಗ್ರಾಮ ಸಭೆ ಆಗಿರುತ್ತದೆ. ಇಂತಹ ವ್ಯವಸ್ಥೆಯನ್ನು ಒಳಗೊಂಡ ಗ್ರಾಮಪಂಚಾಯತ್‌ಗಳು ಸ್ಥಳೀಯ ಜನಸಮುದಾಯಗಳ ಪ್ರತಿನಿಧಿ ಸಂಸ್ಥೆಗಳಾಗಿದ್ದು ಜನರಿಗೆ ಸ್ಥಳೀಯ ಪ್ರಜಾಪ್ರಭುತ್ವ ಪ್ರಕ್ರಿಯೆಯ ವಿಸ್ತರಣೆಯನ್ನು ಒದಗಿಸುತ್ತವೆ. ಗ್ರಾಮಪಂಚಾಯತಿ ಅಧೀನದಲ್ಲಿನ ಗ್ರಾಮಗಳ ಎಲ್ಲ ವಯಸ್ಕ ಮತದಾದರರೂ ಸೇರಿ ವಿಚಾರಣೆ ನಡೆಸುವ, ಯೋಜನೆಗಳನ್ನು ರೂಪಿಸುವ, ಅನುಷ್ಠಾನಗೊಳಿಸುವ ಸಾಧ್ಯತೆಗಳನ್ನು ಈ ವ್ಯವಸ್ಥೆ ಒಳಗೊಂಡಿರುತ್ತದೆ. ಗ್ರಾಮಪಂಚಾಯ್ತಿ ಪ್ರಾತಿನಿಧಿಕ ಸಂಸ್ಥೆಯಾಗಿರುವುದರಿಂದ ಇಲ್ಲಿ ಚುನಾಯಿತ ಪ್ರತಿನಿಧಿಗಳೇ ಪ್ರಧಾನವಾಗಿರುತ್ತಾರೆ. ಇವರಿಗೆ ಗ್ರಾಮಪಂಚಾಯಿತಿಯ ವ್ಯವಸ್ಥೆಯು ಬಗ್ಗೆ ಪರಿಪೂರ್ಣವಾದ ತಿಳುವಳಿಕೆ ಇದ್ದರೆ ಮಾತ್ರ ಗುಣಾತ್ಮಕವಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ.

ಚುನಾಯಿತ ಮಹಿಳಾ ಸದಸ್ಯೆಯರು

ನಾನು ಆಯ್ಕೆ ಮಾಡಿಕೊಂಡ ಎರಡೂ ತಾಲೂಕಿನ ಗ್ರಾಮಪಂಚಾಯಿತಿಗಳಿಂದ ಆಯ್ಕೆಯಾದ ಒಟ್ಟು ಚುನಾಯಿತ ಮಹಿಳಾ ಸದಸ್ಯರ ಸಂಖ್ಯೆ ೨೮೯. ಆಯ್ಕೆಯಾಗಿರುವ ಮಹಿಳೆಯರಲ್ಲಿ ಒಟ್ಟು ಅಧ್ಯಕ್ಷೆಯರು ೨೧. ಉಪಾಧ್ಯಕ್ಷೆಯರು ೨೧. ಆಯ್ಕೆಯಾಗಿರುವ ಸದಸ್ಯೆಯರಲ್ಲಿ ಹೆಚ್ಚಿನವರು ಕೆಳವರ್ಗದಿಂದ ಬಂದವರಾಗಿದ್ದಾರೆ. ಹೀಗಾಗಿ ಗ್ರಾಮಪಂಚಾಯಿತಿ ವ್ಯವಸ್ಥೆಯ ಬಗ್ಗೆ ಮತ್ತು ಅವರ ಕರ್ತವ್ಯಗಳ ಬಗ್ಗೆ ಅವರಿಗಿರುವ ತಿಳುವಳಿಕೆಯನ್ನು ತಿಳಿದುಕೊಳ್ಳುವುದು ಬಹುಮುಖ್ಯ ಸಂಗತಿಯಾಗಿದೆ.

ಇಲ್ಲಿರುವ ಮೂಲಭೂತ ಪ್ರಶ್ನೆಯೆಂದರೆ ಬಹಳಷ್ಟು ಸದಸ್ಯೆಯರಿಗೆ ಗ್ರಾಮಪಂಚಾಯಿತಿಯ ವ್ಯವಸ್ಥೆಯ ಬಗ್ಗೆ ಪ್ರಾಥಮಿಕ ತಿಳುವಳಿಕೆಯು ಇಲ್ಲದಿರುವುದು ಸಂದರ್ಶನದಿಂದ ತಿಳಿದುಬಂದಿತು. ಗ್ರಾಮಪಂಚಾಯಿತಿಯ ಸದಸ್ಯರಾಗಲು ಬೇಕಾದ ಅರ್ಹತೆಗಳ ಕುರಿತು ಅವರೊಂದಿಗೆ ಮಾತನಾಡಿದಾಗ ನಿರಾಶಾದಾಯಕ ಉತ್ತರ ಸಿಕ್ಕಿತು.

ಸದಸ್ಯತ್ವದ ಅರ್ಹತೆಗಳು

೧. ಗ್ರಾಮ ಪಂಚಾಯ್ತಿಯ ಮತದಾರರ ಪಟ್ಟಿಯಲ್ಲಿ ಹೆಸರು ನಮೂದಾಗಿರಬೇಕು.

೨. ೨೧ ವಯಸ್ಸಾಗಿರಬೇಕು.

೩. ಕಾರಾಗೃಹ ಶಿಕ್ಷೆ ಅನುಭವಿಸಿರಬಾರದು.

೪. ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಯ ನೌಕರಿಯಿಂದ ವಜಾ ಆಗಿರಬಾರದು.

೫. ದಿವಾಳಿ ಆಗಿರಬಾರದು, ಬುದ್ಧಿ ಭ್ರಮಣೆ ಆಗಿರಬಾರದು.

೬. ಸರ್ಕಾರದ ಸ್ಥಳೀಯ ಅಥವಾ ಪ್ರಾಧಿಕಾರದಲ್ಲಿ ಲಾಭದಾಯಕ ಹುದ್ದೆಯಲ್ಲಿ ಇರಬಾರದು.

೭. ಗ್ರಾಮ ಪಂಚಾಯ್ತಿಗೆ ಕೊಡಬೇಕಾದ ಬಾಕಿ ಹಣ ಪಾವತಿ ಮಾಡಿರದಿದ್ದರೆ ಅಂಥವರು ಅನರ್ಹರು.

೮. ಗ್ರಾಮ ಪಂಚಾಯ್ತಿಯ ವಿರುದ್ಧ ವಕಾಲತ್ತು ವಹಿಸಿದರೂ ಅನರ್ಹರು. ಇಂತಹ ಮೂಲಭೂತ ತತ್ವಗಳ ಬಗ್ಗೆ ಆಯ್ಕೆಯಾದ ಹೆಚ್ಚಿನ ಸದಸ್ಯೆಯರಲ್ಲಿ ತಿಳುವಳಿಕೆ ಇಲ್ಲದಿರುವುದು ಸಂದರ್ಶನದಿಂದ ತಿಳಿದುಬಂತು.

ಅದೇ ರೀತಿ ಚುನಾಯಿತ ಸದಸ್ಯೆಯರ ಬಹು ಮುಖ್ಯ ಕರ್ತವ್ಯಗಳೆಂದರೆ

೧. ಗ್ರಾಮನೈರ್ಮಲೀಕರಣ.

೨. ಕುಡಿಯುವ ನೀರಿನ ವ್ಯವಸ್ಥೆ.

೩. ರಸ್ತೆ ಮತ್ತು ಚರಂಡಿ ನಿರ್ಮಾಣ

೪. ಅವಕಾಶಗಳಲ್ಲಿನ ಅಸಮಾನತೆಗಳ ನಿವಾರಣೆ

೫. ಶೌಚಾಲಯ ಸೌಕರ್ಯ ಒದಗಿಸುವುದು.

೬. ಅಜ್ಞಾನ ಮತ್ತು ಅನಕ್ಷರತೆಯನ್ನು ಹೋಗಲಾಡಿಸುವುದು

೭. ಸಮುದಾಯ ಪ್ರಜ್ಞೆಯನ್ನು ಬೆಳೆಸುವುದು, ಸಾಮರಸ್ಯವನ್ನು ಮೂಡಿಸುವುದು.

೮. ಫಲಾನುಭವಿಗಳನ್ನು ಗುರುತಿಸಿ, ಪರಿಹಾರೋಪಾಯಗಳನ್ನು ಕೈಗೊಳ್ಳುವುದು.

ಇಂತಹ ಹಲವಾರು ಸುಧಾರಣಾ ಪರವಾದ ಕೆಲಸಗಳು ಸದಸ್ಯೆಯ ಕಾರ್ಯವ್ಯಾಪ್ತಿಗೆ ಬರುತ್ತವೆ.

ಆದರೆ ಈ ಕರ್ತವ್ಯಗಳ ಬಗ್ಗೆ ಚುನಾಯಿತ ಸದಸ್ಯೆಯರಿಗೆ ಪರಿಪೂರ್ಣವಾದ ತಿಳುವಳಿಕೆ ಇದ್ದಂತಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೆಚ್ಚಿನ ಸದಸ್ಯೆಯರು ತಮ್ಮ ವಾರ್ಡುಗಳಲ್ಲಿ ಬಂಡೆ ಹಾಕಿಸಿರುವುದು, ಚರಂಡಿ ನಿರ್ಮಿಸುವುದು, ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ದೀಪದ ವ್ಯವಸ್ಥೆ, ಜವಾಹರ್ ರೋಜಗಾರ್ ಯೋಜನೆಯಲ್ಲಿ ಮನೆಯ ನಿರ್ಮಾಣ, ಇಂತಹ ಸಂಗತಿಗಳ ಬಗ್ಗೆ ಹೇಳುತ್ತಾರೆ. ಆದರೆ ಈ ಯಾವ ಕಾಮಗಾರಿಗಳಲ್ಲಿ ಸದಸ್ಯೆಯರ ತೊಡಗುವಿಕೆಗಿಂತ ಪುರುಷಶಾಹಿ ಮತ್ತು ಅಧಿಕಾರ ಶಾಹಿ ವ್ಯವಸ್ಥೆಯೇ ಮೇಲುಗೈ ಸಾಧಿಸಿರುವುದು ಕಂಡುಬರುತ್ತದೆ. ಕಾಮಗಾರಿಗಳಲ್ಲಿ ತೊಡಗದೇ ಕೇವಲ ಸಹಿ ಮಾಡಿದ ಸದಸ್ಯೆಯರೂ ಇದ್ದಾರೆ. ಉದಾ : ನಾಗೇನಹಳ್ಳಿ ಗ್ರಾಮಪಂಚಾಯ್ತಿಯ ಉಪಾಧ್ಯಕ್ಷೆಯಾದ ಶ್ರೀಮತಿ ಪಳನಿಯಮ್ಮ ನಾನು 'ರುಜು'ವಿಗೆ ಮಾತ್ರ ಸೀಮಿತೆ ಎಲ್ಲವೂ ಪತಿಯದೇ. ನನಗೇನೂ ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಗಾದಿಗನೂರು ಗ್ರಾಮಪಂಚಾಯ್ತಿಯ ಅಧ್ಯಕ್ಷೆಯಾದ ಶ್ರೀಮತಿ ಘಂಟೆಮಾಯಮ್ಮ ಇವರ ಎಲ್ಲಾ ಕೆಲಸಕಾರ್ಯಗಳನ್ನು ಉಪಾಧ್ಯಕ್ಷರೇ ನೋಡಿಕೊಳ್ಳುತ್ತಾರೆ. ಮತ್ತೊಬ್ಬ ಸದಸ್ಯೆಗೆ ಹೊಲ ಗದ್ದೆ ಬಿಟ್ಟರೆ ಮತ್ತೇನೂ ಗೊತ್ತಿಲ್ಲ. ಇಂತಹ ಅನೇಕ ಉದಾಹರಣೆಗಳು ಕ್ಷೇತ್ರಕಾರ್ಯದಲ್ಲಿ ದೊರೆತಿವೆ. ಈ ರೀತಿ ಇರುವಾಗ ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಭಾಗವಹಿಸುವಿಕೆಯನ್ನು ಗುರುತಿಸುವುದೆಂತು?

ಫಲಾನುಭವಿಗಳ ಆಯ್ಕೆಯನ್ನು ಆಯಾ ಕ್ಷೇತ್ರದ ಸದಸ್ಯೆಯರು ಮಾಡಬೇಕಾಗಿರುವುದು ನಿಯಮ. ವಿಚಿತ್ರವೆಂದರೆ ಈ ಆಯ್ಕೆಯನ್ನು ಮೇಲಾಧಿಕಾರಿಗಳೇ ಮಾಡುವ ಮತ್ತು ಚುನಾಯಿತ ಸದಸ್ಯೆಯ ಇಂತಹ ಆಯ್ಕೆಗಳನ್ನು ತಿರಸ್ಕರಿಸುವ ಸಂಗತಿಗಳನ್ನು ಕಾಣಲಾಗುತ್ತದೆ(ಈ ಕುರಿತು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ). ಇತ್ತ ಆಯ್ಕೆಯಾದ ಕ್ಷೇತ್ರದ ಮತದಾರರು ತಮ್ಮ ಯಾವ ಸಮಸ್ಯೆಗಳೂ ಸದಸ್ಯೆಯಿಂದ ಪರಿಹಾರವಾಗದಿರುವುದನ್ನು ಕಂಡು ತಲೆಗೊಬ್ಬರಂತೆ ಅವಾಚ್ಯವಾಗಿ ಬಯ್ಯುತ್ತಾರೆಂದು ರಾಮಸಾಗರದ ಕೊರವರ ಮಾರೆಮ್ಮನಂಥಹ ಅನೇಕ ಸದಸ್ಯೆಯರು ನೊಂದುಕೊಂಡು ಹೇಳಿದ ಮಾತುಗಳು ತುಂಬಾ ವಿಚಾರರ್ಹ. ಕರ್ತವ್ಯಗಳ ಬಗ್ಗೆ ತಿಳುವಳಿಕೆ ಹೊಂದಿರುವ ಸದಸ್ಯೆಯರದು ಒಂದು ರೀತಿಯ ಸಮಸ್ಯೆಯಾದರೆ ತಿಳುವಳಿಕೆ ಹೊಂದಿರದ ಸದಸ್ಯೆಯರದು ಮತ್ತೊಂದು ರೀತಿಯ ಸಮಸ್ಯೆ ಇದೆ.

ಇದೇ ರೀತಿ ಗ್ರಾಮ ಪಂಚಾಯ್ತಿಗೆ ಬರುವ ಅನುದಾನ, ಗ್ರಾಮಪಂಚಾಯಿತಿಗೆ ಅನುದಾನ ಇಲ್ಲದಿರುವಾಗ ಸಿಗುವ ಆದಾಯದ ಇತರ ಸಂಪನ್ಮೂಲಗಳು, ಗ್ರಾಮಪಂಚಾಯಿತಿಗೆ ಸ್ವಂತ ಕಟ್ಟಡವಿದೆಯೇ ಇಲ್ಲವೋ ಎಂಬುದರ ಕುರಿತು, ಗ್ರಾಮಪಂಚಾಯಿತಿ ಕಛೇರಿಗೆ ವೃತ್ತಪತ್ರಿಕೆಗಳು ಬರುತ್ತವೆ ಇಲ್ಲ ಎನ್ನುವ ಬಗ್ಗೆ, ಗ್ರಾಮಪಂಚಾಯಿತಿಯಲ್ಲಿ ತಮ್ಮ ಅಧಿಕಾರಾವಧಿಯ ಕುರಿತು, ಗ್ರಾಮಸಭೆಯಲ್ಲಿ ಮಂಡಿತವಾಗುವ ವಿಷಯಗಳ ಕುರಿತು, ಅಧ್ಯಕ್ಷೆಯರ ಕಾರ್ಯವ್ಯಾಪ್ತಿಯ ಬಗ್ಗೆ, ಅವರ ಆಯ್ಕೆಯ ಪ್ರಕ್ರಿಯೆಯ ಬಗ್ಗೆ, ವಾರ್ಷಿಕ ಬಜೆಟ್ ಹಾಗೂ ಅದು ಒಳಗೊಳ್ಳುವ ವಿಷಯಗಳು-ಈ ಎಲ್ಲ ಸಂಗತಿಗಳ ಕುರಿತು ಹೆಚ್ಚಿನ ಸದಸ್ಯೆಯರಲ್ಲಿ ತಿಳುವಳಿಕೆಯ ಕೊರತೆ ಕಂಡುಬರುತ್ತದೆ.

ಗ್ರಾಮಪಂಚಾಯಿತಿಗಳಲ್ಲಿರುವ ವಿವಿಧ ಸಮಿತಿಗಳ ಬಗ್ಗೆ, ಸಭೆಗಳ ಬಗ್ಗೆ, ಚುನಾಯಿತ ಸದಸ್ಯೆಯರಲ್ಲಿರುವ ತಿಳುವಳಿಕೆಯನ್ನು ಕೆಳಗಿನ ಕೋಷ್ಟಕದ ಮೂಲಕ ಪರಿಶೀಲಿಸಲಾಗಿದೆ.

ಕೋಷ್ಟಕ ೨೫

ಸಮಿತಿಗಳ ಕುರಿತ ತಿಳುವಳಿಕೆ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕ ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ತಿಳುವಳಿಕೆ ಇದೆ	೧೧	೭.೯೭	೧೦	೬.೬೨
೨.	ತಿಳುವಳಿಕೆ ಇಲ್ಲ	೧೨೭	೯೨	೧೪೧	೯೩.೩೭
ಒಟ್ಟು		೧೩೮	೧೦೦	೧೫೧	೧೦೦

ಮೇಲಿನ ಕೋಷ್ಟಕ ತಿಳಿಸುವ ಅಂಕಿ ಅಂಶಗಳ ಪ್ರಕಾರ ಗ್ರಾಮಪಂಚಾಯಿತಿಯಲ್ಲಿರುವ ಸಮಿತಿಗಳ ಕುರಿತು ತಿಳುವಳಿಕೆ ಹೊಂದಿರುವ ಸದಸ್ಯೆಯರ ಸಂಖ್ಯೆ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಯಲ್ಲಿ ೧೦ ಇದ್ದು, ಶೇ.೭.೯೭ ರಷ್ಟಿದ್ದಾರೆ. ೧೨೭ ಸದಸ್ಯೆಯರು ತಿಳುವಳಿಕೆ ಇಲ್ಲದವರಾಗಿದ್ದು, ಶೇ.೯೨ ರಷ್ಟಿದ್ದಾರೆ. ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ೧೦ ಸದಸ್ಯೆಯರು ತಿಳುವಳಿಕೆ ಹೊಂದಿದ್ದು, ಅವರು ಶೇ.೬.೬೨ ರಷ್ಟಿದ್ದರೆ, ತಿಳುವಳಿಕೆ ಇಲ್ಲದಿರುವವರು ೧೪೧ ಸದಸ್ಯೆಯರಿದ್ದು, ಅವರು ಶೇ.೯೩.೩೭ ರಷ್ಟಿರುವುದು ಕಂಡುಬರುತ್ತದೆ.

ತೌಲನಿಕವಾಗಿ ನೋಡಿದಾಗ ಸಮಿತಿಗಳ ಕುರಿತು ತಿಳುವಳಿಕೆ ಇರುವ ಸದಸ್ಯೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಾಗಿರುವರು. ಸಮಿತಿಗಳ ಕುರಿತು ತಿಳುವಳಿಕೆ ಇಲ್ಲದಿರುವ ಸದಸ್ಯೆಯರು ಹೊಸಪೇಟೆಗಿಂತ, ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಾಗಿರುವರು.

ಚುನಾಯಿತ ಮಹಿಳೆಯು ತನ್ನ ಆಡಳಿತಾತ್ಮಕ ಮತ್ತು ಅಭಿವೃದ್ಧಿಪರ ಚಟುವಟಿಕೆಗಳಲ್ಲಿ ಪುರುಷರ ಸಹಕಾರವನ್ನು ಬಯಸುವುದನ್ನು ನಾವು ಕಾಣುತ್ತೇವೆ. ಗ್ರಾಮಪಂಚಾಯ್ತಿ ಸಭೆಗಳಲ್ಲಿ ಭಾಗವಹಿಸಬೇಕಾದ ಸಂದರ್ಭದಲ್ಲಿ ಪತಿ, ಮಗ, ಮಾವ, ಮೈದುನ, ಅಣ್ಣ, ತಮ್ಮ ಅಥವಾ ಪುರುಷ ಸದಸ್ಯೆಯರ ಮೇಲೆ ಅವಲಂಬಿತರಾಗಿರುವುದನ್ನು ಕ್ಷೇತ್ರ ಕಾರ್ಯದಿಂದ ಕಂಡುಕೊಂಡಿದ್ದೇನೆ. ಸ್ವತಂತ್ರವಾಗಿ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸುವ ಮಹಿಳಾ ಸದಸ್ಯೆರ ಸಂಖ್ಯೆಯೂ ಸಿಗುತ್ತದೆ. ಈ ಕೆಳಗಿನ ಕೋಷ್ಟಕ ೨೬ರ ಅನ್ವಯ ಗಮನಿಸಬಹುದಾಗಿದೆ.

ಕೋಷ್ಟಕ ೨೬

ಆಡಳಿತದಲ್ಲಿ ಪುರುಷರ ನೆರವು

ಕ್ರ.ಸಂ	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಪುರುಷರ ನೆರವು(ಪತಿ, ಮಗ, ಮಾವ ಇತ್ಯಾದಿ)	೧೧೫	೮೩.೩೩	೧೦೬	೭೦.೧೯
೨.	ಸ್ವತಃ ಸದಸ್ಯೆಯರು	೨೩	೧೬.೬೬	೪೫	೨೯.೮೦
	ಒಟ್ಟು	೧೩೮	೧೦೦	೧೫೧	೧೦೦

ಮೇಲಿನ ಕೋಷ್ಟಕದಂತೆ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಪುರುಷರ ನೆರವಿನಿಂದ ಆಡಳಿತ ನಡೆಸುವ ಚುನಾಯಿತ ಮಹಿಳೆಯರ ಸಂಖ್ಯೆಯು ೧೧೫ ರಷ್ಟಿದ್ದು, ಶೇ.೮೩.೩೩ ರಷ್ಟಿರುವುದು ತಿಳಿಯುತ್ತದೆ. ಪುರುಷರ ನೆರವಿಲ್ಲದೆ ಸ್ವತಃ ಆಡಳಿತದಲ್ಲಿ ಭಾಗಿಯಾಗುವ ಮಹಿಳೆಯರ ಸಂಖ್ಯೆ ೨೩ ಆಗಿದ್ದು, ಶೇ.೧೬.೬೬ರಷ್ಟಿದ್ದಾರೆ. ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ಪುರುಷರ ನೆರವಿನಿಂದ ಆಡಳಿತ ನಡೆಸುವ ಚುನಾಯಿತ ಮಹಿಳೆಯರ ಸಂಖ್ಯೆ ೧೦೬ ಇದ್ದು, ಶೇ.೭೦.೧೯ ರಷ್ಟಿರುವುದು. ಪುರುಷರ ನೆರವಿಲ್ಲದೆ ಸ್ವತಃ ಆಡಳಿತದಲ್ಲಿ ಭಾಗಿಯಾಗುವ ಚುನಾಯಿತ ಮಹಿಳೆಯರ ಸಂಖ್ಯೆ ೪೫ ಇದ್ದು, ಶೇ.೨೯.೮೦ ರಷ್ಟು ಇರುವುದು ಕಂಡುಬರುತ್ತದೆ.

ತೌಲನಿಕವಾಗಿ ಅಧ್ಯಯನ ಮಾಡಿದಾಗ ಪುರುಷರ ನೆರವಿನಿಂದ ಆಡಳಿತದಲ್ಲಿ ಪಾಲ್ಗೊಳ್ಳುವ ಚುನಾಯಿತ ಮಹಿಳೆಯರು ಸಂಡೂರಿಗಿಂತ, ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಹಾಗೆಯೇ ಪುರುಷರ ನೆರವಿಲ್ಲದೇ ಸ್ವತಃ ಆಡಳಿತದಲ್ಲಿ ಭಾಗಿಯಾಗುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯಿತಿ

[illegible]

ಗಳಲ್ಲಿ ಹೆಚ್ಚು ಪ್ರಮಾಣದಲ್ಲಿರುವುದು ಗೋಚರಿಸುತ್ತದೆ. ಇದರಿಂದ ಕುಟುಂಬದ ಮೂಲಕ ಸಾಮಾಜೀಕರಣವು ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಅಧ್ಯಕ್ಷೆಯರು ಮತ್ತು ಉಪಾಧ್ಯಕ್ಷೆಯರು

ಗ್ರಾಮಪಂಚಾಯತ್ ವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನ ತುಂಬಾ ಮಹತ್ವದ್ದು. ಚುನಾಯಿತ ಸದಸ್ಯರು ಅಧ್ಯಕ್ಷೆ ಮತ್ತು ಉಪಾಧ್ಯಕ್ಷೆಯರನ್ನು ಆರಿಸುತ್ತಾರೆ. ಆಡಳಿತಾರೂಢ ಸರ್ಕಾರವು ಆಯ್ಕೆಯ ಪ್ರಕ್ರಿಯೆಗೆ ತಕ್ಕಂತಹ ನಿರ್ದೇಶನವನ್ನು ನೀಡುತ್ತದೆ.

ಸಾಮಾನ್ಯವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಾಜ್ಯದಲ್ಲಿರುವ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಒಟ್ಟು ಸಂಖ್ಯೆಯ ಶೇ.೧೫ಕ್ಕಿಂತ ಕಡಿಮೆ ಇರದ, ಅನುಸೂಚಿತ ಪಂಗಡಗಳಿಗಾಗಿ, ಶೇ.೩ಕ್ಕಿಂತ ಕಡಿಮೆ ಇರದ, ಹಿಂದುಳಿದ ವರ್ಗಗಳಿಗಾಗಿ ಸರಿಸುಮಾರು ಮೂರನೆ ಒಂದರಷ್ಟು ಸಂಖ್ಯೆಯ ಅಧ್ಯಕ್ಷರ, ಉಪಾಧ್ಯಕ್ಷರ ಹುದ್ದೆ ಗಳನ್ನು ಮೀಸಲಿಡಲಾಗುತ್ತದೆ. ರಾಜ್ಯದಲ್ಲಿರುವ ಒಟ್ಟು ಗ್ರಾಮಪಂಚಾಯ್ತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಮೇಲೆ ಸೂಚಿಸಿದ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ ಮೂರನೆ ಒಂದರಷ್ಟಕ್ಕೆ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಈ ಹಿನ್ನೆಲೆಯಲ್ಲಿ ಉಪಪ್ರಕರಣದಲ್ಲಿ ಮೀಸಲಿಟ್ಟ ಹುದ್ದೆಗಳನ್ನು ಸರದಿ ಪ್ರಕಾರ ವಿವಿಧ ಗ್ರಾಮಪಂಚಾಯ್ತಿಗಳಿಗೆ ಹಂಚುವ ವ್ಯವಸ್ಥೆಯನ್ನು ಪಂಚಾಯತ್‌ರಾಜ್ ಅಧಿನಿಯಮದಲ್ಲಿ ಅಡಕಗೊಳಿಸಲಾಗಿದೆ.[೫]

ಕೋಷ್ಟಕ ೨೭.೧

ಅಧ್ಯಕ್ಷೆಯರ ಜಾತಿ ಪಂಗಡಗಳ ವಿವರ

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಸಾಮಾನ್ಯ	೩	೨೭.೨೭	೪	೪೦
೨.	ಪರಿಶಿಷ್ಟ ಪಂಗಡ	೧	೯	೨	೨೦
೩.	ಪರಿಶಿಷ್ಟ ಜಾತಿ	೩	೨೭.೨೭	೧	೧೦
೪.	ಹಿಂದುಳಿದ ವರ್ಗ-ಎ	೪	೩೬.೩೬	೩	೩೦
	ಒಟ್ಟು	೧೧	೧೦೦	೧೦	೧೦೦

ಕೋಷ್ಟಕ ೨೭.೧ರ ಪ್ರಕಾರ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿರುವ ಅಧ್ಯಕ್ಷೆಯರು ಶೇ.೨೭.೨೭ ರಷ್ಟಿದ್ದರೆ ಪರಿಶಿಷ್ಟ ಪಂಗಡದಿಂದ ಆಯ್ಕೆಯಾದವರು ಶೇ.೯ ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಜಾತಿಯಿಂದ ಆಯ್ಕೆಯಾದ ಅಧ್ಯಕ್ಷೆಯರು ಶೇ.೨೭.೨೭ ರಷ್ಟಿದ್ದರೆ, ಹಿಂದುಳಿದ ವರ್ಗ-ಎ ಕ್ಷೇತ್ರದಿಂದ ಆಯ್ಕೆಯಾಗಿರುವ ಅಧ್ಯಕ್ಷೆಯರು ಶೇ.೩೬.೩೬ ರಷ್ಟಿರುವುದು ಕಂಡುಬರುತ್ತದೆ.

ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿರುವ ಅಧ್ಯಕ್ಷೆಯರು ಶೇ.೪೦ ರಷ್ಟಿದ್ದರೆ, ಪರಿಶಿಷ್ಟ ಪಂಗಡದಿಂದ ಆಯ್ಕೆಯಾದವರು ಶೇ.೨೦ ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಜಾತಿಯಿಂದ ಆಯ್ಕೆಯಾದ ಅಧ್ಯಕ್ಷೆಯರು ಶೇ. ೧೦ ರಷ್ಟಿದ್ದರೆ, ಹಿಂದುಳಿದ ವರ್ಗ-ಎ ಕ್ಷೇತ್ರದಿಂದ ಆಯ್ಕೆಯಾಗಿರುವ ಅಧ್ಯಕ್ಷೆಯರು ಶೇ.೩೦ ರಷ್ಟಿರುವುದು ಕಂಡುಬರುತ್ತದೆ.

ತೌಲನಿಕವಾಗಿ ನೋಡಿದಾಗ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾದವರು ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಿಂತ ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಾಗಿರುವರು. ಹಾಗೆಯೇ ಪರಿಶಿಷ್ಟ ಪಂಗಡದಿಂದ ಆಯ್ಕೆಯಾದ ಅಧ್ಯಕ್ಷೆಯರು ಹೊಸಪೇಟೆ ತಾಲೂಕಿಗಿಂತ ಸಂಡೂರು ತಾಲೂಕು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಾಗಿರುವರು. ಪರಿಶಿಷ್ಟ ಜಾತಿಯಿಂದ ಹಾಗೂ ಹಿಂದುಳಿದ ವರ್ಗ-ಎ ಕ್ಷೇತ್ರದಿಂದ ಆಯ್ಕೆಯಾದವರು ಸಂಡೂರು ತಾಲೂಕು ಗ್ರಾಮಪಂಚಾಯಿತಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಗ್ರಾಮಪಂಚಾಯಿತಿ ವ್ಯವಸ್ಥೆಯು ೩೦೨ನೇ ಪ್ರಕರಣದಡಿ ಪುನಾರಚನೆಯಾದಾಗ ಸಂಬಂಧಿಸಿದ ಸರ್ಕಾರಿ ಅಧಿಕಾರಿಯು ಕೂಡಲೇ ಗ್ರಾಮಪಂಚಾಯಿತಿಯ ಸಭೆ ಕರೆದು ತನ್ನ ಅಧ್ಯಕ್ಷತೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾವಣೆ ಮೂಲಕ ಆಯ್ಕೆ ಮಾಡುತ್ತಾನೆ. ಆದರೆ ಈ ಅಧಿಕಾರಿಗೆ ಮತಚಲಾವಣೆಯ ಹಕ್ಕು ಇರುವುದಿಲ್ಲ. ಗ್ರಾಮಪಂಚಾಯ್ತಿಯ ಶಾಸನದಲ್ಲಿ ಹೀಗಿದ್ದರೆ ವಾಸ್ತವವಾಗಿ ನಡೆಯುವ ಸಂಗತಿಗಳೇ ಬೇರೆ ಎಂಬುದನ್ನು ಕ್ಷೇತ್ರಕಾರ್ಯದಲ್ಲಿ ಹಲವಾರು ಗ್ರಾಮಪಂಚಾಯ್ತಿಗಳಲ್ಲಿ ಕಂಡುಬರುತ್ತದೆ.

ಅಧ್ಯಕ್ಷೆಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಪ್ರತಿಷ್ಠಿತ ಶಕ್ತಿಗಳು ತನಗೆ ಅನುಕೂಲಕರವಾದ ವ್ಯಕ್ತಿಯನ್ನು ಆರಿಸುವಲ್ಲಿ ಹೆಚ್ಚು ಮುತುವರ್ಜಿಯನ್ನು ವಹಿಸುತ್ತವೆ. ಇಂತಹ ಸಂದರ್ಭದಲ್ಲಿ ಆಯ್ಕೆಗೆ ಅರ್ಹತೆ ಇರುವ ವ್ಯಕ್ತಿಯನ್ನು ಆಯ್ಕೆಯ ಪ್ರಕ್ರಿಯೆಯಿಂದ ದೂರವಿಡಲಾಗುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯ ಅಪರಹರಣದಂತಹ ದೂಂಡಾ ವರ್ತನೆಗಳು ನಡೆದಿವೆ. ಕೆಲವು ಸಲ ಆಯ್ಕೆಯ ಪ್ರಕ್ರಿಯೆಯಲ್ಲಿ ಬಹುಮತ ಹೊಂದಿರುವ ಪಕ್ಷದ ಸದಸ್ಯರು ಅಲ್ಪಮತ ಹೊಂದಿರುವ

ಪಕ್ಷದ ಸದಸ್ಯರನ್ನು ಆಹ್ವಾನಿಸದಿರುವುದು ಕಂಡುಬರುತ್ತದೆ. ಇಂತಹ ಸಂಗತಿಗಳನ್ನು ರಾಮಸಾಗರ ಮತ್ತು ದೇವಸಮುದ್ರ ಗ್ರಾಮಪಂಚಾಯ್ತಿಗಳಲ್ಲಿ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿದುಕೊಳ್ಳಲಾಯಿತು. ಈ ಸಂಗತಿಗಳು ತಳಮಟ್ಟದಲ್ಲಿ ಮಾತ್ರ ಅಲ್ಲ, ರಾಜ್ಯ, ರಾಷ್ಟ್ರಮಟ್ಟದಲ್ಲೂ ಕಂಡುಬರುತ್ತವೆ. ಸಂಡೂರು ತಾಲೂಕಿನ ಕೆಲವು ಗ್ರಾಮಪಂಚಾಯಿತಿಗಳಲ್ಲಿ ಆಮಿಷಗಳನ್ನೊಡ್ಡುವ ಮೂಲಕ ಸದಸ್ಯೆಯರನ್ನು ಮನವೊಲಿಸುವ ಮೂಲಕ ಸ್ಪರ್ಧೆಯಿಂದ ಹಿಂದೆ ಸರಿಸುವ ಮತ್ತು ಬೆಂಬಲ ಪಡೆಯುವ ಕಸರತ್ತುಗಳನ್ನು ಕಾಣಲಾಗಿದೆ. ಉದಾಹರಣೆಗೆ ಸಂಡೂರಿನ ಕಾಳಿಂಗೇರಿ ಗ್ರಾಮಪಂಚಾಯ್ತಿಯಲ್ಲಿ ಸದಸ್ಯೆಯಾದ ಶ್ರೀಮತಿ ಕಮ್ಮಾರ ಗೌರಮ್ಮನಿಗೆ ಹಣದ(ರೂ.೨೫,೦೦೦) ಆಮಿಷ ಒಡ್ಡಿ, ಸ್ಪರ್ಧೆಯಿಂದ ಪಕ್ಕಕ್ಕೆ ಸರಿಸಿ ಶ್ರೀಮತಿ ಎಂ.ಹುಲಿಗೆಮ್ಮ ಅವರನ್ನು ಅಧ್ಯಕ್ಷೆಯಾಗಿ ಆಯ್ಕೆ ಮಾಡಲಾದ ವಿಷಯದ ಬಗ್ಗೆ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡೆನು. ಹಾಗೆಯೇ ಸೋವೇನಹಳ್ಳಿ ಗ್ರಾಮಪಂಚಾಯ್ತಿಯಲ್ಲಿ ಅಧ್ಯಕ್ಷೆಯಾಗಿರುವ ಶ್ರೀಮತಿ ಲೀಲಾವತಿ ಎಂಬುವವರನ್ನು ಅಧ್ಯಕ್ಷೆಯಾಗಿ ಮಾಡಲು ಇತರರು ಸ್ಪರ್ಧಿಸದಂತೆ ನೋಡಿಕೊಳ್ಳಲಾಗಿದೆ. ದೇವಸಮುದ್ರ ಗ್ರಾಮಪಂಚಾಯಿತಿಯಲ್ಲಿ ಅಧ್ಯಕ್ಷರ ಆಯ್ಕೆಯ ಗೊತ್ತುಪಡಿಸಿದ ದಿನವನ್ನು ಕೆಲವು ಸದಸ್ಯೆಯರಿಗೆ ತಿಳಿಸಲಾಗಿರಲಿಲ್ಲ. ಇನ್ನೂ ಕೆಲವು ಸಲ ಅಧ್ಯಕ್ಷರ ಅವಧಿಯನ್ನು ಕಂತುಗಳಲ್ಲಿ ಹಂಚಿಕೊಳ್ಳಲಾಗಿದೆ. ಉದಾಹರಣೆಗೆ ಸಂಡೂರಿನ ದರೋಜಿ ಗ್ರಾಮಪಂಚಾಯಿತಿಯ ಸದಸ್ಯೆ ದೇವದಾಸಿ, ಹರಿಜನರ ಶ್ರೀಮತಿ ಮಾರೆಮ್ಮ ಅವರು ನಿಗದಿಪಡಿಸಿದ ಅವಧಿಯವರೆಗೆ ಮಾತ್ರ ಅಧ್ಯಕ್ಷೆಯಾಗಿದ್ದು, ಈಗ ಸದಸ್ಯೆಯಾಗಿ ಉಳಿದಿದ್ದಾರೆ.

ಇಂತಹ ಹಂಚಿಕೆಗಳನ್ನು ಸಾಮಾನ್ಯವಾಗಿ ಜಾತಿ ರಾಜಕೀಯ ಹೆಚ್ಚಾಗಿರುವ ಗ್ರಾಮಪಂಚಾಯ್ತಿಗಳಲ್ಲಿ ಕಾಣುತ್ತೇವೆ. ಉದಾ : ರಾಮಸಾಗರದ ಕೊರವರ ಮಾರೆಮ್ಮ ನೊಂದು ಹೇಳುತ್ತಾಳೆ. ನ್ಯಾಯವಾಗಿ ಅನುಸೂಚಿತ ಜಾತಿಯ ಸೌಲಭ್ಯದಲ್ಲಿ ಈಕೆಗೆ ಸೇರಬೇಕಾದ ಅಧ್ಯಕ್ಷೆಯ ಪದವಿಯನ್ನು ಪ್ರಬಲ ವರ್ಗಗಳು ತಪ್ಪಿಸಿವೆ. ಹೇಗೆಂದರೆ ಆಕೆಯನ್ನು ಮೈಸೂರಿನ ಪ್ರೇಕ್ಷಣೀಯ ಸ್ಥಳಗಳಿಗೆ ಕಳಿಸಿ ಆಯ್ಕೆಯ ಪ್ರಕ್ರಿಯೆಯಿಂದ ಆಕೆಯನ್ನು ಉದ್ದೇಶಿತವಾಗಿ ದೂರದಲ್ಲಿ ಇಡಲಾಗಿತ್ತು. ಆಕೆ ಈ ಕುರಿತು ಪ್ರಶ್ನೆ ಮಾಡಿದಾಗ ಮುಂದಿನ ಅವಧಿಗೆ ನಿನಗೇ ನೀಡುತ್ತೇವೆಂದು ಸಮಾಜಾಯಿಸಿದ್ದು, ಇಂದಿಗೂ ಆ ಸದಸ್ಯೆ ನಾನು ಅಧ್ಯಕ್ಷಳಾಗಿಯೇ ತೀರುತ್ತೇನೆ ಎಂಬ ಹಂಬಲ ಇಟ್ಟುಕೊಂಡು ಬದುಕುತ್ತಿರುವ ಸಂಗತಿಗಳು ತುಂಬಾ ಚರ್ಚಾರ್ಹವಾದಂತಹವು ಆಗಿವೆ.

ಇದಕ್ಕೆ ಪೂರಕವಾದಂತೆ ಮತ್ತೊಂದು ವಿವರವನ್ನು ಗಮನಿಸಬಹುದು. ಪಾಪಿನಾಯಕನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ನಡೆದ ಕೆಲವು

[illegible]

ಘಟನೆಗಳು ಹೀಗಿವೆ. ಪಿ.ಕೆ.ಹಳ್ಳಿ ಗ್ರಾಮಪಂಚಾಯಿತಿಯಲ್ಲಿ ೫ ಮಂದಿ ಕಾಂಗ್ರೆಸಿಗರು ನಾಲ್ವರು ದಳಕ್ಕೆ ಸೇರಿದವರು. ವಡ್ಡರ ಹಳ್ಳಿಯಲ್ಲಿ ಇಬ್ಬರು ಸದಸ್ಯರಿದ್ದರು. ಅಲ್ಲಿನ ಸದಸ್ಯರು ಹಳ್ಳಿಯಲ್ಲಿ ಯಾರಿಗೆ ಬಹುಮತ ಇದೆಯೋ ಅವರಿಗೆ ಬೆಂಬಲಿಸುತ್ತೇವೆ ಎಂದು ತಿಳಿಸಿದರು. ಹಳ್ಳಿಯಲ್ಲಿ ಕಾಂಗ್ರೆಸ್ ಪಕ್ಷದ ಶಿವಪ್ಪ ಅಧ್ಯಕ್ಷನಾಗುವುದೆಂದು ಸುದ್ದಿಯಾಯಿತು. ಅಧ್ಯಕ್ಷರ ಆಯ್ಕೆಗೆ ಕೆಲವು ದಿನಗಳಿರುವಾಗ ದಳದ ಕರೀಂಖಾನ್ ಎಂಬುವವರು ಇಬ್ಬರು ಪುರುಷ ಮತ್ತು ಇಬ್ಬರು ಮಹಿಳಾ ಸದಸ್ಯೆಯರನ್ನು ತಿಮ್ಮಪ್ಪನವರ ತೋಟದ ಮನೆಯಲ್ಲಿ ಇರಿಸಿದರು. ಅವರಿಗೆ ಅಲ್ಲಿಯೇ ಊಟ, ತಿಂಡಿ ಮತ್ತು ಮನರಂಜನೆ ವ್ಯವಸ್ಥೆಯಾಯಿತು. ಮುಂದೆ ಬಸಪ್ಪ ಎಂಬುವನು ಅಧ್ಯಕ್ಷನಾಗಲು ಹಣದ ಪ್ರಭಾವ ಬಳಸಿ ಗೆಲ್ಲುತ್ತಾನೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದ ಶಿವಪ್ಪ ಬಸಪ್ಪನಿಂದ ಹಣ ಪಡೆದುಕೊಂಡು ಸ್ಪರ್ಧೆಯಿಂದ ಹಿಂದೆ ಸರಿಯುತ್ತಾನೆ. ಇದನ್ನು ಕುರುಬರ ವೆಂಕಮ್ಮನಂತಹ ಮಹಿಳಾ ಸದಸ್ಯರು ಹೇಳುತ್ತಾರೆ.[೧೨] ಅಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ ಇಂತಹ ಘಟನೆಗಳು ಲಿಂಗಸಂಬಂಧವನ್ನು ಮೀರಿ ನಡೆಯುತ್ತವೆ. ಈ ಹಿನ್ನೆಲೆಯಲ್ಲಿ ಮೇಲಿನ ಸಂಗತಿಗಳನ್ನು ಗಮನಿಸಿದಾಗ ಹಣ, ಹೆಂಡ, ಜಾತಿಯ ಪ್ರಭಾವಗಳು ಒಡೆದು ಕಾಣುತ್ತವೆ.

ಪಂಚಾಯಿತಿ ಚುನಾವಣಾ ಸಂದರ್ಭದಲ್ಲಿ ಗ್ರಾಮಗಳ ಅಭಿವೃದ್ಧಿ ದೃಷ್ಟಿಯಿಂದ ಪಕ್ಷಾತೀತ ವ್ಯವಸ್ಥೆ ಇರಬೇಕನ್ನುವ ಅಭಿಪ್ರಾಯವಿದ್ದಾಗ ಒಳಗೊಳಗೇ ಪಕ್ಷ, ಪ್ರಚಾರ, ಪಕ್ಷಾಂತರದತಂಹ ರಾಜಕೀಯ ನೆಲೆಗಳು ಕ್ರಿಯಾಶೀಲವಾಗಿರುವುದು ಕಂಡುಬರುತ್ತದೆ.

ಅಧಿಕಾರಗಳು ಮತ್ತು ಕರ್ತವ್ಯಗಳು

ಆಯ್ಕೆಯಾದ ಅಧ್ಯಕ್ಷರುಗಳು ಸರ್ಕಾರದಿಂದ ಮಂಜೂರಾದ ಪ್ರತಿಯೊಂದು ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಳೀಯ ಜನತೆಗೆ ತಲುಪಿಸುವಲ್ಲಿ, ಸ್ಥಳೀಯ ಜನತೆಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಇವರ ಪಾತ್ರ ಮಹತ್ವದ್ದು. ಇವರ ಬಹುಮುಖ್ಯ ಕರ್ತವ್ಯಗಳೆಂದರೆ

೧. ಗ್ರಾಮ ಅಭಿವೃದ್ಧಿ ಮತ್ತು ಮಾನವಮುಖಿ ಅಭಿವೃದ್ಧಿ

೨. ಗ್ರಾಮಪಂಚಾಯ್ತಿ ಪ್ರದೇಶದಲ್ಲಿರುವ ನಿವಾಸಿಗಳ ಆರೋಗ್ಯ ಸುರಕ್ಷತೆ, ಶಿಕ್ಷಣ, ಸೌಕರ್ಯ ಮತ್ತು ಸಾಮಾಜಿಕ ಹಾಗು ಆರ್ಥಿಕ ಉನ್ನತಿಯನ್ನು ವೃದ್ಧಿಸುವ ಕಾರ್ಯಸೂಚಿಯನ್ನು ಸಿದ್ಧಪಡಿಸುವುದು. ಮತ್ತು ಆಚರಣೆಗೆ ತರುವುದು.

೩. ಗ್ರಾಮಸಭೆ ಮತ್ತು ವಿಶೇಷ ಸಭೆಗಳನ್ನು ಕರೆಯುವುದು.

೩. ನೈರ್ಮಲೀಕರಣ, ಬೀದಿ ದೀಪದ ವ್ಯವಸ್ಥೆ, ರಸ್ತೆ ನಿರ್ಮಾಣ ಮೊದಲಾದವು. ಹೀಗೆ ಸಾಮಾಜಿಕ ಅಭಿವೃದ್ಧಿ, ಆರ್ಥಿಕ ಅಭಿವೃದ್ಧಿ, ಮಾನವ ಸಂಪನ್ಮೂಲ ಅಭಿವೃದ್ಧಿ ಕುರಿತಾಗಿ ಬಹಳ ಮೌಲಿಕವಾದ ಕರ್ತವ್ಯಗಳನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹೊಂದಿರುತ್ತಾರೆ.

ಇವರ ಅಧಿಕಾರ ನಿರ್ವಹಣೆಗೆ ಪೂರಕವಾಗಿರುವಂತೆ ವಿವಿಧ ಸ್ಥಾಯಿ ಸಮಿತಿಗಳಿರುವುದು ಕಂಡುಬರುತ್ತದೆ. ಬಹುಮುಖ್ಯವಾದ ಸಮಿತಿಗಳೆಂದರೆ

೧. **'ಉತ್ಪಾದನಾ ಸಮಿತಿ' :** ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳಿಗೆ ಸಂಬಂಧಿಸಿದೆ.

೨. **ಸೌಕರ್ಯ ಸಮಿತಿ :** ಇದು ಸಾರ್ವಜನಿಕ ಆರೋಗ್ಯ, ಶಿಕ್ಷಣ ಲೋಕೋಪಯೋಗಿ ಕೆಲಸಗಳಿಗೆ ಸಂಬಂಧಿಸಿದ ವ್ಯಾಪ್ತಿಯನ್ನು ಹೊಂದಿದೆ.

೩. **ಸಾಮಾಜಿಕ ನ್ಯಾಯಸಮಿತಿ :** ಮಹಿಳೆ ಮತ್ತು ಮಕ್ಕಳ ಕಲ್ಯಾಣದಂತಹ ಮಾನವ ಮುಖಿ ಅಭಿವೃದ್ಧಿಯ ಪರಿಕಲ್ಪನೆಗಳನ್ನು ಹೊಂದಿದೆ. ಪ್ರತಿಯೊಂದು ಸಮಿತಿಯು ಸಂದರ್ಭಾನುಸಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸೇರಿದಂತೆ ೩ ರಿಂದ ೫ ಜನ ಸದಸ್ಯರಿಂದ ಕೂಡಿರುತ್ತದೆ. ಅಧ್ಯಕ್ಷರಾದವರು ಉತ್ಪಾದನಾ ಸಮಿತಿ ಮತ್ತು ಸೌಕರ್ಯಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿ ಆಗಿರುತ್ತಾರೆ. ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಟ ಪಕ್ಷ ಒಬ್ಬ ಮಹಿಳೆಯು ಸೇರಿದಂತೆ ಅನುಸೂಚಿತ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯೆಯು ಇರುವುದು ಕಡ್ಡಾಯ. ಪ್ರತಿಯೊಂದು ಸಮಿತಿಗೆ ನಿಯಮಾನುಸಾರ ಸರ್ಕಾರವು ಅಂಗೀಕರಿಸಿದ ಸಂಘಸಂಸ್ಥೆಗಳ ಸದಸ್ಯರನ್ನು ಸಹ ಸದರಿ ಸಮಿತಿಗಳಿಗೆ ನೇಮಿಸಿಕೊಳ್ಳುವ ಅವಕಾಶಗಳಿವೆ.

ಪ್ರಸ್ತುತ ಸಮಿತಿಗಳು ಅಧಿಕಾರ ವಿಕೇಂದ್ರೀಕರಣ ಹಂತದಲ್ಲಿ ತಳಮಟ್ಟದ ಸಮುದಾಯಗಳವರೆಗೂ ಅಭಿವೃದ್ಧಿಪರ ಫಲಿತಗಳನ್ನು ತಲುಪಿಸುವಲ್ಲಿ, ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡುವಲ್ಲಿ ಅತ್ಯಂತ ಪ್ರಬುದ್ಧ ಸಾಧನಗಳಾಗಿವೆ. ಇಂತಹ ಸಮಿತಿಗಳ ಕುರಿತು ಅಧ್ಯಕ್ಷೆ ಮತ್ತು ಉಪಾಧ್ಯಕ್ಷೆಗಿರುವ ತಿಳುವಳಿಕೆ ಯಾವ ರೀತಿಯದು? ಈ ಸಮಿತಿಗಳನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ದುಡಿಸಿಕೊಳ್ಳುವ ಸಂಗತಿಗಳು ಮಹತ್ವಪೂರ್ಣವಾಗಿವೆ. ಕೆಳಗಿನ ಕೋಷ್ಟಕಗಳ ಮೂಲಕ ಸಮಿತಿಗಳ ಕುರಿತು ಅಧ್ಯಕ್ಷೆಯರಿಗೆ ಇರುವ ತಿಳುವಳಿಕೆಯನ್ನು ಪರಿಶೀಲಿಸಲಾಗಿದೆ.

[illegible]

[illegible]

[illegible]

[illegible]

ಕೋಷ್ಟಕ ೨೭.೨

ಸ್ಥಾಯಿ ಸಮಿತಿ ಕುರಿತು ಅಧ್ಯಕ್ಷೆಯರಿಗಿರುವ ತಿಳುವಳಿಕೆ

		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
ಕ್ರ.ಸಂ	ವಿವರ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಇದೆ	೪	೩೬.೩೬	೫	೫೦
೨.	ಇಲ್ಲ	೭	೬೩.೬೩	೫	೫೦
ಒಟ್ಟು		೧೧	೧೦೦	೧೦	೧೦೦

ಕೋಷ್ಟಕ ೨೭.೩

ಎಷ್ಟು ಸಮಿತಿಗಳಿವೆ? ಎಂಬ ಅರಿವು

		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
ಕ್ರ.ಸಂ.	ವಿವರ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಗೊತ್ತಿದೆ	೪	೩೬.೩೬	೯	೯೦
೨.	ಗೊತ್ತಿಲ್ಲ	೭	೬೩.೬೩	೧	೧೦
ಒಟ್ಟು		೧೧	೧೦೦	೧೦	೧೦೦

ಕೋಷ್ಟಕ ೨೭.೪

ಸಮಿತಿಯಲ್ಲಿರುವ ಸದಸ್ಯರ ಕುರಿತ ಅರಿವು

		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು		ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು	
ಕ್ರ.ಸಂ	ವಿವರ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಅರಿವಿದೆ	೩	೨೭.೨೭	೪	೪೦
೨.	ಅರಿವಿಲ್ಲ	೮	೭೨.೭೨	೬	೬೦
ಒಟ್ಟು		೧೧	೧೦೦	೧೦	೧೦೦

ಮೇಲಿನ ಕೋಷ್ಟಕಗಳು ವಿವಿಧ ಸಮಿತಿಗಳಲ್ಲಿ ಇರುವ ಸದಸ್ಯರು ಮತ್ತು ಅವರ ಕಾರ್ಯವ್ಯಾಪ್ತಿಗಳ ಬಗ್ಗೆ ಅಧ್ಯಕ್ಷರಾದವರಿಗೆ ಇರುವ ತಿಳುವಳಿಕೆಯನ್ನು ಪರಿಚಯಿಸಿಕೊಡುತ್ತವೆ. ಇದರಿಂದ ತಿಳಿಯುವುದೇನೆಂದರೆ ಎರಡೂ ತಾಲೂಕುಗಳು ಸೇರಿದಂತೆ ವಿವಿಧ ಸಮಿತಿಗಳ ಬಗ್ಗೆ ತಿಳಿದಿರುವ ಅಧ್ಯಕ್ಷೆಯರ

[illegible]

ಸಂಖ್ಯೆ ೧೩ ಇದ್ದು ಶೇ.೬೧.೯ ರಷ್ಟಿದೆ. ಸಮಿತಿಗಳ ಬಗ್ಗೆ ತಿಳುವಳಿಕೆ ಇಲ್ಲದಿರುವ ಅಧ್ಯಕ್ಷೆಯರ ಸಂಖ್ಯೆ ೮ ಆಗಿದ್ದು, ಶೇ.೩೮.೦೯ ರಷ್ಟಿದೆ. ಸಮಿತಿಯಲ್ಲಿರುವ ಸದಸ್ಯರ ಕುರಿತು ತಿಳುವಳಿಕೆ ಇರುವ ಅಧ್ಯಕ್ಷೆಯರ ಸಂಖ್ಯೆ ೭ ಇದ್ದು, ಶೇ.೩೩.೩೩ ರಷ್ಟಿದೆ. ತಿಳುವಳಿಕೆ ಇಲ್ಲದಿರುವ ಅಧ್ಯಕ್ಷೆಯರ ಸಂಖ್ಯೆ ೧೪ ಆಗಿದ್ದು, ಶೇ.೬೬.೬೬ ರಷ್ಟಿದೆ. ಒಟ್ಟಾರೆ ತಿಳುವಳಿಕೆ ಪ್ರಮಾಣ ಕಡಿಮೆಯಿರುವುದು ಇದರಿಂದ ವಿಧಿತವಾಗುತ್ತದೆ.

ಗ್ರಾಮಸಭೆ

ಗ್ರಾಮಸಭೆಯು ಪಂಚಾಯತ್‌ರಾಜ್ ವ್ಯವಸ್ಥೆಯ ಜೀವಾಳವಾಗಿದೆ. ಸಾಮಾನ್ಯವಾಗಿ ಗ್ರಾಮಸಭೆಯೂ ವರ್ಷಕ್ಕೆ ೨ ಬಾರಿ ಸಭೆ ಸೇರುತ್ತದೆ. ಆದರೆ ಎರಡು ಗ್ರಾಮಸಭೆಯ ನಡುವಿನ ಅಂತರವು ೬ ತಿಂಗಳಿಗಿಂತ ಹೆಚ್ಚಿಗೆ ಇರಬಾರದು ಎಂಬ ನಿಯಮವಿದೆ. ಗ್ರಾಮಸಭೆಯ ಅಧ್ಯಕ್ಷತೆಯನ್ನು ಪಂಚಾಯತ್ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಇವರಿಬ್ಬರೂ ಇಲ್ಲದಿದ್ದಲ್ಲಿ ಯಾರಾದರೊಬ್ಬ ಪಂಚಾಯತ್ ಸದಸ್ಯರೇ ವಹಿಸತಕ್ಕದ್ದು. ಗ್ರಾಮಪಂಚಾಯಿತಿಯು ೨ ಗ್ರಾಮಸಭೆಗಳನ್ನು ಕರೆಯಲು ತಪ್ಪಿದಲ್ಲಿ ಕಾರ್ಯ ನಿರ್ವಾಹಕ ಅಧಿಕಾರಯು ಗ್ರಾಮಸಭೆಯನ್ನು ಕರೆಯತಕ್ಕದ್ದು. ಗ್ರಾಮಪಂಚಾಯತ್ ಗ್ರಾಮಸಭೆಯ ಶಿಫಾರಸ್ಸುಗಳನ್ನು ಮತ್ತು ಸಲಹೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸತಕ್ಕದ್ದು.[೧೩]

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೮೩ ಮತ್ತು ಕರ್ನಾಟಕ ಪಂಚಾಯಿತ್ ರಾಜ್ ಕಾಯ್ದೆ ೧೯೯೩ ಇವುಗಳ ಪ್ರಕಾರ ಗ್ರಾಮಸಭೆಯ ಕಾರ್ಯಗಳನ್ನು ಕೆಳಗಿನಂತೆ ಗುರುತಿಸಬಹುದು.

೧. ಗ್ರಾಮದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮ

೨. ಗ್ರಾಮಪಂಚಾಯ್ತಿಗಳ ವಾರ್ಷಿಕ ಲೆಕ್ಕಪತ್ರಗಳ ವಿವರಣೆ ಪರಿಶೋಧನೆ ಮತ್ತು ಪರಿಶೀಲನೆ.

೩. ಕೈಗೊಂಡ ಅಭಿವೃಧಿ ಕಾರ್ಯಗಳ ಬಗ್ಗೆ ವರದಿ ಮತ್ತು ಪ್ರಸಕ್ತ ವರ್ಷದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಗಳ ಬಗ್ಗೆ ಯೋಜನೆ ಸಿದ್ಧಪಡಿಸುವುದು.

೪. ಸಂಬಂಧಪಟ್ಟ ಅಭಿವೃದ್ಧಿ ಯೋಜನೆಗಳನ್ನು ಸಫಲವಾಗಿಸಲು ಫಲಾನುಭವಿಗಳನ್ನು ಗುರುತಿಸುವುದು.

೫. ಗ್ರಾಮನೈರ್ಮಲೀಕರಣ.

೬. ಗ್ರಾಮಾಭಿವೃದ್ಧಿಗಾಗಿ ಸಮುದಾಯ ಕಲ್ಯಾಣಕ್ಕಾಗಿ ಸ್ಥಳೀಯ ಸಂಪನ್ಮೂಲಗಳ ಕ್ರೋಡೀಕರಣ.

೭. ಗ್ರಾಮಕ್ಕೆ ಸಂಬಂಧಿಸಿದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಪಂಚಾಯತ್‌ಗೆ ನೆರವಾಗುವುದು.

[illegible]

ಈ ಹಿನ್ನೆಲೆಯಲ್ಲಿ ಗ್ರಾಮಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳ ರಾಜಕೀಯ ಭಾಗವಹಿಸುವಿಕೆ ಮತ್ತು ನಿರ್ಣಯ ಪ್ರಕ್ರಿಯೆಗಳನ್ನು ಗಮನಿಸಿದಾಗ ಕೆಲವೊಂದು ಮಹತ್ವದ ಸಂಗತಿಗಳು ಅರಿವಿಗೆ ಬರುತ್ತವೆ. ಚುನಾಯಿತ ಪ್ರತಿನಿಧಿಗಳು ಗ್ರಾಮಪಂಚಾಯ್ತಿಯ ಸಭೆಗಳಲ್ಲಿ ಹೆಚ್ಚು ಆಸಕ್ತಿ ವಹಿಸಿ ಮಾತನಾಡುವ ವಿಷಯಗಳೆಂದರೆ ಕುಡಿಯುವ ನೀರು, ಶೌಚಾಲಯ, ಆರೋಗ್ಯಕ್ಕೆ ಸಂಬಂಧಪಟ್ಟಂತ ಸಂಗತಿಗಳೇ ಪ್ರಧಾನವಾಗಿರುತ್ತವೆ. ಕಾರಣ ಲಿಂಗಸಂಬಂಧಿ ನೆಲೆಯಲ್ಲಿ ಈ ವಿಷಯಗಳು ಮಹಿಳೆಗೆ ಮೀಸಲು ಎನ್ನುವಂತೆ ಪ್ರತಿಷ್ಠಾಪಿತಗೊಂಡಿವೆ. ರಾಜಕೀಯ ನೆಲೆಗಿಂತ ಕೌಟಂಬಿಕ ನೆಲೆಗೇ ಚುನಾಯಿತ ಮಹಿಳೆಯ ಹೆಚ್ಚಿನ ಆದ್ಯತೆ ಇರುವುದರಿಂದ, ಈ ವಿಷಯಗಳ ಬಿಸಿ ಆಕೆಗೆ ಬೇಗ ತಟ್ಟುತ್ತದೆ. ವಿಶೇಷವಾಗಿ ಕುಡಿಯುವ ನೀರು, ಶೌಚಾಲಯದಂತಹ ಮೂಲಭೂತ ಸೌಕರ್ಯಗಳು ಮಹಿಳೆಯನ್ನು ಬಾದಿಸಿದಂತೆ, ಪುರುಷರನ್ನು ಬಾದಿಸಲಾರವು. ಹೀಗಾಗಿ ಗ್ರಾಮಪಂಚಾಯ್ತಿಯ ಸಭೆಯಲ್ಲಿ ಈ ಕುರಿತಾದ ವಿಷಯಗಳ ಚರ್ಚೆಯಲ್ಲಿ ಚುನಾಯಿತ ಮಹಿಳೆಯು ಭಾಗವಹಿಸುತ್ತಾಳೆ.

ಈ ಸಂಬಂಧಿಸಿದಂತೆ ನಾನು ಹಲವು ಗ್ರಾಮಪಂಚಾಯ್ತಿ ಸಭೆಗಳನ್ನು ವೀಕ್ಷಿಸಿ ಮಹಿಳೆಯ ಭಾಗವಹಿಸುವಿಕೆ ಆದ್ಯತಾ ವಲಯಗಳನ್ನು ಗುರುತಿಸಿಕೊಂಡಿದ್ದೇನೆ. ಉದಾ. ಕುರೇಕುಪ್ಪ ಮರಿಯಮ್ಮನಹಳ್ಳಿ ಗ್ರಾಮಪಂಚಾಯ್ತಿಯ ೧೨ ಮಹಿಳಾ ಸದಸ್ಯೆಯರಲ್ಲಿ ಪ್ರತಿಯೊಬ್ಬರು ಕುಡಿಯುವ ನೀರಿನ ಸೌಲಭ್ಯ ಒದಗಿಸುವಂತೆ ಒಕ್ಕೊರಲಿನಿಂದ ಮಾತನಾಡಿದ್ದು, ಶೌಚಾಲಯ ಸೌಲಭ್ಯ ಕುರಿತಂತೆ ರಾಮಸಾಗರ ಮತ್ತು ಪಾಪಿನಾಯಕನಹಳ್ಳಿಯಂತಹ ಇನ್ನು ಹಲವು ಗ್ರಾಮಪಂಚಾಯ್ತಿಗಳ ಮಹಿಳಾ ಸದಸ್ಯೆಯರು ಸಭೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರು ವುದು ಕಂಡುಬಂದಿತು.

ಆರೋಗ್ಯಕ್ಕೆ ಸಂಬಂಧಿಸಿದಂತೆ ದರೋಜಿ, ಕಲ್ಲಳ್ಳಿ, ದೇವಾಲಪುರ, ಮೆಟ್ರಿ ಮೊದಲಾದ ಗ್ರಾಮಪಂಚಾಯಿತಿಗಳಲ್ಲಿನ ಮಹಿಳಾ ಸದಸ್ಯೆಯರು ಗ್ರಾಮಪಂಚಾಯಿತಿ ಸಭೆಗಳಲ್ಲಿ ಮಾತನಾಡಿದ್ದನ್ನು ಸ್ವತಃ ಕಂಡುಕೊಂಡಿದ್ದೇನೆ.

ಇಂಥಹ ಮೂಲಭೂತ ಸೌಲಭ್ಯಗಳ ಸಮಸ್ಯೆ ಕುರಿತು ಮಹಿಳಾ ಅಧ್ಯಕ್ಷೆ ಮತ್ತು ಉಪಾಧ್ಯಕ್ಷೆಯರ ಭಾಗವಹಿಸುವಿಕೆಯನ್ನು ಗಮನಿಸಿದಾಗ ಅಧ್ಯಕ್ಷೆಯರಾದ ಶ್ರೀಮತಿ ಯು.ಕವಿತಾ(ತಾರಾನಗರ), ಶ್ರೀಮತಿ ದುರ್ಗಾರಾಣಿ(ವಡ್ಡು), ಶ್ರೀಮತಿ ಬಿ.ಈರಮ್ಮ(ಬುಕ್ಕಸಾಗರ), ಶ್ರೀಮತಿ ನಿರ್ಮಲಾ ಉಪಾಧ್ಯಕ್ಷೆ, (ಕುರೇಕುಪ್ಪ) ಇವರು ಸ್ವಲ್ಪಮಟ್ಟದಲ್ಲಿ ಅಧಿಕಾರಯುತವಾಗಿ ಮಾತನಾಡಿದ್ದು ಗಮನಕ್ಕೆ ಬಂದಿತು. ಬಹಳಷ್ಟು ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರು ತಮ್ಮ ಕ್ಷೇತ್ರದ ಸಮಸ್ಯೆಗಳ, ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸಲು ಹಿಂದೇಟು ಹಾಕುತ್ತಾರೆ. ಒಂದು ವೇಳೆ ಚರ್ಚೆಯಲ್ಲಿ ಭಾಗವಹಿಸಲು ಪ್ರಯತ್ನಿಸಬೇಕೆನ್ನುವಷ್ಟರಲ್ಲಿ ಕೆಲವೊಂದು ಹಿತಾಸಕ್ತಿಗಳು ಮಹಿಳೆಯರನ್ನು ನಿಯಂತ್ರಿಸುವ ಸಂಗತಿಗಳು ಕಂಡುಬಂದವು.

ಈ ಮಧ್ಯೆಯೂ ತಮ್ಮ ಗ್ರಾಮಗಳ ಅಭಿವೃದ್ಧಿಯ ಬಗ್ಗೆ ವಿಶೇಷ ಕಾಳಜಿಯುಳ್ಳ, ಉತ್ಸಾಹಭರಿತ ಅಧ್ಯಕ್ಷೆಯರು ಎರಡು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಇರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿತು. ಈ ವಿವರವನ್ನು ಕೆಳಗಿನ ಕೋಷ್ಟಕದ ಮೂಲಕ ಗಮನಿಸಬಹುದಾಗಿದೆ.

ಕೋಷ್ಟಕ ೨೭.೫

ಗ್ರಾಮಾಭಿವೃದ್ಧಿಯ ಬಗ್ಗೆ ಒಲವಿರುವ ಅಧ್ಯಕ್ಷೆಯರು

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಗ್ರಾಮಾಭಿವೃದ್ಧಿ	೯	೮.೧೮	೫	೫೦
೨.	ಮಹಿಳೆಯರ ಅಭಿವೃದ್ಧಿ	೧	೯	೫	೫೦
೩.	ಸಮಾಜಸೇವೆ	೧	೯	-	-
೪.	ಸ್ವಂತ ವ್ಯಕ್ತಿತ್ವದ ಬೆಳವಣಿಗೆ	-	-	-	-
	ಒಟ್ಟು	೧೧	೧೦೦	೧೦	೧೦೦

ಇನ್ನೂ ಒಂದು ಹೆಜ್ಜೆ ಮುಂದುವರಿದು ನೋಡಿದಾಗ ಅಧ್ಯಕ್ಷೆಯಾದವರು ಎರಡು ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳುವ ಅವಕಾಶಗಳಿರುವುದು ಕಂಡುಬರುತ್ತದೆ. ಅವುಗಳೆಂದರೆ ಸಾಮಾಜಿಕ ನಿರ್ಣಯ, ರಾಜಕೀಯ ನಿರ್ಣಯ, ಆರ್ಥಿಕ ನಿರ್ಣಯ, ಧಾರ್ಮಿಕ ನಿರ್ಣಯ. ಈ ರೀತಿಯ ನಿರ್ಣಯ ಕೈಗೊಳ್ಳುವಿಕೆಯ ಕುರಿತು ಕ್ಷೇತ್ರಕಾರ್ಯದಲ್ಲಿ ಮಾಹಿತಿಗಳು ಲಭ್ಯವಾಗಿಲ್ಲ.

ಒಟ್ಟಾರೆಯಾಗಿ ಈ ಹಿನ್ನೆಲೆಯಲ್ಲಿ ನಾನು ಆಯ್ದುಕೊಂಡ ಗ್ರಾಮಪಂಚಾಯ್ತಿಗಳ ಕಾರ್ಯಕ್ಷಮತೆ ಯನ್ನು ಅವಲೋಕಿಸಿದಾಗ ಸ್ಥಳೀಯ ಅವಶ್ಯಕತೆಗಳಿಗೆ ಬದಲಾಗಿ ಜಿಲ್ಲಾಪರಿಷತ್ ಮತ್ತು ಪಂಚಾಯತ್ ಸಮಿತಿಯ ನಿರ್ದೇಶನದ ಮೇರೆಗೆ, ಮೇಲಿನ ಸ್ತರದ ಆಡಳಿತಾಂಗದ ಒತ್ತಡದ ಮೇರೆಗೆ ಸಭೆಯನ್ನು ಕರೆಯುತ್ತಿದ್ದುದು ಕಂಡುಬರುತ್ತದೆ. ಹೀಗಾಗಿ ಸ್ಥಳೀಯ ಸಮಸ್ಯೆಗಳಿಗಿಂತ ಚುನಾಯಿತ ಸದಸ್ಯೆಯರಲ್ಲಿ ಮಂಜೂರಾದ ಅನುದಾನವನ್ನು ವಿಂಗಡಿಸಿ ಕೊಳ್ಳುವುದರಲ್ಲೇ ಹೆಚ್ಚು ಆಸಕ್ತಿ ಇರುವುದು ಕಂಡುಬರುತ್ತದೆ. ಸಭೆಗಳು ಬಹಳ ಪ್ರಧಾನವಾಗಿ ಪುರುಷಶಾಹಿ ನೆಲೆಯಲ್ಲಿ ರೂಪುಗೊಳ್ಳುವುದು ಮತ್ತು ನಡೆಯುವುದು ಕಂಡುಬರುತ್ತದೆ. ಇನ್ನೂ ಕುತೂಹಲದ ಸಂಗತಿಯೆಂದರೆ ಮಹಿಳಾ ಅಧ್ಯಕ್ಷೆ ಮತ್ತು ಸದಸ್ಯೆಯರನ್ನು ಸಹಿ ಮಾಡಲು ಚಹ, ತಿಂಡಿ ಮತ್ತು ಸಭಾಭತ್ಯೆಗೆ ಮಾತ್ರ ಪರಿಗಣಿಸುವುದು ಕಂಡುಬರುತ್ತದೆ. ಕೆಲವೊಂದು ಸಲ ಸಭೆಗೆ ಬರಲು ಸರಿಯಾದ ಮಾಹಿತಿಯೂ ಇರುವುದಿಲ್ಲ. ಇದ್ದರೂ ಸದಸ್ಯೆಯರಿಗೆ ಸಮಯಾವಕಾಶಗಳಿರುವುದಿಲ್ಲ. ಎಲ್ಲವು ಇದ್ದರೂ ಸಭೆಗೆ ಬರಲಾರದ ಸದಸ್ಯೆಯರಿಗೆ ಅಧ್ಯಕ್ಷೆ ಯಾವ

ರೀತಿಯ ಶಾಸನಬದ್ಧ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದು ಕಂಡುಬರುತ್ತದೆ. ಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವು ಬೆರಳೆಣಿಕೆಯದ್ದಾಗಿರುತ್ತದೆ. ೧೯೮೭ರಲ್ಲಿ ಪ್ರಥಮ ಗ್ರಾಮಸಭೆ ಕೆಲವು ಮಂಡಲಗಳಲ್ಲಿ ನಡೆಯಿತು. ಊರವರಿಗೆ ಇದೇನೆಂದು ತಿಳಿಯುವ ಕುತೂಹಲ ಜೊತೆಗೆ ತಮ್ಮ ಅಗತ್ಯಗಳನ್ನು ಗ್ರಾಮಸಭೆಯಲ್ಲಿ ಹೇಳಿದರೆ ಪರಿಹಾರ ಸಿಗುತ್ತದೆ ಎಂಬ ಭರವಸೆ ಕೂಡ ಇತ್ತು. ಹಾಗಾಗಿ ಅಧಿಕ ಸಂಖ್ಯೆಯಲ್ಲಿ ಜನ ಸೇರಿದ್ದರು ಎನ್ನುತ್ತಾರೆ ಜೊಸ್ ಸಿ.ರಾಫೆಲ್. ಆದರೆ ಬರುಬರುತ್ತಾ ಗ್ರಾಮಸಭೆಯಲ್ಲಿ ಹಾಜರಾಗುವ ಮೂಲಕ ತಮ್ಮ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂದು ಅರಿವಾಗುತ್ತಲೇ ಹಾಜರಿ ಕೂಡ ಕಡಿಮೆಯಾಗುತ್ತಾ ಬಂತು ಎಂದು ರಾಫೆಲ್ ಅಭಿಪ್ರಾಯ ಪಡುತ್ತಾರೆ. ಕೆ.ಎಸ್.ನಾರಾಯಣ ಅವರು ಸಹ ಇದೇ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ.[೧೪] ಈ ಅಭಿಪ್ರಾಯ ನನ್ನ ವ್ಯಾಪ್ತಿಯ ಗ್ರಾಮಪಂಚಾಯಿತಿಗಳಿಗೂ ಅನ್ವಯವಾಗುತ್ತದೆ.

ಕ್ಷೇತ್ರಕಾರ್ಯದಲ್ಲಿ ಕೆಲವೊಂದು ಗ್ರಾಮಪಂಚಾಯ್ತಿ ಸಭೆಗಳಿಗೆ ಹಾಜರಾದಾಗ ಇಂತಹ ಹಲವಾರು ಸಂಗತಿಗಳು ಗೋಚರಿಸಿದವು. ಕರೆದಂತಹ ಸಭೆಗಳಲ್ಲಿ ವೈಯಕ್ತಿಕ ವರ್ಚಸ್ಸು, ಸಂಪರ್ಕ ಪಕ್ಷರಾಜಕಾರಣ ಇಂತಹ ಸಂಗತಿಗಳೇ ಮುಖ್ಯವಾಗಿರುತ್ತಿದ್ದವು. ಇಂತಹ ಸಂದರ್ಭದಲ್ಲಿ ಗ್ರಾಮಸಭೆಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿಪರ ಚಟುವಟಿಕೆಗಳು ಚರ್ಚೆಗೆ ಬಾರದೆ ಜಗಳದಲ್ಲಿಯೇ ಮುಗಿದುಹೋದ, ಸದಸ್ಯರನ್ನು ಸಮಾಧಾನ ಪಡಿಸುವಲ್ಲಿಯೇ ಕಾಲಕಳೆದ ಉದಾಹರಣೆಗಳಿವೆ. ಹೊಸಪೇಟೆ ಮತ್ತು ಸಂಡೂರು ತಾಲೂಕುಗಳಲ್ಲಿ ಮಾತ್ರವಲ್ಲ, ಇತರೆ ತಾಲೂಕುಗಳಲ್ಲಿಯೂ ಇಂತಹ ಪರಿಸ್ಥಿತಿಗಳಿವೆ. ಇತ್ತೀಚೆಗೆ ಅಗಳಕೇರ(ಕೊಪ್ಪಳ ಜಿಲ್ಲೆ) ಗ್ರಾಮಪಂಚಾಯಿತಿಯಲ್ಲಿ ಸರ್ಕಾರಿ ನಿವೇಶನದಲ್ಲಿ ವಸತಿ ಸಮುಚ್ಚಯಗಳ ನಿರ್ಮಾಣದಲ್ಲಿ ನಡೆದ ಅವ್ಯವಹಾರಗಳ ಕುರಿತು ಚರ್ಚಿಸಲು ಸಭೆ ಕರೆಯಲಾಗಿತ್ತು. ಈ ಸಂದರ್ಭದಲ್ಲಿ ಚರ್ಚೆಗಳಾಗದೇ ಪರ-ವಿರೋಧ ವಾದಗಳು ನಡೆದು ಕೈಮಿಲಾಯಿಸುವ ಮಟ್ಟಕ್ಕೂ ಹೋಗಿ ಪೋಲಿಸರ ಮಧ್ಯಪ್ರವೇಶದಿಂದ ಮುಕ್ತಾಯವಾಯಿತು.[೧೫] ಕೆಲವೊಂದು ಕಡೆ ಅಧ್ಯಕ್ಷೆಯರು ಅಧಿಕಾರಿಗಳ ಒತ್ತಾಯದ ಮೇರೆಗೆ ಸಭೆ ಕರೆದು ಜನರೊಂದಿಗೆ ಚರ್ಚೆ ಮಾಡುವುದನ್ನು ತಪ್ಪಿಸಲು ತಾವೇ ಗೈರುಹಾಜರಾದ ಪ್ರಸಂಗಗಳು ಇವೆ. ಇನ್ನು ಕೆಲವು ಕಡೆ ಸರಿಯಾದ ಅಭಿವೃದ್ಧಿ ಕಾರ್ಯಗಳು ನಡೆಯದಿದ್ದಾಗ ಜನರಿಗೆ ಹೆದರಿ ಸರ್ಕಾರಿ ಅಧಿಕಾರಿಗಳೇ ಸಭೆಗೆ ಗೈರು ಹಾಜರಾಗಿ ಸಭೆ ಮುಂದೂಡಿದ ಉದಾಹರಣೆಗಳು ಇವೆ. ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕೆಲವು ಪಂಚಾಯಿತಿಗಳಲ್ಲಿ ಅಧ್ಯಕ್ಷರು ಮತ್ತು ಅಧಿಕಾರಿಗಳು ಗ್ರಾಮಸಭೆ ಸೇರಿಸಲು ಉತ್ಸಾಹ ತೋರಿಸುವುದಿಲ್ಲ. ಏಕೆಂದರೆ ಜನರಿಗೆ ನೀಡಿದ ಭರವಸೆಗಳನ್ನು ಪೂರೈಸದೆ ಅವರನ್ನು ಎದುರಿಸುವುದು ಹೇಗೆ ಎಂಬ ಭಯ ಅವರಿಗಿತ್ತೆಂದು ಕೆ.ಎಸ್.ನಾರಾಯಣ ಅಭಿಪ್ರಾಯಪಡುತ್ತಾರೆ.[೧೬] ಇತ್ತೀಚೆಗೆ ಕೂಡ್ಲಿಗಿ ತಾಲೂಕಿನ

ಸೂಲದಳ್ಳಿ ಗ್ರಾಮಪಂಚಾಯಿತಿಯಲ್ಲಿ ಇಂತಹ ಘಟನೆ ನಡೆದ ಬಗ್ಗೆ ವರದಿಯಾಗಿದೆ. ಸೋರುವ ಅಂಗನವಾಡಿ ಕಟ್ಟಡ ಅಂಚೆ ಕಚೇರಿಯ ಸೌಲಭ್ಯವಿಲ್ಲದಿರುವುದು, ಆಹಾರ ಸಾಮಾಗ್ರಿ, ದಾಖಲೆಗಳ ಅಸ್ತವ್ಯಸ್ಥತೆ, ಇದರಿಂದ ಉಗ್ರರಾದ ಜನತೆಯ ಪ್ರತಿರೋಧವನ್ನು ತಪ್ಪಿಸಿಕೊಳ್ಳಲು ಅಧಿಕಾರಿಗಳು ಸಭೆಗೆ ಗೈರು ಹಾಜರಾದರು. ಇದರಿಂದ ಸಭೆ ಮುಂದೆ ಹೋಯಿತು.[೧೨] ಬುಕ್ಕಸಾಗರ ಗ್ರಾಮಪಂಚಾಯಿತಿಯ ಗ್ರಾಮಸಭೆಯೊಂದಕ್ಕೆ ಹಾಜರಾಗಿದ್ದಾಗ ಈ ಸಂಗತಿಗಳು ತಿಳಿದುಬಂದವು. ಏನೆಂದರೆ, ಅಧ್ಯಕ್ಷೆ ಮತ್ತು ಇತರ ಸದಸ್ಯೆಯರು ಹಾಗೂ ಕಾರ್ಯದರ್ಶಿ ಸೇರಿ ಫಲಾನುಭವಿಗಳ ಪಟ್ಟಿಯನ್ನು ಆಯ್ಕೆ ಮಾಡಿದ್ದರು. ಆದರೆ ಅಲ್ಲಿಗೆ ಆಗಮಿಸಿದ ಸರ್ಕಾರಿ ಅಧಿಕಾರಿಗಳು ತಾವೇ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸಿ ತಂದಿದ್ದರು. ಇದರಿಂದ ಫಲಾನುಭವಿಗಳ ಆಯ್ಕೆಯನ್ನು ಮಾಡುವಲ್ಲಿ ಗದ್ದಲ, ಗಲಾಟೆ ಆರಂಭವಾಗಿ ಯಾವ ತೀರ್ಮಾನಕ್ಕೂ ಬರದೆ ಗ್ರಾಮಸಭೆ ಮುಕ್ತಾಯವಾಯಿತು. ಇಂತಹ ಸಂದರ್ಭದಲ್ಲಿ ಗ್ರಾಮ ಸಭೆಯ ನಡಾವಳಿಗಳು ಸರಿಯಾಗಿ ದಾಖಲಾಗದೆ ಮೇಲಿನ ಸ್ತರಕ್ಕೆ ತಲುಪುವಲ್ಲಿ ವಿಫಲವಾಗಿವೆ. ಇದರಿಂದ ಗೋಚರವಾಗುವುದೇನೆಂದರೆ ಗ್ರಾಮದ ಯೋಜನೆಗೆ ಸಂಬಂಧಿಸಿದಂತೆ ಗ್ರಾಮಸಭೆಗೆ ಯಾವುದೇ ಹೊಣೆಗಾರಿಕೆಯನ್ನು ನೀಡಿಲ್ಲದಿರುವುದು. ಗ್ರಾಮಸಭೆಯ ಬಗ್ಗೆ ಜನರಲ್ಲಿ ಪ್ರಾಥಮಿಕ ಪರಿಜ್ಞಾನದ ಕೊರತೆ, ಗ್ರಾಮರಾಜಕೀಯದ ಸ್ವರೂಪ, ಸದಸ್ಯರ ಉದಾಸೀನತೆ ಮುಂತಾದ ಸಂಗತಿಗಳು ಗ್ರಾಮಸಭೆಯ ವಿಫಲತೆ ಮತ್ತು ಸಫಲತೆಯನ್ನು ನಿರ್ಧರಿಸುವ ಅಂಶಗಳಾಗಿವೆ.

ವಿಶೇಷ ಸಭೆಗಳು

ಇದೂ ಅಲ್ಲದೆ ಗ್ರಾಮಪಂಚಾಯ್ತಿ ಅಧ್ಯಕ್ಷೆಯು ಗ್ರಾಮಪಂಚಾಯ್ತಿಯ ಅಧಿಕಾರಿಗಳ ಮತ್ತು ನೌಕರರ ಕಾರ್ಯಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣಗಳ ಅಧಿಕಾರವನ್ನು ಹೊಂದಿರುತ್ತಾರೆ. ಅಧ್ಯಕ್ಷೆಯು ಸಮಿತಿ ಅಥವಾ ಗ್ರಾಮಪಂಚಾಯ್ತಿಯ ಮಂಜುರಾತಿಯ ಅಗತ್ಯವಿರುವಂತಹ, ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವಿರುವ ತುರ್ತು ಕಾಮಗಾರಿಗಳನ್ನು ಮಂಜೂರು ಮಾಡಲು ೨೪ ಗಂಟೆಗಳೊಳಗೆ ನೋಟೀಸ್ ಕೊಟ್ಟು ಸಭೆಯನ್ನು ಕರೆಯುವ ಅಧಿಕಾರ ಹೊಂದಿರುತ್ತಾರೆ.

ಅಧ್ಯಕ್ಷರ ಗೈರು ಹಾಜರಿಯಲ್ಲಿ ಅಥವಾ ಅವರು ಅಸಮರ್ಥರಾದಾಗ ಗ್ರಾಮಪಂಚಾಯ್ತಿ ಉಪಾಧ್ಯಕ್ಷರು ಅಧ್ಯಕ್ಷರ-ಅಧಿಕಾರಗಳನ್ನು ಚಲಾಯಿಸಬಹುದಾಗಿದೆ. ವಾಸ್ತವವಾಗಿ ನನ್ನ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಅಧ್ಯಕ್ಷರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ಅಧಿಕಾರ ಚಲಾಯಿಸಿದ ಉದಾಹರಣೆಗಳು ಕಂಡುಬಂದಿಲ್ಲ. ಒಂದು ವೇಳೇ ಅಂತಹ ಅವಕಾಶವಿದ್ದರೂ ಬಳಸಿಕೊಳ್ಳಲು ಹಿಂಜರಿದ ಬಗ್ಗೆ ತಿಳಿದುಬರುತ್ತದೆ.

[illegible]

[illegible]

[illegible]

೭೩ನೇಯ ತಿದ್ದುಪಡಿಯಿಂದಾಗಿ ಸಂವಿಧಾನದ ೧೧ನೇಯ ಅನುಚ್ಛೇದದ ೬೩ ರಿಂದ ೧೧೦ರವರೆಗಿನ ಕಲಂನಲ್ಲಿ ಗ್ರಾಮಪಂಚಾಯ್ತಿಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಲಾಗಿದೆ. ಇಂತಹ ಕಾರ್ಯಯೋಜನೆಯಗಳನ್ನು ಚರ್ಚಿಸಿ ಅನುಷ್ಠಾನಗೊಳಿಸಲು ಗ್ರಾಮಪಂಚಾಯ್ತಿ ಸಭೆಗಳನ್ನು ಕರೆಯಲಾಗುತ್ತದೆ. ಹೀಗೆ ಅಧ್ಯಕ್ಷೆಯಾದವರು ತಾನು ಕರೆದ ಪ್ರಥಮ ಸಭೆಯಲ್ಲಿ ಚರ್ಚಿಸಿದ ಮತ್ತು ಕಂಡುಕೊಂಡ ಉತ್ತರಗಳನ್ನು ಅನುಭವಿಸಿದ ಮುಜುಗರ ಆತಂಕಗಳನ್ನು ಮಾದರಿಗಾಗಿ ಕೆಳಗಿನ ಕೋಷ್ಟಕದಲ್ಲಿ ಗಮನಿಸಬಹುದು.

ಕೋಷ್ಟಕ ೨೭.೬

ಪ್ರಥಮ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತ ಅರಿವು

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಗೊತ್ತಿದೆ	೩	೨೭.೨೭	೪	೪೦
೨.	ಗೊತ್ತಿಲ್ಲ	೮	೭೨.೭೨	೬	೬೦
ಒಟ್ಟು		೧೧	೧೦೦	೧೦	೧೦೦

ಸಭೆಯಲ್ಲಿ ಚರ್ಚಿಸಿದ ಮುಖ್ಯ ವಿಷಯಗಳೆಂದರೆ ಇಂದಿರ ಆವಾಸ್ ಮನೆಗಳ ವಿತರಣೆ, ನೀರಿನ ಸಮಸ್ಯೆ, ಸರ್ಕಾರಿ ಸಾಲದ ಸೌಲಭ್ಯ, ಜೆ.ಆರ್.ವೈ ಆಕ್ಷನ್ ಪ್ಲ್ಯಾನ್ ಬಗ್ಗೆ ಚರ್ಚೆ, ಎತ್ತು, ಕುರಿ ಸಾಲದ ಬಗ್ಗೆ, ಗ್ರಾಮ ನೈರ್ಮಲೀಕರಣದ ಬಗ್ಗೆ, ಗ್ರಾಮಪಂಚಾಯ್ತಿಯ ಸಭಾಭವನ ನಿರ್ಮಾಣ, ಮುಂತಾದ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಸಿದ ಬಗ್ಗೆ 'ಗೊತ್ತಿದ್ದ'' ಮಹಿಳಾ ಅಧ್ಯಕ್ಷೆಯರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಮೊದಮೊದಲು ಈ ಬಗ್ಗೆ ಸಂಕೋಚ, ಕೀಳರಿಮೆಯಿದ್ದರೂ ನಂತರದಲ್ಲಿ ಇಂಥ ಎಲ್ಲ ಸಂಗತಿಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದ ಬಗ್ಗೆ ವಿವರ ನೀಡುತ್ತಾರೆ.

ಹೀಗೆ ಗ್ರಾಮಪಂಚಾಯತ್ ಸಂಸ್ಥೆ ಮತ್ತು ಅವುಗಳ ಪರಿಕರಗಳ ಕುರಿತು ಅಧ್ಯಕ್ಷೆ ಮತ್ತು ಉಪಾಧ್ಯಕ್ಷೆಯರ ಅರಿವು ಮತ್ತು ಭಾಗವಹಿಸುವಿಕೆಯನ್ನು ತಿಳಿಯಲು ಕೆಲವೊಂದು ಪ್ರಾಯೋಗಿಕ ಪ್ರಶ್ನೆಗಳನ್ನು ಕೇಳಲಾಯಿತು. ಗ್ರಾಮಸಭೆ, ಫಲಾನುಭವಿಗಳ ಆಯ್ಕೆ, ಆಯವ್ಯಯ ಪಟ್ಟಿ, ವಾರ್ಷಿಕ ಯೋಜನೆ, ಕೃಷಿ ಅಭಿವೃದ್ಧಿ, ಕೃಷಿಯೇತರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಇತ್ಯಾದಿ ಕಾರ್ಯಕ್ರಮಗಳ ಅರಿವು ಇವುಗಳನ್ನು ಕಾರ್ಯಗತಗೋಳಿಸುವಲ್ಲಿ ನೀವು ಎಷ್ಟರ ಮಟ್ಟಿಗೆ ಭಾಗವಹಿಸಿದ್ದೀರಿ

ಮಹಿಳೆ ಮತ್ತು ಮಕ್ಕಳ ಆರೋಗ್ಯ ಹಾಗೂ ಸ್ವಾವಲಂಬಿ ಬದುಕಿಗಾಗಿ ನೀವು ಹಾಕಿಕೊಂಡಿರುವ ಕಾರ್ಯಯೋಜನೆಗಳೇನು? ಅನುಷ್ಠಾನಗೊಳಿಸಲು ಆಯ್ಕೆ ಮಾಡಿಕೊಂಡ ಮಾರ್ಗಗಳು ಯಾವುವು? ಇತ್ಯಾದಿ.

ಎರಡು ತಾಲೂಕು ಗ್ರಾಮಪಂಚಾಯ್ತಿಗಳಿಂದ ಆಯ್ಕೆಯಾದ ೨೧ ಅಧ್ಯಕ್ಷೆಯರು ಮತ್ತು ಉಪಾಧ್ಯಕ್ಷೆಯರಲ್ಲಿ ಈ ತರದ ಅರಿವಿರುವವರ ಸಂಖ್ಯೆ ೬ ಇದ್ದು, ಶೇ.೨೮.೫೭ ರಷ್ಟು ಮಾತ್ರ. ಇನ್ನುಳಿದ ೧೫ ಅಧ್ಯಕ್ಷೆಯರಲ್ಲಿ ಅಂದರೆ ಶೇ.೭೧.೪೫ ರಷ್ಟು ಅಧ್ಯಕ್ಷೆಯರಲ್ಲಿ ಆ ಬಗ್ಗೆ ಖಚಿತವಾದ ಅರಿವಿಲ್ಲದಿರುವುದು ಕಂಡುಬರುತ್ತದೆ. ಇದರಲ್ಲಿ ಕೆಲವರಿಗಂತೂ ಫಲಾನುಭವಿಗಳ ಆಯ್ಕೆ ಯಾಕೆ ಹೇಗೆ ಎಲ್ಲಿ ನಡೆಯುತ್ತದೆ ಎಂಬುದರ ಕುರಿತು ಸರಿಯಾದ ತಿಳುವಳಿಕೆ ಇಲ್ಲ. ಆದರೆ ಇವರಿಗೆ ಅವರ ಫಲಿತಗಳು ದೊರತಿದ್ದು ಮಾತ್ರ ಕಾಣುತ್ತದೆ. ಅಂದರೆ ಆಶ್ರಯ ಮನೆ, ಭಾಗ್ಯಜ್ಯೋತಿ ಇಂತಹ ಸರ್ಕಾರಿ ಯೋಜನೆಗಳು ಅಧ್ಯಕ್ಷಳಾದ ಮಹಿಳೆಗೆ ಮತ್ತು ಸಂಬಂಧಿಕರಿಗೆ ತಲುಪಿರುತ್ತವೆ. ಆದರೆ ಅಧ್ಯಕ್ಷೆ, ಕಾರ್ಯದರ್ಶಿ ಕೆಲವು ಪುರುಷ ಸದಸ್ಯರು, ಪ್ರಮುಖ ವರ್ಗಗಳ ಲಾಬಿಯ ಮೂಗಿನ ನೇರಕ್ಕೆ ಫಲಾನುಭವಿಗಳ ಆಯ್ಕೆ ನಿರ್ಧಾರಿತವಾಗುತ್ತದೆ. ಇಲ್ಲಿ ಅಧ್ಯಕ್ಷೆ ಉತ್ಸವ ಮೂರ್ತಿಯಾಗಿರುವುದು ಗಮನಾರ್ಹ. ಹೆಚ್ಚೆಂದರೆ ತನ್ನವರನೆಲ್ಲ ಫಲಾನುಭವಿಯಾಗಿ ಆರಿಸಬಹುದು. ಇಂತಹ ಸಂದರ್ಭದಲ್ಲಿ ಅಸಮಾನತೆ ಪ್ರಧಾನವಾಗಿರುವ ಸಾಂಪ್ರದಾಯಿಕ ಬದುಕಲ್ಲಿ ಅಧ್ಯಕ್ಷೆಯು ಯಾವ ರೀತಿಯಾದ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯ? ಇಂತಹ ಮಹಿಳೆಯ ಬದುಕಿನ ಬಹುಭಾಗ ತನ್ನ ಮೂಲಭೂತ ಅವಶ್ಯಕತೆಗಳನ್ನು ರೂಢಿಸಿಕೊಳ್ಳುವುದಕ್ಕೆ ವ್ಯಯವಾಗುತ್ತದೆ. ತನ್ನನ್ನು ಉಪೇಕ್ಷೆಗೆ ಈಡು ಮಾಡಿರುವ ಸಂಗತಿಗಳ ಕುರಿತು ಅರಿವೇ ಇರುವುದಿಲ್ಲ. ಕಾನೂನು ಮಹಿಳೆಗೆ ಪ್ರಾತಿನಿಧ್ಯ ಒದಗಿಸಿದ್ದರೂ ಸ್ಥಳೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರ ಅವರ ಪ್ರಾತಿನಿಧ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ಯಾವ ರೀತಿ ವರ್ತಿಸುತ್ತದೆ ಎಂಬುದನ್ನು ಮೇಲಿನ ಸಂಗತಿಗಳು ಸ್ಪಷ್ಟಪಡಿಸುತ್ತವೆ. ಹೀಗಾಗಿ ಅಧಿಕಾರ ಮತ್ತ ನಿರ್ಣಯ ಪ್ರಕ್ರಿಯೆಯಲ್ಲಿ ಮಹಿಳಾ ಅಧ್ಯಕ್ಷರ ಪಾತ್ರ ಕ್ಷೀಣವಾಗಿ ಕಾಣುತ್ತದೆ ಎಂಬುದನ್ನು ಮನಗಾಣಬಹುದಾಗಿದೆ.

ನಿರ್ಣಯ ಪ್ರಕ್ರಿಯೆಯಲ್ಲಿ ಮಹಿಳಾ ಅಧ್ಯಕ್ಷೆಯರ ಭಾಗವಹಿಸುವಿಕೆಯ ಮಟ್ಟವನ್ನು ಕೆಳಗಿನ ಸಂಗತಿಗಳ ಹಿನ್ನೆಲೆಯಲ್ಲಿ ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಬಹುದು. ಸಾಕ್ಷರತೆ, ಸಮೂಹ ಮಾಧ್ಯಮಗಳು, ಆಡಳಿತದಲ್ಲಿ ಪುರುಷನ ನೆರವು, ಕುಟುಂಬದ ರಾಜಕೀಯ ಹಿನ್ನೆಲೆ ಇತ್ಯಾದಿಗಳು. ಇಲ್ಲಿ ಬಹುಮುಖ್ಯವಾದ ಸಂಗತಿಯೆಂದರೆ ಅಧ್ಯಕ್ಷೆಯರಿಗೆ ಸದಸ್ಯೆಯರಿಗಿಂತ ಭಿನ್ನವಾದ ಸ್ಥಾನಮಾನಗಳು ಜವಾಬ್ದಾರಿಗಳು ಇರುವುದರಿಂದ ಅಧ್ಯಕ್ಷೆಯರ ತಿಳುವಳಿಕೆಯ ಮಟ್ಟವನ್ನು ವಿಶೇಷವಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ.

ಕೋಷ್ಟಕ ೨೭.೭

ಸಾಕ್ಷರತೆಯ ಪ್ರಮಾಣ

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಪ್ರಾಥಮಿಕ(೧-೪)	೧	೯	೨	೨೦
೨.	ಮಾಧ್ಯಮಿಕ(೫-೭)	೧	೯	೩	೩೦
೩.	ಪ್ರೌಢ(೮-೧೦)	೧	೯	೪	೪೦
೪.	ಅನಕ್ಷರಸ್ಥೆಯರು	೮	೭೨	೧	೧೦
	ಒಟ್ಟು	೧೧	೧೦೦	೧೦	೧೦೦

ಮೇಲಿನ ಕೋಷ್ಟಕ ಗಮನಿಸಿದಾಗ ೨ ತಾಲೂಕುಗಳಲ್ಲಿನ ಸಾಕ್ಷರತೆಯ ಪ್ರಮಾಣದ ಕನಿಷ್ಠ ಮಟ್ಟ ಗ್ರಹಿಕೆಗೆ ಬರುತ್ತದೆ. ಹೊಸಪೇಟೆ ತಾಲೂಕಿನಲ್ಲಿರುವ ೧೧ ಅಧ್ಯಕ್ಷೆಯರಲ್ಲಿ ಮೂವರು ಅಂದರೆ ಶೇ.೨.೨೭ ರಷ್ಟು ಮಾತ್ರ ಸಾಕ್ಷರರಾಗಿದ್ದಾರೆ. ಸಂಡೂರು ತಾಲೂಕಿನಲ್ಲಿ ೧೦ ಅಧ್ಯಕ್ಷೆಯರಲ್ಲಿ ೯ ಅಧ್ಯಕ್ಷೆಯರು ಅಂದರೆ ಶೇ.೯೦ ರಷ್ಟು ಪ್ರಮಾಣ ಸಾಕ್ಷರರಾಗಿರುವುದು ಕಂಡುಬರುತ್ತದೆ. ಹಾಗೆಯೇ ಸಮೂಹ ಮಾಧ್ಯಮಗಳ ಸಂಪರ್ಕವನ್ನು ಗಮನಿಸಿದಾಗ ಮಹಿಳೆಯ ಭಾಗವಹಿಸುವಿಕೆ ಕುರಿತಾದ ಇನ್ನಷ್ಟು ವಿವರಗಳು ನಮಗೆ ದಕ್ಕಬಹುದು.

ಕೋಷ್ಟಕ ೨೭.೮

ಸಮೂಹ ಮಾಧ್ಯಮಗಳ ಪ್ರಭಾವ

ಕ್ರ.ಸಂ	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ವೃತ್ತಪತ್ರಿಕೆ	-	-	೧	೧೦
೨.	ರೇಡಿಯೋ	-	-	೨	೨೦
೩.	ದೂರದರ್ಶನದಲ್ಲಿ ವಾರ್ತೆ	-	-	೪	೪೦
೪.	ದೂರದರ್ಶನದಲ್ಲಿ ಮನರಂಜನೆ	೪	೩೬.೩೬	೨	೨೦
೫.	ಯಾವುದೂ ಇಲ್ಲ	೭	೬೩.೬೩	೧	೧೦
	ಒಟ್ಟು	೧೧	೧೦೦	೧೦	೧೦೦

ಸಮೂಹ ಮಾಧ್ಯಮಗಳ ಸಂಪರ್ಕ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಿಂತ ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚು ಕಂಡುಬರುತ್ತದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ೪ ಜನ ಅಧ್ಯಕ್ಷೆಯರು ಅಂದರೆ ಶೇ.೩೬.೩೬ ರಷ್ಟು ಮನರಂಜನೆಗಾಗಿಯೇ ಮಾಧ್ಯಮದ ಸಂಪರ್ಕ ಹೊಂದಿರುವುದು ಕಂಡುಬಂದಿದೆ. ಸಂಡೂರು ತಾಲೂಕು ಗ್ರಾಮಪಂಚಾಯ್ತಿಯ ಒಟ್ಟು ೯ ಜನ ಅಧ್ಯಕ್ಷೆಯರು ಅಂದರೆ ಶೇ.೯೦ ರಷ್ಟು ವಿವಿಧ ತಿಳುವಳಿಕೆ ಹಿನ್ನೆಲೆಯಲ್ಲಿ ಮಾಧ್ಯಮಗಳ ಸಂಪರ್ಕ ಪಡೆದಿರುವುದು ಕೋಷ್ಟಕದಿಂದ ಅರಿವಿಗೆ ಬರುತ್ತದೆ. ಇದಕ್ಕೆ ಸಾಕ್ಷರತೆಯ ಪ್ರಮಾಣವೂ ಸಂಪರ್ಕ ಮಾಧ್ಯಮಗಳ ಪ್ರಭಾವವೂ ಕಾರಣವಾಗಿದೆ.

ಕೋಷ್ಟಕ ೨೭.೯

ಆಡಳಿತದಲ್ಲಿ ಪುರುಷರ ನೆರವಿನ ಪ್ರಮಾಣ

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಪತಿ/ಮಗ/ಮಾವ	೧೧	೧೦೦	೧೦	೧೦೦
೨.	ಸ್ವತಃ ಸದಸ್ಯೆಯರು	-	-	-	-
ಒಟ್ಟು		೧೧	೧೦೦	೧೦	೧೦೦

ಎರಡೂ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಅಧ್ಯಕ್ಷೆಯರು ಪುರುಷರ ಮೇಲೆ ಅವಲಂಬಿತರಾಗಿ ಆಡಳಿತ ನಡೆಸುವುದು ಕಂಡುಬರುತ್ತದೆ. ಪ್ರತಿಯೊಬ್ಬ ಮಹಿಳಾ ನಾಯಕರ ಹಿಂದೆ ಒಬ್ಬ ಪುರುಷ ಇದ್ದನೆಂಬುದನ್ನು ನಾವು ನೆನೆಯಬೇಕು. ಮುಂದೆ ರಾಷ್ಟ್ರನಾಯಕರಾಗಿ ಬೆಳೆದ ಮಹಿಳಾ ಹೋರಾಟಗಾರರು ಬಾಲ್ಯದಲ್ಲಿಯೇ ರಾಜಕೀಯ ತರಬೇತು ಪಡೆದವರು. ತರುವಾಯದಲ್ಲಿ ಅವರಲ್ಲಿ ಅನೇಕರು ಬದ್ಧ ರಾಷ್ಟ್ರ ಸೇವಕರಾದ ಪುರುಷರ ಕೈಹಿಡಿದದ್ದು, ಅವರ ದೇಶಸೇವೆಯ ಮುಂದುವರಿಕೆಗೆ ಅನುಕೂಲವಾಯಿತು. ಅವರಲ್ಲಿ ಅನೇಕರಿಗೆ ತಮ್ಮ ತಂದೆ ಮತ್ತು ಪತಿಯ ಸಹಕಾರ ಲಭಿಸಿತು. ರಾಷ್ಟ್ರದ ಉದ್ದೇಶಗಳಿಗಾಗಿ ಪುರುಷರು ಈ ಮಹಿಳೆಯರ ಪ್ರತಿಭೆ ಹಾಗೂ ಸಾಮರ್ಥ್ಯವನ್ನು ಉಪಯೋಗಿಸಿಕೊಂಡರು.[೧೮]

ಆದರೆ ಇಂದಿನ ಗ್ರಾಮಪಂಚಾಯಿತಿ ಆಡಳಿತದಲ್ಲಿ ಪುರುಷರು ಮಹಿಳೆಯರನ್ನು ಬಳಸಿಕೊಳ್ಳುತ್ತಿರುವುದೇ ಬೇರೆ ರೀತಿಯದ್ದಾಗಿದೆ. ಮಹಿಳೆಯು ಆಡಳಿತ ನಡೆಸಲು ನಿರ್ಣಯ ತೆಗೆದುಕೊಳ್ಳಲು ಅಸಮರ್ಥಳು, ಆಕೆಗೆ ಏನು ತಿಳಿಯದು ಎಂಬ ಪರಂಪರಾಗತ ಧೋರಣೆಯಲ್ಲಿ ಮಹಿಳೆಯರನ್ನು ಪುರುಷಶಾಹಿಯು ಬಳಸಿಕೊಳ್ಳುತ್ತಿರುವುದು ಇಲ್ಲಿ ಕಂಡುಬರುತ್ತಿದೆ.

ಕೋಷ್ಟಕ ೨೭.೧೦

ಕುಟುಂಬಕ್ಕೆ ರಾಜಕೀಯ ಹಿನ್ನೆಲೆ

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ರಾಜಕೀಯದಲ್ಲಿ ಸಂಪರ್ಕ ಮತ್ತು ಒಡನಾಟ	೪	೩೬.೩೬	೪	೪೦
೨.	ರಾಜಕೀಯದಲ್ಲಿ ಆಸಕ್ತಿ	೪	೩೬.೩೬	೪	೪೦
೩.	ಯಾವುದೂ ಇಲ್ಲ	೩	೨೭.೨೭	೨	೨೦
	ಒಟ್ಟು	೧೧	೧೦೦	೧೦	೧೦೦

ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯ ೪ ಅಧ್ಯಕ್ಷೆಯರ ಕುಟುಂಬಗಳಿಗೆ ಅಂದರೆ ಶೇ.೩೬.೩೬ ರಷ್ಟು ರಾಜಕೀಯದಲ್ಲಿ ಸಂಪರ್ಕ ಮತ್ತು ಒಡನಾಟ ಇರುವುದು ಕಂಡುಬರುತ್ತದೆ. ನಾಲ್ಕು ಅಧ್ಯಕ್ಷೆಯರಿಗೆ ರಾಜಕೀಯದಲ್ಲಿ ಮಾತ್ರ ಆಸಕ್ತಿಯಿರುವುದು ಶೇ.೩೬.೩೬ ರಷ್ಟಿದೆ. ಯಾವ ಹಿನ್ನೆಲೆಯು ಇಲ್ಲದ ಅಧ್ಯಕ್ಷೆಯರ ಸಂಖ್ಯೆ ೩ ಇದ್ದು, ಅವರು ಶೇ.೨೭.೨೭ ರಷ್ಟಿದೆ. ಹಾಗೆಯೇ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ೪ ಜನ ಅಧ್ಯಕ್ಷೆಯರ ಕುಟುಂಬಗಳಿಗೆ ರಾಜಕೀಯ ಹಿನ್ನೆಲೆ ಮತ್ತು ರಾಜಕೀಯದಲ್ಲಿ ಒಡನಾಟ ಇದ್ದು, ಅವರ ಪ್ರಮಾಣ ಶೇ.೪೦ ರಷ್ಟಿದೆ. ೪ ಜನ ಅಧ್ಯಕ್ಷೆಯರ ಕುಟುಂಬಗಳಿಗೆ ರಾಜಕೀಯದಲ್ಲಿ ಮಾತ್ರ ಆಸಕ್ತಿ ಇದ್ದು, ಅವರು ಶೇ.೪೦ ರಷ್ಟಿದ್ದಾರೆ. ಕೌಟುಂಬಿಕವಾಗಿ ಯಾವ ರಾಜಕೀಯ ಹಿನ್ನೆಲೆಯು ಇಲ್ಲದ ಅಧ್ಯಕ್ಷೆಯರ ಸಂಖ್ಯೆ ೨ ಇದ್ದು, ಅವರು ಶೇ.೨೦ ರಷ್ಟಿರುವುದು ಕಂಡುಬರುತ್ತದೆ.

ಆದರೆ ಇದು ಇಷ್ಟರಿಂದಲೇ ಅಧ್ಯಕ್ಷೆಯರಲ್ಲಿ ರಾಜಕೀಯ ಒಲವು ಇದೆ ಎಂಬುದನ್ನು ಅರ್ಥೈಸಲು ಆಗುವುದಿಲ್ಲ. ಸಕ್ರಿಯ ರಾಜಕಾರಣದಲ್ಲಿ ಪ್ರಮುಖವಾಗಿ ಭಾಗವಹಿಸುವ, ನಿರ್ಣಯ ಕೈಗೊಳ್ಳುವ ಸಂಗತಿಗಳಿಂದ ತುಸು ದೂರ ಇರುವುದೇ ಗೋಚರವಾಗುತ್ತದೆ. ಆದರೆ ರಾಜಕಾರಣದ ಕೆಲವು ಆಂಶಿಕ ಸಂಗತಿಗಳನ್ನು ಇವರು ತಿಳಿದುಕೊಂಡಿದ್ದಾರೆಂಬುದು ಗಮನಾರ್ಹ.

ಕೋಷ್ಟಕ ೨೭.೧೧

ಕೌಟುಂಬಿಕ ಚರ್ಚೆಯಲ್ಲಿ ಭಾಗವಹಿಸುವಿಕೆ

ಕ್ರ.ಸಂ.	ವಿವರ	ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು		ಸಂಡೂರು ತಾಲೂಕು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಪತಿಯ ಯಜಮಾನಿಕೆ ಆದರೆ ಚರ್ಚಿಸಲಾಗುತ್ತದೆ	೬	೫೪	೭	೭೦
೨.	ಪತಿಯ ಯಜಮಾನಿಕೆ ಆದರೆ ಚರ್ಚೆಯಿಲ್ಲ	೨	೧೮.೧೮	೨	೨೦
	ಅಧ್ಯಕ್ಷೆಯದೇ ತೀರ್ಮಾನ	೧	೯	-	-
೩.	ವಿಧವೆ	೨	೧೮.೧೮	-	-
೪.	ದೇವದಾಸಿ	-	-	೧	೧೦
	ಒಟ್ಟು	೧೧	೧೦೦	೧೦	೧೦೦

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕೌಟುಂಬಿಕ ಆಗುಹೋಗುಗಳಲ್ಲಿ ಸ್ತ್ರೀಯು ಸಂಪೂರ್ಣವಾಗಿ ಭಾಗವಹಿಸುವ, ನಿರ್ಣಯ ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲದ ಸ್ಥಿತಿಯನ್ನು ಗಮನಿಸುತ್ತೇವೆ. ಅಧ್ಯಕ್ಷೆಯಾಗಿ ಆಯ್ಕೆಯಾದ ಮಹಿಳೆಯರು ಇದಕ್ಕೆ ಹೊರತಲ್ಲ ಎಂಬುದನ್ನು ಗಮನಿಸಬೇಕು. ಮಹಿಳಾ ಸಶಕ್ತೀಕರಣ, ಸಬಲೀಕರಣ, ಮೀಸಲಾತಿಯಂತಹ ಅವಕಾಶಗಳಿದ್ದರೂ ಮಹಿಳೆ ನಿರ್ಣಾಯಕ ಹಂತಗಳಲ್ಲಿ ಭಾಗವಹಿಸುವುದನ್ನು ನಾವು ಕಾಣುತ್ತಿಲ್ಲ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯ ೬ ಅಧ್ಯಕ್ಷೆಯರು ಅಂದರೆ ಶೇ.೫೪ ಮತ್ತು ಸಂಡೂರು ತಾಲೂಕು ಗ್ರಾಮಪಂಚಾಯ್ತಿಯ ೭ ಅಧ್ಯಕ್ಷೆಯರು ಅಂದರೆ ಶೇ.೭೦ರಷ್ಟು ಮಹಿಳೆಯರು ಪತಿಯೊಂದಿಗೆ ಕೌಟುಂಬಿಕ ವಿದ್ಯಮಾನಗಳಲ್ಲಿ ಸರೀಕಳಾಗಿ ಪಾಲುದಾರಳಾದರೂ ಅಂತಿಮ ತೀರ್ಮಾನ ಗಂಡನದೇ ಆಗಿರುವುದನ್ನು ನಾವು ಗಮನಿಸಬಹುದು. ಇದೇ ಪರಿಸ್ಥಿತಿಯನ್ನು ಗ್ರಾಮಪಂಚಾಯಿತಿ ಸಂದರ್ಭದಲ್ಲೂ ಕಾಣುತ್ತೇವೆ. ಸಮಾಧಾನ ಪಡುವ ಸಂಗತಿಯೆಂದರೆ ಚರ್ಚೆಯಲ್ಲಿ ಭಾಗವಹಿಸುವಷ್ಟು ಮಾನಸಿಕ ಬಲವನ್ನು ಹೊಂದಿದ್ದಾಳೆ ಎಂಬುದು. ಅಧ್ಯಕ್ಷೆಯರು ಚರ್ಚೆ ಮತ್ತು ಭಾಗವಹಿಸುವಿಕೆ ಎರಡೂ ಸಂಗತಿಗಳಲ್ಲಿ ಹಿಂದುಳಿದಿರುವುದು ಕಂಡುಬರುತ್ತದೆ. ಪುರುಷಶಾಹಿ ವ್ಯವಸ್ಥೆಯೇ ಇಂತಹವರ ಅಧಿಕಾರವನ್ನು ಚಲಾಯಿಸುವುದು ಕಂಡುಬರುತ್ತದೆ. ಉದಾಹರಣೆಗೆ ಇತ್ತೀಚೆಗೆ ಮಧುಗಿರಿ ಪುರಸಭೆಯ ೧೫ನೇ ವಾರ್ಡಿನಲ್ಲಿ ನಡೆದ ಒಂದು ಘಟನೆ ತುಂಬ ಮಹತ್ವದ್ದೆನಿಸುತ್ತದೆ. ಕುಡಿಯುವ ನೀರಿನ ಸಮಸ್ಯೆಗೆ

ಸಂಬಂಧಿಸಿದಂತೆ ಕೆಟ್ಟು ಹೋದ ಕೊಳವೆ ಬಾವಿಯ ಪಂಪ್‌ಸೆಟ್‌ನ್ನು ಪಕ್ಕದ ವಾರ್ಡಿನ ಸದಸ್ಯರು ದುರಸ್ತಿ ಕಾರ್ಯಕ್ಕೆ ಮುಂದಾದಾಗ ೧೫ನೇ ವಾರ್ಡಿನ ಸದಸ್ಯೆಯ ಪತಿ ತನ್ನ ಅನುಮತಿ ಇಲ್ಲದೆ ಯಾರು ಮಾಡಲು ಹೇಳಿದ್ದು?'' ಎಂದು ನೌಕರರ ಮೇಲೆ ಕೂಗಾಡಿ ಕೆಲಸ ನಿಲ್ಲಿಸಿದರು. ನಂತರ ಅಧ್ಯಕ್ಷರಿಗೆ ಆ ವಾರ್ಡಿನ ಸದಸ್ಯೆ ಅನುಮತಿ ಪಡೆಯದೇ ನೀವು ಕೆಲಸ ಕೈಗೊಂಡದ್ದು ಸರಿಯಲ್ಲ, ಸದಸ್ಯೆಯು ಅನುಮತಿ ಕೊಡುವವರೆಗೂ ಸದರಿ ಕೆಲಸವನ್ನು ಸ್ಥಗಿತಗೊಳಿಸಬೇಕು ಎಂದು ತಾನೇ ಪತ್ನಿಯ ಪರವಾಗಿ, ಸಹಿ ಮಾಡಿದ ಪತ್ರವನ್ನು ನೀಡಿಬಿಟ್ಟನು. ಇದರಿಂದ ಕುಪಿತಗೊಂಡ ನಾಗರೀಕರು ಸದಸ್ಯೆ ಯಶೋಧ ಅವರನ್ನು ಕೇಳಿದಾಗ ಈ ಪತ್ರ ನಾನು ಕೊಟ್ಟಿಲ್ಲ ಈ ಸಹಿ ಕೂಡ ನನ್ನದಲ್ಲ' ಎಂದು ಬಿಟ್ಟರು.[೧೯] ಇಲ್ಲಿ ಬಹುಮುಖ್ಯವಾಗಿ ಎದ್ದು ಕಾಣುವುದು ಪತ್ನಿಯ ಅಧಿಕಾರದಲ್ಲಿ ಪತಿಯ ಕಾರುಬಾರು. ಇದೇ ಪರಿಸ್ಥಿತಿಯನ್ನು ನಾವು ಹಲವಾರು ಗ್ರಾಮಪಂಚಾಯ್ತಿ ಅಧ್ಯಕ್ಷೆಯರು ಮತ್ತು ಸದಸ್ಯೆಯರ ಸಂದರ್ಭದಲ್ಲಿ ಕಾಣುತ್ತೇವೆ.

ಆಯ್ಕೆಯಾಗಿರುವ ಬಹಳಷ್ಟು ಅಧ್ಯಕ್ಷೆ ಮತ್ತು ಉಪಾಧ್ಯಕ್ಷೆಯರಿಗೆ ತಮ್ಮ ಸ್ಥಾನದ ಮಹತ್ವ ಇನ್ನು ತಿಳಿದಿಲ್ಲ. ಈ ನಿಟ್ಟಿನಲ್ಲಿ ಅವರು ಇನ್ನು ಸಶಕ್ತರಾಗಿಲ್ಲ. ಇದಕ್ಕೆ ಘಂಟೆಮಾಯಮ್ಮ, ಬಡಿಗೇರ ಕಾಳಮ್ಮ, ಹನುಮಂತಮ್ಮ, ಪಳಿನಿಯಮ್ಮ, ಹುಲಿಗೆಮ್ಮ ಇನ್ನು ಮೊದಲಾದ ಅಧ್ಯಕ್ಷೆ, ಉಪಾಧ್ಯಕ್ಷೆಯರಿಗೆ ತಮ್ಮ ಚಿಪ್ಪಿನಿಂದ ಹೊರಗೆ ಬರಲು ಸಾಧ್ಯವಾಗಿಲ್ಲ. ಪುರುಷರೇ ಇವರ ಪರವಾಗಿ ಅಧಿಕಾರವನ್ನು ದುರಪಯೋಗ ಮಾಡಿಕೊಳ್ಳುವುದು ಮತ್ತು ಮಹಿಳೆಯರನ್ನು ಬಳಸಿಕೊಳ್ಳುವುದನ್ನು ಕಾಣಲಾಗಿದೆ. ಈ ಪರಿಸ್ಥಿತಿ ಎಲ್ಲಾ ಜಿಲ್ಲೆಗಳಲ್ಲೂ ಕಂಡುಬರುತ್ತದೆ. ಉದಾ. ಚಿಕ್ಕಮಗಳೂರು ಜಿಲ್ಲೆಯ ಗ್ರಾಮಪಂಚಾಯಿತಿ ಒಂದರಲ್ಲಿ ಅಧ್ಯಕ್ಷೆ ಪಕ್ಕದ ಊರಿನಿಂದ ಕಚೇರಿಗೆ ಬರುವ ತನ್ನ ಕಾರ್ಯದರ್ಶಿಯ ಕೈ ಚೀಲವನ್ನು ಹೊತ್ತು ತಂದು ಸಂಜೆ ಪುನಃ ಒಯ್ಯುವ ಕೆಲಸ ಮಾಡುತ್ತಿದ್ದರು. ತನ್ನ ಅಧಿಕಾರದ ಬಗ್ಗೆಯೇ ಅರಿವಿರದ ಆಕೆಯಿಂದ ಕಾರ್ಯದರ್ಶಿ ಚಪ್ರಾಸಿಯಂತೆ ಕೆಲಸ ಮಾಡಿಸಿಕೊಳ್ಳುತ್ತಿದ್ದ. ವಿಷಯ ತಿಳಿದ ಆ ಜಿಲ್ಲಾಪರಿಷತ್‌ನ ಉಪಾಧ್ಯಕ್ಷೆಯು ಆ ಕಾರ್ಯದರ್ಶಿಯನ್ನು ಕರೆದು ಛೀಮಾರಿ ಹಾಕಿ, ಆ ಅಧ್ಯಕ್ಷೆಗೆ ಆಕೆಯ ಸ್ಥಾನಮಾನದ ಬಗ್ಗೆ ತಿಳಿಸಿ ಹೇಳಿದಳು. ಗ್ರಾಮಪಂಚಾಯಿತಿಯ ಅಧ್ಯಕ್ಷೆ ಮುಂದೆ ಅಂತಹ ಶೋಷಣೆಗೆ ಒಳಗಾಗದಂತೆ ಎಚ್ಚರಿಕೆ ವಹಿಸಿದರು.[೨೦] ಇಂತಹ ಎಚ್ಚರಿಕೆ ಮತ್ತು ತಿಳುವಳಿಕೆ ಕೊಡುವ ಅಗತ್ಯಗಳು ಸಂಡೂರು ಮತ್ತು ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿಗಳ ಅಧ್ಯಕ್ಷೆಯರು ಮತ್ತು ಉಪಾಧ್ಯಕ್ಷೆಯರಿಗೆ ಅಗತ್ಯವಿದೆ. ಇಂತಹ ತಿಳುವಳಿಕೆ ದೊರೆತರೆ ಇವರು ಖಂಡಿತವಾಗಿಯೂ ತಮ್ಮ ಸ್ಥಾನಕ್ಕೆ ನ್ಯಾಯ ದೊರಕಿಸಿ ಕೊಡಬಲ್ಲರು.

ಗ್ರಾಮಪಂಚಾಯ್ತಿಯ ಅನುದಾನ ಮತ್ತು ಗ್ರಾಮನಿಧಿ

ಗ್ರಾಮಪಂಚಾಯಿತಿ ಆದಾಯದ ಮೂಲಗಳು ತುಂಬ ಸೀಮಿತವಾಗಿರುವಂತಹವು ಮುಖ್ಯ ಮೂಲಗಳೆಂದರೆ ರಾಜ್ಯ-ಕೇಂದ್ರ ಸರ್ಕಾರದಿಂದ ಬರುವ ಅನುದಾನ, ನೀರಿನ ಮೇಲಿನ ತೆರಿಗೆ, ಆರೋಗ್ಯ ಕರ, ಮನೆಗಂದಾಯ, ಭೂ ತೆರಿಗೆಯಲ್ಲಿ ಪಾಲು, ಗ್ರಂಥಾಲಯ ಕರ, ಗ್ರಾಮಪಂಚಾಯ್ತಿ ವಿಧಿಸುವ ದಂಡ ಮತ್ತು ಶುಲ್ಕ, ಪಂಚಾಯ್ತಿಯ ಚರ-ಸ್ಥಿರ ಆಸ್ತಿಗಳಿಂದ ಬರುವ ಹಣ, ಗ್ರಾಮಪಂಚಾಯ್ತಿಯ ಸರಹದ್ದಿನಲ್ಲಿ ಮಾರಾಟ ಮಾಡಿದ ಕಸಕಡ್ಡಿ, ಸಗಣಿ, ವಿಸರ್ಜಿತ ವಸ್ತು, ಸತ್ತದನಗಳ ಶವದಿಂದ ಗಳಿಸುವ ಹಣ ಈ ಮೂಲಗಳಿಂದ ಸಂಗ್ರವಾಗುವ ಹಣವು 'ಗ್ರಾಮನಿಧಿ'ಯಾಗಿದೆ. ಈ ಸಂಗ್ರಹವನ್ನು ತಾಲೂಕಿನ ಸರ್ಕಾರಿ ಖಜಾನೆ ಅಥವಾ ರಾಷ್ಟ್ರೀಯಬ್ಯಾಂಕು ಅಥವಾ ಸರ್ಕಾರಿ ಬ್ಯಾಂಕಿನಲ್ಲಿ ಇಡಬೇಕಾಗುತ್ತದೆ. ಈ ನಿಧಿಯನ್ನು ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸಿಬ್ಬಂದಿಯ ವೇತನ ಹಾಗು ಭತ್ಯಗೆ ನಿಯಮಾನುಸಾರ ವೆಚ್ಚ ಮಾಡಲಾಗುತ್ತದೆ. ಪಂಚಾಯ್ತಿ ಸದಸ್ಯರ ಪ್ರಯಾಣ ಭತ್ಯೆ, ದಿನಭತ್ಯೆ, ಉಪವೇತನ, ಶುಲ್ಕ ಪಾವತಿ ಮಾಡಲು ಅವಕಾಶಗಳಿವೆ. ಅಲ್ಲದೆ ಪಂಚಾಯತಿ ಎತ್ತುವ ಸಾಲದ ಬಾಕಿ ಸಂದಾಯ ಮಾಡಲು, ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟ ಕಾಮಗಾರಿಗಳಿಗೆ ವೆಚ್ಚ ಮಾಡಲು ಬಳಸಲಾಗುತ್ತದೆ.[೨೧]

ಈ ಹಿನ್ನೆಲೆಯಲ್ಲಿ ಗ್ರಾಮಪಂಚಾಯ್ತಿಗಳು ತನ್ನದೇ ಆದ ಯೋಜನೆಗಳನ್ನು ರೂಪಿಸಿಕೊಂಡು ಸಂಪನ್ಮೂಲಗಳನ್ನು ಕ್ರೋಡಿಕರಿಸಿಕೊಂಡು ಕಾರ್ಯ ನಿರ್ವಹಿಸುವಷ್ಟು ಸಬಲವಾಗಿಲ್ಲವೆಂಬುದನ್ನು ಮನಗಾಣಬಹುದು. ರಾಜ್ಯ ಮತ್ತು ಕೇಂದ್ರ ಸರ್ಕಾರ ನಿರ್ಧಾರಿತ ಕಾರ್ಯಕ್ರಮಗಳನ್ನು ಆಚರಣೆಗೆ ತರುವುದು ಮಾತ್ರ ಗ್ರಾಮಾಪಂಚಾಯ್ತಿಗಳ ಕೆಲಸವಾಗಿದೆ. ವಾರ್ಷಿಕ ಯೋಜನೆಗಳು ಕೇವಲ ಹೆಸರಿಗಷ್ಟೇ. ಅವು ಸ್ಥಳೀಯ ಅವಶ್ಯಕತೆಗಳನ್ನು ಗಮನದಲ್ಲಿಕೊಂಡು ತಯಾರಾಗಿರುವುದಿಲ್ಲ. ತಾಲೂಕು, ಜಿಲ್ಲೆ ಅಥವಾ ರಾಜ್ಯಮಟ್ಟದಲ್ಲಿ ರೂಪುಗೊಂಡು ಪಂಚಾಯಿತಿ ಮಟ್ಟದಲ್ಲಿ ಕಾರ್ಯಗತ ಗೊಳ್ಳುತ್ತವೆ. ಜೊತೆಗೆ ಗಾಯಕ್ಕೆ ಉಪ್ಪು ಸವರಿದಂತೆ ಅಧಿಕಾರ ಶಾಹಿಗಳ ಹಿಡಿತವು ಗ್ರಾಮಪಂಚಾಯ್ತಿಗಳ ಮೇಲೆ ಬಿಗಿಯಾಗಿರುವುದು ಕಾರಣವಾಗಿದೆ.

ಹೀಗಾಗಿ ಬಹಳಷ್ಟು ಮಹಿಳಾ ಪ್ರತಿನಿಧಿಗಳು ಮತ್ತು ಅಧ್ಯಕ್ಷೆಯರು ಹೇಳುವುದೇನೆಂದರೆ 'ನಾವು ಪಾತ್ರಧಾರಿಗಳು ಮಾತ್ರ' ಎಂಬುದಾಗಿ, ಪ್ರತಿಯೊಂದನ್ನು ದಾಖಲೆಯಲ್ಲಿ ಮಾತ್ರ ಸರಿಯಾಗಿ ಕಾಣುತ್ತೇವೆ. ಒಂದು ಬಾರಿ ಗ್ರಾಮಸಭೆ ನಡೆದರೂ ಅದು ೨ ಬಾರಿ ಎಂದು ದಾಖಲಾಗಿರುತ್ತದೆ. ಜೊತೆಗೆ ಹಾಜರಾದವರ ಸಹಿ ಮತ್ತು ಭತ್ಯೆಯು ವಿತರಿಸಲ್ಪಟ್ಟಿರುತ್ತದೆ. ಕಾಮಗಾರಿಗಳು ನಡೆದ ವಿವರ

ದಾಖಲೆಗಳಲ್ಲಿ ಮಾತ್ರವಿರುತ್ತವೆ. ಆದರೆ ವಾಸ್ತವದಲ್ಲಿ ಏನೂ ಆಗಿರುವುದಿಲ್ಲ. ಬಹಳಷ್ಟು ಮಹಿಳಾ ಅಧ್ಯಕ್ಷೆ ಮತ್ತು ಸದಸ್ಯೆಯರನ್ನು ತಮ್ಮ ಊರುಗಳಲ್ಲಿ ಮಾಡಿದ ಅಭಿವೃದ್ಧಿಪರ ಕಾರ್ಯಗಳ ಬಗ್ಗೆ ಮತನಾಡಿಸಿದಾಗ ನಲ್ಲಿ, ಚರಂಡಿ, ಬಂಡೆ ಹಾಸುವಿಕೆ ಮೊದಲಾದ ನೈರ್ಮಲೀಕರಣದ ಬಗ್ಗೆ ಹೇಳುತ್ತಾರೆ. ಆದರೆ ಗ್ರಾಮದಲ್ಲಿ ಇಂತಹ ಯಾವ ಕೆಲಸಗಳೂ ನಡೆದ ಬಗ್ಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಣಿಸಲಿಲ್ಲ. ನಡೆದಿದ್ದರೂ ತುಂಬಾ ಕಳಪೆ ಮಟ್ಟದ ಕಾಮಗಾರಿಗಳಾಗಿ, ಬಹುದಿನ ಬಳಕೆಗೆ ಯೋಗ್ಯವಲ್ಲದವುಗಳಾಗಿ ಕಾಣಿಸುತ್ತವೆ. ಇದಕ್ಕೆ ರಾಮಸಾಗರದ ಗ್ರಾಮಪಂಚಾಯತಿ ಕಾಮಗಾರಿಗಳು ಒಳ್ಳೆಯ ಉದಾಹರಣೆಗಳಾಗಿವೆ. ಒಮ್ಮೊಮ್ಮೆ ಒಂದು ವಾರ್ಡಿನ ಸದಸ್ಯೆ ಮಾಡಿದ ಕಾಮಗಾರಿಯನ್ನು ವಿರೋಧಿ ಬಣದ ಸದಸ್ಯರು ಹಾಳುಗೆಡವಿದ ಪ್ರಸಂಗಗಳು ಕಂಡುಬರುತ್ತವೆ. ಇದಕ್ಕೆ ದೇವಲಾಪುರ ಗ್ರಾಮಪಂಚಾಯಿತಿ ಒಳ್ಳೆಯ ಉದಾಹರಣೆಯಾಗಿದೆ.

ತಮ್ಮ ವಾರ್ಡಿನಲ್ಲಿ ಕಾಮಗಾರಿಗಳನ್ನು ಮಾಡಬೇಕೆನ್ನುವ ಅಭಿಲಾಷೆಯುಳ್ಳ ಸದಸ್ಯೆ ಮತ್ತು ಅಧ್ಯಕ್ಷೆಯರ ಬವಣೆ ಇನ್ನೊಂದು ರೀತಿಯದ್ದು. 'ಅದೇನೋ ಪರಸೆಂಟಂತೆ(ಕಮೀಷನ್) ಪರಸೆಂಟು ಅದನ್ನು ಹೆಂಗೆ ಕೊಡಬೇಕು. ಅದನ್ನು ಕೊಟ್ಟರೆ ಕೆಲಸ ಮಾಡಿಸಲು ಹಣ ಸಿಗುತ್ತಂತೆ' ಎಂದು ಪಾಪಿನಾಯಕನಹಳ್ಳಿ, ಬೈಲುವದ್ದಿಗೇರಿಯಂತಹ ಅನೇಕ ಗ್ರಾಮಪಂಚಾಯ್ತಿಗಳ ಚುನಾಯಿತ ಮಹಿಳೆಯರ ಅಳಲು. ಇನ್ನು ಹೆಚ್ಚಿಗೆ ಪೀಡಿಸ ಹೋದರೆ ನೀವೇ ಹಣ ಹಾಕಿ ಕಾಮಗಾರಿ ಮಾಡಿಸಿ, ಅನುದಾನ ಬಂದಾಗ ಕೊಡುತ್ತೇವೆ ಎನ್ನುತ್ತಾರಂತೆ. ಹಂಪಿಯ ಸದಸ್ಯೆಯೊಬ್ಬರು ತಾವೇ ಸ್ವತಃ ಹಣ ಹಾಕಿ ಆಯ್ಕೆಯಾದ ವಾರ್ಡಿನಲ್ಲಿ ಕಾಮಗಾರಿ ಮಾಡಿಸಿಕೊಳ್ಳಲು ಇನ್ನು ಗ್ರಾಮಪಂಚಾಯ್ತಿಯಿಂದ ಅನುದಾನ ಬಿಡುಗಡೆ ಮಾಡಿಸಿಕೊಳ್ಳಲು ಇನ್ನೂ ಹೆಣಗಾಡುತ್ತಿರುವ ಬಗ್ಗೆ ಅತೀವ ದುಃಖದಿಂದ ಹೇಳಿದರು. ಇವನ್ನೆಲ್ಲ ಗಮನಿಸಿದರೆ ಗ್ರಾಮಸ್ಥರ ಏಳಿಗೆಗಾಗಿ ಗ್ರಾಮದ ಅಭಿವೃದ್ಧಿಗಾಗಿ ಬರುವ ಸಂಪನ್ಮೂಲಗಳನ್ನು ಕೆಲವು ಅಧಿಕಾರಿಗಳು ಜನಪ್ರತಿನಿಧಿಗಳು, ಹೇಗೆ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬುದು ಅರ್ಥವಾಗುತ್ತದೆ.

ಅದೇ ರೀತಿ ನೀರು, ಕರೆಂಟ್ ಬಿಲ್, ಮನೆತೆರಿಗೆಯಂತಹ ಸ್ಥಳೀಯ ತೆರಿಗೆಗಳು ಸಕಾಲಕ್ಕೆ ಪಾವತಿಯಾಗದೆ, ಗ್ರಾಮಪಂಚಾಯ್ತಿ ಆದಾಯದ ಮೂಲಕ್ಕೆ ಪ್ರಮುಖ ವಿತ್ತೀಯ ಕೊರತೆಯುಂಟಾಗು ವುದನ್ನು ಕಾಣುತ್ತೇವೆ. ಇಂತಹ ಸಂದರ್ಭದಲ್ಲಿ ಅಧ್ಯಕ್ಷೆಯಾದವರು ಬಾಕಿ ಪಾವತಿಗೆ ಕಳುಹಿಸಿದರೆ ಅಲ್ಲಿನ ಮೇಲುಜಾತಿ-ಕೆಳಜಾತಿ, ಶ್ರೀಮಂತ-ಬಡವರು ಇಂತಹ ಸ್ಥಳೀಯ ವೈರುಧ್ಯಗಳು 'ಅವರು ಕಟ್ಟಿದರೆ ನಾವು ಕಟ್ಟುತ್ತೇವೆ' ಎನ್ನುವ ಗೊಂದಲದ ಸನ್ನಿವೇಶವನ್ನು ಸೃಷ್ಟಿಸುತ್ತವೆ. ಅಂತಹ ಸಂದರ್ಭದಲ್ಲಿ ಬಹುತೇಕ ಕೆಳಜಾತಿಯ ಸದಸ್ಯೆಯರು ಮತ್ತು ಆರ್ಥಿಕವಾಗಿ ದುರ್ಬಲವಾದ ಮಹಿಳಾ

ಅಧ್ಯಕ್ಷೆಯರು ಇರುವ ಗ್ರಾಮಪಂಚಾಯ್ತಿಗಳು ಇಂತಹ ಸಾಂಪ್ರದಾಯಿಕ ಯಜಮಾನಿಕೆ ಮತ್ತು ಶ್ರೇಣೀಕರಣದ ವಿರುದ್ಧ ಮಾತನಾಡಲು ಸಹಜವಾಗಿ ಹಿಂಜರಿಯುತ್ತಾರೆ. ಹಾಗೇ ತೆರಿಗೆ ಬಾಕಿ ಉಳಿಸಿದ ವ್ಯಕ್ತಿಗಳನ್ನು ಕೇಳುವಷ್ಟು ಆತ್ಮಬಲವನ್ನು ಇವರು ಹೊಂದಿರುವುದಿಲ್ಲ. ಅಲ್ಲದೇ ಬಾಕಿ ಉಳಿಸಿಕೊಂಡ ಪ್ರಬಲ ಜಾತಿ-ವರ್ಗಗಳ ಮುಲಾಜಿನ ಮೇರೆಗೆ ಆಯ್ಕೆಯಾಗಿ ಬಂದಿರುವ, ಅವರ ಹಂಗಿನಲ್ಲೆ ಬದುಕುತ್ತಿರುವ ಇವರು ಇಂಥವರ ಉಸಾಬರಿಗೆ ಹೋಗಬಲ್ಲರೇ? ಒಟ್ಟು ಗ್ರಾಮ ಪಂಚಾಯ್ತಿಯ ಆದಾಯ ಆಯವ್ಯಯವು ಮಾನವಮುಖಿ ಅಭಿವೃದ್ಧಿಗಿಂತ ಸ್ವಾರ್ಥಪರ ಅಭಿವೃದ್ಧಿಯತ್ತ ವಾಲಿದ್ದು ಕಂಡುಬರುತ್ತದೆ. ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಹಕ್ಕಿನ ಬಗ್ಗೆ ಬರೀ ಜಾಗರೂಕರಾಗಿದ್ದರೆ ಸಾಲದು. ಜವಾಬ್ದಾರಿಯ ಬಗ್ಗೆ ಅರಿವಿರಬೇಕಾಗುತ್ತದೆ. ಇಲ್ಲಿ ಬಹಳಷ್ಟು ಮಹಿಳೆಯರಿಗೆ ಹಕ್ಕು ಸಿಕ್ಕಿದೆ. ಆದರೆ ಅರಿವು ಸಿಕ್ಕಿಲ್ಲ.' ಜವಾಬ್ದಾರಿ ಸಿಕ್ಕಿದೆ. ಆಚರಣೆಗೆ ತರುವ ಅವಕಾಶ ಸಿಕ್ಕಿಲ್ಲ. ಜವಾಬ್ದಾರಿ ಪೂರೈಕೆ ಮನುಷ್ಯನಿಗೆ ಅರಿವನ್ನು, ನೈತಿಕತೆಯನ್ನು ತಂದುಕೊಡುತ್ತದೆ. ಅದೇ ರೀತಿ ಗ್ರಾಮಪಂಚಾಯ್ತಿಗಳಿಗೆ ಅಧಿಕಾರವನ್ನು ಕೊಡಲಾಗಿದೆ. ಆಚರಣೆಗೆ ಬೇಕಾದಂತಹ ಅನುವು ಇಲ್ಲ. ಸ್ವಸಂಪನ್ಮೂಲವಿಲ್ಲದ ಪರಾವಲಂಬಿ ಸಂಪನ್ಮೂಲದ ಮೇಲೆ ಅಧಿಕಾರ ನಿರ್ವಹಿಸುವರೂ ಪಂಚಾಯ್ತಿಗಳನ್ನು ನಿರ್ವಹಿಸುವವರು, ಸ್ವಸಾಮರ್ಥ್ಯವಿಲ್ಲದ ಪರಾವಲಂಬಿ ಅಧ್ಯಕ್ಷೆಯರುಗಳೆಂಬುದು ಗಮನಾರ್ಹವಾದದ್ದು. ಇಂತಹ ಸಂದರ್ಭದಲ್ಲಿ ಹೊರಗಿನ ಶಕ್ತಿಗಳ ಮಾರ್ಗದರ್ಶನದ ಮೇಲೆ ಕಾರ್ಯನಿರ್ವಹಿಸುವ ಪಂಚಾಯಿತಿ ವ್ಯವಸ್ಥೆಯು ಕೆಳವರ್ಗದ ಜನರನ್ನೂ ದುರ್ಬಲ ವರ್ಗದ ಮಹಿಳೆಯರನ್ನೂ ಸಶಕ್ತೀಕರಣಗೊಳಿಸುವುದು ಹೇಗೆ ಸಾಧ್ಯ? ಈ ದೃಷ್ಟಿಯಿಂದ ಸರಿಯಾದ ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಜನರಲ್ಲಿ ಸಹಬಾಳ್ವೆಯನ್ನೂ ಸಮಾನತೆಯನ್ನು ಹುಟ್ಟು ಹಾಕುವ ಪ್ರಕ್ರಿಯೆಗಳು ಅರ್ಥಪೂರ್ಣ ವಿಕೇಂದ್ರೀಕರಣಕ್ಕೆ ದಾರಿ ಮಾಡಿಕೊಡುತ್ತವೆ.

ಚುನಾಯಿತ ಮಹಿಳೆಯರು ಮತ್ತು ಸರ್ಕಾರಿ ಅಧಿಕಾರಿಗಳ ನಡುವಿನ ಸಂಬಂಧ

ಮನುಷ್ಯನ ಬದುಕಲ್ಲಿ ಹೆಣ್ಣು ಗಂಡು ಎಂಬ ಜೈವಿಕ ಭಿನ್ನತೆಗಳವೆಯೇ ಹೊರತು ಸಾಮಾಜಿಕ ಅಸಮಾನತೆಗಳಿಲ್ಲ. ಆದರೆ ಸಮಾಜ ವ್ಯವಸ್ಥೆಯೊಂದು ತಾನು ಕಟ್ಟಿಕೊಂಡ ಚೌಕಟ್ಟಿನೊಳಗೆ ಇಂಥ ಅಸಮಾನತೆಯ ನೆಲೆಗಳನ್ನು ಸಾಕಷ್ಟು ಕಾಣಬಹುದಾಗಿದೆ. ಹೀಗಾಗಿ ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿಗಳು ಸ್ಥಾನಮಾನಗಳು ಅಧೀನ-ಪರಾಧೀನವಾಗಿರಲು ಕಾರಣ ಸಾಮಾಜಿಕ-ಸಾಂಸ್ಕೃತಿಕ ಸಂಗತಿಗಳೇ ಆಗಿವೆ ಎಂಬುದು ಗಮನಾರ್ಹ.

ಕೌಟುಂಬಿಕವಾಗಿ, ಸಾಮಾಜಿಕವಾಗಿ ಮಹಿಳೆಯನ್ನು ನಿಯಂತ್ರಿಸುವ ಅಪಮೌಲೀಕರಿಸುವ ಬಗೆಗಳು ಒಂದು ರೀತಿಯಾದರೆ, ಪ್ರಭುತ್ವ ಮತ್ತು ಅದರ ಅಂಗಗಳಾದ ಅಧಿಕಾರಶಾಹಿ ಶಕ್ತಿಗಳು

ಮಹಿಳೆಯನ್ನು ಇನ್ನೊಂದು ರೀತಿಯಲ್ಲಿ ನಿಯಂತ್ರಿಸುತ್ತವೆ. ಈ ಪ್ರವೃತ್ತಿಗೆ ಅಧಿಕಾರದ ಜೊತೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕವಾದಂತಹ ಆಕೃತಿಗಳು ಮಹಿಳಾ ಶೋಷಣೆಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸಿ ಕೊಡುತ್ತವೆ. ಸಮಾಜದಲ್ಲಿ ಅಭಿವೃದ್ಧಿಪರ ಕಾರ್ಯಗಳನ್ನು ಹೊಸ ರೀತಿಯ ಸೌಕರ್ಯಗಳನ್ನು ಒದಗಿಸುವಾಗ ಪ್ರಭುತ್ವವು ಕ್ರಾಂತಿಕಾರಕವಾಗಿ ವರ್ತಿಸದೆ, ಅಧಿಕಾರಶಾಹಿ ಮತ್ತು ಪ್ರತಿಷ್ಠಿತ ಶಕ್ತಿಗಳ ಮುಲಾಜಿನಲ್ಲಿ ಇಂಥ ಕೆಲಸಗಳಿಗೆ ಕೈಹಾಕುತ್ತದೆ. ಈ ಪ್ರಭಾವೀ ಶಕ್ತಿಗಳು ದುರ್ಬಲರ ಮಹಿಳೆಯರ ಸಶಕ್ತೀಕರಣಕ್ಕೆ ಮಾರಕವಾಗಿರುವುದೇ ಹೆಚ್ಚು.

ಯಾವುದೇ ಒಂದು ಗ್ರಾಮಪಂಚಾಯ್ತಿ ಸರ್ಕಾರಿ ಅಧಿಕಾರಿಗೆ ಆ ಪರಿಸರದ ಸಾಮಾಜಿಕ ಮತ್ತು ರಾಜಕೀಯ ಸ್ತರಗಳ ಬಗ್ಗೆ ಸರಿಯಾದ ತಿಳುವಳಿಕೆ ಇರುವುದು ಒಳ್ಳೆಯದು. ಅಲ್ಲಿನ ರೀತಿ ನೀತಿ ನಡಾವಳಿಗಳನ್ನು ಸರ್ಕಾರಿ ಅಧಿಕಾರಿ ಸರಿಯಾಗಿ ತಿಳಿದಿದ್ದರೆ ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಸುಸಂಗತವಾಗಿ ನಡೆಸಬಹುದಾಗಿದೆ. ಒಂದು ವೇಳೆ ಅಲ್ಲಿನ ಸೂಕ್ಷ್ಮಗಳ ಬಗ್ಗೆ ಅರಿವಿರದೇ ಹೋದರೆ, ಆತ ತುಂಬ ವಿರೋಧ ಎದುರಿಸಬೇಕಾಗುತ್ತದೆ. ಪಾಪಿನಾಯಕನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ವಡ್ಡರಹಳ್ಳಿಯ ಆಂಜನೇಯ ಗುಡಿಯಲ್ಲಿ ನಡೆದ ಒಂದು ಘಟನೆಯನ್ನು ಡಾ.ಚಂದ್ರಪೂಜಾರಿಯವರು ವಿವರಿಸುತ್ತಾರೆ. ಜನರ ದಿನನಿತ್ಯ ಬದುಕಿನಲ್ಲಿ ಜಾತಿ ಜಾತಿ ನಡುವೆ ಸಾಕಷ್ಟು ಅಂತರವಿದೆ. ಹರಿಜನರು ಆಂಜನೇಯನ ಗುಡಿಯೊಳಗೆ ಬರುವುದಿಲ್ಲ ಎನ್ನುವುದು ಸದಸ್ಯರಿಗೆ ಮತ್ತು ಕಾರ್ಯದರ್ಶಿಗಳಿಗೆ ತಿಳಿದ ವಿಷಯ. ಅದನ್ನು ತಿಳಿದು ಗುಡಿಯೊಳಗೆ ಗ್ರಾಮಸಭೆ ನಡೆಸಿ ಅಲ್ಲಿಗೆ ಎಲ್ಲರನ್ನು ಸೇರಿಸಿ ಸಾಮಾಜಿಕ ಲೋಪಗಳನ್ನು ತಿದ್ದುವ ಉದ್ದೇಶವಿದ್ದರೆ, ಅದನ್ನು ಬೇರೆ ಸಂದರ್ಭದಲ್ಲೂ ಮಾಡಬಹುದು.

ಅಂತಹ ಕಾಳಜಿ ಇವರಿಗಿಲ್ಲ. ಇರುತ್ತಿದ್ದರೆ ಗ್ರಾಮಸಭೆ ಆರಂಭವಾದ ಕೂಡಲೇ ಹರಿಜನರನ್ನು ಒಳಗೆ ಸೇರಿಸಬೇಕಿತ್ತು. ಆಗ ನೆನಪಾಗಿಲ್ಲ ಅಂದುಕೊಳ್ಳುವ. ನಂತರ ಹರಿಜನ ಸದಸ್ಯರು ನಮಗೇನೂ ಕೇಳಿಸುತ್ತಿಲ್ಲ ಎನ್ನುವಾಗ ಕಾರ್ಯದರ್ಶಿಯವರು ಒಳಗೆ ಬಂದು ಮಾತನಾಡಲು ಸೂಚಿಸಿದರು. ಆ ಸದಸ್ಯೆಯರು ಒಳಗೆ ಬರುವಂತಿದ್ದರೆ ನಾವ್ಯಾಕೆ ಇಲ್ಲಿ ಬರುತ್ತಿದ್ದೆವು ಎಂದರು. ಹರಿಜನರಿಗೆ ಗುಡಿಯ ಒಳಗೆ ಪ್ರವೇಶವಿಲ್ಲ ಎನ್ನುವಾಗ ಸಾಮಾಜಿಕ ಅರಿವು ಕಾರ್ಯದರ್ಶಿಯಲ್ಲಿದ್ದಾಗಲೂ ಇಂಥ ಘಟನೆಗಳನ್ನು ಹುಟ್ಟು ಹಾಕುವುದರ ಅರ್ಥವೇನು? ಅವಮಾನಿತರನ್ನು ಸಭೆಯ ಹೊರಗಿಟ್ಟು, ಅವಮಾನಿಸುವುದೂ ಅಲ್ಲದೇ ಪ್ರವೇಶವಿಲ್ಲದ ಸಾರ್ವತ್ರಿಕ ಸ್ಥಳಗಲ್ಲಿ ಉದ್ದೇಶ ಪೂರಿತವಾಗಿ ಕರೆದು ಅವರನ್ನು ಮತ್ತಷ್ಟು ಹಿಂಸಿಸುವ ಇಂಥ ನಡವಳಿಕೆಗಳಿಗೆ ಏನೆನ್ನಬೇಕು?”

ವಿಕೇಂದ್ರೀಕರಣದ ಪರಿಕಲ್ಪನೆಯೇ ತಳಮಟ್ಟದ ಜನರನ್ನು, ಮಹಿಳೆಯರನ್ನು ಸಶಕ್ತೀಕರಣಗೊಳಿಸಿ ತಮ್ಮ ಬದುಕಿನ ಆಯ್ಕೆ ಮತ್ತು ಅವಶ್ಯಕತೆಗಳನ್ನು ಕಂಡುಕೊಂಡು ತಮ್ಮದಾಗಿಸಿಕೊಳ್ಳುವುದು. ಆದರೆ ಚುನಾಯಿತ ಮಹಿಳಾ ಸದಸ್ಯೆಯರನ್ನು ಕೆಳವರ್ಗದ ಪುರುಷರನ್ನು ಗ್ರಾಮಪಂಚಾಯ್ತಿ ಕಾರ್ಯದರ್ಶಿಗಳು ಅಥವಾ ಇಂತಹ ಸರ್ಕಾರಿ ಅಧಿಕಾರಿಗಳು ನಡೆಸಿಕೊಳ್ಳುವ ರೀತಿ ಅಸಂಗತವಾದುದು. ಬಹಳಷ್ಟು ಗ್ರಾಮಪಂಚಾಯ್ತಿಗಳಿಗೆ ಭೇಟಿಯಿತ್ತಾಗ ಕೆಲವು ಕಾರ್ಯದರ್ಶಿಗಳು ವರ್ತಿಸಿದ ರೀತಿ ಬೇಸರ ತರಿಸುವಂತಿತ್ತು. ಆದರೆ ಕೆಲವರು ಆತ್ಮೀಯವಾಗಿ ಸ್ಪಂಧಿಸಿ ಮಾಹಿತಿ ನೀಡಿದನ್ನು ಇಲ್ಲಿ ಮರೆಯಲಾಗದು.

ಬಹಳಷ್ಟು ಕಾರ್ಯದರ್ಶಿಗಳು ನಿರಂಕುಶಮತಿಗಳು, ಚುನಾಯಿತ ಪ್ರತಿನಿಧಿಗಳಿಗೆ ಏನೂ ಗೊತ್ತಿಲ್ಲ, ಎಲ್ಲ ನಾನೇ ತಿಳಿಸಿಕೊಡುವುದು, ನಾನೇ ಮಾಡುವುದು ಎನ್ನುವ ಅಹಂಕಾರದ ಮಾತುಗಳನ್ನು ಆಡಿದ್ದಾರೆ. ಚುನಾಯಿತ ಸದಸ್ಯೆಯರಿಗೆ ಸರಿಯಾದ ಮಾಹಿತಿ ನೀಡಿ ಸರ್ಕಾರದಿಂದ ಜಾರಿಗೊಂಡ ಕಾರ್ಯಕ್ರಮಗಳನ್ನು ಪ್ರತಿನಿಧಿಗಳ ಮೂಲಕ ಜನರಿಗೆ ತಲುಪಿಸುವುದು ಅವರ ಜವಾಬ್ದಾರಿಯಾಗಿದೆ. ಕಾನೂನಿನಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಪರಮೋಚ್ಚ ಅಧಿಕಾರಗಳಿದ್ದರೂ, ಅದನ್ನು ಅವರಿಗೆ ನೀಡಲು ಇಂತಹ ಅಧಿಕಾರಶಾಹಿ ಶಕ್ತಿಗಳು ಮನಸ್ಸು ಮಾಡುವುದಿಲ್ಲ. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ ಎಂಬ ಮಾತು ಇಲ್ಲಿ ಅನ್ವಯವಾಗುತ್ತದೆ. ಎಲ್ಲವನ್ನು ತನ್ನ ಮೂಲಕವೇ ನಡೆಸುವ ಜಾಯಮಾನವು ಅವರಲ್ಲಿ ಕಂಡುಬಂದಿತು. ಇನ್ನೂ ಕೆಲವರು ತುಂಬಾ ಅನುನಯದಿಂದ ಚುನಾಯಿತ ಪ್ರತಿನಿಧಿಗಳೊಂದಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುವುದು ಮಹತ್ವದ ವಿಚಾರ.

ಗ್ರಾಮಸಭೆಗಳು ನಡೆಯುವ ಮತ್ತು ಚರ್ಚೆಗೆ ಬರುವ ವಿಷಯಗಳ ಕುರಿತು ಸರಿಯಾದ ಮಾಹಿತಿ ನಮಗೆ ಇರುವುದಿಲ್ಲ. ಎಲ್ಲವನ್ನೂ ಕಾರ್ಯದರ್ಶಿಯೇ ಮಾಡುತ್ತಾನೆ. ಆತ ಬಂದಾಗ ಸಭೆ, ಇಲ್ಲದಿದ್ದಾಗ, ಇಲ್ಲ. ಸಭೆ ಇದ್ದಾಗ ಆತ ಹೇಳಿದಂತೆಯೇ ಎಲ್ಲವೂ ನಡೆಯಬೇಕು. 'ದೊಡ್ಡ ದೊಡ್ಡವರ ಸಂಗಾಟ ಬೇರೆ ಇರತಾನ' ಎಂದು ಸಂಡೂರು ತಾಲ್ಲೂಕು ಗ್ರಾಮಪಂಚಾಯ್ತಿಯ ಸದಸ್ಯೆಯೊಬ್ಬರು ಹೇಳುವ ಮಾತು ನಮ್ಮ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಮತ್ತೊಂದು ಗ್ರಾಮಪಂಚಾಯ್ತಿಗೆ ಹೋದಾಗ 'ನಮ್ಮ ಪಂಚಾಯ್ತಿಗೆ ಹೊಸ ಕಾರ್ಯದರ್ಶಿ ಬಂದಿದ್ದಾನೆ. ಮೊದಲಿದ್ದ ಕಾರ್ಯದರ್ಶಿ ನಮಗೆ ಯಾವ ರೀತಿಯಲ್ಲೂ ಸಹಕಾರ ಕೊಡುತ್ತಿರಲಿಲ್ಲ. ಕಿರಿಕಿರಿ ಮಾಡುತ್ತಿದ್ದ, ಸರ್ಕಾರದಿಂದ ಬಂದ ಯೋಜನೆಗಳ ವಿಷಯದ ಪತ್ರಗಳನ್ನು ನಮ್ಮಿಂದ ಮುಚ್ಚಿಟ್ಟು ಆಟವಾಡಿಸುತ್ತಿದ್ದ' ಎಂದು ಸದಸ್ಯೆಯರು ತಿಳಿಸಿದ್ದಾರೆ.[೨೩] ಅಲ್ಲದೆ ಕಾಮಗಾರಿಗಳನ್ನು ಮಾಡಿ ಮುಗಿಸಿದ ನಂತರ ಅದನ್ನು ಬಿಲ್ಲು ಮಾಡಿ ಹಣ ಪಾವತಿಸಲು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಬ್ಬರೂ

ಸೇರಿ ಸದಸ್ಯೆಯರನ್ನು ಸತಾಯಿಸುವುದನ್ನು ಕೆಲವು ಸದಸ್ಯೆಯರು ಬೇಸರದಿಂದ ತಿಳಿಸಿದರು.[೨೪] ಮಹಿಳಾ ಸದಸ್ಯೆಯರ ಅಜ್ಞಾನ ಇವರಿಗೆ ವರದಾನವಾಗಿದೆಯಷ್ಟೆ. ಕೆಲವು ಗ್ರಾಮಪಂಚಾಯ್ತಿಗಳಲ್ಲಿ ಕಾರ್ಯದರ್ಶಿಗಳು ಮಾಹಿತಿ ಸಂಗ್ರಹಿಸಲು ಹೋದಾಗ ವಿಚಿತ್ರವಾದ ಅನುಮಾನದ ದೃಷ್ಟಿಯಲ್ಲಿ ನನ್ನನ್ನು ಅವಲೋಕಿಸುತ್ತಿರುವುದು ಗೋಚರವಾಯಿತು. ಕೆಲವು ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಅಧ್ಯಕ್ಷೆಯರು ಕಾರ್ಯದರ್ಶಿಗೆ ಅತ್ಯಂತ ವಿಧೇಯರಾಗಿರುವುದು ಕಾಣಿಸಿತು.[೨೫] ಏಕೆಂದರೆ ಕಾರ್ಯದರ್ಶಿ ಅನುಭವ ಇರುವಂಥವನು. ತಮಗೆ ಅಂತಹ ತಿಳುವಳಿಕೆ, ಅರಿವು ಇಲ್ಲ. ತಮಗೇನಾದರೂ ತೊಂದರೆ ಮಾಡಿದರೆ ಎಂಬ ಅವ್ಯಕ್ತ ಭಯವೂ ಅಧ್ಯಕ್ಷೆಯರಲ್ಲಿತ್ತು. ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳಿಗೆ ಸಂದರ್ಶನದಲ್ಲಿ ಕಾರ್ಯದರ್ಶಿಯನ್ನು ಕೇಳಿ ಎಂದು ಸೂಚಿಸುತ್ತಿದ್ದರು. ಕೆಲವು ಕಾರ್ಯದರ್ಶಿಗಳು ಸದಸ್ಯೆಯರಿಗೆ ತರಬೇತಿ ಶಿಬಿರಕ್ಕೆ ಭಾಗವಹಿಸಲು ಸರಿಯಾದ ರೀತಿಯಲ್ಲಿ ಮಾಹಿತಿಯನ್ನೇ ಕೊಟ್ಟಿರಲಿಲ್ಲ.[೨೬] ತರಬೇತಿ ಶಿಬಿರ ದೇವಲಾಪುರ ಗ್ರಾಮಪಂಚಾಯ್ತಿಯ ಅಧ್ಯಕ್ಷೆಯ ಪತಿ ಹೇಳಿದಂತೆ ಕಾರ್ಯದರ್ಶಿಗಳು ಅನಕ್ಷರಸ್ಥರಾದ ಅಜ್ಞಾನಿಗಳಾದ ಸದಸ್ಯೆಯರಿಗೆ ಮೋಸ ಮಾಡಲು ಬಹಳ ಅವಕಾಶಗಳಿರುತ್ತವೆ. ಖಾಲಿ ಕಾಗದದ ಮೇಲೆ ಸಹಿ ಹಾಕಿಸಿಕೊಂಡು ಏನಾದರೂ ಮಾಡಬಹುದು. ಆದ್ದರಿಂದ ಅನಕ್ಷರಿಯಾದ ನನ್ನ ಪತ್ನಿಗೆ ನಾನು ಆಡಳಿತದಲ್ಲಿ ಸಹಾಯ ಮಾಡುತ್ತಿರುವೆ.[೨೭] 'ನಮ್ಮ ಸೆಕ್ರೇಟಿ ಮೂರು ಗ್ರಾಮಪಂಚಾಯ್ತಿ ನೋಡಕೊಂತಾನಂತೆ. ಯಾವಾಗ ನಮ್ಮೂರಿಗೆ ಬರತಾನೋ ಗೊತ್ತಿಲ್ಲ. ನಾನಂತೂ ಅವನ ಕಂಡಿಲ್ಲ. ನಾನು ಪಂಚಾಯತಿ ಆಫೀಸಿಗೆ ಹೋಗೂದಿಲ್ರಿ. ಎಲ್ಲ ನಮ್ಮಾತ ನೋಡಕೊಂತಾನ',[೨೮] 'ಸೆಕ್ರೇಟ್ರಿ ನಮಗೇನೂ ತೊಂದ್ರಿ ಕೊಟ್ಟಿಲ್ಲವಾ, ಬೇಸಿ ಅದಾನ, ನಾವೇನ ಜಾಸ್ತಿ ಮಾತಾಡುವುದಿಲ್ಲ. ಆತ ಎಲ್ಲಿ ಹೆಬ್ಬೆಟ್ಟು ಒತ್ತು ಅಂತಾನ ಅಲ್ಲಿ ಒತ್ತತೇವಿ. ನಮ್ಮೂರಿಂದಲ್ಲ ಆತಗ ಗೊತ್ತು. ಊರಾಗ ಬಾಳಷ್ಟು ಕೆಲಸ ಮಾಡಸಾಕ ಹತ್ಯಾನ. ಮೀಟಿಂಗ್ ಗೀಟಿಂಗೆಲ್ಲ ಅವನ ಕರಕೊಂತಾನ. ನಾವ ಬರತೀವಿ'[೨೯] ಎಂದು ಹೊಸಪೇಟೆ ಗ್ರಾಮಪಂಚಾಯ್ತಿ ಅಧ್ಯಕ್ಷೆ ಮತ್ತು ಸದಸ್ಯರು ಹೇಳಿದ ಈ ಮಾತುಗಳು ಸರ್ಕಾರಿ ಅಧಿಕಾರಿಗಳಲ್ಲಿ ಎರಡು ರೀತಿಯವರನ್ನು ತೋರಿಸುತ್ತವೆ. ಕೆಲವರು ಅಧಿಕಾರ ಚಲಾಯಿಸುವವರಾದರೆ, ಮತ್ತೆ ಕೆಲವರು ಒಳಗಿದ್ದುಕೊಂಡೇ ಎಲ್ಲವನ್ನು ಮಾಡಿಕೊಳ್ಳುವವರು, ಯಾರಿಗೂ ತೊಂದರೆ ಮಾಡದೆ ಕೆಲಸ ಸಾಧಿಸುವವರು, ಸ್ವಲ್ಪಮಟ್ಟಿಗೆ ಚುನಾಯಿತ ಪ್ರತಿನಿಧಿ ಮತ್ತು ಊರಿನವರೊಂದಿಗೆ ಸೇರಿ ಉತ್ತಮ ಕೆಲಸ ಮಾಡುವವರೂ ಇದ್ದಾರೆ.

ಅನಕ್ಷರಸ್ಥರು, ಹಿಂದುಳಿದವರು ಹೆಚ್ಚಾಗಿರುವ ಗ್ರಾಮಪಂಚಾಯ್ತಿಗಳಲ್ಲಿ ಸೂಕ್ತ ಮಾರ್ಗದರ್ಶನದ ಮನಸ್ಸುಳ್ಳ, ಪ್ರಾಮಾಣಿಕ ಕಾಳಜಿಯುಳ್ಳ, ದಮನಿತರ ಬಗ್ಗೆ ಕಳಕಳಿಯುಳ್ಳ ಅಧಿಕಾರಿಗಳ ಅನಿವಾರ್ಯತೆ

ಇಂದು ಇದೆ. ಪಂಚಾಯತ್ ರಾಜ್ ಸಂಸ್ಥೆಗಳ ಉನ್ನತ ಅಧಿಕಾರಿಗಳು (ಐಎಎಸ್ ಅಧಿಕಾರಿಗಳು) ಚುನಾಯಿತ ಪ್ರತಿನಿಧಿಗಳ ಮೇಲ್ವಿಚಾರಣೆಯಲ್ಲಿ ಕೆಲಸಗಳನ್ನು ನಿರ್ವಹಿಸಬೇಕು. ಅವರು ಪಂಚಾಯತ್ ರಾಜ್ ಸಂಸ್ಥೆಗಳು ತೆಗೆದುಕೊಳ್ಳುವ ನಿರ್ಣಯ ತೀರ್ಮಾನಗಳನ್ನು ಜಾರಿಗೊಳಿಸುವ ಕಾರ್ಯದಲ್ಲಿ ಉಪಕರಣಗಳಾಗಿರಬೇಕೆ ವಿನಃ ಅವರೇ ನಿರಂಕುಶಾಧಿಕಾರಿಗಳಾಗಬಾರದು. ಅಧಿಕಾರವು ಮೇಲಿನ ಸ್ತರದ ಸರ್ಕಾರಗಳಿಂದ ಕೆಳಸ್ತರದ ಸರ್ಕಾರಗಳಿಗೆ ವರ್ಗಾವಣೆಯಾದರೆ ಸಾಲದು. ಅದು ಅಧಿಕಾರಶಾಹಿ ಯಿಂದ ಜನಶಕ್ತಿಗೆ ಪರಿಣಾಮಕಾರಿಯಾಗಿ ವರ್ಗಾವಣೆಯಾಬೇಕು.[೬] ಮೇಲಿನ ಮಾತುಗಳು ಇಡೀ ಪಂಚಾಯಿತಿ ವ್ಯವಸ್ಥೆಗೆ ಪೂರಕವಾಗಿದ್ದರೂ, ಅದನ್ನು ಚುನಾಯಿತ ಮಹಿಳಾ ಸದಸ್ಯೆಯರ ವಿಷಯದಲ್ಲೂ ಅನ್ವಯಿಸಬಹುದಾಗಿದೆ.

ಯಾವುದೇ ರಾಜಕೀಯ ಪಕ್ಷದ ಆಡಳಿತಾರೂಢ ಸರ್ಕಾರವು ಸ್ಥಳೀಯ ಸಂಸ್ಥೆಗಳಿಗೆ, ಚುನಾಯಿತ ಸದಸ್ಯರಿಗೆ ಪರಮಾಧಿಕಾರಗಳನ್ನು ನೀಡಲು ಮುಂದಾಗುವುದಿಲ್ಲ. ಇದು ವಿಕೇಂದ್ರೀಕರಣದ ವಿಷಯದಲ್ಲೂ ಸ್ಪಷ್ಟವಾಗುತ್ತದೆ. ಶೇ.೩೩.೩೩ರಷ್ಟು ಮೀಸಲಾತಿಯನ್ನು ಶಾಸನಾತ್ಮಕವಾಗಿ ನೀಡದೆ, ತಾತ್ವಿಕವಾಗಿ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಪ್ರಭುತ್ವವು ಸ್ಥಳೀಯ ಸಂಸ್ಥೆಗಳಿಗೆ ನೀಡಿದೆ. ಆದರೆ ಅವು ಸುಗುಣಾತ್ಮಕವಾಗಿ ಅನುಷ್ಠಾನಗೊಳ್ಳಲು ಬೇಕಾದ ಸಂಪನ್ಮೂಲಗಳನ್ನು ವಾತಾವರಣವನ್ನು ಸಜ್ಜುಗೊಳಿಸಿರುವುದಿಲ್ಲ. ಸ್ವಾಯುತ್ತತೆ, ಸ್ವಾತಂತ್ರ್ಯ ಇರುವುದಿಲ್ಲ. ಹೀಗಾಗಿ ಅಧಿಕಾರಶಾಹಿ ವ್ಯವಸ್ಥೆ ಇದರಿಂದ ಬಲಿತು, ಜನ ಪ್ರತಿನಿಧಿಗಳನ್ನು ಕೀಳಾಗಿ ಕಾಣುವ ಮತ್ತು ತಮ್ಮ ಆಟದ ಬೊಂಬೆಗಳನ್ನಾಗಿಸಿ ಕೊಂಡಿರುವ ಸಂದರ್ಭಗಳೇ ಹೆಚ್ಚು. ತಮಗೆ ಸಿಕ್ಕ ಅಧಿಕಾರದ ರುಚಿಯನ್ನು ಜನ ಪ್ರತಿನಿಧಿಗಳೊಂದಿಗೆ ಹಂಚಿಕೊಳ್ಳಲು ಇವರು ಸಿದ್ಧರಿಲ್ಲ. ಆಳುವವರನ್ನೇ ಆಳುವ ಅಧಿಕಾರಿಗಳ ಈ ಮನೋಧರ್ಮದಿಂದಾಗಿ ಜನಪ್ರತಿನಿಧಿಗಳಿಗೂ ಇವರಿಗೂ ಒಳ್ಳೆಯ ಸಂಬಂಧ ಉಳಿದಿಲ್ಲ.

ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಸಿಕ್ಕಿದೆ. ಅದು ಬಂಗಾರದ ಸೂಜಿಯಂತಾಗಿದೆ. ಇತ್ತ ಉಪಯೋಗಕ್ಕೂ ಬಾರದ, ಅತ್ತ ಉಪಯೋಗಿಸಲೂ ಗೊತ್ತಿಲ್ಲದ ಸ್ಥಿತಿ ಅವರದ್ದಾಗಿದೆ. ಇಂತಹ ಸ್ಥಿತಿಯನ್ನು ಅಧಿಕಾರಿಗಳು ಬಹು ಚೆನ್ನಾಗಿ ಬಳಸಿಕೊಂಡು ಬೆಳೆಯುತ್ತಿರುವುದು ಕಂಡುಬರುತ್ತಿದೆ. ಮಹಿಳಾ ಅಭ್ಯರ್ಥಿಗಳಿಗಿರುವ ತರಬೇತಿ, ಶಿಕ್ಷಣದ ಕೊರತೆ, ಪುರುಷಶಾಹಿ ಹಿಡಿತಗಳು ಅಧಿಕಾರವಿದ್ದರೂ ಅದನ್ನು ಉಪಯೋಗಿಸಲಾರದಂತಹ ಅಸಹಾಯಕತೆಯನ್ನು ತಂದೊಡ್ಡಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುವ, ಯೋಜನೆಗಳನ್ನು ರೂಪಿಸುವ ಸಾಮರ್ಥ್ಯದ ತರಬೇತಿಯನ್ನು ಮಹಿಳೆಯರಿಗೆ ಒದಗಿಸುವುದು ಅವಶ್ಯಕವಾಗಿದೆ. ಲಿಂಗಭೇದದಂತಹ ತಾರತಮ್ಯಗಳು, ಲಿಂಗಾಧಾರಿತ ಶ್ರಮವಿಭಜನೆಯ ಮಾನದಂಡಗಳು ಚುನಾಯಿತ ಮಹಿಳೆಯರನ್ನು ಅಪ್ರಧಾನ ಮತ್ತು ಅಪ್ರಯೋಜಕರನ್ನಾಗಿಸಲು

ಬಹುಮುಖ್ಯ ಕಾರಣಗಳಾಗಿವೆ. ಈ ಹಿನ್ನೆಲೆಯಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬದಲಾವಣೆಗಳಾದರೂ 'ಗೃಹಿಣಿ ಪಟ್ಟ' ಎನ್ನುವುದು ಆಕೆಯನ್ನು ಬಿಟ್ಟು ಹೋಗಿಲ್ಲ. ಇಂಥಹ ಮಾದರಿಯನ್ನು ಗಟ್ಟಿಗೊಳಿಸುವ ಸಾಮಾಜಿಕ ಪ್ರಕ್ರಿಯೆಯನ್ನು ಸಮಾಜವು ಜೀವಂತವಾಗಿಟ್ಟಿರುತ್ತದೆ. ಇದಕ್ಕೆ ಇಂದು ಆಯ್ಕೆಯಾದ ಮಹಿಳೆಯರೇ ಸಾಕ್ಷಿ. ಪದವಿ ದೊಡ್ಡದಾಗಿದ್ದರೂ, ಚುನಾಯಿತ ಮಹಿಳೆಯರಲ್ಲಿ ಅದರಲ್ಲೂ ಕೆಳವರ್ಗದ ಸದಸ್ಯೆಯರಲ್ಲಿ ಪಾರಂಪರಿಕವಾದ ಕೀಳರಿಮೆ, ಹೆದರಿಕೆ, ನಾಚಿಕೆ, ಪರಾವಲಂಬನೆ, ಪುರುಷಾಧೀನ ಸ್ಥಿತಿಗಳನ್ನು ಕಾಣಹುದಾಗಿದೆ. ಅಧ್ಯಕ್ಷರ ಕುರ್ಚಿಯಲ್ಲಿ ಕುಳಿತ ಅಧ್ಯಕ್ಷೆಯು ಮುದುರಿ ಮಡ್ಡಿಯಾಗಿ ಹೋಗಿರುತ್ತಾಳೆ. ಆಕೆಯ ಅಸ್ತಿತ್ವಕ್ಕಿಂತ ಕುರ್ಚಿಯ ಅಸ್ತಿತ್ವವೇ ಅಲ್ಲಿ ಎದ್ದುಕಾಣುತ್ತದೆ.

ಅಡಿಟಿಪ್ಪಣಿಗಳು

೧. ಹಾಲಪ್ಪ ಎನ್., **ರಾಜ್ಯಶಾಸ್ತ್ರ**, ೧೯೯೭, ಪು.೧೪೬

೨. Sharma R.N., Sharma R.K., **Political Sociology**, 1997, P.13, 220, 221

೩. ಅದೇ, ೧೯೯೭, ಪು.೨೧೮

೪. ಅದೇ, ೧೯೯೭, ಪು.೨೨೨

೫. ಅದೇ, ಪು.೧೩, ೧೪, ೨೩೨, ೨೩೪

೬. ಅದೇ, ಪು.೨೩೩

೭. ಅದೇ, ಪು.೨೨೦

೮. ಚಂದ್ರಪೂಜಾರಿ ಎಂ., **ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ**, ೨೦೦೧, ಪು.೧೨೨

೯. **ಉದಯವಾಣಿ**, ದಿನಾಂಕ ೧೫.೫.೨೦೦೨

೧೦. **ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ**, ೧೯೯೩, ೨೦೦೨

೧೧. ವಿವರಕ್ಕೆ ನೋಡಿ, **ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ**, ೧೯೯೩, ೨೦೦೨

೧೨. ಉಧೃತ: ಚಂದ್ರಪೂಜಾರಿ ಎಂ., **ದೇಶೀಯತೆ ನೆರಳಿನಲ್ಲಿ ವಿಕೇಂದ್ರೀಕರಣ**, ೨೦೦೧, ಪು.೧೪೪

೧೩. ಶ್ರೀಧರ ಎ., **ಕರ್ನಾಟಕದಲ್ಲಿ ಪಂಚಾಯತ್ ರಾಜ್ ಕಾಯ್ದೆಗಳು**, ೨೦೦೨, ಪು.೩೬

೧೪. ಉಧೃತ: ಚಂದ್ರಪೂಜಾರಿ ಎಂ., **ದೇಶೀಯತೆ ನೆರಳಿನಲ್ಲಿ ವಿಕೇಂದ್ರೀಕರಣ**, ೨೦೦೧, ಪು.೧೪೪

೧೫. **ವಿಜಯಕರ್ನಾಟಕ**, ದಿನಾಂಕ ೧೩.೮.೨೦೦೨

೧೬. ಉಧೃತ: ಚಂದ್ರಪೂಜಾರಿ ಎಂ., **ದೇಶೀಯತೆ ನೆರಳಿನಲ್ಲಿ ವಿಕೇಂದ್ರೀಕರಣ**, ೨೦೦೧, ಪು.೧೪೪

೧೭. **ಕನ್ನಡ ಪ್ರಭ**, ದಿನಾಂಕ ೧೪.೮.೨೦೦೨

೧೮. ಷೇಕ್ ಅಲಿ ಬಿ., **ಕರ್ನಾಟಕ ಚರಿತ್ರೆ ಸಂಪುಟ, ಕ್ರಿ.ಶ.೧೯೦೦-೧೯೫೬, ಸಂಪುಟ ೭**, ೧೯೯೭, ಪು.೧೫೨

೧೯. ಪ್ರಜಾವಾಣಿ, ದಿನಾಂಕ ೨೩.೦೩.೨೦೦೨

೨೦. ಮಂಜುಳ ಆರ್.ಕೆ., ನಾಯಕತ್ವದ ಹೊಸ್ತಿಲಲ್ಲಿ ಮಹಿಳೆ, ಪ್ರಜಾವಾಣಿ ಸಾಪ್ತಾಹಿಕ ಪುರವಣಿ, ೫.೩.೨೦೦೨, ಪು.೪

೨೧. ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, ೧೯೯೩, ೨೦೦೨

೨೨. ಚಂದ್ರಪೂಜಾರಿ ಎಂ., ದೇಶೀಯತೆ ನೆರಳಿನಲ್ಲಿ ವಿಕೇಂದ್ರೀಕರಣ, ೨೦೦೧, ಪು.೧೪೦-೧೪೧

೨೩. ರಾಮಸಾಗರ ಗ್ರಾಮಪಂಚಾಯತಿಯ ಸದಸ್ಯೆಯರು

೨೪. ಹಂಪಿ ಮತ್ತು ಮೆಟ್ರಿ ಗ್ರಾಮಪಂಚಾಯತಿಯ ಸದಸ್ಯೆಯರು

೨೫. ಬುಕ್ಕಸಾಗರ ಗ್ರಾಮಪಂಚಾಯಿತಿ ಅಧ್ಯಕ್ಷೆ

೨೬. ಬೈಲವದ್ದಿಗೇರಿ ಮತ್ತು ಪಾಪಿನಾಯಕನಹಳ್ಳಿ ಗ್ರಾಮಪಂಚಾಯತಿ ಸದಸ್ಯೆಯರಿಗೆ ಫೆಬ್ರವರಿ ೨೨, ೨೩, ೨೦೦೨ರಂದು ಕನ್ನಡ ವಿಶ್ವವಿದ್ಯಾಲಯ ಅಭಿವೃದ್ಧಿ ಅಧ್ಯಯನ ವಿಭಾಗದಿಂದ ಎರಡು ದಿನಗಳ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ ನಾನು ಸಂಪನ್ಮೂಲ ವ್ಯಕ್ತಿಯಾಗಿ ಸಹಕರಿಸಿದ್ದೆನು

೨೭. ದೇವಲಾಪುರ ಗ್ರಾಮಪಂಚಾಯತಿ ಅಧ್ಯಕ್ಷೆಯ ಪತಿ ಶ್ರೀ ಮಲ್ಲಯ್ಯ

೨೮. ಅಂತಾಪುರ ಗ್ರಾಮಪಂಚಾಯತಿ ಸದಸ್ಯೆ

೨೯. ನಾಗಲಾಪುರ, ಗ್ರಾಮಪಂಚಾಯತಿ ಸದಸ್ಯೆ

೩೦. ಚಂದ್ರಶೇಖರ ಟಿ.ಆರ್.(ಸಂ), ವಿಕೇಂದ್ರೀಕರಣ ತತ್ವ ಮತ್ತು ಆಚರಣೆ, ೨೦೦೦, ಪು.೨೬

ಅಧ್ಯಾಯ ೪

ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು

ಪ್ರಸ್ತುತ ಅಧ್ಯಾಯವು ಈ ಮಹಾಪ್ರಬಂಧದ ಹಿಂದಿನ ಅಧ್ಯಾಯದ ಮುಂದಿನ ಹೆಜ್ಜೆಯಾಗಿದೆ. ಚುನಾಯಿತ ಮಹಿಳೆಯರ ಕುರಿತು ಹಿಂದಿನ ಅಧ್ಯಾಯದಲ್ಲಿ ಸ್ಥೂಲವಾದ ಒಂದು ಪರಿಕಲ್ಪನೆಯಿದ್ದರೆ, ಈ ಅಧ್ಯಾಯವು ಹಲವಾರು ಸೂಕ್ಷ್ಮವಾದ ಸಂಗತಿಗಳನ್ನು ಬಿಚ್ಚಿಡುತ್ತದೆ. ಚುನಾಯಿತ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರುವ ರಾಜಕೀಯ ಸಾಮಾಜೀಕರಣದ ವಿವಿಧ ನಿಯೋಗಗಳ ಹಿನ್ನೆಲೆಯಲ್ಲಿ ಸದಸ್ಯೆಯರ ಖಾಸಗಿ ಬದುಕನ್ನು ಅವರ ಅಂತರಂಗದ ವಿವಿಧ ತರಂಗಗಳನ್ನು ಇಲ್ಲಿ ಅಧ್ಯಯನಿಸಲು ಪ್ರಯತ್ನಿಸಲಾಗಿದೆ. ಇದರಿಂದ ಚುನಾಯಿತ ಮಹಿಳಾ ಸದಸ್ಯೆಯರನ್ನು ಬಹುಮುಖಿ ಸಂವೇದನೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿಕೊಳ್ಳಲು ಅನುಕೂಲವಾಗಿದೆ. ಪ್ರತಿಯೊಬ್ಬ ಮಹಿಳಾ ಸದಸ್ಯೆಯ ಅಂತರಂಗದೊಂದಿಗಿನ ಆಪ್ತ ಸಮಾಲೋಚನೆಯು ಈ ಮಾದರಿಯ ಅಧ್ಯಯನಕ್ಕೆ ಹಲವಾರು ವಿಸ್ತಾರಗಳನ್ನು, ಸೂಕ್ಷ್ಮ ಒಳನೋಟಗಳನ್ನು ಮತ್ತು ನಿಖರತೆಯನ್ನು ತಂದುಕೊಟ್ಟಿದೆ.

ವಿಕೇಂದ್ರೀಕರಣದ ಪರಿಣಾಮಕಾರಿ ಆಚರಣೆಗೆ ಮಹಿಳಾ ಸಶಕ್ತೀಕರಣವು ತುಂಬಾ ಮಹತ್ವದ್ದು. ಸಶಕ್ತೀಕರಣದ ಬಹು ಮುಖ್ಯ ಗುಣವೆಂದರೆ ಸ್ವಾತಂತ್ರ್ಯ. ಮನೆವಾರ್ತೆಯ ಜವಾಬ್ದಾರಿಗಳಿಗೇ ಮೀಸಲಾಗಿರುವ ಮಹಿಳೆಗೆ ಸಾರ್ವಜನಿಕ ಬದುಕೇ ಇಲ್ಲವೆನ್ನುವಂತಹ ವಾತಾವರಣವಿದೆ. ಮಹಿಳೆಯರ ಜಗತ್ತು ಕೇವಲ ಖಾಸಗಿಯಾದದ್ದು ಮತ್ತು ಕುಟುಂಬ ಸಂಬಂಧಿಯಾದುದು ಎಂಬ ಲಿಂಗತಾರತಮ್ಯವಾದಿ ಧೋರಣೆಯು ಸಮಾಜದಲ್ಲಿ ಬೇರೂರಿದೆ. ಇದಕ್ಕೆ ಪೂರಕವೆನ್ನುವಂತೆ ನಮ್ಮ ಸಮಾಜದ ಮಹಿಳೆಯರು ಗೃಹಿಣಿ, ಸೊಸೆ, ತಾಯಿ ಎನ್ನಿಸಿಕೊಳ್ಳುವುದೇ ತಮ್ಮ ಬದುಕಿನ ಪರಮೋಚ್ಚ ಧ್ಯೇಯವೆಂದು ಭಾವಿಸಿ ಹಾಗೆ ನಡೆದುಕೊಳ್ಳುತ್ತಾರೆ. ಭಾರತೀಯ ಸಮಾಜದ ಬಹುಮುಖ್ಯ ಶಕ್ತಿಯೆಂದರೆ ಪಿತೃಪ್ರಧಾನ ಯಜಮಾನ ಪದ್ಧತಿ. ಪಿತೃಪ್ರಧಾನ ಯಜಮಾನ ಪದ್ಧತಿಯ ಮುಖ್ಯಸಂಸ್ಥೆ ಕುಟುಂಬ. ಅದರ ಮುಖ್ಯಸ್ಥ ಪುರುಷ. ಹೆಣ್ಣಿಗೆ ವಿದ್ಯೆ, ಜ್ಞಾನ, ಗೌರವ ಏನೊಂದೂ ಸಿಗಬೇಕಾದರೆ ಅವನ ಅನುಮತಿ ಬೇಕು. ಇಂತಹ ಬೆಳವಣಿಗೆ ಅವಳಲ್ಲಿ ದಾಸ್ಯತೆಯನ್ನು ಹುಟ್ಟುಹಾಕಿತು. ತಾನು ಯಾತಕ್ಕೂ ಬೇಡವಾದವಳು ಸೇವೆಯೊಂದೇ ನನ್ನ ಭಾಗ್ಯ ಎನ್ನುವ ನಂಬಿಕೆಯನ್ನು ಬೆಳೆಸಿತು. ವಿಚಾರದಲ್ಲಾಗಲಿ, ಕ್ರಿಯೆಯಲ್ಲಾಗಲಿ ಮಹಿಳೆ ಸ್ವತಂತ್ರ ಮನೋಭಾವ ತೋರದಂತಹ ಪರಿಸ್ಥಿತಿಯನ್ನು ನಿರ್ಮಿಸಿತು.

ವಿಭಿನ್ನ ಸಾಮಾಜಿಕ, ಆರ್ಥಿಕ, ಲಿಂಗಾಧಾರಿತ ಸ್ತರಗಳನ್ನು ಹೊಂದಿರುವ ನಮ್ಮ ಸಮಾಜದಲ್ಲಿ ಏಕರೀತಿಯ ಅಭಿವೃದ್ಧಿ ಅಥವಾ ಆಚರಣೆ ಸಾಧುವಲ್ಲ. ಇಂದು ನಿರ್ಮಾಣವಾಗುತ್ತಿರುವ ತಾಂತ್ರಿಕ

[illegible]

[illegible]

[illegible]

ಕೌಶಲ್ಯಗಳು, ಅದರಿಂದ ಉಂಟಾದ ಔದ್ಯೋಗಿಕರಣಗಳು, ವಿಕೇಂದ್ರೀಕರಣ, ಮುಂತಾದ ಸಂಗತಿಗಳು ಸಾಮಾಜಿಕ ರಚನೆಯಲ್ಲಿ ಅದರ ಆಡಳಿತಾತ್ಮಕ, ಕೌಟುಂಬಿಕ, ಆರ್ಥಿಕವಾದಂತಹ ಸ್ವರೂಪಗಳಲ್ಲಿಯೂ ತೀವ್ರತರದ ಪರಿವರ್ತನೆಗಳನ್ನು ಸಾಧ್ಯವಾಗಿಸುತ್ತಿದೆ. ಇವು ತಳಮಟ್ಟದ ಸಾಮಾಜಿಕ ಪರಿಚಲನೆಗೆ, ಸಾಂಪ್ರದಾಯಿಕವಾದ ಯಜಮಾನಿಕೆಯ ಬದಲಾವಣೆಗೆ ಬಹುಮುಖ್ಯ ಸಂಗತಿಗಳಾಗಿವೆ. ಇಂದಿನ ಜಾಗತೀಕರಣ ಫಲಿತಗಳು ಕೂಡ ಹಲವಾರು ರೀತಿಯ ಮಿಸುಕಾಟಗಳನ್ನು ಸಮಾಜದ ಸಂರಚನೆಯಲ್ಲಿ ಹುಟ್ಟು ಹಾಕಿವೆ. ಇಂತಹ ಸಂಗತಿಗಳು ತೀವ್ರತರದಲ್ಲಿ ಗ್ರಾಮ ಸಮಾಜಗಳನ್ನು ನಗರಗಳತ್ತ ವಲಸೆ ಹೋಗುವಂತೆ ಅಥವಾ ನಗರೀಕರಣದ ಭ್ರಮೆಗಳನ್ನು ಮೈಗೂಡಿಸಿಕೊಳ್ಳುವಂತೆ ಗ್ರಾಮ ಸಮಾಜಗಳನ್ನು ಪ್ರೇರೇಪಿಸುತ್ತಿವೆ. ಸಾಂಪ್ರದಾಯಿಕ ಜೀವನಶೈಲಿ ಕಸುಬು ಕ್ರಿಯೆ ಮತ್ತು ಅವಿಭಕ್ತ ಮನೋಧರ್ಮಗಳು ಇಂದು ಇಲ್ಲವಾಗುತ್ತಿವೆ. ಇಂತಹ ಪರಿವರ್ತನೆಗಳು ಆಧುನಿಕ ಕುಟುಂಬ ರಚನೆ, ಗಾತ್ರ, ಯಜಮಾನಿಕೆ, ಆರ್ಥಿಕ ವ್ಯವಹಾರ, ಸಾಮಾಜಿಕ ಸ್ಥಾನಮಾನ, ಮಹಿಳೆಯರಿಗಿರುವ ಸ್ಥಾನಮಾನ, ವಿವಾಹ ಪದ್ಧತಿ, ಮಹಿಳಾ ರಾಜಕೀಯ ಭಾಗಿತ್ವ ಮತ್ತು ನಿರ್ಣಯ ಪ್ರಕ್ರಿಯೆಗಳ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರುತ್ತಿವೆ. ಈ ಎಲ್ಲ ಅರಿವಿನ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯಿಗಳಲ್ಲಿ ಮಹಿಳೆಯ ಭಾಗವಹಿಸುವಿಕೆಯ ಪ್ರಕ್ರಿಯೆಯನ್ನು ಅಧ್ಯಯನಿಸಲು ಪ್ರಯತ್ನಿಸಲಾಗುತ್ತದೆ. ಭಿನ್ನ ಸ್ತರದ, ಭಿನ್ನ ಸ್ವರೂಪದ ಭೌಗೋಳಿಕ, ಸಾಮಾಜಿಕ, ರಾಜಕೀಯ ನೆಲೆಗಳನ್ನು ಹೊಂದಿರುವ ಇವು ಅಧ್ಯಯನದ ದೃಷ್ಟಿಯಿಂದ ಕುತೂಹಲಕರವಾದಂತಹ ಸಂಗತಿಗಳನ್ನು ಬಿಚ್ಚಿಡುತ್ತವೆ.

೧. ಸಾಮಾಜಿಕ ನೆಲೆ

೨. ಶೈಕ್ಷಣಿಕ ನೆಲೆ

೩. ಊಳಿಗಮಾನ್ಯ ವ್ಯವಸ್ಥೆಯ ನೆಲೆ

೪. ಆರ್ಥಿಕ ನೆಲೆ

ಈ ಹಿನ್ನೆಲೆಯಲ್ಲಿ ಚುನಾಯಿತ ಮಹಿಳೆಯರ ಕಾರ್ಯ ಚಟುವಟಿಕೆಗಳನ್ನು, ತಿಳುವಳಿಕೆಯ ವಿಸ್ತಾರಗಳನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ.

ಸಾಮಾಜಿಕ ನೆಲೆ

ಲೆನಿನ್‌ರವರು ಹೇಳಿದ ಮಾತುಗಳು ಈ ಸಂದರ್ಭದಲ್ಲಿ ಮಹತ್ವಪೂರ್ಣ ಎನಿಸುತ್ತವೆ. 'ಮಹಿಳೆಯರು ಸಾಮಾಜಿಕವಾಗಿ, ಉತ್ಪನ್ನಕಾರಕ ದುಡಿಮೆಯಲ್ಲಿ ಪಾಲ್ಗೊಂಡು ಗೃಹಕೃತ್ಯದ ದಾಸ್ಯತನದಿಂದ ವಿಮೋಚನೆ ಹೊಂದುವಂತಾಗಬೇಕು. ಮತ್ತು ಮಹಿಳೆಯರು ಅಡಿಗೆಮನೆ, ತಾಯ್ತನದ ಮತ್ತು

ದಾದಿಯ ಕೆಲಸದಲ್ಲೇ ಮರುಳಾಗಿ ಅಪಮಾನಕ್ಕೆ ಗುರಿಯಾಗುವಂತಿದ್ದು, ನಿರಂತರ ದಾಸ್ಯಕ್ಕೆ ಒಳಪಟ್ಟ ಈ ಶಾಶ್ವತ ಗುಲಾಮ ಚಾಕರಿಯಿಂದ ಮುಕ್ತರಾಗಬೇಕಾದದ್ದು ಅತ್ಯವಶ್ಯಕ'.[೧]

ನಮ್ಮ ದೇಶದ ಮಹಿಳೆಯರು ಒಂದೇ ವರ್ಗಕ್ಕೆ ಸೇರಿದವರಲ್ಲ. ಅವರವರ ವರ್ಗ, ಸಮೂಹ, ಜಾತಿಯ ಹಿನ್ನೆಲೆಯಲ್ಲಿ ಅಭಿವೃದ್ಧಿ ಪಥದಲ್ಲಿ ಅವರು ಎದುರಿಸುವ ಸಮಸ್ಯೆಗಳು ರೂಪದಲ್ಲಿಯೂ ಪ್ರಮಾಣದಲ್ಲಿಯೂ ಭಿನ್ನ ಭಿನ್ನ. ಇಡೀ ಪುರುಷವರ್ಗದ ದೃಷ್ಟಿಯಲ್ಲಿ ಮಹಿಳೆಯ ಶೋಷಣೆ ಒಂದು ರೀತಿಯದಾದರೆ ಅವರವರ ಜಾತಿ, ಶ್ರೇಣಿ, ಪಾತಳಿಯಲ್ಲಿ ವಿಭಿನ್ನವಾದ ಶೋಷಣೆ ನೆಲೆಯೂರಿರುತ್ತದೆ. ಹೀಗಾಗಿ ಯಾವುದೇ ಒಂದು ಮಾನದಂಡದಿಂದ ರೂಪಿಸುವ ಸುಧಾರಣಾ ಕ್ರಮಗಳು ಒಟ್ಟು ಮಹಿಳೆಯರ ಸಮಸ್ಯೆಗೆ ಪರಿಹಾರವಾಗಲಾರವು. ಹೀಗಾಗಿ ಈ ಅಧ್ಯಯನವನ್ನು ಅಂತರ ಶಿಸ್ತೀಯ ಅಧ್ಯಯನ ಮಾದರಿಗೆ ಅಳವಡಿಸಿಕೊಳ್ಳುವ ಮೂಲಕ ಹಲವಾರು ಸೂಕ್ಷ್ಮ ಸಂಗತಿಗಳನ್ನು ಕಂಡುಕೊಳ್ಳ ಬಹುದಾಗಿದೆ.

ಭಾರತೀಯ ಸಮಾಜದಲ್ಲಿ ಸಾಂಪ್ರದಾಯಿಕ ಸಮಾಜವು ಅಂಚಿಗೆ ತಳ್ಳಲ್ಪಟ್ಟಿರುವ ವರ್ಗಗಳಿಗೆ ನೀಡಿರುವ ಮಾನ್ಯತೆಯನ್ನು ಮಹಿಳೆಗೆ ನೀಡಿದೆ. ತನ್ನನ್ನು ನಿಕೃಷ್ಟವಾಗಿಟ್ಟಿರುವ ಸಂಗತಿಗಳ ಬಗ್ಗೆ ಅರಿವೇ ಇಲ್ಲದಿರುವ ಈ ಮಹಿಳೆ ತನ್ನ ವಿಮೋಚನೆಗಾಗಿ ಹೋರಾಡುವುದಂತೂ ದೂರವುಳಿಯಿತು. ಆದುದರಿಂದಲೇ ಮಹಿಳಾವಾದಿಗಳು ವ್ಯವಸ್ಥೆ ಕೊಡಮಾಡುವ ರಚನೆಗಳನ್ನು ಮೀರಿ ಬೆಳೆಯಲು ಮಹಿಳೆಗೆ ಅವಕಾಶಕೊಡಬೇಕೆಂದು ಹೇಳುತ್ತಾರೆ. ಇಂತಹ ಸಂಗತಿಗಳು ಆಕೆಯನ್ನು ಕೇವಲ ಮೆಟೀರಿಯಲ್ ಅವಶ್ಯಕತೆಗಳಿಗೆ ಸೀಮಿತಗೊಳಿಸದೆ ಆಕೆಯ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಲ್ಲೂ ಸಮಾನತೆಯನ್ನು ನೀಡಬೇಕು ಎನ್ನುವ ಅಂಶಗಳನ್ನು ಪ್ರತಿಪಾದಿಸುತ್ತವೆ. ಪರಿಣಾಮವಾಗಿ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ ೩೩.೩೩ ರಷ್ಟು ಮೀಸಲಾತಿಯನ್ನು ಕಾಯ್ದಿರಿಸಿದೆ. ಈ ಕಾಯ್ದಿರಿಸುವಿಕೆಯಲ್ಲಿ ಲಿಂಗಸಮಾನತೆ ತಾಂತ್ರಿಕವಾಗಿ ಸಾಧಿತವಾಗಿದೆ. ಆದರೆ ಸಾಮಾಜಿಕವಾಗಿ ಆರ್ಥಿಕವಾಗಿ ಇದರ ಪರಿಣಾಮಗಳು ಗಂಭೀರವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳಾ ಮೀಸಲಾತಿಯು ಕೇವಲ ಮೇಲ್ನೋಟದ ಬದಲಾವಣೆಯನ್ನು ಮಾತ್ರ ತರಬಲ್ಲದು. ಪುರುಷಶಾಹಿ ವ್ಯವಸ್ಥೆಯಲ್ಲಿ ಮಹಿಳೆ ಸ್ವಇಚ್ಛೆಯಿಂದ, ಸ್ವಸಾಮರ್ಥ್ಯದಿಂದ ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಭಾಗವಹಿಸಲು, ನಿರ್ಧಾರ ತೆಗೆದುಕೊಳ್ಳಲು ಅನುಕೂಲಕರ ಪರಿಸರವಿಲ್ಲ. ಮೀಸಲಾತಿ ನೀಡಿದ ಮಾತ್ರಕ್ಕೆ ಎಲ್ಲ ಸ್ವಾತಂತ್ರವೂ ದಕ್ಕೀತೆ? ಅಧಿಕಾರ ರೂಪಿಕೆ ಮತ್ತು ಅನುಷ್ಠಾನ ಸಾಧ್ಯವಾದೀತೇ? ದುರ್ಬಲ ವರ್ಗಕ್ಕೆ ಸೇರಿದ ಮಹಿಳಾ ಸಂವೇದನೆಗಳಿಗೆ ಸಾಮಾಜಿಕ ಮನ್ನಣೆ ದೊರೆತೀತೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ತಟ್ಟನೆ ಉತ್ತರಿಸುವುದು ಕಷ್ಟವಾಗುತ್ತದೆ.

ಸಾಮಾಜಿಕವಾಗಿ, ಕೌಟುಂಬಿಕವಾಗಿ ನಿರ್ಲಕ್ಷಕ್ಕೆ ಒಳಗಾದ ಮಹಿಳೆಗೆ ಅವಳ ವ್ಯಕ್ತಿತ್ವ ವಿಕಸನಕ್ಕಿರುವ ಕಡಿಮೆ ಸಾಧ್ಯತೆಗಳೂ ಕಾರಣವಾಗಿವೆ.

ಚುನಾಯಿತ ಮಹಿಳೆಯರ ಜಾತಿ-ಪಂಗಡ : ಚುನಾಯಿತ ಮಹಿಳೆಯರ ಜಾತಿ ಪಂಗಡದ ವಿವರಗಳನ್ನು ಕೋಷ್ಟಕ ೨೮ ರಲ್ಲಿ ನೀಡಲಾಗಿದೆ. ಜಾತಿ ಕೇವಲ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಂಗಡನೆಯಾಗಿ ಉಳಿದಿಲ್ಲ. ಅದು ಕಸುಬು ಮತ್ತು ಸಂಪನ್ಮೂಲದ ಒಡೆತನದೊಂದಿಗೆ ತಕ್ಕಮಟ್ಟಿನ ಸಂಬಂಧವನ್ನು ಹೊಂದಿದೆ. ಇಂತಹ ಸಂದರ್ಭದಲ್ಲಿ ಲಂಬರೂಪಿಯಾದ ಆಧುನಿಕ ಕಸುಬುಗಳಿಗೆ ಆದ್ಯತೆ ಕೊಡುವುದಕ್ಕಿಂತ ಸಾಂಪ್ರದಾಯಿಕ ಕಸುಬುಗಾರಿಕೆ ವೈವಿಧ್ಯತೆಯನ್ನು ಪರಿಗಣಿಸಿ ಅವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕಾಗಿದೆ. ಗ್ರಾಮಪಂಚಾಯತ್ ವ್ಯವಸ್ಥೆಯು ಈಗಾಗಲೇ ಇರುವ ಅಸಮಾನತೆಯನ್ನು ಕಡಿಮೆಮಾಡಿ ಸಮಗ್ರ ಗ್ರಾಮೀಣಾಭಿವೃದ್ಧಿಗೆ ಮಹತ್ವ ಕೊಡಬೇಕಾಗಿದೆ. ಅದು ತಳಮಟ್ಟದ ಜನರ ಭಾಗವಹಿಸುವಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಪಡಿಸುವುದಾಗಿದೆ. ಇದು ಎಷ್ಟರಮಟ್ಟಿಗೆ ಸಾಧ್ಯವಾಗಿದೆ?

ಕೋಷ್ಟಕ ೨೮

ಜಾತಿ-ವರ್ಗದ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಸಾಮಾನ್ಯ	೪೫	೨೯.೮೦	೨೮	೨೦.೨೮
೨	ಪರಿಶಿಷ್ಟ ಜಾತಿ	೨೬	೧೭.೨೧	೩೭	೨೬.೮೧
೩	ಪರಿಶಿಷ್ಟ ವರ್ಗ	೩೪	೨೨.೫೧	೨೯	೨೧
೪	ಹಿಂದುಳಿದ ವರ್ಗ ಎ	೪೧	೨೭.೧೫	೪೩	೩೧.೧೫
೫	ಹಿಂದುಳಿದ ವರ್ಗ ಬಿ	೫	೩.೩೧	೧	೦.೭೨
	ಒಟ್ಟು	೧೫೧	೧೦೦	೧೩೮	೧೦೦

ಎರಡೂ ತಾಲೂಕಿನ ಸದಸ್ಯೆಯರ ಜಾತಿವಾರು ಅಂಕಿಅಂಶಗಳನ್ನು ಗಮನಿಸಿದಾಗ ಕೆಳಗೆ ತಿಳಿಸಿರುವ ಸಂಗತಿಗಳು ಅರಿವಿಗೆ ಬರುತ್ತವೆ. ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಸಾಮಾನ್ಯ ವರ್ಗದ ಮಹಿಳಾ ಪ್ರಾತಿನಿಧ್ಯವು ಶೇ. ೨೯.೮೦ ರಷ್ಟಿದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಈ ವರ್ಗದ ಪ್ರಾತಿನಿಧ್ಯವು ಶೇ. ೨೦.೨೮ ರಷ್ಟಿದೆ. ಈ ವರ್ಗದಲ್ಲಿ ಸಾಮಾನ್ಯವಾಗಿ ಲಿಂಗಾಯಿತ, ಕುರುಬ, ವಿಶ್ವಕರ್ಮ ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯೆಯರೂ ಆಯ್ಕೆಯಾಗಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ ೧೭.೨೧ ರಷ್ಟಿದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ೨೬.೮೧ ರಷ್ಟಿದೆ. ಪರಿಶಿಷ್ಟ ಪಂಗಡದ ಮಹಿಳೆಯರ ಪ್ರಾತಿನಿಧ್ಯವನ್ನು ಗಮನಿಸಿದಾಗ, ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೇ ೨೨.೫೧ ರಷ್ಟಿದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೇ ೨೧ ರಷ್ಟು ಇರುವುದು ಕಂಡುಬರುತ್ತದೆ.

ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗ ಎ ಗುಂಪಿನ ಸದಸ್ಯೆಯರ ಪ್ರಮಾಣವು ಶೇ ೩೧.೧೫ ರಷ್ಟು ಹಾಗೂ ಹಿಂದುಳಿದ ವರ್ಗ ಬಿ ಗುಂಪಿನ ಪ್ರಮಾಣವು ೦.೭೨ ರಷ್ಟಿದೆ. ಈ ಪ್ರಮಾಣ ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಕ್ರಮವಾಗಿ ಶೇ ೨೭.೧೫ ಹಾಗೂ ಶೇ ೩.೩೧ ರಷ್ಟಿದೆ.

ಇಲ್ಲಿ ಕಂಡು ಬರುವ ಮಹತ್ವದ ಸಂಗತಿ ಎಂದರೆ ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಸಾಮಾನ್ಯ ಕ್ಷೇತ್ರದ ಪ್ರಾತಿನಿಧ್ಯ ಹೆಚ್ಚಾಗಿದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಸಂಡೂರಿನ ಪ್ರಾತಿನಿಧ್ಯದ ಅರ್ಧದಷ್ಟಿದೆ. ಪರಿಶಿಷ್ಟ ಜಾತಿಯ ಆಯ್ಕೆ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಾಗಿದೆ. ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಕಡಿಮೆ ಇದೆ. ಪರಿಶಿಷ್ಟ ಪಂಗಡದ ಆಯ್ಕೆ ಸಂಡೂರಿನ ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಾಗಿದ್ದಾರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಕಡಿಮೆ ಇದೆ. ಹಿಂದುಳಿದ ವರ್ಗ ಎ ಗುಂಪಿನ ಆಯ್ಕೆ ಸಂಡೂರಿಗಿಂತ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಾಗಿದೆ. ಬಿ ಗುಂಪಿನ ಪ್ರಾತಿನಿಧ್ಯ ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಆಯ್ಕೆಯಾದ ಮಹಿಳೆಯರು ಹೆಚ್ಚಿನ ಪ್ರಮಾಣದವರು ಉಪೇಕ್ಷಿತ ಸಮುದಾಯಗಳಿಗೆ ಸೇರಿದವರಾಗಿದ್ದಾರೆಂಬುದು ಗಮನಾರ್ಹ. ಆದರೂ ಸ್ಥಳೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರ ಮಹಿಳೆಯರ ಈ ಬಹುಮುಖಿ ಸಂವೇದನೆಗಳ ಪ್ರಾತಿನಿಧ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ಮತ್ತು ಬೆಳೆಸಿಕೊಳ್ಳುವಲ್ಲಿ ಹೇಳಿಕೊಳ್ಳುವಂತಹ ಆಸಕ್ತಿವಹಿಸದಿರುವುದು ಕಂಡುಬರುತ್ತದೆ. ಜಾತಿ, ಲಿಂಗ ಸಂಬಂಧಿ ತಾರತಮ್ಯ, ಉತ್ಪಾದನಾ ಸಂಬಂಧಗಳ ಹಿನ್ನೆಲೆಗಳಲ್ಲಿ ಪ್ರಬಲ ಜಾತಿ ವರ್ಗಗಳು ಮತ್ತು ಸದಸ್ಯರು ಇಂತಹ ಚುನಾಯಿತ ಸದಸ್ಯೆಯರನ್ನು ನಿರ್ಲಕ್ಷವಾಗಿ ಕಾಣುವುದು ಸರ್ವೇ ಸಾಮಾನ್ಯವಾಗಿದೆ.

ಕೆಲವು ಉದಾಹರಣೆಗಳ ಮೂಲಕ ಮೇಲಿನ ಸಂಗತಿಗಳನ್ನು ಗಮನಿಸಬಹುದು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೆಲವು ಗ್ರಾಮಪಂಚಾಯಿತಿಗಳ ಸಭೆಗೆ ಹಾಜರಾದಾಗ ಮಹಿಳಾ ಅಧ್ಯಕ್ಷೆ ಮತ್ತು

ಸದಸ್ಯೆಯರಿಂದ ೨ ರೀತಿಯ ಪ್ರತಿಕ್ರಿಯೆಗಳು ಮೂಡಿಬಂದವು. ವಿಕೇಂದ್ರೀಕರಣವು ಹೇಳಿದ ಸವಲತ್ತುಗಳನ್ನು ಬಳಸಿಕೊಳ್ಳುವಲ್ಲಿ ಉತ್ಸಾಹ ತೋರಿಸುವ ಇಂತಹವರಿಗೆ ಅಲ್ಲಿನ ಪ್ರತಿಷ್ಠಿತ ಶಕ್ತಿಗಳು ಆತಂಕ ಒಡ್ಡುವುದು ಕಂಡುಬರುತ್ತದೆ. ಇವರೊಂದಿಗೆ ಅಧಿಕಾರ ಹಂಚಿಕೊಳ್ಳಲು ಅವು ಇಷ್ಟಪಡದ ಸನ್ನಿವೇಶಗಳು ಕಂಡವು. ಇಂತಹ ಪ್ರತಿಷ್ಠಿತ ಜನವರ್ಗದಲ್ಲಿ ಎರಡು ರೀತಿಯ ಧೋರಣೆಗಳು ಕಾಣುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯ ಲಾಭಗಳನ್ನು ಬಿಟ್ಟುಕೊಡದೆಯಿರುವ ಪರಿಸ್ಥಿತಿ ಒಂದಾದರೆ, ಆಯ್ಕೆಯಾದ ಸದಸ್ಯೆಯರು ಕೀಳು ಜಾತಿಯವರೆಂಬ ಕಾರಣಕ್ಕಾಗಿ ಅವರ ನಾಯಕತ್ವವನ್ನು ಒಪ್ಪಿಕೊಳ್ಳದ, ಅವರಿಗೆ ತಮ್ಮ ನಾಯಕತ್ವವನ್ನು ಬಿಟ್ಟುಕೊಡದ ಸನ್ನಿವೇಶಗಳನ್ನು ಸಂಘರ್ಷಗಳನ್ನು ಕಾಣುತ್ತೇವೆ. ಉದಾರಣೆಗೆ ಸಂಡೂರಿನ ದರೋಜಿ ಗ್ರಾಮಪಂಚಾಯಿತಿಯ ಹರಿಜನರ ದೇವದಾಸಿ ಮಾರೆಮ್ಮ, ಧಣಿಯ ಮಾತಿನಂತೆ ಸ್ಪರ್ಧಿಸಿ ಆಯ್ಕೆಯಾಗಿ, ಪ್ರತಿಷ್ಠಿತ ಶಕ್ತಿಗಳ ಮಾತಿನಂತೆ ನಿಗದಿಪಡಿಸಿದ ಅವಧಿಯವರೆಗೆ ಅಧ್ಯಕ್ಷೆಯ ಸ್ಥಾನದಲ್ಲಿದ್ದು ಈಗ ಸಾಮಾನ್ಯ ಸದಸ್ಯೆ ಆಗಿರುವುದು ಕಂಡು ಬಂದಿತು. ಹಾಗೆಯೇ ಹೊಸಪೇಟೆಯ ರಾಮಸಾಗರ ಗ್ರಾಮಪಂಚಾಯಿತಿಯೊಂದರಲ್ಲಿ ಕೊರವರ ಮಾರೆಮ್ಮನನ್ನು ಅಧ್ಯಕ್ಷೆಯ ಪದವಿಗೆ ಸ್ಪರ್ಧಿಸುವುದನ್ನು ತಪ್ಪಿಸಲಿಕ್ಕಾಗಿಯೇ ಉಪಾಯವಾಗಿ ೧೫ ದಿನ ಮೈಸೂರಿಗೆ ಪ್ರವಾಸಿ ತಾಣಗಳ ವೀಕ್ಷಣೆಗಾಗಿ ಕಳಿಸಿರುವುದು ತಿಳಿದುಬಂದಿತು. ಆಕೆ ನೊಂದುಕೊಂಡು ತಾನು ಈಗಲೂ ಅಧ್ಯಕ್ಷೆ ಪದವಿಗೆ ಪ್ರಯತ್ನಿಸುತ್ತಿರುವುದಾಗಿ ತಿಳಿಸಿದಳು. ದೇವಸಮುದ್ರದಲ್ಲಿ ಅಧ್ಯಕ್ಷರ ಆಯ್ಕೆಯ ಪ್ರಕ್ರಿಯೆಯ ದಿನವನ್ನು ಸಮಯವನ್ನು ಸದಸ್ಯರಿಗೆ ತಿಳಿಸದೇ ಇರುವುದು ಕ್ಷೇತ್ರಾಧ್ಯಯನದಿಂದ ಗೋಚರವಾಯಿತು. ಹಾಗೆಯೇ ದರೋಜಿಯ ಶ್ರೀಮತಿ ಕೊರವರ ಲಕ್ಷ್ಮಮ್ಮನಿಗೆ ಜಾತಿಯ ಕೀಳುತನದಿಂದಾಗಿ ಅಧ್ಯಕ್ಷೆ ಸ್ಥಾನ ದಕ್ಕಲಿಲ್ಲ. ಅವರು ಆ ಸ್ಥಾನ ಪಡೆಯಲಿಕ್ಕಾಗಿಯೇ ಮತ್ತೆ ಮತ್ತೆ ಸ್ಪರ್ಧಿಸುತ್ತೇನೆಂದು ಛಲದಿಂದ ಹೇಳುವುದು ತಿಳಿದುಬಂತು.

ವಡ್ಡು ಗ್ರಾಮಪಂಚಾಯತಿಯ ಅಧ್ಯಕ್ಷೆಗೂ ಜಾತಿಯ ಬಿಸಿ ತಟ್ಟಿದೆ. ಶತಮಾನದ ಅನ್ಯಾಯವನ್ನು ಸರಿಪಡಿಸಲು ಕೈಗೊಳ್ಳುವ ಸಣ್ಣಪುಟ್ಟ ಬದಲಾವಣೆಗಳನ್ನು ಅರಗಿಸಿಕೊಳ್ಳಲಾರದಷ್ಟು ಅಸಹನೆ ಮೇಲು ವರ್ಗಗಳಲ್ಲಿ ಕಂಡುಬರುತ್ತದೆ.

ನಿರುತ್ಸಾಹ ತೋರುವ ಇನ್ನೊಂದು ಚುನಾಯಿತ ಸದಸ್ಯೆಯರ ವರ್ಗ ಸಂವಿಧಾನದತ್ತ ಅಧಿಕಾರವನ್ನು ಪಡೆದಿದ್ದರೂ ತನ್ನ ಜಾತಿಯ ಕೀಳರಿಮೆಯಿಂದಾಗಿ ಆಯ್ಕೆಯಾದ ಸ್ಥಾನಗಳಲ್ಲಿ ಕುಳಿತುಕೊಳ್ಳುವ, ಅಧಿಕಾರ ಚಲಾಯಿಸುವ ನೆಲೆಗಳಿಂದ ದೂರ ಉಳಿಯುವುದು ಕಂಡುಬರುತ್ತದೆ. ಗ್ರಾಮಪಂಚಾಯಿತಿ ಸಭೆಗೆ ಬಂದರೂ ಮೂಲೆಯಲ್ಲಿ ಮುದುರಿಕೊಂಡು ಕುಳಿತು ನಾಚಿಕೆ, ಮುಜುಗರ ಅನುಭವಿಸುತ್ತಾ, ಸಹಿ ಮಾಡುವಷ್ಟರಲ್ಲಿ ಸಭೆಯೇ ಮುಗಿದಿರುತ್ತದೆ. ಉದಾ. ಸಂಡೂರು ತಾಲೂಕಿನ ನಿಡುಗುರ್ತಿಯ

ಸದಸ್ಯೆ ಶ್ರೀಮತಿ ಜಯಮ್ಮ ಅತ್ಯಂತ ಮುಗ್ಧೆ. ಆಕೆಯೇ ತಿಳಿಸಿರುವಂತೆ 'ತಾರತಮ್ಯ ಶೋಷಣೆ ಮಾಮೂಲು. ತನ್ನ ವಾರ್ಡಿನಲ್ಲಿರುವ ಲಿಂಗಾಯಿತರು ನನ್ನ ಹತ್ತಿರ ಬರೋದೆ ಇಲ್ಲ. ಬೇರೆ ಸದಸ್ಯರ ಹತ್ತಿರ ಹೋಗುತ್ತಾರೆ. ನನಗೆ ಮುಜುಗರ ಎನಿಸಿ ಸಭೆಗೆ ಹೋದಾಗ ಒಂದು ಮೂಲೆಯಲ್ಲಿ ಕೂರ್ತೀನಿ. ಅದು ನಮ್ಮ ಧರ್ಮ. ಅವರೆಲ್ಲ ದೊಡ್ಡೋರು'. ಹಾಗೆಯೇ ಬಂಡ್ರಿಯ ಹರಿಜನ ಮಾರೆಕ್ಕ ಹೇಳಿರುವಂತೆ ಸಭೆಗಳಿಗೆ ಕರೆಯುವುದಿಲ್ಲ. ಜಾತಿಭೇದ ಮಾಡುತ್ತಾರೆ. ಊರೊಳಗೆ ಮತ್ತು ಹೋಟೆಲ್‌ಗಳಿಗೆ ಸೇರಿಸಲ್ಲ. 'ಯಾವ ತಪ್ಪಿಗೆ ನಮಗೆ ಈ ಶಿಕ್ಷೆ?' ಎಂದು ಆಕೆ ಮತ್ತು ಕುಟುಂಬದವರು ಕೇಳುವುದು ಕಂಡುಬಂತು. ಗ್ರಾಮಪಂಚಾಯತ್ ಸದಸ್ಯರಿಗೆ ಏರ್ಪಡಿಸಿದ ತರಬೇತಿ (ಕನ್ನಡ ವಿಶ್ವವಿದ್ಯಾಲಯದಲ್ಲಿ ಫೆಬ್ರವರಿ ೨೨,೨೩,೨೦೦೨) ಶಿಬಿರವೊಂದರಲ್ಲಿ ಭಾಗವಹಿಸಿದ್ದ ಹೊಸಪೇಟೆಯ ತಾಲೂಕು ಬೈಲುವದ್ದಿಗೇರಿ ಗ್ರಾಮಪಂಚಾಯಿತಿಯ ಸದಸ್ಯೆಯು ಮೇಲ್ವರ್ಗದವರು. ಅವರು ಜಾತಿ ಬೇಕೆಂದು ಪ್ರಬಲವಾಗಿ ವಾದಿಸಿದರು. 'ಜಾತಿ ಇರುವುದರಿಂದಲೇ ನಾನು ಆ ಬೆಂಬಲ ದಿಂದ ಆಯ್ಕೆಯಾಗಿದ್ದೇನೆ. ಮೊದಲಿನಿಂದಲೂ ಬೆಳೆದು ಬಂದಿರುವ ಸಂಪ್ರದಾಯವದು. ಅದನ್ನು ಪೋಷಿಸಬೇಕು' ಎಂದೇ ಅಭಿಪ್ರಾಯಪಟ್ಟರು. ಹೊಸಪೇಟೆಯ ಮಲಪನಗುಡಿಯು ತಾಲೂಕಿಗೆ ತೀರ ಹತ್ತಿರವಿದೆ. ಸಾರಿಗೆ, ಸಂವಹನ ಪ್ರಭಾವವಿದೆ. ಆದರೂ ಹರಿಜನ ಕೇರಿಯೆಂದೇ ಪ್ರತ್ಯೇಕವಾಗಿದೆ. ಅಲ್ಲಿರುವ ಸದಸ್ಯೆಯರನ್ನು ಸಂದರ್ಶಿಸಲು ಹೋದಾಗ ಆಕೆ ಆಗತಾನೆ ಕೂಲಿಯಿಂದ ಬಂದು ಅಡುಗೆ ಕೆಲಸದಲ್ಲಿದ್ದರು. ಭಯ, ಜಾತಿನಿಂದೆ, ಕೀಳಿರಿಮೆಯಿಂದ ಸದಸ್ಯೆ ಸರಿಯಾಗಿ ಮಾಹಿತಿ ನೀಡದೆ ಪತಿಯಿದ್ದಾಗ ಬನ್ನಿ ಎಂದು ಹೇಳಿಬಿಟ್ಟಳು.

ಹೊಸಪೇಟೆ ಕೇಂದ್ರ ಪ್ರದೇಶದಿಂದ ದೂರವಿರುವ ಹಲವಾರು ಕೃಷಿಪ್ರಧಾನ ಗ್ರಾಮಪಂಚಾಯಿತಿಗಳಲ್ಲಿ ಈ ತರಹದ ಸದಸ್ಯೆಯರು ಹೆಚ್ಚಾಗಿ ಕಂಡುಬರುತ್ತಾರೆ. ಹಾಗೆಯೇ ಸಂಡೂರು ತಾಲೂಕಿನಲ್ಲಿ ಕೃಷಿ ಮತ್ತು ಗಣಿಗಾರಿಕೆ ಸಂಬಂಧಿ ಪ್ರದೇಶಗಳಲ್ಲಿ ಇಂತಹ ಕೀಳರಿಮೆ ಮನೋಭಾವದ ವ್ಯಕ್ತಿತ್ವಗಳು ಕಂಡು ಬರುತ್ತವೆ. ಇದು ಅಧಿಕಾರಕ್ಕೆ ಸಂಬಂಧಿಸಿದ ವಿಷಯ ಮಾತ್ರವಲ್ಲ. ಅಧಿಕಾರಕ್ಕೆ ಬರುವ ಮೊದಲಿನ ಸಮಸ್ಯೆಯಾಗಿಯೂ ಕಂಡುಬರುತ್ತದೆ.

ನಾಮಪತ್ರ ಸಲ್ಲಿಸುವಾಗ, ಚುನಾವಣೆಯ ಪ್ರಚಾರದಲ್ಲಿ, ಆಯ್ಕೆಯಾದ ನಂತರ ಪಂಚಾಯಿತಿ ಸಭೆಗಳಿಗೆ ಭಾಗವಹಿಸಲು ಬರುವಾಗ ಊರಿನಿಂದ ಪ್ರತ್ಯೇಕಗೊಂಡ ತನ್ನ ಕೇರಿಯಿಂದ ಬರಬೇಕಾಗುತ್ತದೆ. ಪುರುಷಾಧಿಕಾರ ಮತ್ತು ಜಾತಿ ಕಾರಣವಾಗಿ ಪರಂಪರೆಯಿಂದಲೂ ನಾಲ್ಕುಗೋಡೆಗಳ ನಡುವೆಯೇ ಬಂಧಿತಳಾಗಿದ್ದ ಕೆಳವರ್ಗದ ಸದಸ್ಯೆಯು ಒಮ್ಮಿಂದೊಮ್ಮೆಲೆ ಊರ ಪ್ರವೇಶ ಮಾಡಿದಾಗ ಅನುಭವಿಸಿದ ನಾಚಿಕೆ, ಸಂಕೋಚ, ಅವಮಾನ, ಹೆದರಿಕೆ, ಕೀಳರಿಮೆಗಳಿಂದ ಬಳಲಿದ್ದು ಹಲವು

ಸದಸ್ಯೆಯರ ಮಾತಿನಿಂದ ಮನವರಿಕೆಯಾಯಿತು. ಮೇಲಿನ ಒಟ್ಟು ಸಾರಾಂಶವನ್ನು ಗಮನಿಸಿದಾಗ ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ ೭೩ನೇ ತಿದ್ದುಪಡಿಯಿಂದಾಗಿ ದೊರೆತ ಶೇ.೩೩.೩೩ ರಷ್ಟು ಮೀಸಲಾತಿಯಿಂದ ರಾಜಕೀಯ ಭಾಗವಹಿಸುವಿಕೆಯ ಅವಕಾಶಗಳು ಹಿಂದುಳಿದ ವರ್ಗಗಳ ಮಹಿಳೆಯರಿಗೆ ಗಣನೀಯವಾಗಿ ದೊರೆತಿವೆ. ಹಾಗೆಯೇ ಜಾತಿಪದ್ಧತಿಯು ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ ಗಟ್ಟಿಗೊಳ್ಳುತ್ತಿರುವುದೂ ಕಂಡುಬರುತ್ತದೆ ಎಂಬುದನ್ನು ತಿಳಿಯಬಹುದಾಗಿದೆ.

ಕುಟುಂಬ ಮತ್ತು ಪುರುಷಾಧಿಕಾರ : ಕುಟುಂಬವು ಸಮಾಜದ ಮೂಲ ಘಟಕ. ಇದು ಗ್ರಾಮೀಣ ಸಮಾಜದ ಬಹುಮುಖ್ಯ ಸಾಮಾಜಿಕ ಘಟಕ. ಇದು ಸಾಮಾಜೀಕರಣ, ರಾಜಕೀಯ ಸಾಮಾಜೀಕರಣ, ಸಾಮಾಜಿಕ ನಿಯಂತ್ರಣ, ರಕ್ಷಣಾಕಾರ್ಯ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತದೆ. ಭಾರತೀಯ ಸಮಾಜದಲ್ಲಿ ಅವಿಭಕ್ತ ಕುಟುಂಬಗಳೇ ಪ್ರಧಾನವಾಗಿದ್ದವು. ಆಧುನಿಕತೆಯ ಪ್ರಭಾವದಿಂದ ಅವಿಭಕ್ತ ಕುಟುಂಬಗಳು ಛಿದ್ರಗೊಂಡು ವಿಭಕ್ತ ಕುಟುಂಬಗಳಾಗುತ್ತಿವೆ. ಬಹುತೇಕವಾಗಿ ಹಿರಿಯ ಪುರುಷ ಸದಸ್ಯನೇ ಯಜಮಾನನಾಗಿರುವ ಪಿತೃಪ್ರಧಾನ ಕುಟುಂಬಗಳೇ ನಮ್ಮ ಸಮಾಜದಲ್ಲಿವೆ. ಕುಟುಂಬದಲ್ಲಿ ವಿವಾಹವು ಒಂದು ಅಂಶ. ಇದನ್ನು ಎರಡು ರೀತಿಯಲ್ಲಿ ಪರಿಭಾವಿಸಬೇಕಾಗುತ್ತದೆ. ಹುಟ್ಟಿನಿಂದ ಮದುವೆಯವರೆಗೆ ಒಂದು ಘಟ್ಟ. ಮದುವೆಯಾದ ನಂತರದ್ದು ಇನ್ನೊಂದು ಘಟ್ಟ. ಮಹಿಳೆಯ ಬದುಕಿನಲ್ಲಿ ಮದುವೆ ಎನ್ನುವುದು ಮಹತ್ತರ ಬದಲಾವಣೆ ತರುವ ಘಟಕ. ಅವಳ ಆಸೆ, ಆಕಾಂಕ್ಷೆಗಳು, ಕಲಿಕೆ, ಕೌಶಲ್ಯಗಳು ಸೃಜನಶೀಲತೆಯ ಅಳಿವು ಉಳಿವುಗಳು ಬಹಳಷ್ಟು ಬಾರಿ ವಿವಾಹವನ್ನು ಅವಲಂಬಿಸಿರುತ್ತವೆ. ಯಾವುದೇ ಮಹಿಳೆ ಎರಡು ರೀತಿಯ ಪರಿಸರದಲ್ಲಿ ತನ್ನನ್ನು ಒಗ್ಗಿಸಿಕೊಳ್ಳಬೇಕಾಗುತ್ತದೆ. ಮದುವೆಯಾದ ಸ್ತ್ರೀಯು ಬರೀ ಗಂಡನನ್ನು ತನ್ನ ವಸ್ತುವೆಂದು ಪರಿಗಣಿಸುವುದಿಲ್ಲ. ಇಡೀ ಕುಟುಂಬವನ್ನೇ ಅವಳು ತನ್ನದೆಂದು ಭಾವಿಸಬೇಕಾದ ಪರಿಸ್ಥಿತಿ ಇರುತ್ತದೆ. ಈ ಸಂದರ್ಭದಲ್ಲಿ ಸೇವೆಯ ಜೊತೆಗೆ ಆತಂಕ, ಅವಮಾನ, ಕಿರಿಕಿರಿಗಳನ್ನು ಸ್ತ್ರೀ ಅನುಭವಿಸಬೇಕಾಗುತ್ತದೆ. ಹೀಗಾಗಿ ವಿವಾಹವೆನ್ನುವುದು ಯಾವುದೇ ಸಮಾಜದಲ್ಲಿನ ಮಹಿಳೆಯರ ಸ್ಥಾನಮಾನದ ಸ್ವರೂಪಗಳನ್ನು, ಧೋರಣೆಗಳನ್ನು ರೂಪಿಸುವಲ್ಲಿ ನಿರ್ಣಾಯಕ ಸಂಗತಿಯಾಗಿರುತ್ತದೆ. ಆದ್ದರಿಂದ ಹೆಣ್ಣು ಎನ್ನುವುದು ಬರೀ ವ್ಯಕ್ತಿವಾಚಿಯಾದ ಪರಿಕಲ್ಪನೆಯಾಗಿರದೆ ಸಾಮಾಜಿಕ ಘಟಕ ಎನ್ನುವ ನೆಲೆ ಬಹುಮುಖ್ಯವಾಗಿದೆ. ಸ್ತ್ರೀಯು ತನ್ನ ಆಸೆ, ಆಕಾಂಕ್ಷೆ, ಸ್ವಾತಂತ್ರ್ಯಗಳನ್ನು ಬದಿಗೊತ್ತಿ ಸದಾ ಕುಟುಂಬದ ಹಿತಕ್ಕಾಗಿ ಜೀವ ಸವೆಸುತ್ತಾಳೆ. ಆರ್ಥಿಕ ಸ್ವಾವಲಂಬನೆಯಿದ್ದರೂ ಮಾನಸಿಕ ದಾಸ್ಯದಿಂದ ಬಳಲುತ್ತಿರುತ್ತಾಳೆ. ಕುಟುಂಬದ ಉಪೇಕ್ಷೆಗೆ, ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುತ್ತಾಳೆ. ಈ ಸಮಸ್ಯೆ ಕಲಿತವರಿಂದ ಹಿಡಿದು ಕಲಿಯದವರವರೆಗೂ ಇದೆ. ಸ್ವರೂಪದಲ್ಲಿ ಮಾತ್ರ ಭಿನ್ನವಾಗಿರುತ್ತದಷ್ಟೆ. ಭಾರತೀಯ ಸಮಾಜದಲ್ಲಿ ಹೆಣ್ಣು ಹುಟ್ಟಿನಿಂದಲೂ

ಒಂದು ಹೊರೆ ಮತ್ತು ಜವಾಬ್ದಾರಿ ಎಂದೇ ಭಾವಿಸಲಾಗುತ್ತಿದೆಯಲ್ಲದೇ, ಆಕೆಗೆ ಕುಟುಂಬದ ಪ್ರೀತಿ ಮತ್ತು ಸಂಪನ್ಮೂಲಗಳಲ್ಲಿ ಅತಿ ಕಡಿಮೆ ಪಾಲನ್ನು ಕೊಡಲಾಗಿದೆ. ಹೆಣ್ಣು ಹುಟ್ಟಿದ ಮನೆ ಹೆಗ್ಗಣ ಹತ್ತಿದಾಂಗೆ ಎನ್ನುವ ಮೂಲಕ ಆರಂಭದಿಂದಲೂ ಆಕೆಯು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಆಡಳಿತಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪಿಕೊಳ್ಳುವಂತೆ ಮತ್ತು ತಾರತಮ್ಯದ ನಡುವಳಿಕೆಯನ್ನು ರೂಢಿಸಿಕೊಳ್ಳುವಂತೆ ಮಾಡಲಾಗುತ್ತಿದೆ. ಗಂಡು ಮಕ್ಕಳಿಗಿಂತ ಕಡಿಮೆ ಅವಕಾಶ, ಅಧಿಕಾರ ಕಡಿಮೆ, ಆಸ್ತಿ ಕಡಿಮೆ, ಕಡಿಮೆ ಸ್ಥಾನಮಾನ ನೀಡಲಾಗುವುದಲ್ಲದೆ, ಹೆಣ್ಣುಮಕ್ಕಳು ತಮಗೆ ತಾವೇ ಕೀಳೆಂದು ಭಾವಿಸುವುದು ಎಲ್ಲರ ಅಡಿಯಾಳಿನಂತೆ ನಡೆದುಕೊಳ್ಳುವುದನ್ನು ಕುಟುಂಬದ ರಚನೆ ಮತ್ತು ಸಾಮಾಜಿಕ ಮೌಲ್ಯಗಳು ರೂಢಿಸುತ್ತವೆ.[೨]

ನಮ್ಮ ಸಮಾಜದ ಹೆಣ್ಣು ಮಕ್ಕಳು ಉತ್ತಮ ಗೃಹಿಣಿ, ಸೊಸೆ, ತಾಯಿ ಎನಿಸಿಕೊಳ್ಳುವುದೇ ತಮ್ಮ ಬದುಕಿನ ಧ್ಯೇಯವೆಂದು ಕೊಂಡವರೇ ಹೆಚ್ಚು. ಇದರಾಚೆ ಮಹಿಳೆಗೆ ತನ್ನದೇ ಆದ ವ್ಯಕ್ತಿತ್ವ, ಅಸ್ತಿತ್ವ ಇದೆಯೆಂದು ಭಾವಿಸುವವರು ಬಹಳ ಕಡಿಮೆ.[೩] ಹೀಗೆ ಭಾವಿಸಿಕೊಂಡರೂ ಪೂರಕ ಪರಿಸರ ಇರುವುದಿಲ್ಲ.

ಸ್ತ್ರೀ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಅದರ ಬಗೆಗಿನ ತಿಳುವಳಿಕೆಯನ್ನು ತನ್ನದಾಗಿಸಿಕೊಳ್ಳುವದು ಎಂದರ್ಥ. ಇಂದು ಮಹಿಳೆಗೆ ಶೇ ೩೩.೩೩ ರಷ್ಟು ಮೀಸಲಾತಿ ಹಾಗು ಗ್ರಾಮಪಂಚಾಯಿತಿಗಳಲ್ಲಿ ವರ್ಗವಾರು ಮೀಸಲಾತಿ ದೊರೆತಿದೆ. ಸರ್ಕಾರ ಮಾಡುವ ಶಾಸನಗಳಲ್ಲೇ ತನ್ನ ಸಾರ್ಥಕತೆಯನ್ನು ಪಡೆಯುವ ಇಂತಹ ನಿರ್ಣಯಗಳು ಆಚರಣೆಯಲ್ಲಿ ಬರುವುದು ವಿರಳ. ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಸಮಾನತೆಯ ದೃಷ್ಟಿಕೋನ ಪ್ರಚಲಿತವಾಗುತ್ತಿದ್ದರೂ, ಗ್ರಾಮೀಣ ವಲಯದ ಸ್ತ್ರೀಯರು ಇಂದಿಗೂ ತಮ್ಮ ಸಾಂಪ್ರದಾಯಿಕ ಪಾತ್ರವನ್ನೇ ನೆಚ್ಚಿಕೊಂಡಿದ್ದಾರೆ. ಅವರಿಗೆ ಮಧ್ಯಯುಗಿನ ಭಾರತದ ಸ್ತ್ರೀಯರ ಸ್ಥಾನಮಾನದಿಂದ ತಮ್ಮ ಪಾತ್ರದ ಮಾದರಿಯು ಲಭಿಸಿದೆ.[೪] ಎಂಬ ಮಾತುಗಳು ಸಂದರ್ಭೋಚಿತವಾಗಿದೆ. ಶೇ.೩೩.೩೩ ರಷ್ಟು ಮೀಸಲಾತಿಯಡಿಯಲ್ಲಿ ಮಹಿಳೆಯರು ಗ್ರಾಮಪಂಚಾಯಿತಿಗಳಲ್ಲಿ ಭಾಗಿಗಳಾಗುತ್ತಿದ್ದಾರೆ. ವಿಪರ್ಯಾಸವೆಂದರೆ ತಾನು ಭಾಗವಹಿಸುತ್ತಿರುವ ಸಂದರ್ಭ ಸನ್ನಿವೇಶದ ಬಗ್ಗೆ ಯಾವ ತಿಳುವಳಿಕೆಯೂ ಇವರಿಗೆ ಇರುವುದಿಲ್ಲ. ಈ ತಿಳುವಳಿಕೆ ಎನ್ನುವುದು ಶಾಸನದಿಂದ ಬರುವಂತಹುದಲ್ಲ. ಸ್ತ್ರೀಯ ಸಂಪೂರ್ಣ ಭಾಗವಹಿಸುವಿಕೆಯೊಂದಿಗೆ ಬರುವುದು. ಆದರೆ ಈ ತಿಳುವಳಿಕೆ ಅವರಿಗೆ ಹತ್ತಿರವೂ ಸುಳಿಯದಂತಹ ಪರಿಸ್ಥಿತಿಗಳಿರುತ್ತವೆ. ಹೆಂಗಸು ಹೊಲಗೆಲಸ ಮಾಡುವ ಕೂಲಿಯಾಗಿರಬಹುದು, ರೈತಳಾಗಿರಬಹುದು, ಕಾರ್ಖಾನೆಯಲ್ಲಿ

ಶ್ರಮಿಕಳಾಗಿರಬಹುದು, ದಾದಿಯಾಗಿರಬಹುಹು, ಏನೇ ಆಗಿರಲಿ ಅವಳು ಹೊರಗೆ ಕೆಲಸ ಮಾಡುವುದುರ ಬಗೆಗಿನ ನಿರ್ಧಾರವನ್ನು ತೆಗೆದುಕೊಳ್ಳುವುದು ಮನೆಯಲ್ಲಿನ ಪುರುಷರು. ಮಹಿಳೆಯರೂ ಇದನ್ನು ವಿರೋಧಿಸುವುದಿಲ್ಲ. ಒಪ್ಪಿಕೊಳ್ಳುತ್ತಾರೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಗಂಡ ಅಥವಾ ಮನೆಯ ಯಜಮಾನರು ತನ್ನ ಪತ್ನಿಯು ಯಾವ ಪಕ್ಷಕ್ಕೆ ಸೇರಬೇಕು. ಯಾವ ಪಕ್ಷಕ್ಕೆ ಮತಚಲಾಯಿಸಬೇಕು, ಚುನಾವಣೆಗೆ ಸ್ಪರ್ಧಿಸಬೇಕೆ ಬೇಡವೆ, ಯಾವ ಮಟ್ಟದಲ್ಲಿ ರಾಜಕೀಯದಲ್ಲಿ ಭಾಗವಹಿಸಬೇಕು. ಯಾರ ಜೊತೆ ಮಾತನಾಡಬೇಕು, ಮಾತನಾಡಬಾರದು ಎಂಬುದನ್ನು ನಿರ್ಧರಿಸುತ್ತಾನೆ. ಸಂಡೂರಿನ ತಾರಾನಗರದ ಸದಸ್ಯೆ(ರೇಣುಕಮ್ಮ)ಗೆ ಪತಿಯು 'ಗ್ರಾಮಪಂಚಾಯ್ತಿ ಕುರಿತು ಯಾರಿಗೂ ಬಾಯಿ ಬಿಡಂದಂತೆ ತಾಕೀತು' ಮಾಡಿದ್ದಾರೆ. ಪೂಜಾರಿ ಜ್ಯೋತಿ, ಬಂಡ್ರಿಯ ಹೇಮಾವತಿ, ವಡ್ಡುವಿನ ನಾಗಮ್ಮ, ಮರಿಯಮ್ಮನಹಳ್ಳಿಯ ಸುಜಾತ ಇವರನ್ನು ಸಂದರ್ಶಿಸಿದ ಸಮಯದಲ್ಲಿ ಮಾಹಿತಿ ಕೊಡಲು ಅವರಿಗೆ ಪತಿಯ ಬೆದರಿಕೆಯಿರುವುದು ಸ್ಪಷ್ಟವಾಗಿ ಗೋಚರಿಸಿತು. ಮತ್ತೆ ಕೆಲವರು ಪತಿಗೆ ಗೊತ್ತಾದರೆ? ಎಂದು ಮಾಹಿತಿ ಕೊಡಲು ನಿರಾಕರಿಸಿದರು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಕುರಿತು ಸ್ವಾನುಭವ ನನಗಾಯ್ತು. ಮಹಿಳಾ ಅಧ್ಯಕ್ಷೆಯರಿರುವ ಹೊಸಪೇಟೆ ತಾಲುಕಿನ ಗ್ರಾಮಪಂಚಾಯ್ತಿ(ದೇವಲಾಪುರ)ಯೊಂದಕ್ಕೆ ನಾನು ಭೇಟಿಯಿತ್ತಾಗ ಅಧ್ಯಕ್ಷೆಯ ಗಂಡನೇ ನನಗೆ ಎಲ್ಲ ಮಾಹಿತಿಯನ್ನೂ ಒದಗಿಸಿದರು. ಅಲ್ಲದೆ ಉಳಿದ ಸದಸ್ಯೆಯರ ಪರವಾಗಿ ಅವರ ಪತಿಯಂದಿರೇ ವಿವರಿಸಿದರು. ಕೊನೆಗೂ ಅಧ್ಯಕ್ಷೆ ಕಾಣಿಸಲಿಲ್ಲ. ಅವಳು ನೀಡಿದ ಚಹಾ ಮಾತ್ರ ನನಗೆ ಸಿಕ್ಕಿತು. ಮಹಿಳೆಯಾದ ನನ್ನೊಂದಿಗೇ ಮಹಿಳಾ ಸದಸ್ಯೆಯರನ್ನು ಮಾತನಾಡಲು ಬಿಡದಿದ್ದದ್ದು ವಿಪರ್ಯಾಸ ಮತ್ತು ಆಶ್ಚರ್ಯ ಎನಿಸಿತು. ಜನತಾದಳಕ್ಕೆ ಸೇರಿದ ಈ ವ್ಯಕ್ತಿ ಆ ಗ್ರಾಮಪಂಚಾಯ್ತಿಯ ವ್ಯವಹಾರವನ್ನೆಲ್ಲ ನಿಭಾಯಿಸುತ್ತಾರೆ. ಅಧ್ಯಕ್ಷೆಯರ ಪರವಾಗಿ ತರಬೇತಿಗಾಗಿ ಬೆಂಗಳೂರಿಗೂ ತಾವೇ ಹೋಗಿಬಂದಿದ್ದಾರೆ!? ಎನ್ನುವುದೂ ತಿಳಿದುಬಂದಿತು. ಇಂತಹ ಅನೇಕ ಉದಾಹರಣೆಗಳನ್ನು ಎರಡೂ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಕಾಣಬಹುದು. ಅಮರ್ತ್ಯಸೇನ್ ಪ್ರಕಾರ 'ಲಿಂಗ ಸಂಬಂಧಿ ಅಸಮಾನತೆಯು ಉಳಿದೆಲ್ಲ ಬಗೆಯ ಅಸಮಾನತೆಗಳಿಗಿಂತ ತುಂಬಾ ಸೂಕ್ಷ್ಮವೂ, ಸಂಕೀರ್ಣವೂ ಆದುದಾಗಿದೆ. ಏಕೆಂದರೆ ಲಿಂಗಸಂಬಂಧಿ ಅಸಮಾನತೆ ನೆಲೆಗಳು ಹಾಗೂ ಲಿಂಗ ಸಂಬಂಧಿ ತಾರತಮ್ಯದ ರೂಪಗಳು ಅಮೂರ್ತವೂ, ಅಗೋಚರವೂ, ಅವ್ಯಕ್ತವೂ ಆಗಿರುತ್ತವೆ. ಲಿಂಗಸಂಬಂಧಿ ಅಸಮಾನತೆಯ ಬೇರುಗಳು ಕುಟುಂಬದೊಳಗಿನ ಸಂಬಂಧಗಳಲ್ಲೂ ಹರಡಿಕೊಂಡಿರುತ್ತವೆ.’ ಈ ಹಿನ್ನೆಲೆಯಲ್ಲಿ ಕುಟುಂಬದ ಪ್ರೋತ್ಸಾಹ ಮತ್ತು ಗಂಡನ ಇಚ್ಛೆಯಂತೆ,

ಸ್ವ ಇಚ್ಛೆಯಂತೆ ಎಷ್ಟು ಮಹಿಳೆಯರು ಸ್ಪರ್ಧಿಸಿದ್ದಾರೆಂದು ಕೋಷ್ಟಕ ೨೯ ಮತ್ತು ೩೦ರಲ್ಲಿ ವಿವರಿಸಲಾಗಿದೆ. ಆ ಮೂಲಕ ಮಹಿಳಾ ಭಾಗವಹಿಸುವಿಕೆಯ ಮಟ್ಟವನ್ನು ಅರಿಯಬಹುದಾಗಿದೆ.

ಕೋಷ್ಟಕ ೨೯

ಗಂಡನ ಇಚ್ಛೆ ಮತ್ತು ಸ್ವಇಚ್ಛೆಯಿಂದ ಸ್ಪರ್ಧಿಸಿದ ಮಹಿಳೆಯರು

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಗಂಡನ ಇಚ್ಛೆ	೭೬	೫೦.೩೩	೨೩	೧೬.೬೬
೨.	ಸ್ವ ಇಚ್ಛೆ	೧೦	೬.೬೨	೧೬	೧೧.೫೯
೩.	ಇತರೆ ಕಾರಣಗಳು	೬೫	೪೩	೯೯	೭೧.೭೩
ಒಟ್ಟು		೧೫೧.	೧೦೦	೧೩೮	೧೦೦

ಕೋಷ್ಟಕ ೩೦

ಕುಟುಂಬದ ಸಮ್ಮತಿಯೊಂದಿಗೆ ಸ್ಪರ್ಧಿಸಿದ ಮಹಿಳೆಯರು

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಕುಟುಂಬದ ಸಮ್ಮತಿ ಪ್ರೋತ್ಸಾಹ	೧೪೧	೯೩.೩೭	೧೦೯	೭೮.೯೮
೨.	ಕುಟುಂಬದ ವಿರೋಧ	೧೦	೬.೬೨	೨೯	೨೧
ಒಟ್ಟು		೧೫೧	೧೦೦	೧೩೮	೧೦೦

ಮೇಲಿನ ಕೋಷ್ಟಕಗಳನ್ನು ಗಮನಿಸಿದಾಗ ಗಂಡನ ಇಚ್ಛೆ ಹಾಗೂ ಕುಟುಂಬದ ಇಚ್ಛೆಯಂತೆ ಸ್ಪರ್ಧಿಸಿದವರು ಸಂಡೂರು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಲ್ಲಿ ಗಂಡನ ಇಚ್ಛೆಯಂತೆ ಶೇ.೫೦.೩೩ ಹಾಗೂ ಕುಟುಂಬದ ಇಚ್ಛೆಯಂತೆ ಶೇ.೯೩.೩೭ ಇದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಶೇ ೧೬.೬೬ ಮತ್ತು ಶೇ ೭೮.೯೮ ರಷ್ಟಿದೆ.

ಸ್ವ ಇಚ್ಛೆಯಿಂದ ಸ್ಪರ್ಧಿಸಿದವರು ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಶೇ.೧೧.೫೯ ರಷ್ಟಿದ್ದು, ಸಂಡೂರಿನಲ್ಲಿ ಶೇ ೬.೬೨ ರಷ್ಟಿದ್ದಾರೆ. ಹೊಸಪೇಟೆಯಲ್ಲಿ ಇವರ ಸಂಖ್ಯೆ ಹೆಚ್ಚಿನ ಮಟ್ಟದಲ್ಲಿದೆ. ಕುಟುಂಬದ ವಿರೋಧವನ್ನು ಹೊಂದಿ ಸ್ಪರ್ಧಿಸಿದ ಮಹಿಳೆಯರು ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿದ್ದು ಅವರ ಸಂಖ್ಯೆ ಶೇ.೨೧ ಇದ್ದರೆ ಸಂಡೂರಿನಲ್ಲಿ ೬.೬೨ ರಷ್ಟು ಇರುವುದು ಕಂಡುಬರುತ್ತದೆ.

ಇತರೆ ಕಾರಣಗಳಿಂದ ಸ್ಪರ್ಧಿಸಿದವರ ಸಂಖ್ಯೆ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿರುವುದು ಕಂಡುಬಂದಿದೆ. ಅದು ಶೇ ೭೧.೭೩ ಆಗಿದ್ದು ಸಂಡೂರಿನಲ್ಲಿ ಶೇ ೪೩ರಷ್ಟಿದೆ. ಇತರೆ ಕಾರಣಗಳೆಂದರೆ ಜಾತಿ , ಜನರ ಒತ್ತಾಯ, ರಾಜಕೀಯ ಒತ್ತಡ, ಮೀಸಲಾತಿ ಮತ್ತು ಮಹಿಳೆ. ಈ ಎಲ್ಲ ಕಾರಣಗಳು ಚುನಾಯಿತ ಮಹಿಳೆಯರ ಪತಿಯೊಂದಿಗೆ ಚರ್ಚೆಗೊಳಗಾಗಿಯೇ ತೀರ್ಮಾನವಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಪುನಃ ಪತಿಯದೇ ಅಂತಿಮ ತೀರ್ಮಾನವಾಗಿರುವುದು ಗೋಚರವಾಗುತ್ತದೆ. ಕುಟುಂಬದ ಸಮ್ಮತಿ, ಪ್ರೋತ್ಸಾಹವನ್ನು ಅವಲೋಕಿಸಿದಾಗ ಕುಟುಂಬದ ಇತರ ಸದಸ್ಯರೂ 'ನಿನ್ನ ಪತಿ ಇಷ್ಟ ಪಟ್ಟರೆ ನೀನು ನಿಲ್ಲಬಹುದು' ಎಂದು ಹೇಳಿದ ಮಾತುಗಳು ಕ್ಷೇತ್ರ ಕಾರ್ಯದಲ್ಲಿ ಕೇಳಿಬಂದವು. ಇಲ್ಲಿಯೂ ಅಂತಿಮ ತೀರ್ಮಾನ ಪತಿಯದು. ಇದರಿಂದ ಗಂಡನ ಇಚ್ಛೆ, ಕುಟುಂಬದ ಸಮ್ಮತಿ ಪ್ರೋತ್ಸಾಹ, ಹಾಗೂ ಇತರ ಕಾರಣಗಳು ಮೇಲ್ನೋಟಕ್ಕೆ ಬೇರೆ ಬೇರೆ ಎನಿಸಿದರೂ ಅದರ ಹಿಂದಿನ ತೀರ್ಮಾನ ಪತಿಯದೇ ಆಗಿದೆ. ಈ ಗುಂಪಿನಲ್ಲಿ ಬರುವ ಚುನಾಯಿತ ಮಹಿಳೆಯರು ನೂರಕ್ಕೆ ಶೇ.೯೦ರಷ್ಟು ಕುಟುಂಬದ ನಿಯಂತ್ರಣಕ್ಕೆ ಒಳಪಟ್ಟಿದ್ದಾರೆನ್ನಬಹುದು.

ಸ್ವ ಇಚ್ಛೆ ಮತ್ತು ಕುಟುಂಬದ ವಿರೋಧ ಈ ಎರಡು ಅಂಶಗಳನ್ನು ಒಂದು ಗುಂಪಿನಲ್ಲಿಟ್ಟು ವಿಶ್ಲೇಷಿಸಬಹುದಾಗಿದೆ. ಈ ಗುಂಪಿನಲ್ಲಿ ಸ್ಪರ್ಧಿಸಿದ ಮಹಿಳೆಯರು ಧೈರ್ಯ, ಉತ್ಸಾಹ ಮತ್ತು ಸ್ಪರ್ಧಾ ಮನೋಭಾವ ಸ್ವಂತ ವ್ಯಕ್ತಿತ್ವ ಹೊಂದಿದವರಾಗಿದ್ದಾರೆನ್ನಬಹುದು. ಏನಾದರೂ ಸಾಧಿಸಬೇಕೆಂಬ ಕ್ರಿಯಾಶೀಲತೆ ಇದೆ. ಇವರಲ್ಲಿ ಕೆಲವರು ವಿದ್ಯಾರ್ಥಿ ಜೀವನದಲ್ಲಿ ಕ್ರೀಡಾಪಟುಗಳಾಗಿದ್ದವರು ಸಭೆ ಸಮಾರಂಭಗಳಲ್ಲಿ ಭಾಗವಹಿಸಿದವರೂ ಆಗಿರುವರು. ಕೆಲವು ಸದಸ್ಯೆಯರು ಯುವತಿ ಮಂಡಲ ಹಾಗೂ ಮಹಿಳಾ ಮಂಡಲದ, ಸ್ವಸಹಾಯ ಗುಂಪಿನ ಸದಸ್ಯೆಯರೂ ಆಗಿದ್ದಾರೆ. ಅದೆಲ್ಲದಕ್ಕಿಂತ ಹೆಚ್ಚಾಗಿ ಸದಸ್ಯೆಯಾಗಿ ಗ್ರಾಮಪಂಚಾಯ್ತಿಯೊಂದಿಗೆ ಅನನ್ಯತೆ ಹೊಂದಿರುವ ಲಕ್ಷಣಗಳಿವೆ. ಈ ಗುಂಪಿನವರು ತಮ್ಮ ಅಭಿಪ್ರಾಯಗಳನ್ನು ಹರಿಯಬಿಟ್ಟರೂ, ನಿರ್ಧಾರ ತೆಗೆದುಕೊಳ್ಳುವಲ್ಲಿ ನಿಯಂತ್ರಣಕ್ಕೆ ಒಳಗಾಗುತ್ತಾರೆ ಎನ್ನುವುದು ಗಮನಾರ್ಹ.

ಉದಾ: ಅಧ್ಯಕ್ಷೆಯಾಗಿರುವ ದುರ್ಗಾರಾಣಿ(ವಡ್ಡು), ಸದಸ್ಯೆಯರಾದ ಜಯಮ್ಮ(ನಿಡಗುರ್ತಿ), ಶಾರದ(ಕುರೇಕುಪ್ಪ) ಗಂಗಮ್ಮ(ತಾರಾನಗರ), ಲಕ್ಷ್ಮಿದೇವಿ(ದರೋಜಿ) ಯಲ್ಲಮ್ಮ(ಬೈಲುವದ್ದಿಗೇರಿ) ಇವರು ಉತ್ಸಾಹದ ಮನೋಭಾವದವರಾಗಿದ್ದಾರೆ. ಆದರೂ ಕುಟುಂಬದಲ್ಲಿ ಎಲ್ಲೋ ಒಂದು ಕಡೆ ಅವರನ್ನು ನಿಯಂತ್ರಿಸುತ್ತಿರುವುದು ಅಥವಾ ಅವರ ಅಂತಹ ಆಸಕ್ತಿಗಳನ್ನು ಹತ್ತಿಕ್ಕುತ್ತಿರುವುದು ಗೋಚರವಾಗುತ್ತಿದೆ. ಇವರೂ ಕೊನೆಗೆ ಹತಾಶರಾಗಿ ಕ್ರಿಯಾ ಹೀನರಾಗಿದ್ದಾರಷ್ಟೆ. ಆದರೂ

ಇದೊಂದು ಆಶಾದಾಯಕ ಸಂಗತಿ. ಈ ಗುಂಪಿನಿಂದ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಿಂದ ಸ್ಪರ್ಧಿಸಿದ ಮಹಿಳೆಯರು ಶೇ ೩೨.೬೦ ಆಗಿದ್ದು ಸಂಡೂರಿಗೆ ಹೋಲಿಸಿದಾಗ ಹೊಸಪೇಟೆಯೇ ಮೈಲುಗೈ ಸಾಧಿಸಿದೆ. ಸಂಡೂರಿನಲ್ಲಿ ಶೇ.೧೩.೨೪ ರಷ್ಟು ಜನ ಲೆಕ್ಕಕ್ಕೆ ಸಿಗುತ್ತಾರೆ.

ಇಂಥ ಹೊತ್ತಿನಲ್ಲಿ ನಾವು ಮಹಿಳೆಯರಿಂದ ಸ್ವತಂತ್ರವಾದದ್ದನ್ನು ನಿರೀಕ್ಷಿಸುವುದೆಂತು? ಬಹಳಷ್ಟು ಮಹಿಳಾ ಸ್ಪರ್ಧಿಗಳಿಗೆ ಇಂತಹ ಕೌಟುಂಬಿಕವಾದ ರಾಜಕೀಯ ನಿಕಟತೆ ಇರದಿದ್ದರೂ ಇತ್ತೀಚಿನ ಸಂದರ್ಭಗಳಲ್ಲಿ ಗಂಡ, ಮಕ್ಕಳು ಅಥವಾ ಗ್ರಾಮದ ಯಜಮಾನನ ರಾಜಕೀಯ ಪ್ರವೇಶದಿಂದಾಗಿ, ಮೀಸಲಾತಿಯ ಅನಿವಾರ್ಯತೆಯಿಂದಾಗಿ ರಾಜಕೀಯ ರಂಗಕ್ಕಿಳಿದವರೇ ಹೆಚ್ಚು. (ಇದನ್ನು ೩ನೇಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ) ನಿಜ ಹೇಳಬೇಕೆಂದರೆ ಇವರೆಲ್ಲರಿಗೂ ಸಾರ್ವತ್ರಿಕ ಬದುಕಿಗಿಂತ, ಕುಟುಂಬದ ನೆಲೆಯಲ್ಲಿಯೇ ಎಲೆ ಮರೆಯ ಕಾಯಿಯಂತೆ ಇರುವುದೇ ಇಷ್ಟ.

ಕುಟುಂಬ ಮತ್ತು ಪುರಷಾಧಿಕಾರ ಕುರಿತು ಚರ್ಚಿಸುತ್ತಿರುವ ಹಿನ್ನೆಲೆಯಲ್ಲಿ ಕುಟುಂಬದ ಯಜಮಾನಿಕೆ ಮತ್ತು ಕುಟುಂಬ ಸಂಬಂಧಿ ವಿಷಯಗಳ ಚರ್ಚೆಯಲ್ಲಿ, ನಿರ್ಣಯಗಳಲ್ಲಿ ಚುನಾಯಿತ ಮಹಿಳೆಯ ಪಾಲುಗೊಳ್ಳುವಿಕೆಯೂ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಮೇಲ್ನೋಟಕ್ಕೆ ಸಮಾಜವು ಆಧುನೀಕರಣ ಜಾಗತೀಕರಣ ಹಾಗೂ ಕಂಪ್ಯೂಟರ್ ಯುಗದಲ್ಲಿ ಸಾಗುತ್ತಿದ್ದರೂ ಕುಟುಂಬಗಳೂ, ಅದರಲ್ಲಿರುವ ಪಿತೃಪ್ರಧಾನ ಶಕ್ತಿಗಳು ಮನೋಧರ್ಮಗಳು ಮಹಿಳೆಯ ವಿಷಯದಲ್ಲಿ ಬದಲಾದಂತೆ ಕಾಣುತ್ತಿಲ್ಲ, ಎಂದು ಯೋಚಿಸುವುದಕ್ಕಿಂತ, ಕ್ಷೇತ್ರಾಧ್ಯಯನದಲ್ಲಿ ದೊರೆತಿರುವ ಅಂಕಿ ಅಂಶಗಳ ಪ್ರಮಾಣದ ಮೂಲಕ ವಿವೇಚನೆ ಮಾಡಬಹುದು.

ಕೋಷ್ಟಕ ೩೧

ಚುನಾಯಿತ ಮಹಿಳೆಯರ ಕುಟುಂಬದ ಯಜಮಾನಿಕೆ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಪತಿ, ಮಗ, ಮಾವ	೧೧೯	೭೮.೮೦	೯೭	೭೦.೨೮
೨.	ಸದಸ್ಯೆ	೨೭	೧೭.೮೮	೩೩	೨೩.೯೧
೩.	ಅತ್ತೆ	೫	೩.೩೧	೮	೫.೭೯
	ಒಟ್ಟು	೧೫೧	೧೦೦	೧೩೮	೧೦೦

ಈ ಮೇಲಿನ ಕೋಷ್ಟಕವು ಒಟ್ಟು ಪುರುಷನ ಯಜಮಾನಿಕೆ ಇರುವ ಕುಟುಂಬಗಳಲ್ಲಿನ ಚುನಾಯಿತ ಮಹಿಳೆಯರ ವಿವರವನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ೧೧೯ ಜನರಿದ್ದಾರೆ. (ಶೇ.೭೮.೮೦) ಸದಸ್ಯೆಯೇ ಯಜಮಾನಿಕೆ ವಹಿಸುವ ಕುಟುಂಬಗಳು ೨೭ ಇವೆ(ಶೇ ೧೭.೮೮) ಅತ್ತೆಯರು ಯಜಮಾನಿಕೆ ವಹಿಸುವ ಕುಟುಂಬಗಳು ೫ ಮಾತ್ರ ಇವೆ. (ಶೇ ೩.೩೧) ಹೊಸಪೇಟೆ ತಾಲೂಕು ಗ್ರಾಮಪಂಚಾಯಿಯಲ್ಲಿ ಪುರುಷನ ಯಜಮಾನಿಕೆ ಸಂಖ್ಯೆ ೯೭ ರಷ್ಟಿದೆ(ಶೇ ೭೦.೨೮) ಸದಸ್ಯೆಯರೇ ಯಜಮಾನಿಕೆ ವಹಿಸುವುದನ್ನು ಸಂಡೂರಿಗೆ ಹೋಲಿಸಿದರೆ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಾಗಿದ್ದು ಶೇ೨೩.೯೧ ರಷ್ಟಿದೆ. ಅತ್ತೆಯ ಯಜಮಾನಿಕೆ ಶೇ ೫.೭೯ ರಷ್ಟಿದ್ದು ಸಂಡೂರಿಗಿಂತ ತುಸು ಹೆಚ್ಚಿನ ಪ್ರಮಾಣದಲ್ಲಿದೆ.

ಹೊಸಪೇಟೆಗಿಂತ ಸಂಡೂರಿನಲ್ಲಿ ಪುರುಷರ ಯಜಮಾನಿಕೆ ಹೆಚ್ಚಾಗಿದೆಯಾದರೂ ಕೆಲವು ಸಮಾನ ಅಂಶಗಳು ಎರಡೂ ತಾಲೂಕು ಗ್ರಾಮಪಂಚಾಯ್ತಿಗಳಿಗೆ ಕಾರಣಗಳಾಗಿವೆ. ಪರಂಪರೆಯಿಂದಲೂ ಮಹಿಳೆಯರಲ್ಲಿ ನಾಯಕತ್ವದ ಕೊರತೆಯ ಲಕ್ಷಣಗಳಿವೆ. ಪುರುಷನ ಅಧಿಕಾರವನ್ನು ಒಪ್ಪಿಕೊಂಡು ಕೌಟುಂಬಿಕ ನೆಲೆಯಲ್ಲಿ ತಮಗೆ ಕಾಲದಿಂದಲೂ ವಿಧಿಸಿರುವ ಚೌಕಟ್ಟನ್ನು ಒಪ್ಪಿಕೊಂಡು ಎದುರಾಡದೆ, ಪ್ರಶ್ನಿಸದೇ ಬದುಕುವುದೇ ತಮ್ಮ ಧರ್ಮ ಎಂದು ಮಹಿಳೆಯರು ಭಾವಿಸಿಕೊಂಡಿರುವುದು ನನ್ನ ಅಧ್ಯಯನದ ಮೂಲಕ ತಿಳಿದುಬಂದಿದೆ. ತಮಗೆ ಯಜಮಾನಿಕೆಯ ಸಾಮರ್ಥ್ಯವಿಲ್ಲವೆಂಬ ಕೀಳರಿಮೆ. ಎಲ್ಲೋ ಬೆರಳೆಣಿಕೆಯಷ್ಟು ಮಹಿಳೆಯರು ಕುಟುಂಬದ ಯಜಮಾನಿಕೆ ವಹಿಸಿಕೊಂಡರೂ ಸಮಾಜದ ನಿಂದೆ ಕಿರುಕುಳಗಳಿಂದ ಬಸವಳಿದಿದ್ದಾರೆ. ನಮ್ಮ ಧರ್ಮ ಗ್ರಂಥಗಳೂ ವೇದೋಪನಿಷತ್ತುಗಳು ಹೇಳುವುದೂ ಮಹಿಳೆಯರು ಪುರುಷರ ನಿಯಂತ್ರಣದಲ್ಲಿರಬೇಕೆಂದೇ. ತನ್ನ ಬಗ್ಗೆ ತನಗಿರುವ ಕೀಳರಿಮೆ ಅನಕ್ಷರತೆ ಆತ್ಮ ವಿಶ್ವಾಸದ ಕೊರತೆ, ಪತಿಯೇ ದೇವರು ಎಂಬ ಪರಿಕಲ್ಪನೆ, ಅಜ್ಞಾನ, ವೈಚಾರಿಕ ತಿಳುವಳಿಕೆಯ ಕೊರತೆ, ಪುರುಷಾಧಿಕಾರವನ್ನು ಒಪ್ಪಿಕೊಳ್ಳಲು ಪ್ರೇರೇಪಿಸುವ ಧಾರ್ಮಿಕ ಪರಿಸರ ಶಿಕ್ಷಣದಲ್ಲಿರುವ ಪಠ್ಯಕ್ರಮ ಇಂತಹ ಅನೇಕ ಕಾರಣಗಳು ಮಹಿಳೆಯು ಯಜಮಾನಿಕೆಯಿಂದ ದೂರಸರಿಯಲು ಕಾರಣವಾಗಿದೆ. ಈ ನೆಲೆಯಲ್ಲಿ ಮಹಿಳೆ ವೈಚಾರಿಕವಾಗಿ ಚಿಂತನೆ ಮಾಡುವುದೇ 'ಪೇಸ್ ಪುಲ್ '(painfull) ಎಂದು, ಪುರುಷನ ಯಜಮಾನಿಕೆಯನ್ನು ಒಪ್ಪಿಕೊಳ್ಳುವುದು ಹೆಮ್ಮೆಯ ಸಂಗತಿ ಹಾಗೂ ಸುರಕ್ಷಿತ ಎಂದೂ ಭಾವಿಸಿರುವುದು ಕ್ಷೇತ್ರಾಧ್ಯಯನದಲ್ಲಿ ತಿಳಿದುಬಂದಿದೆ.

ಕೋಷ್ಟಕ ೩.೨

ಕೌಟುಂಬಿಕ ಚರ್ಚೆಯಲ್ಲಿ ಚುನಾಯಿತ ಮಹಿಳೆಯರ ಭಾಗವಹಿಸುವಿಕೆ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಸದಸ್ಯೆಯೊಂದಿಗೆ ಚರ್ಚೆ ಇದೆ	೯೧	೬೦.೨೬	೬೧	೪೪.೨೦
೨.	ಚರ್ಚೆ ಇಲ್ಲ	೫೨	೩೪.೪೩	೫೮	೪೨
೩.	ಸದಸ್ಯೆಯದೇ ತೀರ್ಮಾನ	೮	೫.೨೯	೧೯	೧೩.೭೬
	ಒಟ್ಟು	೧೫೧	೧೦೦	೧೩೮	೧೦೦

ಮೇಲಿನ ಕೋಷ್ಟಕದಿಂದ ಸದಸ್ಯೆಯೊಂದಿಗೆ ಕೌಟುಂಬಿಕ ಸಂಗತಿಗಳನ್ನು ಚರ್ಚಿಸುವುದು ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಿಗಿಂತ ಸಂಡೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿದೆ. ಅಂದರೆ ಶೇ.೬೦.೨೬ ರಷ್ಟಿದೆ. ಹೊಸಸೇಟೆಯಲ್ಲಿ ಶೇ.೪೪.೨೦ ರಷ್ಟಿದೆ. ಸದಸ್ಯೆಯರೇ ತೀರ್ಮಾನ ತೆಗೆದುಕೊಳ್ಳುವ ಪ್ರಮಾಣ ಸಂಡೂರಿಗೆ ಹೋಲಿಸಿದಾಗ ಹೊಸಪೇಟೆಯಲ್ಲಿ ಹೆಚ್ಚಾಗಿದ್ದು ಶೇ.೧೩.೭೬ ರಷ್ಟಿದೆ. ಸಂಡೂರಿನಲ್ಲಿ ೫.೨೯ ರಷ್ಟಿದೆ ಎಂಬುದನ್ನು ಮನಗಾಣಬಹುದಾಗಿದೆ. ಸದಸ್ಯೆಯರೊಂದಿಗೆ ಚರ್ಚೆಯೇ ಇಲ್ಲದಿರುವ ಸದಸ್ಯೆಯರ ಪ್ರಮಾಣ ಸಂಡೂರಿಗೆ ಹೋಲಿಸಿದರೆ ಹೊಸಪೇಟೆಯಲ್ಲೆ ಹೆಚ್ಚಾಗಿದ್ದು ಅದು ಶೇ.೪೨ ರಷ್ಟಿದೆ. ಆದರೆ ಸಂಡೂರಿನಲ್ಲಿ ಶೇ.೩೪.೪೩ ರಷ್ಟಿದೆ.

ಸದಸ್ಯೆಯದೇ ತೀರ್ಮಾನವಿರುವ ಸಂಗತಿಗಳು ದೇವದಾಸಿಯರು, ವಿಧವೆಯರು ಹಾಗೂ ವಿಚ್ಛೇದಿತರು ನಿರ್ವಹಿಸುವಂತ ಕುಟುಂಬಗಳಲ್ಲಿ ಕಂಡುಬರುತ್ತವೆ. ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿರುವ ಇವರ ಸಂಖ್ಯೆ ಒಟ್ಟು ೧೫೧ ಸದಸ್ಯೆಯರಿಗೆ ೧೫ ಆಗಿದ್ದು, ಆದರೆ ಹೊಸಪೇಟೆಯಲ್ಲಿ ಒಟ್ಟು ೧೩೮ ಸದಸ್ಯೆಯರಿಗೆ ೨೧ ಮಹಿಳೆಯರಿದ್ದಾರೆ. ಈ ತಾಲ್ಲೂಕಿನ ರಾಮಸಾಗರ ಗ್ರಾಮಪಂಚಾಯ್ತಿಯಲ್ಲಿರುವ ಮಾರೆಮ್ಮ ಎಂಬಾಕೆ ಗಂಡನಿಂದ ಬೇರೆಯಾಗಿ ವಾಸಿಸುತ್ತಿದ್ದಾಳೆ. ಒಂದು ರೀತಿಯಲ್ಲಿ ಈಕೆ ವಿಚ್ಛೇದಿತೆ. ಆದರೆ ಕಾನೂನಾತ್ಮಕವಾಗಿ ವಿಚ್ಛೇದಿತೆಯಾಗಿಲ್ಲ. ಸಂಡೂರಿನಲ್ಲಿರುವ ೧೫ ವಿಧವೆ ಮತ್ತು ಲೇಸಿಯರಲ್ಲಿ ೮ ಸದಸ್ಯೆಯರು ಮಾತ್ರ ತಾವೇ ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ. ಅಂದರೆ ಶೇಕಡಾ ೫.೨೯. ಹಾಗಾದರೆ ಉಳಿದ ೭ ಸದಸ್ಯೆಯರು ಅಂದರೆ ಶೇ ೪.೬೩ ಸದಸ್ಯೆಯರ ಕುಟುಂಬಗಳಲ್ಲಿ ಪತಿ ಇರದಿದ್ದರೂ, ಲೇಸಿಯರಾದರೂ ಕುಟುಂಬಕ್ಕೆ ಸಂಬಂಧಿಸಿದಂತೆ ಇತರ ಪುರುಷರು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದಾಯಿತು. ಅದೇ ರೀತಿ ಹೊಸಪೇಟೆಯ ೨೧ ಸದಸ್ಯೆಯರಲ್ಲಿ ೧೯

ಸದಸ್ಯೆಯರು ಮಾತ್ರ ತೀರ್ಮಾನ ತೆಗೆದುಕೊಳ್ಳುವಲ್ಲಿ ಭಾಗವಹಿಸುತ್ತಿದ್ದಾರೆ. ಇನ್ನೂ ಉಳಿದ ಇಬ್ಬರು ಸದಸ್ಯೆಯರು ಅಂದರೆ ಶೇ.೧.೪೪ ರಷ್ಟು ಸದಸ್ಯೆಯರ ಮನೆಯಲ್ಲಿ ಇತರ ಪುರುಷರು ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಕ್ರಮಸಂಖ್ಯೆ ೧,೨,೩ ಈ ಮೂರು ಗುಂಪುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಎಲ್ಲಾ ಕಡೆ ಪುರುಷರ ಯಜಮಾನಿಕೆಯೇ ಇರುವುದು ಮುಖ್ಯವಾಗಿ ತಿಳಿದುಬರುತ್ತದೆ. ಅಂದರೆ ಪುರುಷನ ಯಜಮಾನಿಕೆ ಇದೆ. ಸದಸ್ಯೆಯೊಂದಿಗೆ ಚರ್ಚಿಸಲಾಗಿದೆ. ಪುರುಷನ ಯಜಮಾನಿಕೆ ಇದೆ ಆದರೆ ಸದಸ್ಯೆಯೊಂದಿಗೆ ಚರ್ಚಿಸಲಾಗುತ್ತಿಲ್ಲ. ಸದಸ್ಯೆಯದೇ ತೀರ್ಮಾನವಾದರೂ ಪುರುಷ ಶಕ್ತಿಗಳ ಪ್ರಭಾವವಿದೆ ಎನ್ನುವ ಮೂರು ಮಾದರಿಗಳು ಇಲ್ಲಿ ಕಾಣಿಸುತ್ತವೆ. ಸಂದರ್ಶನದಲ್ಲಿ ಚರ್ಚೆ ಮಾತ್ರವೇ? ತೀರ್ಮಾನ ತೆಗೆದುಕೊಳ್ಳುವುದಿಲ್ಲವೇ? ಎಂದು ಪ್ರಶ್ನಿಸಿದಾಗ ''ಚರ್ಚಿಸುವುದೇ ದೊಡ್ಡದು'' ಅಷ್ಟು ಸಾಕು. ಅಂತಿಮ ತೀರ್ಮಾನ ಪತಿಯದು ಅಥವಾ ಪುರುಷನದು ಎಂಬ ಉತ್ತರಗಳು ದೊರಕಿವೆ. ನೀವೇ ಯಾಕೆ ತೀರ್ಮಾನ ತೆಗೆದುಕೊಳ್ಳಬಾರದು ಎಂದು ಕೇಳಿದಾಗ 'ನಮ್ಮ ಮನೆಗಳಲ್ಲಿ ಅಂತಹ ಪರಂಪರೆಯಿಲ್ಲ. ಅದೆಲ್ಲ ನಮಗೆ ತಿಳಿಯೋದು ಇಲ್ಲ' ಎಂಬಂತಹ ಸಿದ್ಧ ಉತ್ತರಗಳು ಸಿಕ್ಕವು. ಸ್ವತಃ ಮಹಿಳೆಯರೇ ತಮ್ಮ ನಾಯಕತ್ವವನ್ನು ತಾವೇ ಒಪ್ಪಿಕೊಳ್ಳಲು ತಯಾರಾಗಿಲ್ಲ. ಭಾರತೀಯ ಸಮಾಜದ ಕುಟುಂಬಗಳಲ್ಲಿ ಇಂತಹ ಬದಲಾಗದ ಮಡಿವಂತಿಕೆಯ ಸಂಪ್ರದಾಯಸ್ಥ ಸಂವೇದನೆಗಳೇ ಬಹಳಷ್ಟಿವೆ. ಆಧುನೀಕರಣದಿಂದ ಉಡುಪು, ಆಹಾರ ಮಾತ್ರ ಬದಲಾಗಿದೆಯೇ ಹೊರತು ಮನೋಧರ್ಮಗಳಲ್ಲಿ ಮಾತ್ರ ನಿರೀಕ್ಷಿತ ಬದಲಾವಣೆಗಳಿಲ್ಲ ಎಂಬುದು ಇದರಿಂದ ತಿಳಿದುಬರುತ್ತದೆ.

ಇಂತಹ ವಿಷಮ ಸಾಮಾಜಿಕ ಪರಿಸರದಲ್ಲಿರುವ ಮಹಿಳೆಯರು ತಮ್ಮ ಕುಟುಂಬದಲ್ಲಿಯೇ ತಮ್ಮವರಿಂದ ಹತ್ತಿಕ್ಕಲ್ಪಡುತ್ತಿರುವ ಹೊತ್ತಿನಲ್ಲಿ ಸಾರ್ವತ್ರಿಕ ಜೀವನದಲ್ಲಿ ಗ್ರಾಮಪಂಚಾಯ್ತಿಯ ರಾಜಕಾರಣದಲ್ಲಿ ಹೇಗೆ ತಾನೇ ಭಾಗವಹಿಸಲು ಸಾಧ್ಯವಾಗುತ್ತದೆ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಕೌಟುಂಬಿಕ ತೀರ್ಮಾನಗಳಲ್ಲಿ ಸದಸ್ಯೆಯರ ಭಾಗವಹಿಸುವಿಕೆಯ ಮಟ್ಟ ಕಡಿಮೆ ಪ್ರಮಾಣ ಎನಿಸಿದರೂ ಚರ್ಚೆಯಲ್ಲಿ ಭಾಗವಹಿಸುವ ನೆಲೆ ಆಶಾದಾಯಕವಾಗಿದೆ ಎನ್ನಬಹುದು.

ವಿಕೇಂದ್ರೀಕರಣ ವ್ಯವಸ್ಥೆಯು ಸ್ತ್ರೀಪರವಾದಂತಹ ಸಾಕಷ್ಟು ಅವಕಾಶಗಳನ್ನು ತೆರೆದಿಟ್ಟರೂ ಅದನ್ನು ಅನುಭವಿಸಬೇಕಾದಂತಹ ಸೂಕ್ತ ಸಾಮಾಜಿಕ ಸನ್ನಿವೇಶ ರೂಪುಗೊಂಡಿಲ್ಲ. ಅಭಿವೃದ್ಧಿಯಿಂದ ಪ್ರಾಪ್ತವಾಗುವ ಅವಕಾಶಗಳೆಲ್ಲವೂ ಲಿಂಗ ಭೇದವೆನಿಸದೆ ಸ್ತ್ರೀ ಪುರುಷರೆಲ್ಲರಿಗೂ ಸಮಾನವಾಗಿ ಒದಗಿಬರುತ್ತವೆ ಎಂದು ನಂಬಲಾಗಿದೆ. ಆದರೆ ಈ ಅವಕಾಶಗಳಲ್ಲಿ ಮಹಿಳೆಯರು ತಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಪಡೆದಿದ್ದಾರೆಯೇ? ಅವಕಾಶಗಳನ್ನು ತಮ್ಮದಾಗಿಸಿ ಕೊಳ್ಳಬಲ್ಲ ಸಾಮರ್ಥ್ಯ ಪಡೆದಿದ್ದಾರೆಯೇ? ಅವಕಾಶಗಳ ಮೇಲೆ ಅಧಿಕಾರ-ಹಕ್ಕುದಾರಿಕೆ ಚಲಾಯಿಸುವ

ಶಕ್ತಿ ಪಡೆದಿದ್ದಾರೆಯೇ? ಅಮರ್ತ್ಯಸೇನ್ ಪ್ರಕಾರ ನಿಜವಾದ ಸಮಸ್ಯೆಯಿರುವುದು ಇಲ್ಲಿ. ಇಂತಹ ಪ್ರಶ್ನೆಗಳನ್ನು ಸಾಮಾಜಿಕ ಆರ್ಥಿಕ ನೆಲೆಯಲ್ಲೂ ಸೇನ್ ಕೇಳುತ್ತಾರೆ. ಮತ್ತು ಕುಟುಂಬದೊಳಗಿನ ಸಂಬಂಧಗಳ ನೆಲೆಯಲ್ಲೂ ಕೇಳುತ್ತಾರೆ.[೬] ಆದರೆ ಒಂದು ಮಿಸುಕಾಟ ಮಾತ್ರ ಗ್ರಾಮಸಮಾಜದ ಎಲ್ಲ ವರ್ಗದ ಸ್ತ್ರೀಯರಲ್ಲಿ ಕಂಡುಬರುತ್ತದೆ. ಇಚ್ಛಾ ಮಾತ್ರದ ಬದಲಾವಣೆಯಿಂದ ಯಾವ ಸ್ಥಿತಿಗಳು ಬದಲಾಗಲಾರವು. ಸಾಮಾಜಿಕ ಅಂತರ್‌ರಚನೆಯಲ್ಲೇ ಮೂಲಭೂತವಾದ ಬದಲಾವಣೆ ಅಗತ್ಯವಾದಾಗ ಮಾತ್ರ, ಬದಲಾವಣೆಗಳನ್ನು ಧಾರಣ ಮಾಡುವ ಶಕ್ತಿ ಮಹಿಳೆಯರಲ್ಲಿ ಬಂದಾಗ ಮಾತ್ರ, ಸರ್ಕಾರ ಮಾಡುವ ಸುಧಾರಣಾ ಕ್ರಮಗಳು ಸಾರ್ಥಕತೆಯನ್ನು ಪಡೆಯುತ್ತವೆ. ಅದರ ಫಲ ಮಹಿಳೆಯರಿಗೆ ದಕ್ಕುತ್ತವೆ.

ಚುನಾಯಿತ ಮಹಿಳೆಯರಿಗೆ ತಾವಿಂದು ಏನಾಗಿದ್ದೇವೆ ಎಂಬ ಅರಿವೇ ಇಲ್ಲ. ಇತ್ತೀಚಿನ ಪತ್ರಿಕಾ ವರದಿಗಳಲ್ಲಿ ಗ್ರಾಮಪಂಚಾಯ್ತಿ ಅಧ್ಯಕ್ಷೆ, ಉಪಾಧ್ಯಕ್ಷೆ, ಸದಸ್ಯೆಯರು ದಿನಗೂಲಿ ಮಾಡುವ ಮಿರ್ಚಿ ಬಜಿ ಮಾಡುವ, ಸೈಜಗಲ್ಲು ಹೊರುವ, ಕೂಲಿ ಆಳುಗಳಾಗಿ ಹೋದ ವರದಿಗಳನ್ನು ಕಂಡಿದ್ದೇವೆ. ನಾನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಗ್ರಾಮಪಂಚಾಯ್ತಿಗಳಲ್ಲಿ ಇದಕ್ಕೆ ಭಿನ್ನವಾದ ಪರಿಸ್ಥಿತಿ ಏನಿಲ್ಲ. ಉದಾಹರಣೆಗೆ ಹೊಸಪೇಟೆಯ ಮೆಟ್ರಿ ಗ್ರಾಮಪಂಚಾಯತಿಯ ಸದಸ್ಯೆ ತಿಮ್ಮಕ್ಕ ಕೃಷಿ ಕೂಲಿಯಾಗಿಯೂ, ಉಳಿದ ದಿನಗಳಲ್ಲಿ ಹಣ್ಣು ತರಕಾರಿ ಮಾರಿ ಸಂಜೆ ಗಂಜಿ ಹುಟ್ಟಿಸಿಕೊಳ್ಳುತ್ತಾಳೆ. ರಾಮಸಾಗರದ ಕೊರವರ ಮಾರೆಮ್ಮ ಇಡೀ ದಿನ ತರಕಾರಿ ಮಾರಾಟ ಮಾಡುತ್ತಾರೆ. ಸಂಡೂರಿನ ಒಬ್ಬ ಸದಸ್ಯೆ ಅಗಸರ ಕೆಲಸ ಮಾಡುತ್ತಾರೆ. ದೇವಸಮುದ್ರದ ಕರೆಮ್ಮನಿಗೆ ಅಯ್ಯೋ ಸದಸ್ಯೆಯಾಗಿ ಕೂಲಿ ಮಾಡಲು ಹೋಗ್ತೀಯಾ ಅಂತ ರೇಗಿಸುತ್ತಾರೆ. ಆದರೆ ಹೊಟ್ಟೆಪಾಡು ದುಡಿಯಬೇಕು ಎಂದು ಸದಸ್ಯೆಯರು ಉತ್ತರಿಸುತ್ತಾರೆ. ಇಂತಹ ಅನೇಕ ಉದಾಹರಣೆಗಳು ಕ್ಷೇತ್ರಕಾರ್ಯದಲ್ಲಿ ಗೋಚರಿಸಿವೆ. ಇಲ್ಲಿ ಗಮನಿಸಬೇಕಾದ ಮುಖ್ಯಸಂಗತಿ ಎಂದರೆ ಪುರುಷನೊಬ್ಬನು ಸದಸ್ಯನಾದ ಮಾತ್ರಕ್ಕೆ ಸದಸ್ಯನೆಂಬ ಹಮ್ಮಿನಿಂದ ಕೆಲಸ ಬೊಗಸೆಯಿಲ್ಲದೆ, ಪರಾವಲಂಬಿಯಾಗಿ ಉಳಿಯುವುದು. ಪುರುಷರಿಗೆ ವಿಕೇಂದ್ರೀಕರಣದಲ್ಲಿ ಯಾವುದೇ ಹಂತದ ರಾಜಕಾರಣವು ಪೂರ್ಣಾವದಿಯ ವೃತ್ತಿಯಾಗಿ ಬಿಡುತ್ತದೆ. ಆದರೆ ಮಹಿಳೆಗೆ ರಾಜಕಾರಣ ಪೂರ್ಣಾವಧಿಯ ವೃತ್ತಿಯಾಗಲು ಸಾಧ್ಯವಾಗುವುದಿಲ್ಲ. ಆಕೆ ಸಂತಾನೋತ್ಪತ್ತಿ, ಲಾಲನೆ, ಪಾಲನೆ, ಪೋಷಣೆ, ಹೊಲಮನೆ ಗೆಲಸ, ಕೂಲಿ ಎಲ್ಲವನ್ನು ನಿರ್ವಹಿಸಬೇಕಾಗಿದೆ. ತನ್ನ ಸ್ಥಾನ ಬಲದ ಹಂಗು ಹರಿದು ಸಂಜೆಯ ಗಂಜಿಗಾಗಿ ದುಡಿಯಲೇ ಬೇಕಾದ ದುಡಿವ ವರ್ಗದ ಮಹಿಳಾ ಪ್ರತಿನಿಧಿಗಳು ವಿಶೇಷವಾಗಿ ಕಾಣಸಿಗುತ್ತಾರೆ. ಮಹಿಳೆಯರಲ್ಲಿ ಕ್ರಿಯಾಶೀಲತೆಯ ತಾಟಸ್ಥ್ಯವನ್ನು ಕಾಣಲಾಗುವುದಿಲ್ಲ. ಆದರೆ ರಾಜಕೀಯ ಭಾಗವಹಿಸುವಿಕೆಯಲ್ಲಿ ಈ ಕ್ರಿಯಾಶೀಲತೆ ಕಂಡುಬರುವುದಿಲ್ಲ. ಕೌಟುಂಬಿಕ ಬದುಕಿಗೆ ಇರುವಷ್ಟು ಬದ್ಧತೆ ರಾಜಕೀಯ ಬದುಕಿನಲ್ಲಿ ಕಾಣುವುದಿಲ್ಲ.

ಆಯ್ಕೆಯಾದ ಮಹಿಳಾ ಸದಸ್ಯೆಯರು ಗ್ರಾಮಪಂಚಾಯಿತಿಯ ಕಟ್ಟೆ ಏರಿರದ ಉದಾಹರಣೆಗಳೂ ದೊರೆತಿವೆ. ಸಂಡೂರಿನ ವಡ್ಡು ಗ್ರಾಮಪಂಚಾಯ್ತಿಯ ಸದಸ್ಯೆ ಶ್ರೀಮತಿ ನಾಗಮ್ಮ ಹೇಳುವಂತೆ 'ನಾನು ಇಲ್ಲಿಯವರೆಗೆ ಹೊರಗೆ ಹೆಜ್ಜೆ ಇಟ್ಟವಳಲ್ಲ. ಎಲ್ಲ ಪತಿಯದೇ ಕಾರುಬಾರು, ನನಗೇನೂ ಗೊತ್ತಿಲ್ಲ. ಈಗಲೂ ನಾನು ಹೊರಗಿನ ಯಾವ ಕೆಲಸಕ್ಕು ಹೋಗುವುದಿಲ್ಲ'. ಇಂತಹ ಹಲವಾರು ಮಾಹಿತಿಗಳು ಕ್ಷೇತ್ರಾಧ್ಯಯನದಿಂದ ತಿಳಿದುಬರುತ್ತದೆ. ಆಯ್ಕೆಯಾದ ಒಟ್ಟು ೨೮೯ ಜನ ಮಹಿಳೆಯರಲ್ಲಿ ಶೇ.೭ ರಷ್ಟು ಸದಸ್ಯೆಯರು ಇದುವರೆಗೂ ಪಂಚಾಯಿತಿ ಮೆಟ್ಟಿಲೇರದಿದ್ದದ್ದು ಆಶ್ಚರ್ಯವೆನಿಸಿದರೂ ಸತ್ಯವಾಗಿದೆ. ಇದಕ್ಕೆ ಸದಸ್ಯೆಗಿರುವ ನೀರಸಭಾವನೆಗಳು, ಜಾತಿ ಮುಜುಗರಗಳು, ಹೆಣ್ಣು ಸಹಜ ನಾಚಿಕೆಗಳು, ಪುರುಷಾಧಿಕಾರಗಳು ಕೀಳರಿಮೆಗಳು ಮುಖ್ಯವಾದಂಥವು.

ಒಟ್ಟು ಚರ್ಚೆಯ ಫಲಿತವಷ್ಟೇ ನೂರಕ್ಕೆ ೯೫ರಷ್ಟು ಚುನಾಯಿತ ಮಹಿಳಾ ಸದಸ್ಯರು ಕುಟುಂಬದ ಅಥವಾ ಊರಿನ ಪ್ರತಿಷ್ಠಿತ ವರ್ಗದವರ ಸೂತ್ರದ ಗೊಂಬೆಗಳಾಗಿರುವುದು ಕಂಡುಬರುತ್ತದೆ. ಸ್ವ ಆಸಕ್ತಿಯಿಲ್ಲದೆ ಗೆದ್ದ ಇವರಲ್ಲಿ ರಾಜಕೀಯ ಚಿಂತನೆಗಳಿಗಿಂತ ಸಂಸಾರಿಕ ಮತ್ತು ದೈನಂದಿನ ವ್ಯವಹಾರಗಳಿಗೇ ಆದ್ಯತೆಯಿದೆ. ಏಕೆಂದರೆ ಹೊಲಮನೆ, ಲಾಲನೆ, ಪಾಲನೆ, ಪೋಷಣೆ, ನೀರು, ಉರುವಲು, ಕೂಲಿ ಎಲ್ಲವನ್ನು ಮಹಿಳಾ ಸದಸ್ಯೆಯೇ ಮಾಡಬೇಕು. ಮಹಿಳೆಯರು ಇಬ್ಬಗೆಯ ಹೊಣೆಗಾರಿಕೆಯನ್ನು ಹೊತ್ತಿರುತ್ತಾರೆ. ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳುವುದು, ಸೌದೆ ಒಟ್ಟು ಮಾಡುವುದು ಮತ್ತು ಕುಡಿಯುವ ನೀರು ತರುವುದು ಈ ಕೆಲಸಗಳು ಮಹಿಳೆಯರ ದಿನದ ಸುಮಾರು ಗಂಟೆಗಳನ್ನು ಕಬಳಿಸಿ ಬಿಡುತ್ತದೆ. ಬಡಹೆಂಗಸರಿಗೆ ಸೌದೆ ನೀರು ಸುಲಭವಾಗಿ ಸಿಗುವಂತೆ ಮಾಡಿದರೆ ಅವರ ಬಾಳಿನಲ್ಲಿ ದೊಡ್ಡ ಬದಲಾವಣೆಯನ್ನು ತರಬಹುದು. ಮೂಲಭೂತ ಅಗತ್ಯಗಳು ಪೂರೈಕೆಯಾದಾಗ ಮಹಿಳೆಯರಿಗೆ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಹೆಚ್ಚು ಸಮಯ ಮತ್ತು ಶಕ್ತಿ ಸಿಗುತ್ತದೆ.[೭] ಇಲ್ಲವಾದರೆ ದಿನನಿತ್ಯದ ರಾಜಕಾರಣಗಳಿಂದಾಗಿ ಗಟ್ಟಿಯಾಗಿ ನೆಲೆನಿಂತು ಕೆಲಸ ಮಾಡಲು ಮಹಿಳೆಯರಿಗೆ ಭದ್ರ ಅಡಿಪಾಯವೇ ಇಲ್ಲದಂತಾಗುತ್ತದೆ.

ದಿನವಿಡೀ ಇಂತಹ ಕೆಲಸಗಳಲ್ಲಿ ಮುಳುಗಿರುವ ಮಹಿಳೆಗೆ ತಾನು ಪಂಚಾಯ್ತಿಯ ಸದಸ್ಯೆ ಎಂದು ಯೋಚಿಸಲೂ ಸಮಯವಿರುವುದಿಲ್ಲ. ಅಷ್ಟಕ್ಕೂ ಮಹಿಳೆಯರನ್ನು ಗೃಹಿಣಿಯನ್ನಾಗಿ ಮಾಡಲು ಅಗತ್ಯವಾದ ಸಾಮಾಜೀಕರಕಣ, ಪ್ರಕ್ರಿಯೆಯನ್ನು ಸಮಾಜವು ಚಾಲನೆಯಲ್ಲಿಟ್ಟಿರುತ್ತದೆ. ಮಹಿಳೆಯರನ್ನು ಒಬ್ಬ ತಾಯಿಯಾಗಿ, ಪತ್ನಿಯಾಗಿ, ಅಕ್ಕತಂಗಿಯಾಗಿ ಮಾತ್ರ ಸಮಾಜ ನೋಡಲು ಬಯಸುತ್ತದೆ. ಆಕೆಯನ್ನು ವೈದಳಾಗಿ, ಎಂಜಿನಿಯರ್ ಆಗಿ ಗ್ರಾಮಪಂಚಾಯ್ತಿಯ ಸದಸ್ಯೆಯಾಗಿ, ಅಧ್ಯಕ್ಷೆಯಾಗಿ

ಅಲ್ಲ.[೮] ಈ ಕುರಿತು ಇತರ ಸದಸ್ಯೆಯರೊಂದಿಗೆ ಚರ್ಚಿಸುವಷ್ಟು ವ್ಯವಧಾನವಿರುವುದಿಲ್ಲ. ಸದಸ್ಯೆಯರ ಆಧ್ಯತೆಯೆಲ್ಲ ಕುಟುಂಬಕ್ಕೆ ಮೀಸಲಾಗಿರುವುದು ಕಾಣುತ್ತದೆ. ಗ್ರಾಮೀಣ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ನಿರಕ್ಷರಿಗಳೂ, ದುಡಿಯುವ ವರ್ಗಕ್ಕೆ ಸೇರಿದವರೂ ಆಗಿರುವರು. ಕುಟುಂಬದಲ್ಲಿ ಇವರ ಶೋಷಣೆಯು ವರ್ಗಸಂಬಂಧಿಯೂ ಹಾಗೂ ಲಿಂಗ ಸಂಬಂಧಿಯೂ ಆಗಿರುತ್ತದೆ. ಇಲ್ಲಿ ಅವಳಿಗೆ ಆಯ್ಕೆಯ ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕುಟುಂಬಗಳಲ್ಲಿ ಪುರುಷರು ದಿನನಿತ್ಯದ ಚಲನವಲನಗಳಲ್ಲಿ ಹೆಂಗಸರು ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ತಡೆಯುತ್ತಾರೆ. ಆದರೂ ದಿನನಿತ್ಯದ ರಾಜಕಾರಣ ರಾಷ್ಟ್ರಗಳ ರಾಜಕಾರಣದಷ್ಟೇ ಆಕೆಗೆ ಮುಖ್ಯವಾಗಿರುತ್ತದೆ ಎಂಬುದು ಗಮನಾರ್ಹ.

ಕೋಷ್ಟಕ ೩೩

ನೀರು ಉರುವಲು ಸಂಗ್ರಹದ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಮಕ್ಕಳು	೪೭	೩೪	೭೧	೪೭
೨	ಸದಸ್ಯರು	೫೫	೩೯.೮೫	೪೩	೨೮.೪೭
೩	ಎಲ್ಲರೂ	೩೬	೨೬	೩೭	೨೪.೫೦
ಒಟ್ಟು		೧೫೧	೧೦೦	೧೩೮	೧೦೦

ಕೋಷ್ಟಕ ೩೩ರಲ್ಲಿ ನೀರು ಮತ್ತು ಉರುವಲನ್ನು ಸಂಗ್ರಹಿಸುವವರ ಅಂಕಿಅಂಶಗಳನ್ನು ಪಟ್ಟಿ ಮಾಡುವ ಮೂಲಕ ಮಹಿಳಾ ರಾಜಕೀಯ ಭಾಗವಹಿಸುವಿಕೆಗೆ ಇರುವ ಅಡಚಣೆಗಳನ್ನು ಕಂಡುಕೊಳ್ಳಲಾಗಿದೆ. ನೀರು ಮತ್ತು ಉರುವಲು ಸಂಗ್ರಹಿಸುವ ಸದಸ್ಯೆಯರು ಸಂಡೂರಿನಲ್ಲಿ ಹೆಚ್ಚಾಗಿದ್ದು. ಅದು ಶೇ ೩೯.೮೫ ರಷ್ಟಿದೆ. ಹೊಸಪೇಟೆಯಲ್ಲಿ ಶೇ ೨೮.೪೭ ರಷ್ಟಿದ್ದು. ಕಡಿಮೆ ಮಟ್ಟದಲ್ಲಿದೆ. ಎಲ್ಲರೂ ಸೇರಿ ಸಂಗ್ರಹಿಸುವುದು ಹೆಚ್ಚುಕಡಿಮೆ ಎಲ್ಲ ತಾಲೂಕುಗಳಲ್ಲಿ ಒಂದೇ ರೀತಿಯಾಗಿದೆ. ಇಲ್ಲಿ ಮಕ್ಕಳ ಗುಂಪಿನಲ್ಲಿ ಸದಸ್ಯೆ ಭಾಗವಹಿಸದಿದ್ದರೂ, ಎಲ್ಲರೂ ಸೇರಿ ಸಂಗ್ರಹಿಸುವ ಗುಂಪಿನಲ್ಲಿ ಸದಸ್ಯೆ ಪುನಃ ತನ್ನ ಶ್ರಮವನ್ನು ಹಾಕಬೇಕಾಗುತ್ತದೆ. ನೀರಿನ ಸಮಸ್ಯೆ ಎಲ್ಲಕಡೆಗೆ ಈಗ ಬೃಹದಾಕಾರವಾಗಿ ಕಾಡುತ್ತಿರುವಾಗ ಕುಡಿಯುವ ನೀರಿಗಾಗಿ ಸದಸ್ಯೆ ಬಹುದೂರ ಅಲೆದಾಡಬೇಕಾಗುತ್ತದೆ. ದಿನದ ಬಹುಸಮಯ ನೀರು ಮತ್ತು ಉರುವಲು ಸಂಗ್ರಹಕ್ಕಾಗಿ ವ್ಯಯ ಮಾಡಬೇಕಾಗುತ್ತದೆ.

[illegible]

[illegible]

[illegible]

ಈ ನಡುವೆ ತಾನು ಒಂದು ಜವಬ್ದಾರಿಯುತ ಸ್ಥಾನದಲ್ಲಿರುವೆ, ಆ ಸ್ಥಾನಕ್ಕೆ ನ್ಯಾಯ ಸಲ್ಲಿಸಬೇಕು, ಆ ಕುರಿತು ಒಂದಿಷ್ಟು ಯೋಚಿಸಬೇಕು ಎಂಬಷ್ಟು ವ್ಯವಧಾನವೇ ಆಕೆಗಿರುವುದಿಲ್ಲ. ಇಂತಹ ಸಂಗತಿಯೂ ರಾಜಕೀಯ ಭಾಗವಹಿಸುವಿಕೆಯಲ್ಲಿ ತಡೆಯಾಗುತ್ತದೆ. ಜೊತೆಗೆ ಸಾಮಾಜಿಕ ಚಲನೆಗೂ ಅಡ್ಡಿಯಾಗುತ್ತದೆ.

ನೀರು ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೂ ಅತಿ ಅವಶ್ಯಕವಾಗಿರುವಂತಹದು. ಆದರೆ ಅದರ ಪೂರೈಕೆಯ ಸಂಪೂರ್ಣ ಹೊಣೆಗಾರಿಕೆ ಸದಸ್ಯೆ (ಮಹಿಳೆ)ಯದೇ ಆಗಿದೆ. ಕುಟುಂಬಕ್ಕೆ ನೀರಿನ ಪೂರೈಕೆಯು ಮಹಿಳೆಗೇ ಸಂಬಂಧಿಸಿದ್ದು ಎನ್ನುವ ಪರಿಭಾವನೆ ಪರಂಪರೆಯಿಂದಲೂ ಬೆಳೆದುಬಂದಿದೆ. ಸಮೂಹ ಮಾಧ್ಯಮಗಳು ಈ ಪರಿಭಾವನೆಗೆ ಪೂರಕವಾಗಿ ವರ್ತಿಸುತ್ತವೆ. ಅಂದರೆ ನೀರಿನ ಸಮಸ್ಯೆ ತೋರಿಸುವಾಗ ದೃಶ್ಯ ಮಾಧ್ಯಮಗಳು ಮಹಿಳೆಯರೇ ನೀರಿಗಾಗಿ ಪರಸ್ಪರ ಹೊಡೆದಾಡುತ್ತಿರುವುದನ್ನು ಅಥವಾ ಅಲೆದಾಡುತ್ತಿರುವುದನ್ನು ತೋರಿಸುತ್ತವೆ.

ಮೇಲಿನ ಸಂಗತಿಗಳು ಲಿಂಗಸಂಬಂಧಿ ಶ್ರಮವಿಭಜನೆಯ ಮತ್ತು ಪುರುಷ ಪರಮಾಧಿಕಾರದ ಫಲಿತಗಳಾಗಿವೆ. ಹಾಗೆ ಸಾಮಾಜಿಕ ನಂಬಿಕೆಗಳು ಇದನ್ನು ಪೋಷಿಸುತ್ತಲೂ ಬಂದಿವೆ. ಲಿಂಗಾಧಾರಿತ ನೆಲೆಯಲ್ಲಿ ಪಾಲನೆ ಪೋಷಣೆ ಮತ್ತು ಅಡುಗೆಮನೆಯ ಕೆಲಸಗಳನ್ನು ಸ್ತ್ರೀಗೆ ನಿಗದಿಗೊಳಿಸಲಾಗಿದೆ. ಇದು ಬರೀ ಶ್ರಮವಿಭಜನೆಯಾಗಿ ಕಾಣುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯು ಉತ್ಪಾದನಾ ವ್ಯವಸ್ಥೆಯನ್ನು ಪರಿಭಾವಿಸಿಕೊಂಡಿರುವ ಬಗೆ ಅದನ್ನು ರೂಪಿಸಿರುವ ನೆಲೆ ಮತ್ತು ಅದರ ಸಾಂಸ್ಥಿಕ ನೆಲೆಯಲ್ಲಿ ಲಿಂಗಸಂಬಂಧಿ ಅಸಮಾನತೆ ಅಂತರ್ಗತಗೊಂಡಿದೆ. ಮಹಿಳೆಯರ ಇಂತಹ ಚಟುವಟಿಕೆಗಳನ್ನು ಜೈವಿಕ ಪ್ರಾಕೃತಿಕ ಎಂದೂ ಪುರುಷರ ಚಟುವಟಿಕೆಗಳನ್ನು ಆರ್ಥಿಕ ಸಾಂಸ್ಕೃತಿಕ ಎಂದೂ ವರ್ಗೀಕರಿಸಲಾಗಿದೆ. ಈ ವರ್ಗೀಕರಣದಲ್ಲಿನ ಪ್ರಕೃತಿ ಮತ್ತು ಸಂಸ್ಕೃತಿ ಎನ್ನುವ ಪರಿಕಲ್ಪನೆ ಅಪಾಯಕಾರಿಯಾದದ್ದು. ಇಲ್ಲಿ ಪ್ರಕೃತಿಗಿಂತ ಸಂಸ್ಕೃತಿ ಶ್ರೇಷ್ಠವಾದದ್ದು ಎನ್ನುವ ಏಣಿಶ್ರೇಣಿ ಸ್ವರೂಪವನ್ನು ಶ್ರೇಷ್ಠ ಕನಿಷ್ಠ ಎಂಬ ವ್ಯತ್ಯಾಸಗಳನ್ನು ನೋಡಬಹುದಾಗಿದೆ. ಆ ಮೂಲಕ ಸ್ತ್ರೀಯನ್ನು ಪರಾಧೀನೆಯಾಗಿಸಿ ಪ್ರಕೃತಿಯ ಗುಣಗಳಾದ ಸಹನೆ, ಪಾಲನೆ, ಫಲವತ್ತತೆ, ಪುನರುತ್ಪತ್ತಿಯಂತಹ ಸಂಗತಿಗಳಿಗೆ ಸೀಮಿತಗೊಳಿಸಲಾಗಿದೆ. ಇವೆಲ್ಲ ಉತ್ತಮ ಮಹಿಳೆಗಿರಬೇಕಾದ ಗುಣಗಳೆಂದೂ, ನಂಬಿಸಲಾಗಿದೆ. ಹೀಗಾಗಿ ಚಾಕರಿಯೇ ಹೆಣ್ಣಿನ ಬದುಕಿನ ಮೂಲೋದ್ದೇಶ, ಗೃಹಕೃತ್ಯಗಳೇ ಆಕೆಯ ಬದುಕಿನ ಪರಮಧ್ಯೇಯ ಎಂದು ವೈಭವೀಕರಿಸಲಾಗಿದೆ. ಹೀಗಾಗಿ ಎಷ್ಟು ದುಡಿದರೂ ಎಂತಹ ಆಧುನಿಕ ಪ್ರಕ್ರಿಯೆಯಲ್ಲಿ ಭಾಗಿಯಾದರೂ ನೀರು, ಉರುವಲುಗಳಂತಹ ಮೂಲಭೂತ ಸೌಕರ್ಯಗಳ ಸಂಗ್ರಹವನ್ನು ಹೆಣ್ಣಿಗೆ ಬಿಟ್ಟುಕೊಡಲಾಗಿದೆ. ಗ್ರಾಮಪಂಚಾಯಿತಿಯ ಸದಸ್ಯನಾದ ಗಂಡಸು ಸದಸ್ಯನೆಂಬ

ಅಮಲಿನಲ್ಲಿ ಬಾಳ್ವೆ ಬದುಕು ಬಿಟ್ಟು ವೈಭವೀಕೃತ ಸೋಮಾರಿ ಬದುಕನ್ನು ಸಾಗಿಸಬಹುದಾಗಿದೆ. ಆದರೆ ಹೆಣ್ಣು ಸದಸ್ಯೆ, ಅಧ್ಯಕ್ಷೆಯಾಗಿದ್ದರೂ ಕುಟುಂಬದ ದೈನಂದಿನ ಅಗತ್ಯಗಳನ್ನು ಪೂರೈಸುವ ಇಬ್ಬಗೆಯ ಹೊಣೆಗಾರಿಕೆಯನ್ನು ಹೊರುವಂತಹ ಅನಿವಾರ್ಯತೆಯಿದೆ. ಈ ಅನಿವಾರ್ಯತೆಗಳು ಚುನಾಯಿತ ಮಹಿಳೆಯರನ್ನು ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರೀಯಾಗಿ ತೊಡಗಿಕೊಳ್ಳಲು ಬಿಡದೆ, ತೀರ ಪ್ರಾಸಂಗಿಕವಾದ ನೆಲೆಯಲ್ಲಿ ಆಕೆಯ ಭಾಗವಹಿಸುವಿಕೆಯನ್ನು ಸಾಧ್ಯವಾಗಿಸುತ್ತಿವೆ.

ಚುನಾಯಿತ ಮಹಿಳೆಯರ ವಿದ್ಯಾರ್ಹತೆ ಮತ್ತು ವಯಸ್ಸು ವೈವಾಹಿಕ ವಿವರಗಳು ಕೂಡ ಅವರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರುವ ಬಹುಮುಖ್ಯ ಸಂಗತಿಗಳಾಗಿವೆ. ಅಂಕಿಅಂಶಗಳ ಮೂಲಕ ಈ ಸಂಗತಿಗಳನ್ನು ವಿವರಿಸಬಹುದು.

ಕೋಷ್ಟಕ ೩೪

ಚುನಾಯಿತ ಮಹಿಳೆಯರ ವಯಸ್ಸು

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	೨೦-೨೯	೩೩	೨೧.೮೫	೧೮	೧೩
೨	೩೦-೩೯	೬೫	೪೩	೫೩	೩೮
೩	೪೦-೪೯	೩೩	೨೧.೮೫	೪೭	೩೪
೪	೫೦-೫೯	೧೫	೯.೯೩	೧೫	೧೦.೮೬
೫	೬೦-೬೯	೪	೨.೬೪	೩	೨.೧೭
೬	೭೦-೭೯	೧	೦.೬೬	೧	೦.೭೨
೭	೮೦-೮೯	---	---	೧	೦.೭೨
ಒಟ್ಟು		೧೫೧	೧೦೦	೧೩೮	೧೦೦

ಕೋಷ್ಟಕವನ್ನು ಗಮನಿಸಿದಾಗ ಎರಡು ತಾಲೂಕುಗಳಿಂದ ೩೦ ರಿಂದ ೫೦ ವಯಸ್ಸಿನ ನಡುವೆ ಇರುವ ಅದರಲ್ಲೂ ೩೦ ರಿಂದ ೪೦ರ ನಡುವಿನ ಮಧ್ಯ ವಯಸ್ಸಿನ ಚುನಾಯಿತ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದಾರೆ. ಬಹಳ ವಯಸ್ಸಾದ ಮಹಿಳೆಯರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ವಯಸ್ಸು

ರಾಜಕೀಯ ಭಾಗವಹಿಸುವಿಕೆಯಲ್ಲಿ ಮುಖ್ಯಪಾತ್ರವಹಿಸುತ್ತದೆ ಎಂದರೆ ಅಚ್ಚರಿಪಡಬೇಕಾಗಿಲ್ಲ. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ೫೫ ವಯಸ್ಸಿನ ಮೇಲ್ಪಟ್ಟ ಮಹಿಳೆಯರು ಹಾಗೂ ಅವರಲ್ಲಿರುವ ವಿಧವೆಯರು ನಿರ್ಭಯವಾಗಿ ಮಾತನಾಡುತ್ತಿದ್ದರು. ಅವರು ಕುಟುಂಬಕ್ಕಾಗಲಿ ಅಥವಾ ಪತಿಗಾಗಲಿ ಅಂಜುವುದು ಕಡಿಮೆ. ಇವರಿಗೆ ಪತಿಯು ತಮ್ಮ ನಡವಳಿಕೆಯ ಹಾಗೂ ಪವಿತ್ರತೆಯ ಕುರಿತು ಶಂಕಿಸುವುದಿಲ್ಲ ಎಂಬ ಧೈರ್ಯ. ಇವರಿಂದ ಕೆಲಸಗಳಾಗಲಿ ಅಥವಾ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಸಾಧ್ಯವಾಗದಿದ್ದರೂ ಹೆಮ್ಮೆಯಿಂದ ಬಂದು ಸಭೆಗಳಲ್ಲಿ ಭಾಗವಹಿಸುವುದು ಇದೆ. ಉದಾ. ಕನ್ನಡ ವಿಶ್ವವಿದ್ಯಾಲಯ ಏರ್ಪಡಿಸಿದ್ದ ಫೆಬ್ರವರಿ ೨೨.೩.೨೦೦೨ ಗ್ರಾಮಪಂಚಾಯಿತಿ ತರಬೇತಿ ಶಿಬಿರದಲ್ಲಿ ನಾನು ಸಂಪನ್ಮೂಲ ವ್ಯಕ್ತಿಯಾಗಿದ್ದೆನು. ವಯಸ್ಸಾದ ಸದಸ್ಯೆಯರು, ಶಿಬಿರದಲ್ಲಿ ಪಂಚಾಯತಿ ಸದಸ್ಯೆಯರಿಗೆ ತೋರುತ್ತಿದ್ದ ತಾರತಮ್ಯವನ್ನು, ಮಹಿಳೆಯರಿಗೆ ಆದ್ಯತೆ ನೀಡದಿರುವುದನ್ನು ಹಾಗೂ ಕಾಮಗಾರಿಗಳನ್ನು ಮಾಡಿಸಲು ಅನುದಾನ ನೀಡದಿರುವುದನ್ನು ಅಧ್ಯಕ್ಷರ (ಪಾಪಿನಾಯಕನಹಳ್ಳಿ ಹಾಗೂ ಬೈಲುವದ್ದಿಗೇರಿ ಗ್ರಾಮಪಂಚಾಯ್ತಿ ಸದಸ್ಯೆಯರು) ಎದುರೇ ಖಂಡಿಸಿ ಧೈರ್ಯವಾಗಿ ಮಾತನಾಡಿದರು. ತಮಗೆ ಯಾರ ಹೆದರಿಕೆಯೂ ಇಲ್ಲ ಎಂದು ಹೇಳಿಕೊಳ್ಳುವುದನ್ನು ಗಮನಿಸಿದೆನು.

೨೦ ರಿಂದ ೨೯ ವಯಸ್ಸಿನ ಯುವತಿಯರು ಆದಷ್ಟು ಮೌನವಾಗಿದ್ದರು. ಅವರಿಗೆ ಯಾವುದೋ ಭಯವಿರುವಂತೆ ತೋರುತ್ತಿತ್ತು. ಬೈಲುವದ್ದಿಗೇರಿಯ ೨೦ರ ಹರೆಯದ ಅತ್ಯಂತ ಮುಗ್ದೆಯೂ, ಅನಕ್ಷರಿಯೂ ಆದ ಅಧ್ಯಕ್ಷೆ ಹುಲಿಗೆಮ್ಮಗೆ ಗ್ರಾಮಪಂಚಾಯಿತಿ ವ್ಯವಸ್ಥೆ ಬಗ್ಗೆ ಯಾವ ತಿಳುವಳಿಕೆಯೂ ಇರಲಿಲ್ಲ. ೨ ದಿನಗಳ ಶಿಬಿರದಲ್ಲಿ ಆಕೆ ಒಂದೇ ಒಂದು ಶಬ್ದವನ್ನು ಮಾತನಾಡಲಿಲ್ಲ. ಇವರಿಗೆಲ್ಲ ಅವರ ಪತಿಯಂದಿರು ಬಾಯಿ ಬಿಡಬಾರದೆಂದು ತಿಳಿಸಿರುವುದು ನಂತರ ತಿಳಿಯಿತು. ಇದರ ಜೊತೆಗೆ ಅವರ ಅಜ್ಞಾನ, ಬಡತನ, ಅನಕ್ಷರತೆ, ತಿಳುವಳಿಕೆಯ ಕೊರತೆ, ಕೀಳರಿಮೆ ಎಲ್ಲವೂ ಕಾರಣವಾಗಿದ್ದವು. ಶಿಬಿರಕ್ಕೆ ಪತ್ನಿಯರೊಂದಿಗೆ ಪತಿಯಂದಿರೂ ಆಗಮಿಸಿದ್ದರು. ಕಾರಣ ಮನೆಯಿಂದ ಹೊರಗೆ ಹೋದಾಗ ಮಹಿಳೆಯರ ಪಾವಿತ್ರ್ಯವು ಅಪಾಯಕ್ಕೆ ಸಿಲುಕುವ ಸಾಧ್ಯತೆಗಳಿರುತ್ತವೆ ಎಂಬುದು ಅವರ ಭಾವನೆಯಾಗಿತ್ತು. ಹೀಗಾಗಿ ಕಮ್ಮಟದುದ್ದಕ್ಕೂ ಪತ್ನಿಯರೊಂದಿಗೆ ಪತಿಯಂದಿರೇ ವಿಜೃಂಭಿಸಿದ್ದು ಕಂಡುಬಂದಿತು.

ಕುಟುಂಬದ ಹಿನ್ನೆಲೆಯಲ್ಲಿ ಚುನಾಯಿತ ಮಹಿಳೆಯರ ವೈವಾಹಿಕ ವಿವರಗಳು ಅವಳ ರಾಜಕೀಯ ಭಾಗವಹಿಸುವಿಕೆಯ ಮೇಲೆ ಬೀರುವ ಪ್ರಭಾವವನ್ನು ಮುಂದಿನ ಕೋಷ್ಟಕದಲ್ಲಿ ಕುರಿತು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ೩೫

ಚುನಾಯಿತ ಸದಸ್ಯೆಯರ ವೈವಾಹಿಕ ವಿವರಗಳು

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ವಿವಾಹಿತೆ	೧೩೬	೯೦	೧೧೭	೮೪.೭೮
೨	ವಿಧವೆಯರು	೧೩	೮.೬೦	೯	೬.೨
೩	ದೇವದಾಸಿ	೨	೧.೩೨	೧೨	೮.೬೯
ಒಟ್ಟು		೧೫೧	೧೦೦	೧೩೮	೧೦೦

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಸಾಂಪ್ರದಾಯಿಕ ಸಮಾಜ ಪದ್ಧತಿಯಲ್ಲಿ ಹೆಣ್ಣಿಗಿರುವ ಕನಿಷ್ಠ ಸ್ಥಾನಗಳು ಗಮನಕ್ಕೆ ಬರುತ್ತವೆ. ವಿವಾಹಿತ ಮಹಿಳೆಯರು ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಶೇ.೯೦ ರಷ್ಟಿದ್ದಾರೆ. ವಿಧವೆಯರು ಶೇ.೮.೬೦ ರಷ್ಟಿದ್ದಾರೆ. ದೇವದಾಸಿಯರು ಶೇ.೧.೩೨ ರಷ್ಟಿರುವುದು ಕಂಡುಬರುತ್ತದೆ. ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ವಿವಾಹಿತೆಯರು ಶೇ.೮೪.೭೮ ರಷ್ಟಿದ್ದರೆ, ವಿಧವೆಯರು ಶೇ.೬.೨ ರಷ್ಟಿದ್ದಾರೆ. ಹಾಗೆ ದೇವದಾಸಿಯರು ಶೇ.೮.೬೯ ರಷ್ಟಿರುವುದು ಕಂಡುಬರುತ್ತದೆ. ಎಲ್ಲರೂ ವಿವಾಹಿತ ಮಹಿಳೆಯರೇ ಇರುವುದು ಗಂಡಸರ ರಾಜಕೀಯ ಮಹತ್ವಾಕಾಂಕ್ಷೆಯ ಕೊಡುಗೆಯಾಗಿದೆ. ಹೆಚ್ಚಿನ ಸ್ತ್ರೀಯರು ಪುರುಷಾಧಿಕಾರಕ್ಕೆ ಮಣಿದು ಅಥವಾ ಅವರ ರಾಜಕೀಯ ಅಗತ್ಯತೆಗಳನ್ನು ಪೂರೈಸುವ ಸಲುವಾಗಿಯೇ ಆಯ್ಕೆಯಾಗಿದ್ದು ಕಂಡುಬರುತ್ತದೆ. ಚುನಾಯಿತ ಮಹಿಳೆಯರಲ್ಲಿ ಸ್ವ ಇಚ್ಛೆಗಿಂತ ಪರರ ಒತ್ತಾಯದ ಪ್ರಭಾವವೇ ಹೆಚ್ಚಾಗಿ ಕಂಡುಬರುತ್ತದೆ. ವಿಧವೆಯರ ಸಂಖ್ಯೆಯನ್ನು ಗಮನಿಸಿದಾಗ ಈ ಮಾತಿಗೆ ಪುಷ್ಠಿ ಸಿಗುತ್ತದೆ. ವಿಧವೆಯರು ಗಂಡನಿಲ್ಲದಿದ್ದರೂ ಕುಟುಂಬದ ಇತರೇ ಸದಸ್ಯರ ಮತ್ತು ಸಮಾಜದ ಇತರೇ ಮುಂಖಂಡರ ಒತ್ತಾಯಕ್ಕೆ ಮಣಿದು ಈ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಇದಕ್ಕೆ ಮತ್ತೊಂದು ಮುಖ್ಯ ಕಾರಣವೆಂದರೆ ಚಿಕ್ಕ ಪ್ರಾಯದ ಹೆಣ್ಣುಮಕ್ಕಳು ಚುನಾವಣೆಯಂತಹ ಸಾರ್ವತ್ರಿಕ ಚಟುವಟಿಕೆಗಳಲ್ಲಿ ಭಾಗವಹಿಸಬಾರದು. ಇದು ಇಂತಹ ವಯಸ್ಸಿನ ಹೆಣ್ಣುಮಕ್ಕಳು ಮಾಡುವ ಕೆಲಸವಿಲ್ಲ. ಪಂಚಾಯಿತಿ ಮೆಂಬರ್ ಎಂದರೆ ಎಲ್ಲಿ ಬೇಕಾದಲ್ಲಿ ಯಾರ ಜೊತೆಗಾದರೂ ತಿರುಗಾಡುವ ಪ್ರಸಂಗಗಳಿರುತ್ತವೆ. ಇದು ವಯಸ್ಸಾದವರಿಗೇ ಸರಿಯಾದ ಕೆಲಸ ಎನ್ನುವ ನಂಬಿಕೆಗಳು ಇಂತಹ ಆಯ್ಕೆಗಳಿಗೆ ಕಾರಣಗಳಾಗಿವೆ.

ಇನ್ನು ದೇವದಾಸಿಯರಿಗೆ ಸಂಬಂಧಿಸಿದಂತೆ ಗಮನಿಸಿದಾಗ ಸಮಾಜದ ದೃಷ್ಟಿಯಲ್ಲಿ ಇತರೆ ಮಹಿಳೆಯರಿಗಿಂತ ಕೀಳಾದ ಸ್ಥಾನ ಇವರಿಗಿರುವುದು ಕಂಡುಬರುತ್ತದೆ. ದೇವದಾಸಿಯರನ್ನು ಹೊರತುಪಡಿಸಿದ ಇತರೆ ಮಹಿಳೆಯರನ್ನೇ ಸಮಾಜವು ಕೇಡಿನ ಸಂಕೇತವೆಂದು ಪರಿಭಾವಿಸುವ ಹೊತ್ತಿನಲ್ಲಿ ದೇವದಾಸಿಯರ ಸ್ಥಾನಮಾನವನ್ನು ಊಹಿಸುವುದು ಕಷ್ಟ. ಹೆಚ್ಚಿನ ಸಂಖ್ಯೆಯ ದೇವದಾಸಿಯರು (೧೨ ಅಂದರೆ ಶೇ.೮.೯) ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಿಂದ ಆಯ್ಕೆಯಾಗಿದ್ದಾರೆ. ಇದಕ್ಕೆ ತನ್ನದೇ ಆದ ಚಾರಿತ್ರಿಕ ಮತ್ತು ಧಾರ್ಮಿಕ ಕಾರಣಗಳಿವೆ. ಸೂಳೆಗಾರಿಕೆ ವಿಜಯನಗರ ಸಂದರ್ಭದಲ್ಲಿ ಆದಾಯದ ಪ್ರಮುಖ ಮೂಲವಾಗಿದ್ದ ಬಗ್ಗೆ ಚರಿತ್ರೆಯಿಂದ ತಿಳಿದುಬರುತ್ತದೆ. ಹಾಗೆ ಹೊಸಪೇಟೆಗೆ ಹತ್ತಿರದ ಶಕ್ತಿ ದೇವತೆ ಕೇಂದ್ರವಾದ ಹುಲಗಿ ದೇವದಾಸಿ ಸಂಪ್ರದಾಯದ ಜೀವಂತಿಕೆಗೆ ಕಾರಣವಾಗಿದೆ.

ದೇವದಾಸಿಯರಲ್ಲಿ ವಯಸ್ಸಾದ ಕೆಲವರು ಗ್ರಾಮಪಂಚಾಯ್ತಿಯ ಕೆಲಸಕಾರ್ಯಗಳಲ್ಲಿ ಉತ್ಸಾಹದಿಂದ ಭಾಗವಹಿಸುವುದನ್ನು ಕಾಣುತ್ತೇವೆ. ಮತ್ತು ಎರಡನೇ ಬಾರಿ ಆಯ್ಕೆಯಾದವರನ್ನು ಕಾಣುತ್ತೇವೆ. ಚಿಲಕನಹಟ್ಟಿಯ ಗ್ರಾಮಪಂಚಾಯತಿಗೆ ತಿಮ್ಮಲಾಪುರ ಕ್ಷೇತ್ರದಿಂದ ಆಯ್ಕೆಯಾದ ತಿಮ್ಮಕ್ಕ (ವಯಸ್ಸು ೭೫) ಇವರು ತನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇದಕ್ಕೆ ಸಾರ್ವಜನಿಕ ಸಹಕಾರ ದೊರೆತ ಬಗ್ಗೆ ಸಂತೋಷ ಪಡುತ್ತಾರೆ. ಆದರೆ ಉಳಿದೆಲ್ಲ ಸದಸ್ಯರಲ್ಲೂ ಇಂತಹ ಮನೋಭಾವ ಕಾಣಲಾಗುವುದಿಲ್ಲ. ಇಲ್ಲಿ ಗಮನಿಸಬೇಕಾಗಿರುವುದು ಪುರುಷಾಧಿಕಾರದ ಕವಚದೊಳಗೆ ಈ ಎಲ್ಲ ಮಹಿಳೆಯರು ತಮ್ಮ ಚುನಾಯಿತ ಬದುಕನ್ನು ರೂಪಿಸಿಕೊಂಡಿರುವುದು.

ಮೂಢನಂಬಿಕೆಗಳು ಮತ್ತು ಚುನಾಯಿತ ಸದಸ್ಯೆಯರು : ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ಚುನಾಯಿತ ಮಹಿಳೆಯಲ್ಲಿರುವ ನಂಬಿಕೆಗಳನ್ನು ಆಚರಣಾತ್ಮಕ ಸಂಗತಿಗಳನ್ನು ಅಧ್ಯಯನ ಮಾಡಲಾಗಿದೆ. ಚುನಾವಣೆಗೆ ಸ್ಪರ್ಧಿಸುವುದೆಂದು ತೀರ್ಮಾನವಾದಾಗ ಮಹಿಳೆ, ಅಥವಾ ಜಾತಿ ಬಾಂಧವರು ಅಥವಾ ಮಹಿಳೆಯ ಕುಟುಂಬದವರು ತಮ್ಮ ಮನೆ ದೇವರನ್ನು ಹೆಸರಿನ ಬಲಾಬಲದ ಹಿನ್ನೆಲೆಯಲ್ಲಿ 'ಕುರು' ಕೇಳುತ್ತಾರೆ. ಹಾಗೆ ಕೈ ನೋಡಿ ಭವಿಷ್ಯ ತಿಳಿಸುವವರ ಹತ್ತಿರ ಹೋಗಿ ಸ್ಪರ್ಧಿಸಬಹುದೇ ಬೇಡವೇ ಎಂದು ಕೇಳಿ ತಿಳಿದುಕೊಳ್ಳುತ್ತಾರೆ. ದೇವರ ಹತ್ತಿರ ಹೋದಾಗ ತಲೆಯ ಮೇಲಿನ ಹೂ ಕೊಡು, ಭುಜದ ಮೇಲಿನ ಹೂ ಕೊಡು ಎಂದು ಮನಸ್ಸಿನಲ್ಲಿ ಬೇಡಿಕೊಂಡು, ಕೇಳಿಕೊಂಡ ಜಾಗದಿಂದ ಹೂ ಬೀಳುವವರೆಗೂ ಕಾಯುತ್ತ ಕುಳಿತಿರುತ್ತಾರೆ. ಹೂ ಬಿದ್ದಾಗ ಸಂತೋಷದಿಂದ ಗೆಲವು ಖಚಿತ, ದೇವರ ಆಶೀರ್ವಾದವಿದೆ ಎಂದು ತಿಳಿಯುತ್ತಾರೆ. ಕೆಲವರು

[illegible]

ಭವಿಷ್ಯ ಹೇಳುವವರಿಂದ ನಾಮಬಲವನ್ನು ಕೇಳಿ ಆ ಪ್ರಕಾರ ನಿರ್ದಿಷ್ಟ ಅಕ್ಷರದಿಂದ ಆರಂಭವಾಗುವ ಹೆಸರನ್ನೇ ಮರುನಾಮಕರಣ ಮಾಡಿಕೊಂಡು ನಾಮಪತ್ರ ಸಲ್ಲಿಸಿ ಗೆದ್ದವರು ಇದ್ದಾರೆ. ಈ ಕುರಿತ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಚುನಾಯಿತ ಮಹಿಳೆಯರನ್ನು ಸಂದರ್ಶಿಸಿ ಪಡೆದ ಅಂಕಿ ಅಂಶಗಳನ್ನು ಕೋಷ್ಟಕದೊಂದಿಗೆ ತಿಳಿಸಲಾಗಿದೆ.

ಕೋಷ್ಟಕ ೩೬

ದೇವರು ಮತ್ತು ಜ್ಯೋತಿಷ್ಯದಲ್ಲಿ ನಂಬಿಕೆ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ನಂಬಿಕೆ ಇದೆ	೨೦	೧೩.೨೪	೩೬	೨೬
೨	ನಂಬಿಕೆ ಇಲ್ಲ	೧೩೧	೮೬.೭೫	೧೦೨	೭೩.೯೧
ಒಟ್ಟು		೧೫೧	೧೦೦	೧೩೮	೧೦೦

ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳೊಂದಿಗೆ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿ ಗಳನ್ನು ಹೋಲಿಸಿ ನೋಡಿದಾಗ ದೇವರು ಮತ್ತು ಜ್ಯೋಷ್ಯದಲ್ಲಿ ನಂಬಿಕೆ ಇರುವ ಚುನಾಯಿತ ಮಹಿಳೆಯರ ಹೊಸಪೇಟೆಯಲ್ಲಿ ಹೆಚ್ಚಾಗಿದ್ದು ಅವರ ಪ್ರಮಾಣ ಶೇ ೨೬ ರಷ್ಟಿದೆ. ಸಂಡೂರಿನಲ್ಲಿ ಶೇ ೧೩.೨೪ ರಷ್ಟಿದೆ. ನಂಬಿಕೆ ಇಲ್ಲದ ಚುನಾಯಿತ ಮಹಿಳೆಯರ ಸಂಖ್ಯೆ ಹೊಸಪೇಟೆಯಲ್ಲಿ ಶೇ ೭೩.೯೧ ರಷ್ಟಿದ್ದರೆ, ಸಂಡೂರಿನಲ್ಲಿ ಶೇ ೮೬.೭೫ ರಷ್ಟಿರುವುದು ಕಾಣುತ್ತದೆ.

ಹೊಸಪೇಟೆಯ ಮೆಟ್ರಿ ಗ್ರಾಮಪಂಚಾಯಿತಿಯ ಸದಸ್ಯೆಯೊಬ್ಬರು ತಿಳಿಸಿದಂತೆ ಸದಸ್ಯೆಯ ಅತ್ತೆಯನ್ನು ಸ್ಪರ್ಧೆಗೆ ನಿಲ್ಲಿಸಲು ತಯಾರಿನಡೆಸಲಾಗಿತ್ತು. ಆದರೆ 'ಕುರು' ಕೇಳಿಸಿದಾಗ ಅತ್ತೆಗೆ ಹೆಸರಿನ ಬಲತ್ಕಾರ ಇಲ್ಲವೆಂದು ತಿಳಿಯಿತು. ನಂತರ ಸೊಸೆಗೆ ಹೆಸರಿನ ಗುರುಬಲ ಇರುವುದರಿಂದ ಆಕೆಯನ್ನು ಸ್ಪರ್ಧೆಗೆ ನಿಲ್ಲಿಸಲಾಯಿತು. ಮಸೀದಿಗೆ ಒಬ್ಬ ಸದಸ್ಯೆ ಬೇಡಿಕೊಂಡರೆ, ಕೆಲವು ಸದಸ್ಯೆಯರು ದುರುಗಮ್ಮ, ಮಾರೆಮ್ಮ ಹನುಮಪ್ಪನಿಗೆ ಬೇಡಿಕೊಂಡು ಕುರು ಕೇಳಿದ್ದಾರೆ. ಒಬ್ಬಾಕೆ ಮಲ್ಲಯ್ಯ ಸ್ವಾಮಿಗಳನ್ನು ಕೇಳಿ ಸ್ಪರ್ಧಿಸಿದ್ದಾಳೆ. ಮೇಲಿನ ಸ್ತರದವರು ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿ ದೊಡ್ಡ ದೊಡ್ಡ ಮಠಾಧಿಪತಿಗಳ ಆಶೀರ್ವಾದ ಪಡೆದು ಹೋಮ, ಹವನಮಾಡಿ ಶಾಂತಿಮಹಿಸಿ ಸ್ಪರ್ಧಿಸಿ ಗೆದ್ದ ಉದಾಹರಣೆಗಳಿವೆ.

ಬಹಳಷ್ಟು ಸದಸ್ಯೆಯರು ತಮ್ಮ ಇಷ್ಟ ದೈವಕ್ಕೆ ಹೂ ಕೇಳಿ ತೀರ್ಮಾನ ತೆಗೆದುಕೊಂಡಿದ್ದಾರೆ. ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ದೇವರು ಮತ್ತು ಜ್ಯೋತಿಷ್ಯದಲ್ಲಿ ನಂಬಿಕೆ ಇರುವ ಮಹಿಳಾ ಸದಸ್ಯೆಯರ ಸಂಖ್ಯೆ ಕಡಿಮೆ ಇರಲು ಕಾರಣವೆಂದರೆ ಅಲ್ಲಿರುವ ಪಕ್ಷ ರಾಜಕೀಯ. ಇದರಿಂದ ಯಾವ ಮೂಢನಂಬಿಕೆಗೂ ಅವಕಾಶವಿಲ್ಲದಂತೆ ಹೆಚ್ಚಾಗಿ ಅವಿರೋಧ ಆಯ್ಕೆಗಳು ನಡೆದಿವೆ. ಸಂಡೂರಿನಲ್ಲಿ ಕಾಂಗ್ರೆಸ್ ಪಕ್ಷವು ಅಲ್ಲಿನ ಚುನಾವಣೆಯಲ್ಲಿ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿ ಗೆಲ್ಲಿಸಿದ್ದು ತಿಳಿದುಬಂದಿತು.

ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಯ ಕೆಲವು ಗ್ರಾಮಪಂಚಾಯಿತಿಗಳನ್ನು ಬಿಟ್ಟರೆ ಜೊತೆಗೆ ಸಂಡೂರಿಗೆ ಹೋಲಿಸಿದಾಗ ಪಕ್ಷ ರಾಜಕೀಯ ಕಡಿಮೆ ಇದೆ. ಇದು ನನ್ನ ಅಧ್ಯಯನದಿಂದ ತಿಳಿದುಬಂದಿರುವ ಸಂಗತಿ. ಒಟ್ಟಾರೆಯಾಗಿ ನಾಮಬಲದ ಮೇಲೆ, ಕುರು ಕೇಳುವ ನಂಬಿಕೆಯಿಂದ ದೂರವಾಗಿ ಇರುವ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿರುವುದು ಒಳ್ಳೆಯ ಸಂಗತಿ. (ಶೇ ೮೦.೬೨) ಹಾಗಂತ ಇವರೆಲ್ಲ ಪ್ರಖರ ವೈಚಾರಿಕ ಮನೋಧರ್ಮ ಹೊಂದಿದವರೆಂದು ಹೇಳಲಾಗದು. ಪ್ರಬಲಶಕ್ತಿಗಳ ಒತ್ತಾಯಕ್ಕೆ ಮಣಿದು, ಮೀಸಲಾತಿ ಸೌಲತ್ತು ಪಡೆದು ಆಯ್ಕೆಯಾದ ಇವರಲ್ಲಿ ಆ ರೀತಿಯ ನಂಬಿಕೆಗಳನ್ನು ಹುಡುಕಲು ಆಗುವುದಿಲ್ಲ. ಬಹುಮುಖ್ಯ ವಿಚಾರವೆಂದರೆ ಗೆದ್ದ ಬಹಳಷ್ಟು ಮಹಿಳೆಯರಿಗೆ ಏನಾಯಿತು? ನಾನೇನಾಗಿದ್ದೇನೆ? ಎನ್ನುವ ಪರಿಕಲ್ಪನೆಗಳೇ ಇಲ್ಲ ಎಂಬುದು. ಇಂಥ ನಂಬಿಕೆಯ ವಿಚಾರಗಳನ್ನು ಮುಂದಿನ ಕೋಷ್ಟಕಗಳಲ್ಲಿ ಇನ್ನಷ್ಟು ಗಮನಿಸಬಹುದು.

ಕೋಷ್ಟಕ ೩.೭

ಮತ ಪೆಟ್ಟಿಗೆಗೆ ಪೂಜೆ ಮಾಡಿದ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಪೂಜೆ ಮಾಡಿದವರು	೮೩	೫೫	೫೯	೪೨.೭೫
೨	ಪೂಜೆ ಮಾಡಿಲ್ಲದವರು	೩೬	೨೩.೮೪	೪೫	೩೨.೬೦
೩	ಅವಿರೋಧ ಆಯ್ಕೆ	೩೨	೨೧.೧೯	೩೪	೨೪.೬೩
	ಒಟ್ಟು	೧೫೧	೧೦೦	೧೩೮	೧೦೦

ಪ್ರಸ್ತುತ ಕೋಷ್ಟಕದಲ್ಲಿ ಚುನಾವಣೆಯ ದಿನದಂದು ಮತಪೆಟ್ಟಿಗೆಗೆ ಪೂಜೆ ಮಾಡಿದ ಹಾಗೂ ಪೂಜೆ ಮಾಡಿಲ್ಲದ ಸದಸ್ಯೆಯರ ವಿವರಗಳನ್ನು ಜೊತೆಗೆ ಅವಿರೋಧವಾಗಿ ಆಯ್ಕೆಯಾದವರ ಸಂಖ್ಯೆಯನ್ನು ತಿಳಿಸಲಾಗಿದೆ. ಚುನಾವಣೆಯ ದಿನ ಮತ ಚಲಾಯಿಸುವ ಮೊದಲು ಮತಪೆಟ್ಟಿಗೆಗೆ ಪೂಜೆಮಾಡಿ, ಆರತಿ ಬೆಳಗಿ ತೆಂಗಿನಕಾಯಿ ಒಡೆದು ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿದ ಚುನಾಯಿತ ಸದಸ್ಯೆಯರ ಸಂಖ್ಯೆ ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೇ ೫೫ ರಷ್ಟಿದ್ದರೆ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೇ ೪೨.೭೫ ರಷ್ಟಿದ್ದಾರೆ. ಎರಡು ತಾಲೂಕುಗಳನ್ನು ಹೋಲಿಸಿ ನೋಡಿದಾಗ ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಮತ ಪೆಟ್ಟಿಗೆಗೆ ಪೂಜೆ ಮಾಡಿದವರ ಸಂಖ್ಯೆ ಹೆಚ್ಚಾಗಿದೆ. ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಪೂಜೆ ಮಾಡಿಲ್ಲದ ಸದಸ್ಯೆಯರ ಸಂಖ್ಯೆ ಶೇ.೨೩.೮೪ ರಷ್ಟಿದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೇ ೩೨.೬೦ ರಷ್ಟು ಇರುವುದು ತಿಳಿದುಬಂದಿದೆ. ಇವರಲ್ಲಿ ಕೆಲವರು ಮತಚಲಾವಣೆಯ ದಿನದ ಆರಂಭದಲ್ಲಿ ಮತಗಟ್ಟೆಗೆ ಹೋಗಿರಲಿಲ್ಲವಾದ್ದರಿಂದ ಆ ಕುರಿತು ಗೊತ್ತಿಲ್ಲ ಎಂಬ ಉತ್ತರಗಳು ದೊರಕಿವೆ. ಈ ಸಂಪ್ರದಾಯವು ಯಾವ ಮಟ್ಟದ ಚುನಾವಣೆ ನಡೆದಾಗಲೂ ಚಾಲನೆಯಲ್ಲಿರುವುದು ಕಂಡುಬರುವ ವಿಚಾರವಾಗಿದೆ. ಪೂಜೆ ಮಾಡಿದ, ಪೂಜೆ ಮಾಡಿಲ್ಲದ ಈ ಎರಡೂ ಗುಂಪಿಗೆ ಸೇರದೆ ಇರುವ ಅವಿರೋಧವಾಗಿ ಆಯ್ಕೆಯಾದ ಚುನಾಯಿತ ಮಹಿಳೆಯರ ಸಂಖ್ಯೆ ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೇ.೨೧.೧೯ ರಷ್ಟಿದ್ದರೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ೨೪.೬೩ ರಷ್ಟಿದೆ. ಸ್ವಲ್ಪ ಪ್ರಮಾಣದಲ್ಲಿ ಅವಿರೋಧ ಆಯ್ಕೆಯ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಾಗಿರುವುದು ಕಾಣುತ್ತದೆ.

ಕೋಷ್ಟಕ ೩೮

ಬೋಣಿಗೆ ಮತ ಹಾಕಿಸಿದ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಹಾಕಿಸಲಾಗಿದೆ	೬೪	೪೨.೩೮	೫೮	೪೨
೨	ಹಾಕಿಸಿಲ್ಲ	೫೫	೩೬.೪೨	೪೪	೩೧.೮೮
೩	ಅವಿರೋಧ ಆಯ್ಕೆ	೩೨	೨೧.೧೯	೩೪	೨೪.೬೩
	ಒಟ್ಟು	೧೫೧	೧೦೦	೧೩೮	೧೦೦

ಮೇಲಿನ ಕೋಷ್ಟಕವು ಮತ ಚಲಾವಣೆಯ ದಿನ ತಮಗೆ ಹೆಚ್ಚು ಮತ ಬೀಳಲೆಂದೂ, ಗೆಲವು ದೊರೆಯಲೆಂದೂ ಬೋಣಿಗೆ ಮತ ಮಾಡಿಸುವ ನಂಬಿಕೆಯನ್ನು ತಿಳಿಸಿಕೊಡುತ್ತದೆ. ಇದೊಂದು ಸಂಪ್ರದಾಯವಾಗಿ ಕೆಲವು ಕ್ಷೇತ್ರಗಳಲ್ಲಿ ಕಂಡುಬರುತ್ತದೆ. ಇದೊಂದು ಮಾನಸಿಕ ನಂಬಿಕೆ. ಬೋಣಿಗೆ ಅಂದರೆ ಸರಳವಾಗಿ ಕೈಗುಣ ಎಂದು ನಂಬಿಕೆ. ಬೋಣಿಗೆ ಹಾಕಿದವರ ಕೈಗುಣ ಚೆನ್ನಾಗಿದ್ದರೆ ಸ್ಪರ್ಧಿತ ಅಭ್ಯರ್ಥಿ ಗೆಲ್ಲುತ್ತಾರೆ ಎನ್ನುವುದು ಬಲವಾದ ನಂಬಿಕೆಯಾಗಿದೆ. ಬೋಣಿಗೆಯು ಮತಚಲಾವಣೆಗೆ ಮಾತ್ರ ಸೀಮಿತವಾಗಿಲ್ಲ. ಹಣ್ಣು ತರಕಾರಿ ಹೂ ಈ ರೀತಿಯ ಅನೇಕ ಮಾರಾಟದ ಬಗೆಗಳಿಗೂ ಸಂಬಂಧಿಸಿದೆ. ಹೆಚ್ಚಾಗಿ ಕುರುಬ ಜಾತಿಯ ಜನರಿಂದ ಬೋಣಿಗೆ ಮತ ಹಾಕಿಸಿಕೊಂಡರೆ, ಬೋಣಿಗೆ ಮಾಡಿಸಿಕೊಂಡರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಬೇರೂರಿದೆ.

ದೇವಲಾಪುರ (ಹೊಸಪೇಟೆ ತಾಲೂಕು) ಗ್ರಾಮಪಂಚಾಯಿತಿಯ ಸದಸ್ಯೆಯೊಬ್ಬರನ್ನು ಬೋಣಿಗೆ ಮತದ ಕುರಿತು ಮಾತನಾಡಿಸಿದಾಗ "ಕುರುಬರದು ಹಾಲಮತ, ಹಾಲಿನಂಥ ಮನಸ್ಸು. ಅವರಿಂದ ಯಾವ ಕೆಲಸ ಮಾಡಿಸಿದರೂ ಅದು ಹಾಲು ಹೈನದಂತೆ ಹೆಚ್ಚಾಗುತ್ತದೆ" ಎಂದು ವಿವರಿಸಿದರು. ಹಳ್ಳಿಯ ಬದುಕಿನಲ್ಲಿ ಇದು ಆಳವಾಗಿ ಬೇರೂರಿದ ಸಂಪ್ರದಾಯವಾಗಿದೆ. ಅದು ಆಧುನಿಕ ಸರಕಾರದ ಮಾದರಿಯಾದ ಗ್ರಾಮಪಂಚಾಯಿತಿಯಲ್ಲೂ ಬೆಳೆದುಕೊಂಡು ಬಂದಿರುವುದು ಗಮನಾರ್ಹ. ಈ ನಂಬಿಕೆ ಬರೀ ಮೂಢನಂಬಿಕೆಯಲ್ಲ. ಇದು ಪ್ರತಿಹಳ್ಳಿಯ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವಾಗಿದೆ.

ಕುರುಬರ ಬೋಣಿಗೆಯೊಂದಿಗೆ, ಮುತ್ತೈದೆಯರಿಂದ, ಬ್ರಾಹ್ಮಣರಿಂದ, ಗ್ರಾಮದ ದೈವದವರ (ಮುಖಂಡ)ರಿಂದ, ತನ್ನದೇ ಹೆಸರಿನ ಬೇರೆ ಮಹಿಳೆಯಿಂದ, ಧಣಿಯಿಂದ (ಸೀತಾರಾಮ ತಾಂಡ, ಹೊಸಪೇಟೆ) ಬೋಣಿಗೆ ಮತ ಹಾಕಿಸಿದ ವಿವರಗಳು ಕ್ಷೇತ್ರಾಧ್ಯಯನದಿಂದ ದೊರೆತಿವೆ. ಹೆಚ್ಚಾಗಿ ಕುರುಬರಿಂದ ಬೋಣಿಗೆ ಮತ ಹಾಕಿಸಿದ್ದುದ್ದು ಕಂಡುಬರುತ್ತದೆ. ಬೋಣಿಗೆ ಮತ ಹಾಕಿಸಿದ ಸದಸ್ಯಯರ ಸಂಖ್ಯೆ ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೪೨.೩೮ ರಷ್ಟಿದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಬೋಣಿಗೆ ಮತ ಹಾಕಿಸಿಲ್ಲದ ಸದಸ್ಯೆಯರು ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಹೆಚ್ಚಾಗಿದ್ದು ಈ ಪ್ರಯಾಣ ಶೇ ೩೬.೪೨ ರಷ್ಟಿದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಬೋಣಿಗ ಮಾಡಿಸಿಲ್ಲದ ಪ್ರಮಾಣ ಶೇ ೩೧.೮೮ ರಷ್ಟಿದೆ. ಉಳಿದವರೆಲ್ಲ ಅವಿರೋಧವಾಗಿ ಆಯ್ಕೆಯಾಗಿರುವರು. ಅವಿರೋಧವಾಗಿ ಆಯ್ಕೆಯಾದ ಮಹಿಳಾ ಸದಸ್ಯೆಯರನ್ನು ಸದರಿ ನಂಬಿಕೆಯ ಕುರಿತು ಪ್ರಶ್ನಿಸಲಾಗಿಲ್ಲ.

ನಂಬಿಕೆಗಳು, ಆಚರಣೆಗಳು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಶಗಳು. ಆ ಬದುಕಿನಿಂದ ದೂರನಿಂತು ನೋಡುವವರಿಗೆ ಅವು ಮೂಢನಂಬಿಕೆಗಳಾಗಿ ಶುಷ್ಕವಾಗಿ ಕಾಣಬಹುದು. ಆದರೆ ಹಳ್ಳಿ ಬದುಕಿಗೆ ಅದು ಶುಷ್ಕಪ್ರಜ್ಞೆಯಲ್ಲ. ಅದೇ ಬದುಕು, ಅದೇ ಜೀವನ. ಈ ನಂಬಿಕೆಗಳ ಹಿಂದೆ ಸಮುದಾಯ ತತ್ವವನ್ನು ಕಾಣುತ್ತೇವೆ. ಪ್ರತಿಯೊಂದು ಕೆಲಸವನ್ನು ಪ್ರತಿಯೊಂದು ವರ್ಗದ ಪ್ರತಿಯೊಬ್ಬ ಸದಸ್ಯನು ಹಂಚಿಕೊಂಡು ಮಾಡಬೇಕು. ಅಲ್ಲಿ ವ್ಯಕ್ತಿ ಕೆಲಸವಿಲ್ಲ ಸಮಷ್ಟಿ ಕೆಲಸವಿದೆ. ಅಲಿಖಿತವಾದ ಒಂದು ಸಾಂಸ್ಕೃತಿಕ ಒಪ್ಪಂದ ಸಮುದಾಯದ ಜನಗಳ ನಡವೆಯಿದೆ. ಆಧುನೀಕರಣ ಪ್ರತಿಯೊಂದನ್ನು ವಿಂಗಡಿಸಿ ನೋಡುವ ಪ್ರಯತ್ನ ಮಾಡಿದ್ದರೂ ಹಳ್ಳಿ ಬದುಕಿನಲ್ಲಿ ಅದು ಸಾಧ್ಯವಾಗಿಲ್ಲ. ಅಲ್ಲಿ ದೈವವೇ ದೇವರು ಹೀಗಾಗಿ ದೈವದ ಮಾತಿಗೆ ಅಲ್ಲಿ ಬೆಲೆ. ಅಲ್ಲಿನ ಪ್ರತಿಯೊಬ್ಬರು ಈ ದೈವದ (ಗುರುಹಿರಿಯರು) ಮಕ್ಕಳು. ಈ ವ್ಯವಸ್ಥೆಗೆ ಬೇಡವಾದವರು. ಊರಲ್ಲಿ ಬದುಕಲಾರದ ಬಹುಮುಖಿ ಸಮಾಜದ ಸಾಂಸ್ಕೃತಿಕ ಸಂವೇದನೆಗಳನ್ನು ನಾವು ಈ ಪ್ರಕ್ರಿಯೆಯಲ್ಲಿ ನೋಡಬಹುದು. ಕುಟುಂಬ ಕುಟುಂಬಗಳ ನಡುವೆ ಸಮುದಾಯ ಸಮದಾಯಗಳ ನಡುವಿನ ಅಂತರ ಬೆಸೆಯುವಲ್ಲಿ ಈ ಸಂಗತಿಗಳು ಸಹಕಾರಿಯಾದರೂ ಸಾಮಾಜಿಕವಾದ ಅಸಮಾನತೆಯನ್ನು ತುಂಬ ಹಿತವಾಗಿ ಕಾಪಾಡಿಕೊಂಡುಬರುತ್ತವೆ ಎಂಬುದನ್ನು ಮರೆಯಲಾಗದು.

ಶೈಕ್ಷಣಿಕ ನೆಲೆ

ಕೋಷ್ಟಕ ೩೯

ಚುನಾಯಿತ ಮಹಿಳೆಯರ ಸಾಕ್ಷರತೆಯ ಪ್ರಮಾಣ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಪ್ರಾಥಮಿಕ	೩೫	೨೩.೧೭	೧೭	೧೨.೩೧
೨.	ಮಾಧ್ಯಮಿಕ	೨೧	೧೩.೯೦	೧೫	೧೦.೮೬
೩.	ಪ್ರೌಢ	೨೪	೧೫.೮೯	೧೦	೭.೨೪
೪.	ಪದವಿ ಪೂರ್ವ	೩	೧.೯೮	೧	೦.೭೨
೫	ಪದವಿ	೪	೨.೬೪	--	--
೬	ಸ್ನಾತಕೋತ್ತರ	--	--	--	--
೭.	ಅನಕ್ಷರಸ್ಥರು	೬೪	೪೨.೩೮	೯೫	೬೮.೮೪
	ಒಟ್ಟು	೧೫೧	೧೩೮	೧೦೦	೨೮೯

[illegible]

[illegible]

[illegible]

[illegible]

ಕೋಷ್ಟಕದ ಮೂಲಕ ಎರಡು ತಾಲೂಕುಗಳಲ್ಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ವಿದ್ಯಾರ್ಹತೆ ಹೊಂದಿರುವ ಚುನಾಯಿತ ಮಹಿಳೆಯರ ಪ್ರಮಾಣಕ್ಕಿಂತಲೂ ಅನಕ್ಷರಸ್ಥರ ಪ್ರಮಾಣವೇ ಹೆಚ್ಚಾಗಿರುವುದು ಕಾಣುತ್ತದೆ. ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಅನಕ್ಷರಸ್ಥ ಸದಸ್ಯೆಯರು ಶೇ.೪೨.೩೮ ರಷ್ಟಿದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೇ ೬೮.೮೪ ಇರುವುದು ಗೋಚರವಾಗುತ್ತದೆ. ಎರಡೂ ತಾಲೂಕನ್ನು ಹೋಲಿಸಿ ನೋಡಿದಾಗ ಹೊಸಪೇಟೆಯಲ್ಲಿ ಅನಕ್ಷರಸ್ಥ ಸದಸ್ಯೆಯರು ಹೆಚ್ಚು ಸಂಖ್ಯೆಯಲ್ಲಿದ್ದದ್ದು ತಿಳಿದುಬರುತ್ತದೆ.

ಕೋಷ್ಟಕದ ಕ್ರಮಸಂಖ್ಯೆ ೧ರಿಂದ ೫ರವರೆಗೆ ಒಟ್ಟು ಸಾಕ್ಷರತೆ ಹೊಂದಿರುವ ಸದಸ್ಯೆಯರು ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ ೫೭.೬೧ ಇದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೩೧.೧೫ ರಷ್ಟಿದೆ. ತೌಲನಿಕವಾಗಿ ಗಮನಿಸಿದಾಗ ಸಾಕ್ಷರತೆಯ ಪ್ರಮಾಣ ಹೊಸಪೇಟೆಗಿಂತ ಸಂಡೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಾಣಬಂದಿದೆ. ಇದು ರಾಜಕೀಯ ಸಾಮಾಜಿಕರಣದ ನಿಯೋಗವಾದ ಶಿಕ್ಷಣ ಸಂಸ್ಥೆಯು ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಪ್ರಭಾವ ಬೀರಿರುವುದನ್ನು ತೋರಿಸುತ್ತದೆ.

ಸಾಕ್ಷರತೆ ಇಲ್ಲದಿರುವ ಚುನಾಯಿತ ಸದಸ್ಯೆಯರ ತವರು ಮನೆಯ ಕುಟುಂಬದ ಹಿನ್ನೆಲೆಯನ್ನು ಗಮನಿಸಿದಾಗ ಶೇ ೯೫ ರಷ್ಟು ಭಾಗ ಅನಕ್ಷರಸ್ಥ ಕುಟುಂಬಗಳೇ ಇರುವುದು ಕಂಡುಬರುತ್ತದೆ. ಈ ಕುಟುಂಬಗಳು ಪಿತೃಪ್ರಧಾನವಾಗಿದ್ದು ಕೃಷಿಯನ್ನೇ ಜೀವನಾಧಾರವಾಗಿ ಹೊಂದಿವೆ. ಸಾಂಪ್ರದಾಯಿಕ ಕೃಷಿ ಕಾರ್ಮಿಕರಾದ ಇವರಲ್ಲಿ ಶಿಕ್ಷಣವನ್ನು ನಿರೀಕ್ಷಿಸಲಾಗುವುದಿಲ್ಲ. ಮದುವೆಯಾದ ನಂತರ ಗಂಡನ ಮನೆಯಲ್ಲಿಯೂ ಸಹ ಹೆಚ್ಚಿನ ಸದಸ್ಯರು ಕೃಷಿ, ಕೃಷಿಕೂಲಿ ಮೇಲೆಯೇ ಅವಲಂಬಿತವಾಗಿರುವುದು ಕಂಡುಬಂದಿದೆ. ಇಲ್ಲಿಯೂ ಸಾಕ್ಷರತೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿದೆ. ಆದರೆ ವಿಭಕ್ತ ಕುಟುಂಬ ವ್ಯವಸ್ಥೆ ಹೆಚ್ಚಿನ ಮಟ್ಟದಲ್ಲಿ ಕಂಡು ಬಂದಿರುವುದರಿಂದ ಚುನಾಯಿತ ಸದಸ್ಯೆಯರು ದೈನಂದಿನ ಕೌಟುಂಬಿಕ ವ್ಯವಹಾರಗಳನ್ನು ನಿಭಾಯಿಸುವಷ್ಟು ಸಾಮರ್ಥ್ಯವನ್ನು ಪಡೆದುಕೊಂಡಿದ್ದಾರೆ. ಆದರೆ ಕೌಟುಂಬಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ನಿರ್ಣಯ ಕೈಗೊಳ್ಳುವಲ್ಲಿ ಸ್ವಂತಿಕೆ ಕಾಣಬರುವುದಿಲ್ಲ. ದುಡಿಯುವ ವರ್ಗದವರೇ ಹೆಚ್ಚಾಗಿರುವುದರಿಂದ, ಉದ್ಯೋಗದಲ್ಲಿನ ಅನಿಶ್ಚಿತತೆ, ಬಡತನ, ಶಾಲೆಯ ಭಾರವೆನಿಸುವ ವೆಚ್ಚ ಈ ಕಾರಣಗಳೂ ಶಿಕ್ಷಣದಿಂದ ಇವರನ್ನು ದೂರ ಉಳಿಯುವಂತೆ ಮಾಡುತ್ತವೆ. ಸರ್ಕಾರವು ವಯಸ್ಕರಿಗಾಗಿ ಅಕ್ಷರವಾಣಿ, ಅಕ್ಷರ ವಿಜಯದಂತಹ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದರೂ ಇವರು ಈ ಕಡೆ ವಾಲದೇ ಇರುವುದಕ್ಕೆ ಮುಖ್ಯಕಾರಣ ದಿನದ ಬದುಕಿಗಾಗಿ ದುಡಿಯುವ ಇವರ ಹೊಟ್ಟೆಪಾಡು. ಶಿಕ್ಷಣ ಮತ್ತು ಆಹಾರದಲ್ಲಿ ಇವರ ಆಯ್ಕೆ ಆಹಾರ. ಹಿಂದುಳಿದಿರುವಿಕೆ, ಜೀತಪದ್ಧತಿ ಇದಕ್ಕೆ ಪೂರಕವಾಗಿವೆ.

೧೯೯೯-೨೦೦೦ದ ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ಪ್ರಕಾರ ಮಹಿಳೆಯರ ಸಾಕ್ಷರತೆಯ ಪ್ರಮಾಣ ಸಂಡೂರು ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ (೧೯೯೧ರ ಪ್ರಕಾರ) ಶೇ ೨೨ರಷ್ಟಿದೆ. ಮಹಿಳೆಯರ ಸಾಕ್ಷರತೆಯ ಅತ್ಯಂತ ಕ್ಷೀಣಮಟ್ಟವನ್ನು ಇದು ಬಿಂಬಿಸುತ್ತದೆ.

೧೯೯೪ರಲ್ಲಿ ಗ್ರಾಮಪಂಚಾಯಿತಿಗೆ ಪ್ರಥಮ ಚುನಾವಣೆ ನಡೆದಿದೆ. ೨೦೦೦ದಲ್ಲಿ ನಡೆದ ೨ನೇ ಚುನಾವಣೆಯಲ್ಲಿ ಅಯ್ಕೆಯಾದ ಮಹಿಳೆಯು ಒಟ್ಟು ಸಾಕ್ಷರತೆಯ ಪ್ರಮಾಣ ಸಂಡೂರು ತಾಲೂಕಿನಲ್ಲಿ ಶೇ.೫೭.೬೧ ರಷ್ಟಿದ್ದರೆ, ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ ೩೧.೧೫ ರಷ್ಟಿದೆ.

ಈ ಅಂಕಿ ಸಂಖ್ಯೆಗಳಿಂದ ಗಮನಿಸಬಹುದಾದ ಸಂಗತಿ ಏನೆಂದರೆ ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿ ಸದಸ್ಯಯರಲ್ಲಿ ಹಳೆಯ ತಲೆಮಾರಿನ ಮತ್ತು ಅನಕ್ಷರಸ್ಥ ಹಿಂದುಳಿದ ತಲೆಮಾರಿನ ಪ್ರತಿನಿಧಿಗಳು ಹೆಚ್ಚಾಗಿ ಕಂಡುಬರುವರು. ಹಾಗೆ ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ಹೊಸ ತಲೆಮಾರಿನ ಉತ್ಸಾಹಿ ಪ್ರತಿನಿಧಿಗಳು ಆಯ್ಕೆಯಾಗಿರುವುದು ಕಂಡುಬರುತ್ತದೆ. ಸಾಕ್ಷರತೆಯ ಬಗ್ಗೆ ಅಥವಾ ಶಿಕ್ಷಣದ ಕುರಿತು ಇವರಲ್ಲಿ ಒಂದು ರೀತಿಯ 'ಅವೇರ್‌ನೆಸ್' ಕಂಡುಬಂದಿರುವುದು ಗಮನಾರ್ಹ.

ಎಷ್ಟೋ ಮಹಿಳೆಯರು ನಾಮಪತ್ರ ಸಲ್ಲಿಸುವಾಗ ಓದಿದವರೆಂದು ಸುಳ್ಳು ಮಾಹಿತಿ ನೀಡಿರುವುದು ಕ್ಷೇತ್ರ ಕಾರ್ಯದಿಂದ ತಿಳಿದುಬಂದಿದೆ. ಉದಾ. ಹೊಸಪೇಟೆ ತಾಲೂಕು ಪಂಚಾಯತಿಯಿಂದ ಪಡೆದಿರುವ ಗ್ರಾಮಪಂಚಾಯಿತಿಯ ಚುನಾಯಿತ ಮಹಿಳೆಯರ ಪಟ್ಟಿಯಲ್ಲಿ ರಾಮಸಾಗರದ ಉಪಾಧ್ಯಕ್ಷೆ ಕೆ.ಎಂ.ಸಿದ್ಧಲಿಂಗಮ್ಮ ಅವರು ಓದಿರುವುದು ೫ನೇ ತರಗತಿ ಎಂದಿದೆ. ಆದರೆ ಆಕೆಯನ್ನು ಸಂದರ್ಶಿಸಿದಾಗ ಅನಕ್ಷರಸ್ಥೆ ಎಂದು ತಿಳಿದುಬಂದಿತು. ಅಂತೆಯೇ ದೇವಲಾಪುರ ಗ್ರಾಮಪಂಚಾಯಿತಿಯ ಅಧ್ಯಕ್ಷೆಯು ಅನಕ್ಷರಸ್ಥೆ. ಆದರೆ ಪಟ್ಟಿಯಲ್ಲಿ ಐದನೇ ತರಗತಿಯವರೆಗೆ ಓದಿದ್ದಾರೆ ಎಂದು ತಪ್ಪು ಮಾಹಿತಿ ಇರುವುದು ಕಂಡುಬಂದಿತು.

ಶಿಕ್ಷಣದ ಗುಣಮಟ್ಟ ಇದೆ ಎಂದಾಕ್ಷಣ ಚುನಾಯಿತ ಮಹಿಳೆಯರ ಅರಿವು ಮತ್ತು ಭಾಗವಹಿಸುವಿಕೆ ಉತ್ತಮ ಮಟ್ಟದಲ್ಲಿ ಇದೆ ಎಂದು ಭಾವಿಸಲು ಬರುವುದಿಲ್ಲ. ಆಧುನೀಕರಣ ಮತ್ತು ರಾಜಕೀಯ, ಆರ್ಥಿಕ ಕ್ಷೇತ್ರಗಳಲ್ಲಿ ನಡೆದ ಹಲವಾರು ಬದಲಾವಣೆಗಳು ಸಾಂಪ್ರದಾಯಿಕ ಸಮಾಜದ ಸಾಂಸ್ಕೃತಿಕ ಚೌಕಟ್ಟಿನೊಳಗೆ ತೀವ್ರತರ ಪರಿಣಾಮ ಬೀರದಿರುವುದು ಇದಕ್ಕೆ ಕಾರಣವಾಗಿದೆ. ಹೀಗಾಗಿ ಶಿಕ್ಷಣದ ಗುಣಮಟ್ಟ ಇದೆ ಎಂದಾಕ್ಷಣ ನಿರೀಕ್ಷಿತ ಪರಿಣಾಮವನ್ನು ಕಾಣುವುದು ಸಾಧ್ಯವಾಗಲಾರದು.

"ಚಿಕ್ಕ ವಯಸ್ಸಿನಲ್ಲಿ ಮದುವೆಗಳಾಗುವುದೇ ಸೂಕ್ತವೆಂಬ ಅಭಿಪ್ರಾಯ ಪ್ರಚಲಿತವಿದ್ದುದರಿಂದ ಬಾಲಕಿಯರು ಶಾಲೆಗಳಿಗೆ ಹೋಗಬಹುದಾದ ವರ್ಷಗಳೇ ಬಹಳ ಕಡಿಮೆಯಾಗುತ್ತಿದ್ದವು. ಜೊತೆಗೆ

ಹೆಂಗಸರು ಅಡಿಗೆ, ಮನೆಗೆಲಸ, ಮಕ್ಕಳ ಲಾಲನೆ ಪಾಲನೆಗಳಿಗೆ ಮೀಸಲಾದವರೆಂದೇ ಇಲ್ಲಿ ಪರಿಗಣಿತವಾಗುವುದರಿಂದ ಈ ಎಲ್ಲವನ್ನು ಪೂರೈಸಿ ಅಧ್ಯಯನದ ಆಸಕ್ತಿಗಳೆಡೆಗೆ ತಿರುಗಲು ಅವರಿಗೆ ಪುರುಸೊತ್ತು ದೊರೆಯುವುದು ಕಷ್ಟದಾಯಕವಾದ ಸಂಗತಿಯೇ''.[೮] ಸ್ವತಂತ್ರ ಪೂರ್ವದ ಈ ಸ್ಥಿತಿಯು ಹೆಚ್ಚು ಕಡಿಮೆ ಬಹುತೇಕ ಚುನಾಯಿತ ಮಹಿಳೆಯರಿಗೆ ಅನ್ವಯವಾಗುತ್ತದೆ. ಇವರಲ್ಲಿ ಬಹುತೇಕ ಮಹಿಳೆಯರು ಚಿಕ್ಕವಯಸ್ಸಿಗೆ ಮದುವೆಯಾದವರು. ಜೊತೆಗೆ ಬಡತನವು ಕಾರಣವಾಗಿದೆ. ಶಾಲೆಗೆ ಕಳುಹಿಸುವುದಕ್ಕಿಂತ ನಾವು ಕೆಲಸಕ್ಕೆ ಹೋದಾಗ ಹೆಣ್ಣು ಮಗು ಮನೆಯನ್ನು ಮಕ್ಕಳನ್ನು ನೋಡಿಕೊಳ್ಳಲು ಸಹಾಯಕವಾಗಿರುತ್ತಾಳೆ ಎಂದು ಯೋಚಿಸುವ ತಂದೆ ತಾಯಿಗಳು ಹೆಣ್ಣು ಮಕ್ಕಳಿಗೆ ವಿದ್ಯೆ ಯಾಕೇ? ಎಂಬ ಯೋಚನೆಯು ಚುನಾಯಿತ ಮಹಿಳೆಯರು ಅನಕ್ಷರಸ್ಥೆಯರಾಗಲು ಕಾರಣವಾಗಿರುತ್ತದೆ.

ಊಳಿಗಮಾನ್ಯ ವ್ಯವಸ್ಥೆ ಮತ್ತು ಚುನಾಯಿತ ಮಹಿಳೆ

ಚುನಾಯಿತ ಮಹಿಳೆಯರನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಕೌಟುಂಬಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಅಧ್ಯಯನ ಮಾಡುವುದರೊಂದಿಗೆ ಊಳಿಗಮಾನ್ಯ ವ್ಯವಸ್ಥೆಯು ಚುನಾಯಿತ ಮಹಿಳೆಯರನ್ನು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಹೇಗೆ ಬಳಸಿಕೊಳ್ಳುತ್ತಿವೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದೆ.

ವಸಾಹತು ಪೂರ್ವದ ಭಾರತದಲ್ಲಿ ನೆಲ, ಜಲ, ಆಡಳಿತ ಇತ್ಯಾದಿ ನಿರ್ವಹಣೆ ಕುರಿತು ನಮ್ಮದೇ ಆದ ಸಾಂಪ್ರದಾಯಿಕ ಕ್ರಮಗಳಿದ್ದವು. ಎಷ್ಟೋ ಸಮುದಾಯ ಅಧ್ಯಯನಗಳು ಇಂತಹ ಕ್ರಮಗಳನ್ನು ದೇಸೀ ರಾಜಕೀಯ ಎಂದು ಹೆಸರಿಸುವ ಮೂಲಕ ಅದನ್ನು ಸಮರ್ಥಿಸಿಕೊಳ್ಳುವುದನ್ನು ಕಾಣುತ್ತೇವೆ. ಸಿಟಿಜನ್‌ಸಿಪ್ ಆಧಾರಿತ ರಾಜಕೀಯ ಇಂತಹ ಸಮುದಾಯ ಮತ್ತು ಸಾಂಪ್ರದಾಯಿಕ ವಾದ ರಾಜಕೀಯ ಪ್ರಕ್ರಿಯೆಗಳನ್ನು ನಾಶಮಾಡಿದೆ ಎಂದು ವಾದಿಸುವುದು ಉಂಟು.

ಇಂದು ಊಳಿಗಮಾನ್ಯಶಾಹಿಯು ಹಳೆಯ ಸಂಪ್ರದಾಯದಂತೆ ಉಳಿದಿಲ್ಲ ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಹಲವಾರು ಸ್ಥಿತ್ಯಂತರಗಳು, ಪುನಾರಚನೆಗಳು, ಪುನರ್ ಹೊಂದಾಣಿಕೆಗಳು ಅದರ ಆಂತರಿಕ ರಚನೆಯಲ್ಲೂ ಬಾಹ್ಯ ರಚನೆಯಲ್ಲೂ ಘಟಿಸಿವೆ. ಆದರೆ ಸ್ವಭಾವ ಮಾತ್ರ ಬದಲಾಗಿಲ್ಲ ಎಂಬುದನ್ನು ಗಮನಿಸಬೇಕು. ಊಳಿಗಮಾನ್ಯ ವ್ಯವಸ್ಥೆಯು ಬರೀ ಭೂ ಹಿಡುವಳಿಗೆ ಸೀಮಿತವಾಗಿಲ್ಲ. ಗಣಿಗಾರಿಕೆ ಮತ್ತು ಇತರ ಉದ್ಯಮೆಗಳತ್ತ ಮುಖ ಮಾಡಿ ನಿಂತಿವೆ. ಬಂಡವಾಳಶಾಹಿ ಮತ್ತು ಅಧಿಕಾರಶಾಹಿಗಳೊಂದಿಗಿನ ಅದರ ತಳುಕು ಬಳಕುಗಳು ಹೊಸರೀತಿಯ ಆವಿಷ್ಕಾರವನ್ನು

ಸಾಧ್ಯವಾಗಿಸಿದೆ. ಭಾರತದಲ್ಲಿ ಬ್ರಿಟಿಷರು ಎರಡು ಕಾರಣಗಳಿಂದ ಸ್ಥಳೀಯ ಸರ್ಕಾರ ಪದ್ಧತಿಯನ್ನು ಜಾರಿಗೊಳಿಸಲು ಬಯಸಿದ್ದರು. ಒಂದು ಆಡಳಿತಾತ್ಮಕ ಉದ್ದೇಶ. ಎರಡು ಕಂದಾಯ ಸಂಗ್ರಹ. ಇದಕ್ಕಾಗಿ ಅದು ಸ್ಥಳೀಯ ಭೂಮಾಲೀಕರನ್ನು, ಮೇಲುವರ್ಗದ ಶ್ರೀಮಂತರನ್ನು ಪ್ರತಿಷ್ಠಿತ ಸಾಮಾಜಿಕ ನಾಯಕರನ್ನು ಬಳಸಿಕೊಂಡಿತು. ಹೀಗೆ ಪ್ರಾಂತೀಯ ಸಲಹಾಸಮಿತಿಗಳನ್ನು ರೂಪಿಸುವ ಮೂಲಕ ಸ್ಥಳೀಯ ಸಂಪನ್ಮೂಲದ ಒಡೆತನ, ವಿಲೇವಾರಿ, ಕಾರ್ಯಚಟುವಟಿಕೆಗಳ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿಕೊಂಡಿತು. ಭೂಕಂದಾಯ ವಸೂಲಿ, ಶಾಲೆ, ರಸ್ತೆಗಳಂತಹ ಅವಶ್ಯಕ ಮತ್ತು ಸಣ್ಣಪುಟ್ಟ ಅಭಿವೃದ್ಧಿ ಕಾಮಗಾರಿಗಳು ತೆರಿಗೆ ವಿಧಿಸುವ ಅಧಿಕಾರವನ್ನು ಸರ್ಕಾರದ ಪರವಾಗಿ ಇವರು ಮಾಡುತ್ತಾ ಬಂದರು. ಸ್ಥಳೀಯ ಜನರ ಮೇಲೆ ತಮ್ಮ ಹಿಡಿತವಿಟ್ಟುಕೊಂಡಿದ್ದ ಭೂಮಾಲೀಕ ಶ್ರೀಮಂತ ವರ್ಗಗಳು ಇಂತಹ ಕೆಲಸಗಳನ್ನು ಪುಕ್ಕಟೆಯಾಗಿ ತಮ್ಮ ಕೈಲಿದ್ದ ಜನರಿಂದ ಮಾಡಿಸಲಾರಂಭಿಸಿದರು.

೧೯೧೯ರ ಮಾಂಟೆಗೂ ಚೆಲ್ಮ್ಸ್‌ಫರ್ಡ್ ಸುಧಾರಣೆ ಅಂಗವಾಗಿ ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದಂತೆ ಕೆಲವೊಂದು ಬದಲಾವಣೆಗಳಾದವು. ಅವುಗಳೆಂದರೆ-

೧. ಪ್ರತಿ ಕಂದಾಯ ಹಳ್ಳಿಯಲ್ಲೂ ಗ್ರಾಮಪಂಚಾಯ್ತಿ ವ್ಯವಸ್ಥೆಯನ್ನು ಬಲಪಡಿಸುವುದು

೨. ಸ್ಥಳೀಯ ಸ್ವಸರ್ಕಾರ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿರಬೇಕು.

೩. ಮತದಾನದ ಹಕ್ಕನ್ನು ಹೆಚ್ಚು ಹೆಚ್ಚು ಸಾರ್ವತ್ರಿಕವಾಗಿಸುವುದು ಅಂದರೆ ದಮನಿತ ವರ್ಗಗಳಿಗೂ ವಿಸ್ತರಿಸುವುದು

೪. ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು ಚುನಾಯಿತರಾಗಬೇಕು ಎಂಬುದು.

ಇದರ ಅಂಗವಾಗಿ ೧೯೨೦ರ ಮದ್ರಾಸ್ ವಿಲೇಜ್ ಪಂಚಾಯತ್ ಆ್ಯಕ್ಟ್ ಜಾರಿಗೆ ಬಂದಿತು. ಪ್ರತಿ ಕಂದಾಯ ಹಳ್ಳಿ ಕೂಡ ತನ್ನದೇ ಪಂಚಾಯತ್ ಹೊಂದುವ ಅವಕಾಶ ಬಂತು. ಆದರೆ ಪಂಚಾಯಿತಿಯ ಅಧಿಕಾರ ಮತ್ತು ಕಾರ್ಯವ್ಯಾಪ್ತಿ ತುಂಬಾ ಸೀಮಿತವಾಗಿತ್ತು. ಕಂದಾಯ ಸಂಗ್ರಹ ಮತ್ತು ಆರ್ಥಿಕ ಮೂಲಗಳಿಗೆ ಸಂಬಂಧಿಸಿದಂತೆ ಪಂಚಾಯಿತಿಗೆ ಯಾವುದೇ ಹಕ್ಕು ಇರಲಿಲ್ಲ. ಅಂದ ಮಾತ್ರಕ್ಕೆ ಕಂದಾಯ ಸಂಗ್ರಹಕ್ಕಾಗಿ ವಸಾಹತು ಸರ್ಕಾರ ಆಧುನಿಕ ಪರಿಸರ ಹುಡುಕಲಿಲ್ಲ. ನಮ್ಮದೇ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪಗೊಂಡ ಅಧಿಕಾರಶಾಹಿಗಳಿಗೆ ಗೌಡರು ಮತ್ತು ಶಾನುಭೋಗರಿಗೆ ಕಂದಾಯ ವಸೂಲಿಯ ಜವಾಬ್ದಾರಿ ವಹಿಸಿತು. ಮತದಾನದ ಹಕ್ಕನ್ನು ಎಲ್ಲ ಸಾಮಾಜಿಕ ಸ್ತರಗಳಿಗೆ ವಿಸ್ತರಿಸಬೇಕೆಂಬ ನೀತಿಯಿದ್ದರೂ, ಅದು ಕಂದಾಯ ಕಟ್ಟುವವರಿಗೆ ಮಾತ್ರ ಸೀಮಿತವಾಯಿತು.

ಒಂದು ವಿಧದಲ್ಲಿ ಆ ಪಂಚಾಯಿತ್ ವ್ಯವಸ್ಥೆಯ ಒಟ್ಟು ಆಶಯ, ಮೇಲೆ ವಿವರಿಸಿದಂತೆ ಗ್ರಾಮೀಣ ಮಟ್ಟದ ಕಾನೂನು, ಶಿಸ್ತಿನ ಜವಾಬ್ದಾರಿ ಮತ್ತು ಕಾಮಗಾರಿಗಳನ್ನು ಸ್ಥಳೀಯರಿಗೆ ವಹಿಸಿಕೊಡುವಲ್ಲಿ ಸೀಮಿತವಾಯಿತು.[೯]

ಅನಾದಿಕಾಲದಿಂದಲೂ ಭೂ ಕಂದಾಯ ಮತ್ತು ತೆರಿಗೆಗಳನ್ನು ವಸೂಲಿ ಮಾಡುತ್ತ ಬಂದಿದ್ದ ಗೌಡ ಕುಲಕರ್ಣಿಗಳು ಇದರಿಂದ ಮತ್ತಷ್ಟು ಬಲಾಢ್ಯರಾದರು. ಸ್ಥಳೀಯ ಜನರನ್ನು ತಮ್ಮ ಹಂಗಿನಲ್ಲಿಟ್ಟುಕೊಂಡು ಶೋಷಿಸಲಾರಂಭಿಸಿದರು. ಇಂದಿನ ವಿಕೇಂದ್ರೀಕರಣ ಯುಗದಲ್ಲೂ ಇದು ಮುಂದುವರಿದಿರುವುದು ಕಂಡುಬರುತ್ತಿದೆ.

ನಾನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಈ ರೀತಿಯ ಊಳಿಗಮಾನ್ಯ ವ್ಯವಸ್ಥೆಯ ದಟ್ಟಛಾಯೆಗಳು ಎದ್ದು ಕಾಣುತ್ತವೆ. ಬಹುಮುಖ್ಯವಾಗಿ ಊಳಿಗಮಾನ್ಯ ವ್ಯವಸ್ಥೆಯು ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ, ಢಣಾಪುರ, ಪಾಪಿನಾಯಕನಹಳ್ಳಿ, ನಾಗೇನಹಳ್ಳಿ, ಬುಕ್ಕಸಾಗರ, ಹಂಪಿ, ಮೆಟ್ರಿ, ಸೀತಾರಾಮತಾಂಡಗಳಲ್ಲಿ, ಸಂಡೂರು ತಾಲೂಕಿನ ದೇವಗಿರಿ, ದರೋಜಿ ಬಹುತೇಕ ಗ್ರಾಮಪಂಚಾಯ್ತಿಗಳಲ್ಲಿ ತನ್ನ ಮೂಲಸ್ವರೂಪ ದಲ್ಲಿ ಬದಲಾದ ಕಾಲಗತಿಗೆ ತಕ್ಕಂತೆ ಬಂಡವಾಳಶಾಹಿ ರೂಪದಲ್ಲಿ ವಿನ್ಯಾಸಗೊಂಡಿದೆ. ಇನ್ನುಳಿದಂತೆ ಹಲವು ಭಾಗಗಳಲ್ಲಿ ಅದು ಜಮೀನ್ದಾರಿಕೆಯ ರೂಪದಲ್ಲೇ ಕಂಗೊಳಿಸುತ್ತಿದೆ. ಆದರೆ ಆಧುನಿಕತೆಗೆ ಸ್ಪಂದಿಸದ, ಕ್ರಿಯಾಶೀಲವಾಗಿರದ ಆರ್ಥಿಕವಾಗಿ ದಿವಾಳಿ ಎದ್ದ ಎಷ್ಟೋ ಜಮೀನ್ದಾರಿ ಸಂವೇದನೆಗಳು ಮೂಲೆಗುಂಪಾಗಿರುವುದು ಇದೆ. ಇದಕ್ಕೆ ಬದಲಾಗಿ ಪ್ರತಿಷ್ಠಿತ ಜಾತಿಯ ಶ್ರೀಮಂತ ವರ್ಗಗಳು ಆ ಸ್ಥಾನದಲ್ಲಿ ತಲೆಯೆತ್ತಿರುವುದು ಕಾಣುತ್ತದೆ. ಸಾಲ ಮತ್ತು ಜೀತಪದ್ಧತಿಯನ್ನು ಇವು ಜೀವಂತವಾಗಿ ಉಳಿಸಿಕೊಂಡಿರುವುದು ಕಾಣುತ್ತದೆ.

೧೯೪೦ರಲ್ಲಿ ಗ್ರಾಮಪಂಚಾಯತ್ ಚುನಾವಣೆಯಲ್ಲಿ ಪಾಪಿನಾಯಕನಹಳ್ಳಿ ಗ್ರಾಮಪಂಚಾಯತ್‌ಗೆ ಲಿಂಗಾಯಿತ ಉದ್ಧಾಳರ ವೀರಭದ್ರಪ್ಪನವರು ಅವಿರೋಧವಾಗಿ ಅಧಕ್ಷರಾಗಿ ಆಯ್ಕೆಯಾದರು. ಗಟ್ಟಿ ಕುಳವಾದ ವೀರಭದ್ರಪ್ಪನವರು ಸಾಲ ಮತ್ತು ಜೀತಪದ್ಧತಿಯಿಂದ ಕೆಳವರ್ಗಗಳ ಮೇಲೆ ಸಂಪೂರ್ಣ ಹಿಡಿತವಿಟ್ಟುಕೊಂಡಿದ್ದರು. ಊರಿನ ಇನ್ನೊಂದು ಪ್ರಿತಷ್ಠಿತ ಕುಟುಂಬ ಮೇಟಿಯವರದು ಈ ಎರಡು ಕುಟುಂಬದ ನಡುವೆ ಅಧಿಕಾರಕ್ಕಾಗಿ ನಡೆದ ಘಟನೆಗಳು ಬಡಿದಾಟಗಳು ಸುಪ್ರಿಂಕೋರ್ಟ್‌ವರೆಗೂ ಹೋಗಿವೆ. ಬೈಲುವದ್ದಿಗೇರಿ ಜಂಬಣ್ಣನವರು ಗೊಗ್ಗ ಬಸಯ್ಯನವರು ಆ ಊರ ರಾಜಕೀಯದ ಪ್ರಮುಖ ವ್ಯಕ್ತಿಗಳು ಜಂಬಣ್ಣನವರಿಗಂತೂ ರಾಜ್ಯಮಟ್ಟದ ರಾಜಕೀಯದ ಸ್ಪರ್ಶವಿತ್ತು. ಕೈ ಎತ್ತುವ ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ, ಸಾಲ ತೆಗೆದುಕೊಂಡ, ಜೀತಕ್ಕಿದ್ದ, ಕೆಳವರ್ಗದವರೇ ಇವರ

ರಾಜಕೀಯ ಮತ್ತು ಆರ್ಥಿಕ ಸಂಪನ್ಮೂಲಗಳ ಸಾಧನಗಳು. ಅಗ್ಗದ ಶ್ರಮದಿಂದ ಎಕರೆಗಟ್ಟಲೇ ಭೂಮಿ ಸಾಗುವಳಿಯಾದರೆ, ಶ್ರಮಿಕವರ್ಗದ ಸಾಲದ ಶೂಲ ಜಮೀನ್ದಾರರ ರಾಜಕೀಯ ಹಿತಾಸಕ್ತಿಗಳ ಬಂಡವಾಳವಾಗಿತ್ತು. ಅದರೆ ಇದರಿಂದ ಅಂಚಿನಲ್ಲಿರುವ ಜನಗಳಿಗೆ ಯಾವರೀತಿಯ ಲಾಭವೂ ಆದದ್ದು ಕಂಡು ಬರುವುದಿಲ್ಲ.[೧೦]

ಇದೇ ರೀತಿಯ ಇನ್ನೊಂದು ಸಂಗತಿ ಮೆಟ್ರಿಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅರಿವಿಗೆ ಬಂದಿತು. ಇದು ತುಸು ಭಿನ್ನವಾದದ್ದು. ಅದೆಂದರೆ ಗ್ರಾಮಪಂಚಾಯತಿ ಸದಸ್ಯೆಯಾಗಿ ಆಯ್ಕೆಯಾದ ಶ್ರೀಮತಿ ತಿಮ್ಮಕ್ಕ ಎಂಬುವರು ಬುದ್ಧಿ ತಿಳಿದಾಗಿನಿಂದಲೂ ತನ್ನ ಗಂಡ, ಮಕ್ಕಳು ತಾನು ಸೀತಪ್ಪ ಧಣಿಯ ಹೊಲ ಮನೆಯಲ್ಲಿ ಕೆಲಸ ಮಾಡಿ ಕೊಂಡಿದ್ದವರು. ಗಂಡ ಮತ್ತು ಮಕ್ಕಳು ನಿರಂತರವಾಗಿ ಹೊಲದಲ್ಲಿ ದುಡಿಯುತ್ತಿದ್ದವರು. ಈಕೆ ಧಣಿಯ ಹೊಲದಲ್ಲಿ ಬೆಳೆದ ಕಾಯಿಪಲ್ಲೆ ಹಣ್ಣು ಹಂಪಲು ಮಾರಿ ಬದುಕುತ್ತಿದ್ದಳು. ಒಂದು ವೇಳೆ ಧಣಿಯ ಹೊಲದಲ್ಲಿ ಈ ಸೌಲಭ್ಯಗಳು ಇಲ್ಲದಾಗ, ಕಂಪ್ಲಿ ಅಥವಾ ಹೊಸಪೇಟೆಯಿಂದ ಹಣ್ಣುತಂದು ಮಾರುತ್ತಿದ್ದಳು. ಈಗ ಗ್ರಾಮಪಂಚಾಯ್ತಿ ಸದಸ್ಯೆಯಾಗಿದ್ದರೂ, ತನ್ನ ಕರ್ತವ್ಯವನ್ನು ನಿಲ್ಲಿಸಿಲ್ಲ. ಈ ಬಗ್ಗೆ ಕೇಳಿದರೆ, - "ಅದ್ಯಾವುದು ನಮಗ ಗೊತ್ತಿಲ್ರಿ, ಧಣೇರ ಎಲ್ಲ ಮಾಡಿದ್ರು. ಅವ್ರು ನಿಲ್ಲಂದ್ರು, ನನ್ನ ನಿಲ್ಲಿಸಿ ಗೆಲ್ಲಿಸಿದ್ರು. ನಾ ಯಾವುದಕ್ಕೂ ಹೋಗಿಲ್ಲಿ, ನಮಗೆ ಯಾಕಬೇಕರಿ ಊರುಸಾಬರಿ. ಬದಕಮಾಡಕೊಂಡ್ರ ಸಾಕಾಗೈತಿ ಅದೇನೋ ಯಾವಾಗರ ಒಮ್ಮೆ ಹೆಬ್ಬೆಟ್ಟು ಒತ್ತಿಸಿಕೊಂಡು ಹೊಕ್ಕಾರ ಏನೈತೇನ". ಈ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿನ ಹಲವಾರು ಸಬಲ ದುರ್ಬಲ ಸಂಗತಿಗಳು ಮನವರಿಕೆಯಾಗುತ್ತವೆ.

ನಾಗೇನಹಳ್ಳಿ ಗ್ರಾಮಪಂಚಾಯ್ತಿಯ ಸದಸ್ಯೆ ಬುಡ್ಡಮ್ಮನು "ಧಣಿ ನಿಲ್ಲಿಸಿ ಗೆಲ್ಲಿಸಿದರು. ಅವರೇ ಸಹಕಾರ ಪ್ರೋತ್ಸಾಹ ನೀಡಿದ್ದಾರೆ. ಅವರ ಮಾತಿಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತೇನೆ. ಧಣಿಯ ಹೊಲಗದ್ದೆಗಳಲ್ಲಿ ದುಡಿಯುತ್ತೇವೆ. ಅದರೂ ಸಾಲವಾಗಿದೆ. ಏನೇ ಆದರೂ ಒಂದು ಉಪಯೋಗವಿದೆ. ಈಗೀಗ ಸ್ವಲ್ಪ ರಾಜಕೀಯ ತಿಳಿಯುತ್ತಿದೆ" ಎಂದರು.

ಬುಕ್ಕಸಾಗರ ಗ್ರಾಮಪಂಚಾಯ್ತಿಯಲ್ಲಿ ಗಾಳೆಮ್ಮನೆಂಬ ಸದಸ್ಯೆಯನ್ನು ಬಹಳಷ್ಟು ಕೆದಕಿ ಕೇಳಿದಾಗ 'ಧಣಿ' ನಿಲ್ಲಿಸಿದ್ದರಿಂದ ನಾನು ನಿಂತುಕೊಂಡೆನು. ಎಂದು ನಿಧಾನವಾಗಿ ಬಾಯಿಬಿಟ್ಟರು. ಸೀತಾರಾಮ ತಾಂಡದ ಅಧ್ಯಕ್ಷೆಯ ಕುಟುಂಬವು ಧಣಿಯ ಹೊಲದಲ್ಲೇ ದುಡಿಯುತ್ತಿರುವುದು ಧಣಿ ನಿಲ್ಲಿಸಿದರೆ ಪುನಃ ಸ್ಪರ್ಧಿಸುವುದಾಗಿ ೮೦ ವರ್ಷ ವಯಸ್ಸಿನ ವೃದ್ಧೆಯಾದ ಅಧ್ಯಕ್ಷೆ ನುಡಿದರು.

ದರೋಜಿಯ ಹರಿಜನ ಮಾರೆಮ್ಮನು ದೇವದಾಸಿಯಾಗಿದ್ದಾರೆ. ಈಕೆಯ ಧಣಿಯ ಮಾತಿನಂತೆ ಸ್ಪರ್ಧಿಸಿ ಗೆದ್ದಿದ್ದಾರೆ. ಧಣಿ ಇವರಿಗೆ ಕುಡಿಯಲು ಹಣ ಕೊಡುತ್ತಾರೆ. ನರಿ ಹುಲುಗೆಮ್ಮ ಎಂಬ ಮತ್ತೊಬ್ಬ ಸದಸ್ಯೆಯು ಹೇಳಿರುವಂತೆ ನನಗೆ ಏನೇನೂ ಗೊತ್ತಿಲ್ಲ. ರಾಜಕೀಯಕ್ಕೆ ತಂದವರೇ ಎಲ್ಲವನ್ನು ನೋಡಿಕೊಳ್ಳುತ್ತಾರೆ. "ನನಗೆ ಯಾವ ಸ್ವಾತಂತ್ರ್ಯವೂ ಇಲ್ಲ. ವಾರ್ಡಿನ ಕೆಲಸಗಳನ್ನು ಅವರೆ ಮಾಡುತ್ತಾರೆ. ನಾನು ಅನಕ್ಷರಿ, ಅಜ್ಞಾನಿ, ಆಗಿರುವುದರಿಂದಲೇ ನನ್ನನ್ನು ಆರಿಸಿ ತಂದರೆಂದು ಕಾಣುತ್ತದೆ". ಆಕೆಯನ್ನು ಎಷ್ಟು ಸೂಕ್ಷ್ಮವಾಗಿ ಕೇಳಿದರೂ "ಅವರು" ಎಂಬುವರ ಬಗ್ಗೆ ಹೆಚ್ಚು ವಿವರಣೆ ನೀಡಲಿಲ್ಲ. ಇಂತಹ ಅನೇಕ ಜೀವಂತ ಉದಾಹರಣೆಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡಿದ್ದೇನೆ.

ಪಾರಂಪರಿಕ ವತನದಾರಿಕೆ, ಜೀತಪದ್ಧತಿ, ಸಾಮಾಜಿಕ ಶ್ರೇಣೀಕರಣಗಳು ಕೆಳವರ್ಗದ ಮಹಿಳೆಯರ ನಿರಾಶಾದಾಯಿಕ ಪ್ರತಿಕ್ರಿಯೆಗಳು ಗ್ರಾಮಪಂಚಾಯ್ತಿ ವ್ಯವಸ್ಥೆಯ ಗ್ರಾಮಾಭಿವೃದ್ಧಿ ಪರಿಕಲ್ಪನೆಯನ್ನು ಅನುಮಾನದಿಂದ ನೋಡುವಂತೆ ಪ್ರೇರೇಪಿಸುತ್ತವೆ. ಪ್ರಜಾಪ್ರಭುತ್ವದ ಬೇರುಗಳೇ ತಳಮಟ್ಟದವರೆಗೆ ಆಳವಾಗಿ ನೆಲೆಗೊಂಡಿಲ್ಲ. ನೆಲೆಗೊಳ್ಳಲು ಪ್ರಯತ್ನಿಸಿದರೂ ಅಲ್ಲಿನ ಪ್ರತಿಷ್ಠಿತ ವರ್ಗಗಳು ಅದನ್ನು ಆಗು ಮಾಡಗೊಟ್ಟಿಲ್ಲ. ಗ್ರಾಮ ವ್ಯವಸ್ಥೆಯಲ್ಲಿ ಪ್ರಬಲ ಜಾತಿಗಳು ತಮ್ಮ ಹಿತಾಸಕ್ತಿಗಳಿಗೆ ಆತಂಕ ತರಲಾರದಂತಹ ಹೇಳಿದ್ದಕ್ಕೆಲ್ಲ ಹೆಬ್ಬೆಟ್ಟು ಒತ್ತುವ ವ್ಯಕ್ತಿಯನ್ನು ಆಯ್ಕೆಮಾಡುತ್ತವೆ. ಅದು ಕೆಳವರ್ಗದಲ್ಲಾಗಬಹುದು, ಮೀಸಲಾತಿಯಲ್ಲಾಗಬಹುದು. ಅಥವಾ ಜಾತಿಸಂಬಂಧಿ ಆಯ್ಕೆಯಲ್ಲಾದರೂ ಆಗಬಹುದು.

ಬಹಳಷ್ಟು ಪುರುಷಶಾಹಿ ವ್ಯವಸ್ಥೆಯ ಹಿತಾಸಕ್ತಿಗಳಿಗೆ ಅಧಿಕಾರವನ್ನು ಕೆಳವರ್ಗಗಳಿಗೆ ಬಿಟ್ಟುಕೊಡುವ, ಕೆಳಗಿನ ಸ್ತರದಲ್ಲಿರುವ ಸಂಸ್ಥೆಗಳಿಗೆ ಹಂಚಿಕೊಡುವ ಬಗ್ಗೆ ಆಸಕ್ತಿಯಿಲ್ಲ. ಕೇಂದ್ರೀಕರಣವನ್ನೇ ಇವು ಬಯಸುತ್ತವೆ. ವಿಕೇಂದ್ರೀಕರಣವೆಂದರೆ ಸಾಮಾನ್ಯ ಜನರಿಗೆ ಅಧಿಕಾರ ಕೊಡಬೇಕು. ಇದಕ್ಕೆ ರಾಜಕೀಯ ಇಚ್ಛಾಶಕ್ತಿಯೊಂದಿಗೆ ಬಳಕೆದಾರರ ಇಚ್ಛಾಶಕ್ತಿಯೂ ಬೇಕು. ಅಂದಾಗ ಮಾತ್ರ ಆ ವಿಕೇಂದ್ರೀಕರಣವು ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ.

ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳ ಕಡೆಗೆ ಬಂದರೆ ಪರಿಸ್ಥಿತಿಯೇನೂ ಭಿನ್ನವಾಗಿಲ್ಲ ಸಂಡೂರಿನಿಂದ ದೂರವಿರುವ ಗಣಿ ಪ್ರದೇಶ ಮತ್ತು ಕೃಷಿ ಪ್ರದೇಶ ಪ್ರಧಾನವಾಗಿರುವ ಪ್ರತಿಹಳ್ಳಿಗಳಿಗೂ ಇಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳಲ್ಲಿ ಮತ್ತು ಅವರ ರಾಜತ್ವದ ಲಕ್ಷಣಗಳೇ ದೇವರು. ಇವರ ಅಪ್ಪಣೆಯಿಲ್ಲದೆ ಅಲ್ಲಿನ ಒಂದು ಕಲ್ಲೂ ಕದಲಲು ಸಾಧ್ಯವಿಲ್ಲ. ನನ್ನ ಸ್ನೇಹಿತರೊಬ್ಬರು ಹೇಳಿದ ಮಾತೊಂದು ಇಲ್ಲಿ ಪ್ರಸ್ತುತವೆನಿಸುತ್ತದೆ. ಅವರು ಸಂಡೂರಿನ ಕೆಲವು

ಹಳ್ಳಿಗಳಿಗೆ ಹಸ್ತಪ್ರತಿ(ತಾಳೆಗರಿ) ಸಂಗ್ರಹಕ್ಕೆ ಹೋದಾಗ ತಮ್ಮ ಸ್ವಾಮ್ಯದಲ್ಲಿರುವ ಹಸ್ತಪ್ರತಿಗಳನ್ನು ಕನ್ನಡ ವಿಶ್ವವಿದ್ಯಾಲಯದವರಿಗೆ ಕೊಡಲು ಅವರು ಸನ್ಮಾನ್ಯ ಶ್ರೀ ಘೋರ್ಪಡೆಯವರ ಅನುಮತಿ ಕೇಳಿದರಂತೆ ಅಲ್ಲಿನ ಜನರು ಘೋರ್ಪಡೆಯವರನ್ನು ಮಹಾರಾಜ ಎಂದೇ ಈಗಲೂ ಕರೆಯುತ್ತಾರೆ. ಭಯ ಭಕ್ತಿ ಎರಡೂ ಅವರಲ್ಲಿವೆ. ಇಲ್ಲಿ ಗ್ರಾಮಪಂಚಾಯ್ತಿಯ ಹೆಚ್ಚಿನ ಸದಸ್ಯರು ರಾಜರ ಕೃಪೆಯಿಂದಲೇ ರಾಜರ ಕೃಪೆಗಾಗಿಯೇ ಚುನಾಯಿತರಾದವರು. ಇವೆಲ್ಲ ಸಂಗತಿಗಳು ನನ್ನ ಅಧ್ಯಯನದಿಂದ ಹೊರಬಂದಿವೆ. ಈ ಎಲ್ಲ ಸಂಗತಿಗಳನ್ನು ಗಮನಿಸಿದಾಗ ಅರಿವಿಗೆ ಬರುವ ಸಂಗತಿಗಳೆಂದರೆ ಸಂಖ್ಯಾತ್ಮಕವಾಗಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಸಿಕ್ಕಿದೆ. ಆಯ್ಕೆಯಾದ ಸದಸ್ಯೆಯರೆಲ್ಲ ಊಟ ಉಡುಗೆಯಿಂದ ಹಿಡಿದು ಪ್ರತಿಯೊಂದಕ್ಕೂ ಊಳಿಗಮಾನ್ಯ ವ್ಯವಸ್ಥೆಯ ಮೇಲೆ ಅವಲಂಬಿತವಾಗಿರುವುದು ಕಾಣುತ್ತದೆ. ಇವರ ಮೂಲಕ ಪ್ರತಿಷ್ಠಿತ ಶಕ್ತಿಗಳು ತನ್ನ ರಾಜಕೀಯ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವ ಸಂಗತಿಗಳು ಢಾಳಾಗಿ ಕಾಣುತ್ತವೆ.

ಆರ್ಥಿಕ ನೆಲೆ

ಮಹಿಳೆಯ ಜೈವಿಕ ಲಕ್ಷಣದ ಮೇಲೆ ಆಕೆಯ ಆರ್ಥಿಕ ನೆಲೆಗಳನ್ನು ನಿರ್ಧರಿಸಲಾಗುತ್ತದೆ. ಆ ಮೂಲಕ ಅನೇಕ ಪರಿಮಿತಿಗೆ ಒಳಪಡಿಸಲಾಗಿದೆ. ಲಿಂಗಸಂಬಂಧಿ ಶ್ರಮವಿಭಜನೆಯ ಮೂಲಕ ಅನೇಕ ಅಸಮಾನ ಸಂಗತಿಗಳನ್ನು ಜೀವಂತವಾಗಿರಿಸಿಕೊಂಡು ಬರಲಾಗಿದೆ. ಕೆಲವು ಕೆಲಸಗಳನ್ನು ಮಹಿಳೆಯರಿಗಾಗಿಯೇ ಮೀಸಲಿಟ್ಟರೆ, ಇನ್ನೂ ಕೆಲವು ಕೆಲಸಗಳನ್ನು ಅವಳು ಮಾಡಬಾರದು ಎಂದು ನಿತಿಯನ್ನು ರೂಪಿಸಲಾಗಿದೆ. ಹೊರುವ ಮತ್ತು ಹೆರುವ ಸಂಗತಿ ಜೈವಿಕವಾದ ಸಂಗತಿಯಾದರೆ, ಉಳಿದಂತೆ ಶ್ರಮ ವಿಭಜನೆಯು ಸಾಮಾಜಿಕವಾಗಿ ನಿಗದಿಯಾಗುವ ಸಂಗತಿಯಾಗಿದೆ. ಆಕೆಯ ಇಡೀ ಜೀವನ ಚಕ್ರ ಸಾಮಾಜಿಕವಾಗಿ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

ಲಿಂಗಸಂಬಂಧಿಯಾದ ಈ ಶ್ರಮ ವಿಭಜನೆಯು ಕುಟುಂಬ ಮಟ್ಟದಲ್ಲಿ, ಆರ್ಥಿಕತೆ ಮಟ್ಟದಲ್ಲಿ ಪುರುಷರಿಗೆ ಪರಮಾಧಿಕಾರವನ್ನು ಸಂಪನ್ಮೂಲಗಳ ಒಡೆತನವನ್ನು ದಕ್ಕಿಸಿಕೊಟ್ಟಿರುತ್ತದೆ. ಆ ಮೂಲಕ ಮಹಿಳೆಯರನ್ನು ಅಧೀನ ಸ್ಥಿತಿಯಲ್ಲಿರುವಂತೆ ಮಾಡುತ್ತದೆ. ಈ ರೀತಿ ಲಿಂಗಶಾಹಿ ವೈಚಾರಿಕತೆಯು ಮಹಿಳೆಯರ ಮನಸ್ಸಿನಲ್ಲಿ ಅತ್ಯಂತ ಸೂಕ್ಷ್ಮ ರೀತಿಯಲ್ಲಿ ಮಾನಸಿಕ ಮಟ್ಟದಲ್ಲಿ ಗಟ್ಟಿಯಾಗಿ ನೆಲೆಗೊಳ್ಳುತ್ತದೆ. ಇದರಿಂದ ಒಟ್ಟು ಕೌಟುಂಬಿಕ ಮತ್ತು ಸಾಮಾಜಿಕ ನಂಬಿಕೆಗಳು ಆತಂಕಕಾರಿಯಾದ ಬೆಳವಣಿಗೆಯನ್ನುಂಟು ಮಾಡುತ್ತವೆ. ಅವು ಕೆಲಸವನ್ನು ಪುರುಷ ನಿಷ್ಠ ಮತ್ತು ಸ್ತ್ರೀ ನಿಷ್ಠ ಮಾದರಿಗಳನ್ನಾಗಿ ಪ್ರತ್ಯೇಕಿಸುತ್ತವೆ. ಹೀಗೆ ಸಮಾಜವು ಉತ್ಪಾದನೆ ವ್ಯವಸ್ಥೆಯನ್ನು ಪರಿಭಾವಿಸಿಕೊಂಡಿರುವ ನೆಲೆಯಲ್ಲಿಯೇ ಅದನ್ನು ರೂಪಿಸಿರುವ ಬಗೆಯಲ್ಲಿಯೇ ಅದರ ಸಾಂಸ್ಕೃತಿಕ ನೆಲೆಯಲ್ಲಿ ಲಿಂಗಸಂಬಂಧಿ

ಅಸಮಾನತೆ ಅಂತರ್ಗತಗೊಂಡಿದೆ. ಸಾಮಾಜಿಕ ವ್ಯವಸ್ಥೆಯ ಭಾಗವಾಗಿರುವ ಈ ಲಿಂಗಸಂಬಂಧಿ ಶ್ರಮವಿಭಜನೆಯನ್ನು ಉತ್ಪಾದನೆ, ಅನುಭೋಗ, ವಿನಿಮಯ ಹಂಚಿಕೆ ಹೀಗೆ ಆರ್ಥಿಕತೆಗೆ ಸಂಬಂಧಪಟ್ಟ ಎಲ್ಲ ಕ್ಷೇತ್ರಗಳಲ್ಲು ಕಾಣಬಹುದಾಗಿದೆ.

ಮನೆಯ ಹೊರಗಿನ ದುಡಿಮೆಯು ಮಹಿಳೆಯರನ್ನು ಸ್ವಾಲಂಬಿಗಳನ್ನಾಗಿಸುತ್ತದೆ ಎನ್ನುವ ಮಾತು ಇದೆ. ಆಯ್ಕೆಯಾದ ಸದಸ್ಯೆಯರನ್ನು ಗಮನಿಸಿದಾಗ ಈ ಮಾತು ಗುಮಾನಿ ಹುಟ್ಟಿಸುತ್ತದೆ. ಇವರಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರೇ ಹೆಚ್ಚಾಗಿದ್ದಾರೆ. ಶ್ರೀಮಂತ ಕುಟುಂಬಗಳಲ್ಲಿ ದೈಹಿಕ ಶ್ರಮವನ್ನು ತುಂಬಾ ಕೀಳು ದೃಷ್ಟಿಯಿಂದ ನೋಡಲಾಗುತ್ತದೆ. ಈ ವರ್ಗದಲ್ಲಿ ದೈಹಿಕ ಶ್ರಮವು ಅವಮಾರ್ಯಾದೆಯ, ತಮ್ಮ ಘನತೆಗೆ ಕುಂದುಂಟು ಮಾಡುವ ಸಂಗತಿಯಾಗಿದೆ. ಈ ವರ್ಗಕ್ಕೆ ದೈಹಿಕ ಶ್ರಮವೆಂಬುದು ಮೈಲಿಗೆ. ಆದರೆ ಉಳಿದ ವರ್ಗಗಳಿಗೆ, ದುಡಿದು ಉಣ್ಣಲೇಬೇಕಾದ ವರ್ಗಗಳಿಗೆ ಉದ್ಯೋಗ ಇಲ್ಲದಿರುವುದು ಅವಮಾನದ-ಅಗೌರವದ ಸಂಗತಿಯಾಗಿ ಬಿಡುತ್ತದೆ.[೨೨] ಕೃಷಿ ಕೂಲಿ, ಗಣಿಗೆಲಸ ಕಲ್ಲು ಒಡೆಯುವುದು, ಅಗಸರ ಕೆಲಸ, ಕಟ್ಟಿಗೆ ಮಾರಟ, ಹೈನುಗಾರಿಕೆ, ಸರಾಯಿ ಮಾರಾಟ, ಗಾರೆಕೆಲಸ, ಪುಟ್ಟಿ, ಪೊರಕೆ ವ್ಯಾಪಾರ, ಹಣ್ಣು ತರಕಾರಿ ಮಾರಾಟ, ಬೇವಿನಬೀಜ ಆರಿಸುವುದು, ಹುಣಿಸೆ ಹಣ್ಣಿನ ಸಿಪ್ಪೆ ಬಿಡಿಸುವುದು ಹೀಗೆ ಋತುಮಾನ ಸಂಬಂಧಿ ಕೆಲಸದಲ್ಲಿ ಅವಳು ಸುಮಾರು ೮ ರಿಂದ ೯ ತಾಸು ದುಡಿದರೂ ಪುರುಷಶಾಹಿ ಸಮಾಜ ಸ್ಥಿತಿಯು ಇದನ್ನು ದುಡಿಮೆ ಎಂದು ಪರಿಗಣಿಸುವುದಿಲ್ಲ. ಅಧಿಕ ಗಂಟೆಗಳ ದುಡಿಮೆ, ಕಡಿಮೆ ಕೂಲಿಯ ಜೊತೆಗೆ ಮನೆ ವಾರ್ತೆಯ ದುಡಿಮೆಯನ್ನು ಆಕೆ ನಿರ್ವಹಿಸಬೇಕಾಗುತ್ತದೆ. ಬಡತನವು ತೀವ್ರವಾಗುತ್ತ ಹೋದಂತೆ ಅದರ ನಿರ್ವಹಣೆಯ ಜವಾಬ್ದಾರಿ ಆರ್ಥಿಕವಾಗಿ ಮಹಿಳೆಯರ ಮೇಲೆ ಬೀಳುತ್ತ ಹೋಗುತ್ತದೆ.

ಹೀಗೆ ಸಂತಾನೋತ್ಪತ್ತಿ ಮನೆವಾರ್ತೆ, ಕೂಲಿಕೆಲಸದಂತಹ ಮೂರು ರೀತಿಯ ದುಡಿಮೆಯಲ್ಲಿ ಅವಳು ೧೬ ರಿಂದ ೧೮ ಗಂಟೆಗಳ ಕಾಲ ಭಾಗವಹಿಸುವ ಸಂಭವವಿದೆ. ಈ ದುಡಿಮೆಯಯನ್ನು ಕುಟುಂಬಸಂಬಂಧಿ ದುಡಿಮೆಯನ್ನಾಗಿ ಪರಿಭಾವಿಸುವ ಮೂಲಕ ಎಷ್ಟು ಗಂಟೆಗಳ ಕಾಲ ದುಡಿದರೂ ಪುರುಷಶಾಹಿ ಸಮಾಜವು ಅವಳನ್ನು, ಅವಳ ದುಡಿಮೆಯನ್ನು ಸಂಪಾದನೆಯನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಅದನ್ನೊಂದು ಆರ್ಥಿಕ ಚಟುವಟಿಕೆ ಎಂದು ಭಾವಿಸುವುದಿಲ್ಲ. ಆಕೆಯನ್ನು ಓರ್ವ ಗೃಹಿಣಿಯನ್ನಾಗಿ ಮಾತ್ರ ಸಮಾಜ ಪರಿಭಾವಿಸಿಕೊಳ್ಳುತ್ತದೆ.

ಮಹಿಳೆಯರ ಶ್ರಮವು ಹೀಗೆ ಕುಟುಂಬದ ಚೌಕಟ್ಟಿಗೆ ಸಂಗೋಪನ ಚಟುವಟಿಕೆಗಳಿಗೆ ಯಾಕೆ ಸೀಮಿತವಾಗಿದೆ ಎಂಬುದನ್ನು ಮಹಿಳಾ ಶ್ರಮದ ಬೇಡಿಕೆಯ ಆಧಾರದ ಮೇಲೆ ನಿರೂಪಿಸಬಹುದಾಗಿದೆ. ಈ ವಿವರಣೆಯ ಪ್ರಕಾರ ಮಹಿಳೆಯರು ಕುಟುಂಬ ಸಂಬಂಧಿ ಕೆಲಸದಲ್ಲಿ ತೊಡಗಿದ್ದರೆ ಅದಕ್ಕೆ

ಕಾರಣ ಅವರ ಶ್ರಮಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆಯಿಲ್ಲದಿರುವುದು ಎಂದು ಭಾವಿಸಲಾಗಿದೆ. ಮಹಿಳೆಯರ ಶ್ರಮಕ್ಕೆ ಕಡಿಮೆ ಬೇಡಿಕೆ ಇರಲು ಕಾರಣ ಅವರ ದುಡಿಮೆಯಿಂದ ಬರುವ ಪ್ರತಿಫಲಕ್ಕಿಂತ ಕಡಿಮೆಯಿರುತ್ತದೆ ಎಂಬುದೇ ಆಗಿದೆ. ಉತ್ಪಾದನಾ ಚಟುವಟಿಕೆಗಳ ಮಾರುಕಟ್ಟೆಯಲ್ಲಿ ಮಹಿಳೆಯರ ಶ್ರಮಕ್ಕೆ ಬೇಡಿಕೆ ಇಲ್ಲದಿರುವುದರಿಂದ ಅವರು ಕೌಟುಂಬಿಕ ದುಡಿಮೆಯಲ್ಲಿ, ಸಂತಾನೋತ್ಪತ್ತಿ ಮತ್ತು ಸಂಗೋಪನಾ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ ಎಂಬುದೇ ಆಗಿದೆ.[೧೨] ಈ ಹಿನ್ನೆಲೆಯಲ್ಲಿ ಚುನಾಯಿತ ಮಹಿಳೆಯರ ವಿವಿಧ ರೀತಿಯ ಆದಾಯದ ಮೂಲಗಳನ್ನು ಕೆಳಗಿನ ಕೋಷ್ಟಕಗಳ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ಕೋಷ್ಟಕ ೪೦

ಚುನಾಯಿತ ಮಹಿಳೆಯರ ಸ್ಥಿರಾಸ್ತಿಗಳ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಜಮೀನು ಇದೆ	೯೭	೬೪.೨೩	೭೦	೫೦.೭೨
೨	ಇಲ್ಲ	೫೪	೩೫.೭೭	೬೮	೪೯.೨೮
	ಒಟ್ಟು	೧೫೧	೧೦೦	೧೩೮	೧೦೦

ಸ್ಥಿರಾಸ್ಥಿ ಹೊಂದಿರುವ ಚುನಾಯಿತ ಮಹಿಳೆಯರು ಸಂಡೂರು ತಾಲ್ಲೂಕು ಗ್ರಾಮಪಂಚಾಯ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರ ಸಂಖ್ಯೆ ೯೭ ಇದ್ದು ಶೇ.೬೪.೨೩ ರಷ್ಟಿದೆ. ಇಲ್ಲದವರ ಸಂಖ್ಯೆ ೫೪ ಆಗಿದ್ದು ಶೇ.೩೫.೭೭ ರಷ್ಟಿದೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಚುನಾಯಿತ ಮಹಿಳೆಯರು ಜಮೀನು ಹೊಂದಿರುವ ಸಂಖ್ಯೆ ೭೦ ಆಗಿದ್ದು ಶೇಕಡಾ ೫೦.೭೨ ರಷ್ಟಿದೆ. ಇಲ್ಲದವರ ಸಂಖ್ಯೆ ೬೮ ಇದ್ದು, ಶೇ.೪೯.೨೮ ರಷ್ಟಿರುವುದು ಕಂಡುಬರುತ್ತದೆ.

ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಿಂದ ಆಯ್ಕೆಯಾದ ಸದಸ್ಯೆಯರಲ್ಲಿ ಹೆಚ್ಚಿನವರು ಅರ್ಧದಿಂದ ಒಂದು ಎಕರೆ ಹಾಗೂ ೨ ರಿಂದ ೫ ಎಕರೆವರೆಗೆ ಸಾಮಾನ್ಯವಾಗಿ ಸ್ಥಿರಾಸ್ತಿಯನ್ನು ಹೊಂದಿದವರಾಗಿದ್ದಾರೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಆಯ್ಕೆಯಾದವರಲ್ಲಿ ಹೆಚ್ಚಿನವರು ದುರ್ಬಲ ಭೂರಹಿತ ಕುಟುಂಬಗಳಿಂದ ಬಂದವರಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಕೃಷಿ ಕೂಲಿಯನ್ನು ಅವಲಂಬಿಸಿರುವುದು ಕಂಡುಬಂದಿದೆ. ಇಷ್ಟೆಲ್ಲ ಭಾಗವಹಿಸುವಿಕೆ ಇದ್ದರೂ, ಮಹಿಳೆಯ ಈ ದುಡಿಮೆಯನ್ನು ಪರಿಮಾಣಾತ್ಮಕವಾಗಿ ಹಣದ ರೂಪದಲ್ಲಿ ಅಳೆಯಲಾಗುವುದಿಲ್ಲ.

ಕುಟುಂಬದ ಹಿತಾಸಕ್ತಿಗಳನ್ನು ಮಾತ್ರ ಸೀಮಿತಗೊಳಿಸುವ ಸಂಗೋಪನಾವಾದಿಯಾದ ದುಡಿಮೆಯೆಂದು ಭಾವಿಸಲಾಗುತ್ತದೆ. ಸ್ವಂತ ಅನುಭೋಗಕ್ಕೆ ಸಂಬಂಧಿಸಿದಂತೆ ನಡೆಯುವ ಇಂತಹ ಉತ್ಪಾದನಾ ಚಟುವಟಿಕೆಗಳನ್ನು ಅರ್ಥಶಾಸ್ತ್ರವು ಕೂಡ ದುಡಿಮೆಯೆಂದು ಭಾವಿಸುವುದಿಲ್ಲ. ಮುಂದಿನ ಕೋಷ್ಟಕದಲ್ಲಿ ಮಹಿಳೆಯ ವರಮಾನದ ನೆಲೆಗಳನ್ನು ಈ ಹಿನ್ನೆಲೆಯಲ್ಲಿಯೇ ನೋಡಬಹುದೆನಿಸುತ್ತದೆ.

ಕೋಷ್ಟಕ ೪೧

ಚುನಾಯಿತ ಮಹಿಳೆಯರ ಆದಾಯ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಮನೆಗೆಲಸ	೬೭	೪೪.೩೭	೩೧	೨೨.೪೬
೨	ಸ್ವಂತ ಕೃಷಿ	೩೬	೨೩.೮೪	೩೩	೨೩.೯೧
೩	ಕೂಲಿ	೩೫	೨೩.೧೭	೫೮	೪೨
೪	ಇತರೆ	೧೩	೮.೬೦	೧೬	೧೧.೫೯
	ಒಟ್ಟು	೧೫೧	೧೦೦	೧೩೮	೧೦೦

ಸಂಡೂರು ತಾಲೂಕು ಗ್ರಾಮಪಂಚಾಯ್ತಿಯಲ್ಲಿ ಮನೆಗೆಲಸ ಮಾಡುವ ಮಹಿಳೆಯರು ಶೇ.೪೪.೩೭ ರಷ್ಟಿದ್ದಾರೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಶೇಕಡ ೨೨.೪೭ ರಷ್ಟಿದ್ದಾರೆ. ಮಹಿಳೆಗೆ ಮೂರು ಬಗೆಯ ದುಡಿಮೆಗಳನ್ನು ಆರೋಪಿಸಲಾಗಿದೆ. ಅದರಲ್ಲಿ ಸಂತಾನೋತ್ಪತ್ತಿ ದುಡಿಮೆ ಮೊದಲನೆಯದಾದರೆ ಮನೆವಾರ್ತೆ ದುಡಿಮೆ ಎರಡನೆಯದು. ಇದನ್ನು ಸಂಭಾವನೆ ರಹಿತ ದುಡಿಮೆ ಎಂದು ಪರಿಗಣಿಸಲಾಗಿದೆ. ಏಕೆಂದರೆ ಈ ದುಡಿಮೆಗೆ ಮಾರುಕಟ್ಟೆ ವ್ಯಾಪ್ತಿ ಇಲ್ಲ. ಕೌಟಂಬಿಕ ಉಪಯುಕ್ತತೆ ಮಾತ್ರ ಇದೆ. ಗಂಡ, ಮಕ್ಕಳ ಸೇವೆಯ ಜೊತೆಗೆ ಆಳುಕಾಳುಗಳ ಸೇವೆಯನ್ನು ಸ್ತ್ರೀಯರು ಮಾಡಬೇಕಾಗುತ್ತದೆ. ಹಾಗೆ ನೋಡಿದರೆ ಈ ಮನೆವಾರ್ತೆಯ ದುಡಿಮೆ ಯಾವ ಉತ್ಪಾದನಾ ಚಟುವಟಿಕೆಗಿಂತಲೂ ಕಡಿಮೆಯಾದುದಲ್ಲ. ಇಲ್ಲಿ ಹೆಚ್ಚಿನವರು ಮನೆವಾರ್ತೆಗೆ ಸಂಬಂಧಿಸಿದ ಗೃಹಿಣಿಯರಾಗಿರುವುದು ಕಂಡುಬರುತ್ತದೆ. ಇದೇ ಮನೆಗೆಲಸಕ್ಕೆ ಆಳುಕಾಳುಗಳನ್ನು ಹಚ್ಚಿದರೆ ಕೂಲಿ ಕೊಡಬೇಕಾಗುತ್ತದೆ. ಅಂದರೆ ಗೃಹಿಣಿಗೆ ಉತ್ಪದಾನಾ ರಹಿತವಾದಂತಹ ದುಡಿಮೆಯು ಹೆಣ್ಣಾಳಿಗೆ ಆರ್ಥಿಕ ಮೂಲವಾಗುವುದು ವಿಚಿತ್ರವಾದರೂ ಕುತೂಹಲಕಾರಿ ಎನಿಸುತ್ತದೆ. ಮಹಿಳೆಯು ಈ

ವರಮಾನದ ಹಿನ್ನೆಲೆಗಳನ್ನು ಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಅವರು ಗ್ರಹಿಸುವ ರೀತಿ ಮಹಿಳೆಯ ಸಾಂಸ್ಕೃತಿಕ ಸ್ಥಾನಮಾನಗಳ ದೃಷ್ಟಿಯಿಂದ ತುಂಬ ಮಹತ್ವದ್ದು. ತುಂಬಾ ಮುಖ್ಯವಾಗಿ ಮಹಿಳೆಯ ಅಭಿವೃದ್ಧಿ ಮಾದರಿಗಳನ್ನು ರಾಜಕೀಯಾರ್ಥಿಕ(Political Economy)ನೆಲೆಯಿಂದ ಗ್ರಹಿಸುತ್ತಾರೆ. ಅಭಿವೃದ್ಧಿ ಪ್ರಕ್ರಿಯೆಯು ಸಮಾಜದ ಚೌಕಟ್ಟಿನೊಳಗೇ ನಡೆಯುವುದರಿಂದ ಅದು ಸಾಮಾಜಿಕತೆಯಿಂದ ಪ್ರತ್ಯೇಕವಿರಲು ಸಾಧ್ಯವಿಲ್ಲ ಎಂಬುದು ಅವರು ಅಭಿಮತ. ಹೀಗಾಗಿ ಅವರ ಉಪಕರಣವಾದಿ ಅಭಿವೃದ್ಧಿ ಮೀಮಾಂಸೆಯನ್ನು ಒಪ್ಪುವುದಿಲ್ಲ. ವರಮಾನದ ಉತ್ಪನ್ನಗಳ ಸಂವರ್ಧನೆಗಾಗಿಯೇ ಅಕ್ಷರ ಜ್ಞಾನ, ಆರೋಗ್ಯ ಭಾಗ್ಯ, ಸ್ವಾತಂತ್ರ್ಯಗಳು ಮುಖ್ಯವಾಗುವುದನ್ನು ಸೇನ್ ಪುರಸ್ಕರಿಸುವುದಿಲ್ಲ. ಯಾಕೆಂದರೆ ವರಮಾನ ಉತ್ಪನ್ನಗಳೇ ಮುಖ್ಯವಾಗಿ, ಜನರು ಅನುಷಂಗಿಕವಾದರೆ ಜನಮುಖಿ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಏಕಾಕಾರವಾದ ಮತ್ತು ಲಿಂಗಸಂಬಂಧಿ ವಿಭಜನೆಗಳನ್ನು ಪುರುಸ್ಕರಿಸುವ ಇಂಥ ಅಭಿವೃದ್ಧಿ ಮೀಮಾಂಸೆಗಳು ವಿಶೇಷವಾಗಿ ಮಹಿಳೆಯರನ್ನು ಅಭಿವೃದ್ಧಿಯ ನಿಯೋಗಿಗಳನ್ನಾಗಿ ಒಪ್ಪುವುದಿಲ್ಲ. ಮತ್ತು ಅವರ ದುಡಿಮೆಯನ್ನು ದುಡಿಮೆಯೆಂದು ಪರಿಗಣಿಸುವುದಿಲ್ಲ. ಒಟ್ಟಾರೆ ಮಹಿಳಾ ಹಿತಾಸಕ್ತಿಗಳನ್ನು ಅದು ನಿರ್ಲಕ್ಷ್ಯಕ್ಕೆ ಒಳಗಾಗಿಸುತ್ತದೆ ಎಂದು ಹೇಳುತ್ತಾರೆ.

ವರಮಾನದ ಇರುವಿಕೆ ಮತ್ತು ಇಲ್ಲದಿರುವಿಕೆಗಿಂತ ಜನರಿಗೆ ಬಳಕೆ ಸಂಪನ್ಮೂಲಗಳ ಮೇಲೆ ಇರುವ ಅಧಿಕಾರ ಹಕ್ಕು(Entitlements)ಮತ್ತು ಅವುಗಳನ್ನು ತನ್ನದಾಗಿಸಿಕೊಳ್ಳಬಲ್ಲ ಸಾಮರ್ಥ್ಯ-ಸ್ವಾತಂತ್ರ್ಯ ಸಂಗ್ರಹಾಧಿಕಾರ ಮಹಿಳೆಗೆ ಇರಬೇಕು. ಸಂಪನ್ಮೂಲದ ಇರುವಿಕೆಗಿಂತ ಅದರ ಮೇಲೆ ಜನತೆ ಅಥವಾ ಮಹಿಳೆ ಸಾಧಿಸುವ ಸ್ವಾಮ್ಯತ್ವ ಮುಖ್ಯವಾದದ್ದು. ಬದುಕುವ ಅವಕಾಶಗಳ ವರ್ಧನೆ ವಿಸ್ತರಣೆಯನ್ನು ಸೇನ್ ಅವರು ಅಭಿವೃದ್ಧಿ ಎನ್ನುತ್ತಾರೆ. ತುಂಬಾ ಸರಳವಾಗಿ ಹೇಳುವುದಾದರೆ ಜನರ ಬದುಕು ಉತ್ತಮವಾಗುವ ಪ್ರಕ್ರಿಯೇ ಅಭಿವೃದ್ಧಿ. ಬದುಕುವ ಅವಕಾಶಗಳ ವರ್ಧನೆ, ವಿಸ್ತರಣೆಯೆಂದರೆ ಕೇವಲ ವರಮಾನದ ವರ್ಧನೆಯಲ್ಲ.[೧೩] ಆರ್ಥಿಕ ಸುಭದ್ರತೆ ಮನುಷ್ಯನನ್ನು ಸ್ವಾಲಂಬಿಯಾಗಿಸುತ್ತದೆ ಎನ್ನುವ ಮಾತುಗಳನ್ನು ಇಂಥಲ್ಲಿ ಮರು ಪರಿಶೀಲನೆಗೆ ಒಳಗು ಮಾಡಬೇಕಾಗುತ್ತದೆ. ಚುನಾಯಿತ ಮಹಿಳೆಯರಿಗೆ ತಾಂತ್ರಿಕವಾಗಿ ಅಧಿಕಾರ ಸಿಕ್ಕಿದೆ. ಹಲವಾರು ಯೋಜನೆಗಳ ಗುಚ್ಛವು ಅವರ ಮುಂದಿದೆ. ದುರಂತವೆಂದರೆ ಅದನ್ನು ಬಳಸಿಕೊಳ್ಳುವ, ಅನುಷ್ಠಾನ ಗೊಳಿಸುವ ಶಕ್ತಿ ಅವಳಲ್ಲಿ ಇಲ್ಲದಿರುವುದು ನನ್ನ ಅಧ್ಯಯನ ಸಂದರ್ಭದಲ್ಲಿ ಎದ್ದುಕಾಣುತ್ತದೆ.

ಹೊಸಪೇಟೆ ಮತ್ತು ಸಂಡೂರು ತಾಲ್ಲೂಕಿನ ಗ್ರಾಮಪಂಚಾಯ್ತಿಗಳನ್ನು ಅಭ್ಯಸಿಸಲು ಹೋದಾಗ ಸ್ವಂತ ಕೃಷಿ ಮಾಡುವ ಮಹಿಳಾ ಸದಸ್ಯರು ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೨೩.೯೧ ರಷ್ಟಿದ್ದಾರೆ. ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೨೩.೮೪ ರಷ್ಟಿರುವುದು

ಕಂಡುಬರುತ್ತದೆ. ಈ ವರಮಾನವು ನೇರ ಕುಟುಂಬಕ್ಕೆ ಸಂಬಂಧಿಸಿರುವುದರಿಂದ, ಮಹಿಳೆಗೇ ನೇರವಾಗಿ ದಕ್ಕುವುದಿಲ್ಲ. ಕೂಲಿ ಮಾಡುವವರ ಸಂಖ್ಯೆ ಸಂಡೂರು ತಾಲ್ಲೂಕಿನಲ್ಲಿ ಶೇ.೨೩.೧೭ ರಷ್ಟಿದ್ದರೆ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಶೇ.೪೨ ರಷ್ಟಿದೆ. ಇತರೆ ಕೆಲಸ ಮಾಡಿಕೊಂಡು ಬದುಕು ಸಾಗಿಸುವವರ ಸಂಖ್ಯೆ ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ. ೧೧.೫೯ ರಷ್ಟಿದ್ದರೆ, ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೮.೬೬ರಷ್ಟಿರುವುದು ಕಂಡುಬರುತ್ತದೆ. ಕೂಲಿ ಮತ್ತು ಹಣ್ಣುಹಂಪಲು ಸರಾಯಿ ಮಾರಾಟಗಳಂತಹ ಇತರೆ ಕೆಲಸಗಳನ್ನು ಮಾಡಿ ಬದುಕುವವರ ಸಂಖ್ಯೆ ಹೊಸಪೇಟೆ ತಾಲೂಕಿನಲ್ಲಿಯೇ ಜಾಸ್ತಿಯಿದೆ. ತೀರ ಹಿಂದುಳಿದ ಮತ್ತು ಬಡತನ ಕುಟುಂಬಗಳಿಂದ ಬಂದ ಸದಸ್ಯೆಯರೇ ಜಾಸ್ತಿ ಇರುವುದು ಇದಕ್ಕೆ ಕಾರಣವಾಗಿದೆ.

ಎರಡೂ ತಾಲೂಕಿನ ಗ್ರಾಮಪಂಚಾಯತಿಗಳನ್ನು ಅಧ್ಯಯನ ಮಾಡಿದಾಗ ಕೂಲಿ ಕೆಲಸ ಮಾಡುವವರ ಮಾಸಿಕ ವರಮಾನ ರೂ.೪೫೦ ರಿಂದ ರೂ.೬೦೦ ಆದರೆ, ವಾರ್ಷಿಕ ವರಮಾನ ಸುಮಾರು ರೂ.೫,೦೦೦ ದಿಂದ ರೂ.೭,೦೦೦ದವರೆಗೆ ಇರುವುದು ಕಂಡುಬರುತ್ತದೆ. ಇತರೆ ಕೆಲಸಗಳು ಅಂದರೆ ಪುಟ್ಟಿ ಮಾರಾಟ, ಸರಾಯಿ ಮಾರಾಟ, ಹೈನುಗಾರಿಕೆ, ಋತುಸಂಬಂಧಿ ಕೆಲಸಗಳಾದ ಬೇವಿನ ಬೀಜ ಆರಿಸುವುದು, ಹುಣಿಸೆ ಹಣ್ಣಿನ ಸಿಪ್ಪೆ ಬಿಡಿಸುವುದು ಇತ್ಯಾದಿ ಕೆಲಸಗಳನ್ನು ಚುನಾಯಿತ ಮಹಿಳೆಯರು ನಿರ್ವಹಿಸುವುದು ಕಂಡುಬರುತ್ತದೆ. ಇವರ ಮಾಸಿಕ ವರಮಾನ ರೂ.೩೦೦ ರಿಂದ ೪೫೦ ಆದರೆ, ವಾರ್ಷಿಕ ವರಮಾನ ಸುಮಾರು ರೂ.೩,೬೦೦ ರಿಂದ ರೂ.೫,೦೦೦ ಇರುವುದು ಕಂಡುಬರುತ್ತದೆ.

ಹೌಬ-ಹೌಸ್ ಅವರು ತಮ್ಮ ಗ್ರಂಥ Morals in Evoloution ದಲ್ಲಿ 'ಮಹಿಳೆಯ ದುಡಿತಕ್ಕೆ ಬಡತನವೊಂದೇ ಮೂಲ ಕಾರಣ'[೧೩] ಎಂದು ಹೇಳಿರುವ ಮಾತು ಸಮಂಜಸವೆನಿಸುತ್ತದೆ. ಇಲ್ಲಿ ಮಹಿಳೆಯು ನೇರ ದುಡಿಮೆಗಾರಳಾಗಿದ್ದರೂ ಆಕೆಯ ಉತ್ಪಾದನಾ ಕ್ಷಮತೆಯೂ ಕೆಳಮಟ್ಟದಲ್ಲಿಯೇ ಸ್ವೀಕೃತವಾಗುವುದು ಕಂಡುಬರುತ್ತದೆ. ಆದೆ ರೀತಿ ಮಹಿಳೆಗೆ ರಾಜಕೀಯ ಅಧಿಕಾರ ದೊರೆತಿದ್ದರೂ ರಾಜಕೀಯ ಭಾಗವಹಿಸುವಿಕೆಯ ಮಟ್ಟ ಕ್ರಿಯಾಶೀಲವಾಗಿಲ್ಲದಿರುವುದೂ ಗೋಚರವಾಗುತ್ತದೆ. ಈ ಎಲ್ಲಾ ಗುಂಪುಗಳಲ್ಲಿರುವ ಮಹಿಳೆಯರ ಭಾಗವಹಿಸುವಿಕೆಯೂ ಪ್ರಾಸಂಗಿಕವಾಗಿರುವುದು ಕಂಡುಬರುತ್ತದೆ.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಎಲ್ಲರೂ ಮಹಿಳೆಯರೇ ಆಗಿದ್ದರೂ ಅವರವರ ವರಮಾನ ಮತ್ತು ಆದ್ಯತಾವಲಯಗಳು ಜವಾಬ್ದಾರಿಗಳು ಭಿನ್ನವಾಗಿರುವುದು. ಮನೆವಾರ್ತೆಯ ಮಹಿಳೆಯರಿಗೆ ಹೋಲಿಸಿಕೊಂಡರೆ ಕೆಳವರ್ಗದ ಮಹಿಳೆಯರ ಬದುಕು ತುಂಬ ಸಂಕೀರ್ಣವಾದದ್ದಾಗಿ

ಕಾಣುತ್ತದೆ. ಈಕೆಗೆ ಮನೆವಾರ್ತೆಯ ಮಹಿಳೆಗಿರುವ ಅವಕಾಶ ಮತ್ತು ಆಯ್ಕೆಗಳಿರುವುದಿಲ್ಲ. ಕೆಳಜಾತಿ ವರ್ಗಗಳ ಸದಸ್ಯೆಯರಿಗೆ ಕೂಲಿಕೆಲಸ ಅನಿವಾರ್ಯ. ಅವಳ ಬದುಕಿನಲ್ಲಿ ಆಯ್ಕೆಗಳೇ ಇರುವುದಿಲ್ಲ. ದುಡಿಮೆ ಸಂತಾನ ಮತ್ತು ಮನೆಗೆಲಸ ಮೂರು ಅವಳಿಗೆ ಅನಿವಾರ್ಯ. ಯಾವುದರಿಂದಲೂ ಬಿಡುಗಡೆ ಇಲ್ಲ. ಈ ಮಧ್ಯ ತನ್ನ ಮೇಲೆ ನಡೆಯುವ ಲೈಂಗಿಕ ಹಿಂಸೆಗಳನ್ನು ಮಾನ ಅವಮಾನಗಳೂ ಅವಳಿಗೆ ಬಿಡಲಾರದ ತುತ್ತುಗಳು. ಆದರೂ ಯಾವ ರೀತಿ ವರಮಾನ ಮತ್ತು ಆಯ್ಕೆಗಳಿದ್ದರೂ ಅವಳು ಪುರುಷಶಾಹಿ ವ್ಯವಸ್ಥೆಯೊಳಗೆ ಬದುಕಬೇಕಾದ ಅನಿವಾರ್ಯತೆ ಇದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತುಂಬಾ ಬದಲಾಣೆಗಳು ಆಗುತ್ತಿದ್ದರೂ ಮನೆ ವಾರ್ತೆಯು ಮಾತ್ರ ಮಹಿಳೆಗೆ ಅನಿವಾರ್ಯವಾಗಿದೆ. ಇದಕ್ಕೆ ಪುರುಷಶಾಹಿಯೂ ಕಾರಣವಾಗಿದೆ. ಸಂಗೋಪನೆ ಮತ್ತು ಪುರುಷಶಾಹಿ ಜವಾಬ್ದಾರಿಯೂ ಮಹಿಳೆಗೆ ಸೀಮಿತವಾಗಿರುವುದರಿಂದ ಮಹಿಳೆಯು ದುಡಿದರೂ ಉತ್ಪಾದನಾ ಕ್ಷಮತೆಯು ಕೆಳಮಟ್ಟದಲ್ಲಿಯೇ ಅಂಗೀಕೃತವಾಗುತ್ತದೆ.

ಚುನಾಯಿತ ಮಹಿಳೆಯರು ತಮ್ಮ ಬದುಕಿಗಾಗಿ ಹೀಗೆ ಹಲವಾರು ರೀತಿಯ ದುಡಿಮೆಯ ಕ್ರಮಗಳನ್ನು ವರಮಾನ ಸಂವರ್ಧನೆಯ ದಾರಿಗಳನ್ನು ಕಂಡುಕೊಂಡಿದ್ದರು. ಪರುಷನಿಗಿಂತ ಹೆಚ್ಚಿನ ಜವಾಬ್ದಾರಿಗಳನ್ನು ಹೊತ್ತಿದ್ದರೂ ತಮ್ಮ ಬದುಕನ್ನು ಆರೋಗ್ಯವನ್ನು ಉತ್ತಮಪಡಿಸಿಕೊಳ್ಳುವಲ್ಲಿ, ಬಹಳ ಹಿಂದೆ ಬಿದ್ದಿದ್ದಾರೆ. ಯಾವ ರೀತಿಯ ಸ್ವಾತಂತ್ರ್ಯವನ್ನು ನಾವು ಅವರಲ್ಲಿ ಕಾಣುವುದಿಲ್ಲ. ಕೆಲ ಮಹಿಳೆಯರು ಸಾರ್ವತ್ರಿಕ ಮಟ್ಟದಲ್ಲಿ ಸ್ವಾವಲಂಬಿಯಾಗಿ ಕೆಲಸ ಮಾಡವಂತೆ ಕಂಡರೂ ಖಾಸಗಿಯಾಗಿ ಪುರುಷ ಪ್ರಧಾನವಾದ ಮತ್ತು ಸಾರ್ವತ್ರಿಕವಾದ ಎರಡೂ ಸ್ತರಗಳಲ್ಲಿ ಪುರುಷ ಶಾಹಿಯ ಆಘಾತಕ್ಕೆ ಒಳಗಾಗಬೇಕಾದ ಪ್ರಮೇಯವಿರುತ್ತದೆ.

ಮಾನವಮುಖಿ ಅಭಿವೃದ್ಧಿ ಬಯಸುವ ವಿಕೇಂದ್ರೀಕರಣ ವ್ಯವಸ್ಥೆಯು ಫಲಕಾರಿಯಾಗಬೇಕೆಂದರೆ ಕಾನೂನುಗಳ ಮೂಲಕ ರಾಜ್ಯಭಾರ ಮಾಡದೆ ಕಾನೂನುಗಳು ಅನುಷ್ಠಾನಕ್ಕೆ ಮತ್ತ ಆಚರಣೆಗೆ ಬೇಕಾಗುವ ಮಾನಸಿಕ ಮತ್ತು ದೈಹಿಕ ಜಾಗೃತಿಯನ್ನು ಜನರಲ್ಲಿ ಉಂಟು ಮಾಡಬೇಕಿದೆ. ಆಯ್ಕೆಯಾದ ಬಹಳಷ್ಟು ಮಹಿಳೆಯರು ದುಡಿಯುವವರಾದರೂ ಅವಕಾಶಗಳನ್ನು ತನ್ನ ಮತ್ತು ತನ್ನ ಜನರಿಗೆ ಮುಟ್ಟಿಸದಷ್ಟು ಮಾನಸಿಕ ದುರ್ಬಲತೆಯನ್ನು ಹೊಂದಿದ್ದಾರೆ. ಇಂಥ ಆಯ್ಕೆ ಮತ್ತು ಅವಕಾಶಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ ಮಹಿಳಾ ಸದಸ್ಯೆಯರಿಗೆ ಮುಕ್ತವಾಗಿ ಸಿಗುವಂತಾಗಬೇಕು. ಬರೀ ವರಮಾನದಿಂದಲೇ ಅಧಿಕಾರದಿಂದಲೇ ಅವರ ಬದುಕು ಉನ್ನತವಾಗುತ್ತದೆನ್ನುವುದು ಸಾಧುವಲ್ಲ. ಅವರ ರಾಜಕೀಯ ಭಾಗವಹಿಸುವಿಕೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳೂ ತುಂಬಾ ಪ್ರಮುಖ

ವಾದಂಥವು. ಬದುಕುವ ಸಾಮರ್ಥ್ಯವನ್ನು ಅವಕಾಶಗಳನ್ನು ವಿಸ್ತರಿಸುವುದರಿಂದ ಅದನ್ನು ಉಪಯೋಗಿಸಿಕೊಳ್ಳುವ ಮನೋಧರ್ಮವನ್ನು ಬೆಳೆಸುವುದರಿಂದ ಮಾತ್ರ ನಾವು ತಳಮಟ್ಟದಲ್ಲಿ ವಿಕೇಂದ್ರೀಕರಣದ ಅರ್ಥಪೂರ್ಣ ಅನುಷ್ಠಾನ ಮಾತ್ರ ಆಚರಣೆಯನ್ನು ಕಾಣಬಹುದಾಗಿದೆ.

ಚುನಾಯಿತ ಮಹಿಳಾ ಸದಸ್ಯೆಯರ ಮೇಲೆ ಗಂಡನ ವರಮಾನವು ಬಹಳ ಪ್ರಭಾವ ಬೀರುತ್ತದೆ. ಲಿಂಗಾಧಾರಿತ ಶ್ರಮವಿಭಜನೆಯ ಸಂಗತಿಗಳು ಪುರುಷರ ಪರಮಾಧಿಕಾರ ಮತ್ತು ಸಂಪನ್ಮೂಲಗಳ ಮೇಲಿನ ಹಿಡಿತವನ್ನು ಅಭೇದ್ಯವಾಗಿ ಉಳಿಯುವಂತೆ ಮಾಡುತ್ತಿವೆ. ಮಹಿಳೆಯರ ಗಳಿಕೆಯು ಪುರುಷರ ಗಳಿಕೆಗಿಂತ ಕಡಿಮೆಯಿರುವುದರಿಂದ ವ್ಯವಹಾರ ವಹಿವಾಟುಗಳಲ್ಲಿ ಆಕೆಯ ಪಾಲು ಕ್ವಚಿತ್ತಾಗಿರುವುದರಿಂದ ಸಮಾಜದಲ್ಲಿ ಅವಳ ಸ್ಥಾನಮಾನವು ತೀರ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಮನೆಯ ಹೊರಗೆ ದುಡಿಯುವ ಹೆಣ್ಣು ಕುಟುಂಬದ ಪುರುಷ ಸದಸ್ಯರಿಗೆ ಸಮನಾದ ಗಳಿಕೆಯನ್ನು ತಂದರೂ ಕೇವಲ ಕುಟುಂಬದ ವರಮಾನವಾಗಿ ಕಾಣುತ್ತದೆ. ಅದರ ವಿನಿಯೋಜನೆಯ ಮೇಲೆ ಆಕೆಗೆ ಯಾವ ಹಕ್ಕೂ ಇರುವುದಿಲ್ಲ. ಕಾರಣ ಹಣಕಾಸು ವ್ಯವಹಾರವು ಪುರುಷನ ಚಟುವಟಿಕೆಯಾಗಿರುವುದು. ಹೀಗಾಗಿ ಆಯ್ಕೆಯಾದ ಮಹಿಳಾ ಸದಸ್ಯೆಯರ ಸ್ಥಾನಮಾನಗಳು ಕೌಟುಂಬಿಕವಾಗಿ ಮತ್ತು ಸಾಮಾಜಿಕವಾಗಿ ಯಾವುದೇ ರೀತಿಯ ಬದಲಾವಣೆಗಳಿಗೆ ಒಳಗಾಗದಿರುವುದನ್ನು ಕಾಣುತ್ತೇವೆ. ಆಯ್ಕೆಯಾದ ತಕ್ಷಣ ಅವರ ಸ್ಥಾನ, ಸಾಮಾಜಿಕ ಸ್ಥಾನಮಾನಗಳು ಉತ್ತಮವಾಯಿತೆಂದು ಭಾವಿಸಲಾಗುವುದಿಲ್ಲ. ಸ್ಥಿತಿಗತಿಯು (Conditions) ಊಟ ಉಡಿಗೆಗೆ ಸಂಬಂಧಿಸಿದ್ದರೆ, ಅವರ ರಾಜಕೀಯ ಸ್ಥಾನಮಾನವು(Status) ಸ್ವಾತಂತ್ರ, ಸ್ವಾವಲಂಬನೆ, ನಿರ್ಣಯ ಸ್ವಾತಂತ್ರ್ಯ, ಹಣಕಾಸು ವ್ಯವಹಾರದ ನಿರ್ವಹಣೆ ಹಾಗೂ ಸಾರ್ವಜನಿಕ ಬದುಕಿನ ಉತ್ತಮಿಕೆಗೆ ಸಂಬಂಧಿಸಿದುದಾಗಿರುತ್ತದೆ. ಎಲ್ಲಿ ಸದಸ್ಯೆಗೆ ನಿರ್ಧಾರದ ಸ್ವಾತಂತ್ರ್ಯ, ಸಹಭಾಗಿತ್ವದ ಆಸಕ್ತಿ ಇರುವುದಿಲ್ಲವೋ ಅಲ್ಲಿ ಅವಳ ಪ್ರತಿನಿಧಿತ್ವ ಮತ್ತು ವರಮಾನ ಅಪ್ರಧಾನವಾಗಿರುತ್ತದೆ. ಹೀಗಾಗಿ ಗ್ರಾಮಪಂಚಾಯಿತಿ ಮಟ್ಟದ ಮಹಿಳಾ ಸದಸ್ಯರು ಅಪ್ರಧಾನ ಗಳಿಕೆ ದಾರರಾಗಿ ಸ್ಥಾನಮಾನದಲ್ಲಿ ನಗಣ್ಯರಾಗಿ, ಚಲನೆ, ಸಂಚಲನೆ ರಹಿತರಾಗಿ ಉಳಿದಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯ ಎಲ್ಲಿ ಇರುವುದಿಲ್ಲವೋ ಅಲ್ಲಿ ಅಭಿವೃದ್ಧಿಯನ್ನು ನಿರೀಕ್ಷಿಸಲಾಗುವುದಿಲ್ಲ.

ಅಮರ್ತ್ಯಸೇನ್ ಹೇಳುವಂತೆ 'ಸ್ವಾತಂತ್ರ್ಯವೇ ಅಭಿವೃದ್ಧಿ' ಅವರ ಪ್ರಕಾರ ಸ್ವಾತಂತ್ರ್ಯವು ಅಭಿವೃದ್ಧಿಯ ಅವಿಭಾಜ್ಯ ಅಂತರ್ಗತ ಭಾಗವಾಗಿದೆ. ಅವರು ಸ್ವಾತಂತ್ರ್ಯವನ್ನು ಅಂತಸ್ಸಾಧಿ ಗುಣವಾಗಿ ಪರಿಭಾವಿಸುತ್ತಾರೆ. ಆದರೆ ವಿಚಿತ್ರವೆಂದರೆ ಹೆಚ್ಚಿನ ಮಹಿಳಾ ಸದಸ್ಯರು ಸ್ವಾತಂತ್ರ್ಯರಹಿತರಾಗಿ ಪರಾವಲಂಬಿಗಳಾಗಿ ಕಂಡುಬರುತ್ತಾರೆ. ಕೆಳಗಿನ ಕೋಷ್ಟಕದಲ್ಲಿ ಪತಿಯ ವರಮಾನವು ಚುನಾಯಿತ

ಮಹಿಳೆಯರ ಸ್ಥಾನಮಾನಗಳ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತದೆಂಬುದನ್ನು ಗಮನಿಸಬಹುದಾಗಿದೆ.

ಕೋಷ್ಟಕ ೪೨

ಚುನಾಯಿತ ಮಹಿಳೆಯರ ಪತಿಯ ಉದ್ಯೋಗದ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಸ್ವಂತ ಕೃಷಿ	೫೪	೩೫.೭೬	೪೩	೩೧.೧೫
೨	ಕೂಲಿ	೨೭	೧೭.೮೮	೪೪	೩೧.೮೮
೩	ಕುಲಕಸುಬು	೮	೫.೨೯	೨	೧.೪೪
೪	ಗಣಿಗೆಲಸ	೩	೧.೯೮	೩	೨.೧೭
೫	ಖಾಸಗಿ ಕೆಲಸ	೨೭	೧೭.೮೮	೧೯	೧೩.೭೬
೬	ಸರ್ಕಾರಿ ಕೆಲಸ	೨೧	೧೩.೯೦	೪	೨.೮೯
೭	ವಿಧವೆ ಮತ್ತು ಲೇಸಿಯರು	೧೧	೭.೨೮	೨೩	೧೬.೬೬
ಒಟ್ಟು		೧೫೧	೧೦೦	೧೩೮	೧೦೦

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಸ್ವಂತ ಕೃಷಿ ಹೊಂದಿರುವ ಪುರುಷರು ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೩೫.೭೬ ರಷ್ಟು, ಕೂಲಿ ವರಮಾನ ಹೊಂದಿರುವ ಪುರುಷರು ಶೇ.೧೭.೮೮ ರಷ್ಟು, ಕುಲಕಸುಬಿನ ಮೂಲದ ವರಮಾನ ಹೊಂದಿರುವವರು ಶೇ.೫.೨೯ ರಷ್ಟು, ಗಣಿ ಕೆಲಸದಿಂದ ವರಮಾನ ಪಡೆಯುತ್ತಿರುವವರು ಶೇ.೧.೯೮ ರಷ್ಟು, ಖಾಸಗಿ ಕೆಲಸದಿಂದ ವರಮಾನ ಪಡೆಯುತ್ತಿರುವವರು ಶೇ.೧೭.೮೮ ರಷ್ಟು, ಸರ್ಕಾರಿ ಕೆಲಸದಲ್ಲಿರುವವರು ಶೇ.೧೩.೯೦ ರಷ್ಟು ಇರುವುದು ಕಂಡುಬರುತ್ತದೆ. ಗಂಡನ ವರಮಾನ ಇಲ್ಲದಿರುವ ವಿಧವೆ ಮತ್ತು ಲೇಸಿಯರು ಶೇ. ೭.೨೮ ರಷ್ಟಿದ್ದಾರೆ. ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಸ್ವಂತ ಕೃಷಿ ಹೊಂದಿರುವ ಪುರುಷರು ಶೇ.೩೧.೧೫, ಕೂಲಿ ಶೇ.೩೧.೮೮, ಕುಲಕಸುಬು ಶೇ.೧.೪೪, ಗಣಿಗೆಲಸ ಶೇ.೨.೧೭, ಖಾಸಗಿ ಕೆಲಸ ಶೇ.೧೩.೭೬, ಸರ್ಕಾರಿ ಕೆಲಸ ಶೇ.೨.೮೯ ಇರುವುದು ಕಂಡುಬರುತ್ತದೆ. ವಿಧವೆ ಮತ್ತು ಲೇಸಿಯರು ಶೇ.೧೬.೬೬ ರಷ್ಟಿರುವುದು ತಿಳಿದುಬರುತ್ತದೆ.

[illegible]

ಸ್ವಂತ ಕೃಷಿ ಮಾಡುವರ ಪ್ರಮಾಣ ಹೊಸಪೇಟೆಗೆ ಹೋಲಿಸಿದಾಗ ಸಂಡೂರಿನಲ್ಲಿ ಅದು ಹೆಚ್ಚಾಗಿರುವುದು ಕಾಣುತ್ತದೆ. ಕೂಲಿಯ ಪ್ರಮಾಣ ಸಂಡೂರಿಗಿಂತ ಹೊಸಪೇಟೆಯಲ್ಲಿ ಹೆಚ್ಚಾಗಿದೆ. ಕುಲಕಸುಬಿನ ಪ್ರಮಾಣ ಹೊಸಪೇಟೆಗಿಂತ ಸಂಡೂರಿನಲ್ಲಿ ಹೆಚ್ಚಾಗಿದೆ. ಏಕೆಂದರೆ ಕರಕುಶಲ ವಸ್ತುಗಳ ತಯಾರಿಕೆಯ ಘಟಕ ಸಂಡೂರಿನಲ್ಲಿರುವುದು ಇದಕ್ಕೆ ಕಾರಣವಾಗಿದೆ. ಗಣಿಕೆಲಸದ ಪ್ರಮಾಣ ಸಂಡೂರು ತಾಲೂಕು ಗ್ರಾಮಪಂಚಾಯತಿಗಳಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಅಧಿಕವಾಗಿದೆ. ಖಾಸಗಿಯಾಗಿ ಉದ್ಯೋಗ ಮಾಡುವವರ ಪ್ರಮಾಣ ಹಾಗೂ ಸರ್ಕಾರಿ ಕೆಲಸ ಮಾಡುವವರ ಪ್ರಮಾಣ ಹೊಸಪೇಟೆಗಿಂತ ಸಂಡೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಒಟ್ಟು ಕೋಷ್ಟಕದಿಂದ ಅರಿಯಬಹುದಾಗಿದೆ.

ಎಲ್ಲ ದೃಷ್ಟಿಯಿಂದ ನೋಡಿದಾಗ ಸಂಡೂರು ಗ್ರಾಮಪಂಚಾಯತಿಯ ಮಹಿಳೆಯರ ಗಂಡಂದಿರ ವರಮಾನವು ಜಾಸ್ತಿಯಿರುವುದು ಕಂಡುಬರುತ್ತದೆ. ಕೃಷಿ ಕೂಲಿ ಮಾತ್ರ ಹೊಸಪೇಟೆ ತಾಲೂಕಿನಲ್ಲಿ ಶೇ. ೩೧.೮೮ ರಷ್ಟು ಇದೆ. ಕಾರಣ ಬಡತನ ಮತ್ತು ಅನಕ್ಷರತೆ. ಸಂಪಾದನೆ ಹೆಚ್ಚಿರುವವರಲ್ಲಿ ಪ್ರಾಯೋಗಿಕ ಮನೋಭಾವ, ಶ್ರದ್ಧೆ ಬಹುಮುಖ್ಯವಾಗಿ ಕಾಣುತ್ತದೆ.

ಎನ್‌ಎಂಡಿಸಿ ಗಣಿಗಾರಿಕೆಗಳು ಇರುವುದರಿಂದ ಸರಕಾರಿ ನೌಕರಿಯ ಪ್ರಮಾಣವೂ ಸಂಡೂರಿನ ಪರಿಸರದಲ್ಲಿ ಹೆಚ್ಚಿರುವುದಕ್ಕೆ ಕಾರಣವಾಗಿದೆ. ಗಂಡನ ವರಮಾನವಿಲ್ಲದ ವಿಧವೇಯರು ಮತ್ತು ಲೇಸಿಯರು ಸ್ವಂತಂತ್ರವಾಗಿದ್ದಾರೆಂದು ಹೇಳಲಾಗದು. ಗಂಡಸರೊಂದಿಗಿನ ಸಾರ್ವತ್ರಿಕ ಬೆರೆಯುವಿಕೆಯಲ್ಲಿ, ಮಾತನಾಡುವುದರಲ್ಲಿ ಲಿಂಗಶಾಹಿ ನಂಬಿಕೆಗಳನ್ನು ಮೀರಬಹುದು. ಆದರೆ ಖಾಸಗೀ ನೆಲೆಯಲ್ಲಿ ಇವರೂ ಪುರುಷಶಾಹಿ ಹಿಡಿತದಲ್ಲಿರುವುದನ್ನು ಕಾಣಬಹುದು.

ಯಾಕೆಂದರೆ ಲಿಂಗಸಂಬಂಧಿ ಶ್ರಮ ವಿಭಜನೆಯು ಮಹಿಳೆಯರ ಅಪಮೌಲ್ಯೀಕರಣಕ್ಕೆ ಕಾರಣವಾಗಿದೆ. ಆ ಹಿನ್ನೆಲೆಯಲ್ಲಿ ಚುನಾಯಿತ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಹುಮುಖ್ಯವಾಗಿ ಕೌಟುಂಬಿಕ ನೆಲೆಯಿಂದ ಗುರುತಿಸಲು ಇಲ್ಲಿ ಪ್ರಯತ್ನಿಸಿದ್ದೇನೆ. ಮಹಿಳೆಯರ ಎಲ್ಲ ಸಮಸ್ಯೆಗಳ ಮೂಲ ಲಿಂಗಾಧಾರಿತ ವಿಭಜನೆಯಲ್ಲಿ, ಪುರುಷಾಹಿ ವ್ಯವಸ್ಥೆಯಲ್ಲಿ ಇದೆ ಎಂಬುದನ್ನು ಈ ಮೂಲಕ ಗುರುತಿಸಲು ಪ್ರಯತ್ನಿಸಿದ್ದೇನೆ. ಹಾಗೆಯೇ ಮಹಿಳಾ ಸಶಕ್ತೀಕರಣಕ್ಕೆ ರಾಜಕೀಯ ಭಾಗವಹಿಸುವಿಕೆಗೆ ಪುರುಷರ ಗುಣಾತ್ಮಕ ಸಹಕಾರ ಅಗತ್ಯ ಇದೆ ಎಂಬುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಚುನಾಯಿತ ಮಹಿಳೆಯ ದುಡಿಮೆಯ ಅಪಮೌಲೀಕರಣದಲ್ಲಿ ಬರೀ ಪ್ರಭುತ್ವ ಮತ್ತು ಅಧಿಕಾರಶಾಹಿ ಹಾಗೂ ಸಾಮಾಜಿಕ ಅಸಮಾನತೆಗಳೇ ಕಾರಣವಲ್ಲ. ಬಹುಮುಖ್ಯವಾಗಿ ಕುಟುಂಬದ

ನೆಲೆಯಲ್ಲಿಯೇ ಮಹಿಳೆಯ ಅಭದ್ರಸ್ಥಿತಿಗೆ ಕಾರಣವಾಗುವ ಸಂಗತಿಗಳನ್ನು ಗುರುತಿಸಬಹುದಾಗಿದೆ. ಹಾಗೇ ಸಾಮಾಜಿಕ ಪೂರ್ವಗ್ರಹಗಳೂ ಕಾರಣವಾದ ಬಗ್ಗೆ ಕಂಡುಕೊಳ್ಳಬಹುದಾಗಿದೆ. ಹೆಣ್ಣಿನ ವಿಷಯದಲ್ಲಿ ಇದು ಭ್ರೂಣದಿಂದಲೇ ಆರಂಭವಾಗುತ್ತದೆ. ಹೀಗೆ ಲಿಂಗತಾರತಮ್ಯಕ್ಕೆ ಕಾರಣವಾಗುವ ಸಾಮಾಜಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಪೂರ್ವಗ್ರಹಗಳನ್ನು ಹೊಡೆದು ಹಾಕಬೇಕು. ಇಲ್ಲದಿದ್ದರೇ ವಿಕೇಂದ್ರೀಕರಣವು ಬಯಸುವ ತಳಮಟ್ಟದ ಮತ್ತು ಲಿಂಗಸಮಾನತೆಯ ಪರಿಕಲ್ಪನೆಗಳು ಸಾರ್ಥಕವಾಗಲಾರವು. ಯಾಕೆಂದರೆ ಶ್ರೇಣೀಕೃತ ಸಮಾಜ ವ್ಯವಸ್ಥೆಯಾದ ಭಾರತದ ಸಂದರ್ಭದಲ್ಲಿ ಅಧಿಕಾರ ಕೂಡ ಅಸಮಾನ ನೆಲೆಗಳಿಂದ ಕೂಡಿರುತ್ತದೆ. ಮತ್ತು ಅಂತಹ ನೆಲೆಗಳನ್ನು ಗಟ್ಟಿಗೊಳಿಸುತ್ತಿರುತ್ತದೆ ಕೂಡ. ಇದನ್ನು ಇಡೀ ಅಧ್ಯಯನದುದ್ದಕ್ಕೂ ಅಂತರ್‌ವಾಹಿನಿಯಾಗಿ ನೋಡಲಾಗಿದೆ. ಲಿಂಗ ಸಮಾನತೆಯು ತಾಂತ್ರಿಕವಾದ ಯಾಂತ್ರಿಕವಾದ ಒಂದು ಪ್ರಕ್ರಿಯೆಯೇನಲ್ಲ. ಅದೊಂದು ರಾಜಕೀಯ ಪ್ರಕ್ರಿಯೆಯಾಗಿದೆ. ಸ್ಥಿರೀಕರಣಗೊಂಡ ಲಿಂಗಶಾಹಿ ತತ್ವಗಳನ್ನು ತಿರುವು ಮುರುವು ಮಾಡುವ ಮೂಲಕ ಮಹಿಳೆಯರನ್ನು ಅಭಿವೃದ್ಧಿಯ ನಿಯೋಗಿಗಳೆಂದು ಬಿಂಬಿಸಲೇಬೇಕು. ಹಾಗೆಯೇ ಅಂತಹ ವಾತಾವರಣವನ್ನು ನಿರ್ಮಾಣಮಾಡಿ ಧಾರಣಶಕ್ತಿಯನ್ನು ಬೆಳೆಯವಂತೆ ಮಾಡಿದರೆ ಮಾತ್ರ ನಾವು ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯಿಂದ ಸ್ವಲ್ಪಮಟ್ಟಿಗಾದರೂ ಗುಣಾತ್ಮಕವಾದದ್ದನ್ನು ನಿರೀಕ್ಷಿಸಬಹುದಾಗಿದೆ.

ಚುನಾಯಿತ ಮಹಿಳೆ ಮತ್ತು ಮೂಲಭೂತ ಸೌಲಭ್ಯಗಳು : ಅಧ್ಯಯನ ದೃಷ್ಟಿಯಿಂದ ಚುನಾಯಿತ ಮಹಿಳೆಯು ಮೂಲಭೂತ ಸೌಲಭ್ಯಗಳಾದ ವಾಸದ ಮನೆ, ಸ್ನಾನದ ಮನೆ, ಶೌಚಾಲಯ, ವಿದ್ಯುಚ್ಛಕ್ತಿಯನ್ನು ಹೊಂದಿದ್ದಾರೆಯೇ ಎಂದು ತಿಳಿಯುವುದು ಅವಶ್ಯಕವಾಗಿದೆ. ಈ ಮೂಲಕ ಅವರ ಆರ್ಥಿಕ ಸ್ಥಿತಿ ಮತ್ತು ಸ್ಥಾನಮಾನಗಳನ್ನು ತಿಳಿಯಬಹುದಾಗಿದೆ.

ಕೋಷ್ಟಕ ೪೩

ವಾಸದ ಮನೆಯ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಸ್ವಂತ ಮನೆ	೧೨೦	೭೯.೪೭	೧೦೨	೭೭.೫೩
೨.	ಗುಡಿಸಲು	೧೬	೧೦.೫೯	೩೧	೨೨.೪೬
೩.	ಬಾಡಿಗೆ	೧೫	೯.೯೩	--	---
	ಒಟ್ಟು	೧೫೧	೧೦೦	೧೩೮	೧೦೦

[illegible]

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಚುನಾಯಿತ ಮಹಿಳೆಯರಲ್ಲಿ ಸ್ವಂತ ವಾಸದ ಮನೆಯಿದ್ದವರ ಪ್ರಮಾಣ ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೭೯.೪೨. ಗುಡಿಸಲಿನಲ್ಲಿ ವಾಸಿಸುವ ಚುನಾಯಿತ ಮಹಿಳೆಯರ ಪ್ರಮಾಣ ಶೇ.೧೦.೫೯ ರಷ್ಟಿದೆ. ಬಾಡಿಗೆ ಮನೆಯಲ್ಲಿ ವಾಸಿಸುವವರ ಪ್ರಮಾಣ ಶೇ.೯.೯೩ ರಷ್ಟಿರುವುದು ಕಂಡುಬರುತ್ತದೆ. ಹಾಗೆಯೇ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯಿತಿಗಳನ್ನು ಗಮನಿಸಿದಾಗ ಸ್ವಂತಮನೆಯಲ್ಲಿ ವಾಸಿಸುವವರು ಶೇ.೭೭.೫೩ ರಷ್ಟಿದ್ದರೆ, ಗುಡಿಸಲಿನಲ್ಲಿ ವಾಸಿಸುವವರು ಶೇ.೨೨.೪೬ ರಷ್ಟಿರುವುದು ಕಂಡುಬರುತ್ತದೆ. ಸ್ವಂತ ಮನೆಯಲ್ಲಿ ಇರುವವರು ಎಂದ ಮಾತ್ರಕ್ಕೆ ಇವೆಲ್ಲ ಬಹಳ ಸುಸಜ್ಜಿತವಾಗಿ ಕಟ್ಟಿಕೊಂಡಿರುವ ವಾಸದ ಮನೆಗಳಲ್ಲ. ಇವುಗಳಲ್ಲಿ ಕಚ್ಚಾಮನೆಗಳೂ, ದೀರ್ಘಕಾಲ ಬಾಳಿಕೆ ಬರದೇ ಇರುವಂತಹವೂ ಸೇರಿವೆ. ಸ್ವಂತಜಾಗದಲ್ಲಿ ಗುಡಿಸಲಿನಲ್ಲಿ ಬದುಕುತ್ತಿರುವ ಚುನಾಯಿತ ಮಹಿಳೆಯರೂ ಇದ್ದಾರೆ. ಗಾಳಿ, ಬೆಳಕಿಲ್ಲದೆ, ಮಳೆಗಾಲ ದಲ್ಲಿ ಸೋರುವ, ನೀರು ನುಗ್ಗುವ ಈ ಗುಡಿಸಲುಗಳಲ್ಲಿರುವ ಮಹಿಳೆಯರು ಅತ್ಯಂತ ಬಡತನದ ಸ್ಥಿತಿಯಲ್ಲಿದ್ದದ್ದೂ ಕಾಣುತ್ತದೆ. ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಮಾತ್ರ ಬಾಡಿಗೆ ಮನೆಯಲ್ಲಿ ಇರುವ ಸದಸ್ಯೆಯರು ಕಂಡುಬರುತ್ತಾರೆ. ಇದಕ್ಕೆ N M D Cಯಂತಹ ಗಣಿ ಉದ್ಯಮವು ಕಾರಣವಾಗಿದೆ.

ತೌಲನಿಕವಾಗಿ ಅಧ್ಯಯನ ಮಾಡಿದಾಗ ಸ್ವಂತ ಮನೆಯಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಹೊಸಪೇಟೆಗಿಂತ ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಹೆಚ್ಚಾಗಿದ್ದಾರೆ. ಗುಡಿಸಲುಗಳಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಸಂಡೂರಿಗಿಂತ ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಹೆಚ್ಚಾಗಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸಿಸುವ ಚುನಾಯಿತ ಮಹಿಳೆಯರು ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಮಾತ್ರ ಇರುವುದು ಕಂಡುಬರುತ್ತದೆ.

ಕೋಷ್ಟಕ ೪೪

ಚುನಾಯಿತ ಮಹಿಳೆಯರ ಮನೆಯಲ್ಲಿ ಶೌಚಾಲಯದ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಇದೆ	೪೯	೩೩.೪೫	೭೭	೫೫.೭೯
೨.	ಇಲ್ಲ	೧೦೨	೬೭.೫೪	೬೧	೪೪.೨೦೧
ಒಟ್ಟು		೧೫೧	೧೦೦	೧೩೮	೧೦೦

ಮೇಲಿನ ಕೋಷ್ಟಕದಿಂದ ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಲ್ಲಿ ಶೌಚಾಲಯ ಇದ್ದವರ ಪ್ರಮಾಣ ಶೇ.೩೩.೪೫. ಶೌಚಾಲಯ ಇಲ್ಲದವರ ಪ್ರಮಾಣ ಶೇ.೬೭.೫೪ ರಷ್ಟಿದೆ. ಹಾಗೆಯೇ ಹೊಸಪೇಟೆ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೌಚಾಲಯ ಹೊಂದಿರುವ ಚುನಾಯಿತ ಮಹಿಳೆಯರು ಶೇ.೫೫.೭೯. ಶೌಚಾಲಯ ಇಲ್ಲದವರು ಶೇ.೪೪.೨೦ ರಷ್ಟಿರುವುದು ಕಂಡುಬರುತ್ತದೆ. ಶೌಚಾಲಯ ಇಲ್ಲದಿರುವುದಕ್ಕೆ ಕಾರಣಗಳನ್ನು ಹುಡುಕಿದಾಗ ಬಡತನ, ಶೌಚಾಲಯ ಕಟ್ಟಿಸಿಕೊಳ್ಳಲು ಜಾಗವಿಲ್ಲದಿರುವುದು, ಸಂಪ್ರದಾಯ ಮನೋಭಾವ, ನೀರಿನ ಸಮಸ್ಯೆ, ಡ್ರೈನೇಜ್ ಸಮಸ್ಯೆಗಳು ಪ್ರಧಾನವಾಗಿ ಕಂಡುಬಂದವು. ಬಹುಮುಖ್ಯ ಕಾರಣವೆಂದರೆ ಆಯ್ಕೆಯಾದ ಬಹಳಷ್ಟು ಮಹಿಳೆಯರು ಅಧುನಿಕ ಬದುಕಿನ ಅವಶ್ಯಕತೆಗಳನ್ನು ರೂಡಿಸಿಕೊಳ್ಳದಿರುವುದು. ಹೀಗಾಗಿ ಶೌಚಾಲಯ ಬಳಸುವುದೆಂದರೆ ಮನೆಯಲ್ಲಿ ಕುಳಿತಂತೆ ಭಾಸವಾಗುತ್ತದೆಂದು ನಾಚಿಕೆ ಹಾಗೂ ಮುಜುಗರದಿಂದ ಹೇಳುತ್ತಾರೆ. ಹೀಗಾಗಿ ಕಾಲದಿಂದಲೂ ಬಯಲನ್ನೇ ಆಶ್ರಯಿಸಿದವರಿಗೆ ಶೌಚಾಲಯದ ಬಳಕೆ ಅನವಶ್ಯಕವಾಗಿ ಕಾಣುತ್ತದೆ. ಶೌಚಾಲಯಗಳನ್ನು ಪಡೆದುಕೊಂಡವರೂ ಮನೆಯ ಬಗೆಗಿನ ಗೌರವದಿಂದ ಶೌಚಾಲಯವನ್ನು ತಮ್ಮ ಇನ್ನಿತರ ಉದ್ದೇಶಗಳಿಗೆ ಬಳಸುವುದನ್ನೂ ಕಾಣುತ್ತೇವೆ.

ಕೋಷ್ಟಕ ೪೫

ಸ್ನಾನದ ಮನೆಯ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಇದೆ	೧೧೭	೭೭.೪೮	೯೧	೬೫.೯೪
೨.	ಇಲ್ಲ	೩೪	೨೧.೫೧	೪೭	೩೪
ಒಟ್ಟು		೧೫೧	೧೦೦	೧೩೮	೧೦೦

ಈ ಕೋಷ್ಟಕದ ಮೂಲಕ ಶೌಚಾಲಯಕ್ಕೆ ಹೋಲಿಸಿಕೊಂಡರೆ ಸ್ನಾನದ ಮನೆ ಹೊಂದಿರುವವರು ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೭೭.೪೮. ಸ್ನಾನದ ಮನೆ ಹೊಂದದೇ ಇರುವವರು ಶೇ.೨೧.೫೧. ಹಾಗೆ ಹೊಸಪೇಟೆ ತಾಲೂಕಿನಲ್ಲಿ ಸ್ನಾನದ ಮನೆ ಇದ್ದವರು ಶೇ.೬೫.೯೪ ರಷ್ಟಿದರೆ ಸ್ನಾನದ ಮನೆ ಹೊಂದಿಲ್ಲದವರು ಶೇ.೩೪ ರಷ್ಟಿರುವುದು ತಿಳಿದುಬರುತ್ತದೆ. ಸ್ನಾನದ ಮನೆ ಹೊಂದಿದವರೆಲ್ಲರೂ ಸುಸಜ್ಜಿತವಾದ ಸ್ನಾನದ ಕೋಣೆಯನ್ನು ಹೊಂದಿದ್ದಾರೆ ಎಂದು ಭಾವಿಸುವುದು

ಸರಿಕಾಣದು. ಮನೆಯ ಮೂಲೆಯಂದರಲ್ಲಿ ಸಣ್ಣ ಬಚ್ಚಲು ಇರಬಹುದು. ಅಥವಾ ಮನೆಯ ಹಿಂದಿನ ಅಥವಾ ಮುಂದಿನ ಸ್ವಲ್ಪ ಜಾಗದಲ್ಲಿ ತಡಿಕೆ ಕಟ್ಟಿಕೊಂಡು ವ್ಯವಸ್ಥೆಮಾಡಿಕೊಂಡ ಬಚ್ಚಲು ಮನೆಗಳೇ ಹೆಚ್ಚಾಗಿ ಕಂಡುಬರುತ್ತವೆ.

ಕೋಷ್ಟಕ ೪೫

ವಿದ್ಯುಚ್ಛಕ್ತಿ ಸೌಲಭ್ಯದ ವಿವರ

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧.	ಇದೆ	೧೩೨	೮೭.೪೧	೧೨೫	೯೦.೫೭
೨.	ಇಲ್ಲ	೧೯	೧೨.೫೮	೧೩	೯.೪೨
ಒಟ್ಟು		೧೫೧	೧೦೦	೧೩೮	೧೦೦

ಕೋಷ್ಟಕದ ಸಹಾಯದಿಂದ ಚುನಾಯಿತ ಮಹಿಳೆಯರ ಮನೆಗಳಲ್ಲಿ ವಿದ್ಯುಚ್ಛಕ್ತಿ ಹೊಂದಿರುವವರ ಸಂಖ್ಯೆ ಸಂಡೂರು ತಾಲೂಕು ಗ್ರಾಮಪಂಚಾಯತಿಗಳಲ್ಲಿ ಶೇ.೮೭.೪೧ ರಷ್ಟಿದ್ದರೆ, ಇಲ್ಲದವರು ಶೇ.೧೨.೫೮ ರಷ್ಟಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯತಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ಹೊಂದಿದವರು ಶೇ. ೯೦.೫೭ ರಷ್ಟಿದ್ದರೆ, ಈ ಸೌಲಭ್ಯ ಹೊಂದಿಲ್ಲದವರು ಶೇ.೯.೪೨ ರಷ್ಟಿರುವುದು ಕಂಡುಬರುತ್ತದೆ. ಇಲ್ಲಿ ಗಮನಿಸಬಹುದಾದ ಸಂಗತಿ ಎಂದರೆ ಉಳಿದ ಸೌಲಭ್ಯಗಳಲ್ಲಿ ಕಂಡುಬರುವ ಹಿಂಜರಿಕೆ ಇಲ್ಲಿ ಕಾಣದಿರುವುದು. ಬೆಳಕಿನ ವಿಷಯದಲ್ಲಿ ಸದಸ್ಯೆಯರ ಬದಲಾದ ಮನೋಧರ್ಮವನ್ನು ಕಾಣುತ್ತೇವೆ. ಹಾಗೆ ಸರ್ಕಾರದ ಯೋಜನೆಗಳ ಗರಿಷ್ಠ ಮಟ್ಟದ ಸದ್ಬಳಕೆಯ ಪ್ರಮಾಣವನ್ನು ಕಾಣಬಹುದಾಗಿದೆ. ಇದಕ್ಕೆ ಕಾರಣ ದುಬಾರಿ ಮತ್ತು ಸಮಯಕ್ಕೆ ಸಿಗದ ಸೀಮೆಎಣ್ಣೆ. ಹೀಗಾಗಿ ಸರ್ಕಾರದಿಂದ ಸಿಗುವ ಉಚಿತ ಸೌಲಭ್ಯಗಳು ವಿದ್ಯುತ್ ಬಳಕೆಯ ವಿಷಯದಲ್ಲಿ ಮಾತ್ರ ಹೆಚ್ಚಿನ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ.

೪೩ ರಿಂದ ೪೫ ರವರೆಗಿನ ಕೋಷ್ಟಕಗಳನ್ನು ಅವಲೋಕಿಸಿದಾಗ ಚುನಾಯಿತ ಪ್ರತಿನಿಧಿಗಳು ಹೊಂದಿರುವ ಮೂಲಭೂತ ಸೌಲಭ್ಯಗಳ ಇತಿಮಿತಿಗಳು ಗೋಚರವಾಗುತ್ತವೆ. ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಆಯ್ಕೆಯಾದ ೧೫೧ ಸದಸ್ಯೆಯರಲ್ಲಿ ನೂರಕ್ಕೆ ೯೦ ರಷ್ಟು ಮಹಿಳೆಯರು ಮೇಲ್ಕಾಣಿಸಿದ ಮೂಲಭೂತ ಸೌಲಭ್ಯಗಳನ್ನು ತಕ್ಕಮಟ್ಟಿಗಾದರೂ ಹೊಂದಿದ್ದಾರೆ. ಹೊಸಪೇಟೆ

[illegible]

[illegible]

[illegible]

[illegible]

[illegible]

ತಾಲೂಕು ಗ್ರಾಮಪಂಚಾಯಿತಿಗಳಲ್ಲಿನ ೧೩೮ ಚುನಾಯಿತ ಪ್ರತಿನಿಧಿಗಳಲ್ಲಿ ಶೇ. ೮೦ ರಷ್ಟು ಮಹಿಳೆಯರು ತಕ್ಕಮಟ್ಟಿನ ಸೌಕರ್ಯಗಳನ್ನು ಹೊಂದಿರುವುದು ಕಂಡುಬರುತ್ತದೆ. ಸೌಕರ್ಯಗಳನ್ನು ಹೊದಿದ್ದಾರೆ ಎಂದ ತಕ್ಷಣ ಆಧುನಿಕ ಪರಿಕಲ್ಪನೆಯ ಸುಸಜ್ಜಿತ ಮನೆ, ಶೌಚಾಲಯ, ಸ್ನಾನದ ಮನೆ ಎಂದು ಭಾವಿಸಿಕೊಳ್ಳುವುದು ತರವಲ್ಲ. ಈ ಅಧ್ಯಯನದ ಮೂಲಕ ಚುನಾಯಿತ ಮಹಿಳೆಯರ ಸಾಮಾಜಿಕ ಮತ್ತು ಕೌಟುಂಬಿಕ ನೆಲೆಗಳು ಇನ್ನಷ್ಟೂ ಸುಧಾರಣೆಯಾಗುವ ಅವಶ್ಯಕತೆ ಇದೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ. ಸ್ವತಃ ತನಗೆ ಮೂಲಭೂತ ಸೌಲಭ್ಯಗಳು ಮತ್ತು ಅದರ ಬಳಕೆಯ ಬಗ್ಗೆ ಅರಿವಿದ್ದರೆ ಮಾತ್ರ ಇತರರಿಗಿರುವ ಕೊರತೆಗಳನ್ನು ಪರಿಹರಿಸುವ ಆತ್ಮವಿಶ್ವಾಸವನ್ನು ಚುನಾಯಿತ ಮಹಿಳಾ ಪ್ರತಿನಿಧಿಗಳಲ್ಲಿ ಕಾಣಬಹುದು. ಇಂತಹ ಸಂಗತಿಗಳ ತಿಳಿವಳಿಕೆಯೇ ಇಲ್ಲದ ಹೊತ್ತಿನಲ್ಲಿ ಇತರರ ಸಮಸ್ಯೆಗಳಿಗೆ ಸ್ಪಂದಿಸಲು ಹೇಗೆ ಸಾಧ್ಯ? ಪ್ರತಿನಿಧಿತ್ವ ಇದೆ ಎಂದಾಕ್ಷಣ ಆಕೆಗೆ ಎಲ್ಲವನ್ನೂ ಸುಧಾರಿಸುವ ಗುಣ ಬರುತ್ತದೆಂದು, ಅಭಿವೃದ್ಧಿಪರ ಚಿಂತನೆಗಳು ಮೂಡುತ್ತವೆಂಬುದು ಅಸಾಧ್ಯವಾದ ಮಾತು. ಅಧಿಕಾರದ ಜೊತೆಗೆ ಕರ್ತವ್ಯವನ್ನೂ ಅನುಷ್ಠಾನಗೊಳಿಸುವ ಮೂಲಭೂತ ಅರಿವಿನ ಪರಿಸರವನ್ನೂ ಪೂರಕ ವಾತಾವರಣವನ್ನೂ ಮಹಿಳಾ ಪ್ರತಿನಿಧಿಗಳಿಗೆ ಕಲ್ಪಿಸಿಕೊಡುವ ಅವಶ್ಯಕತೆ ಇದೆ. ಇಚ್ಛಾಶಕ್ತಿ ಉದ್ದೀಪನಗೊಳ್ಳುವಂತೆ ಪ್ರೇರಣೆಯನ್ನು ಸ್ವಚ್ಛಂದ ವಾತಾವರಣವನ್ನು ಕೌಟುಂಬಿಕ ನೆಲೆಯಲ್ಲಿ ಸಾಮಾಜಿಕ ನೆಲೆಯಲ್ಲಿ, ಸಾಂಸ್ಕೃತಿಕ ನೆಲೆಯಲ್ಲಿ ಹಾಗೂ ಆರ್ಥಿಕ ನೆಲೆಯಲ್ಲಿ ನಿರ್ಮಿಸಿ ಕೊಡಬೇಕಾದ ತುರ್ತು ಇದೆ.

ಇಲ್ಲಿ ಚರ್ಚಿಸಿರುವ ಸಾಮಾಜಿಕ, ಶೈಕ್ಷಣಿಕ, ಊಳಿಗಮಾನ್ಯ, ಆರ್ಥಿಕ ನೆಲೆಗಳ ಹಿನ್ನೆಲೆಯಲ್ಲಿ ಚುನಾಯಿತ ಮಹಿಳೆಯರು ಪುನಃ ಮುಂದೆ ಚುನಾವಣೆಗೆ ಸ್ಪರ್ಧಿಸಲು ಉತ್ಸುಕರಾಗಿರುವರೇ ಇಲ್ಲವೇ ಎಂದು ಚುನಾಯಿತ ಮಹಿಳೆಯರನ್ನು ಪ್ರಶ್ನಿಸಿದಾಗ ದೊರೆತ ಉತ್ತರಗಳನ್ನು ಅಂಕಿ ಅಂಶಗಳ ಮೂಲಕ ಈ ಕೆಳಗಿನಂತೆ ಅರಿಯಬಹುದಾಗಿದೆ.

ಹೊಸೇಪೇಟೆ ತಾಲೂಕು ಗ್ರಾಮಪಂಚಾಯತಿಗಳಿಗಿಂತ ಸಂಡೂರು ತಾಲೂಕು ಗ್ರಾಮಪಂಚಾಯತಿಗಳ ಚುನಾಯಿತ ಮಹಿಳೆಯರು ಪುನಃ ಚುನಾವಣೆಯಲ್ಲಿ ಸ್ಪರ್ಧಿಸಲು ಉತ್ಸುಕರಗಿರುವವರ. ಸಂಖ್ಯೆ ಶೇ ೪೭.೬೮ ಆಗಿದೆ. ಪುನಃ ಸ್ಪರ್ಧಿಸಲು ಇಷ್ಟವಿಲ್ಲದ ಸದಸ್ಯೆಯರ ಸಂಖ್ಯೆ ಹೊಸಪೇಟೆಗೆ ಹೋಲಿಸಿದಾಗ ಸಂಡೂರನಲ್ಲಿ ಕಡಿಮೆ ಸಂಖ್ಯೆಯಲ್ಲಿದ್ದು, ಪ್ರಮಾಣ ೨೯.೧೩ ರಷ್ಟಿದೆ. ಈ ಪ್ರಮಾಣ ಹೊಸಪೇಟೆಯಲ್ಲಿ ೩೫.೫೦ ರಷ್ಟಿದೆ. ಪತಿಯ ಇಚ್ಚೆಯ ಮೇಲೆ ಅವಲಂಬಿತರಾಗಿ ಮುಂದಿನ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸಿರುವ ಚುನಾಯಿತ ಮಹಿಳೆಯರ ಸಂಖ್ಯೆ ಹೊಸಪೇಟೆಯಲ್ಲಿ ಹೆಚ್ಚಾಗಿದ್ದು, ಶೇ. ೧೪.೯೯

ರಷ್ಟಿದೆ. ಹಾಗೆಯೇ ಸಂಡೂರಿನಲ್ಲಿ ಪತಿಯ ಇಚ್ಛೆಯ ಮೇಲೆ ಅವಲಂಬಿತರಾದವರು ಶೇ. ೩.೩೧ ರಷ್ಟಿದ್ದು ಕಡಿಮೆ ಪ್ರಮಾಣದಲ್ಲಿರುವುದು ಈ ಅಧ್ಯಯನದಿಂದ ತಿಳಿದುಬಂದಿದೆ. ಮುಂದಿನ ಚುನಾವಣೆಯನ್ನು ಭವಿಷ್ಯಕ್ಕೆ ಬಿಟ್ಟಿದ್ದು, ಆ ಕುರಿತು ಈಗೇಕೆ ಚಿಂತೆ ಎಂದು ತಿಳಿಸಿದ ಚುನಾಯಿತ ಮಹಿಳೆಯರ ಸಂಖ್ಯೆ ಎರಡೂ ತಾಲ್ಲೂಕಿನಲ್ಲಿ ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿದೆ.

ಇಷ್ಟವಿದೆ ಎಂದು ತಿಳಿಸಿರುವ ಚುನಾಯಿತ ಮಹಿಳೆಯರಲ್ಲಿ ಆಶಾಭಾವನೆಯಿದೆ. ಹುಮ್ಮಸ್ಸಿದೆ, ಈಗ ಆಯ್ಕೆಯಾಗಿ ಅವರು ಪಡೆದಿರುವ ಅವಕಾಶ ಎಲ್ಲಾ ರೀತಿಯಿಂದಲೂ ಅವರಿಗೆ ರಾಜಕೀಯ ತರಬೇತಿಯಾಗಿದ್ದು, ಅನುಭವವೂ ದೊರಕಿದೆ. ವ್ಯವಸ್ಥೆಯಲ್ಲಿ ತಮ್ಮನ್ನು ಉಪೇಕ್ಷೆ ಮಾಡಿದ್ದರೂ, ಅವಕಾಶ ವಂಚಿತರನ್ನಾಗಿ ಮಾಡಿದ್ದರೂ, ಮತ್ತೊಮ್ಮೆ ಆಯ್ಕೆಯಾಗಿ ನಿಜವಾದ ರೀತಿಯಲ್ಲಿ ಅಧಿಕಾರವನ್ನು ಕರ್ತವ್ಯಗಳನ್ನು ಚಲಾಯಿಸಲು ಇಷ್ಟಪಟ್ಟಿರುವವರು ಎರಡೂ ತಾಲೂಕು ಗ್ರಾಮಪಂಚಾಯತಿಗಳಲ್ಲಿ ಕಂಡುಬಂದಿದ್ದಾರೆ.

ಪುನಃ ಸ್ಪರ್ಧಿಸಲು ಇಷ್ಟವಿಲ್ಲದ ಮಹಿಳೆಯರಿಗೆ ವ್ಯವಸ್ಥೆಯಿಂದ ನಿರಾಶೆಯಾಗಿರಬಹುದು. ಅಥವಾ ಒತ್ತಾಯಕ್ಕೆ ಮಣಿದು ರಾಜಕೀಯ ರಂಗಕ್ಕೆ ಪ್ರವೇಶಿಸಿರುವುದರಿಂದ ಅವರಿಗೆ ಪುನಃ ಸ್ಪರ್ಧಿಸಲು ನಿರಾಸಕ್ತಿ ಇರಬಹುದು. ಈ ಕುರಿತು ಸಾಮಾಜಿಕವಾಗಿ ಕೌಟುಂಬಿಕವಾಗಿ ವಿವರವಾಗಿ ಚರ್ಚಿಸಲಾಗಿದೆ.

ಪತಿಯ ಇಚ್ಚೆಯಿಂದ ಸ್ಪರ್ಧಿಸಲು ಇಷ್ಟಪಟ್ಟಿರುವ ಮಹಿಳೆಯರು ಸ್ವತಃ ಇಚ್ಛಾಶಕ್ತಿ ಅಥವಾ ಸ್ವಂತ ನಿರ್ಧಾರ ಇಲ್ಲದವರಾಗಿದ್ದು, ಪತಿಯ ಇಚ್ಚೆಯ ಮೇಲೆ ಅವಲಂಬಿತರಾಗಿದ್ದಾರೆ. ಅವರಿಗೆ ಮುನ್ನುಗ್ಗುವ ಪ್ರವೃತ್ತಿ ಇಲ್ಲವೆನ್ನಬಹುದು. ಈ ಪ್ರಮಾಣವು ಕಡಿಮೆ ಮಟ್ಟದಲ್ಲಿರುವುದು ಒಂದು ರೀತಿಯಲ್ಲಿ ಆಶಾದಾಯಕವಾಗಿದೆ. ಏಕೆಂದರೆ ಭವಿಷ್ಯದಲ್ಲಿ ಇವರ ಮನೋಧರ್ಮವೂ ಬದಲಾಗಬಹುದು.

ಒಟ್ಟು ಈ ಚರ್ಚೆಯನ್ನು ಕ್ರೋಡೀಕರಿಸಿದಾಗ ಎಲ್ಲೂ ಚುನಾಯಿತ ಮಹಿಳೆಯರ ಭಾಗವಹಿಸು ವಿಕೆಯು ಕ್ರಿಯಾಶೀಲ ಮಟ್ಟದಲ್ಲಿರುವುದು ಸಂಪೂರ್ಣವಾಗಿ ಕಂಡುಬರುವುದಿಲ್ಲ. ಇದನ್ನು ಭೌತಿಕ ನೆಲೆಯಲ್ಲಿ ಮಾತ್ರವಲ್ಲದೆ ಮಾನಸಿಕ ನೆಲೆಯಲ್ಲೂ ಗುರುತಿಸಬಹುದಾಗಿದೆ. ಮಹಿಳೆಯ ಸಾಮಾಜಿಕ, ಶೈಕ್ಷಣಿಕ, ಊಳಿಗಮಾನ್ಯ, ಆರ್ಥಿಕವಾದಂತಹ ಪ್ರತಿಯೊಂದು ಸ್ತರಗಳನ್ನು ಪುರುಷನೇ ನಿಯಂತ್ರಿಸುತ್ತಿರು ವುದು ಗೋಚರವಾಗುತ್ತಿದೆ. ವಿಕೇಂದ್ರೀಕರಣ ವ್ಯವಸ್ಥೆಯು ಮಹಿಳಾ ಪರವಾದಂತಹ ಸಾಕಷ್ಟು ಅವಕಾಶಗಳನ್ನು ತೆರೆದಿಟ್ಟಿದ್ದರೂ ಅದನ್ನು ಅನುಭವಿಸಬೇಕಾದಂತಹ ಸೂಕ್ತ ಸಾಮಾಜಿಕ ಪರಿಸರ ರೂಪುಗೊಂಡಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಈ ಹಿನ್ನೆಲೆಯಲ್ಲಿ ಮಹಿಳಾ ರಾಜಕೀಯ ಭಾಗವಹಿಸುವಿಕೆಯು ಕ್ರಿಯಾಶೀಲ ಗುಣಮಟ್ಟವನ್ನು ಪಡೆಯಬೇಕಾದರೆ ಮಹಿಳಾ ಸಶಕ್ತೀಕರಣದ ಅವಶ್ಯಕತೆ ಅತ್ಯಗತ್ಯವಾಗಿದೆ. ಅಧ್ಯಯನದುದ್ದಕ್ಕೂ ಮಹಿಳೆಯರ ಸಶಕ್ತೀಕರಣಕ್ಕಿರುವ ಅವಕಾಶಗಳನ್ನು ಮತ್ತು ಆತಂಕಗಳನ್ನು ವಿವಿಧ ನೆಲೆಗಳಲ್ಲಿ ಸೂಕ್ಷ್ಮವಾಗಿ ವಿವರಿಸಿಕೊಳ್ಳಲಾಗಿದೆ. ಆ ಮೂಲಕ ಚುನಾಯಿತ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಧನಾತ್ಮಕ ಮತ್ತು ಋಣಾತ್ಮಕ ಪ್ರಭಾವ ಬೀರುವ ಅಂಶಗಳನ್ನು ಗುರುತಿಸಲಾಗಿದೆ. ಮಹಿಳೆಯ ರಾಜಕೀಯ ಭಾಗವಹಿಸುವಿಕೆಯ ಸ್ಥಿತಿಗತಿಗಳು ಇನ್ನಷ್ಟು ಉತ್ತಮಗೊಳ್ಳಲು ರಾಜಕೀಯ, ಸಾಮಾಜೀಕರಣದ ನಿಯೋಗಗಳ ಪಾತ್ರ ಈಗಿರುವುದಕ್ಕಿಂತಲೂ ಇನ್ನಷ್ಟು ಪರಿಣಾಮಕಾರಿ ಯಾಗಬೇಕಾದ ತುರ್ತು ಇದೆ.

ಅಡಿಟಿಪ್ಪಣಿಗಳು

೧. ಪ್ರಜಾವಾಣಿ, ಮಾರ್ಚ್ ೧೦, ೨೦೦೨

೨. ಕನ್ನಡ ಪ್ರಭ, ಸೆಪ್ಟೆಂಬರ್ ೧೩, ೨೦೦೨

೩. ನೀಲಮ್ಮ ಕತ್ನಳ್ಳಿ, ೧೯೯೭, ಅವರ ಮೊದಲ ಮಾತು

೪. ಚಂದ್ರಶೇಖರ ಬಿ. ದಾಮ್ಲೆ, ೧೯೯೭, ಪು.೨೨೩

೫. ಚಂದ್ರಶೇಖರ ಟಿ.ಆರ್., ೧೯೯೯, ಪು.೧೯

೬. ಅದೇ, ಪು.೨೦

೭. ಮಧುಕೀಶ್ವರ್, ಮೀರಾ ಎಲ್.ಜಿ., ೧೯೯೭,

೮. ಜೆರಾಲ್ಡಿನ್ ಫೋರ್ಬ್ಸ್, ಶ್ರೀಮತಿ ಎಚ್.ಎಸ್.(ಅನು), ೨೦೦೧, ಪು.೬೦

೯. ಚಂದ್ರಶೇಖರ ಟಿ.ಆರ್., ೨೦೦೧, ಪು.೭೮

೧೦. ಚಂದ್ರಪೂಜಾರಿ ಎಂ., ೨೦೦೧, ಪು.೭೭

೧೧. ಅದೇ, ಪು.೮೪

೧೨. ಚಂದ್ರಶೇಖರ ಟಿ.ಆರ್., ೧೯೯೮, ಪು.೧೮

೧೩. ಚಂದ್ರಶೇಖರ ಟಿ.ಆರ್., ೧೯೯೯, ಪು.೮

೧೪. ಉದ್ಧೃತ : ಲೀಲಾ ಮುಳ್ಳತ್ತಿ, ೧೯೯೬, ಪು.೬೩

೧೫. ಚಂದ್ರಶೇಖರ ಟಿ.ಆರ್., ೨೦೦೧, ಪು.೩೫

ಅಧ್ಯಾಯ ೫

ಭಾಗವಹಿಸುವಿಕೆಯ ಬದಲಾದ ಮಾದರಿಗಳು

ವಿಕೇಂದ್ರೀಕರಣ ಎನ್ನುವುದೇ ಬದಲಾವಣೆ ಮತ್ತು ಪರಿವರ್ತನೆ ಎನ್ನುವ ಸಂಗತಿಗಳನ್ನು ಗರ್ಭೀಕರಿಸಿಕೊಂಡಿದೆ. ಅತಿಯಾದ ನಗರೀಕರಣ, ಬೃಹತ್ ಪ್ರಮಾಣದ ಅಭಿವೃದ್ಧಿ ಯೋಜನೆಗಳು ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಣೀತ ಆಲೋಚನಾ ದಾಟಿಗಳು ಇಂದಿನ ನಮ್ಮ ಬದುಕಲ್ಲಿ ಹಲವು ರೀತಿಯ ಪಲ್ಲಟಗಳನ್ನು ತರುತ್ತಿವೆ. ತಂತ್ರಜ್ಞಾನವೇ ಆತ್ಯಂತಿಕ ಸಂಗತಿಯಾದ ಆಧುನಿಕತೆಯ ಆವರಣದಲ್ಲಿ ಅಧಿಕಾರ ಮತ್ತು ಜೀವ ಹಿಂಸೆಗಳು ಪ್ರಧಾನವಾಗುತ್ತಿವೆ. ಇಂದು ಪ್ರಗತಿ ಎನ್ನುವ ಪರಿಕಲ್ಪನೆಯು ವಿಜ್ಞಾನದ ಕಾರ್ಯಕ್ರಮಗಳಲ್ಲೊಂದಾಗಿದೆ.

ಪ್ರಗತಿ ಎನ್ನುವುದು ಬಂಡವಾಳಶಾಹಿಗಳ, ಜೀವವಿರೋಧಿ ಸರಕಾರಗಳ ಪ್ರಮುಖ ಅಸ್ತ್ರವಾಗಿದೆ. ಇಂದು ದೇಶದಲ್ಲಿ ಬೃಹತ್ ಪ್ರಮಾಣದ ವಿದೇಶಿ ಬಂಡವಾಳ ಹರಡಿಕೆಗೆ ಜಾಗ ಮಾಡಿ ಕೊಡಲಾಗಿದೆ. ಖಾಸಗೀಕರಣದಂತಹ ಪ್ರಕ್ರಿಯೆಗಳು ಆಂತಕಕಾರಿಯಾದ ಹಾಗೂ ಅಮೂರ್ತ ಮಾನವ ಬದುಕನ್ನು ರೂಪಿಸುತ್ತಿವೆ. ಅಭಿವೃದ್ಧಿ ಎನ್ನುವುದು ಪ್ರಭುತ್ವ ಮತ್ತು ಹಿಂಸಾರೂಪಗಳ ಸಂಕೀರ್ಣರೂಪ. ತಾನು ಮಾಡುವ ಏಕಮುಖಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತಡೆಯೊಡ್ಡುವ ಜನ ಶಕ್ತಿಯನ್ನು ಅದು ಸಹಿಸಲಾರದು. ತನ್ನ ಸ್ವಾರ್ಥಸಾಧನೆಗಾಗಿ ಬಂಡವಾಳಶಾಹಿ ಮತ್ತು ಅಧಿಕಾರಶಾಹಿಯೊಂದಿಗೆ ಸಮ್ಮಿಳಿತವಾದ ಪ್ರಭುತ್ವ ವ್ಯವಸ್ಥೆಯು ತಳಮಟ್ಟದಿಂದ ಏಳುವ ಬಹುಮುಖಿ ಪ್ರತಿರೋಧಗಳನ್ನು ಸೆದೆ ಬಡಿಯುವುದಲ್ಲದೆ ತನ್ನ ಜೀವ ವಿರೋಧಿ ಕ್ರಮಗಳನ್ನೆಲ್ಲಾ ಅದಕ್ಕೆ ಆರೋಪಿಸುತ್ತದೆ. ಸ್ಥಳೀಯ ಸಂಸ್ಕೃತಿಗಿಂತ ಶ್ರೀಮಂತ ಸಂಸ್ಕೃತಿ ಮೇಲಾಗಿ ಸ್ಥಳೀಯತೆ ಅನ್ಯವಾಗಿ ಮತ್ತು ಅಲ್ಪಸಂಖ್ಯಾತವಾಗಿ ಕೀಳರಿಮೆಯಿಂದ ಬಾಳುವಂತಾಗುತ್ತಿದೆ.

ವೈಜ್ಞಾನಿಕ ಪದ್ಧತಿಯ ಅಧ್ಯಯನ ವಿಧಾನಗಳ ಹೆಸರಿನಲ್ಲಿ ಅವುಗಳನ್ನಾಧರಿಸಿದ ಸಾಮಾಜಿಕ ಕಲ್ಪನೆ ಮತ್ತು ಪ್ರಗತಿಯ ಹೆಸರಲ್ಲಿ ಹಿಂದುಳಿದಿವೆ ಎಂದು ಕರೆಯುವ ಸಮುದಾಯ ಸಂಸ್ಕೃತಿಗಳ ಮೇಲೆ ಸಾಮಾಜಿಕ ಸುಧಾರಣೆಯ ಅಸಂಗತತನಗಳನ್ನು ಅಸ್ತ್ರಗಳನ್ನಾಗಿ ಬಳಸುತ್ತಿವೆ. ಮನುಷ್ಯ ಕೇಂದ್ರಿತವಾದಿ ಈ ಆಧುನಿಕ ಚಿಂತನೆಯು ತನಗೆ ಅನ್ಯವಾದದ್ದನ್ನು ಅಸ್ಪೃಶ್ಯಗೊಳಿಸಿ ತನಗೆ ಅನನ್ಯವಾಗುವುದನ್ನು ಬೆಳೆಸುತ್ತಿದೆ. ಅದೇ ಎಲ್ಲರ ಜೀವನ ಕ್ರಮ, ವೈಜ್ಞಾನಿಕ ಮಾದರಿಯ ಸಮಾಜದ ಪರಿಕಲ್ಪನೆ ಎಂದೂ ನಂಬಿಸುತ್ತಿದೆ. ವೈಜ್ಞಾನಿಕ ತಿಳುವಳಿಕೆಗೆ ಆಧುನಿಕತೆಯ ನೆಲೆ ಎನ್ನುವುದು ಪ್ರಾಕೃತಿಕ ನೆಲೆಗಟ್ಟಿನಿಂದ ನಾಗರಿಕ ಸಮಾಜದೆಡೆಗಿನ ಚಲನೆಯಾಗಿ ಕಾಣುತ್ತದೆ.

ಬರೀ ತಾಂತ್ರಿಕ ಆಧುನೀಕರಣ ಮತ್ತು ಅದರ ಸಂಬಂಧಿ ಉತ್ಪಾದನೆಗಳಿಗೇ ಹೆಚ್ಚು ಒತ್ತು ಬೀಳುತ್ತಿರುವ ಇಂದಿನ ಸಂದರ್ಭದಲ್ಲಿ ಅದರೊಂದರಿಂದಲೇ ಮೂಲಭೂತ ಪರಿವರ್ತನೆ ಸಾಧ್ಯವಾಗದು. ಯಾಕೆಂದರೆ ಸಮುದಾಯ ಸಂಪನ್ಮೂಲಗಳ ಬಳಕೆ ನಿರ್ಧಾರವನ್ನು ಕೇಂದ್ರೀಕೃತಗೊಳಿಸಿ ಅತಿಯಾದ ಅನುಭೋಗ ಪ್ರವೃತ್ತಿಗೆ ಹವಣಿಸುತ್ತಿರುವ ಯಂತ್ರ ನಾಗರಿಕತೆ ಪರಿಸರ ಮತ್ತು ಸಮಾಜಗಳ ಹಿತದೃಷ್ಟಿಯಿಂದ ಪ್ರಯೋಜನಕಾರಿಯಲ್ಲ. ಕಾರಣ ಶ್ರೀಮಂತಿಕೆ ಮತ್ತು ಬಂಡವಾಳ ಪ್ರಧಾನವಾದ ಈ ಪ್ರತಿಷ್ಠಿತ ಜೀವನಕ್ರಮ ಬಲಹೀನವಲಯಗಳತ್ತ ತನ್ನ ಬಂಡವಾಳವನ್ನು ತೊಡಗಿಸಲು ಮನಸ್ಸು ಮಾಡುವುದಿಲ್ಲ. ಇಂಥ ಕೇಂದ್ರೀಕೃತ ಹಿತಾಸಕ್ತಿಗಳಿಂದ ಬಹುತೇಕ ಜನರ ಆಕಾಂಕ್ಷೆಗಳನ್ನು ಬಗೆಹರಿಸಲು ಆಗುವುದಿಲ್ಲ. ಇಂಥ ಮೂಲಭೂತ ಸಂಗತಿಗಳನ್ನು ಬಗೆಹರಿಸುವಲ್ಲಿ ಕುಟುಂಬ, ಧರ್ಮ, ಸಮುದಾಯಗಳ ಪಾತ್ರ ದೊಡ್ಡದು. ಆದರೆ ಇಂದಿನ ಯಾಂತ್ರೀಕೃತ ಬದುಕು ಇಂಥ ಸಾಂಪ್ರದಾಯಕ ಸಂಸ್ಥೆಗಳಿಗೆ ಬೆಲೆ ಕೊಡುವುದಿಲ್ಲ. ಇವುಗಳ ನಾಶವೇ ಪರಿವರ್ತನೆ ಎಂದು ಅದು ಭಾವಿಸುತ್ತದೆ.

ಯಾಂತ್ರೀಕೃತ ಅಭಿವೃದ್ಧಿ ಮತ್ತು ಪ್ರಭುತ್ವಗಳು ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಪರಿಸರವನ್ನು ತನ್ನ ಕಾರ್ಯಕ್ಷೇತ್ರಗಳನ್ನಾಗಿಸಿಕೊಳ್ಳುತ್ತಿರುತ್ತವೆ. ಈ ಮೂಲಕ ಇಷ್ಟವಿಲ್ಲದ ಸಂಸ್ಕೃತಿಗಳ ಮೇಲೆ ಪ್ರಭುತ್ವವವು ಅಭಿವೃದ್ಧಿಯ ಮರಣ ಶಾಸನವನ್ನು ಹೇರುತ್ತದೆ. ಏಕಮುಖಿ ಅಭಿವೃದ್ಧಿಯ ಇದರ ಮಾನದಂಡಗಳು. ಕಾಲ-ದೇಶ, ಜನ-ಜಾತಿ, ಸ್ಥಳ ಮತ್ತು ಪ್ರಾಕೃತಿಕ ಭಿನ್ನತೆಗಳನ್ನು ಪರಿಗಣಿಸುವುದಿಲ್ಲ. ಈ ಏಕೀಕೃತ ಸೂತ್ರ ಬರೀ ಜಾಗತೀಕರಣದ್ದು ಮಾತ್ರವಲ್ಲ. ಇತಿಹಾಸದುದ್ದಕ್ಕೂ ನಡೆದದ್ದು.ಇಂಥ ಏಕೀಕೃತ ಮಾದರಿಗಳೇ ಸಾಮ್ರಾಜ್ಯವಾದವನ್ನು, ಊಳಿಗಮಾನ್ಯ ವ್ಯವಸ್ಥೆಯನ್ನು ಆವಿಷ್ಕರಿಸಿದ್ದು.

ಈ ರೀತಿಯ ಪ್ರತಿಷ್ಠಿತ ಮತ್ತು ಕೇಂದ್ರೀಕೃತ ಮಾದರಿಗಳನ್ನು ಒಡೆದು ವಿಕೇಂದ್ರೀಕೃತ ಮತ್ತು ಜನಸಾಮಾನ್ಯರ ಪರವಾದ ಸಾಂಸ್ಕೃತಿಕ ಜಗತನ್ನು ಪುನಾರಚಿಸಿಕೊಳ್ಳುವ ಹಂಬಲವೇ ಪಂಚಾಯತ್ ರಾಜ್ ವ್ಯವಸ್ಥೆಯದ್ದಾಗಿದೆ. ಅಧಿಕಾರ ಎನ್ನುವುದು ಮೇಲಿನ ಸ್ಥರದಿಂದ ಕೆಳಗಿನ ಸ್ಥರಗಳವರೆಗೆ ಹರಿದು ಬರಬೇಕು. ಈ ಪ್ರಕ್ರಿಯೆ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಸ್ವಯಮಾಡಳಿತ ಸಂಸ್ಥೆಗಳನ್ನಾಗಿಸಲು ಹಂಬಲಿಸುವಂತದ್ದು. ಹೀಗೆ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ರೂಪಗೊಂಡ ಯೋಜನೆಗಳು ಕೆಳಮಟ್ಟಕ್ಕೆ ಹರಿದು ಬರಬೇಕು. ಗ್ರಾಮಮಟ್ಟದಿಂದ ರೂಪಗೊಂಡ ಯೋಜನೆಗಳು ಮೇಲ್ಮುಖಿ ಚಲನೆಯನ್ನು ಪಡೆದುಕೊಳ್ಳಬೇಕು. ಯಾವ ರೀತಿಯಾಗಿ ನೂಲುವ ನೇಕಾರನ ಲಾಳಿಯು ಆ ಕಡೆಗೊಮ್ಮೆ ಈ ಕಡೆಗೊಮ್ಮೆ ಹರಿದಾಡಿ ಎಳೆಗಳನ್ನೆಲ್ಲಾ ಸೇರಿಸಿ ಉತ್ಕೃಷ್ಟ ನೇಯ್ಗೆಯನ್ನು

ರೂಪಿಸುತ್ತದೋ ಹಾಗೆ ಒಂದರೊಡನೊಂದು ವಿಲೀನಗೊಳ್ಳುವ ಮೂಲಕ ಸ್ಥಿರ ಬದುಕನ್ನು ಸಮಾನ ಆಯ್ಕೆ ಮತ್ತು ಅನುಭೋಗದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ. ಅಂದರೆ ವಿಕೇಂದ್ರೀಕರಣ ವ್ಯವಸ್ಥೆಯ ಸಾಧ್ಯವಾಗಿಸುವ ಸಮತಲರೂಪಿ ಅಧಿಕಾರ ಸಮಾಜದ ಎಲ್ಲ ಜಾತಿ-ವರ್ಗ, ಲಿಂಗಗಳಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಸಮಾನ ಭಾಗವಹಿಸುವಿಕೆಗೆ ಅವಕಾಶ ನೀಡಬೇಕಾಗುತ್ತದೆ. ಪ್ರತಿ ಪಂಚಾಯತ್ ವ್ಯವಸ್ಥೆಯು ಸ್ವಾಯತ್ತ ಸಂಸ್ಥೆಗಳಾಗಬೇಕು. ಈ ಸಂಸ್ಥೆಗಳಲ್ಲಿನ ಉನ್ನತಾಧಿಕಾರಿಗಳು ಜನಪ್ರತಿನಿಧಿಗಳ ಮೇಲ್ವಿಚಾರಣೆಯಲ್ಲಿ ಕೆಲಸಗಳನ್ನು ನಿರ್ವಹಿಸಬೇಕು. ಜನಪ್ರತಿನಿಧಿಗಳು ತೆಗೆದುಕೊಳ್ಳುವ ನಿರ್ಣಯ ಮತ್ತು ತೀರ್ಮಾನಗಳನ್ನು ಜಾರಿಗೊಳಿಸುವಲ್ಲಿ ಸಹಕರಿಸಬೇಕೇ ಹೊರತು ತಾವೇ ನಿರಕುಂಶಮತಿಗಳಾಗುವುದಲ್ಲ. ಆದರೆ ಇಂದಿನ ಹೆಚ್ಚಿನ ಪಂಚಾಯ್ತಿಗಳಲ್ಲಿ ಸರಕಾರಿ ಅಧಿಕಾರಿಗಳೇ ಸರ್ವಾಧಿಕಾರಿಗಳಾದ ಉದಾಹರಣೆಗಳು ಸಿಗುತ್ತವೆ. ವಿಕೇಂದ್ರೀಕರಣವು ಅಧಿಕಾರವನ್ನು ಮೇಲ್ಪುಸ್ಥರದಿಂದ ತಳಮಟ್ಟದ ಸಂಸ್ಥೆಗಳಿಗೆ ವರ್ಗಾಯಿಸಿದರೆ ಸಾಲದು ಅದು ಅಧಿಕಾರಶಾಹಿ ಮತ್ತು ಪ್ರಬಲವರ್ಗಗಳಿಂದ ಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಜನಶಕ್ತಿಗೆ ವರ್ಗಾವಣೆಯಾಗಬೇಕು.

ಇಂದು ಪ್ರಭುತ್ವವು ಹಿಂದೆ ಸರಿದು ಸಾಂಸ್ಥಿಕ ರಚನೆಗಳ ಮೂಲಕ ಸ್ಥಳೀಯ ದುರ್ಬಲ ವರ್ಗದವರ ರಕ್ಷಣೆ ಮತ್ತು ಹಿತಾಸಕ್ತಿಗಳ ಪೂರೈಕೆಗೆ ಹವಣಿಸುತ್ತಿದೆ. ಇದನ್ನು ಜಾಗತೀಕರಣ ಮತ್ತು ಖಾಸಗೀಕರಣಗಳ ಪ್ರಭಾವ ಎಂದು ಗುರುತಿಸಬಹುದು. ತಮ್ಮ ತಮ್ಮ ಅಗತ್ಯ ಮತ್ತು ಅಭಿವೃದ್ಧಿಗೆ ಬೇಕಾದ ಸಂಪನ್ಮೂಲಗಳನ್ನು ಅವರವರೇ ಕ್ರೋಢೀಕರಿಸಿಕೊಳ್ಳಬೇಕೆನ್ನುವ ಒತ್ತಾಯಗಳು ಕಾಣಿಸುತ್ತಿವೆ. ಜಾಗತೀಕರಣದ ಪ್ರಮುಖ ಲಕ್ಷಣವೇ ಈ ರೀತಿ ಅಧಿಕಾರ ಕ್ಷೇತ್ರದಿಂದ ಪ್ರಭುತ್ವವನ್ನು ದೂರಿಡುವುದು ಅತಿಯಾದ ಶ್ರೇಣೀಕರಣ ತುಂಬಿರುವ ವ್ಯವಸ್ಥೆಯೊಂದರಲ್ಲಿ ಸಾಂಸ್ಥಿಕ ಪರಿವರ್ತನೆಯ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯವೆ ಎನ್ನುವ ಗುಮಾನಿ ಬರುತ್ತದೆ. ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಮೂಲಭೂತ ಬದಲಾವಣೆಗಳಿಲ್ಲದೆ ವಿಕೇಂದ್ರೀಕರಣ ಸಫಲವಾದೀತೇ ಎನ್ನುವ ಸಂಗತಿಗಳು ಗಂಭೀರವಾದಂತವು.

ನಾನು ಅಧ್ಯಯನಕ್ಕೆ ಆಯ್ದುಕೊಂಡ ಹೊಸಪೇಟೆ ಮತ್ತು ಸಂಡೂರು ತಾಲೂಕುಗಳು ದೊಡ್ಡ ಸಾಮ್ರಾಜ್ಯ ಮತ್ತು ಪಾಳೆಗಾರಿಕೆ, ಊಳಿಗಮಾನ್ಯ ವ್ಯವಸ್ಥೆಗಳ ಬಹುಮುಖ್ಯ ಭಾಗಗಳಾಗಿ ಬೆಳೆದು ಬಂದಂಥವು. ಪ್ರವಾಸೋದ್ಯಮ, ಗಣಿಗಾರಿಕೆ, ವಾಣಿಜ್ಯ ಬೆಳೆಗಳು, ವಾಣಿಜೋದ್ಯಮ ಹೀಗೆ ದೊಡ್ಡ ವಹಿವಾಟಿನ ಕೇಂದ್ರಗಳಾಗಿ ಬೆಳೆಯುತ್ತಿವೆ. ವ್ಯಾಪಾರ ವಹಿವಾಟುಗಳು ಹೆಚ್ಚುತ್ತಿವೆ. ಕನ್ನಡ ವಿಶ್ವವಿದ್ಯಾಲಯ, ಜಿಂದಾಲ್ ಉಕ್ಕು ಕಾರ್ಖಾನೆ, ಗಣಿಗಾರಿಕೆ ಜನರ ಮೇಲೆ ಸ್ವಲ್ಪಮಟ್ಟಿನ ಪ್ರಭಾವ

ಬೀರಿದ್ದು ಕಂಡುಬರುತ್ತದೆ. ಹಾಗೆ ನೀರಾವರಿಯಿಂದಾಗಿ ಉತ್ಪನ್ನವಾಗುವ ಕಬ್ಬು, ಬಾಳೆ, ಸೂರ್ಯಕಾಂತಿ, ನೆಲ್ಲು, ಕುರಿಸಾಕಾಣಿಕೆ, ಡೈರಿ ಫಾರ್ಮ್, ಹಣ್ಣು ಹಂಪಲ ಬೆಳೆಗಳು ಎರಡೂ ತಾಲೂಕಿನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಈ ಎಲ್ಲ ಕಾರಣಗಳು ಎರಡೂ ತಾಲ್ಲೂಕಿನ ಜನರ ಬದುಕನ್ನು ಗುಣಾತ್ಮಕವಾಗಿ ಭಿನ್ನವಾಗಿಸಿವೆ. ಕೆಲವೊಂದು ಪ್ರದೇಶಗಳು ಮುಂದುವರಿದಂತೆ ಕಂಡರೆ ಇನ್ನೂ ಕೆಲವು ನಿಂತಲ್ಲಿಯೇ ನಿಂತಂತೆ ಕಂಡುಬರುತ್ತವೆ. ಪರಿವರ್ತನೆಯೆಂದರೆ ಹೀಗೆ ಇರಬೇಕು ಎನ್ನುವ ವಸಾಹತುಶಾಹಿ ಪ್ರಜ್ಞೆಯಿಂದ ಪೂರ್ವನಿರ್ಧಾರಿತವಾದಂತದ್ದು. ಭೌತಿಕ ಸ್ವರೂಪದ ಪರಿವರ್ತನೆಯನ್ನು ಹಂಬಲಿಸುವ ಇಂಥ ಚಿಂತನಾ ಸ್ವರೂಪಗಳು ಸಮಾಜವನ್ನು ಎರಡೂ ಹೋಳುಗಳನ್ನಾಗಿ ನೋಡುತ್ತವೆ. ಒಂದು ಸಾಂಪ್ರದಾಯಿಕ ಸಮಾಜ ಮತ್ತೊಂದು ಆಧುನಿಕ ಸಮಾಜ. ಆಧುನಿಕ ಸಮಾಜದ ಗುಣಲಕ್ಷಣಗಳನ್ನು ಮಾನದಂಡವನ್ನಾಗಿಟ್ಟುಕೊಂಡು ಸಾಂಪ್ರದಾಯಿಕ ಸಮಾಜದ ಪರಿವರ್ತನೆಯನ್ನು ಅಳೆಯಲಾಗುತ್ತದೆ.

ಕಾಲಾವಧಿ ದೃಷ್ಟಿಯಿಂದ ಪಂಚಾಯತ್‌ರಾಜ್‌ಗೆ ಸುಮಾರು ೨೦೦೦ ವರ್ಷಗಳ ಇತಿಹಾಸವಿದ್ದುದ್ದು ಕಂಡುಬರುತ್ತದೆ. ೨೦ನೇ ಶತಮಾನದ ತನಕವೂ ಅದೂ ಅಧಿಕಾರಶಾಹಿ ಮತ್ತು ಪ್ರಭುತ್ವಶಾಹಿ ವಶವಾಗೇ ಬೆಳೆದು ಬಂದಿತು. ೧೯೧೮ರ ಹೊತ್ತಿಗೆ ಕರ್ನಾಟಕದಲ್ಲಿ ಮೊಟ್ಟಮೊದಲಬಾರಿಗೆ ಜನಪ್ರತಿನಿಧಿಗಳು ಸ್ಥಳೀಯ ಆಡಳಿತದಲ್ಲಿ ಭಾಗವಹಿಸಲು ಅವಕಾಶ ಸಿಗುತ್ತದೆ. ಇಲ್ಲೆಲ್ಲ ಪುರುಷ ಪ್ರಾಧ್ಯಾನ್ಯತೆಯೇ ಹೆಚ್ಚಾಗಿದ್ದದ್ದು ಕಾಣುತ್ತದೆ.

ಸ್ವಾತಂತ್ರ್ಯ ನಂತರ ಭಾರತ ಆಧುನಿಕ ತಂತ್ರಜ್ಞಾನ ಮತ್ತು ಸಾಂಘಿಕ ರಚನೆಗಳನ್ನು ನಮ್ಮ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾಮಾಜಿಕ ಪರಿವರ್ತನೆಗೆ ತನ್ನನ್ನು ತೆರೆದುಕೊಂಡಿತು. ಇದರಿಂದ ತಕ್ಕಮಟ್ಟಿನ ಆರ್ಥಿಕ ಪ್ರಗತಿ ಸಾಧ್ಯವಾದರೂ ಸಾಮಾಜಿಕ ಪರಿವರ್ತನೆ ಹಾಗೂ ರಾಜಕೀಯ ಸಶಕ್ತೀಕರಣ ಸಾಧ್ಯವಾಗಲಿಲ್ಲ. ಪರಿಣಾಮವಾಗಿ ಆಧುನೀಕರಣದ ವಿರುದ್ಧ ಪ್ರತಿಭಟನೆಗಳು ಶುರುವಾದವು. ಪ್ರದೇಶ, ಭಾಷೆ ಇತ್ಯಾದಿ ಸಾಂಸ್ಕೃತಿಕ ನೆಲೆಗಳು ಜನರನ್ನು ಒಟ್ಟು ಸೇರಿಸಿದರೆ ಬಡತನ, ನಿರುದ್ಯೋಗ, ಅಸಮಾನತೆ ಇತ್ಯಾದಿ ಮೆಟಿರಿಯಲ್ ಪ್ರಶ್ನೆಗಳು ಚಳುವಳಿಗಳನ್ನು ಗಟ್ಟಿಗೊಳಿಸಿದವು. ಕೆಲವರು ಆಧುನೀಕರಣದ ತತ್ವವನ್ನೇ ಪ್ರಶ್ನಿಸಿದರೆ ಇನ್ನೂ ಕೆಲವರು ಅದರ ಅನುಷ್ಠಾನ ಕ್ರಮವನ್ನು ಟೀಕಿಸಿದರು. ತಾಂತ್ರಿಕ ಆಧುನೀಕರಣದತ್ತ ದಾಪುಗಾಲು ಹಾಕುತ್ತಿದ್ದವರನ್ನು ಈ ಪ್ರಭಟನೆಗಳು ಮತ್ತು ಇತರ ಬೆಳವಣಿಗೆಗಳು ತಡೆದು ಪುನರ್ ವಿಮರ್ಶೆ ಮಾಡಿಕೊಳ್ಳುವಂತೆ ಮಾಡಿದವು. ಪರಿಣಾಮವಾಗಿ ಅಭಿವೃದ್ಧಿಯ ವಿಭಾಗಗಳು ಜನಸಾಮಾನ್ಯರಿಗೆ ಯಾಕೆ ತಲುಪುತ್ತಿಲ್ಲ ಎನ್ನುವುದರ ಅಧ್ಯಯನಕ್ಕೆ ಬಲವಂತರಾಯ ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ೧೯೫೭ರಲ್ಲಿ ನೇಮಕವಾಯಿತು.

ಸ್ವಾತಂತ್ರ್ಯ ಒಂದು ದಶಕಗಳು ಕಳೆದರೂ ತಳಮಟ್ಟದಲ್ಲಿ ರಾಜಕೀಯ ಪ್ರಕ್ರಿಯೆ ಊಳಿಗಮಾನ್ಯ ಗುಣ ಲಕ್ಷಣಗಳಿಂದ ಮುಕ್ತವಾಗಿಲ್ಲ. ಸರ್ಕಾರದ ನೇತೃತ್ವದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಸವಲತ್ತುಗಳು ಸ್ಥಳೀಯ ಬಲಾಢ್ಯರ ಮೂಲಕವೇ ಹಾದೂ ಜನ ಸಾಮಾನ್ಯರಿಗೆ ತಲುಪಬೇಕಾಗಿದೆ. ಇದರಿಂದಾಗಿ ಅಭಿವೃದ್ಧಿಯ ಲಾಭ ಜನಸಾಮಾನ್ಯರಿಗೆ ತಲುಪುತ್ತಿಲ್ಲ ಎನ್ನುವ ತೀರ್ಮಾನಕ್ಕೆ ಆ ಕಮಿಟಿ ಬಂತು. ಆ ಸಮಸ್ಯೆಗಳನ್ನು ಪರಿಹರಿಸಲು ಚುನಾವಣೆಯ ಮೂಲಕ ಸ್ಥಳೀಯ ಸಂಸ್ಥೆಗಳನ್ನು ಸಂಘಟಿಸಬೇಕೆಂದು ಕಮಿಟಿ ಸಲಹೆ ನೀಡಿತು. ಜೊತೆಗೆ ಗ್ರಾಮೀಣಾಭಿವೃದ್ಧಿಗಾಗಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಜನರ ಆಶೋತ್ತರಗಳಿಗೆ ಅನುಗುಣವಾಗಿವೆಯೇ ಎಂದು ನಿರ್ಣಯಿಸುವ ಜವಾಬ್ದಾರಿಯನ್ನು ಚುನಾಯಿತ ಪ್ರತಿನಿಧಿಗಳು ಹೊರಬೇಕೆಂದು ಕೂಡ ಈ ಕಮಿಟಿ ಸೂಚಿಸಿತು.[೧] ಈ ಉದ್ದೇಶ ಈಡೇರಿಕೆಗಾಗಿ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕಮಿಟಿ ಸೂಚಿಸಿತು. ಗ್ರಾಮಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾಪಂಚಾಯತ್ ಇವೇ ಮೂರು ಸ್ಥರಗಳು. ಆದರೆ ಸರಿಯಾದ ಅಧಿಕಾರ ಮತ್ತು ಅನುದಾನ ಇಲ್ಲವಾಗಿ ಈ ವ್ಯವಸ್ಥೆ ಸೋಲಲಾರಂಭಿಸಿತು. ಅಧಿಕಾರಶಾಹಿಯ ಅನಿರ್ಬಂಧಿತ ಸಾಮ್ರಾಜ್ಯವಾದ ಈ ವ್ಯವಸ್ಥೆಯಲ್ಲಿ ಸಮಾಜದ ಅಂಚಿನಲ್ಲಿದ್ದವರಿಗೆ, ಪರಿಶಿಷ್ಟರಿಗೆ ಮಹಿಳೆಯರಿಗೆ ನಿರ್ಣಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶವಿರಲಿಲ್ಲ.

ಆದರೆ ೧೯೮೩ರಲ್ಲಿ ರಚನೆಗೊಂಡ ಕರ್ನಾಟಕದ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ ಆಕ್ಟಗಳು ಪರಿಣಾಮಕಾರಿಯಾದ ಪರಿವರ್ತನೆಗಳಿಗೆ ದಾರಿಮಾಡಿಕೊಟ್ಟವು. ಮೊಟ್ಟಮೊದಲಬಾರಿಗೆ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡುವ ಕೆಲಸ ಇಲ್ಲಿ ಆಯಿತು. ಈ ಶಾಸನವು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅಧಿಕಾರ ಪ್ರಕಾರ್ಯಗಳನ್ನು ನೀಡುವುದರ ಜೊತೆಗೆ ಜಿಲ್ಲಾಮಟ್ಟದಲ್ಲಿ ಅಧಿಕಾರಿಗಳು ಜನಪ್ರತಿನಿಧಿಗಳು ಜವಾಬ್ದಾರರಾಗುವಂತೆ ಮಾಡಿತು. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಎಲ್ಲ ಜಾತಿ ಲಿಂಗ ವರ್ಗಗಳಿಗೆ ಅವಕಾಶ ನೀಡುವುದರ ಮೂಲಕ ಅವು ನಿಜವಾದ ಅರ್ಥದಲ್ಲಿ ಪ್ರಾತಿನಿಧಿಕವಾಗವಂತೆ ಮಾಡಲಾಯಿತು.[೨]

ಮಂಡಲ್‌ಪಂಚಾಯತ್ ಬಂದ ಮೇಲೆ ಕನಿಷ್ಠ ಮಟ್ಟದಲ್ಲಿ ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಯಾಕೆಂದರೆ ಶೇ.೨೫ರಷ್ಟು ಮಹಿಳಾ ಪ್ರಾತಿನಿಧ್ಯ ಮಾತ್ರ ಇಲ್ಲಿ ಜಾರಿಯಲ್ಲಿತ್ತು.

೧೯೮೫ರಲ್ಲಿ ಮಂಡಲ ಪಂಚಾಯತ್ ವ್ಯವಸ್ಥೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕಿನಲ್ಲಿ ೧೦ ಮಂಡಲಪಂಚಾಯ್ತಿಗಳು, ಸಂಡೂರು ತಾಲೂಕಿನಲ್ಲಿ ೧೦ ಮಂಡಲ ಪಂಚಾಯ್ತಿಗಳು ಅಸ್ತಿತ್ವದಲ್ಲಿದ್ದವು. ಸಂಡೂರು ತಾಲೂಕಿನ ೧೦ ಮಂಡಲ ಪಂಚಾಯ್ತಿಗಳೆಂದರೆ ಚೊಮ್ಮಗಟ್ಟ, ಚೋರನೂರು, ಬಂಡ್ರಿ, ಯಶವಂತನಗರ, ಕೃಷ್ಣನಗರ, ತೋರಣಗಲ್ಲು, ವಿಠಲಾಪುರ, ಭುಜಂಗನಗರ,

ಸಂಡೂರು. ಹೊಸಪೇಟೆ ತಾಲೂಕಿನಲ್ಲಿರುವ ೧೦ ಮಂಡಲ ಪಂಚಾಯ್ತಿಗಳೆಂದರೆ ಮರಿಯಮ್ಮನಹಳ್ಳಿ, ಚಿಲಕನಹಟ್ಟಿ, ಪಾಪಿನಾಯಕನಹಳ್ಳಿ, ಸುಗ್ಗೇನಹಳ್ಳಿ, ಮಲಪನಗುಡಿ, ಡಣಾಪುರ, ಗಾದಿಗನೂರು, ಸಣಾಪುರ, ರಾಮಸಾಗರ, ನಾಗೇನಹಳ್ಳಿ.

೧೯೮೭ರಲ್ಲಿ ಅಸ್ತಿತ್ವದಲ್ಲಿದ್ದ ಮಂಡಲ ಪಂಚಾಯತಿ ಚುನಾವಣೆಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಗುರುತಿಸಲು ಅಂಕಿ ಅಂಶಗಳನ್ನು ಪಡೆಯಲು ಹೊಸಪೇಟೆ ಮತ್ತು ಸಂಡೂರಿನ ತಾಲೂಕು ಕಚೇರಿಗಳಿಗೆ ಅಲೆದಾಡಿದರೆ ಬೇಕಾದ ಅಂಕಿ ಅಂಶಗಳು ದೊರೆಯಲಿಲ್ಲ. ಈಗಿರುವ ಗುಮಾಸ್ತರು ಧೂಳು ಹಿಡಿದಿರುವ ಹಿಂದಿನ ಕಡತಗಳನ್ನು ಹೊರತೆಗೆಯಲು ಹಿಂದೆ ಮುಂದೆ ನೋಡಿದರು. ಇಂದು ಬನ್ನಿ, ನಾಳೆ ಬನ್ನಿ ಎಂದು ಓಡಾಡಿಸಿದರು. ಆದರೆ ಇವರು ಸಹಕರಿಸಲಿಲ್ಲ. ನಂತರ ಆಯಾ ಮಂಡಲ ಪಂಚಾಯ್ತಿಗಳ ಸ್ಥಳಕ್ಕೇ ಹೋಗಿ ಕ್ಷೇತ್ರ ಕಾರ್ಯ ನಡೆಸಿ ದೊರೆತಿರುವ ಮಾಹಿತಿ ಅಂಕಿ ಅಂಶಗಳ ಮೂಲಕ ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಆಗಿನ ಮಂಡಲ ಪಂಚಾಯ್ತಿಯ ಅನೇಕ ಮಾಜಿ ಪ್ರಧಾನರು ಮಾಹಿತಿಗಳನ್ನು ಒದಗಿಸಿದ್ದಾರೆ.

ಕೋಷ್ಟಕ ೪೭

ಜಾತಿ ಪಂಗಡದ ವಿವರ (ಮಂಡಲ ಪಂಚಾಯ್ತಿ)

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಸಾಮಾನ್ಯ ಕ್ಷೇತ್ರ	೪೬	೮೦.೭೦	೧೯	೪೭.೫
೨	ಪರಿಶಿಷ್ಟ ಜಾತಿ				
	ಪರಿಶಿಷ್ಟ ಪಂಗಡ	೧೧	೧೯.೨೯	೨೧	೫೨.೫
೪	ಹಿಂದುಳಿದ ವರ್ಗಗಳು	--	--	--	--
	ಒಟ್ಟು	೫೭	೧೦೦	೪೦	೧೦೦

ಮೇಲೆ ತಿಳಿಸಿರುವ ಕೋಷ್ಟಕದಲ್ಲಿ ಹೊಸಪೇಟೆ ತಾಲೂಕಿನ ೧೦ ಮಂಡಲ ಪಂಚಾಯ್ತಿಗಳಲ್ಲಿ ೮ ಮಂಡಲ ಪಂಚಾಯ್ತಿಗಳಿಂದ ಮಾತ್ರ ಅಂಕಿ ಅಂಶಗಳು ದೊರೆತಿವೆ. ಅದನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಸಂಡೂರು ತಾಲೂಕಿನ ಮಂಡಲ ಪಂಚಾಯ್ತಿಗಳಲ್ಲಿ ೧೯೮೭ರಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಶೇ.೮೦.೭೦ ರಷ್ಟು ಚುನಾಯಿತ ಮಹಿಳೆಯರೂ, ಅನುಸೂಚಿತ ಜಾತಿ ಪಂಗಡಗಳಿಂದ ಶೇ.೧೯.೨೯ ರಷ್ಟು ಮಹಿಳೆಯರು ಆಯ್ಕೆಯಾಗಿರುವುದು ತಿಳಿಯುತ್ತದೆ.

ಹಾಗೆಯೇ ಹೊಸಪೇಟೆ ತಾಲೂಕಿನ ಮಂಡಲ ಪಂಚಾಯ್ತಿಗಳಲ್ಲಿ ಸಾಮಾನ್ಯ ಕ್ಷೇತ್ರದಿಂದ ಶೇ.೪೭.೫ ರಷ್ಟು ಮಹಿಳೆಯರು ಆಯ್ಕೆಯಾಗಿದ್ದಾರೆ. ಅನುಸೂಚಿತ ಜಾತಿ ಪಂಗಡಗಳಿಂದ ಶೇ.೫೨.೫ ರಷ್ಟು ಮಹಿಳೆಯರು ಆಯ್ಕೆಯಾಗಿರುವುದು ಗೋಚರವಾಗುತ್ತದೆ.

ಈ ಮಂಡಲ ಪಂಚಾಯತಿಗಳ ಮಾಜಿ ಪ್ರಧಾನರನ್ನು ಭೇಟಿಯಾಗಿದ್ದಾಗ ಸರ್ಕಾರ ಕೊಟ್ಟಿರುವಂತೆ ಶೇ.೨೫ ರಷ್ಟು ಮೀಸಲಾತಿಯು ಆಗ ಜಾರಿಯಲ್ಲಿತ್ತೆ ಎಂದು ಪ್ರಶ್ನಿಸಿದಾಗ, ಶೇ.೨೫ ರಷ್ಟು ಮೀಸಲಾತಿಯು ಅಷ್ಟು ಕಟ್ಟು ನಿಟ್ಟಾಗಿ ಜಾರಿಯಲ್ಲಿರಲಿಲ್ಲ ಎಂದು ತಿಳಿಸಿದರು. ಮಹಿಳೆಯರನ್ನು ಮನೆಯಿಂದ ಹೊರಗೆ ತರುವುದು ಬಹಳ ಕಷ್ಟವಾಗಿತ್ತು. ಕಾರಣ ರಾಜಕೀಯ ಪ್ರವೇಶವು ಮರ್ಯಾದಸ್ಥ ಕುಟುಂಬದ ಮಹಿಳೆಯರಿಗೆ ಶೋಭಿಸದು. ಮಹಿಳೆಯರಿಗೇಕೆ ರಾಜಕೀಯ ಅದೆಲ್ಲ ಪುರುಷರಿಗೇ ಸರಿ ಎಂಬ ಅಭಿಪ್ರಾಯ ಆಗ ಇತ್ತು ಎಂದು ಆ ಪ್ರಧಾನರು ಅಭಿಪ್ರಾಯಪಟ್ಟರು.[೬]

ಮಂಡಲ ಪಂಚಾಯ್ತಿಯ ಮಾಜಿ ಸದಸ್ಯೆಯೊಬ್ಬರನ್ನು ಸಂದರ್ಶಿಸಿ ಮಾತನಾಡಿದಾಗ ಅವರಿಂದ ಅನೇಕ ಉಪಯುಕ್ತ ಮಾಹಿತಿಗಳು ದೊರೆತವು. ಆ ಸಂದರ್ಶನದಲ್ಲಿ ಅವರ ಅಭಿಪ್ರಾಯವು ಹೀಗಿದೆ : ಸುಮಾರು ೧೫ ವರ್ಷಗಳ ಹಿಂದೆ ನಾನು ಮಂಡಲ ಪಂಚಾಯತಿಗೆ ಆಯ್ಕೆಯಾಗಿದ್ದೆನು. ನನಗೆ ಕುಟುಂಬದಲ್ಲಿ ಪ್ರೋತ್ಸಾಹವಿತ್ತು. ನಾನಾಗಲಿ, ಕುಟುಂಬದವರಾಗಲಿ ರಾಜಕೀಯಕ್ಕೆ ಪ್ರವೇಶಿಸಬೇಕೆಂದು ನಿರ್ಧರಿಸಿರಲಿಲ್ಲ. ಆದರೆ ಮಹಿಳೆಯ ಸ್ಥಾನಕ್ಕೆ ಸ್ಪರ್ಧಿಸಲು ಯಾವ ಮಹಿಳೆಯು ಮುಂದೆ ಬರಲಿಲ್ಲ. ಅನಿವಾರ್ಯವಾಗಿ ಕುಟುಂಬದವರ ಒತ್ತಾಸೆಯಿಂದ ನಾನು ಸ್ಪರ್ಧಿಸಿ ಆಯ್ಕೆಯಾದೆ. ನಾನು ಎಲ್ಲ ಸಭೆಗಳಿಗೂ ಹಾಜರಾಗುತ್ತಿದ್ದೆ. ಜೊತೆಗೆ ಪತಿಯು ಬರುತ್ತಿದ್ದರು. ಕಡಿಮೆ ಸಂಖ್ಯೆಯಲ್ಲಿದ್ದ ಇತರ ಮಹಿಳೆಯರು ಮಾತನಾಡುತ್ತಿರಲಿಲ್ಲ. ನನಗೂ ಬಹಳ ಸಂಕೋಚ ಮತ್ತು ಮುಜುಗರವಾಗುತ್ತಿತ್ತು. ನಾನೆಂದೂ ಹೀಗೆ ಕುಟುಂಬದಿಂದ ಹೊರಗೆ ಬಂದು ಸಾರ್ವಜನಿಕವಾಗಿ ಬೆರೆತಿರಲಿಲ್ಲ. ಆಗ ಮಹಿಳೆಯರ ಭಾಗವಹಿಸುವಿಕೆ ಕಡಿಮೆ ಇತ್ತು ಎಂದು ತಿಳಿಸಿದರು.[೭] ೧೯೯೦ರಲ್ಲಿ ಜೋಸ್ ರಾಫೆಲ್ ಅವರು ಧಾರವಾಡ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಪಂಚಾಯತ್‌ನ್ನು ಅಧ್ಯಯನ ಮಾಡಿದ್ದಾರೆ. ಅದು ಮಂಡಲ ಪಂಚಾಯಿತಿ ವ್ಯವಸ್ಥೆ ಆರಂಭವಾದ ದಿನಗಳು. ೧೯೮೭ರಲ್ಲಿ ಪ್ರಥಮ ಗ್ರಾಮಸಭೆ ಕೆಲವು ಮಂಡಲಗಳಲ್ಲಿ ನಡೆಯಿತು. ಊರವರಿಗೆ ಇದೇನೆಂದು ತಿಳಿಯುವ ಕುತೂಹಲ. ಜತೆಗೆ ತಮ್ಮ

ಅಗತ್ಯಗಳನ್ನು ಗ್ರಾಮಸಭೆಯಲ್ಲಿ ಹೇಳಿದರೆ ಪರಿಹಾರ ಸಿಗುತ್ತದೆ ಎಂಬ ಭರವಸೆ ಕೂಡ ಇತ್ತು. ಹಾಗಾಗಿ ಅಧಿಕ ಸಂಖ್ಯೆಯಲ್ಲಿ ಜನ ಸೇರಿದ್ದರು ಎನ್ನುತ್ತಾರೆ ರಾಫೆಲ್. ಆದರೆ ಬರುಬರುತ್ತಾ ಗ್ರಾಮಸಭೆಯಲ್ಲಿ ಹಾಜರಾಗುವ ಮೂಲಕ ತಮ್ಮ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂದು ಅರಿವಾಗುತ್ತಲೇ ಹಾಜರಿ ಕೂಡ ಕಡಿಮೆಯಾಗುತ್ತಾ ಬಂತು ಎಂದು ರಾಫೆಲ್ ಅಭಿಪ್ರಾಯ ಪಡುತ್ತಾರೆ.[೫] ಗ್ರಾಮಸಭೆ ಕುರಿತು ಹೆಚ್ಚು ಕಡಿಮೆ ಇದೇ ತೀರ್ಮಾನಕ್ಕೆ ಕೆ.ಎಸ್.ನಾರಾಯಣ ಕೂಡ ಬರುತ್ತಾರೆ.[೬] ಇವರ ಈ ಅಭಿಪ್ರಾಯವು ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಮಂಡಲ ಪಂಚಾಯಿತಿಗಳಿಗೂ ಅನ್ವಯವಾಗುತ್ತದೆ. ಇದರಿಂದ ಪುರುಷರ ಭಾಗವಹಿಸುವಿಕೆಯೇ ಕ್ಷೀಣ ಸ್ಥಿತಿಯಲ್ಲಿದ್ದಾಗ ಮಹಿಳೆಯರ ಭಾಗವಹಿಸುವಿಕೆಯ ಮಟ್ಟವನ್ನು ಮಂಡಲ ಪಂಚಾಯತಿಗಳಲ್ಲಿ ಊಹಿಸಬಹುದು.

ಮಂಡಲ ಪಂಚಾಯ್ತಿ ನಂತರ ೧೯೯೪-೯೫ರಲ್ಲಿ ನಡೆದ ಗ್ರಾಮಪಂಚಾಯ್ತಿಗಳ ಸದಸ್ಯರ ಆಯ್ಕೆಯ ಚುನಾವಣೆಯು ಶೇ.೩೩.೩೩ ರಷ್ಟು ಮೀಸಲಾತಿಯು ಬಂದ ನಂತರ ನಡೆದ ಪ್ರಥಮ ಚುನಾವಣೆಯಾಗಿದೆ. ನಂತರ ೨೦೦೦-೨೦೦೧ರಲ್ಲಿ ನಡೆದ ಗ್ರಾಮಪಂಚಾಯ್ತಿಗಳ ಚುನಾವಣೆಯು ಎರಡನೇ ಚುನಾವಣೆಯಾಗಿದೆ.

ಗ್ರಾಮಪಂಚಾಯ್ತಿಗಳಿಗೆ ನಡೆದ ಪ್ರಥಮ ಚುನಾವಣೆಯಲ್ಲಿ ಹೊಸಪೇಟೆ ತಾಲೂಕಿನ ಒಟ್ಟು ಗ್ರಾಮಪಂಚಾಯ್ತಿಗಳಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ೧೪೭. ಇವರಲ್ಲಿ ಶೇ.೨೪.೪೮ ರಷ್ಟು ಮಹಿಳೆಯರು ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಪರಿಶಿಷ್ಟ ಜಾತಿಯಿಂದ ಶೇ.೨೫.೧೭ ರಷ್ಟು ಮಹಿಳೆಯರು, ಪರಿಶಿಷ್ಟ ಪಂಗಡದಿಂದ ಶೇ.೧೯ ರಷ್ಟು ಮಹಿಳೆಯರು ಹಿಂದುಳಿದ ವರ್ಗಗಳಿಂದ ಶೇ.೩೧.೨೯ ರಷ್ಟು ಮಹಿಳೆಯರು ಆಯ್ಕೆಯಾಗಿರುವುದು ತಿಳಿದುಬಂದಿದೆ.

ಸಂಡೂರು ತಾಲೂಕು ಗ್ರಾಮಪಂಚಾಯಿತಿಗಳಿಗೆ ನಡೆದ ಪ್ರಥಮ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೨೪.೮೨ ರಷ್ಟು, ಪರಿಶಿಷ್ಟಜಾತಿಯಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೨೦.೫೬ ರಷ್ಟು, ಪರಿಶಿಷ್ಟ ಪಂಗಡದಿಂದ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೨೪.೮೨ ರಷ್ಟು, ಹಿಂದುಳಿದ ವರ್ಗ ಎ ಮತ್ತು ಬಿ ಗುಂಪಿನಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೩೨.೬೨ ರಷ್ಟಿರುವುದು ಅಂಕಿ ಅಂಶಗಳಿಂದ ದೃಢವಾಗಿದೆ.

ನಂತರ ನಡೆದ ೨೦೦೦-೨೦೦೧ರ ಗ್ರಾಮಪಂಚಾಯ್ತಿ ಚುನಾವಣೆಯಲ್ಲಿ ಹೊಸಪೇಟೆ ತಾಲೂಕಿನಲ್ಲಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿರುವ ಚುನಾಯಿತ ಮಹಿಳೆಯರು ಶೇ.೨೦.೨೮ ರಷ್ಟು, ಪರಿಶಿಷ್ಟ ಜಾತಿಯಿಂದ ಆಯ್ಕೆಯಾದ ಚುನಾಯಿತ ಮಹಿಳೆಯು ಶೇ.೨೬.೮೧ರಷ್ಟು, ಪರಿಶಿಷ್ಟ ಪಂಗಡದಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೨೦ ರಷ್ಟು. ಹಿಂದುಳಿದ ವರ್ಗ ಎ ಗುಂಪಿನಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೩೧.೧೫ ರಷ್ಟು. ಹಿಂದುಳಿದ ವರ್ಗ ಬಿ ಗುಂಪಿನಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೦.೭೨ ರಷ್ಟು ಇರುವುದು ಕಂಡುಬರುತ್ತದೆ.

ಅಂತೆಯೇ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ೨೦೦೦-೨೦೦೧ರಲ್ಲಿ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೨೯.೮೦ ರಷ್ಟು, ಪರಿಶಿಷ್ಟ ಜಾತಿಯಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೧೭.೨೧ ರಷ್ಟು, ಪರಿಶಿಷ್ಟ ಪಂಗಡದಿಂದ ಆಯ್ಕೆಗೊಂಡ ಚುನಾಯಿತ ಮಹಿಳೆಯರು ಶೇ.೨೨.೫೧ ರಷ್ಟು, ಹಿಂದುಳಿದ ವರ್ಗ ಎ ಮತ್ತು ಬಿ ಗುಂಪಿನಿಂದ ಆಯ್ಕೆಯಾದ ಚುನಾಯಿತ ಮಹಿಳೆಯರು ಶೇ.೩೦.೪೬ ರಷ್ಟು ಇರುವುದು ಕಂಡುಬರುತ್ತದೆ. ಪ್ರಥಮ ಮತ್ತು ದ್ವಿತೀಯ ಚುನಾವಣೆಗಳಲ್ಲಿ ಆಯ್ಕೆಯಾದವರ ಫಲಿತವನ್ನು ಹಾಗೂ ವ್ಯತ್ಯಾಸಗಳನ್ನು ಕೆಳಗಿನ ಕೋಷ್ಟಕಗಳ ಮೂಲಕ ಅರಿಯಬಹುದು.

ಕೋಷ್ಟಕ ೪೮

ಁ೯೯೪-೯೫ರ ಚುನಾವಣೆಯಲ್ಲಿ ಆಯ್ಕೆಯಾದವರು

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಸಾಮಾನ್ಯ ಕ್ಷೇತ್ರ	೩೬	೨೪.೪೮	೩೫	೨೪.೮೨
೨	ಪರಿಶಿಷ್ಟ ಜಾತಿ	೩೭	೨೫.೧೭	೨೯	೨೦.೫೬
೩	ಪರಿಶಿಷ್ಟ ಪಂಗಡ	೨೮	೧೯	೩೫	೨೪.೮೨
೪	ಹಿಂದುಳಿದ ವರ್ಗಗಳು	೪೬	೩೧.೨೯	೪೬	೩೬.೬೨
ಒಟ್ಟು		೧೪೭	೧೦೦	೧೪೧	೧೦೦

ಕೋಷ್ಟಕ ೪೯

೨೦೦೦-೨೦೦೧ರ ಚುನಾವಣೆಯಲ್ಲಿ ಆಯ್ಕೆಯಾದವರು

ಕ್ರ.ಸಂ.	ವಿವರ	ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು		ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು	
		ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
೧	ಸಾಮಾನ್ಯ ಕ್ಷೇತ್ರ	೪೫	೨೯.೮೦	೨೮	೨೦.೨೮
೨	ಪರಿಶಿಷ್ಟ ಜಾತಿ	೨೬	೧೭.೨೧	೩೭	೨೬.೮೧
೩	ಪರಿಶಿಷ್ಟ ಪಂಗಡ	೩೪	೨೨.೫೧	೨೯	೨೧
೪	ಹಿಂದುಳಿದ ವರ್ಗಗಳು	೪೬	೩೦.೪೬	೪೪	೩೧.೫೮
	ಒಟ್ಟು	೧೫೧	೧೦೦	೧೩೮	೧೦೦

ಕೌಟುಂಬಿಕವಾಗಿ ಮಹಿಳೆಯರ ಸ್ಥಾನಮಾನವನ್ನು ಮಂಡಲ ಪಂಚಾಯಿತಿಯ ಕಾಲಕ್ಕೂ, ಗ್ರಾಮ ಪಂಚಾಯಿತಿಯ ಕಾಲಕ್ಕೂ ಹೋಲಿಸಿ ನೋಡಿದಾಗ ಅಂತಹ ಮುಖ್ಯವಾದ ಬದಲಾವಣೆಗಳೇನೂ ಆಗಿಲ್ಲವೆನಿಸುತ್ತದೆ. ಆಗಲೂ ಮಹಿಳೆಯರನ್ನು ಚುನಾವಣಾ ಸ್ಪರ್ಧೆಗೆ ನಿಲ್ಲಿಸಬೇಕಾದರೆ ಕುಟುಂಬದಲ್ಲಿ ಹಿರಿಯರೆಲ್ಲರೂ ಸೇರಿ ಚರ್ಚಿಸುತ್ತಿದ್ದರು. ಮಹಿಳೆ ಮನೆಯಿಂದ ಹೊರಗೆ ಹೋಗುವುದರಿಂದ ಅದು ತಮ್ಮ ಕುಟುಂಬದ, ಮನೆತನದ ಮಾನ ಮರ್ಯಾದೆ ಪ್ರತಿಷ್ಠೆಗಳ ಮೇಲೆ ಯಾವರೀತಿ ಪ್ರಭಾವ ಬೀರುತ್ತದೆ ಎಂದು ಯೋಚಿಸುತ್ತಿದ್ದರು. ಕುಟುಂಬದಿಂದ ಮಹಿಳೆ ಹೀಗೆ ಹೊಸ್ತಿಲಿನಿಂದ ಮುಖ್ಯವಾಗಿ ಅಡಿಗೆ ಮನೆಯಿಂದ ಹೊರಬಂದು ಅದೂ ರಾಜಕೀಯದಲ್ಲಿ ಸ್ಪರ್ಧಿಸುವುದು ಎಂದರೆ, ಕುಟುಂಬದ ಯಜಮಾನ ತನ್ನ ಹೆಣ್ಣುಮಕ್ಕಳನ್ನು ನಿಯಂತ್ರಣದಲ್ಲಿ ಇರಿಸಿ ಕೊಂಡಿಲ್ಲ ಎಂದೇ ಅರ್ಥ. ನಂತರ ಆಕೆ ಮಾನಮರ್ಯಾದೆ, ಗೌರವ ಇಲ್ಲದವಳು, ಚಾರಿತ್ರ್ಯಹೀನಳು ಎಂಬ ಅಪಹಾಸ್ಯಕ್ಕೆ ಈಡಾಗಬೇಕಾಗುತ್ತಿತ್ತು. ಇಷ್ಟಲ್ಲದೆ ಆಕೆಯ ಪ್ರತಿನಿಧಿತ್ವವೂ ನಾಮಕಾವಸ್ತೆಗೆ ಮಾತ್ರವಾಗಿರುತ್ತಿತ್ತು. ಆಕೆ ಯಾವುದೇ ರೀತಿಯಲ್ಲಿ ರಾಜಕಾರಣದಲ್ಲಿ ಸಹಭಾಗಿ ಆಗಬೇಕಾಗಿರಲಿಲ್ಲ ಎಂಬಂತಹ ಅಂಶಗಳು ಕ್ಷೇತ್ರಕಾರ್ಯದಲ್ಲಿ ಬೆಳಕಿಗೆ ಬಂದವು.

ಇದೆಲ್ಲವನ್ನು ಗಮನಿಸಿದಾಗ ಕುಟುಂಬದಲ್ಲಿ ಪುರುಷರ ಹಿಡಿತ ಯಾವಕಾರಣಕ್ಕೂ ಬದಲಾಗಿಲ್ಲ. ಮಹಿಳೆಯ ಭಾಗವಹಿಸುವಿಕೆಯ ಮಾದರಿ ಏಕಪ್ರಕಾರವಾಗಿದೆ ಎಂದು ತಿಳಿಯುತ್ತದೆ.

ಮಾಜಿ ಸದಸ್ಯೆಯನ್ನು ಮೂಢನಂಬಿಕೆಗಳನ್ನು ಕುರಿತು ಪ್ರಶ್ನಿಸಿದಾಗ ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ಹೆಸರಿನ ಬಲದಿಂದ ಸ್ಪರ್ಧಿಸುವುದು ಇತ್ತು. ನನ್ನ ಹೆಸರಿಗೆ ಬಲ ಇದ್ದುದರಿಂದ ನಾನೂ ಸ್ಪರ್ಧಿಸಬೇಕಾಯ್ತು ಎಂದರು. ನಂತರ ಆ ಸದಸ್ಯೆಯು ತುಲನಾತ್ಮಕವಾಗಿ ನೋಡಿದಾಗ ಈ ೧೫ ವರ್ಷಗಳಲ್ಲಿ ಮಹಿಳೆಯ ಭಾಗವಹಿಸುವಿಕೆಯು ಸುಧಾರಿಸಿದೆ ಎಂದು ತಿಳಿಸಿದರು. ಈ ಮಹಿಳೆಯು ಉನ್ನತ ಜಾತಿ(ಬ್ರಾಹ್ಮಣ)ಯವರಾಗಿದ್ದರು.

ಸದಸ್ಯೆಯ ಮಾತುಗಳು ನಿಜವೆನಿಸುತ್ತವೆ. ಶೇ.೩೩.೩೩ ರಷ್ಟು ಮೀಸಲಾತಿ ಬಂದ ನಂತರ ಸಂಖ್ಯಾತ್ಮಕವಾಗಿ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದು ಹೆಚ್ಚಾಗಿರುವುದು ಕಂಡುಬರುತ್ತದೆ. ಉಳಿದಂತೆ ಬದಲಾವಣೆಗಳು ಕಡಿಮೆ.

ಮನುಸ್ಮೃತಿಯಲ್ಲಿ ಮನು 'ಹುಡುಗಿ, ಯುವತಿ, ಮುದುಕಿ ಅಥವಾ ಹೆಂಗಸು ಮನೆಯಲ್ಲಿ ತನ್ನ ಯಜಮಾನನ್ನು ಕೇಳದೆ, ಸ್ವತಂತ್ರವಾಗಿ ಯಾವ ಕೆಲಸವನ್ನು ಮಾಡಕೂಡದು.[೭] ಹೆಂಗಸು ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಗಂಡನ, ಅವನಿಲ್ಲದಿದ್ದರೆ ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಬಾಳಬಹುದು. ಸ್ವತಂತ್ರಳಾಗುವ ಅವಶ್ಯಕತೆಯಿಲ್ಲ.[೮] ಈ ಮಾತುಗಳು ಮಹಿಳೆಯ ತಗ್ಗಿ ಬಗ್ಗಿ, ಒಂದು ವ್ಯಕ್ತಿತ್ವವಿಲ್ಲದಂತೆ ನಡೆದುಕೊಳ್ಳುತ್ತ ಬರುತ್ತಿರುವುದನ್ನು ಪರಂಪರೆಯು ಪುಷ್ಟೀಕರಿಸುತ್ತದೆ. ಮೀಸಲಾತಿಯು ದೊರೆತಾಕ್ಷಣ ಒಮ್ಮೆಲೆ ಮಹಿಳೆಯಿಂದ ರಾಜಕೀಯ ಭಾಗವಹಿಸುವಿಕೆಯಲ್ಲಿ ಕ್ರಿಯಾಶೀಲತೆಯನ್ನು, ಉತ್ತಮ ಗುಣಮಟ್ಟದ ಭಾಗವಹಿಸುವಿಕೆಯನ್ನು ನಿರೀಕ್ಷಿಸುವುದು ಅಸಾಧ್ಯವಾಗಿದೆ.

ಸಂವಿಧಾನದ ೭೩ನೇ ತಿದ್ದುಪಡಿಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನತ್ಮಕ ಸ್ಥಾನ ನೀಡಿತು. ಆ ನಿಮಿತ್ಯ ೧೯೯೩ರಲ್ಲಿ ಕರ್ನಾಟಕವು ಪಂಚಾಯತ್‌ರಾಜ್ ಕಾಯಿದೆಯನ್ನು ಪ್ರಚುರಗೊಳಿಸಿತು. ತೊಂಭತ್ತರ ದಶಕದಲ್ಲಿ ದೇಶದಲ್ಲಿ ನಡೆಯುತ್ತಿರುವ ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳ ತೀವ್ರ ಪರಿಣಾಮಗಳೊಂದು ಕಡೆ ಇದ್ದರೆ ೧೯೯೩ರ ೭೩ ಮತ್ತು ೭೪ರ ತಿದ್ದುಪಡಿ ಮೂಲಕ ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣಗಳನ್ನು ಸಂಯೋಜಿಸುವ ಕಾರ್ಯ ಮತ್ತೊಂದೆಡೆ. ಜನತೆಯನ್ನು ಕೇಂದ್ರವಾಗಿಸಿಕೊಂಡು ಸ್ವಾಭಿಮಾನ ಮತ್ತು ಸ್ವಾಯತ್ತ ಬದುಕನ್ನು ನಿರ್ಮಿಸಿಕೊಳ್ಳುವ ಒತ್ತಾಸೆಗೆ ವಿರುದ್ಧವಾಗಿ ಪರಾವಲಂಬನೆ ಪ್ರಧಾನವಾದ ಜಾಗತೀಕರಣದ ಫಲಿತಗಳ ಅನುಷ್ಠಾನ ಇನ್ನೊಂದೆಡೆ. ವಿಚಿತ್ರವೆಂದರೆ ಎರಡನ್ನು ಸರಕಾರದ ನೇತೃತ್ವದಲ್ಲೇ ಸಾಧಿತವಾಗುತ್ತಿರುವ ಸನ್ನಿವೇಶ. ವಿಜ್ಞಾನ ತಂತ್ರಜ್ಞಾನ ಕೇಂದ್ರ ಒಂದಾದರೆ ಮಾನವಮುಖಿ ಅಭಿವೃದ್ಧಿ ಆಸೆಹೊತ್ತು ಹಳ್ಳಿಯತ್ತ ನಡೆದ ವಿಕೇಂದ್ರೀಕರಣ ಪ್ರಕ್ರಿಯೆ ಮತ್ತೊಂದು.

ಈ ವ್ಯವಸ್ಥೆಯು ಮಹಿಳೆಯರಿಗಾಗಿ ಶೇಕಡ ೩೩.೩೩ರಷ್ಟು ಮೀಸಲಾತಿಯನ್ನು ನಿಗದೀಕರಿಸಲು ಪಂಚಾಯತ್‌ರಾಜ್ ವ್ಯವಸ್ಥೆಯ ಸುದೀರ್ಘ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಮಹಿಳೆಯರಿಗೆ, ಅಂಚಿನಲ್ಲಿರುವ ದುರ್ಬಲರಿಗೆ ಗಣನೀಯವಾದ ಅವಕಾಶಗಳನ್ನು ತೆರೆದಿಟ್ಟಿತು.

ಆದರೆ ಶ್ರೇಣೀಕೃತ ವ್ಯವಸ್ಥೆಯಲ್ಲಿ ಪರಂಪರೆಯಿಂದಲೂ ಅಧಿಕಾರದ ರುಚಿ ಅನುಭವಿಸುತ್ತ ಬಂದ ಪ್ರತಿಷ್ಠಿತ ವರ್ಗಗಳು ಅಧಿಕಾರವನ್ನು ಚುನಾಯಿತ ಪ್ರತಿನಿಧಿಗಳೊಂದಿಗೆ ಹಂಚಿಕೊಳ್ಳುವ, ಅಂಚಿನಲ್ಲಿರುವ ಮತ್ತು ಮಹಿಳಾ ಪ್ರತಿನಿಧಿಗಳನ್ನು ಸಮಾನತೆಯಿಂದ ನೋಡುವ ಹಂಬಲವನ್ನು ತೋರುತ್ತಿಲ್ಲ. ಸ್ವತಃ ಸರಕಾರ ಸಿದ್ಧವಿಲ್ಲದ ಸಂಗತಿಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರಕಿದವು. ಈ ಕಾರಣಗಳು ಜನಪ್ರತಿನಿಧಿಗಳಿಂದ ಮಹಿಳಾ ಸದಸ್ಯೆಯರಿಗೂ ಅಧಿಕಾರಿ ಮತ್ತು ಪ್ರತಿಷ್ಠಿತ ನೆಲೆಗಳ ನಡುವೆ ಸೌಹಾರ್ದಯುತ ಸಂಬಂಧವನ್ನು ಇಲ್ಲವಾಗಿಸಿವೆ.

ಜನಪ್ರತಿನಿಧಿಗಳಾಗಿ ಆಯ್ಕೆಯಾದವರಿಗೆ ತಾಂತ್ರಿಕವಾಗಿ ಅಧಿಕಾರ ಸಿಕ್ಕಿದೆ. ಆದರೆ ಅದನ್ನು ಅನುಷ್ಠಾನಕ್ಕೆ ತರಲು ಬೇಕಾದ ತಿಳುವಳಿಕೆಯ ಕೊರತೆ ಮತ್ತೊಂದು ಸಮಸ್ಯೆಯಾಗಿದೆ. ಬಹಳಷ್ಟು ಚುನಾಯಿತ ಮಹಿಳೆಯರಲ್ಲಿ ಪಂಚಾಯತ್ ವ್ಯವಸ್ಥೆಯ ಬಗ್ಗೆ ಸರಿಯಾದ ಕಲ್ಪನೆಯಿದ್ದಂತಿಲ್ಲ ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ಗಮನಿಸಿದ್ದೇವೆ. ಇದಕ್ಕೆ ಆಯ್ಕೆಯ ಅನಿವಾರ್ಯತೆ, ಅನಾಸಕ್ತಿ, ವೈಯಕ್ತಿಕ ಕೀಳರಿಮೆ ಅನಕ್ಷರತೆ ಮುಂತಾದ ಸಂಗತಿಗಳು ಕಾರಣವಾಗಿವೆ. ಈ ಬಗ್ಗೆ ಹಲವು ತರಬೇತಿ ತರಗತಿಗಳನ್ನು ಸರ್ಕಾರದ ವತಿಯಿಂದ ಸಂಘಟಿಸಿದ್ದರೂ ಫಲಿತ ಮಾತ್ರ ಶೂನ್ಯವಾಗಿದೆ.

ಮಹಿಳೆಗೆ ೩೩.೩೩ರ ಅನ್ವಯ ರಾಜಕೀಯ ಅಧಿಕಾರ ದೊರೆತಿದ್ದರು ಅದನ್ನು ಚಲಾಯಿಸುವಲ್ಲಿ ಪುರುಷಶಾಹಿ ವ್ಯವಸ್ಥೆ ಪ್ರಮುಖ ಅಡ್ಡಗಾಲು ಆಗಿದೆ. ಕುಟುಂಬ ಮಟ್ಟದಿಂದ ಹಿಡಿದ ಪಂಚಾಯತ್ ಮಟ್ಟದವರೆಗೂ ಇದು ಕಾಣುತ್ತದೆ. ಗಂಡ, ಮಗ, ತಮ್ಮ ಅಥವಾ ಧನಿ(ಯಜಮಾನ)ಯ ಇಚ್ಛಾನುಸಾರ ನಡೆಯುತ್ತಾರೆ. ಸಂದರ್ಶಿಸಿದ ಚುನಾಯಿತ ಸಂಖ್ಯೆಯ ಮಹಿಳಾ ಸದಸ್ಯೆಯರಲ್ಲಿ ಶೇ.೯೦ರಷ್ಟು ಮಹಿಳೆಯರೂ ಪರಿಪೂರ್ಣ ಸ್ವಾವಲಂಬಿಗಳಾಗಿದ್ದಾರೆ ಎಂದು ಧೈರ್ಯವಾಗಿ ಹೇಳಲು ಬರುವುದಿಲ್ಲ. ಆದರೆ ತಕ್ಕಮಟ್ಟಿನ ತಿಳುವಳಿಕೆ ಇದೆ ಎಂದು ಸಮಾಧಾನ ಪಟ್ಟುಕೊಳ್ಳಬಹುದಷ್ಟೆ. ಇವರು ಪುರುಷಶಾಹಿ ಮತ್ತು ಅಧಿಕಾರಶಾಹಿ ಕೈಗೊಂಬೆಗಳೆನ್ನುವುದು ಬಹುಮುಖ್ಯ ವಿಚಾರ. ತಮಗೆ ದಕ್ಕಿದ ಅಧಿಕಾರವನ್ನು ಉಪಯೋಗಿಸುವ ಸ್ಥಿತಿಯಲ್ಲಿ ಇವರಾರೂ ಇಲ್ಲ. ಇವರ ಮನೋಧರ್ಮ ಪುರುಷ ನಿರ್ಮಿತ ಸಮಾಜ ವ್ಯವಸ್ಥೆಯಿಂದ ನಿರ್ಮಿತವಾದದ್ದೂ ತಾನೆ. ಹೀಗಾಗಿ ಶಿಕ್ಷಣ, ತರಬೇತಿ, ಹೊರ ಬದುಕಿನ ಅನುಭವದ ಕೊರತೆ ಇವೆಲ್ಲ ಅವರನ್ನು ಬಾಧಿಸುತ್ತಿವೆ. ಮಹಿಳಾ ಅಧ್ಯಕ್ಷೆಯರಂತೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನನ್ನೊಂದಿಗೆ ಮಾತನಾಡುವುದಿರಲಿ ಮುಖ ಕೂಡ ತೋರಿಸದೆ ಹಿಂದೆ

ಸರಿದದ್ದು ಇದೆ. ಇದಕ್ಕೆ ಗಂಡನ ಭಯ ಬಹುಮುಖ್ಯ ಕಾರಣ. ಇಂತಹ ಸಂದರ್ಭದಲ್ಲಿ ಆತನೇ ಎಲ್ಲ ವಿವರಗಳನ್ನು ತನ್ನ ದೃಷ್ಟಿಕೋನದಲ್ಲಿ ತನ್ನ ಸಾಹಸವೆಂಬಂತೆ ಹೇಳಿದ್ದಿದೆ.

ಇದರಿಂದ ಕಂಡುಕೊಂಡದ್ದೇನೆಂದರೆ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಸ್ವಯಂ ಆಡಳಿತ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನಾಗಿ ರೂಪಿಸುವಲ್ಲಿ ಅನೇಕ ಸಮಸ್ಯೆಗಳಿವೆ ಎಂಬುದು. ಅದರಲ್ಲಿ ಬಹುಮುಖ್ಯವಾಗಿ ಲಿಂಗಸಂಬಂಧಿ ಸಮಸ್ಯೆಗಳೇ ಪ್ರಧಾನವಾದದ್ದು. ಹಾಗೆ ಜಾತಿ ಸಮಸ್ಯೆಗಳೂ ಇವೆ. ಅಧಿಕಾರಶಾಹಿ ಮತ್ತು ಪ್ರಭುತ್ವಶಾಹಿಗಳು ಕೆಳಸ್ತರಕ್ಕೆ ಅಧಿಕಾರವನ್ನು ನೀಡಿ ಹಂಚಿಕೊಳ್ಳಲು ಸಿದ್ಧವಿಲ್ಲದ ಸಮಸ್ಯೆಗಳೂ ಇವೆ. ಅನಕ್ಷರತೆ, ಹಿಂದುಳಿಯುವಿಕೆಯಂತಹ ಮೂಲಭೂತ ಸಮಸ್ಯೆಗಳು ಕ್ಷೇತ್ರದಲ್ಲಿ ಕಂಡುಬರುತ್ತವೆ. ಹೀಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕಾರಣಗಳೆಲ್ಲವೂ ವಿಕೇಂದ್ರೀಕರಣದ ಪರಿಣಾಮಕಾರಿ ಅನುಷ್ಠಾನಕ್ಕೆ ಆತಂಕಕಾರಿ ನೆಲಗಳಾಗಿ ಪರಿಣಿಸಿವೆ.

ಜಾಗತೀಕರಣ ಖಾಸಗೀಕರಣದ ಮೂಲಕ ಬದಲಾವಣೆಗಳು ಇಂದು ಜರುಗುತ್ತಿವೆ. ಈ ಬದಲಾವಣೆಗಳಲ್ಲಿ ಬಂಡವಾಳಶಾಹಿ ಮತ್ತು ಊಳಿಗಮಾನ್ಯಶಾಹಿ ಅಥವಾ ಶ್ರೀಮಂತ ವರ್ಗಗಳು ಮೈತ್ರಿ ಬಲಗೊಳ್ಳುತ್ತಿದೆ. ಅದು ಪ್ರತಿಷ್ಠಿತ ಜೀವನ ಕ್ರಮಗಳನ್ನು ಹುಟ್ಟುಹಾಕುತ್ತಿದೆ. ಐ.ಟಿ. ಮತ್ತು ಬಿ.ಟಿ.ಶಿಕ್ಷಣದ ಹೆಸರಿನಲ್ಲಿ ಮತ್ತೇ ಜನಸಾಮಾನ್ಯರನ್ನು ಶಿಕ್ಷಣದಿಂದ ವಂಚಿಸುವ ಕೆಲಸಗಳೂ ಆಗುತ್ತಿವೆ. ಪ್ರಸಕ್ತ ಆಡಳಿತ ವ್ಯವಸ್ಥೆಗಳೂ ಮಾರುಕಟ್ಟೆ ಲಾಭ ಇತ್ಯಾದಿ ಬಂಡವಾಳಶಾಹಿ ವ್ಯವಸ್ಥೆಗಳಿಗೇ ಆದ್ಯತೆ ಕೊಡುತ್ತಿವೆ. ಇಂತಹ ಬದಲಾವಣೆಗೆ ಸ್ಪಂದಿಸುತ್ತಿರುವವು ಆರ್ಥಿಕವಾಗಿ ಪ್ರಬಲವಾದ ವರ್ಗಗಳೇ ಎಂಬುದು. ಈ ಪ್ರಕ್ರಿಯೆಯಲ್ಲಿ ಮತ್ತೆ ದುರ್ಬಲವರ್ಗಗಳು, ಮಹಿಳಾ ಪ್ರಾತಿನಿಧ್ಯಗಳು ಮೂಲೆಗುಂಪಾಗುತ್ತಿವೆ. ಆಡಳಿತ ವ್ಯವಸ್ಥೆ ಅಂಚಿನಲ್ಲಿರುವ ಜನಸಾಮಾನ್ಯರ ದುರ್ಬಲರ ಬದುಕಿಗೆ ಸ್ಪಂಧಿಸುವಲ್ಲಿ ವಿಫಲವಾಗುತ್ತಿದೆ. ಇಂಥ ಪ್ರಭುತ್ವದ ಹಿತಾಸಕ್ತಿಗಳನ್ನು ಪ್ರತಿಭಟಿಸುವ ಕ್ರಿಯಾಶೀಲ ನೆಲೆಗಳನ್ನು ಪ್ರಭುತ್ವವು ದಮನಿಸುತ್ತದೆ.

ಆಧುನಿಕೋತ್ತರ ಚಿಂತಕರ ಪ್ರಕಾರ ಆಧುನೀಕರಣಕ್ಕೆ ನಿಜವಾಗಿಯೂ ಮಾನವ ನಿರ್ಮಿತ ಬಂಧನಗಳಿಂದ ಬಿಡಿಸುವ ಶಕ್ತಿಯಿಲ್ಲ. ಆಧುನಿಕರಣದಲ್ಲಿ ಅಂತರ್‌ಗತವಾಗಿಯೇ ಮೇಲು ಕೀಳು, ಹಿಂದುಳಿದ, ಮುಂದುವರೆದ ಇತ್ಯಾದಿ ವಿಂಗಡನೆಗಳಿವೆ. ನಾನು ಮತ್ತು ಇತರರು ವಸ್ತು ಮತ್ತು ಭ್ರಮೆ ಇತ್ಯಾದಿ ವಿರೋಧಾಭಾಸಗಳು ಎನ್‌ಲೈಟನ್‌ಮೆಂಟ್‌ನ ಕೂಸಾದ ಆಧುನೀಕರಣದ ಭಾಗಗಳೇ. ಇಲ್ಲಿ ದುರ್ಬಲವರ್ಗಗಳನ್ನು ಮಹಿಳಾ ಸಂವೇದನೆಗಳನ್ನು ಪ್ರಕೃತಿಯನ್ನು ಪ್ರಬಲಶಕ್ತಿಗಳು ಶೋಷಿಸುವ ಗುಣ ಎದ್ದುಕಾಣುತ್ತಿದೆ. ಆಧುನೀಕರಣದಲ್ಲಿ ಸುಧಾರಣೆಯ ಹೆಸರಿನಲ್ಲಿ ಹಳೇ ಜಾಡೇ ಗಟ್ಟಿಗೊಳ್ಳುತ್ತ ನಡೆದಿರುವುದನ್ನು ಕಾಣಬಹುದಾಗಿದೆ.

ಇಂದು ಆಧುನೀಕರಣವು ಅಮೂರ್ತ ಮನುಷ್ಯನ ಕಲ್ಪನೆಯೊಂದನ್ನು ಹುಟ್ಟು ಹಾಕುತ್ತಿದೆ. ಹಲವಾರು ಸಾಮಾಜಿಕ ವಿನ್ಯಾಸಗಳು, ಜಾತಿ ಶ್ರೇಣಿಗಳು, ಧರ್ಮದ ಪರಿಕಲ್ಪನೆಗಳು ಇರುವ ನಮ್ಮ ವ್ಯವಸ್ಥೆಯಲ್ಲಿ ಅಮೂರ್ತಸ್ವರೂಪದ ಮನುಷ್ಯನ ಕಲ್ಪನೆ ಸಮುದಾಯ ಮತ್ತು ಶ್ರಮಿಕ ಬದುಕಿಗೆ ವಿರುದ್ಧವಾದುದು. ಇಂದು ಗ್ರಾಮ ಪಂಚಾಯತ್ ಸದಸ್ಯರನ್ನು, ಅವರು ಪ್ರತಿನಿಧಿಸುವ ಕ್ಷೇತ್ರಗಳನ್ನು ಗಮನಿಸಿದಾಗ ಬಹಳಷ್ಟು ಹಿಂದುಳಿದ ಮತ್ತು ಹೊಸತನ್ನು ಧಾರಣ ಮಾಡುವ ಶಕ್ತಿಯಿಲ್ಲದ ಸಂಗತಿಗಳು ಅರಿವಿಗೆ ಬರುತ್ತವೆ. ಉದಾಹರಣೆಗೆ ಮೆಟ್ರಿ ಗ್ರಾಮಪಂಚಾಯ್ತಿಯ ವ್ಯಾಪ್ತಿಯ ನೆಲ್ಲಾಪುರ ಮತ್ತು ಚಿನ್ನಾಪುರ ಗ್ರಾಮಗಳಿಗೆ ಭೇಟಿಯಿತ್ತಾಗ ಅಲ್ಲಿನ ಜನ ನಮ್ಮನ್ನು ಸ್ವೀಕರಿಸಿದ ರೀತಿ ವಿಚಿತ್ರವಾಗಿತ್ತು. ಅವರ ನೋಟ ನಡವಳಿಕೆಗಳು ಏನೋ ವಿಚಿತ್ರವೊಂದನ್ನು, ತಮಗಿಂತ ಮಿಗಿಲಾದ ಶಕ್ತಿಯೊಂದನ್ನು ಕಂಡಂತೆ ಇದ್ದವು. ಸಾಮಾನ್ಯವಾಗಿ ಹೊಲಮನೆಯ ದುಡಿತವನ್ನೇ ನೆಚ್ಚಿಕೊಂಡ ಈ ಊರುಗಳಲ್ಲಿ ನಾವಂದುಕೊಳ್ಳುವ ಆಧುನೀಕರಣದ ಪ್ರವೇಶವೇ ಇಲ್ಲ. ಒಂದು ವೇಳೆ ಇದ್ದರೂ ಅದು ಅವರ ಪರಿಸರದಲ್ಲಿ ಅವರಂತೆಯೇ ಬಸವಳಿದು ನಿಂತಿದ್ದು ಕಾಣುತ್ತದೆ. ಇಂಥಲ್ಲಿ ಯಾಂತ್ರಿಕವಾದ ಆಧುನೀಕರಣದ ಆವಿಷ್ಕಾರಗಳಿಂದ ಏನನ್ನು ಮಾಡಲು ಸಾಧ್ಯ? ಯಾಕೆಂದರೆ ಆಧುನಿಕ ಮನುಷ್ಯನ ಪರಿಕಲ್ಪನೆ ತುಂಬಾ ವ್ಯಾವಹಾರಿಕವಾದದ್ದು. ವೈಯಕ್ತಿಕ ಹಿತಾಸಕ್ತಿಯುಳ್ಳದ್ದು.

ಇಂಥ ಹೊತ್ತಲ್ಲಿ ನಮ್ಮ ಸ್ಥಳೀಯ ಸಾಂಸ್ಕೃತಿಕ ರಚನೆಗಳನ್ನೇ ಸಶಕ್ತೀಕರಣಗೊಳಿಸುವ ಅಗತ್ಯತೆಯನ್ನು ದೇಸೀ ಸಿದ್ಧಾಂತವಾದಿಗಳು ಒತ್ತಿ ಹೇಳುತ್ತಿದ್ದಾರೆ. ನಮ್ಮ ಸಂಸ್ಕೃತಿಯಲ್ಲಿ ಚಾರಿತ್ರಿಕ ವಾಗಿ ರೂಪಗೊಂಡ ರಾಜಕೀಯ ಪ್ರಕ್ರಿಯೆಗಳನ್ನು ಪುನಾರಚಿಸುವ ಅಗತ್ಯವಿದೆ. ಅವುಗಳಿಗೆ ಕವಿದ ವಿಸ್ಮೃತಿಯನ್ನೇ ಜಾಡಿಸಿ ಎಲ್ಲ ಅಂತಃಶಕ್ತಿಗಳೊಂದಿಗೆ ಅದನ್ನು ಮರು ಬಳಕೆಗೆ ಉಪಯೋಗಿಸಬೇಕು ಎಂಬುದು ಸಮುದಾಯವಾದಿಗಳ ವಾದವಾಗಿದೆ. ವಿಕೇಂದ್ರೀಕರಣ ವ್ಯವಸ್ಥೆ ಸಾರ್ಥಕವಾಗಬೇಕಾದರೆ ಅದನ್ನು ಸಮುದಾಯ ಪ್ರಜ್ಞೆಯಲ್ಲಿ ದುಡಿಸಿಕೊಳ್ಳಬೇಕೆನ್ನುವ ನಿಲುವು ಇಲ್ಲಿ ಎದ್ದುಕಾಣುತ್ತದೆ. ಯಾಕೆಂದರೆ ವಸಾಹತು ನಿರ್ಮಿತ ಲಂಬ ರೂಪಿ ವಿಕೇಂದ್ರೀಕರಣಕ್ಕಿಂತ ಮಾನವಮುಖಿಯಾದ ಸಮತಲ ರೂಪಿ ಅಭಿವೃದ್ಧಿ ಇಂದು ನಮಗೆ ಅವಶ್ಯಕತೆ ಇದೆ. ಈ ರೀತಿಯ ಅಭಿವೃದ್ಧಿ ಮುಖೇನ ಒಂದು ಕಾಲದಲ್ಲಿ ಚಾಲ್ತಿಯಲ್ಲಿದ್ದ ಅಸಂಖ್ಯಾತ ರಾಜಕೀಯ ಪ್ರಕ್ರಿಯೆಗಳನ್ನು ತಿಳಿದುಕೊಳ್ಳುವ ಮೂಲಕ ಪುನಶ್ಚೇತನಗೊಳಿಸುವ ಮೂಲಕ ಕೆಳವರ್ಗಗಳನ್ನು ಸಶಕ್ತೀಕರಣಗೊಳಿಸಬಹುದಾಗಿದೆ. ಅಲ್ಲದೆ ಹಿಂದಿನ ತಳಮಟ್ಟದ ರಾಜಕೀಯ ವ್ಯವಸ್ಥೆಯ ಗುಣಾವಗುಣಗಳನ್ನು ಪರಿಶೀಲಿಸಿ ಯೋಗ್ಯವಾದು ದನ್ನು ಆಯ್ಕೆಮಾಡಿ ಪರಿಣಾಮಕಾರಿ ವಿಕೇಂದ್ರೀಕರಣಕ್ಕೆ ಪೂರಕವಾಗಿ ಬಳಸಿಕೊಳ್ಳಬಹುದಾಗಿದೆ.

ಬರೀ ಆಡಳಿತದ ಹಂತಗಳನ್ನು ಹೆಚ್ಚುಮಾಡಿದರೆ ಅಧಿಕಾರ ವಿಕೇಂದ್ರೀಕರಣ ಸಾಧ್ಯ ಎನ್ನುವ ನಿಲುವು ಸರಿಯಾಗದು. ಎಲ್ಲಾ ವರ್ಗಗಳ ಪ್ರಾತಿನಿಧಿಕರಣದ ಜೊತೆಗೆ ಆಡಳಿತದಲ್ಲಿ ಭಾಗವಹಿಸುವ

ಸೂಕ್ಷ್ಮ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಬೇಕಾಗುತ್ತದೆ. ಲಿಂಗಸಮಾನತೆ ಮತ್ತು ಮಹಿಳೆಯರ ಪ್ರತಿನಿಧೀಕರಣ ತಾಂತ್ರಿಕವಾಗಿ ಸಾಧಿತವಾಗಿದೆ. ಆದರೆ ಆಚರಣೆಯಲ್ಲಿ ಬಾಧಿತವಾಗಿದೆ. ಕಾರಣ ಸದಸ್ಯೆಯರ ಅರಿವಿನ ಕೊರತೆ. ಇಚ್ಛಾಶಕ್ತಿಯ ಕೊರತೆ ಎದ್ದು ಕಾಣವಂಥದ್ದು. ಅಲ್ಲದೆ ಮಹಿಳೆಯ ಸಂಪೂರ್ಣಭಾಗಿತ್ವದ ಕೊರತೆಗೆ ಅಧಿಕಾರಶಾಹಿ ಮತ್ತು ಪ್ರತಿಷ್ಠಿತ ವರ್ಗಗಳ ಹುನ್ನಾರವೂ ಕಾರಣವಾಗಿದೆ.

ರಾಜಕೀಯ ಸ್ಥಿತಿ ಬದಲಾದರೂ ಸಾಮಾಜಿಕ ಸ್ಥಿತಿ ಬದಲಾಗದೆ ಇರುವುದು ಎಲ್ಲ ಗ್ರಾಮ ಪಂಚಾಯ್ತಿಗಳಲ್ಲೂ ಕಾಣುತ್ತದೆ. ಹೆಂಗಸರು ಮತ್ತು ದುರ್ಬಲವರ್ಗದವರು ಎನ್ನುವ ಕಾರಣಕ್ಕಾಗಿ ಮಹಿಳಾ ಸದಸ್ಯೆಯರನ್ನು ಗ್ರಾಮಸಭೆಗೆ ಕರಿಯದ, ಮೇಲು ಜಾತಿಗಳೊಂದಿಗೆ ಕುಳಿತುಕೊಳ್ಳಲು ಬಿಡದ, ಕುಳಿತುಕೊಳ್ಳಲು ಕುರ್ಚಿಹಾಕದ ಮುಂತಾದ ಅಸಮಾನತೆಗಳು ಜೀವಂತವಾಗಿವೆ. ಇದಕ್ಕೆ ಪೂರಕವೆಂಬಂತೆ ಇಂಥ ಮಹಿಳಾ ಪ್ರತಿನಿಧಿಗಳು ದೂರದ ಮೂಲೆಯಲ್ಲಿ ಮುದುರಿಕೊಂಡು ನಿಲ್ಲುವ, ಕುಳಿತುಕೊಳ್ಳುವ, ಹೆದರಿ ಹೇಳಿದ್ದಕ್ಕೆಲ್ಲ ತಲೆಯಾಡಿಸುವ ಸಂಗತಿಗಳೂ ಜೀವಂತವಾಗಿರುವುದು ತಿಳಿದುಬರುತ್ತದೆ. ಹೀಗೆ ಸಾರ್ವಜನಿಕ ಅವಮಾನಗಳ ಸರಣಿ ಮುಂದುವರಿದೇ ಇದೆ. ಆಯ್ಕೆಯಾದ ಪ್ರತಿನಿಧಿಯ ಸ್ಥಿತಿಗಳೇ ಹೀಗಿರಬೇಕಾದರೆ ಉಳಿದವರಗತಿ ಹೇಗಿರಬೇಡ. ಆದರೆ ಕುತೂಹಲಕರ ಸಂಗತಿಯೆಂದರೆ ಆಳದಲ್ಲಿ ಈ ವರ್ಗದ ಸದಸ್ಯೆಯರು ಸೂಚಿಸುವ ತಣ್ಣನೆ ಪ್ರತಿಭಟನೆ.

ಪರಿವರ್ತನೆ ಎನ್ನುವುದು ಪ್ರಭುತ್ವದ ರಚನಾತ್ಮಕ ಮತ್ತು ಕ್ರಾಂತಿಕಾರಕ ಪ್ರಯತ್ನವಾಗದೆ, ಕಣ್ಣೊರೆಸುವ, ದಾಖಲಾತಿಗಳನ್ನು ನಿರ್ಮಿಸುವ ಒಂದು ಪ್ರಹಸನವಾಗುತ್ತಿದೆ ಎಂಬುದು. ಜೀವಂತ ವಾಗಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಅಸಮಾನ ಪದರುಗಳನ್ನು ಬಿಡಿಸಿ ನೋಡದೆ, ಅದರಲ್ಲಿ ತುಂಬಿರುವ ಕಳೆಯನ್ನು ಕಿತ್ತಿ ತೆಗೆಯದೆ ಪರಿವರ್ತನೆಗೆ ಹಾತೊರೆಯುತ್ತಿದೆ. ಇದರಿಂದ ಪ್ರಬಲಶಕ್ತಿಗಳು ಈ ಪರಿವರ್ತನೆಯನ್ನು ಬೇಗ ಗ್ರಹಿಸಿ, ಗ್ರಹಿಕೆಯಿಂದ ದೂರ ಇರುವ ಅಥವಾ ನಿಧಾನ ಗ್ರಹಿಕಾ ಸಾಮರ್ಥ್ಯವನ್ನು ಹೊಂದಿರುವ ದುರ್ಬಲ ವರ್ಗಗಳ ಮೇಲೆ ಸವಾರಿ ಮಾಡುತ್ತದೆ. ಪ್ರಬಲಶಕ್ತಿಗಳ ತಿಳುವಳಿಕೆಯೇ ತಿಳುವಳಿಕೆಯಿಲ್ಲದಿರುವ ಸ್ತ್ರೀಯಂತಹ ದುರ್ಬಲ ಸ್ತರಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಅಸ್ತ್ರವಾಗಿದೆ. ಆ ಮೂಲಕ ತಿಳುವಳಿಕೆಯ ವಾರಸುದಾರಿಕೆಯನ್ನು ತಮ್ಮಲ್ಲೇ ಉಳಿಸಿಕೊಳ್ಳುತ್ತವೆ. ಹಾಗೆ ದುರ್ಬಲವರ್ಗಗಳ ಬಲಹೀನತೆಯನ್ನು ಪೋಷಿಸುತ್ತವೆ.

ವಿಕೇಂದ್ರೀಕರಣದ ಬಹುಮುಖ್ಯ ತತ್ತ್ವ ಸಮಾನತೆ. ಈ ತತ್ತ್ವ ಸ್ವಯಂಚಾಲಿತವಲ್ಲ. ಪ್ರಬಲ ಶಕ್ತಿ, ಅಧಿಕಾರಶಾಹಿ ಅಥವಾ ಪ್ರಭುತ್ವದ ಮೂಲಕ ಆಚರಣೆಗೆ ಬರುವಂಥದ್ದು. ಅವುಗಳನ್ನು ಜಾರಿಗೆ ತರುವಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯ, ಪ್ರಾಮಾಣಿಕ ಕಾಳಜಿ, ಮಹಿಳೆ ಮತ್ತು ದುರ್ಬಲ ವರ್ಗಗಳ

[illegible]

[illegible]

[illegible]

[illegible]

ಬಗೆಗೆ ವಿಶೇಷ ಆಸಕ್ತಿ. ಇಂಥ ಕ್ರಿಯಾತ್ಮಕ ಸಂವೇದನೆಗಳಿದ್ದರೆ ಆಂಶಿಕವಾಗಿಯಾದರೂ ಪಂಚಾಯತಿ ಪರಿವರ್ತನೆಯ ಫಲಿತಗಳು ಅಂಚಿನಲ್ಲಿರುವ ವರ್ಗಗಳಿಗೆ ಸಿಗುತ್ತಿದ್ದವೇನೋ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಉಳ್ಳವರ ಮೂಲಕವೆ ಉಳ್ಳದವರ ಅಭಿವೃದ್ಧಿ ನಡೆಯುತ್ತಿದೆ. ಇದರಿಂದಾಗಿ ಉಳ್ಳವರು ಉಳ್ಳವರಾಗಿ ಉಳ್ಳದವರು ಉಳ್ಳದವರಾಗಿಯೇ ಮುಂದುವರಿಯುತ್ತಿದ್ದಾರೆ. ಇಂಥ ಶಕ್ತಿಗಳಿಗೆ ದುರ್ಬಲವರ್ಗಗಳಿಗಿಂತಲೂ ದಮನಕ್ಕೆ ಒಳಗಾದ ಸ್ತ್ರೀಯರ ಬಗ್ಗೆ ಸ್ತ್ರೀ ಪ್ರತಿನಿಧಿಗಳ ಬಗ್ಗೆ ಮಾನವೀಯ ಕಾಳಜಿ ಇರಲು ಹೇಗೆ ಸಾಧ್ಯ. ಗ್ರಾಮದ ಸಾಮಾಜಿಕ ಸ್ಥಿತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತರುವ ಉದ್ದೇಶ ಪ್ರಭುತ್ವಕ್ಕಿಲ್ಲ. ಅಂದಮೇಲೆ ಕ್ರಾಂತಿಕಾರಕ ಮಾನಸಿಕ ಪರಿವರ್ತನೆಯನ್ನು ಮಹಿಳಾ ಸದಸ್ಯರಲ್ಲಿ ಅವರು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ಹೇಗೆ ಕಾಣಲು ಸಾಧ್ಯ. ಕೈ ಕಂಠದ ಮೇಲೆ ಕಣ್ಣು ನೆಂಟನ ಮೇಲೆ ಎನ್ನುವ ಗಾದೆಯಂತಾಗಿದೆ ಸರಕಾರದ ಸ್ಥಿತಿ. ಮೇಲುವರ್ಗದವರ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶದಿಂದ ನಿರ್ಮಾಣಗೊಳ್ಳುವ ಯೋಜನೆಗಳೊತ್ತಟ್ಟಿಗಿದ್ದರೆ, ಕೆಳವರ್ಗದವರ ಮಹಿಳೆಯರ ದುರ್ಬಲರ ಉದ್ಧಾರವೇ ನಮ್ಮ ಗುರಿ ಎನ್ನುವ ಮಾತು ಇನ್ನೊತ್ತಟ್ಟಿಗಿದೆ.

ಇಂದಿನ ಗ್ರಾಮಪಂಚಾಯತ್ ವ್ಯವಸ್ಥೆಯಲ್ಲಿ ಬಹುಪಾಲ ಕೆಳಜಾತಿ ಜನರದ್ದೇ. ಅದರಲ್ಲೂ ಮಹಿಳೆಯರದೇ ಪ್ರಾತಿನಿಧ್ಯ ಕಂಡುಬರುತ್ತಿದೆ. ಮಹಿಳೆಯರು ಜಾತಿ ಮಾತ್ರದಿಂದಲ್ಲ ಆರ್ಥಿಕ ನೆಲೆಯಿಂದಲೂ ದುರ್ಬಲ ವರ್ಗಕ್ಕೆ ಸೇರಿದವರಾಗಿದ್ದಾರೆ. ಮಹಿಳಾ ಪ್ರತಿನಿಧಿಕರಣ ಪ್ರಕ್ರಿಯೆಯಲ್ಲಿ ಗ್ರಾಮಪಂಚಾಯತ್ ವ್ಯವಸ್ಥೆ ಕ್ರಾಂತಿಯನ್ನೇನೋ ಮಾಡಿದೆ. ಜೀವಮಾನದಲ್ಲಿ ಊರೊಳಗೆ, ಬರದ, ಹೊರಗಿನ ಬೆಳಕು ಕಾಣದ, ತಲೆಯೆತ್ತಿ ನಡೆಯಲಾರದ, ಮಾತನಾಡಲೂ ಸಾಧ್ಯವಿರದ, ಕುಳಿತುಕೊಂಡು ಮಾತನಾಡಲೂ ಅನುಕೂಲವಿರದ ಪರಿಸರದಲ್ಲಿ ಇಂದು ಮಹಿಳಾ ಪ್ರಾತಿನಿಧ್ಯ ದೊರಕಿದೆ. ನಾನು ಆಯ್ದುಕೊಂಡ ಎರಡೂ ತಾಲೂಕಿನ ಗ್ರಾಮಪಂಚಾಯತ್‌ಗಳ ಒಟ್ಟು ೨೮೯ ಮಹಿಳೆಯರಲ್ಲಿ ಇಂಥ ಅಧೀನ ಸ್ಥಿತಿಯಿಂದ ಬಂದವರೇ ಹೆಚ್ಚು. ನಂಬಲು ಸಾಧ್ಯವಿಲ್ಲದ ರಾಜಕೀಯ ಮಿಸುಕಾಟ ಇಂದು ನಡೆಯುತ್ತಿದೆ. ಮಹಿಳಾ ಪ್ರಾತಿನಿಧ್ಯದ ವಿಷಯದಲ್ಲಿ ಕ್ರಾಂತಿಕಾರಕ ಪರಿವರ್ತನೆ ಗ್ರಾಮಪಂಚಾಯತಿಗಳ ಮೂಲಕ ನಡೆಯುತ್ತಿದೆ.

ತಳಮಟ್ಟದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕು ವಿಶೇಷ ಪರಿವರ್ತನೆ ಕಾಣುವ ಮುನ್ನವೇ ಕಾನೂನು, ಕೆಳಜಾತಿ ಕೆಳವರ್ಗಗಳಿಗೆ ರಾಜಕೀಯ ಅಧಿಕಾರವನ್ನು ಕೊಟ್ಟಿದೆ. ಈ ಸ್ಥಿತಿಯಲ್ಲಿ ಗ್ರಾಮಪಂಚಾಯತಿ ಸಂಸ್ಥೆಗಳು ಮತ್ತು ಇತರ ಪರಿಕರಗಳ ಕುರಿತು ಸದಸ್ಯರಿಗೆ ಅರಿವಿದ್ದರೆ ಮಾತ್ರ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯ. ಆದರೆ ವಸ್ತು ಸ್ಥಿತಿಯೇ ಭಿನ್ನವಾಗಿದೆ. ಚುನಾಯಿತ ಮಹಿಳಾ ಸದಸ್ಯರಲ್ಲಿ ಹೆಚ್ಚಿನವರಿಗೆ ಗ್ರಾಮಪಂಚಾಯ್ತಿ ವ್ಯವಸ್ಥೆ ಮತ್ತು ಕಾರ್ಯವ್ಯಾಪ್ತಿಯ ಬಗ್ಗೆ ಅರಿವೂ ಇಲ್ಲ. ಭಾಗವಹಿಸುವ ಇಚ್ಛಾಶಕ್ತಿಯೂ ಇಲ್ಲ. ತುಂಬ ನೀರಸವಾದ

ನಡವಳಿಕೆಗಳನ್ನು ಅವರಲ್ಲಿ ಕಾಣುತ್ತೇವೆ. "ಪಂಚಾಯ್ತಿಗಿಂಚಾಯ್ತಿ ಎಲ್ಲಾ ದೊಡ್ಡದೊಡ್ಡೋರಿಗೆ ನಮ್ಮಂಥ ಬಡವ್ರಿಗಿ ಅಲ್ಲಾ, ನಮಗೇನ ತಿಳಿತೈತ್ರಿ ಎಲ್ಲಾ ಧಣೇರ ನೋಡ್ಕೊಂತಾರ. ಅವರಾಗೇ ಕರದ್ರ ಬರತೇವು ಇಲ್ಲಾಂದ್ರ ಇಲ್ಲಾ. ನಮಗ್ಯಾಗ ಬೇಕು ಇದೆಲ್ಲಾ ಪಂಚಾಯ್ತಿ" ದೇವಸಮುದ್ರದ ಗ್ರಾಮಪಂಚಾಯ್ತಿ ಮಲಕಮ್ಮನ(ಹೆಸರು ಬದಲಾಯಿಸಿದೆ) ಗಂಡ ಹೆಂಡತಿ ಪರವಾಗಿ ಹೇಳುತ್ತಾನೆ.

ಹೀಗೆ ಚುನಾಯಿತ ಪ್ರತಿನಿಧಿತ್ವದ ಮೂಲಭೂತ ತಿಳುವಳಿಕೆ ಇಲ್ಲದಿರುವ ಪರಿಸ್ಥಿತಿಯಲ್ಲಿ ಅವರ ರಾಜಕೀಯ ಭಾಗವಹಿಸುವಿಕೆಯನ್ನು ಕಾಣುವುದೆಂತು. ಇಂದು ಗ್ರಾಮಪಂಚಾಯ್ತಿಗಳು ಕೆಳವರ್ಗಗಳ ಸ್ತ್ರೀ ಪುರುಷರ ಪ್ರಾತಿನಿಧ್ಯದಿಂದ ತುಂಬಿದ್ದರೂ ಕೆಳವರ್ಗದ ಮೂಲಭೂತ ಸೌಕರ್ಯಗಳು ಸಮಸ್ಯೆಗಳು ಬಗೆಹರಿದವೆಂದು ಅರ್ಥವಲ್ಲ. ಅಥವಾ ವಿಕೇಂದ್ರೀಕರಣವು ತಳಮಟ್ಟದವರೆಗೂ ತನ್ನ ಪರಿವರ್ತನೆಯ ಫಲಿತಗಳನ್ನು ತಲುಪಿಸಿತು ಎಂದು ಭಾವಿಸುವುದೂ ಸರಿಯಾಗದು. ಮಹಿಳಾ ಪ್ರಾತಿನಿಧ್ಯ ಮಹಿಳಾ ಸಶಕ್ತೀಕರಣದ ಪ್ರತೀಕವೆಂದೂ ಹೇಳಲಾಗದು. ಬರೀ ರಾಜಕೀಯ ಪರಿವರ್ತನೆಯೊಂದರಿಂದಲೇ ಮಹಿಳಾ ಪ್ರಾತಿನಿಧ್ಯ ಮತ್ತು ಭಾಗವಹಿಸುವ ಕ್ರಮಗಳನ್ನು ಅಳೆದರ ತಪ್ಪಾಗುತ್ತದೆ. ಅದಕ್ಕಾಗಿ ನನ್ನ ಇಡೀ ಅಧ್ಯಯನದುದ್ದಕ್ಕೂ ಮಹಿಳೆಯ ರಾಜಕೀಯ ಪ್ರತಿನಿಧಿಕರಣವನ್ನು ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಮತ್ತು ಸಾಂಸ್ಕೃತಿಕ ಬದುಕಿನೊಡನೆ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಅವಳ ಪ್ರಗತಿಯ ಮಜಲುಗಳನ್ನು ಹಿಂಜರಿಕೆಯ ಕಾರಣಗಳನ್ನು ಈ ಹಿನ್ನೆಲೆಯಲ್ಲಿಯೇ ನೋಡಿದ್ದೇನೆ.

ಅಡಿಟಿಪ್ಪಣಿಗಳು

೧. ಚಂದ್ರಪೂಜಾರಿ ಎಂ., ದೇಶೀಯತೆ ನೆರಳಲ್ಲಿ ವಿಕೇಂದ್ರೀರಣ, ೨೦೦೧, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

೨. ಶೇಷಾದ್ರಿ ಬಿ., ವಿಕೇಂದ್ರೀಕರಣ : ತತ್ವ ಮತ್ತು ಆಚರಣೆ(೨೦೦೨) ಚಂದ್ರಶೇಖರ ಟಿ.ಆರ್. (ಸಂ), ಹಂಪಿ ಕನ್ನಡ ವಿಶ್ವವಿದ್ಯಾಲಯ

೩. ಮಲಿಯಪ್ಪ ಕೆ., ಮಾಜಿ ಪ್ರಧಾನರು

೪. ಸುಜಾತ ದೀಕ್ಷಿತ್, ಮಾಜಿ ಸದಸ್ಯೆ. ಮಂಡಲ ಪಂಚಾಯ್ತಿ, ಬುಕ್ಕಸಾಗರ

೫. ಚಂದ್ರಪೂಜಾರಿ ಎಂ., ದೇಶೀಯತೆ ನೆರಳಲ್ಲಿ ವಿಕೇಂದ್ರೀರಣ, ೨೦೦೧, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

೬. ಅದೇ,

೭. ಚಕ್ರಕೋಡಿ ಈಶ್ವರ ಶಾಸ್ತ್ರಿ(ಅನು), ೧೯೬೨, ಶ್ಲೋಕ ೧೪೭, ಅಧ್ಯಾಯ ೫, ಪು.೨೩೦

೮. ಅದೇ ಶ್ಲೋಕ ೧೪೮, ಅಧ್ಯಾಯ ೫, ಪು.೨೩೦

ಅಧ್ಯಾಯ ೬

ಸಮಾರೋಪ

ಅಧ್ಯಯನದ ಫಲಿತಗಳು

ಹಳ್ಳಿಗಳ ಜೀವನ ಕ್ರಮ ಮತ್ತು ಸಂಸ್ಕೃತಿಯ ವಿಶಿಷ್ಟತೆಯನ್ನು ಉಳಿಸಿಕೊಂಡೇ ಆಯಾ ಪ್ರದೇಶದ ಅಭಿವೃದ್ಧಿಗೆ ಶ್ರಮಿಸಬೇಕಾಗುತ್ತದೆ. ಕಾರಣ ಗ್ರಾಮೀಣರಿಗೆ ಬದುಕು ಮತ್ತು ರಾಜಕೀಯ, ಅರ್ಥಿಕತೆ ಮತ್ತು ಅಭಿವೃದ್ಧಿಗಳು ಪರಸ್ಪರ ಬೇರೆಬೇರೆಯಲ್ಲ. ಅವೆಲ್ಲಾ ಅವರ ಜೀವನದ ಅವಿಭಾಜ್ಯ ಅಂಗಗಳು. ನಗರಗಳನ್ನು ಅನುಕರಿಸದ ಆತ್ಮಪ್ರತ್ಯಯವುಳ್ಳ ಇಂತಹ ಹಳ್ಳಿಗಳ ಒಕ್ಕೂಟವೇ ಗ್ರಾಮಪಂಚಾಯತ್ ವ್ಯವಸ್ಥೆಯ ಜೀವಾಳ. ಹೀಗಾಗಿ ಆಯಾ ಗ್ರಾಮದ ಸಂಪನ್ಮೂಲ ಮತ್ತು ಶಕ್ತಿ ಸಾಧ್ಯತೆಗಳನ್ನು ಅನುಕರಿಸಿದ ವಿಕೇಂದ್ರೀಕರಣದಂತಹ ಸಮಗ್ರ ಗ್ರಾಮೀಣಾಭಿವೃದ್ಧಿಯ ಮಾದರಿಗಳನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ.

ನಗರದ ಶ್ರೇಷ್ಠತೆಯ ಪ್ರಜ್ಞೆಯಿಂದ ಹೊರಡುವ, ರೂಪಿತಗೊಳ್ಳುವ ಗ್ರಾಮಪಂಚಾಯತ್‌ನ ಕಾರ್ಯಕ್ರಮಗಳು ಹಳ್ಳಿ ಮತ್ತು ಅಲ್ಲಿನ ಜಾನಪದ ಜೀವನವನ್ನು ಕಡೆಗಣಿಸಿ ಜನರ ನೈತಿಕ ಪ್ರಜ್ಞೆಯನ್ನೇ ಕಳೆದುಹಾಕುತ್ತಿವೆ. ಗ್ರಾಮೀಣ ಚುನಾಯಿತ ಮಹಿಳೆಯರಲ್ಲಿನ ಆತ್ಮವಿಶ್ವಾಸದ ಕೊರತೆಗೆ ಕಾರಣಗಳನ್ನು ಹುಡುಕ ಹೊರಟಾಗ ಈ ಸಂಗತಿ ಪ್ರಧಾನವಾಗಿ ಎದ್ದು ಕಾಣುತ್ತದೆ.

ಸ್ಥಳೀಯ ಸಂಪನ್ಮೂಲಗಳನ್ನು ಕಡೆಗಣಿಸಿ ಸ್ಥಳೀಯ ಪರಿಸರಕ್ಕೆ ತೀರ ಪರಕೀಯ ಎನಿಸುವ ಅಭಿವೃದ್ಧಿ ಮಾದರಿಗಳನ್ನು ಗ್ರಾಮೀಣ ಜನ ಸ್ವೀಕರಿಸಲಾರರು. ಇದಕ್ಕೆ ಇಂದು ಗ್ರಾಮಪಂಚಾಯತ್ ಮೂಲಕ ನಡೆಸುವ ನಗರ ಪ್ರಜ್ಞೆಯ ಸುಧಾರಣಾ ಕ್ರಮಗಳ ವೈಫಲ್ಯವೇ ದೊಡ್ಡ ಉದಾಹರಣೆ. ಜನ ಬಳಕೆಗೆಂದು ಕಲ್ಪಿಸಿರುವ ರಸ್ತೆಗಳು, ಚರಂಡಿಗಳು, ಬೀದಿದೀಪಗಳು, ಆಸ್ಪತ್ರೆಗಳು ಜನರ ಪ್ರಜ್ಞೆಯ ಭಾಗವಾಗಿ ಉಳಿಯದೇ ಇರುವುದು. ಆ ಬಗ್ಗೆ ಕನಿಷ್ಠ ರೀತಿಯ ಸಂಬಂಧವನ್ನು ಅವರು ಹೊಂದಿರುವುದನ್ನು ಕಾಣುತ್ತೇವೆ. "ಸರ್ಕಾರದವರು ಮಾಡಿರುವರು. ಮಾಡಿದ್ರು ಪುಗಸಟ್ಟೆ ಮಾಡಿಲ್ಲ. ಅವರು ಪರಸೆಂಟು (ಕಮಿಷನ್) ಹೊಡೆದು ಮಾಡ್ಯಾರಾ" ಎನ್ನುವ ಮಾತುಗಳೇ ಹೆಚ್ಚು ಕೇಳುತ್ತವೆಯೇ ಹೊರತು ಅದು ನನ್ನ ಗ್ರಾಮದ ಅಭಿವೃದ್ಧಿ ಎನ್ನುವ ಅನ್ಯನಭಾವ ಅವರಲ್ಲಿ ಕಾಣಿಸುವುದಿಲ್ಲ. ಮೊದಲೇ ಕಳಪೆ ಕಾಮಗಾರಿಗಳಾದ ಅವು ಜನರ ನೀರಸತೆಯಿಂದಾಗಿ ಬಹು ಬೇಗನೆ ಹಾಳಾಗುತ್ತಿವೆ. ಹೀಗಾಗಿ ಇಂದು ಗ್ರಾಮಗಳ ಅಭಿವೃದ್ಧಿ ಗ್ರಾಮಗಳ ಮಾದರಿಯಲ್ಲಿಯೇ ನಡೆಯಬೇಕಾಗಿದೆ.

ಗ್ರಾಮಪಂಚಾಯಿತಿ ವ್ಯವಸ್ಥೆಯ ಧೋರಣೆಯೇ ನಗರ ಕೇಂದ್ರಿತವಾದದ್ದು. ನೀತಿ ನಿರೂಪಣೆಯಲ್ಲಿ ನಗರದ ಹಿತಾಸಕ್ತಿಗಳ ಕಡೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ನಗರಗಳ ಹಿತಾಸಕ್ತಿಗಳೇ ಬೇರೆ. ಹಳ್ಳಿಗಳ ಪರಿಸರ, ಅಗತ್ಯತೆ, ಆದ್ಯತೆಗಳೇ ಬೇರೆ. ಇಲ್ಲಿನ ಜನರಿಗಾಗಲಿ ಮಹಿಳಾ ಪ್ರತಿನಿಧಿಗಳಂತಹ ಜನ ಪ್ರತಿನಿಧಿಗಳಾಗಲೀ ತಮ್ಮ ಬೇಕು ಬೇಡಗಳನ್ನು ಹೇಳಿಕೊಳ್ಳಲು ಪೂರೈಸಿಕೊಳ್ಳಲು ಇರುವ ಅವಕಾಶ ಬಹಳ ಕಡಿಮೆ. ಆಯ್ಕೆಯಾದ ಒಟ್ಟು ೨೮೯ ಮಹಿಳಾ ಪ್ರತಿನಿಧಿಗಳಲ್ಲಿ ಶೇ ೯೮ರಷ್ಟು ಮಹಿಳೆಯರು ಮತ್ತು ಅವರು ಪ್ರತಿನಿಧಿಸುವ ಕ್ಷೇತ್ರದ ಜನರು ಕೀಳರಿಮೆಯಿಂದ ಬಳಲುವುದು ಅಸಹಾಯಕತೆಯಿಂದ ಇರುವುದೇ ಮಹಿಳೆಯ ರಾಜಕೀಯ ಭಾಗವಹಿಸುವಿಕೆಯ ಅನುಪಾತಕ್ಕೆ ಬಹುಮುಖ್ಯ ಕಾರಣವಾಗಿದೆ. ಇದರೊಂದಿಗೆ ಸಂಪ್ರದಾಯಿಕ ಸಮಾಜದ ಲಿಂಗ ಸಂಬಂಧಿ ಅಸಮಾನತೆಗಳು ಕೈ ಜೋಡಿಸಿವೆ.

ಆದರೆ ನಗರಕೇಂದ್ರಿತ ಚಿಂತನಾ ಕ್ರಮಗಳು ಅನುಪಾತಕ್ಕೆ ಕೊಡುವ ಕಾರಣಗಳು ಭಿನ್ನವಾಗಿವೆ. ಹಳ್ಳಿಯ ಜನರು ಹೊಸ ಬದಲಾವಣೆಗಳಿಗೆ ಸ್ಪಂದಿಸುವುದಿಲ್ಲ, ಅವರಲ್ಲಿ ಚಲನಶೀಲತೆ ಇಲ್ಲ. ಅವರ ಮಟ್ಟಿಗೆ ಅರ್ಥಿಕಾಭಿವೃದ್ಧಿಯೊಂದೇ ಅಭಿವೃದ್ಧಿಗೆ ಸಿದ್ಧೌಷದಿ. ಪ್ರಗತಿಯೆಂದರೆ ಅರ್ಥಿಕ ಸ್ವಾವಲಂಬನೆ ಎಂಬುದು ಇವರ ತಿಳಿವಳಿಕೆ.

ಕಾಲದಿಂದಲೂ ಪ್ರಕೃತಿ ಸಂಸ್ಕೃತಿಯೊಂದಿಗೆ ಸಮ್ಮಿಳಿತವಾಗಿ ತಮ್ಮದೇ ಆದ ಜೀವನ ಕ್ರಮವನ್ನು ಅಳವಡಿಸಿಕೊಂಡು ಬಂದ ಜನಕ್ಕೆ ಇಂಥ ಪ್ರಗತಿಯ ತತ್ವ ಪರಕೀಯವಾಯಿತು. ಕಾರಣ ಸರ್ಕಾರದ ಅಥವಾ ಅದರ ಅಂಗ ಸಂಸ್ಥೆಗಳು ನಾವು ಹೇಳುವವರು ನೀವು ಕೇಳುವವರು ಮಾತ್ರ ಎನ್ನುವ ಧ್ಯೇಯಮಂತ್ರವನ್ನು ಅನುಸರಿಸುತ್ತವೆ. ಇದು ಗ್ರಾಮ ರಾಜಕೀಯದಲ್ಲಿ ತುಂಬಾ ವ್ಯತಿರಿಕ್ತ ಪರಿಣಾಮ ಬೀರಿದೆ.

ವಾಸ್ತವವಾಗಿ ಪ್ರಜ್ಞೆ ಮತ್ತು ಮಾಹಿತಿ ಗ್ರಾಮ ಬದುಕಿನಲ್ಲಿದೆ. ವಿಸ್ಮೃತಿಗೆ ಒಳಗಾಗಿರುವ ಅದರ ಬಹುಪಯುಕ್ತ ನೆಲೆಗಳನ್ನು ಗುರುತಿಸಿ ಸಶಕ್ತೀಕರಣಗೊಳಿಸಬೇಕಾಗಿದೆ. ಈ ಅರಿವು ಗ್ರಾಮಪಂಚಾಯತ್ ವ್ಯವಸ್ಥೆಗೆ ಜರೂರಾಗಿ ಬರಬೇಕಾಗಿದೆ. ಪರಸ್ಪರ ಸಂವನ, ಸಹಕಾರದಿಂದ ಸಮಗ್ರ ಅಭಿವೃದ್ಧಿ ಸಾಧ್ಯವಾಗಬೇಕಾಗಿದೆ. ಜನರಲ್ಲಿ ಬದಲಾದ ಸಂಗತಿಗಳ ಬಗ್ಗೆ ಅರಿವು ಮೂಡಿಸಬೇಕಾದ, ಅದನ್ನು ತನ್ನದನ್ನಾಗಿಸಿ ಕೊಳ್ಳಬೇಕಾದ ಪರಿಸರವನ್ನು ಗ್ರಾಮಪಂಚಾಯತ್ ವ್ಯವಸ್ಥೆ ರೂಪಿಸಬೇಕಾಗಿದೆ.

ಪರಸ್ಪರ ಸಂವಹನ, ವಿಚಾರ ವಿಮರ್ಶೆ, ಜ್ಞಾನವಿನಿಮಯ, ಬೆಳವಣಿಗೆ ಹಾಗೂ ಅಭಿವೃದ್ಧಿ ದುರ್ಬಲವರ್ಗ ಮತ್ತು ಮಹಿಳೆಯರ ಸಶಕ್ತೀಕರಣದಂತಹ ಮಹಾನ್ ಉದ್ದೇಶವೇ ಗ್ರಾಮಸಭೆ

ಮತ್ತು ಗ್ರಾಮಪಂಚಾಯತ್ ವ್ಯವಸ್ಥೆಯಾದ್ದಾಗಿದೆ. ಈ ಉದ್ದೇಶವನ್ನು ಸ್ಥಳೀಯರಿಗೆ ಮನಗಾಣಿಸಿ ಕೊಡಬೇಕಾಗಿದೆ. ಪ್ರಜಾಪ್ರಭುತ್ವ ಪದ್ಧತಿಯ ರಾಜ್ಯ ವ್ಯವಸ್ಥೆಯಲ್ಲಿ ಪ್ರಜೆಗಳ ಸಹಭಾಗಿತ್ವ, ಮಹಿಳೆಯರಲ್ಲಿ ನಾಯಕತ್ವದ ಪ್ರಜ್ಞೆ ಆ ಮೂಲಕ ತಮ್ಮನ್ನು ತಾವೇ ಆಳಿಕೊಳ್ಳಬೇಕಾದ ಸ್ವಾವಲಂಬಿ ಬದುಕಿನ ಪ್ರೇರಣೆಗಳನ್ನು ಜನರಲ್ಲಿ ತುಂಬಬೇಕಾಗಿದೆ. ಅವರು ತಮ್ಮ ಪ್ರತ್ಯೇಕತೆ, ವ್ಯಕ್ತಿತ್ವ, ವಿಶಿಷ್ಟತೆಗಳನ್ನು ಉಳಿಸಿಕೊಂಡು ಒಂದು ಕುಲವಾಗಿ ಬದುಕಬೇಕಾದ ತಿಳುವಳಿಕೆ ಸಮಾಜದಲ್ಲಿ ಮೂಡಬೇಕಾಗಿದೆ. ಸ್ವಾವಲಂಬಿ ಬದುಕಿನ ನಿರ್ಮಾಣಕ್ಕೆ ತಳಮಟ್ಟದ ದೃಷ್ಟಿಕೋನವುಳ್ಳ ವಿಕೇಂದ್ರೀಕರಣಕ್ಕೆ ಇಂತಹ ಹಲವು ರೀತಿಯ ಇಚ್ಛಾಶಕ್ತಿಗಳು ಬೇಕಾಗಿವೆ ಎಂಬುದು ಇಲ್ಲಿ ಬಹುಮುಖ್ಯವಿಚಾರ.

ಬಹುಮುಖ್ಯವಾಗಿ ನನ್ನ ಅಧ್ಯಯನ ಕೇಂದ್ರವನ್ನು ಪ್ರತಿಷ್ಠಿತ ಶಕ್ತಿ, ಪ್ರತಿಷ್ಠಿತ ನೆಲೆ, ಯಜಮಾನಿಕೆಯ ಕೇಂದ್ರ ಇವುಗಳನ್ನು ಬಿಟ್ಟು ಉಪೇಕ್ಷಿತ ನೆಲೆಗಳ ಮೂಲಕ ಆರಂಭಿಸಿರುವುದು ಮಹತ್ವದ ವಿಚಾರ. ಬಹುಮುಖ್ಯವಾಗಿ ನಿಗಮನ ಮಾದರಿಯನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಇದರಿಂದ ಅಂಚಿನಲ್ಲಿರುವ ವರ್ಗಗಳ, ಮಹಿಳೆಯರ ಜೀವನಕ್ರಮಗಳನ್ನು ಅವರ ರಾಜಕೀಯ ಭಾಗವಹಿಸುವಿಕೆಯ ಪ್ರೇರಣೆಗಳನ್ನು ನಿರಾಸಕ್ತಿಗಳನ್ನು ಕಂಡುಕೊಳ್ಳಲು ಅನುಕೂಲವಾಗಿದೆ. ಆ ಮೂಲಕ ನಗರ ಕೇಂದ್ರಿತ ಚಿಂತನೆಗಳ ಅಭಿವೃದ್ಧಿಪರ ಮಾದರಿಗಳ ವಿಫಲತೆಯನ್ನು ಪತ್ತೇ ಹಚ್ಚಲಾಗಿದೆ. ಹಳ್ಳಿಗಳಿಗೆ ಬೇಕಾದ, ಗ್ರಾಮೀಣ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸಲು ಸಾಧ್ಯವಾಗುವ ಸಂಗತಿಗಳನ್ನು ಕಂಡುಕೊಳ್ಳಲಾಗಿದೆ.

ಸಶಕ್ತೀಕರಣ ಎನ್ನುವುದು ಬರಿ ರಾಜಕೀಯ ಅವಕಾಶದಿಂದ ಮಹಿಳೆಯರಲ್ಲಿ ಬರುವಂತಹುದಲ್ಲ. ಅದು ಶಿಕ್ಷಣ, ಆರೋಗ್ಯ, ಸಮಾನ ಸಾಮಾಜಿಕ ಪರಿಸರ, ವಸತಿ, ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನಸಿಕ ದಾಸ್ಯದಿಂದ ವಿಮುಕ್ತಿ ಮತ್ತು ಇತರೆ ಮೂಲಭೂತ ಸೌಕರ್ಯಗಳಿಂದ ಸಿದ್ಧಿಸುವಂತಹುದು. ಅದು ಶೂನ್ಯದ ಸೃಷ್ಟಿಯಲ್ಲ. ಹೆಚ್ಚಿನ ಸದಸ್ಯೆಯರಿಗೆ ಮಾನಸಿಕ ದಾಸ್ಯದಿಂದ ಹೊರಬರಲು ಆಗುತ್ತಿಲ್ಲ. ಹೀಗಾಗಿ ಅವರಿಂದ ಯಾವ ಜವಾಬ್ದಾರಿಯನ್ನು ನಿರೀಕ್ಷಿಸಲು ಆಗುವುದಿಲ್ಲ. ಬದಲಾಗಿ ನಿರ್ವಹಣೆಗೆ ಬೇಕಾದ ಅರಿವನ್ನು ಭಾಗವಹಿಸುವಿಕೆಗೆ ಬೇಕಾದ ಮನೋಧರ್ಮವನ್ನು ಅಧಿಕಾರ ಚಲಾಯಿಸುವ ಮುಕ್ತ ಸ್ವಾತಂತ್ರ್ಯವನ್ನು ಅವರಿಗೆ ನೀಡಬೇಕಾಗಿದೆ. ಅ ರೀತಿ ಸದಸ್ಯೆಯರನ್ನು ತರಬೇತುಗೊಳಿಸುವ ಜವಬ್ದಾರಿಯು ಕುಟುಂಬ, ಸಮಾಜ ಹಾಗೂ ಸಾಂಸ್ಕೃತಿಕ ವಲಯಗಳಿಗೆ ಬರಬೇಕಾಗಿದೆ. ಮಹಿಳೆಯ ಹಕ್ಕಿನ ಅರಿವಿನ ಅವಶ್ಯಕತೆಯನ್ನು ತಿಳಿಸುವುದು ಇಂದು ತುರ್ತಾಗಿ ನಡೆಯಬೇಕಿದೆ.

ನಾನು ಮಾಡಿಕೊಂಡ ಪ್ರಾಕಲ್ಪನೆಯ ಪ್ರಕಾರ ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳು ಪ್ರಗತಿದಾಯಕವಾಗಿಲ್ಲ. ಹೊಸಪೇಟೆ ತಾಲೂಕಿನ

ಗ್ರಾಮಪಂಚಾಯ್ತಿಗಳು ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಪ್ರಗತಿದಾಯಕವಾಗಿವೆ ಎಂದು ಭಾವಿಸಲಾಗಿತ್ತು. ಆದರೆ ದೊರೆತಿರುವ ಅಂಕಿ ಅಂಶಗಳ ಪ್ರಕಾರ ಎರಡು ತಾಲೂಕಿನ ಗ್ರಾಮಪಂಚಾಯ್ತಿಗಳು ಪ್ರಗತಿಯನ್ನು ಹೊಂದಬೇಕಾಗಿರುವುದು ಅವಶ್ಯವಿರುವುದು ಕಂಡುಬಂದಿದೆ.

ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪರಿಸರ, ಸಂಪನ್ಮೂಲಗಳು, ಏಕ ವ್ಯಕ್ತಿಯ ಸ್ವಾಮ್ಯದಲ್ಲಿರುವುದು ಕಂಡುಬರುತ್ತದೆ ಎಂದು ಪ್ರಾಕಲ್ಪನೆಯಲ್ಲಿ ಹೇಳಿರುವ ಮಾತು ಅರ್ಥಪೂರ್ಣವಾಗಿದೆ. ಆದರೆ ಈ ಸ್ಥಿತಿ ಹೊಸಪೇಟೆ ತಾಲೂಕಿನಲ್ಲಿ ಕಂಡುಬರುವುದಿಲ್ಲ.

ಬೆಟ್ಟಗುಡ್ಡಗಳಿಂದ ಕೂಡಿದ ಸಂಡೂರು ಪ್ರದೇಶದಲ್ಲಿ ಸಂಪರ್ಕ ಮತ್ತು ಸಂವಹನದ ಕೊರತೆ ಇದೆ. ಹೀಗಾಗಿ ಜನರ ಮನೋಧರ್ಮದಲ್ಲಿ ದಾಸ್ಯ ಭಾವನೆ ಮೂಡಿದೆ. ಕೂಲಿ ಕಾರ್ಮಿಕರಲ್ಲಿ ಹಿಂದುಳಿದವರೆ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಈ ಅಂಶಗಳು ಅಲ್ಲಿಯ ಗ್ರಾಮಪಂಚಾಯ್ತಿಗಳ ಮೇಲೆ ಪ್ರಭಾವ ಬೀರಿವೆ. ಆದರೆ ಹೊಸಪೇಟೆಯಲ್ಲಿ ಸಂಪರ್ಕ ಮತ್ತು ಸಂವಹನದ ಕೊರತೆ ಇರುವುದಿಲ್ಲ ಎಂದು ಹೇಳಿರುವ ಮಾತು ಸತ್ಯವಾಗಿದೆ.

ಆರ್ಥಿಕವಾಗಿ, ಸಾಮಾಜಿಕವಾಗಿ ಹೇಳುವುದಾದರೆ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿರುವ 'ಅವೇರ್‌ನೆಸ್' ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಕಂಡುಬರುವುದಿಲ್ಲ ಎಂದು ಪ್ರಾಕಲ್ಪನೆಗಳಲ್ಲಿ ಹೇಳಿರುವುದು ದೊರೆತಿರುವ ಅಂಕಿ ಅಂಶಗಳಿಂದ ಅದಕ್ಕೆ ವಿರುದ್ಧವಾಗಿರುವ ಸ್ಥಿತಿ ಕಂಡುಬಂದಿದೆ. ಅಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಅವೇರ್‌ನೆಸ್ ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತವೆ.

ರಾಜಕೀಯದಲ್ಲಿ ಮಹಿಳಾ ಭಾಗವಹಿಸುವಿಕೆಯ ಪ್ರಮಾಣ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಿಗಿಂತ, ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳಲ್ಲಿ ಅನುಪಾತ ಹೊಂದಿದೆ ಎಂದಿರುವ ಪ್ರಾಕಲ್ಪನೆಯು ಕ್ಷೇತ್ರಕಾರ್ಯದ ಮೂಲಕ ದೊರೆತ ಅಂಕಿ ಅಂಶಗಳಿಂದ ತಿರುವು ಮುರುವು ಆಗಿರುವುದು ಗೋಚರವಾಗುತ್ತದೆ. ಅಂದರೆ ರಾಜಕೀಯದಲ್ಲಿ ಮಹಿಳಾ ಭಾಗವಹಿಸುವಿಕೆಯ ಪ್ರಮಾಣ ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಿಗಿಂತ ಸಂಡೂರಿನ ಗ್ರಾಮಪಂಚಾಯ್ತಿಗಳಲ್ಲಿ ಕ್ರಿಯಾಶೀಲ ಮಟ್ಟದಲ್ಲಿರುವುದನ್ನು ದೊರೆತ ಅಂಕಿ ಅಂಶಗಳು ದೃಢೀಕರಿಸುತ್ತವೆ.

ಈ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳಲ್ಲಿರುವ ಮಹಿಳಾ ಸದಸ್ಯೆಯರ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಿಗಿಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.

ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿರುವ ಚುನಾಯಿತ ಮಹಿಳೆಯರ ಮೇಲೆ ಪುರುಷರ ಪ್ರಭಾವವು ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಚುನಾಯಿತ ಮಹಿಳೆಯರ ಮೇಲೆ ಹೆಚ್ಚಿನ ಪ್ರಮಾಣದಲ್ಲಿದೆ ಎಂದಿರುವ ಪ್ರಾಕಲ್ಪನೆಯನ್ನು ದೊರೆತಿರುವ ಅಂಕಿ ಅಂಶಗಳು ನಿಜ ಎಂದು ದೃಢೀಕರಿಸುತ್ತದೆ.

ಹೊಸಪೇಟೆ ತಾಲೂಕಿನ ಗ್ರಾಮಪಂಚಾಯ್ತಿಗಳಿಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳು ಎಲ್ಲ ರೀತಿಯಿಂದಲೂ ಹಿಂದುಳಿದಿವೆ ಎಂದಿರುವ ಪ್ರಾಕಲ್ಪನೆಯು ದೊರೆತಿರುವ ಅಂಕಿ ಅಂಶಗಳಿಂದ ಸಂಪೂರ್ಣವಾಗಿ ಸತ್ಯವಲ್ಲ ಎಂಬುದು ಗೋಚರವಾಗುತ್ತದೆ. ಹೇಗೆಂದರೆ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳು ಮಾತ್ರವಲ್ಲ ಹೊಸಪೇಟೆ ತಾಲೂಕಿನಲ್ಲಿಯೂ ಅನೇಕ ಗ್ರಾಮಪಂಚಾಯ್ತಿಗಳು ಎಲ್ಲ ರೀತಿಯಿಂದ ಹಿಂದುಳಿದಿರುವುದು ಗೋಚರವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ರಾಜಕೀಯ ಸಾಮಾಜೀಕರಣವು ಹೊಸಪೇಟೆಗಿಂತ ಸಂಡೂರು ತಾಲೂಕಿನ ಗ್ರಾಮಪಂಚಾಯ್ತಿಗಳಲ್ಲಿ ಹೆಚ್ಚಾಗಿ ಆಗಿರುವುದು ಕಂಡುಬರುತ್ತದೆ.

ಪ್ರಭುತ್ವ ಪ್ರಧಾನ ಅಭಿವೃದ್ಧಿ ವಿನ್ಯಾಸಗಳು ಖಾಸಗೀಕರಣದ ನೆಲೆಗಳು ಮಹಿಳೆಯರ ಮೇಲೆ ಅತ್ಯಧಿಕ ಹೊಣೆಯನ್ನು ಹೇರುತ್ತಿವೆ. ಹೊಸ ಅರ್ಥಿಕ ನೀತಿಗಳು ಮತ್ತು ರಾಜಕೀಯ ಸಂಗತಿಗಳು ದುಡಿತವನ್ನು ಅನೌಪಚಾರೀಕರಣಕ್ಕೆ ಒಳಗಾಗಿಸುತ್ತಿವೆ. 'ಫೆಮಿನೈಸೇಶನ್ ಆಫ್ ಲೇಬರ್' ಎನ್ನುವ ಮಾತು ಮಹಿಳಾ ದುಡಿಮೆಗಾರರ ಶೋಷಣೆಯನ್ನು ಅಧಿಕ ಗೊಳಿಸುತ್ತಿವೆ. ಇಂದಿನ ಶೇಕಡ ೩೩.೩೩ರಷ್ಟು ರಾಜಕೀಯ ಮೀಸಲಾತಿ ಕೂಡ ಈ ದಾರಿಯಲ್ಲೇ ನಡೆಯುತ್ತಿದೆ. ಮಹಿಳೆಯ ಸಶಕ್ತೀಕರಣಕ್ಕೆ ಪೂರಕವಾಗಬೇಕಾದ ಅವಕಾಶಗಳು ಅಕೆಯ ಹಿತಾಸಕ್ತಿಗೆ ಮಾರಕವಾಗಿ ಪರಿವರ್ತನೆ ಯಾಗುತ್ತಿವೆ ಎಂಬುದನ್ನು ಈ ಅಧ್ಯಯನದಿಂದ ಕೊಂಡುಕೊಳ್ಳಲಾಗಿದೆ.

ರಾಜಕೀಯ ಸಾಮಾಜೀಕರಣಕ್ಕೆ ಸಂಬಂಧಿಸಿದಂತೆ ಒತ್ತಡ ಗುಂಪುಗಳು, ಹಿತಾಸಕ್ತಿ ಗುಂಪುಗಳು (ಕಾರ್ಮಿಕ ಸಂಘಟನೆಗಳು, ರೈತಸಂಘಗಳು) ಗಳು ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುವಲ್ಲಿ ಪ್ರಮುಖ ಸಾಧನಗಳಾಗಿವೆ. ಆದರೆ ಆಯ್ಕೆಯಾದ ಹೆಚ್ಚಿನ ಮಹಿಳೆಯರನ್ನು ಗಮನಿಸಿದಾಗ ಈ ತರದ ಗುಂಪುಗಳ ಪ್ರಣಾಳಿಕೆಗೆ ಪ್ರಭಾವಿತರಾದಂತೆ ಕಾಣಿಸುವುದಿಲ್ಲ. ಕಾರಣ ಚುನಾಯಿತ ಮಹಿಳೆಯರು ಹೊಲ, ಮನೆ, ಲಾಲನೆ, ಪಾಲನೆ, ಪೋಷಣೆ ಮೊದಲಾದ ಕೌಟುಂಬಿಕ ಚೌಕಟ್ಟಿಗೆ ಸೀಮಿತರಾಗಿರುವರು. ಹೀಗಾಗಿ ಸಾರ್ವಜನಿಕ ಬದುಕಿನ ಬಗ್ಗೆ ಅಥವಾ ತಾನು ಆಯ್ಕೆಯಾದ ಸಂಗತಿಯ ಬಗ್ಗೆ ಅಂತಹ ಆಸಕ್ತಿ ಇಟ್ಟುಕೊಂಡಿರುವುದು ಕಂಡುಬರುವುದಿಲ್ಲ. ಇಂತಹ ಗುಂಪುಗಳ ಬಗ್ಗೆ ಮಹಿಳೆಯರಿಗೆ ಯಾವುದೇ ತಿಳುವಳಿಕೆ ಇರುವುದು ಕಂಡುಬರುವುದಿಲ್ಲ.

ತಮ್ಮ ಸ್ಥಾನಬಲದ ಹಂಗು ಹರಿದು ಸಂಜೆಯ ಗಂಜಿಗಾಗಿ ದುಡಿಯುವ ವರ್ಗದ ಮಹಿಳಾ ಪ್ರತಿನಿಧಿಗಳು ರಾಜಕೀಯ ಚಟುವಟಿಕೆಗಳ ದೃಷ್ಟಿಯಿಂದ ಶೂನ್ಯ ಮನೋಧರ್ಮದವರಾಗಿ ಕಾಣುತ್ತಾರೆ.

ವಿಕೇಂದ್ರೀಕರಣದ ಯಶಸ್ಸಿನಲ್ಲಿ ಚುನಾಯಿತ ಮಹಿಳೆಯರ ಸಶಕ್ತೀಕರಣ ಪಾತ್ರ ತುಂಬಾ ನಿರ್ಣಾಯಕವಾದುದಾಗಿದೆ. ಏಕೆಂದರೆ ಚುನಾಯಿತ ಮಹಿಳೆಯರು ಅನೇಕ ಬಗೆಯ ಒತ್ತಡಗಳಲ್ಲಿ ಸಿಲುಕಿ ಸ್ವಾತಂತ್ರ್ಯ ರಹಿತರಾಗಿದ್ದು ಕಂಡುಬರುತ್ತದೆ.

ಪುರುಷಶಾಹಿ ವ್ಯವಸ್ಥೆಯ ಒತ್ತಾಯ ಮತ್ತು ಸ್ವಾರ್ಥತೆಯ ಪರಿಣಾಮವಾಗಿ ಮೀಸಲಾತಿಯ ಮೂಲಕ ಆಯ್ಕೆಯಾಗುವ ಬಹಳಷ್ಟು ಮಹಿಳೆಯರು ರಾಜಕೀಯವಾದಂತಹ ಯಾವ ರೀತಿಯ ಆಸಕ್ತಿಗಳನ್ನು ಹೊಂದಿಲ್ಲದಿರುವುದು ಕಂಡುಬರುತ್ತದೆ.

ಚಿಲಕನಹಟ್ಟಿ, ಬೈಲುವದ್ದಿಗೇರಿ, ಪಾಪಿನಾಯಕನಹಳ್ಳಿ, ಹಂಪಿ, ದೇವಸಮುದ್ರ, ದೇವಲಾಪುರ, ಬುಕ್ಕಸಾಗರ, ಹಂಪಸಾಗರ ಮುಂತಾದ ಗ್ರಾಮಪಂಚಾಯ್ತಿಯ ಸಭೆಗಳಲ್ಲಿ ಸ್ವತಃ ಪ್ರತ್ಯಕ್ಷವಾಗಿ ಭಾಗವಹಿಸುವ ಅವಕಾಶ ಸಿಕ್ಕಿತು. ಅಧ್ಯಕ್ಷೆ, ಉಪಾಧ್ಯಕ್ಷೆ ಸದಸ್ಯೆಯರು ಮಾತನಾಡುವುದೇ ಅಪರೂಪ. Free mind ಆಗಿಯೂ ಇರುವುದಿಲ್ಲ. ಒಂದು ರೀತಿ ಯಾವುದೋ ಮಾನಸಿಕ ಒತ್ತಡದಿಂದ ಬಳಲುತ್ತಿರುವಂತೆ ಕೀಳಿರಿಮೆಯಿಂದ ಜರ್ಜರಿತರಾದಂತೆ ಕಂಡುಬಂದಿತು.

ಎರಡೂ ತಾಲೂಕಿನ ಚುನಾಯಿತ ಮಹಿಳೆಯರಲ್ಲಿ ಬಹಳಷ್ಟು ಸದಸ್ಯೆಯರು ನಮಗೇನೂ ಗೊತ್ತಿಲ್ಲ. ಒತ್ತಾಯದಿಂದ ನಿಂತೆನು. ಗಂಡಸರನ್ನೇ ಕೇಳಿ. ಎಲ್ಲ ಗಂಡನೇ ನೋಡಿಕೊಂತಾನೆ ಎನ್ನುವ ಮಾತುಗಳನ್ನು ಹೇಳಿದರು.

ಸಂಡೂರಿನ ಗ್ರಾಮಪಂಚಾಯಿತಿಯ ಕೆಲವು ಚುನಾಯಿತ ಮಹಿಳೆಯರಲ್ಲಿ(ಹೆಚ್ಚುಪಾಲು) ಉತ್ಸಾಹವಿದೆ. ತಮಗಾಗುತ್ತಿರುವ ಅನ್ಯಾಯವನ್ನು ಬಾಯಿಬಿಟ್ಟು ಹೇಳುವ ಧೈರ್ಯವಿದೆ. ಹೆಚ್ಚಿನ ಮಹಿಳೆಯರು ತಾವು ಅವಕಾಶ ವಂಚಿತರು ತಮ್ಮ ಪರವಾಗಿ ಪುರುಷರು ಆಡಳಿತ ನಡೆಸುವಂತಿದ್ದರೆ, ತಾವು ಯಾಕೆ ಸ್ಪರ್ಧಿಸಿ ಗೆಲ್ಲಬೇಕಿತ್ತು ಎಂದು ಪ್ರಶ್ನಿಸಿದ್ದಾರೆ. ತಮ್ಮ ಪರವಾಗಿ ಆಡಳಿತ ನಡೆಸುವವರು ತಮ್ಮ ಪತಿಯೇ ಆಗಿದ್ದರೂ ತಾರತಮ್ಯವನ್ನು ಧೈರ್ಯದಿಂದ ಪ್ರಶ್ನಿಸುವುದು ಕಂಡುಬಂದಿತು.

ಆದರೆ ಹೊಸಪೇಟೆ ಗ್ರಾಮಪಂಚಾಯಿತಿಗಳಲ್ಲಿ ಹೆಚ್ಚಿನ ಮಹಿಳೆಯರಲ್ಲಿ ಈ ಮನೋಬಾವ ಇಲ್ಲ. ಭಯವಿದೆ. ಸಾಮಾನ್ಯವಾಗಿ ಇವರ ಪರವಾಗಿಯೂ ಪತಿ/ಮಗ/ಇತರ ಪುರುಷರೇ ಆಡಳಿತ ನಡೆಸುತ್ತಿರುವುದು ಕಾಣುತ್ತದೆ.

ರಕ್ಷಿತ ಮಹಿಳೆಯರು ಅಂದರೆ ಮನೆಗೆಲಸಕಷ್ಟೇ ಸೀಮಿತರಾಗಿರುವ ಗೃಹಿಣಿಯರು ಇವರು ಬಹಳ ನಾಚಿಕೆ, ಸಂಕೋಚ, ಭಯ ಅಧೈರ್ಯ ಪ್ರವೃತ್ತಿಯವರಾಗಿ ಕಂಡುಬಂದಿದ್ದಾರೆ.

ದುಡಿಯುವ ವರ್ಗದ ಚುನಾಯಿತ (ಅಂದರೆ ಕೂಲಿ, ತರಕಾರಿ, ಹಣ್ಣು ಹಂಪಲು ಮಾರಾಟ) ಮಹಿಳೆಯರಲ್ಲಿ ಧೈರ್ಯವಿದೆ. ಕಾರಣ ಪತಿಯಿದ್ದರೂ ಕೂಲಿ, ದುಡಿಮೆ, ಕುಟುಂಬದ ಹೊಣೆಗಾರಿಕೆ ಅವರಿಗೆ ತಪ್ಪಿದ್ದಲ್ಲ. ನಾಲ್ಕು ಗೋಡೆಗಳ ನಡುವಿನ ರಕ್ಷಿತ ಬದುಕು ಅವರದಲ್ಲ. ಆದರೂ ಅವರ ಭಾಗವಹಿಸುವ ಮಟ್ಟವೂ ಆಶಾದಾಯಕವಾಗಿಲ್ಲ.

ಆಧುನೀಕರಣ ಮತ್ತು ವಿಕೇಂದ್ರೀಕರಣದಿಂದಾಗಿ ಇಂದು ಬದುಕಿನಲ್ಲಿ ಬೇಕಾದಷ್ಟು ಬದಲೀ ಅವಕಾಶಗಳು ಸಿಗುತ್ತಿವೆ. ಈ ಬದಲೀ ಅವಕಾಶಗಳು ಸಾಂಪ್ರದಾಯಿಕ ಸಮಾಜದ ಶ್ರೇಣೀಕರಣವನ್ನು ಅಧಿಕಾರದ ಸ್ತರಗಳನ್ನು ಆಮೂಲಾಗ್ರವಾಗಿ ಬದಲಾಯಿಸದಿದ್ದರೂ ತೀವ್ರತರದ ತಲ್ಲಣಗಳಿಗಂತೂ ಈಡು ಮಾಡಿವೆ. ಹೊಸ ನಾಯಕತ್ವ, ಸಾಂಪ್ರದಾಯಿಕ ಮನಸ್ಸುಗಳಿಗೆ ಒಪ್ಪಿಗೆಯಾಗದಿದ್ದರೂ ಅದನ್ನು ತನ್ನ ನೆರಳಿನಡಿಯಲ್ಲಿ ತನ್ನ ಅಗತ್ಯಕ್ಕೆ ತಕ್ಕಂತೆ ಪೋಷಿಸುವುದು ಕಂಡುಬರುತ್ತದೆ. ಆದರೂ ಕೆಲವು ಕಡೆ ಈ ನೆರಳಿನಿಂದ ಪ್ರತಿಭಟನಾತ್ಮಕವಾಗಿ ಹೊರಬಂದ ಹೊಸ ಬದುಕನ್ನು ಕಂಡುಕೊಂಡ ಪ್ರತಿನಿಧಿಗಳೂ ಇರುವುದು ಕಂಡುಬರುತ್ತದೆ.

ಶೇ.೩೩.೩೩ರಷ್ಟು ಮಹಿಳಾ ಮೀಸಲಾತಿ ನೀಡುವ ಮೂಲಕ ಅಪಮೌಲ್ಯೀಕರಣಕ್ಕೆ ಒಳಗಾದ ಮಹಿಳಾ ವ್ಯಕ್ತಿತ್ವವನ್ನು ಸಶಕ್ತೀಕರಣದ ನೆಲೆಗಳತ್ತ ಒಯ್ದಿರುವುದು ವಿಕೇಂದ್ರೀಕರಣದಿಂದ ಕಂಡು ಬರುತ್ತದೆ. ವಿಭಿನ್ನ ಜನವರ್ಗಗಳ ವಿಭಿನ್ನ ದೃಷ್ಟಿಕೋನಗಳುಳ್ಳ ಮಹಿಳೆಗೆ ರಾಜಕೀಯ ಭಾಗವಹಿಸುವಿಕೆಗೆ ಬಹಳಷ್ಟು ಅವಕಾಶಗಳು ಇರುವುದು ಬಹುಮುಖ್ಯ ವಿಚಾರ.

ಮಹಿಳೆಯರಿಗೆ, ಹರಿಜನ, ಗಿರಿಜನ, ಹಿಂದುಳಿದ ಜಾತಿಗಳಿಗೆ ಸೀಟು ಕಾಯ್ದಿರಿಸುವ ಮೂಲಕ ತಳಮಟ್ಟದ ಜನರ ಅಭಿವೃದ್ಧಿಗೆ ಅವಕಾಶ ನೀಡಲಾಗಿದೆ. ಮತ್ತು ಆ ಮೂಲಕ ದುರ್ಬಲ ವರ್ಗದವರ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನ ನಡೆಸಲಾಗಿದೆ. ಪ್ರತಿಯೊಂದು ಜಾತಿಗೂ ತನ್ನ ಆಸಕ್ತಿಗಳನ್ನು ಪ್ರತಿನಿಧೀಕರಿಸಲು ಅವಕಾಶ ಮಾಡಿಕೊಡಲಾಗಿದೆ.

ಗ್ರಾಮಪಂಚಾಯಿತಿ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಚುನಾಯಿತ ಸದಸ್ಯರಿಗೆ ಪ್ರಾಥಮಿಕ ತಿಳುವಳಿಕೆಯೂ ಇಲ್ಲ ಎಂಬುದು ಗಂಭೀರ ವಿಚಾರ. ಹೆಚ್ಚಿನವರು ಮೀಸಲಾತಿ ಅನಿವಾರ್ಯಕ್ಕಾಗಿ ಪರಾವಲಂಬಿಗಳಾಗಿ ಆಯ್ಕೆಯಾದವರು. ಬಹಳಷ್ಟು ಜನಕ್ಕೆ ಪಂಚಾಯಿತಿ ಸದಸ್ಯಗಿರಿ ಗಂಡಸರ ಕೆಲಸ. ತಿರುಗಾಡಿ ಕೆಲಸ ಮಾಡಿಸುವವರು ಅವರೇ. ಸರಕಾರದ ಖೋಟಾ ಭರ್ತಿಮಾಡಲು ಒತ್ತಾಯಪೂರ್ವಕವಾಗಿ ಆಯ್ಕೆ ಯಾದವರು ಈ ರೀತಿ ಹೇಳುತ್ತಾರೆ. ರಾಜಕೀಯ ಇಚ್ಛಾಶಕ್ತಿ ತುಂಬ ಕೆಳಮಟ್ಟದ್ದಾಗಿದೆ.

ರಾಜಕೀಯದಲ್ಲಿ ಮಹಿಳೆ ಭಾಗವಹಿಸುವಿಕೆಯ ಕೊರತೆಗೆ ಕಾರಣ ಲಿಂಗಸಂಬಂಧಿ ಶ್ರಮ ವಿಭಜನೆ. ಆ ಮೂಲಕ ಅವಳನ್ನು ಖಾಸಗಿ ಆಸ್ತಿಯನ್ನಾಗಿ ಪರಿಗಣಿಸಿರುವುದು. ಮೆಂಬರೆಂದರೆ ಎಲ್ಲಿಬೇಕಾದರೂ ಯಾರ ಜೊತೆಗಾದರೂ ಇರಬೇಕಾಗುತ್ತದೆ. ಪರಿಚಿತರ ಜೊತೆ ಇರಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಅವಳ ಪಾವಿತ್ರ್ಯಕ್ಕೆ ಧಕ್ಕೆ ಬರಬಹುದು. ಕಾರಣ ಅವಳು ಮನೆಯೊಳಗೆ ಇರಬೇಕೆಂದು ಪುರುಷಶಾಹಿ ಸಮಾಜ ನಿರ್ಬಂಧ ಹಾಕುತ್ತದೆ. ಆ ಮೂಲಕ ಅವಳನ್ನು ಅಪ್ರಯೋಜಕ ವಸ್ತುವನ್ನಾಗಿ ಪರಿಗಣಿಸಲಾಗಿದೆ. ಹೀಗೆ ಲಿಂಗಶಾಹಿ ನಂಬಿಕೆಗಳು ಅವಳನ್ನು ಅಧೀರಳನ್ನಾಗಿಸಿದ್ದನ್ನು ಕಂಡುಕೊಳ್ಳಲಾಗಿದೆ.

ಆಯ್ಕೆಯಾದ ಹೆಚ್ಚಿನ ಮಹಿಳೆಯರು ಒಂದಿಲ್ಲೊಂದು ನೆಲೆಯಲ್ಲಿ ಪುರುಷಶಾಹಿ ವ್ಯವಸ್ಥೆಗೆ ಸೀಮಿತವಾದವರು. ಇವರ ಪರವಾಗಿ ಗಂಡ, ಮಕ್ಕಳು ಅಥವಾ ಮಾವ ಯಾರಾದರೂ ರಾಜಕೀಯದಲ್ಲಿ ಭಾಗವಹಿಸುತ್ತಿರುತ್ತಾರೆ. ಚುನಾಯಿತ ಮಹಿಳೆಯರಲ್ಲಿ ಪಂಚಾಯ್ತಿಯ ಕಚೇರಿಯನ್ನು ನೋಡದ ಸದಸ್ಯೆಯರೂ ಇದ್ದಾರೆ ಎಂಬುದು ಗಮನಾರ್ಹ. ಜನಪ್ರತಿನಿಧಿಯಾಗಿ ಪ್ರತಿಷ್ಠಿತ ಜಾಗದಲ್ಲಿದ್ದರೂ ಅವಳನ್ನು ಪರಾಧೀನೆಯಾಗಿಯೇ ನೋಡುವ ಪರಿಸ್ಥಿತಿಯಿದೆ. ವ್ಯವಹಾರ, ವ್ಯಾಪಾರ, ವಾಣಿಜ್ಯಗಳಲ್ಲಿ ಅವಳ ಪಾಲು ಕಡಿಮೆ ಇರುವುದರಿಂದ ಅವಳ ಸ್ಥಾನವು ನಿಕೃಷ್ಟ ಸ್ಥಿತಿಯಲ್ಲಿದೆ. ಎಂಥ ಪ್ರತಿಷ್ಠಿತ ಜಾಗದಲ್ಲಿದ್ದರು ಸ್ತ್ರೀಯ ಪುರುಷಾವಲಂಬಿಯಾಗಿಯೇ ಇಬ್ಬಗೆಯ ಬದುಕು ಸಾಗಿಸಬೇಕಾಗಿದೆ. ಈ ಲಿಂಗ ಸಂಬಂಧಿ ತಾರತಮ್ಯವನ್ನು ಸರಿಯೆಂದು ಒಪ್ಪಿ ಪಾಲಿಸಿಕೊಂಡು ಬರುವಂತಹ ಮನೋಧರ್ಮವನ್ನು ಇಂದೂ ಕಾಣಬಹುದಾಗಿದೆ. ಕುಟುಂಬದ ಶ್ರೇಯಸ್ಸಿಗಾಗಿ, ದಾಂಪತ್ಯದ ಒಳಿತಿಗಾಗಿ ಮಹಿಳೆಯರು ಎಂಥ ತ್ಯಾಗಕ್ಕೂ ಸಿದ್ಧರಿದ್ದಾರೆ. ಅದಕ್ಕಾಗಿ ಪುರುಷಾಧೀನವಾಗಿದ್ದಾರೆ. ಆ ಮೂಲಕ ತನ್ನಲ್ಲಿನ ಕ್ರಾಂತಿಕಾರಕ ಮತ್ತು ಕ್ರಿಯಾತ್ಮಕವಾದ ಸಂವೇದನೆಗಳನ್ನು ಹತ್ತಿಕ್ಕಿಕೊಳ್ಳುತ್ತಿದ್ದಾಳೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಮಹಿಳೆ ಗ್ರಾಮಪಂಚಾಯಿತಿ ಅಧ್ಯಕ್ಷೆಯಾದಳು ಎಂಬ ಕಾರಣಕ್ಕೆ ಅವಳ ಸಾಮಾಜಿಕ ಸ್ಥಿತಿ ಉನ್ನತಿಯಾಯಿತೆಂದು ತಿಳಿಯಲಾಗದು. ಯಾಕೆಂದರೆ ಸ್ಥಾನಮಾನವೇ ಬೇರೆ ಸಾಮಾಜಿಕ ಸ್ಥಿತಿಗತಿಯೇ ಬೇರೆ. ಇದನ್ನು ದುರ್ಬಲವರ್ಗದ ಪುರುಷರ ಸಂದರ್ಭದಲ್ಲೂ ಕಾಣಬಹುದಾಗಿದೆ. ಗ್ರಾಮೀಣ ರಾಜಕೀಯದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ತಮ್ಮ ವ್ಯಕ್ತಿತ್ವದ ವಿಕಸನದ ಒಂದು ಸ್ಥಾನವಾಗಿ ಮಹಿಳೆಯರು ಬಳಸಿಕೊಳ್ಳುವ ಮನೋಭಾವ ಹೊಂದಿಲ್ಲ. ಇದು ಪ್ರತಿಯೊಂದು ಗ್ರಾಮಪಂಚಾಯಿತಿ ಮಹಿಳೆಯರಲ್ಲೂ ಕಂಡುಬಂದಿದೆ.

ಎಲ್ಲ ಜಾತಿ, ವರ್ಗದ ಪ್ರತಿನಿಧಿಗಳಿಗೂ ಪಂಚಾಯ್ತಿಯಲ್ಲಿ ಅವಕಾಶ ಸಿಕ್ಕಿದೆ. ಎಲ್ಲರೂ ಸೇರುತ್ತಾರೆ. ಸಭೆ ಮಾಡುತ್ತಾರೆ. ಜಾತ್ರೆ, ಹಬ್ಬ ಹರಿದಿನಗಳನ್ನು ಉತ್ಸವ ಸಮಾರಂಭಗಳನ್ನು

ಮುಖಂಡತ್ವ ವಹಿಸಿಕೊಂಡು ಮಾಡುತ್ತಾರೆ. ಆದರೆ ಸಾಂಪ್ರದಾಯಿಕವಾದಂತಹ ಅಸಮಾನ ಅಂತರಗಳು ಸಾಂಸ್ಕೃತಿಕ ಕ್ಷೇತ್ರದಲ್ಲಿ ಬದಲೀ ರೂಪದಲ್ಲಿ ಜೀವಂತವಾಗಿ ಉಳಿದುಕೊಂಡಿವೆ. ಪ್ರಬಲ ವರ್ಗಗಳು ಈ ಅಂತರವನ್ನು ಉಳಿಸಿಕೊಂಡೆ ಬದುಕಲು ಇಚ್ಛಿಸುತ್ತವೆ. ಕೆಳವರ್ಗದ ಎಲ್ಲ ಸಹಾಯವೂ ಬೇಕು. ಆದರೆ ಸಹವಾಸ ಮತ್ತು ಸಮಾನತೆ ಮಾತ್ರ ಬೇಡ. ಹೀಗಾಗಿ ಸಾಮಾಜಿಕ ಮತ್ತು ಆರ್ಥಿಕ ಯಜಮಾನಿಕೆಗಳಲ್ಲದೇ ಸಾಂಸ್ಕೃತಿಕ ಯಜಮಾನಿಕೆಯನ್ನು ಅವು ಬಿಟ್ಟುಕೊಡುವುದಿಲ್ಲ. ಹಾಗೆ ನೋಡಿದರೆ ಊರಿನ ಪ್ರಥಮ ಪ್ರಜೆ ಚುನಾಯಿತ ಅಧ್ಯಕ್ಷೆಯಾಗಿರುತ್ತಾರೆ. ಊರಿನ ಪ್ರತಿ ಚಟುವಟಿಕೆ ಅವಳ ಮುಖಂಡತ್ವದಲ್ಲಿ ನಡೆಯಬೇಕು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಪರಂಪರೆಯ ಹೆಸರಿನಲ್ಲಿ ಪ್ರಬಲವರ್ಗಗಳೇ ಪ್ರತಿಯೊಂದರ ಚಲನೆಗೂ ಕಾರಣವಾಗಿವೆ. ಇವರ ಅಪ್ಪಣೆಯಿಲ್ಲದೆ ಹುಲ್ಲು ಕಡ್ಡಿಗಳೂ ಚಲನೆಗೆ ಬರಲಾರವು.

ಆಧುನೀಕರಣದ ದೆಸೆಯಿಂದ ಇಂದು ಉದ್ಯೋಗದಲ್ಲಿ ಸ್ಥಿತ್ಯಂತರಗಳು ಸಂಭವಿಸಿವೆ. ಸಂಡೂರು ಮತ್ತು ಹೊಸಪೇಟೆಯ ಕೆಲವು ಪರಿಸರದಲ್ಲಿ ಇಂದು ಗಣಿಗಾರಿಕೆ ಮತ್ತು ಪ್ರಮುಖ ಕಾರ್ಖಾನೆಗಳು ಸ್ಥಾಪಿತವಾಗಿವೆ. ಇವು ಹೊಸ ರೀತಿಯ ಔದ್ಯೋಗಿಕ ಕೇಂದ್ರಗಳನ್ನು ಹುಟ್ಟು ಹಾಕಿವೆ. ಊರಿನ ಪ್ರಬಲ ಜಾತಿಗಳೇ ಮಹಿಳೆಯರಿಗೆ ಮತ್ತು ಕೆಳವರ್ಗದವರಿಗೆ ಜೀವನಾಧಾರಕ್ಕೆ ಗತಿಯಾಗಿರುವ ಸ್ಥಿತಿಯಿಲ್ಲ. ಹೊರಗಿನಿಂದ ಬಂದ ಧಣಿಗಳು, ಶ್ರೀಮಂತರು ಈ ಜಾಗ ತುಂಬಿದ್ದಾರೆ. ಅಂದರೆ ಪಾರಂಪರಿಕ ಯಜಮಾನಿಕೆಯಲ್ಲಿ ಸಡಿಲತೆ ಉಂಟಾಗಿದೆ. ಪಂಚಾಯತ್ ರಾಜಕೀಯ ಕೆಳವರ್ಗಗಳಿಗೆ ಕೊಟ್ಟ ಪ್ರಾತಿನಿಧ್ಯ ಮೇಲು ಜಾತಿಗಳ ಅಸ್ತಿತ್ವವನ್ನು ತಲ್ಲಣಗೊಳಿಸುತ್ತಿವೆ. ದುರಂತವೆಂದರೆ ಯಜಮಾನಿಕೆಯನ್ನು ರೂಢಿಸಿಕೊಳ್ಳುವ ಸಾಮರ್ಥ್ಯ ಈ ಮಹಿಳಾ ಮತ್ತು ದಮನಕ್ಕೊಳಗಾದ ವರ್ಗದಲ್ಲಿ ಇಲ್ಲದಿರುವುದು. ಶತಮಾನದ ಗುಲಾಮಗಿರಿ ಸ್ವಭಾವ ಒಂದು ಕಡೆಯಾದರೆ, ಹಳ್ಳಿಗಳು ಸಮಕಾಲೀನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮೌಲ್ಯಗಳನ್ನೇ ಜೀವಂತವಾಗಿ ಉಳಿಸಿಕೊಳ್ಳಲು ಪ್ರೇರೇಪಿಸುತ್ತಿವೆ. ರಾಜಕೀಯ ಸಡಿಲತೆ ಉಂಟಾದಂತೆನಿಸಿದರೂ ಸಾಂಸ್ಕೃತಿಕ ರಾಜಕಾರಣದಲ್ಲಿ ಇಂಥ ಪ್ರಬಲ ಶಕ್ತಿಗಳು ತುಂಬಾ ಚುರುಕಾಗಿ ಅನ್ಯದರ ಆಕ್ರಮಣವನ್ನು ತಡೆದು ತನ್ನತನವನ್ನು ಉಳಿಸಿಕೊಳ್ಳುತ್ತಿವೆ.

ಮಹಿಳೆಯ ದೀನ ಸ್ಥಿತಿಗೆ ಅಪ್ರಯೋಜಕ ಸ್ಥಿತಿಗೆ ಆರ್ಥಿಕ ಹಿಂದುಳಿಯುವಿಕೆ ಕಾರಣ ಎಂದು ಹೇಳಲಾಗುತ್ತದೆ. ಇಂಥ ಸಂದರ್ಭದಲ್ಲಿ ಸರಕಾರದ ಕಾರ್ಯಕ್ರಮಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕ ಜನರಿಗೆ ತಲುಪಿಸಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆನ್ನುವ ಭಾವನೆ ಇದೆ. ವಿದೇಶೀ ಬಂಡವಾಳದ ಮುಕ್ತ ಪ್ರವೇಶ ಸರ್ಕಾರದ ಗಾತ್ರವನ್ನು ಇಳಿಸುವ ಡೌನ್‌ಸೈಜ್ ಮಾಡುವ ಸಂಗತಿಗಳಿಗೆ ಹೊಳವು ನೀಡಿತು. ಇದು ಮಾನವಮುಖಿ ಅಭಿವೃದ್ಧಿಗಿಂತ ಮಾರುಕಟ್ಟೆ ಪ್ರಧಾನ ಅಭಿವೃದ್ಧಿಗೆ ಒತ್ತು

ಕೊಡಲಾಯಿತು. ಹೀಗೆ ಪರಿವರ್ತನೆಯಲ್ಲಿ ತಾಂತ್ರಿಕ ಪ್ರಗತಿಗೆ ಹೆಚ್ಚು ಒತ್ತು ಕೊಡಲಾಗಿದೆ. ಹೀಗಾಗಿ ಮಹಿಳಾ ಸಶಕ್ತೀಕರಣದಂತಹ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದುಕೊಂಡಿವೆ. ಕೈಯಲ್ಲಿ ತುಂಬಿದ ಬಿಂದಿಗೆ ಹಿಡಿದರೂ ಅದನ್ನು ಕುಡಿಯುವ ಸ್ವಾತಂತ್ರ್ಯ ಚುನಾಯಿತ ಮಹಿಳೆಯರಿಗೆ ಇಲ್ಲವಾಗಿದೆ. ರಾಜಕೀಯ ಸಾಮಾಜೀಕರಣಕ್ಕೆ ಪ್ರೇರಕವಾದ ಉತ್ತಮ ಶಿಕ್ಷಣ, ಪೌಷ್ಠಿಕ ಆಹಾರ, ಉತ್ತಮ ಕೆಲಸ ಗಟ್ಟಿಮನೋಧರ್ಮ ಇವು ಮಹಿಳೆಗೆ ಸಿಗುತ್ತಿಲ್ಲ. ಸಾಮಾಜಿಕವಾದ ಇಂಥ ಸಂಗತಿಗಳು ರಾಜಕೀಯದಲ್ಲಿ ಭಾಗವಹಿಸುವಿಕೆಯಿಂದ ಸಿಗುವಂಥವಲ್ಲ. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯಾರ್ಥಿಕ ರಚನೆಗಳಿಂದ ದೊರೆಯುವಂಥವು. ಮನುಷ್ಯನ ಒಟ್ಟುಮನೋಧರ್ಮವನ್ನು ಸಂರಚನೆ ಮಾಡುವ ಈ ಸಂಗತಿಗಳು ಬಹುಮುಖ್ಯವಾದವು. ಇಂದು ಚುನಾಯಿತ ಸದಸ್ಯೆಯ ಸಶಕ್ತೀಕರಣಕ್ಕೆ ಬೇಕಾಗುವ ವರ್ತಮಾನದ ಕೊರತೆಗಳನ್ನು ನೀಗಿಸುವುದು ಮತ್ತು ಅಂತಹ ಕೊರತೆಗಳಿಗೆ ಪೋಷಕವಾಗುವ ಅಂಶಗಳನ್ನು ಪುನಾರಚನೆಗೊಳಿಸಬೇಕಾದ ಜರೂರು ಇದೆ. ಯಾಕೆಂದರೆ ನಮ್ಮ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಕೃತಿಗಳು ಶತಮಾನದ ದಯನೀಯ ನೆಲೆಗಳನ್ನು ಪೋಷಿಸಿಕೊಂಡು ಬರುತ್ತಿವೆ. ಇವುಗಳ ಸುಧಾರಣೆಗೆ ಬೇಕಾದಷ್ಟು ಕಾನೂನುಗಳನ್ನು ರಚಿಸಿದರೂ ಅವು ಆಚರಣೆಗೆ ಬಂದಿಲ್ಲ. ಇಂತಹ ಅಪಮಾನ ನೆಲೆಗಳನ್ನು ಹೋಗಲಾಡಿಸುವ ಮತ್ತು ಮಹಿಳೆಯರಿಗೆ ದುರ್ಬಲವರ್ಗದವರಿಗೆ ಸಮಾನ ಅವಕಾಶಗಳನ್ನು ಒದಗಿಸುವ ಕಾರ್ಯ ಆಚರಣೆಯ ಮಟ್ಟದಲ್ಲಿ ಆಗಬೇಕಾಗಿರುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಬರೀ ಆರ್ಥಿಕ ಪ್ರಜಾಪ್ರಭುತ್ವ, ರಾಜಕೀಯ ಪ್ರಕ್ರಿಯೆಗಳಿಂದ ವ್ಯವಸ್ಥೆ ಬದಲಾಗದು. ಅದಕ್ಕೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳೂ ಪೂರಕವಾಗಿ ಕೆಲಸ ಮಾಡಿದರೆ ಮಾತ್ರ ವಿಕೇಂದ್ರೀಕರಣದ ಉದ್ದೇಶ ಈಡೇರಿದಂತಾಗುತ್ತದೆ. ಗ್ರಾಮೀಣ ರಾಜಕೀಯದಲ್ಲಿ ಮಹಿಳೆಯರ ಗುಣಾತ್ಮಕ ಭಾಗವಹಿಸುವಿಕೆ ಮತ್ತು ನಿರ್ಣಯ ಸಾಮರ್ಥ್ಯ ಇದರಿಂದ ವೃದ್ಧಿಸುತ್ತದೆ.

ಲಿಂಗಸಂಬಂಧಿ ದೃಷ್ಟಿಯಿಂದ ಹೊಸ ಅವಕಾಶಗಳು ಹಳೆಯ ಮಂಡಲ ಪಂಚಾಯತಿ ಕಾನೂನುಗಳಿಗಿಂತ ಅಂತಹ ಭಿನ್ನವಾದವುಗಳೇನಲ್ಲ. ಮೀಸಲಾತಿ ಪ್ರಮಾಣ ಸದ್ಯ ಗ್ರಾಮಪಂಚಾಯತಿ ವ್ಯವಸ್ಥೆಯಲ್ಲಿ ಗಣನೀಯ ಪ್ರಮಾಣದಲ್ಲಿದ್ದರೂ ಮೊದಲಿನಂತೆಯೇ ಪುರುಷಶಾಹಿ ಹಾಗೂ ಅಧಿಕಾರಶಾಹಿ ನೆಲೆಗಳು ಚುನಾಯಿತ ಮಹಿಳೆಯ ಒಟ್ಟು ಬದುಕನ್ನು ನಿಯಂತ್ರಿಸುತ್ತಿವೆ. ಇಂಥ ಮಹಿಳೆಯರ ಕೌಟುಂಬಿಕ ಮತ್ತು ಸಾಮಾಜಿಕ ಸಮಸ್ಯೆಗಳು ಹೆಚ್ಚಾಗಿವೆ. ಚಾಕರಿಗೆ ಸೀಮಿತವಾಗಿದ್ದ ಬದುಕಿನಲ್ಲಿ ಸಮಸ್ಯೆಗಳೊಂದಿಗೆ

ಇಂದು ರಾಜಕೀಯ ಕ್ಷೇತ್ರದ ಸಮಸ್ಯೆಗಳ ಹೆಚ್ಚಿನ ಭಾರ, ಅವಳ ಮೇಲೆ ಬಿದ್ದಿದೆ. ವಿಶೇಷವಾಗಿ ಲಿಂಗಸಂಬಂಧಿ ಮತ್ತು ಜಾತಿ ಸಂಬಂಧಿ ಸಮಸ್ಯೆಗಳೇ ಇಲ್ಲಿ ಪ್ರಧಾನವಾಗಿ ಕಾಣುತ್ತವೆ.

ವಿಕೇಂದ್ರೀಕರಣದಿಂದ ದುರ್ಬಲವರ್ಗದ ಜಾತಿಗಳಲ್ಲಿ ಮಹಿಳೆಯರಲ್ಲಿ ಒಂದು ಚಲನೆ ಏನೋ ಕಾಣಿಸಿಕೊಂಡಿದೆ. ಜಾತಿವಾರು ಉಪಾಧ್ಯಕ್ಷೆ, ಅಧ್ಯಕ್ಷೆ ಸ್ಥಾನಗಳನ್ನು ಮೀಸಲಿರಿಸಿದೆ. ಎಲ್ಲ ಜಾತಿಗಳಿಗೂ ಪ್ರಾತಿನಿಧ್ಯ ಕೊಡಲಾಗಿದೆ. ಆದರೆ ಲಾಭ ಮಾತ್ರ ಅಲ್ಲಿ ಪ್ರಬಲ ಜಾತಿ, ವರ್ಗಗಳ ಅಧಿಕಾರಶಾಹಿಗಳ ಪಾಲಾಗುತ್ತಿರುವ ಸ್ಥಿತಿಯಿದೆ. ಯಾವ ಅಭಿವೃದ್ಧಿ ಕಾಮಗಾರಿಗಳೂ ಆಯ್ಕೆ ಸದಸ್ಯ ಅಥವಾ ಅಧ್ಯಕ್ಷರ ಮೂಲಕ ಕಾರ್ಯರೂಪಕ್ಕೆ ಬರುವುದಿಲ್ಲ. ಎಲ್ಲವನ್ನು ಮೇಲಿನವರೇ ನಿರ್ವಹಿಸುತ್ತಾರೆ. ಇದಕ್ಕೆ ಕೆಳವರ್ಗದವರು, ಮಹಿಳೆಯರು ಆಡಳಿತ ನಡೆಸಲು ಅರ್ಹರಲ್ಲ ಎನ್ನುವ ಭಾವನೆಗಳು ಪ್ರಧಾನವಾಗಿ ಕಂಡುಬರುತ್ತವೆ. ಕೆಳಸ್ತರದ ಸಂಸ್ಥೆಗಳೊಂದಿಗೆ, ಜನರೊಂದಿಗೆ ಅಧಿಕಾರ ಹಂಚಿಕೊಳ್ಳುವ ಸ್ಥಿತಿ ಪ್ರಭುತ್ವ ಮತ್ತು ಅಧಿಕಾರವರ್ಗ, ಪ್ರಬಲ ಜಾತಿಗಳಲ್ಲಿ ಕಂಡುಬರುವುದಿಲ್ಲ.

ಗ್ರಾಮಪಂಚಾಯ್ತಿ ವ್ಯವಸ್ಥೆಯಿಂದ ಅಧಿಕಾರ ವಿಕೇಂದ್ರೀಕರಣಗೊಂಡಿದ್ದರೂ ದುರ್ಬಲ ಮತ್ತು ಮಹಿಳಾ ವರ್ಗಗಳಿಗೆ ಅಧಿಕಾರ ಸಿಕ್ಕಿದ್ದರೂ. ಅವರ ಸ್ಥಿತಿ ಮಾತ್ರ ಬದಲಾಗದೇ ಹಾಗೆ ಇದೆ. ಅಧ್ಯಕ್ಷರಾದವರು ದುಡಿಮೆಗೆ ಹೋಗುವುದು ಬಿಡುಗಡೆಯಾಗಿಲ್ಲ. ಅವರಿಗೆ ಸ್ಥಿತಿಗತಿ ಮುಖ್ಯವಾಗಿದೆಯೇ ಹೊರತು ಸ್ಥಾನಮಾನ ಮುಖ್ಯವಾಗಿಲ್ಲ. ಪರಾವಲಂಬಿ ಬದುಕಾಗಿದ್ದರೂ ಸ್ವಾಲಂಬಿ ದುಡಿಮೆ ಮಹಿಳೆಯರಲ್ಲಿ ಕಂಡುಬರುತ್ತದೆ. ಅಧಿಕಾರವಿದ್ದರೂ ಅದನ್ನು ಸ್ವಾರ್ಥಕ್ಕಾಗಿ ಬಳಸದ ಸಾರ್ವಜನಿಕ ಹಣದಲ್ಲಿ ಮಜಾ ಮಾಡದ ಮಹಿಳೆಯರಲ್ಲಿನ ಈ ಗುಣಗಳು ಅಧಿಕಾರಶಾಹಿ ಗಳಲ್ಲೂ ಬಂದದ್ದಾದರೆ ಸ್ವಾವಲಂಬಿ ಮತ್ತು ಸ್ವಾಯತ್ತತೆಯಿಂದ ಗ್ರಾಮಪಂಚಾಯ್ತಿಗಳು ಕಂಗೊಳಿಸುತ್ತವೆ. ದುಡಿಮೆ ಹೊಟ್ಟೆಪಾಡಿಗಾದರೆ ಅಧಿಕಾರ ಅಭಿವೃದ್ಧಿಗೆ ಎನ್ನುವ ಈ ಸೂಕ್ಷ್ಮಗಳನ್ನು ಚುನಾಯಿತ ಪ್ರತಿನಿಧಿಗಳು ಅಳವಡಿಸಿಕೊಂಡರೆ ಸ್ವಾಲಂಬಿ ಸಮಾಜದ ಅಭಿವೃದ್ಧಿ ಸಾಧ್ಯವಾಗುತ್ತದೆ.

ಗ್ರಾಮಪಂಚಾಯತ್ ವ್ಯವಸ್ಥೆಯನ್ನು ಸ್ವಯಂ ಆಡಳಿತ ಘಟಕಗಳನ್ನಾಗಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನಾಗಿ ರೂಪಿಸುವಲ್ಲಿ ಇಂತಹ ಹಲವಾರು ಸಮಸ್ಯೆಗಳಿವೆ. ಹಾಗೆ ಚುನಾಯಿತ ಮಹಿಳಾ ಸದಸ್ಯೆಯರನ್ನು ಸದಸ್ಯರೆಂದೇ ಒಪ್ಪದ ಸ್ಥಿತಿಗಳೂ ಇವೆ. ಲಿಂಗಸಂಬಂಧಿಯಾದ ಜಾತಿ ಸಂಬಂಧಿಯಾದ ಅಡಚಣೆಗಳಿವೆ. ಅಲ್ಲದೆ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕಾರಣಗಳೂ ಇಲ್ಲಿ ಪ್ರಧಾನವಾಗಿವೆ.

ಸಲಹೆಗಳು

ಗ್ರಾಮಪಂಚಾಯ್ತಿಯ ರಾಜಕೀಯದಲ್ಲಿ ಸ್ಪರ್ಧಿಸುವ ಮಹಿಳೆಗೆ ಸಾಕ್ಷರತೆಯ ಅಗತ್ಯತೆ ಇದೆ.

ಚುನಾಯಿತ ಮಹಿಳೆಗೆ ಗ್ರಾಮಪಂಚಾಯ್ತಿಯ ರಾಜಕಾರಣದ ಕುರಿತಾಗಿ ಸರಿಯಾದ ತರಬೇತಿ ಮತ್ತು ಮಾರ್ಗದರ್ಶನದ ಅವಶ್ಯಕತೆ ಇದೆ. ಆಗ 'ಎಂಪವರ್‌ಮೆಂಟ್' ಎಂಬ ಪದಕ್ಕೆ ಸಶಕ್ತೀಕರಣದ ಅರ್ಥ ಬರುತ್ತದೆ.

ಇದಕ್ಕೆ ಪೂರಕವಾಗಿ ಮಹಿಳೆಯ ವಿಷಯದಲ್ಲಿ ಸಂಪ್ರಾದಾಯಿಕವಾದಂತಹ ದೃಷ್ಟಿಕೋನಗಳು, ಸಾಮಾಜಿಕ ಅಸಮಾನತೆಗಳು, ಲಿಂಗ ಸಂಬಂಧಿ ತಾರತಮ್ಯ ಧೋರಣೆಗಳನ್ನು ಹೋಗಲಾಡಿಸಬೇಕಾದ ಅವಶ್ಯಕತೆ ಇದೆ.

ಮಹಿಳೆಯರಲ್ಲಿನ ಕೀಳರಿಮೆ, ಬಡತನ, ಅನಾರೋಗ್ಯ, ಮಾನಸಿಕ ದಾಸ್ಯದಿಂದ ವಿಮೋಚನೆ ಗೊಳಿಸಬೇಕಾದ ಜರೂರು ಇದೆ. ಆ ಮೂಲಕ ಮಹಿಳೆಯಲ್ಲಿ ಆತ್ಮವಿಶ್ವಾಸವನ್ನು, ಸ್ವಾವಲಂಬಿ ಹಾಗೂ ಸ್ವಾತಂತ್ರ್ಯ ಮನೋಧರ್ಮವನ್ನು ಬೆಳಸುವ ಅಗತ್ಯವಿದೆ.

ಮಹಿಳೆಯು ಗ್ರಾಮಪಂಚಾಯ್ತಿಯ ರಾಜಕೀಯದಲ್ಲಿ ತನ್ನನ್ನು ತಾನು ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಅತಿಯಾದ ಕೌಟುಂಬಿಕ ಭಾರದಿಂದ ಹೊರತರುವ ಅವಶ್ಯಕತೆ ಇದೆ.

ಸರ್ಕಾರವು ಶಾಸನ್ಮಾತಕವಾಗಿ ಅನುಷ್ಠಾನಗೊಳಿಸುವ ಸೌಲಭ್ಯಗಳು, ಸೌಲತ್ತುಗಳು ಸರಿಯಾದ ಕ್ರಮದಲ್ಲಿ ಅನುಷ್ಠಾನಗೊಳ್ಳಬೇಕಾಗಿದೆ. ಅ ಮೂಲಕ ಅವುಗಳ ಫಲಿತಗಳನ್ನು ದಕ್ಕಿಸಿಕೊಳ್ಳುವ ಮತ್ತು ತನ್ನ ಜನರಿಗೆ ದೊರಕಿಸಿಕೊಡುವ ಧಾರಣಶಕ್ತಿಯನ್ನು ಮತ್ತು ಇಚ್ಚಾಶಕ್ತಿಯನ್ನು ಚುನಾಯಿತ ಮಹಿಳೆಯರಲ್ಲಿ ಬೆಳೆಸುವುದು ಬಹುಮುಖ್ಯವಾದ ಸಂಗತಿಯಾಗಿದೆ.

[illegible]

ಪರಾಮರ್ಶನ ಗ್ರಂಥಗಳು

ಅಶ್ವಿನಿ ಧೋಂಗಡೆ., ೨೦೦೧, ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು, ವಿಠಲರಾವ್ ಗಾಯಕ್ವಾಡ್(ಅನು), ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಅಪರಂಜಿ ಎನ್.ಆರ್., ೧೯೯೧, ಪಾಶ್ಚಿಮಾತ್ಯ ವಿವೇಚಕರು, ಗದಗ, ವಿಜಯ ಪ್ರಕಾಶನ

ಇಂದಿರಾ ಆರ್., ೧೯೭೯, ಸಾಮಾಜಿಕ ಸಂಶೋಧನಾ ವಿಧಾನಗಳು, ಮೈಸೂರು, ವಿದ್ಯಾಸಾಗರ ಮುದ್ರಣ ಮತ್ತು ಪ್ರಕಾಶನಾಲಯ

ಉಷಾ ಎಂ., ೨೦೦೧, ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಹಂಪಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ

ಕಮಲಾದೇವಿ ಚಟ್ಟೋಪಾಧ್ಯಾಯ., ೧೯೮೪, ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ, ವೈದೇಹಿ(ಅನು) ಹೆಗ್ಗೋಡು, ಸಾಗರ, ಅಕ್ಷರ ಪ್ರಕಾಶನ

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ೧೯-೯೩, ೨೦೦೨, ಗದಗ ಪಾರು ಪ್ರಕಾಶನ

ಗಟ್ಟಿ ಕೆ.ಟಿ., ೧೯೯೬, ನಿನ್ನೆ ನಾಳೆಯ ನಡುವೆ-ಸಾಮಾಜಿಕ ಚಿಂತನೆ, ಬೆಂಗಳೂರು, ಭಾಗೀರಥಿ ಪ್ರಕಾಶನ

ಗೀತಾಚಾರ್ಯ ನಾ.(ಸಂ), ೧೯೯೯, ಅಂತರಶಿಸ್ತೀಯ ಸಂಶೋಧನ ವಿಧಿ-ವಿಧಾನಗಳು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಗೀತಾ ಕೃಷ್ಣಮೂರ್ತಿ., ೨೦೦೧, ಮಹಿಳೆ ಕಾನೂನು ಮತ್ತು ರಾಜಕಾರಣ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚನ್ನಕ್ಕ ಎಲಿಗಾರ, ೧೯೯೦, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಧಾರವಾಡ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ

ಚಂದ್ರಶೇಖರ ಬಿ. ದಾಮ್ಲೆ., ೧೯೯೭, ಭಾರತೀಯ ಸಾಮಾಜಿಕ ಅಧ್ಯಯನ, ಬೆಂಗಳೂರು, ನವೀನ್ ಪ್ರಕಾಶನ

ಚಂದ್ರಶೇಖರ ಟಿ.ಆರ್., ೧೯೯೯, ಅಮರ್ತ್ಯಸೇನರ ಅಭಿವೃದ್ಧಿ ಕಥನ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚಂದ್ರಶೇಖರ ಟಿ.ಆರ್.(ಸಂ), ೧೯೯೯, ಕರ್ನಾಟಕ ಅಭಿವೃದ್ಧಿ ಮಾಹಿತಿಕೋಶ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚಂದ್ರಶೇಖರ ಟಿ.ಆರ್.(ಸಂ) ಮತ್ತು ಇತರರು, ೧೯೯೯, ಜಿಲ್ಲಾ ಅಭಿವೃದ್ಧಿ ಅಧ್ಯಯನ-ಕೊಪ್ಪಳ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚಂದ್ರಶೇಖರ ಟಿ.ಆರ್.(ಸಂ) ಮತ್ತು ಇತರರು, ೨೦೦೦, ಜಿಲ್ಲಾ ಅಭಿವೃದ್ಧಿ ಅಧ್ಯಯನ- ಗದಗ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚಂದ್ರಪೂಜಾರಿ ಎಂ., ೨೦೦೧, ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚಂದ್ರಪೂಜಾರಿ ಎಂ., ೨೦೦೨, ಸಮುದಾಯ ಮತ್ತು ಸಹಭಾಗಿತ್ವ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚಂದ್ರಶೇಖರ ಟಿ.ಆರ್., ೨೦೦೧, ಮಹಿಳೆ : ಆರ್ಥಿಕತೆ ಮತ್ತು ಅಭಿವೃದ್ಧಿ, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಜಯಪ್ರಕಾಶ ನಾರಾಯಣ., ೧೯೭೮, ನವನಿರ್ಮಾಣದೆಡೆಗೆ, ಲಲಿತಾಂಬ ಬಿ.ವೈ.(ಅನು), ಬೆಂಗಳೂರು, ಜನ ಪ್ರಕಾಶನ

ಜೆರಾಲ್ಡಿನ್ ಫೋರ್ಬ್ಸ್, ೨೦೦೧, ಆಧುನಿಕ ಭಾರತದಲ್ಲಿ ಮಹಿಳೆ, ಶ್ರೀಮತಿ ಎಚ್.ಎಸ್.ಅನು, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ., ೧೯೯೪, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಬೆಂಗಳೂರು, ಕನ್ನಡ ಕ್ರೈಸ್ತ ಸಂಘ

ತುಕಾರಮ್ ಎಸ್., ರಾಜು ಬಿ.(ಸಂ), ೨೦೦೦, ಸಾಕ್ಷರ ದಾರಿಯ ಸಾವಿರ ಹೆಜ್ಜೆ-ಕರ್ನಾಟಕ ಸಾಕ್ಷರತಾ ಆಂದೋಲನದ ದಶಕದ ಸಾಧನೆಗಳು, ಮೈಸೂರು, ರಾಜ್ಯ ಸಂಪನ್ಮೂಲ ಕೇಂದ್ರ

ನಾಗಪ್ಪ ಟಿ.ಆರ್., ೧೯೯೪, ಕರ್ನಾಟಕದಲ್ಲಿ ಪಂಚಾಯತ್‌ರಾಜ್, ಬೆಂಗಳೂರು, ನವಕರ್ನಾಟಕ ಪ್ರಕಾಶನ

ನಾರಾಯಣ ಎಂ., ೧೯೯೭, ಗ್ರಾಮೀಣ ಮತ್ತು ಸಮಾಜಶಾಸ್ತ್ರ ಮತ್ತು ಭಾರತೀಯ ಗ್ರಾಮೀಣಾಭಿವೃದ್ಧಿ, ಬೆಂಗಳೂರು, ಚೇತನ ಬುಕ್ ಹೌಸ್

ನಾಗರಾಜ ತಾ.ರಾ., ೧೯೯೯, ವೇದಕಾಲೀನ ವನಿತೆಯರು, ಬೆಂಗಳೂರು, ವಿಜಯ ಭಾರತಿ ಪ್ರಕಾಶನ

ನೀಲಮ್ಮ ಕತ್ನಳ್ಳಿ., ೧೯೯೭, ಮಹಿಳೆ ಹಲವು ಮುಖಗಳು, ಗುಲಬರ್ಗಾ, ಶ್ರೀ ರೇಣುಕಾ ಪ್ರಕಾಶನ

ಪಾಳೇಕರ ಎಸ್.ಪಿ., ೧೯೯೬, ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪ್ರಜ್ಞೆ, ಗುಲಬರ್ಗಾ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ

ಶ್ರೀಧರ ಎ., ೨೦೦೦, ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಕಾಯ್ದೆಗಳು, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಪ್ಲೇಟೋ, ೧೯೬೧, ರಿಪಬ್ಲಿಕ್, ವೆಂಕಟರಾಮಪ್ಪ ಕೆ.(ಅನು), ಮೈಸೂರು, ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್

ಷೇಕ್ ಅಲಿ ಬಿ.(ಪ್ರ.ಸಂ), ೧೯೯೭, ಕರ್ನಾಟಕ ಚರಿತ್ರೆ ಸಂಪುಟ ಕ್ರಿ.ಶ.೧೯೦೦-೧೯೫೬, ಸಂಪುಟ ೭, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಷೇಕ್ ಅಲಿ ಬಿ.(ಪ್ರ.ಸಂ), ೧೯೯೭, ಕರ್ನಾಟಕ ಚರಿತ್ರೆ ಸಂಪುಟ ಕ್ರಿ.ಶ.೬೪೦-೧೩೩೬, ಸಂಪುಟ ೨, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಬಾಲಗೋಪಾಲ, ೧೯೯೮, ಪ್ರಾಚೀನ ಭಾರತದ ಚರಿತ್ರೆ ಡಿ.ಡಿ.ಕೋಸಾಂಬಿಯವರ ಚಿಂತನೆಗಳು, ಶ್ರೀಮತಿ ಎಚ್.ಎಸ್.(ಅನು), ಬೆಳ್ಳಿ ಚುಕ್ಕಿ ಟ್ರಸ್ಟ್

ಭಟ್ಟ ಎಂ.ಎಂ., ೧೯೯೪, ಕರ್ನಾಟಕ ಗ್ರಾಮಪಂಚಾಯತಿ ಶಾಸನ ಪರಿಚಯ, ಚಾಕಳ್ಳಿ, ಸ್ವಾಮಿ ರಮಾನಂದ ತೀರ್ಥ ಸಂಶೋಧನಾ ಸಂಸ್ಥೆ ಮತ್ತು ಗ್ರಾಮೋದಯ ಪ್ರಕಾಶನ

ಭಾಗ್ಯಲಕ್ಷ್ಮಿ ಎಸ್.ವಿ., ೧೯೭೫, ಮಹಿಳಾ ಸ್ವಾತಂತ್ರ್ಯ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್

ಮಹಾಬಲೇಶ್ವರ ಕಾಟ್ರಹಳ್ಳಿ, ೧೯೯೪, ವಿಕೇಂದ್ರೀಕರಣ ಒಂದು ಪ್ರಯೋಗ ಮತ್ತು ಓದುವ ಹವ್ಯಾಸ ಸಮೀಕ್ಷೆ, ಹರಪನಹಳ್ಳಿ, ಅಪೂರ್ವ ಪ್ರಕಾಶನ

ಮನುಚಕ್ರವರ್ತಿ ಎನ್.(ಸಂ), ೧೯೯೩, ಭಾರತೀಯ ಸ್ತ್ರೀವಾದ, ಹೆಗ್ಗೋಡು, ಅಕ್ಷರ ಪ್ರಕಾಶನ

ಮಧುಕೀಶ್ವರ್, ೧೯೯೭, ಮಾನುಷಿಯ ಮಾತು, ಮೀರಾ ಎಲ್.ಜಿ.(ಅನು), ಹೆಗ್ಗೋಡು, ಅಕ್ಷರ ಚಿಂತನ ಪ್ರಕಾಶನ,

ಮೂರ್ತಿಶ್ವರಯ್ಯ., ೨೦೦೦, ಮಹಿಳೆ ಸಮಾಜ ಮತ್ತು ಕಾನೂನು, ಬೆಂಗಳೂರು, ಸ್ವಪ್ನ ಬುಕ್ ಹೌಸ್,

ಮೈತ್ರೇಯಿ ಮುಖ್ಯೋಪಾಧ್ಯಾಯ, ೧೯೯೫, ಭಾರತದಲ್ಲಿ ಹೆಂಗಸರ ಸ್ಥಿತಿಗತಿ, ವೈದೇಹಿ(ಅನು), ಹೆಗ್ಗೋಡು, ಅಕ್ಷರ ಪ್ರಕಾಶನ

ರಾಜಶೇಖರ ಎಚ್.ಎಂ., ೧೯೯೦, ಭಾರತ ಸರ್ಕಾರ ಮತ್ತು ರಾಜಕೀಯ, ಮೈಸೂರು, ಕಿರಣ್ ಪ್ರಕಾಶನ

ರಾಮಯ್ಯಂಗಾರ್, ೧೯೯೬, ಸಮಗ್ರ ಭಾರತ ದರ್ಶನ - ಭಾರತೀಯ ಇತಿಹಾಸದ ಒಂದು ಹೊಸ ನೋಟ, ಬೆಂಗಳೂರು, ಲೇಖಕರು ಮತ್ತು ಪ್ರಕಾಶಕರು

ರಾಜಶೇಖರ ಎಸ್., ೧೯೭೪, ಸಾಮಾಜಿಕ ಸಂಶೋಧನೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ

ರಾವ್ ಎಸ್.ಎನ್.ಸಿ., ೧೯೮೭, ರಾಜ್ಯನೀತಿಯ ವಿವೇಚಕರು, ಗದಗ, ವಿಜಯ ಪ್ರಕಾಶನ

ರಾಮಕೃಷ್ಣ ಎಚ್.ಟಿ., ೧೯೯೭, ರಾಜಕೀಯ ಸಿದ್ಧಾಂತ ಹಾಗೂ ಆಚರಣೆ, ಲಲಿತ ಪ್ರಕಾಶನ

ರುಸ್ತುಂ ಭರೂಚ, ೧೯೯೩, ನಂಬಿಕೆಯ ಪ್ರಶ್ನೆ, ಮುರಳೀಧರ ಖಜಾನೆ(ಅನು), ಓರಿಯಂಟ್ ಲಾಂಗ್‌ಮನ್

ಲೀಲಾವತಿ ಚಾರಿ., ೧೯೯೨, ಮಹಿಳೆಯರ ಹಕ್ಕುಗಳು, ಪ್ರಫುಲ್ಲಾ ನಾಯಿಕ(ಅನು), ಧಾರವಾಡ, ಜಾಗೃತ ಭಾರತ ಪ್ರಕಾಶನ

ವಸಂತ ಪಾಟೀಲ., ಪಂಚಾಯತ ಆಡಳಿತ ಸಾಧಕ ಬಾಧಕಗಳು, ಧಾರವಾಡ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,

ವೀಣಾ ಸಂಕನಗೌಡರ., ೧೯೯೪, ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳು, ಧಾರವಾಡ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,

ವೆಂಕೋಬರಾವ್ ಡಿ., ೨೦೦೦, ನ್ಯಾಯಕ್ಕಾಗಿ ಮಹಿಳೆಯರ ಹೋರಾಟ, ಬೆಂಗಳೂರು, ದಿವ್ಯಚಂದ್ರ ಪ್ರಕಾಶನ

ಶಾಸ್ತ್ರೀ ಎಸ್.ಆರ್. ಮತ್ತು ಇತರರು, ೧೯೮೬, ಆಧುನಿಕ ಸಮಾಜ ಹಾಗೂ ಕೌಟುಂಬಿಕ ಜೀವನದ ಬದಲಾವಣೆಗಳು-ಆರು ಉಪನ್ಯಾಸಗಳು, ಧಾರವಾಡ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,

ಶಿವರುದ್ರಸ್ವಾಮಿ ಎಸ್., ೨೦೦೨, ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ (ಆರಂಭದಿಂದ ಕ್ರಿ.ಶ.೧೯೯೯ರವರೆಗೆ) ಪೌರಸ್ತ್ಯ ಪ್ರಕಾಶನ

ಸಿಂಕ್ಲೇರ್ ಬಿ.ಎ., ೧೯೬೯, ಅರಿಸ್ಟಾಟಲನ ರಾಜ್ಯಶಾಸ್ತ್ರ, ಕೃಷ್ಣರಾವ್ ಎಚ್.(ಅನು), ಮೈಸೂರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಹಾಲಪ್ಪ ಎನ್., ೧೯೯೭, ರಾಜಶಾಸ್ತ್ರ, ನವಿತಾ ಪ್ರಕಾಶನ

ಹೇಮಲತಾ ಮಹಿಷಿ., ೧೯೯೯, ಮಾನವ ಹಕ್ಕುಗಳು ಮತ್ತು ಮಹಿಳೆ, ಬೆಂಗಳೂರು, ಕಾನೂನು ಸೇವಾ ಪ್ರಾಧಿಕಾರ

ಹೊಸಮನಿ ಎಚ್.ಎಸ್., ೧೯೯೩, ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ-೧೯೯೩, ಧಾರವಾಡ, ಆಕಳವಾಡಿ ಬುಕ್‌ಡಿಪೋ

ಕರ್ನಾಟಕ ಪಂಚಾಯತ್‌ರಾಜ್ ಕೈಪಿಡಿ, ೨೦೦೧, ಬೆಂಗಳೂರು, ಕರ್ನಾಟಕ ಲಾ ಜರನಲ್ ಪಬ್ಲಿಕೇಷನ್ಸ್

ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳ ನೋಟ ೧೯೯೯-೨೦೦೦, ೨೦೦೨, ಬಳ್ಳಾರಿ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ

ಕನ್ನಡ ಶೈಲಿ ಕೈಪಿಡಿ, ೧೯೯೫, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಮೈಸೂರು, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ

ನಿಯತಕಾಲಿಕೆಗಳು

ಮಹಿಳಾ ಅಧ್ಯಯನ, ಸಂ.೧, ಸಂ.೧, ಎಚ್.ಎಸ್.ಶ್ರೀಮತಿ(ಸಂ), ೧೯೯೯, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಮಹಿಳಾ ಅಧ್ಯಯನ, ಸಂ.೧, ಸಂ.೨, ಎಚ್.ಎಸ್.ಶ್ರೀಮತಿ(ಸಂ), ೧೯೯೯, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಮಹಿಳಾ ಅಧ್ಯಯನ, ಸಂ.೨, ಸಂ.೧, ಎಚ್.ಎಸ್.ಶ್ರೀಮತಿ(ಸಂ), ೨೦೦೦, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಮಹಿಳಾ ಅಧ್ಯಯನ, ಸಂ.೧, ಸಂ.೨, ಎಚ್.ಎಸ್.ಶ್ರೀಮತಿ(ಸಂ) ೨೦೦೦, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಮಹಿಳಾ ಅಧ್ಯಯನ, ಸಂ.೩, ಸಂ.೧, ಎಚ್.ಎಸ್.ಶ್ರೀಮತಿ(ಸಂ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ಮಹಿಳಾ ಅಧ್ಯಯನ, ಸಂ.೩, ಸಂ.೩, ಎಚ್.ಎಸ್.ಶ್ರೀಮತಿ(ಸಂ) ೨೦೦೦, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಚಂದ್ರಶೇಖರ ಟಿ.ಆರ್., ಚಂದ್ರಪೂಜಾರಿ ಎಂ.(ಸಂ), ಅಭಿವೃದ್ಧಿ ಅಧ್ಯಯನ, ಸಂಪುಟ ೧, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ ಟಿ.ಆರ್., ಚಂದ್ರಪೂಜಾರಿ ಎಂ.(ಸಂ), ಅಭಿವೃದ್ಧಿ ಅಧ್ಯಯನ, ಸಂಪುಟ ೧, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಚಲ ನವೆಂಬರ್ ೨೦೦೧, ಶಿಕ್ಷಣ ಮತ್ತು ಲಿಂಗತಾರತಮ್ಯ

ಅಚಲ ಡಿಸೆಂಬರ್ ೨೦೦೧, ಬುರ್ಖಾ ಮತ್ತು ಅಧಿಕಾರ

ಮಾನಸ ಜೂನ್ ೨೦೦೧, ಸಮಯ ಇಲ್ಲ ಎನ್ನುವುದು ಮಹಿಳೆಯರ ವೈಯಕ್ತಿಕ ಸಮಸ್ಯೆಯೇ

ಅಚಲ ಫೆಬ್ರವರಿ ೨೦೦೧, ಮಹಿಳಾ ಸಶಕ್ತೀಕರಣಕ್ಕೆ ಒಂದು ವರ್ಷ ಸಾಕೆ(ಸಂಪಾದಕೀಯ)

ಭಾರತೀಯ ಸಂಸ್ಕೃತಿ ಮತ್ತು ಮಹಿಳಾ ಪ್ರಶ್ನೆ, ತೇಜಸ್ವಿನಿ ನಿರಂಜನ, ನಯನ(ಅನು), ಅರಿವು ಬರಹ, ೧೯೯೪

ದುಡಿಯುವ ಮಹಿಳೆಯ ಇಬ್ಬಂದಿ ಬದುಕು, ಜಯಂತಿ ಕೆ.ವೈ., ಕರ್ಮವೀರ ಜುಲೈ ೨, ೨೦೦೨

ಜಯಶ್ರೀ ವಾಳ್ವೇಕರ, ೨೦೦೨, ವಿನ್‌ವಿನ್ ಧೋರಣೆಯ ವಿನ್ನಿ, ಕರ್ಮವೀರ, ವಾರಪತ್ರಿಕೆ, ಏಪ್ರಿಲ್ ೨೧, ೨೦೦೨

ನಾಳಪತ್ ಎಂ.ಡಿ., ೨೦೦೨, ಮಹಿಳೆ ನಾಯಕಿಯಾಗಿ, ತರಂಗ, ವಾರಪತ್ರಿಕೆ, ಸೆಪ್ಟೆಂಬರ್ ೧೨, ೨೦೦೨

ವಿಚಾರ ಸಂಕಿರಣ ಮತ್ತು ಉಪನ್ಯಾಸ

ವಿಕೇಂದ್ರೀಕರಣ ತತ್ವ ಮತ್ತು ಆಚರಣೆ, ೨೦೦೦, ಹಂಪಿ, ವಿದ್ಯಾರಣ್ಯ, ಕನ್ನಡ ವಿಶ್ವವಿದ್ಯಾಲಯ, ದಿನಾಂಕ ೨೯.೧೧.೧೯೯೯, ಎಂ.ವೈ.ಘೋರ್ಪಡೆ, ವಿಕೇಂದ್ರೀಕರಣ ತತ್ವ ಮತ್ತು ಆಚರಣೆ ವಿಚಾರ ಸಂಕಿರಣದ ಆಶಯ ಭಾಷಣ,

ಮಹಿಳಾ ಸಶಕ್ತೀಕರಣ, ೨೦೦೧, ರಾಮೇಶ್ವರಿ ವರ್ಮ ಅವರ ಸೆಪ್ಟೆಂಬರ್ ೧೮, ೨೦೦೧ರಂದು ಕನ್ನಡ ವಿಶ್ವವಿದ್ಯಾಲಯದ 'ದಿನಮಾತಿ'ನಲ್ಲಿ ಮಾಡಿದ ಉಪನ್ಯಾಸ

ವೃತ್ತಪತ್ರಿಕೆಗಳು

ಕಂಪ್ಲಿ ಇಬ್ಬರು ಪುರಸಭಾ ಸದಸ್ಯೆಯರ ಹೊಟ್ಟೆಬಟ್ಟೆಯ ಕಥೆ, ಕನ್ನಡ ಪ್ರಭಾ ಸೆಪ್ಟೆಂಬರ್ ೩೦, ೨೦೦೦

ನಾಯಕತ್ವದ ಹೊಸ್ತಿಲಲ್ಲಿ ಮಹಿಳೆ, ಕಾ.ಆರ್.ಮಂಗಳ, ಪ್ರಜಾವಾಣಿ ದಿನಾಂಕ ೫.೦೩.೨೦೦೦

ಮಹಿಳಾ ಮಸೂದೆಗೆ ವಿಮೋಚನೆ ಎಂದು, ಎಡತೊರೆ ಮಂಜುನಾಥ, ವಿಜಯ ಕರ್ನಾಟಕ ೧೪.೦೫.೨೦೦೦

ಮತದಾನದಲ್ಲಿ ಮಹಿಳೆಯರು, ಅಂಜಲಿ ರಾಮಣ್ಣ, ವಿಜಯಕರ್ನಾಟಕ ೧೫ನೇ ಏಪ್ರಿಲ್ ೨೦೦೧

ಪಾಟೀಲ ಎನ್.ಆರ್., ೨೦೦೦, ಬಳಕೆಯಾಗದ ಮಹಿಳಾ ಬಂಡವಾಳ, ಪ್ರಜಾವಾಣಿ, ಸಾಪ್ತಾಹಿಕ ಪುರಾವಣಿ, ೧೦.೦೩.೨೦೦೨

ವಿಜಯ ಕರ್ನಾಟಕ ದಿನಾಂಕ ೩ನೇ ಮೇ ೨೦೦೨

ಕಾನೂನು ರೂಪಿಸಿದರಷ್ಟೇ ಸಾಲದು, ಪ್ರಜಾವಾಣಿ, ೦೪.೦೮.೨೦೦೨

ಹೆಣ್ಣಿನ ಸೋಲಿನ ಕ್ಷಣಗಳು, ಪ್ರಜಾವಾಣಿ, ೦೪.೦೮.೨೦೦೨

ಪ್ರಜಾವಾಣಿ, ೧೧.೦೮.೨೦೦೨

ವಿಜಯ ಕರ್ನಾಟಕ, ೬ನೇ ಏಪ್ರಿಲ್ ೨೦೦೨, ಸಂಪುಟ ೨, ಸಂಚಿಕೆ ೧೩೬

ಶಂಕರಪ್ಪ ಆರ್., ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳೆಯ ಪಾಲು, ಕನ್ನಡ ಪ್ರಭ, ೧೩.೦೯.೨೦೦೨

ಸಹಪಾಲಕತ್ವದ ರಾಜಕಾರಣ, ಟಿ.ಆರ್.ಚಂದ್ರಶೇಖರ್, ಪ್ರಜಾವಣಿ, ದಿನಾಂಕ ೫.೦೩.೨೦೦೨

ಇಂಗ್ಲಿಶ್ ಪುಸ್ತಕಗಳು

Bader, Clarisse., 1988, **Women in Ancient India,** New Delhi, Paha Publications

Bhatt S.G., **The Encyclopaedic District Gazetteers of India,** Vol-1, New Delhi, Gyan Publishing House

Bhambhri C.P., 1991, **Political Process in India 1947-1991,** New Delhi, Vikas Publishing House

Bhargava B.S., Bada C.R., Torgal V.N., 1982, **New Panchayati Raj System Status and Prospects,** New Delhi, Jackson Publications

Connell R.W., 1987, **Gender and Power,** Stanford University Press

Chitkara M.G., 2001, **Women and Social Tranoformation,** New Delhi, A.P.H. Publishing corporation

Damle Y.B., 1982, **Caste, Religion and Politics in India,** New Delhi, Oxford and IBH Publications

Dey S.K., 1961, **Panchayat Raj,** Asia Publication, Bombay

Devendra, Kiran., 1996, **Changing status of women in India,** New Delhi, Vikar Publishing House Pvt. Ltd.

Fadia Babulal., 1984, **State Politics in India,** Vol-2, New Delhi, Radiant Publications

Grover Veerinder., 1990, **Scoiological Aspects of Indian Political system,** Deep and Deep Publications

Gurumurthy U., 1987, **Panchayati and weaker sections,** New Delhi, Ashish Publishing House.

Goode William J., Paul K. Hatt., 1981, **Methods in Social Research,** McGraw Hill Interenational Edition.

Jain, Gopal Lal., 1998, **Research Methodology-Methods Tools and Techniques,** Jaipur, Mangal Deep Publications

Krishnan M.G., 1988, **New Pattern of Panchyat Raj System in Karnataka in Analytical Study,** Ph.D., Thesis Bangalore University (Not published)

Kumar., 1991-1992, **Methods and Techniques of Social Research,** Educational Publishers

Neer Desai, Krishnaraj M., 1997, Women and Society in India, New Delhi, Ajanta Publications

Krishna Murthy J., 2000, **Rural Development Challenges and Opportunities,** New Delhi, Rawat Publications

Motwani K., R.D., Saksena, 2001, **The Sociology of Indian Politics,** New Delhi, Cosmo Publications

Moore, Willbert E., 1994, **Social Change,** Prentice Hall Publications

Moghadam M., 1996, Patriarchy and Development, Oxford, Clarendon Press

Mishra, Anil Dutta, Mahadev Shivappa Dadage., **Panchayat Raj (Ghandhian Prespective),** New Delhi, A Mittal Publication

Narasimhan Sakuntala, 1999, **Empowering Women-An Alternative strategy from Rural India,** New Delhi, Sage Publications

Palanith huraj G., 1996, **New Panchayati Raj System Status and prospects,** New Delhi, Kanishka Publications

Pillai Narayana G., 1983, **Social Background of Politicl Ledership in India,** New Delhi, Uppal Publishing House

Raj Singh Dhama., 1990, **Panchayat Raj and Rural Organisation,** Allahabad, Chugh Publications

Rathore L.S., 1981, **Political Sociology,** Meerut, Meenakshi Prakashana

Rajkumar., **Women and Society,** New Delhi, Anmol Pvt., Ltd.,

Shah B.L., **Panchayat Raj-The role of Panchayats in Intigrated Rural Development,** New Delhi, Cosmo Publications

Sheshadri K., 1976, **Indian Politics Then and Now,** New Delhi, Pragathi Prakashana

Sharma B.B., 1992, **Encyclopaedic Dictionary of Sociology,** Vol-3, New Délhi, Anmol Publication,

Sadhu A.N., **Amarjit Singh., 1998, Research Metholodogy in Social Sciences,** New Delhi, Himalaya Publishing House

Siddiqi, Fatima Ehtesham., 1999, **Political Women: Country experiences in Identity and Gender Debate,** New Delhi, Kanishka Publishers

Saxen Kiran(ed)., **Women and Politics,** New Delhi, Gyan Publishing House

Sinha Niroj(ed)., Women in Indian Politics(Empowerment of Women through Political Participation), New Delhi, Gyan Publishing House

Sjoberg Gideon., Roger Nett, 1992, **A Methodology for Social Research,** New Delhi, Rawat Publications

Wilkinson T.S., Bhandarkar P.L., 1997, **Methodology and Techniques of Social Research,** New Delhi, Himalaya Publishing House

The Karnataka Panchayat Raj Act-1993, Bangalore, Ameya Publications Law Publishers

Tomar B.S., 1991, Panchyat Raj in India,

Vidya K.C., **Women and Panchayati Raj Institutions: Case Study of A District in Karnataka,** Ph.D. Thesis Institute of Social Sciences (Not published)

ಅನುಬಂಧ

೧. ವಿಶೇಷ ಮಾಹಿತಿದಾರರು

೨. ೨೦೦೦-೨೦೦೧ರಲ್ಲಿ ಚುನಾಯಿತರಾದ ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳ ಮಹಿಳಾ ಸದಸ್ಯೆಯರ ಯಾದಿ

೩. ಪ್ರಶ್ನಾವಳಿಯ ಮಾದರಿ

ವಿಶೇಷ ಮಾಹಿತಿದಾರರು

೧. ಶ್ರೀಮತಿ ಬಸಮ್ಮ (೪೫), ಕಮಲಾಪುರ, ಪಟ್ಟಣ ಪಂಚಾಯತಿ ಸದಸ್ಯೆ

೨. ಶ್ರೀಮತಿ ಕಾಳಮ್ಮ ಬಡಿಗೇರ (೪೦), ಗೊಲ್ಲರಹಳ್ಳಿ

೩. ಶ್ರೀ ಮಲ್ಲಯ್ಯ (೪೦), ದೇವಲಾಪುರ

೪. ಶ್ರೀಮತಿ ಮಾರೆಮ್ಮ (೪೦), ರಾಮಸಾಗರ

೫. ಶ್ರೀ ಸತ್ಯನಾರಾಯಣ (೪೫), ಕಾರ್ಯದರ್ಶಿ, ಬುಕ್ಕಸಾಗರ ಗ್ರಾಮಪಂಚಾಯಿತಿ

೬. ಶ್ರೀಮತಿ ಸಣ್ಣ ಹನುಮಕ್ಕ (೪೦), ಅಧ್ಯಕ್ಷೆ, ಜಿಲ್ಲಾ ಪಂಚಾಯತ್, ಬಳ್ಳಾರಿ

೭. ಶ್ರೀ ನರಸಣ್ಣ ಬಡಿಗೇರ (೪೮), ಜಿ.ನಾಗಲಾಪುರ

೮. ಶ್ರೀ ಗುರುಬಸಪ್ಪ (೫೦), ಕಾರ್ಯದರ್ಶಿ, ಹಂಪಿ ಗ್ರಾಮಪಂಚಾಯಿತಿ

೯. ಶ್ರೀ ವೇಣುಗೋಪಾಲ ಕೃಷ್ಣ (೪೫), ಅಧ್ಯಕ್ಷರು, ದೇವಲಾಪುರ ಗ್ರಾಮಪಂಚಾಯಿತಿ

೧೦. ನಾಗೇಂದ್ರಪ್ಪಸ್ವಾಮಿ (೫೦), ಸುಶೀಲಾನಗರ

೧೧. ಕೊಮಾರೆಪ್ಪ ಬಿ. (೫೨), ತಾರಾನಗರ

೧೨. ಶ್ರೀಮತಿ ಸುಜಾತ ದೀಕ್ಷಿತ್ (೪೫), ಮಂಡಲ ಪಂಚಾಯತ್ ಮಾಜಿ ಸದಸ್ಯೆ, ಬುಕ್ಕಸಾಗರ

೧೩. ಡಾ.ದೀಕ್ಷಿತ್ (೫೫), ಜ್ಯೋತಿ ಕ್ಲಿನಿಕ್, ಬುಕ್ಕಸಾಗರ

೧೪. ಶ್ರೀ ಜಿ.ಪಿ.ಆನಂದಮೂರ್ತಿ (೪೦), ಶಿಕ್ಷಕರು, ಕಂಪ್ಲಿ

೧೫. ಶ್ರೀ ವೀರಭದ್ರಪ್ಪ ಬಡಿಗೇರ (೪೦), ಮೆಟ್ರಿಕಿ

೧೬. ಶ್ರೀ ಇಸ್ಮಾಯಿಲ್ (೪೦), ದೌಲತ್‌ಪುರ

೧೭. ಶ್ರೀಮತಿ ಗಾಳೆಮ್ಮ (೫೦), ಕಲ್ಲಹಳ್ಳಿ

೧೮. ಶ್ರೀ ಡಿ.ಪರಮೇಶ್ವರಪ್ಪ (೩೬), ಅನಂತಶಯನಗುಡಿ

೧೯. ಶ್ರೀ ಮರಿಸ್ವಾಮಿ (೩೫), ಕಡ್ಡಿರಾಂಪುರ

೨೦. ಶ್ರೀಮತಿ ಯರ‍್ರಮ್ಮ (೩೫), ಉಪಾಧ್ಯಕ್ಷರು, ಪಟ್ಟಣಪಂಚಾಯತಿ, ಕಮಲಾಪುರ

೨೧. ಶ್ರೀ ಸೀತಾರಾಮಸಿಂಗ್ (೫೫), ರೈತಮುಖಂಡರು, ಕಮಲಾಪುರ

೨೨. ಶ್ರೀ ಮಲ್ಲಿಕಾರ್ಜುನ (೪೦), ಭುಜಂಗನಗರ

೨೩. ಶ್ರೀ ತೊಂಡಿಹಾಳ ಗುರುಲಿಂಗಯ್ಯ (೪೮), ದೋಣಿಮಲ್ಲೈ

೨೪. ಶ್ರೀ ಮಲ್ಲಿಕಾರ್ಜುನ (೩೫), ಪಾಪಿನಾಯಕನಹಳ್ಳಿ

೨೫. ಶ್ರೀ ಗುರುಲಿಂಗಯ್ಯ (೪೦), ಪಾಪಿನಾಯಕನಹಳ್ಳಿ

೨೬. ಶ್ರೀ ಫಕ್ರುದ್ದೀನ್ ಸಾಬ್ (೪೦), ಅಂತಾಪುರ

೨೭. ಶ್ರೀ ಚಿದಾನಂದ (೩೫), ಮರಿಯಮ್ಮನಹಳ್ಳಿ

೨೮. ಶ್ರೀ ಚೆನ್ನಪ್ಪ (೫೦), ಬಂಡ್ರಿ

೨೯. ಅಜ್ಜಯ್ಯನವರ ರತ್ನಮ್ಮ (೩೫), ಬಂಡ್ರಿ

೩೦. ಶ್ರೀ ಲಕ್ಷ್ಮಪ್ಪ (೪೦), ಗ್ರಾಮಪಂಚಾಯತಿ ಸದಸ್ಯ, ಕುರೇಕುಪ್ಪ

೩೧. ಶ್ರೀ ಅಂಜಿನಪ್ಪ (೩೦), ಶ್ರೀ ಶಿವಲಿಂಗಪ್ಪ (೪೦), ಶ್ರೀ ಹನುಮಂತಪ್ಪ (೪೦), ಶ್ರೀ ನಾಗರಾಜ (೩೫), ವಡ್ಡು

೩೨. ಶ್ರೀ ವೀರೇಶ್ (೪೦), ಉಪಾಧ್ಯಾಯರು, ದರೋಜಿ

೩೩. ಶ್ರಿ ಲಂಕೆಪ್ಪ (೪೦), ಶ್ರೀ ಗೋವಿಂದಪ್ಪ (೪೦), ಸಹ ಶಿಕ್ಷರು, ಗಾದಿಗನೂರು

೩೪. ಶ್ರೀ ರಂಗಯ್ಯ (೪೦), ತೋರಣಗಲ್ಲು

೩೫. ಶ್ರೀ ಕೆ.ಮಲಿಯಪ್ಪ (೫೦), ಮಾಜಿ ಪ್ರಧಾನರು, ಮಂಡಲ ಪಂಚಾಯತಿ, ಪಾಪಿನಾಯಕನಹಳ್ಳಿ

೩೬. ಶ್ರೀಮತಿ ವಸುಂಧರ ನಾಯ್ಡು (೪೦), ಉಪಾಧ್ಯಕ್ಷರು, ದೇವ್ಲಾಪುರ

೩೭. ಶ್ರೀ ಮುಕ್ಕದಯ್ಯಸ್ವಾಮಿ ೪೦, ಮಾಜಿ ಅಧ್ಯಕ್ಷರು, ತಾಲೂಕು ಪಂಚಾಯತಿ, ಸಣಾಪುರ

೩೮. ಶ್ರೀ ಅಂಜನೇಯಲು ಜಿ.(೪೦), ಗ್ರಾಮಪಂಚಾಯತಿ ಕಾರ್ಯದರ್ಶಿ, ಕಂಪ್ಲಿ

೨೦೦೦-೨೦೦೧ರಲ್ಲಿ ಚುನಾಯಿತರಾದ ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಗ್ರಾಮಪಂಚಾಯತಿಗಳ ೨೮೯ ಮಹಿಳಾ ಸದಸ್ಯೆಯರ ಯಾದಿ

ಹೊಸಪೇಟೆ ತಾಲೂಕು ಗ್ರಾಮಪಂಚಾಯ್ತಿಗಳು

ಮಲಪನಗುಡಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಹಳ್ಳಿಯಲ್ಲಮ್ಮ - ಉಪಾಧ್ಯಕ್ಷೆ

೨. ಹರಿಜನ ದುರ್ಗಮ್ಮ - ಸದಸ್ಯೆ

೩. ಕುರೆಟ್ಟಿ ಹನುಮಕ್ಕ - ಸದಸ್ಯೆ

೪. ಹರಿಜನ ತಾಯೆಮ್ಮ - ಸದಸ್ಯೆ

೫. ಮುದ್ದೇರು ಹುಲಿಗೆಮ್ಮ - ಸದಸ್ಯೆ

೬. ಬಡಿಗೇರ ಹುಲಿಗೆಮ್ಮ - ಸದಸ್ಯೆ

೭. ಎಲ್. ಸೀನೀಬಾಯಿ - ಸದಸ್ಯೆ

ರಾಮಸಾಗರ ಗ್ರಾಮಪಂಚಾಯ್ತಿ

೧. ಶ್ರೀಮತಿ ಕೆ.ಯು.ಸಿದ್ದಲಿಂಗಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಕೊರವರ ದೊಡ್ಡಮಾರೆಮ್ಮ - ಸದಸ್ಯೆ

೩. ಶ್ರೀಮತಿ ಎಚ್ .ಎಂ ಸುಜಾತ - ಸದಸ್ಯೆ

೪. ಶ್ರೀಮತಿ ಎಂ.ಶಾಂತಮ್ಮ - ಸದಸ್ಯೆ

೫. ಶ್ರೀಮತಿ ಕುರುಬರ ರೇಣುಕಮ್ಮ - ಸದಸ್ಯೆ

೬. ಶ್ರೀಮತಿ ಚೌಡ್ಕಿ ಸಿದ್ದಮ್ಮ - ಸದಸ್ಯೆ

ದೇವಲಾಪುರ ಗ್ರಾಮಪಂಚಾಯ್ತಿ

೧. ಶ್ರೀಮತಿ ಕೆ.ಹನುಮಂತಮ್ಮ - ಅಧ್ಯಕ್ಷೆ

೨. ಶ್ರೀಮತಿ ತುಂಬಳದ ಹುಲಿಗೆಮ್ಮ - ಸದಸ್ಯೆ

೩. ಶ್ರೀಮತಿ ವಿ.ಸುಮಿತ್ರಮ್ಮ - ಸದಸ್ಯೆ

೪. ಶ್ರೀಮತಿ ಸಂಗಟಿ ದ್ರಾಕ್ಷಾಯಣಮ್ಮ - ಸದಸ್ಯೆ

೫. ಶ್ರೀಮತಿ ಹರಿಜನ ಪಾರ್ವತಿಬಾಯಿ - ಸದಸ್ಯೆ

೬. ಶ್ರೀಮತಿ ಮಡ್ಲಿ ಮಾರಕ್ಕ - ಸದಸ್ಯೆ

ದೇವಸಮುದ್ರ ಗ್ರಾಮಪಂಚಾಯ್ತಿ

೧. ಶ್ರೀಮತಿ ಹೊನ್ನೂರಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಕಚ್ಚೇರ ಗಂಗಮ್ಮ - ಸದಸ್ಯೆ

೩. ಶ್ರೀಮತಿ ಚನಾಲ್ ಈರಮ್ಮ - ಸದಸ್ಯೆ

೪. ಶ್ರೀಮತಿ ಕಮಲಮ್ಮ- ಸದಸ್ಯೆ

೫. ಶ್ರೀಮತಿ ಕರೆಮ್ಮ- ಸದಸ್ಯೆ

೬. ಶ್ರೀಮತಿ ಸೈದಾನಬಿ- ಸದಸ್ಯೆ

ಮೆಟ್ರಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಬಡಿಗೇರ ಕಾಳಮ್ಮ - ಅಧ್ಯಕ್ಷೆ

೨. ಶ್ರೀಮತಿ ತಿಮ್ಮಕ್ಕ - ಸದಸ್ಯೆ

೩. ಶ್ರೀಮತಿ ನಾಗಲಕ್ಷ್ಮಮ್ಮ - ಸದಸ್ಯೆ

೪. ಪೀರಮ್ಮ - ಸದಸ್ಯೆ

೫. ಶ್ರೀಮತಿ ಹೊಸಮನೆ ಮಾರೆಮ್ಮ - ಸದಸ್ಯೆ

೬. ಶ್ರೀಮತಿ ಹರಿಜನ ನಾಗಮ್ಮ - ಸದಸ್ಯೆ

ಸೀತಾರಾಮ ತಾಂಡ ಗ್ರಾಮಪಂಚಾಯ್ತಿ

೧. ಶ್ರೀಮತಿ ಎಲ್.ಹೇಮ್ಲಾಬಾಯಿ - ಅಧ್ಯಕ್ಷೆ

೨. ಶ್ರೀಮತಿ ಮಂಗಿಬಾಯಿ - ಸದಸ್ಯೆ

ಹಂಪಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಎ.ತಿಮ್ಮಕ್ಕ - ಉಪಾಧ್ಯಕ್ಷೆ

೨. ಶ್ರೀಮತಿ ವಿ.ಮಂಗಮ್ಮ - ಸದಸ್ಯೆ

೩. ಶ್ರೀಮತಿ ಕಟ್ಟಿಗಿ ಹೊನ್ನಮ್ಮ - ಸದಸ್ಯೆ

೪. ಶ್ರೀಮತಿ ಗುಜ್ಜಲ ಹನುಮಂತಮ್ಮ - ಸದಸ್ಯೆ

ಬುಕ್ಕಸಾಗರ ಗ್ರಾಮಪಂಚಾಯ್ತಿ

೧. ಶ್ರೀಮತಿ ಬಿ.ಈರಮ್ಮ - ಅಧ್ಯಕ್ಷೆ

೨. ಶ್ರೀಮತಿ ಗಾಳೆಮ್ಮ - ಸದಸ್ಯೆ

೩. ಶ್ರೀಮತಿ ಈಡಿಗರ ಯಂಕಮ್ಮ - ಸದಸ್ಯೆ

೪. ಶ್ರೀಮತಿ ಈಡಿಗರ ಯಮುನಮ್ಮ - ಸದಸ್ಯೆ

೫. ಶ್ರೀಮತಿ ಹರಿಜನ ಅಂಬಮ್ಮ - ಸದಸ್ಯೆ

೬. ಶ್ರೀಮತಿ ವೆಂಕಟಸುಬ್ಬಮ್ಮ - ಸದಸ್ಯೆ

೫೭. ನಾಗಲಾಪುರ ಗ್ರಾಮಪಂಚಾಯ್ತಿ

೧. ಶ್ರೀಮತಿ ಬಿ.ಹನುಮಕ್ಕ - ಉಪಾಧ್ಯಕ್ಷೆ

೨. ಶ್ರೀಮತಿ ವನಜಾಕ್ಷಿ - ಸದಸ್ಯೆ

೩. ಶ್ರೀಮತಿ ಲಕ್ಕಮ್ಮ - ಸದಸ್ಯೆ

೪. ಶ್ರೀಮತಿ ನಾಗಮ್ಮ - ಸದಸ್ಯೆ

೫. ಶ್ರೀಮತಿ ಹನುಮವ್ವ - ಸದಸ್ಯೆ

೬. ಶ್ರೀಮತಿ ದೊಡ್ಡ ಈರಮ್ಮ - ಸದಸ್ಯೆ

ಚಿಲಕನಹಟ್ಟಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಡಿ.ಲಕ್ಷ್ಮಿದೇವಿ - ಅಧ್ಯಕ್ಷೆ

೨. ಶ್ರೀಮತಿ ಮುಕುದೆಮ್ಮ - ಸದಸ್ಯೆ

೩. ಶ್ರೀಮತಿ ಮಾರೆಮ್ಮ - ಸದಸ್ಯೆ

೪. ಶ್ರೀಮತಿ ಚೋಕ್ಲಿಬಾಯಿ - ಸದಸ್ಯೆ

೫. ಶ್ರೀಮತಿ ಫಕ್ರೂಮ - ಸದಸ್ಯೆ

೬. ಶ್ರೀಮತಿ ಲಂಬಡಿಬಾಯಿ - ಸದಸ್ಯೆ

೭. ಶ್ರೀಮತಿ ಬಿ.ಕಮಲಮ್ಮ - ಸದಸ್ಯೆ

೧೧೪ ಧಣಾಪುರ ಗ್ರಾಮಪಂಚಾಯ್ತಿ

೧. ಶ್ರೀಮತಿ ಸುಲ್ತಾನಭೀ - ಉಪಾಧ್ಯಕ್ಷೆ

೨. ಶ್ರೀಮತಿ ಹರಿಜನ ಕೆಂಚವ್ವ - ಸದಸ್ಯೆ

೩. ಶ್ರೀಮತಿ ಎಲ್ .ಶಾರದ - ಸದಸ್ಯೆ

೪. ಶ್ರೀಮತಿ ಲಕ್ಷ್ಮವ್ವ - ಸದಸ್ಯೆ

೫. ಶ್ರೀಮತಿ ಲಕ್ಷ್ಮಿದೇವಿ - ಸದಸ್ಯೆ

೬. ಶ್ರೀಮತಿ ಪ್ರೇಮಲೀಲ - ಸದಸ್ಯೆ

೭. ಶ್ರೀಮತಿ ದುರುಗಮ್ಮ - ಸದಸ್ಯೆ

೮. ಶ್ರೀಮತಿ ಗೌಡರ ಹುಲಿಗೆಮ್ಮ - ಸದಸ್ಯೆ

೯. ಶ್ರೀಮತಿ ಗಂಗಮ್ಮ - ಸದಸ್ಯೆ

ಡಣಾಯಕನಕೆರೆ ಗ್ರಾಮಪಂಚಾಯ್ತಿ

೧. ಶ್ರೀಮತಿ ಬಿ.ಸಿ.ಕಪ್ಪಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಲಕ್ಷ್ಮಿದೇವಿ - ಸದಸ್ಯೆ

೩. ಶ್ರೀಮತಿ ತಿರುಕಮ್ಮ - ಸದಸ್ಯೆ

೪. ಶ್ರೀಮತಿ ಕೆ.ಸಾವಿತ್ರಮ್ಮ - ಸದಸ್ಯೆ

ಸುಗ್ಗೇನಹಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಎನ್ ಲಕ್ಷ್ಮೀದೇವಿ - ಸದಸ್ಯೆ

೨. ಶ್ರೀಮತಿ ಶಾಂತಮ್ಮ - ಸದಸ್ಯೆ

೩. ಶ್ರೀಮತಿ ಹೆಚ್ .ದುರುಗಮ್ಮ - ಸದಸ್ಯೆ

೪. ಶ್ರೀಮತಿ ಹೆಚ್ .ನಾರಾಯಣಮ್ಮ - ಸದಸ್ಯೆ

೫. ಶ್ರೀಮತಿ ಲಕ್ಷ್ಮಿದೇವಿ ಎ - ಸದಸ್ಯೆ

ಹಂಪಾದೇವನ ಹಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಹೆಚ್ .ಹಂಪಮ್ಮ - ಅಧ್ಯಕ್ಷೆ

೨. ಶ್ರೀಮತಿ ದಾಸರ ಈರಮ್ಮ - ಸದಸ್ಯೆ

೩. ಶ್ರೀಮತಿ ವೆಂಕಟಲಕ್ಷ್ಮಿ - ಸದಸ್ಯೆ

೪. ಶ್ರೀಮತಿ ವಡ್ಡರ ಜಯಮ್ಮ - ಸದಸ್ಯೆ

೫. ಶ್ರೀಮತಿ ತಳವಾರ ಹುಲಿಗೆಮ್ಮ - ಸದಸ್ಯೆ

೬. ಶ್ರೀಮತಿ ಬಂಡಿ ಗಂಗಮ್ಮ - ಸದಸ್ಯೆ

ಪಾಪಿನಾಯಕನಹಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಯಮುನಾಭಿ - ಉಪಾಧ್ಯಕ್ಷೆ

೨. ಶ್ರೀಮತಿ ತಳವಾರ ಹೊನ್ನಮ್ಮ - ಸದಸ್ಯೆ

೩. ಶ್ರೀಮತಿ ವಡ್ಡರ ಯಲ್ಲಮ್ಮ - ಸದಸ್ಯೆ

೪. ಶ್ರೀಮತಿ ಮಾರಾಂಭೀ - ಸದಸ್ಯೆ

೫. ಶ್ರೀಮತಿ ಗಾಣಿಗರ ಸಿದ್ದಮ್ಮ - ಸದಸ್ಯೆ

೬. ಶ್ರೀಮತಿ ಹೆಚ್.ಹನುಮಕ್ಕ - ಸದಸ್ಯೆ

೭. ಶ್ರೀಮತಿ ಮಾರೆಮ್ಮ - ಸದಸ್ಯೆ

ಕಲ್ಲಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ರೇಣುಕಮ್ಮ - ಸದಸ್ಯೆ

೨. ಶ್ರೀಮತಿ ಮಾಬುನ್ನಿ - ಸದಸ್ಯೆ

೩. ಶ್ರೀಮತಿ ಗಂಗಮ್ಮ - ಸದಸ್ಯೆ

ನಾಗೇನಹಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಪಳನಿಯಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಬಾರಿಕೇರ ಬುಡ್ಡಮ್ಮ - ಸದಸ್ಯೆ

೩. ಶ್ರೀಮತಿ ಎ.ಲೋಕಮ್ಮ - ಸದಸ್ಯೆ

೪. ಶ್ರೀಮತಿ ನರಿ ಹುಲಿಗೆಮ್ಮ - ಸದಸ್ಯೆ

೫. ಶ್ರೀಮತಿ ಪಿಂಜಾರ್ ಮಾಲಿಂಬಮ್ಮ - ಸದಸ್ಯೆ

೬. ಶ್ರೀಮತಿ ಅಡಿವಿ ಲಕ್ಷ್ಮಮ್ಮ - ಸದಸ್ಯೆ

ಬೈಲುವದ್ದಿಗೇರಿ ಗ್ರಾಮಪಂಚಾಯ್ತಿ

೧. ಶ್ರೀಮತಿ ವಾಲ್ಮೀಕಿ ಹುಲಿಗೆಮ್ಮ- ಅಧ್ಯಕ್ಷೆ

೨. ಶ್ರೀಮತಿ ವಡಗಟ್ಟಿ ನಿಂಗಮ್ಮ - ಸದಸ್ಯೆ

೩. ಶ್ರೀಮತಿ ನಾಯಕರ ರಾಮಕ್ಕ - ಸದಸ್ಯೆ

೪. ಶ್ರೀಮತಿ ದೇವರ ಮನೆ ರೇಣುಕಮ್ಮ - ಸದಸ್ಯೆ

೫. ಕುರುಬರ ಗಂಗಮ್ಮ - ಸದಸ್ಯೆ

೬. ಶ್ರೀಮತಿ ನಿಲಗಲ್ ಯಲ್ಲಮ್ಮ - ಸದಸ್ಯೆ

ನಂ. ೧೦ ಮುದ್ದಾಪುರ ಗ್ರಾಮಪಂಚಾಯ್ತಿ

೧. ಶ್ರೀಮತಿ ತೋಟ ಶಕುಂತಲ - ಅಧ್ಯಕ್ಷೆ

೨. ಶ್ರೀಮತಿ ವಾಲ್ಮೀಕಿ ನಾಗಮ್ಮ - ಸದಸ್ಯೆ

೩. ಶ್ರೀಮತಿ ಕುರುಬರ ಹಂಪಮ್ಮ - ಸದಸ್ಯೆ

೪. ಶ್ರೀಮತಿ ಹರಿಜನ ಪಕ್ಕೀರಮ್ಮ - ಸದಸ್ಯೆ

೫. ಶ್ರೀಮತಿ ಗೊಲ್ಲರ ಚೆನ್ನಮ್ಮ - ಸದಸ್ಯೆ

೬. ಶ್ರೀಮತಿ ಲಿಂಗಮ್ಮ - ಸದಸ್ಯೆ

ಸಣಾಪುರ ಗ್ರಾಮಪಂಚಾಯ್ತಿ

೧. ಶ್ರೀಮತಿ ರಾಜಾಭೀ - ಅಧ್ಯಕ್ಷೆ

೨. ಶ್ರೀಮತಿ ಹರಿಜನ ರಾಜಮ್ಮ - ಸದಸ್ಯೆ

೩. ಶ್ರೀಮತಿ ಎಮ್.ಮಾಕಲ್ ಕುಮಾರಿ - ಸದಸ್ಯೆ

೪. ಶ್ರೀಮತಿ ವಿರುಪಮ್ಮ - ಸದಸ್ಯೆ

೫. ಶ್ರೀಮತಿ ಎಸ್.ಗಂಗಮ್ಮ - ಸದಸ್ಯೆ

೬. ಶ್ರೀಮತಿ ಕೆ.ಕಾಶಮ್ಮ - ಸದಸ್ಯೆ

೭. ಶ್ರೀಮತಿ ಲಕ್ಷ್ಮಿ - ಸದಸ್ಯೆ

ಮರಿಯಮ್ಮನಹಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಸೀತಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಫಾತೀಮಾಬಿ - ಸದಸ್ಯೆ

೩. ಶ್ರೀಮತಿ ಸೋಟ್ಪಾಲಿನಾಭಿ - ಸದಸ್ಯೆ

೪. ಶ್ರೀಮತಿ ಶೆರೆಗಾರ ನಿರ್ಮಲ - ಸದಸ್ಯೆ

೫. ಶ್ರೀಮತಿ ನಂದಿಹಳ್ಳಿ ಅನಸೂಯ - ಸದಸ್ಯೆ

೬. ಶ್ರೀಮತಿ ಮಡಿವಾಳರ ಹೊಸೂರಮ್ಮ - ಸದಸ್ಯೆ

೭. ಶ್ರೀಮತಿ ವಿಜಯರತ್ನ - ಸದಸ್ಯೆ

೮. ಶ್ರೀಮತಿ ಕೊಟ್ಗಿ ಸುಜಾತ - ಸದಸ್ಯೆ

೯. ಶ್ರೀಮತಿ ಲಕ್ಕಿ ಮರದ ಮಂಜುಳ - ಸದಸ್ಯೆ

೧೦. ಶ್ರೀಮತಿ ಸುಜಾತ - ಸದಸ್ಯೆ

೧೧. ಶ್ರೀಮತಿ ಲಕ್ಷ್ಮೀಬಾಯಿ - ಸದಸ್ಯೆ

೧೨. ಶ್ರೀಮತಿ ಅಖಾರಿ ಚಂದ್ರಮ್ಮ - ಸದಸ್ಯೆ

ಗಾದಿಗನೂರು ಗ್ರಾಮಪಂಚಾಯ್ತಿ

೧. ಘಂಟೆ ಮಾಯಮ್ಮ - ಅಧ್ಯಕ್ಷೆ

೨. ಶ್ರೀಮತಿ ಕೊರವರ ಹುಲಿಗೆಮ್ಮ - ಸದಸ್ಯೆ

೩. ಶ್ರೀಮತಿ ಕುರುಬರ ಮಲೆಮ್ಮ - ಸದಸ್ಯೆ

೪. ಶ್ರೀಮತಿ ಕುರುಬರ ಶಿವಗಂಗಮ್ಮ - ಸದಸ್ಯೆ

೫. ಶ್ರೀಮತಿ ನಾಯ್ಕರ ಭೀಮಕ್ಕ - ಸದಸ್ಯೆ

೬. ಶ್ರೀಮತಿ ಇಮಾಂಭಿ - ಸದಸ್ಯೆ

ಹೊಸೂರು ಗ್ರಾಮಪಂಚಾಯ್ತಿ

೧. ಕಲ್ಲುಹಂಪಮ್ಮ - ಅಧ್ಯಕ್ಷೆ

೨. ಶ್ರೀಮತಿ ಹರಿಜನ ಬಾಣದ ಮಾರೆಮ್ಮ - ಸದಸ್ಯೆ

೩. ಶ್ರೀಮತಿ ಹೆಚ್.ಹುಸೇನ್ ಭೀ - ಸದಸ್ಯೆ

೪. ಶ್ರೀಮತಿ ಜಿ.ಎಸ್.ಕಣೆಮೆಮ್ಮ - ಸದಸ್ಯೆ

೫. ಶ್ರೀಮತಿ ನಾಣಿಕೇರಿ ಸುಶೀಲಮ್ಮ - ಸದಸ್ಯೆ

ಸಂಡೂರು ತಾಲೂಕು ಗ್ರಾಮಪಂಚಾಯ್ತಿಗಳು

ಮೆಟ್ರಿಕಿ ಗ್ರಾಮಪಂಚಾಯ್ತಿ

೧. ಶ್ರೀಮತಿ ವನಿತಾ - ಅಧ್ಯಕ್ಷೆ

೨. ಶ್ರೀಮತಿ ರುದ್ರಮ್ಮ - ಸದಸ್ಯೆ

೩. ಶ್ರೀಮತಿ ಕುಂಬಾರ ಗಂಗಮ್ಮ - ಸದಸ್ಯೆ

೪. ಶ್ರೀಮತಿ ಎನ್.ಗಂಗಮ್ಮ - ಸದಸ್ಯೆ

೫. ಶ್ರೀಮತಿ ಕೆ.ಗೌರಮ್ಮ - ಸದಸ್ಯೆ

೬. ಶ್ರೀಮತಿ ಎಮ್.ರಾಮಕ್ಕ - ಸದಸ್ಯೆ

೭. ಶ್ರೀಮತಿ ನಾಯಕರ ಗಂಗಮ್ಮ - ಸದಸ್ಯೆ

ವಿಠಲಾಪುರ ಗ್ರಾಮಪಂಚಾಯ್ತಿ

೧. ಶ್ರೀಮತಿ ಲಕ್ಷ್ಮಿಬಾಯಿ - ಅಧ್ಯಕ್ಷೆ

೨. ಶ್ರೀಮತಿ ಕೆ.ಎಮ್.ಹೇಮಾವತಿ - ಉಪಾಧ್ಯಕ್ಷೆ

೩. ಶ್ರೀಮತಿ ಅಮೀನಾಭೀ - ಸದಸ್ಯೆ

೪. ಶ್ರೀಮತಿ ಹರಿಜನ ಹುಲಿಗೆಮ್ಮ - ಸದಸ್ಯೆ

೫. ಶ್ರೀಮತಿ ತಾಯಮ್ಮ - ಸದಸ್ಯೆ

೬. ಶ್ರೀಮತಿ ಗೊಲ್ಲರ ಬಸಮ್ಮ - ಸದಸ್ಯೆ

ಅಂತಾಪುರ ಗ್ರಾಮಪಂಚಾಯ್ತಿ

೧. ಶ್ರೀಮತಿ ಮರಿಗಂಗಮ್ಮ - ಅಧ್ಯಕ್ಷೆ

೨. ಶ್ರೀಮತಿ ರತ್ನಮ್ಮ - ಸದಸ್ಯೆ

೩. ಶ್ರೀಮತಿ ಪಾರ್ವತಮ್ಮ - ಸದಸ್ಯೆ

೪. ಶ್ರೀಮತಿ ಲಕ್ಷ್ಮಿದೇವಿ - ಸದಸ್ಯೆ

೫. ಶ್ರೀಮತಿ ನಾಗಮ್ಮ - ಸದಸ್ಯೆ

೬. ಶ್ರೀಮತಿ ಚಂದ್ರಮ್ಮ - ಸದಸ್ಯೆ

ವಡ್ಡು ಗ್ರಾಮಪಂಚಾಯ್ತಿ

೧. ಶ್ರೀಮತಿ ದುರ್ಗಾರಾಣಿ ಜಿ.ಎಸ್ - ಅಧ್ಯಕ್ಷೆ

೨. ಶ್ರೀಮತಿ ಶಿವಲಿಂಗಮ್ಮ - ಉಪಾಧ್ಯಕ್ಷೆ

೩. ಶ್ರೀಮತಿ ಕೆ.ಜೆ.ಈರಮ್ಮ - ಸದಸ್ಯೆ

೪. ಶ್ರೀಮತಿ ವಾಲ್ಮೀಕಿ ಈರಮ್ಮ - ಸದಸ್ಯೆ

೫. ಶ್ರೀಮತಿ ಜಿ.ಸುಶೀಲಮ್ಮ - ಸದಸ್ಯೆ

೬. ಶ್ರೀಮತಿ ವಡ್ಡರ ನಾಗರತ್ನಮ್ಮ - ಸದಸ್ಯೆ

೭. ಶ್ರೀಮತಿ ಕುಂಬಾರ ನಾಗಮ್ಮ - ಸದಸ್ಯೆ

೮. ಶ್ರೀಮತಿ ಗೌಡ ಶಾಂತಮ್ಮ - ಸದಸ್ಯೆ

ದರೋಜಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಎಚ್.ಮಾರೆಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಫಾತೀಮಾಭಿ - ಸದಸ್ಯೆ

೩. ಶ್ರೀಮತಿ ಕುನ್ನಿಗಂಗಮ್ಮ - ಸದಸ್ಯೆ

೪. ಶ್ರೀಮತಿ ಲಕ್ಷ್ಮೀದೇವಿ - ಸದಸ್ಯೆ

೫. ಶ್ರೀಮತಿ ನಾಗಮ್ಮ ಯಮುನಪ್ಪ - ಸದಸ್ಯೆ

೬. ಶ್ರೀಮತಿ ಕೊರವರ ಲಕ್ಷ್ಮಮ್ಮ - ಸದಸ್ಯೆ

೭. ಶ್ರೀಮತಿ ಎ.ಲಲಿತಮ್ಮ - ಸದಸ್ಯೆ

೮. ಶ್ರೀಮತಿ ಎ.ಈರಮ್ಮ - ಸದಸ್ಯೆ

ಕುರೇಕುಪ್ಪ ಗ್ರಾಮಪಂಚಾಯ್ತಿ

೧. ಶ್ರೀಮತಿ ನಿರ್ಮಲ - ಉಪಾಧ್ಯಕ್ಷೆ

೨. ಶ್ರೀಮತಿ ನೀಲಮ್ಮ - ಸದಸ್ಯೆ

೩. ಶ್ರೀಮತಿ ಗೌರಮ್ಮ - ಸದಸ್ಯೆ

೪. ಶ್ರೀಮತಿ ಶಾರದ - ಸದಸ್ಯೆ

೫. ಶ್ರೀಮತಿ ಗೋಬ್ರಿಬಾಯಿ - ಸದಸ್ಯೆ

೬. ಶ್ರೀಮತಿ ಆಂಜನಮ್ಮ - ಸದಸ್ಯೆ

೭. ಶ್ರೀಮತಿ ರಂಗಮ್ಮ - ಸದಸ್ಯೆ

೮. ಶ್ರೀಮತಿ ಲಕ್ಷ್ಮಿದೇವಿ - ಸದಸ್ಯೆ

೯. ಶ್ರೀಮತಿ ಆದಿಲಕ್ಷ್ಮಿ - ಸದಸ್ಯೆ

ತೋರಣಗಲ್ಲು ಗ್ರಾಮಪಂಚಾಯ್ತಿ

೧. ಶ್ರೀಮತಿ ಹುಲಿಗೆಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಮಮತಾಜ್ ಮುನಾಫ್ ಸಾಬ್ - ಸದಸ್ಯೆ

೩. ಶ್ರೀಮತಿ ವಿ.ಎಮ್ .ನೀಲಮ್ಮ - ಸದಸ್ಯೆ

೪. ಶ್ರೀಮತಿ ಚೆನ್ನಮ್ಮ - ಸದಸ್ಯೆ

೫. ಶ್ರೀಮತಿ ವಿ.ಟಿ.ಶ್ರೀದೇವಿ - ಸದಸ್ಯೆ

೬. ಶ್ರೀಮತಿ ನಾಡಿಗರ ಲಕ್ಷ್ಮಿದೇವಿ - ಸದಸ್ಯೆ

ಕಾಳಿಂಗೇರಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಹುಲಿಗೆಮ್ಮ ಎಂ. - ಅಧ್ಯಕ್ಷೆ

೨. ಶ್ರೀಮತಿ ಕಮ್ಮಾರ ಗೌರಮ್ಮ - ಸದಸ್ಯೆ

೩. ಶ್ರೀಮತಿ ಗೌರಮ್ಮ - ಸದಸ್ಯೆ

೪. ಶ್ರೀಮತಿ ಕೆ.ತಿಪ್ಪಮ್ಮ - ಸದಸ್ಯೆ

೫. ಶ್ರೀಮತಿ ಸಂಡೂರು ಪಾಲಮ್ಮ - ಸದಸ್ಯೆ

೬. ಶ್ರೀಮತಿ ಗೋನಾಳು ಬೊಮ್ಮಮ್ಮ - ಸದಸ್ಯೆ

ಜಿ.ಎಲ್.ಹಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಗಂಗಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ತಿಪ್ಪಮ್ಮ - ಸದಸ್ಯೆ

೩. ಶ್ರೀಮತಿ ಹನುಮಕ್ಕ - ಸದಸ್ಯೆ

೪. ಶ್ರೀಮತಿ ಮುಕಾಸಿ ನಾಗಮ್ಮ - ಸದಸ್ಯೆ

೫. ಶ್ರೀಮತಿ ಭಾಗ್ಯಮ್ಮ - ಸದಸ್ಯೆ

೬. ಶ್ರೀಮತಿ ಶಕುಂತಲಮ್ಮ - ಸದಸ್ಯೆ

ಬೊಮ್ಮಗಟ್ಟ ಗ್ರಾಮಪಂಚಾಯ್ತಿ

೧. ಶ್ರೀಮತಿ ಪಾರ್ವತಿ - ಅಧ್ಯಕ್ಷೆ

೨. ಶ್ರೀಮತಿ ಬಣಕಾರ ಲಕ್ಷ್ಮಿದೇವಿ ಸದಸ್ಯೆ

೩. ಶ್ರೀಮತಿ ಯಲ್ಲಮ್ಮ - ಸದಸ್ಯೆ

೪. ಶ್ರೀಮತಿ ಹೂಲೆಮ್ಮ - ಸದಸ್ಯೆ

೫. ಶ್ರೀಮತಿ ಹನುಮಕ್ಕ - ಸದಸ್ಯೆ

೬. ಶ್ರೀಮತಿ ಪುಷ್ಪಾವತಿ - ಸದಸ್ಯೆ

೭. ಶ್ರೀಮತಿ ಹನುಮಕ್ಕ - ಸದಸ್ಯೆ

೮. ಶ್ರೀಮತಿ ಗಡ್ಡೆ ಜಯಮ್ಮ - ಸದಸ್ಯೆ

೯. ಶ್ರೀಮತಿ ಲಾಲೆಬಾಯಿ - ಸದಸ್ಯೆ

೧೦. ಶ್ರೀಮತಿ ದ್ರಾಕ್ಷಾಯಣಮ್ಮ - ಸದಸ್ಯೆ

ಸೋವೇನಹಳ್ಳಿ ಗ್ರಾಮಪಂಚಾಯ್ತಿ

೧. ಶ್ರೀಮತಿ ಲೀಲಾವತಿ - ಅಧ್ಯಕ್ಷೆ

೨. ಶ್ರೀಮತಿ ಚಂದ್ರಮ್ಮ - ಸದಸ್ಯೆ

೩. ಶ್ರೀಮತಿ ಮಾದಿಯಕ್ಕ - ಸದಸ್ಯೆ

೪. ಶ್ರೀಮತಿ ಸುಮಂಗಳಮ್ಮ - ಸದಸ್ಯೆ

೫. ಶ್ರೀಮತಿ ರತ್ನಮ್ಮ - ಸದಸ್ಯೆ

೬. ಶ್ರೀಮತಿ ದುರುಗಮ್ಮ - ಸದಸ್ಯೆ

ಚೋರನೂರು ಗ್ರಾಮಪಂಚಾಯ್ತಿ

೧. ಶ್ರೀಮತಿ ಬಿ.ವೆಂಕಮ್ಮ - ಸದಸ್ಯೆ

೨. ಶ್ರೀಮತಿ ಡಿ.ತಿಪ್ಪಮ್ಮ - ಸದಸ್ಯೆ

೩. ಶ್ರೀಮತಿ ಬನ್ನಮ್ಮ - ಸದಸ್ಯೆ

೪. ಶ್ರೀಮತಿ ನಾಗಮ್ಮ - ಸದಸ್ಯೆ

೫. ಶ್ರೀಮತಿ ಆರ್.ಜೈತುನ್ ಭೀ - ಸದಸ್ಯೆ

೬. ಶ್ರೀಮತಿ ಬಸಮ್ಮ - ಸದಸ್ಯೆ

೭. ಶ್ರೀಮತಿ ಖುರ್ಷದ್ - ಸದಸ್ಯೆ

ನಿಡಗುರ್ತಿ ಗ್ರಾಮಪಂಚಾಯ್ತಿ

೧. ಶ್ರೀಮತಿ ನಾಗಮ್ಮ - ಉಪಾಧ್ಯಕ್ಷೆ

೨. ಶ್ರೀಮತಿ ಚೆನ್ನಮ್ಮ - ಸದಸ್ಯೆ

೩. ಶ್ರೀಮತಿ ಗೌಡ್ರ ಕನಕಮ್ಮ - ಸದಸ್ಯೆ

೪. ಶ್ರೀಮತಿ ಹರಿಜನ ಜಯಮ್ಮ - ಸದಸ್ಯೆ

೫. ಶ್ರೀಮತಿ ಮಂಡ್ರಹಳ್ಳಿ ಮಾರೆಮ್ಮ - ಸದಸ್ಯೆ

೬. ಶ್ರೀಮತಿ ಬಣಕಾರ ಚಂದ್ರಮ್ಮ - ಸದಸ್ಯೆ

೭. ಶ್ರೀಮತಿ ತಳವಾರ ದುರುಗಮ್ಮ - ಸದಸ್ಯೆ

೮. ಶ್ರೀಮತಿ ಊರಮುಂದಲ ಪೂಜಾರಿ ವೆಂಕಮ್ಮ - ಸದಸ್ಯೆ

ಬಂಡ್ರಿ ಗ್ರಾಮಪಂಚಾಯ್ತಿ

೧. ನೆಲ್ಕುದಿರಿ ಹನುಮಕ್ಕ - ಉಪಾಧ್ಯಕ್ಷೆ

೨. ಶ್ರೀಮತಿ ಖಾಜಾಬಾನು - ಸದಸ್ಯೆ

೩. ಶ್ರೀಮತಿ ಅಜ್ಜಯ್ಯನವರ ಈರಮ್ಮ - ಸದಸ್ಯೆ

೪. ಶ್ರೀಮತಿ ಹರಿಜನ ಮಾರೆಕ್ಕ - ಸದಸ್ಯೆ

೫. ಶ್ರೀಮತಿ ದುರುಗಮ್ಮ - ಸದಸ್ಯೆ

೬. ಶ್ರೀಮತಿ ಗಂಗಮ್ಮ - ಸದಸ್ಯೆ

೭. ಶ್ರೀಮತಿ ಅಕ್ಕಸಾಲಿ ಹೇಮಾವತಿ - ಸದಸ್ಯೆ

ತಾರಾನಗರ ಗ್ರಾಮಪಂಚಾಯಿತಿ

೧. ಶ್ರೀಮತಿ ಯು.ಕವಿತಾ - ಅಧ್ಯಕ್ಷೆ

೨. ಶ್ರೀಮತಿ ಗಂಗಮ್ಮ - ಸದಸ್ಯೆ

೩. ಶ್ರೀಮತಿ ಹನುಮಕ್ಕ - ಸದಸ್ಯೆ

೪. ಶ್ರೀಮತಿ ಗಂಗಮ್ಮ - ಸದಸ್ಯೆ

೫. ಶ್ರೀಮತಿ ಕುರುಬರ ರೇಣುಕಮ್ಮ - ಸದಸ್ಯೆ

೬. ಶ್ರೀಮತಿ ವಿ.ಎಸ್.ಲಲಿತ - ಸದಸ್ಯೆ

೭. ಶ್ರೀಮತಿ ನಾಯಕರ ಹನುಮಕ್ಕ - ಸದಸ್ಯೆ

೮. ಶ್ರೀಮತಿ ಪೂಜಾರಿ ಜ್ಯೋತಿ - ಸದಸ್ಯೆ

ಕೃಷ್ಣಾನಗರ ಗ್ರಾಮಪಂಚಾಯಿತಿ

೧. ಶ್ರೀಮತಿ ಹುಸೀನ್ ಜೀ - ಉಪಾಧ್ಯಕ್ಷೆ

೨. ಶ್ರೀಮತಿ ಬ್ಯಾಡರ ರೇಣುಕಾ - ಸದಸ್ಯೆ

೩. ಶ್ರೀಮತಿ ಖಾಸಿಂ ಭೀ - ಸದಸ್ಯೆ

೪. ಶ್ರೀಮತಿ ಅಗಸರ ಹುಲಿಗೆಮ್ಮ - ಸದಸ್ಯೆ

೫. ಶ್ರೀಮತಿ ಸುಮಿತ್ರಾ ಬಾಯಿ - ಸದಸ್ಯೆ

೬. ಶ್ರೀಮತಿ ಸತ್ಯಮ್ಮ - ಸದಸ್ಯೆ

೭. ಶ್ರೀಮತಿ ಎಚ್.ಬೇಬಿಜಾನ್ - ಸದಸ್ಯೆ

ನರಸಿಂಗಪುರ ಗ್ರಾಮಪಂಚಾಯಿತಿ

೧. ಶ್ರೀಮತಿ ತಿಪ್ಪಮ್ಮ - ಸದಸ್ಯೆ

೨. ಶ್ರೀಮತಿ ಕಮಲಮ್ಮ - ಸದಸ್ಯೆ

೩. ಶ್ರೀಮತಿ ಲಕ್ಷ್ಮೀದೇವಿ - ಸದಸ್ಯೆ

೪. ಶ್ರೀಮತಿ ಜಯಮ್ಮ - ಸದಸ್ಯೆ

೫. ಶ್ರೀಮತಿ ಲಕ್ಷ್ಮೀಬಾಯಿ - ಸದಸ್ಯೆ

೬. ಶ್ರೀಮತಿ ಎಸ್.ಬೇಬಿ ಪದ್ಮಿನಿ - ಸದಸ್ಯೆ

೭. ಶ್ರೀಮತಿ ಜರೀನಾ - ಸದಸ್ಯೆ

೮. ಶ್ರೀಮತಿ ಪಿ.ಜಯಲಕ್ಷ್ಮಿ - ಸದಸ್ಯೆ

೯. ಶ್ರೀಮತಿ ಹೇಮಾವತಿ - ಸದಸ್ಯೆ

೧೦. ಶ್ರೀಮತಿ ವಿಜಯಲಕ್ಷ್ಮಿ - ಸದಸ್ಯೆ

೧೧. ಶ್ರೀಮತಿ ಜಿ.ಕಲ್ಪನಾ - ಸದಸ್ಯೆ

ಭುಜಂಗನಗರ ಗ್ರಾಮಪಂಚಾಯಿತಿ

೧. ಶ್ರೀಮತಿ ಬಡಿಗೇರ ಪಾರ್ವತಮ್ಮ - ಸದಸ್ಯೆ

೨. ಶ್ರೀಮತಿ ಕಾಲೇದ ಕೊಟ್ರಮ್ಮ - ಸದಸ್ಯೆ

೩. ಶ್ರೀಮತಿ ಹರಳಕಲ್ಲ ರಾಮಕ್ಕ - ಸದಸ್ಯೆ

೪. ಶ್ರೀಮತಿ ಹರಳಕಲ್ಲ ಮಂಜುಳಮ್ಮ - ಸದಸ್ಯೆ

೫. ಶ್ರೀಮತಿ ವಿಜಯಲಕ್ಷ್ಮಿ - ಸದಸ್ಯೆ

೬. ಶ್ರೀಮತಿ ತಿಂದಮ್ಮ ರಾಮಯ್ಯ - ಸದಸ್ಯೆ

ದೇವಗಿರಿ ಗ್ರಾಮ ಪಂಚಾಯಿತಿ

೧. ಶ್ರೀಮತಿ ಕೆಂಚಮ್ಮ - ಅಧ್ಯಕ್ಷೆ

೨. ಶ್ರೀಮತಿ ತಿಮ್ಮಕ್ಕ - ಸದಸ್ಯೆ

೩. ಶ್ರೀಮತಿ ನಿರ್ಮಲ - ಸದಸ್ಯೆ

೪. ಶ್ರೀಮತಿ ಅಗಸರ ದೇವಮ್ಮ - ಸದಸ್ಯೆ

೫. ಶ್ರೀಮತಿ ತಿಮ್ಮಕ್ಕ - ಸದಸ್ಯೆ

೬. ಶ್ರೀಮತಿ ಬಿ.ವಿ.ವಿಜಯಲಕ್ಷ್ಮಿ - ಸದಸ್ಯೆ

ಯಶವಂತನಗರ ಗ್ರಾಮಪಂಚಾಯಿತಿ

೧. ಶ್ರೀಮತಿ ಆಶಾ ಗಾಳೆಪ್ಪ - ಅಧ್ಯಕ್ಷೆ

೨. ಶ್ರೀಮತಿ ಯಶೋಧ - ಸದಸ್ಯೆ

೩. ಶ್ರೀಮತಿ ಅಮೀನಾಭಿ - ಸದಸ್ಯೆ

೪. ಶ್ರೀಮತಿ ನಾಗರತ್ನ - ಸದಸ್ಯೆ

೫. ಶ್ರೀಮತಿ ಮಾರೆಮ್ಮ - ಸದಸ್ಯೆ

೬. ಶ್ರೀಮತಿ ಮದಾರ್‌ಭಿ - ಸದಸ್ಯೆ

ಸುಶೀಲಾನಗರ ಗ್ರಾಮಪಂಚಾಯಿತಿ

೧. ಶ್ರೀಮತಿ ಗೌರಿ ಬಾಯಿ - ಉಪಾಧ್ಯಕ್ಷೆ

೨. ಶ್ರೀಮತಿ ಸುಮಿತ್ರ - ಸದಸ್ಯೆ

೩. ಶ್ರೀಮತಿ ಬೇಗಂ - ಸದಸ್ಯೆ

೪. ಶ್ರೀಮತಿ ಹರಿಜನಲಕ್ಷ್ಮೀ - ಸದಸ್ಯೆ

೫. ಶ್ರೀಮತಿ ಜಯಶ್ರೀ - ಸದಸ್ಯೆ

೬. ಶ್ರೀಮತಿ ಪಾರ್ವತಮ್ಮ - ಸದಸ್ಯೆ

೭. ಶ್ರೀಮತಿ ನೂರ್ ಜಾನ್ ಜೀ - ಸದಸ್ಯೆ

ಪ್ರಶ್ನಾವಳಿಯ ಮಾದರಿ

ಭಾಗ ೧

ಸಾಮಾನ್ಯ ಮಾಹಿತಿ

೦೧. ಗ್ರಾಮಪಂಚಾಯ್ತಿಯ ಹೆಸರು

೦೨. ಗ್ರಾಮ ಪಂಚಾಯ್ತಿಗೆ ಸೇರಿರುವ ಹಳ್ಳಿಗಳ ಸಂಖ್ಯೆ

೦೩. ಗ್ರಾಮ ಪಂಚಾಯ್ತಿಯ ಜನಸಂಖ್ಯೆ

೦೪. ಅಲ್ಲಿ ಪ್ರಮುಖ ಬೆಳೆಗಳು

೦೫. ಪ್ರಮುಖ ಜಾತಿಗಳು

೦೬. ಪ್ರಮುಖ ಉದ್ಯೋಗಗಳು

೦೭. ಕೃಷಿ-

ನೀರಾವರಿ	ಒಣ ಬೇಸಾಯ

೦೮. ಚುನಾಯಿತ ಸದಸ್ಯರ ಒಟ್ಟು ಸಂಖ್ಯೆ

೦೯. ಮಹಿಳೆಯರ ಸಂಖ್ಯೆ

೧೦. ಪುರುಷರ ಸಂಖ್ಯೆ

೧೧. ಸಾಮಾನ್ಯ ಮಹಿಳೆಯರು

೧೨. ಪ.ಜಾ.ಮಹಿಳೆಯರು

೧೩. ಪ.ಪಂ.ಮಹಿಳೆಯರು

೧೪. ಹಿಂ.ವ.ಎ. ಮಹಿಳೆಯರು

೧೫. ಹಿಂ.ವ.ಬಿ. ಮಹಿಳೆಯರು

ಚುನಾಯಿತ ಮಹಿಳೆಯರು ವಿವರ

೦೧. ಚುನಾಯಿತ ಮಹಿಳೆಯರ ಹೆಸರು

೦೨. ಆಯ್ಕೆಯಾದ ವಾರ್ಡ್ ಸಂಖ್ಯೆ

೦೩. ಆಯ್ಕೆಯಾದ ಕ್ಷೇತ್ರದ ವಿವರ

ಸಾಮಾನ್ಯ	ಮೀಸಲಾತಿ	ಮಹಿಳೆ

೦೪. ಧರ್ಮ

ಹಿಂದು	ಮುಸ್ಲಿಂ	ಕ್ರಿಶ್ಚಿಯನ್

೦೫. ಜಾತಿ

೦೬. ವಯಸ್ಸು

೦೭. ಶಿಕ್ಷಣ

		೧-೪	೫-೭	೮-೧೦	
ನವ ಸಾಕ್ಷರರು	ಅನಕ್ಷರಸ್ಥರು	ಪ್ರಾಥಮಿಕ	ಮಾಧ್ಯಮಿಕ	ಪ್ರೌಢ	ಪ.ಪೂ

೦೮. ಉದ್ಯೋಗ

ಕೃಷಿಕೂಲಿ	ಮನೆಗೆಲಸ	ಸ್ವಂತಕೃಷಿ	ಗಣಿಗೆಲಸ	ಸರಕಾರಿ ನೌಕರಿ

೦೯. ತಾವು

ವಿವಾಹಿತೆ	ಅವಿವಾಹಿತೆ	ವಿಚ್ಛೇದಿತೆ	ದೇವದಾಸಿ

೧೦. ತಾವು ಮದುವೆಯಾದ ವಯಸ್ಸು

೧೧. ತವರಿನಲ್ಲಿ ತಂದೆ ತಾಯಿಗಳ ಉದ್ಯೋಗ

೧೨. ತವರಿನಲ್ಲಿ ಕುಟುಂಬದವರು

ಅಕ್ಷರಸ್ಥರೇ	ಅನಕ್ಷರಸ್ಥರೇ

ಆಸ್ತಿ ವಿವರ

೧೩. ಮನೆ

ಸ್ವಂತಮನೆ	ಬಾಡಿಗೆಮನೆ	ಗುಡಿಸಲು

೧೪. ಮನೆಯ ಸ್ವರೂಪ

ಕಚ್ಚಾಮನೆ	ಪಕ್ಕಾಮನೆ

೧೫. ಜಮೀನು

ಇದೆ	ಇಲ್ಲ

೧೬. ನಿವೇಶನ

ಇದೆ	ಇಲ್ಲ	ಪಡೆದ ಯೋಜನೆ

೧೭. ಸ್ವಂತ ಮನೆಯಾದರೆ ಯಾವ ಯೋಜನೆಯಲ್ಲಿ ಪಡೆದಿರಿ

೧೮. ಶೌಚಾಲಯ

ಇದೆ	ಇಲ್ಲ

೧೯. ಇದ್ದರೆ ಉಪಯೋಗಿಸದಿರಲು ಕಾರಣ

ನೀರಿನ ಅಭಾವ	ಇಷ್ಟವಿಲ್ಲ	ಸಂಪ್ರದಾಯ ಭಾವನೆ	ವಾಸನೆ ಬರುತ್ತೆ

೨೦. ನೀರಿನ ಅನುಕೂಲ

ನಲ್ಲಿ	ಕೆರೆ	ಬಾವಿ	ಕಿರು ನೀರು

೨೧. ಕುಡಿಯುವ ನೀರನ್ನು ಯಾರು ಸಂಗ್ರಹಿಸುವರು

ಗಂಡ	ಮಕ್ಕಳು	ಹೆಂಡತಿ

೨೨. ಸ್ನಾನದ ಮನೆ

ಇದೆ	ಇಲ್ಲ

೨೩. ವಿದ್ಯುಚ್ಛಕ್ತಿ ಸೌಲಭ್ಯ

ಇದೆ	ಇಲ್ಲ

೨೪. ಉರುವಲು ವ್ಯವಸ್ಥೆ

ಕಟ್ಟಿಗೆ ಒಲೆ	ಗ್ಯಾಸ್	ಸೀಮೆಣ್ಣೆ ಸ್ಟೌವ್	ಇದ್ದಿಲು ಒಲೆ

೨೫. ನಿಮ್ಮ ಬಿಡುವಿನ ಸಮಯದ ಬಳಕೆ

ಟಿವಿ	ರೇಡಿಯೋ	ಕುಲಕಸುಬು	ವೃತ್ತಪತ್ರಿಕೆ

೨೬. ಟಿ.ವಿ.ಯಲ್ಲಿ ನೋಡುವ ಕಾರ್ಯಕ್ರಮ

ಸಿನಿಮಾ	ವಾರ್ತೆಗಳು	ಮಹಿಳೆಯ ಕಾರ್ಯಕ್ರಮಗಳು	ಚರ್ಚೆಗಳು

೨೭. ವೃತ್ತಪತ್ರಿಕೆ

ಓದುವಿರ	ಓದಿಸಿಕೊಳ್ಳುವಿರ	ಇಲ್ಲ

೨೮. ಕುಟುಂಬದ ಸ್ವರೂಪ

ವಿಭಕ್ತ	ಅವಿಭಕ್ತ

೨೯. ಕುಟುಂಬದ ಸದಸ್ಯರ ಸಂಖ್ಯೆ

೩೦. ಕುಟುಂಬದ ಯಜಮಾನರು

ಅತ್ತೆ	ಮಾವ	ಪತಿ	ನೀವು

೩೧. ನಿಮ್ಮೊಂದಿಗೆ ನಿಮ್ಮ ಕುಟುಂಬದ ವಿಷಯಗಳನ್ನು ಪತಿಯು ಮನೆಯ ಯಜಮಾನರು ಚರ್ಚಿಸುತ್ತಾರಾ

೩೨. ನಿಮ್ಮ ಮಕ್ಕಳ ಮಾಹಿತಿ

ಕ್ರ.ಸಂ.	ಹೆಸರು	ವಯಸ್ಸು	ಓದಿನ ವಿವರ	ವಿವಾಹಿತರೇ	ಉದ್ಯೋಗ
೧					
೨					
೩					
೪					
೫					

೩೪. ಚುನಾಯಿತ ಮಹಿಳೆಯ ಗಂಡನ ವಿವರ

೧. ಹೆಸರು

೨. ವಯಸ್ಸು

೩. ಶಿಕ್ಷಣ

೪. ರಾಜಕೀಯದಲ್ಲಿ ಅನುಭವ

ರಾಜಕೀಯ ನಾಯಕರೊಂದಿಗೆ ಸಂಪರ್ಕ	ರಾಜಕೀಯದಲ್ಲಿ ಆಸಕ್ತಿ	ಚುನಾವಣಾ ಪ್ರಚಾರದಲ್ಲಿ ಅನುಭವ

೫. ಉದ್ಯೋಗ

ಕೃಷಿ	ಕೂಲಿ	ಗಣಿಗೆಲಸ	ಕುಲಕಸುಬು	ಸರ್ಕಾರಿ ಉದ್ಯೋಗ

೬. ತಮ್ಮ ಪತ್ನಿಯನ್ನು ಸ್ಪರ್ಧೆಗೆ ನಿಲ್ಲಿಸಲು ಕಾರಣ

ಮಹಿಳೆ	ಮೀಸಲಾತಿ	ಸುಲಭವಾಗಿ ಗೆಲ್ಲಬಹುದು	ಸಮಾನತೆ

೭. ಪತ್ನಿಯ ಸ್ಪರ್ಧೆಗೆ ಕುಟುಂಬದ ಸದಸ್ಯರ ಒಲವು

ವಿರೋಧ	ಸಮ್ಮತಿ	ಮೌನ	ಪ್ರೋತ್ಸಾಹ

೮. ಪಂಚಾಯ್ತಿಯ ಎಲ್ಲ ಕೆಲಸಗಳಲ್ಲಿ ಪತ್ನಿಯು ನೆರವು ಬಯಸುವಳೇ

ಹೌದು	ಇಲ್ಲ	ಆಕೆಗೆ ಏನೂ ತಿಳಿಯದು	ಅಧೈರ್ಯ

೯. ಪತ್ನಿಯ ಪರವಾಗಿ ಕೆಲಸ ಮಾಡಲು ತಮಗೆ

ಮುಜುಗರ	ಸಂತೋಷ	ಹೆಮ್ಮೆ	ಕೀಳರಿಮೆ

ರಾಜಕೀಯಕ್ಕೆ ಸಂಬಂಧಿಸಿದಂತೆ ಚುನಾಯಿತ ಮಹಿಳೆಗೆ

೦೧. ನೀವು ರಾಜಕೀಯಕ್ಕೆ ಪ್ರವೇಶಿಸಲು ಪ್ರೇರಣೆ

ಹೆಸರಿನ ಗುರುಬಲ	ಕುಟುಂಬ ಗಂಡ ಮಗ	ಜಾತಿ	ಮೀಸಲಾತಿ	ಸ್ವ ಇಚ್ಛೆ	ರಾಜಕೀಯ ಒತ್ತಡ

೦೨. ರಾಜಕೀಯ ಪ್ರವೇಶದಿಂದ ಏನು ಮಾಡಲು ಬಯಸುವಿರಿ

ಮಹಿಳೆಯರ ಅಭಿವೃದ್ಧಿ	ಗ್ರಾಮಾಭಿವೃದ್ಧಿ	ಸಮಾಜ ಸೇವೆ	ಸ್ವಂತ ವ್ಯಕ್ತಿತ್ವದ ಬೆಳವಣಿಗೆ

೦೩. ಮೊದಲ ಬಾರಿಗೆ ಸ್ಪರ್ಧಿಸಿರುವಿರಾ

ಇಲ್ಲ	ಹೌದು	೨ನೆ ಸಲ	೩ನೆ ಸಲ

೦೪. ಚುನಾವಣೆಯಲ್ಲಿ ಸ್ಪರ್ಧಿಸಲು

ದೇವರಿಂದ ಕುರು ಹೂ ಕೇಳಿ	ಜ್ಯೋತಿಷಿಯನ್ನು ವಿಚಾರಿಸಿ	ಹೆಸರಿನ ಬಲ	ಯಾವುದು ಇಲ್ಲ

೦೫. ನಾಮಪತ್ರ ಸಲ್ಲಿಸಲು

ಸ್ವತಃ ಹೋದೆ	ಗಂಡ	ಇಬ್ಬರೂ

೦೬. ಸ್ಪರ್ಧೆಗೆ ನಿಂತಾಗ ಕುಟುಂಬ

ವಿರೋಧಿಸಿತು	ಸಮ್ಮತಿಸಿತು	ಮೌನವಾಗಿತ್ತು	ಪ್ರೋತ್ಸಾಹಿಸಿತು

೦೭. ಚುನಾವಣೆಯಲ್ಲಿ ನಿಮ್ಮ ಪ್ರತಿಸ್ಪರ್ಧಿಗಳು

ಜಾತಿಯವರು	ಮಹಿಳೆಯರು	ಪುರುಷರು	ಸಂಬಂಧಿಕರು

೦೮. ಯಾವ ರೀತಿ ಪ್ರಚಾರ ನಡೆಸಿದಿರಿ.

ಹೂ ಕುಂಕುಮ ಅರಿಶಿಣ	ಬಳೆ ರವಿಕೆ	ಮನೆಗಳಿಗೆ ಹೋಗಿ	ಮೆರವಣಿಗೆ	ಬ್ಯಾನರ್

೦೯. ಚುನಾವಣಾ ವೆಚ್ಚ

ಸಾಲ	ಸಾಲವಿಲ್ಲ	ಜಾತಿಯ ಸಹಾಯ	ರಾಜಕೀಯ ಮುಖಂಡರ ಸಹಾಯ

೧೦. ಯಾವ ಸಮಯದಲ್ಲಿ ಪ್ರಚಾರ

ಬೆಳಿಗ್ಗೆ	ಸಂಜೆ	ರಾತ್ರಿ	ಹೋಗಲೇ ಇಲ್ಲ

೧೧. ಮೊದಲ ಬಾರಿ ಮತ ಯಾಚಿಸಿದಾಗ ಆದ ಅನುಭವ

ನಾಚಿಕೆ	ಮುಜುಗರ	ಸ್ಪರ್ಧೆಯೇ ಬೇಡವಾಗಿತ್ತು	ಅಡಿಗೆ ಮನೆಯೆ ಸಾಕು

೧೨. ಚುನಾವಣೆಯ ದಿನ ಯಾರಿಂದ ಬೋಣಿಗೆ ಮತ ಹಾಕಿಸಿದರಿ.

೧೩. ಮತಗಟ್ಟೆಯಲ್ಲಿ ಮತ ಪೆಟ್ಟಿಗೆಗೆ ಪೂಜೆ ಮಾಡಿದಿರಾ

೧೪. ಎಷ್ಟು ಮತಗಳಿಂದ ಗೆಲವು ಪಡೆದಿರಿ

ಗೊತ್ತಿಲ್ಲ	ನೆನಪಿಲ್ಲ	ಗಂಡಸರಿಗೆ ಗೊತ್ತು	ಮೊತ್ತ....

೧೫. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವಿರಾ

ಹೌದು	ಇಲ್ಲ	ಸಾಕಾಗಿದೆ

೧೬. ಗೆದ್ದುದಕ್ಕೆ ಕುಟುಂಬದ ಪ್ರತಿಕ್ರಿಯೆ

ನೀರಸ	ಸಂತಸ	ಪ್ರೋತ್ಸಾಹ

೧೭. ನಿಮ್ಮ ವಾರ್ಡಿನಲ್ಲಿ ಇರುವ ಜಾತಿಗಳು ಯಾವುವು.

೧೮. ಇತರೆ ಜಾತಿ, ವರ್ಗ, ಹಾಗೂ ನೆರೆಹೊರೆ ಮಹಿಳೆಯರು ಸಹಕರಿಸಿದರೇ

೧೯. ನಿಮ್ಮ ಕೇರಿಯಿಂದ ಊರಿಗೆ ಬಂದು ಮತ ಕೇಳಲು ಏನು ಅನಿಸಿತ್ತು.

೨೦. ನಿಮಗಿಂತ ಮೇಲ್ಜಾತಿಯವರೆಗೆ ಮತ ಯಾಚಿಸಲು ಮುಜುಗರ ನಾಚಿಕೆ ಉಂಟಾಯ್ತು.

೨೧. ಗೆದ್ದಾಗ ನಿಮಗೆ

ಸಂತೋಷ	ಹೆದರಿಕೆ	ಯಾವುದು	ಇಲ್ಲ

ಅಧ್ಯಕ್ಷೆಗೆ

೦೧. ಅಧ್ಯಕ್ಷೆಯಾಗಿ ಗ್ರಾಮಪಂಚಾಯ್ತಿಯ ಯಾವ ಕರ್ತವ್ಯಗಳನ್ನು ನೀವು ಮಾಡಬೇಕು?

೦೨. ಗ್ರಾಮ ಪಂಚಾಯ್ತಿಗೆ ವರ್ಷಕ್ಕೆ ಎಷ್ಟು ಅನುದಾನ ಬರುತ್ತದೆ?

೦೩. ನಿಮ್ಮ ಗ್ರಾಮ ಪಂಚಾಯಿತಿಗೆ ಸ್ವಂತ ಕಟ್ಟಡ ಇದೆಯೇ?

ಇದೆ	ಇಲ್ಲ	ಬಾಡಿಗೆ

೦೪. ಗ್ರಾಮ ಪಂಚಾಯ್ತಿಯ ಆಫೀಸಿನಲ್ಲಿ

ಟಿ.ವಿ.	ಇದೆ	ಇಲ್ಲ	ವೃತ್ತ ಪತ್ರಿಕೆಗಳು	ಬರುತ್ತಿವೆ	ಇಲ್ಲ

೦೫. ಅನುದಾನವನ್ನು ಪ್ರಗತಿಪರ ಕಾಮಗಾರಿಗಳಿಗೆ ಹೇಗೆ ವಿಂಗಡಿಸುವಿರಿ?

೦೬. ಅನುದಾನ ಇಲ್ಲದಿರುವಾಗ ಗ್ರಾಮಪಂಚಾಯ್ತಿಗೆ ಆದಾಯದ ಇತರ ಮೂಲಗಳು ಯಾವುವು?

೦೭. ಇಲ್ಲಿಯವರೆಗೆ ಯಾವ ಯಾವ ಸದಸ್ಯರಿಗೆ, ಯಾವ ಕಾಮಗಾರಿಗಳಿಗೆ ಹಣವನ್ನು ಒದಗಿಸಿರುವಿರಿ

೦೮. ಅನುದಾನ ಬಂದಾಗ ತುರ್ತಾಗಿ ಆಗಬೇಕಾದ ಕೆಲಸಗಳಿಗೆ ಪ್ರಾಮುಖ್ಯತೆ ಕೊಡುವಿರೋ? ಅಥವಾ

೦೯. ಮಹಿಳೆಯರ ಕೆಲಸ ಕಾರ್ಯಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವಿರೋ?

೧೦. ಅಧ್ಯಕ್ಷೆಯಾಗಿ ನಿಮ್ಮ ವಾರ್ಡಿನಲ್ಲಿ ಯಾವ ಅಭಿವೃದ್ಧಿಪರ ಕಾರ್ಯ ಮಾಡಿಸಿರುವಿರಿ?

೧೧. ನಿಮ್ಮ ಕೆಲಸ ಕಾರ್ಯಗಳಲ್ಲಿ ನಿಮ್ಮ ಜಾತಿಯು ನಿಮಗೆ ಅಡ್ಡಿಯನ್ನು (SC/ST ಆಗಿದ್ದರೆ) ತರುತ್ತದೆಯೇ?

೧೨. ನೀವು ಮಹಿಳೆಯಾಗಿರುವುದರಿಂದ ಪುರುಷ ಸದಸ್ಯರು ನಿಮ್ಮ ಅಧ್ಯಕ್ಷ ಸ್ಥಾನವನ್ನು ಗೌರವಿಸುತ್ತಾರೆಯೇ

೧೩. ನಿಮ್ಮನ್ನು ಸರ್ಕಾರಿ ಅಧಿಕಾರಿಗಳು ಗೌರವಿಸುತ್ತಾರ?

೧೪. ನೀವು ಬೇರೆ ಬೇರೆ ಗ್ರಾಮ ಪಂಚಾಯ್ತಿಗಳಲ್ಲಿ ಹೇಗೆ ಕೆಲಸ ಕಾರ್ಯಗಳಾಗುತ್ತಿವೆ ಎಂದು ಗಮನಿಸುತ್ತಿರುವಿರಾ?

ಹೌದು	ಇಲ್ಲ

೧೫. ಅಂತಹ ಗ್ರಾಮ ಪಂಚಾಯತಿಗಳನ್ನು ಹೆಸರಿಸಿ.

೧೬. ಗ್ರಾಮ ಪಂಚಾಯ್ತಿಯ ಚುನಾವಣೆಯಲ್ಲಿ ಸ್ಪರ್ಧಿಸಲು ವ್ಯಕ್ತಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ಹೇಳಿ.

೧೭. ಎಷ್ಟು ಜನರಿಗೆ ಒಬ್ಬ ಸದಸ್ಯೆಯನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ನಿಲ್ಲಿಸಲಾಗುತ್ತದೆ.

೧೮. ಗ್ರಾಮ ಪಂಚಾಯ್ತಿಯ ಅಧಿಕಾರಾವಧಿ ಎಷ್ಟು?

೧೯. ಗ್ರಾಮ ಸಭೆ ವರ್ಷಕ್ಕೆ ಎಷ್ಟು ಸಲ ನಡೆಯುತ್ತದೆ

೨೦. ಪ್ರಥಮ ಗ್ರಾಮ ಸಭೆಯಲ್ಲಿ ಯಾವ ವಿಷಯ ಕುರಿತು ಚರ್ಚಿಸಿದಿರಿ.

೨೧. ಇಲ್ಲಿಯವರೆಗೂ ಎಷ್ಟು ಗ್ರಾಮ ಸಭೆಗಳನ್ನು ಕರೆದಿರುವಿರಿ

೨೨. ಗ್ರಾಮ ಪಂಚಾಯ್ತಿಯಲ್ಲಿ ಎಷ್ಟು ಸಮಿತಿಗಳಿವೆ.

೨೩. ಸಮಿತಿಗಳ ಹೆಸರು ಹೇಳಿ?

೨೪. ಸಮಿತಿಯ ಕೆಲಸ ಕಾರ್ಯಗಳೇನು

೨೫. ಸಮಿತಿಯಲ್ಲಿ ಯಾರು ಯಾರು ಸದಸ್ಯರಾಗಿರುವರು.

೨೬. ಗ್ರಾಮ ಸಭೆಯಲ್ಲಿ ಅಧ್ಯಕ್ಷರಾಗಿ ಕಾರ್ಯಕಲಾಪ ನಡೆಸಲು ನಿಮಗೆ ಕುಟುಂಬದಿಂದ ಯಾರು ಸಹಾಯ ಮಾಡುವರು.

೨೭. ಗ್ರಾಮಸಭೆಯಲ್ಲಿ ಯಾವ ವಿಷಯಗಳ ಕುರಿತು ಚರ್ಚಿಸಬೇಕೆಂದು ಕಾರ್ಯಕ್ರಮದ ಪಟ್ಟಿಯನ್ನು ಹೇಗೆ ತಯಾರಿಸುವಿರಿ.

೨೮. ಗ್ರಾಮಸಭೆ ನಡೆಸಲು ಪೂರ್ವಬಾವಿ ಸಿದ್ಧತೆಗಳನ್ನು ನಡೆಸಲು ಯಾರು ಸಹಾಯ ಮಾಡುತ್ತಾರೆ.

೨೯. ಗ್ರಾಮ ಸಭೆ ಕರೆಯಬೇಕೆಂದು ನಿಮಗೆ ಹೇಗೆ ತಿಳಿಯುತ್ತದೆ.

೩೦. ಅಧ್ಯಕ್ಷೆಯಾದ ನಿಮಗೆ ಸಭೆಯಲ್ಲಿ ಕಾರ್ಯಕಲಾಪ ನಡೆಸಲು ಇತರ ಪುರುಷ ಸದಸ್ಯರು ಪಾನಮತ್ತರಾಗಿ ಅಡ್ಡಿ ಆತಂಕ ತರುವರೆ.

೩೧. ಯಾವ ಕಾರಣಕ್ಕಾಗಿ ವಿಶೇಷ ಸಭೆಗಳನ್ನು ಕೆರದಿರುವಿರಿ.

೩೨. ಗ್ರಾಮ ಪಂಚಾಯ್ತಿಯ ಕಾರ್ಯಗಳನ್ನು ತಿಳಿಸಿ

೩೩. ಇಲ್ಲಿಯವರೆಗೆ ಯಾವ ವಿಷಯಗಳ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಂಡಿರುವಿರಿ

೩೪. ನಿಮ್ಮ ವಾರ್ಡಿನಲ್ಲಿ ಯಾವ ಸಮಸ್ಯೆಗಳಿವೆ.

೩೫. ಯಾವ ಅಭಿವೃದ್ಧಿ ಕಾರ್ಯಗಳನ್ನು ನಿಮ್ಮ ವಾರ್ಡಿನಲ್ಲಿ ಮಾಡಿರುವಿರಿ.

೧೭. ಎಷ್ಟು ಜನರಿಗೆ ಒಬ್ಬ ಸದಸ್ಯೆಯನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ನಿಲ್ಲಿಸಲಾಗುತ್ತದೆ.

೧೮. ಗ್ರಾಮ ಪಂಚಾಯ್ತಿಯ ಅಧಿಕಾರಾವಧಿ ಎಷ್ಟು?

೧೯. ಗ್ರಾಮ ಸಭೆ ವರ್ಷಕ್ಕೆ ಎಷ್ಟು ಸಲ ನಡೆಯುತ್ತದೆ

೨೦. ಪ್ರಥಮ ಗ್ರಾಮ ಸಭೆಯಲ್ಲಿ ಯಾವ ವಿಷಯ ಕುರಿತು ಚರ್ಚಿಸಿದಿರಿ.

೨೧. ಇಲ್ಲಿಯವರೆಗೂ ಎಷ್ಟು ಗ್ರಾಮ ಸಭೆಗಳನ್ನು ಕರೆದಿರುವಿರಿ

೨೨. ಗ್ರಾಮ ಪಂಚಾಯ್ತಿಯಲ್ಲಿ ಎಷ್ಟು ಸಮಿತಿಗಳಿವೆ.

೨೩. ಸಮಿತಿಗಳ ಹೆಸರು ಹೇಳಿ?

೨೪. ಸಮಿತಿಯ ಕೆಲಸ ಕಾರ್ಯಗಳೇನು

೨೫. ಸಮಿತಿಯಲ್ಲಿ ಯಾರು ಯಾರು ಸದಸ್ಯರಾಗಿರುವರು.

೨೬. ಗ್ರಾಮ ಸಭೆಯಲ್ಲಿ ಅಧ್ಯಕ್ಷರಾಗಿ ಕಾರ್ಯಕಲಾಪ ನಡೆಸಲು ನಿಮಗೆ ಕುಟುಂಬದಿಂದ ಯಾರು ಸಹಾಯ ಮಾಡುವರು.

೨೭. ಗ್ರಾಮಸಭೆಯಲ್ಲಿ ಯಾವ ವಿಷಯಗಳ ಕುರಿತು ಚರ್ಚಿಸಬೇಕೆಂದು ಕಾರ್ಯಕ್ರಮದ ಪಟ್ಟಿಯನ್ನು ಹೇಗೆ ತಯಾರಿಸುವಿರಿ.

೨೮. ಗ್ರಾಮಸಭೆ ನಡೆಸಲು ಪೂರ್ವಬಾವಿ ಸಿದ್ಧತೆಗಳನ್ನು ನಡೆಸಲು ಯಾರು ಸಹಾಯ ಮಾಡುತ್ತಾರೆ.

೨೯. ಗ್ರಾಮ ಸಭೆ ಕರೆಯಬೇಕೆಂದು ನಿಮಗೆ ಹೇಗೆ ತಿಳಿಯುತ್ತದೆ.

೩೦. ಅಧ್ಯಕ್ಷೆಯಾದ ನಿಮಗೆ ಸಭೆಯಲ್ಲಿ ಕಾರ್ಯಕಲಾಪ ನಡೆಸಲು ಇತರ ಪುರುಷ ಸದಸ್ಯರು ಪಾನಮತ್ತರಾಗಿ ಅಡ್ಡಿ ಆತಂಕ ತರುವರೆ.

೩೧. ಯಾವ ಕಾರಣಕ್ಕಾಗಿ ವಿಶೇಷ ಸಭೆಗಳನ್ನು ಕೆರದಿರುವಿರಿ.

೩೨. ಗ್ರಾಮ ಪಂಚಾಯ್ತಿಯ ಕಾರ್ಯಗಳನ್ನು ತಿಳಿಸಿ

೩೩. ಇಲ್ಲಿಯವರೆಗೆ ಯಾವ ವಿಷಯಗಳ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಂಡಿರುವಿರಿ

೩೪. ನಿಮ್ಮ ವಾರ್ಡಿನಲ್ಲಿ ಯಾವ ಸಮಸ್ಯೆಗಳಿವೆ.

೩೫. ಯಾವ ಅಭಿವೃದ್ಧಿ ಕಾರ್ಯಗಳನ್ನು ನಿಮ್ಮ ವಾರ್ಡಿನಲ್ಲಿ ಮಾಡಿರುವಿರಿ.

೩೬. ಗ್ರಾಮ ಸಭೆಗೆ ಹಾಜರಾಗದಿದ್ದವರಿಗೆ ಯಾವ ಕ್ರಮ ತೆಗೆದುಕೊಳ್ಳುವಿರಿ.

೩೭. ಗ್ರಾಮ ಸಭೆಗೆ ಜೊತೆಗೆ ಯಾರನ್ನು ಕರೆದೊಯ್ಯುವಿರಿ.

೩೮. ನಿಮ್ಮ ಪರವಾಗಿ ಯಾರು ಮಾತನಾಡುವರು.

೩೯. ಜನತೆ ಯಾವ ಎಂತಹ ಕೆಲಸವಾಗಬೇಕು ಎಂದು ನಿಮ್ಮನ್ನು ಕೇಳುತ್ತಾರೆ.

೪೦. ಅಧ್ಯಕ್ಷರಿಗೆ ಸಭೆಯ ಭತ್ಯೆ ಎಷ್ಟು ಕೊಡುವರು

೪೧. ಗ್ರಾಮಸಭೆಯು ಯಾವ ರೀತಿ ಆರಂಭವಾಗುತ್ತದೆ.

೪೨. ವಾರ್ಷಿಕ ಬಜೆಟ್‌ನಲ್ಲಿ ಯಾವ ವಿಷಯಗಳಿಗೆ ಹೆಚ್ಚು ಆದ್ಯತೆ ನೀಡಿರುವಿರಿ.

೪೩. ಎಷ್ಟು ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿರುವಿರಿ.

೪೪. ಯಾವುದಾದರೂ ಲೈಸೆನ್ಸ್‌ನ್ನು ರದ್ದುಗೊಳಿಸಿರುವಿರಾ

೪೫. ಹೊಸ ಚೆಕ್ ಡ್ಯಾಮ್ ನಿರ್ಮಿಸಿರುವಿರಾ

೪೬. ನಿಮ್ಮ ಅವಧಿಯಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ಕೊಟ್ಟಿರುವಿರಾ

೪೭. ಈ ಕೆಲಸಗಳಲ್ಲಿ ತಾಲೂಕು ಪಂಚಾಯ್ತಿತಿ ನಿಮಗೆ ಹೇಗೆ ಮಾರ್ಗದರ್ಶನ ಮಾಡುತ್ತದೆ

೪೮. ಗ್ರಾಮ ಪಂಚಾಯತಿಯ ಅನುಮತಿ ಇಲ್ಲದೆ ಕಟ್ಟಡಗಳು ನಿರ್ಮಾಣಗೊಂಡ ಉದಾಹರಣೆಗಳಿವೆಯೆ

೪೯. ಕಟ್ಟಡಗಳನ್ನು ಕೆಡವಿದ ಉದಾ ಇವೆಯೆ

೫೦. ಎಷ್ಟು ಹೊಸ ಬೀದಿಗಳಿಗೆ ಹೆಸರಿಡಲಾಗಿದೆ

೫೧. ಎಷ್ಟು ಕಟ್ಟಡಗಳಿಗೆ ಸಂಖ್ಯೆಯನ್ನು ಕೊಟ್ಟಿರುವಿರಿ, ಬದಲಾಯಿಸಿರುವಿರಿ

೫೨. ಗ್ರಾಮ ನೈರ್ಮಲೀಕರಣಕ್ಕೆ ಯಾವ ಯೋಜನೆಗಳನ್ನು ಹಾಕಿಕೊಂಡಿರುವಿರಿ.

೫೩. ಈಗ ಬೇಸಿಗೆ ಗ್ರಾಮದಲ್ಲಿ ಕುಡಿಯುವ ನೀರಿನ ಮೂಲ ಯಾವುದು ಯಾವ ವ್ಯವಸ್ಥೆ ಮಾಡಿರುವಿರಿ.

೫೪. ಕಂದಾಯ ವಸೂಲಿಗೆ ಯಾವ ಕ್ರಮ ಕೈಗೊಳ್ಳುವಿರಿ

೫೫. ವಿದ್ಯುತ್ ಬಿಲ್ಲು ಪಾವತಿಗಾಗಿ ಯಾವ ಕ್ರಮ ಕೈಗೊಳ್ಳುವಿರಿ.